ಕನ್ನಡ

ಸಾರ್ಥ ಜ್ಞಾನೇಶ್ವರೀ

ಸಚಿತ್ರ

19102

ಸುನಗ ಶ್ರೀನಿವಾಸರಾಯರು

UNIVERSAL
LIBRARY

OU_198102

UNIVERSAL
LIBRARY


ಶ್ರೀಮದ್ ಭಗವದ್ಗೀತೆ

ಅಥವಾ

ಭಾವಾರ್ಥ ದೀಪಿಕಾ

ಅರ್ಥಾತ್

ಶ್ರೀ ಜ್ಞಾನೇಶ್ವರಿಯ ಕನ್ನಡ ಅನುವಾದವು



ಲೇಖಕ :

ಹ. ಭ. ಪ. ಶ್ರೀನಿವಾಸ ಕೃಷ್ಣ ಕುಲಕರ್ಣಿ ಶ್ರೀ ವಿಠ್ಠಲಮಂದಿರ ಬಾವಲತ್ತಿ

ತಾ. ಬಾಗಲಕೋಟ ಜಿ. ವಿಜಾಪೂರ



ॐ नमः परमात्मने ।

मंगलम् ।


पार्थाय प्रतिबोधितां भगवता नारायणेन स्वयं
व्यासेन ग्रथितां पुराणमुनिना मध्येमहाभारतम् ।
अद्वैतामृतवर्षिणीं भगवतीमष्टादशाध्यायिनी-
मंब त्वामनुसंदधामि भगवद्गीते भवद्वेषिणीम् ॥ १ ॥

प्रपन्नपरिजाताय तोत्रवेत्रैकपाणये ।
ज्ञानमुद्राय कृष्णाय गीतामृतदुहे नमः ॥ २ ॥
सर्वोपनिषदो गावो दोग्धा गोपालनंदनः ।
पार्थो वत्सः सुधीर्भोक्ता दुग्धं गीतामृतं महत् ॥ ३ ॥

वसुदेवसुतं देवं कंसचाणूरमर्दनम् ।
देवकीपरमानंदं कृष्णं वंदे जगद्गुरुम् ॥ ४ ॥



ಗ್ರಂಥಕರ್ತರು



ಪರಿಭಕ್ತ ಶ್ರೀ. ಶ್ರೀನಿವಾಸ ಕೃಷ್ಣ ಕುಲಕರ್ಣಿ

ಸುನಗ ಶ್ರೀ ವಿಠ್ಠಲಮಂದಿರ ಬಾವಲತ್ತಿ

ಚಿ॥ ವಿಠ್ಠಲನು

ಕನ್ನಡ

ಸಾರ್ಥ ಜ್ಞಾನೇಶ್ವರೀ

(ಸಚಿತ್ರ)

೧ನೆಯ ಭಾಗ

(೧ರಿಂದ ೯ ಅಧ್ಯಾಯಗಳು)

ಶ್ರೀಮದ್ಭಗವದ್ಗೀತೆಯ ಮೇಲೆ "ಜ್ಞಾನೇಶ್ವರರು" ಮಹಾರಾಷ್ಟ್ರ ಭಾಷೆಯಲ್ಲಿ ಬರೆದ
ಭಾವಾರ್ಥದೀಪಿಕೆ ಎಂಬ ಟೀಕೆಯ ಕನ್ನಡ ಅನುವಾದವು.

ಲೇಖಕ:

ಶ್ರೀನಿವಾಸ ಕೃಷ್ಣ ಕುಲಕರ್ಣಿ, ಸುನಗ

ಶ್ರೀ ವಿಠ್ಠಲ ಮಂದಿರ, ಬಾವಲತ್ತಿ
ತಾ. ಬಾಗಲಕೋಟ
ಜಿ. ವಿಜಾಪೂರ

ಪ್ರಥಮಾವೃತ್ತಿ ೧೦೦೦ ಪ್ರತಿಗಳು

೧೯೫೫

(ಎಲ್ಲ ಹಕ್ಕುಗಳು ಪ್ರಕಾಶಕರ ಸ್ವಾಧೀನದಲ್ಲಿಡಲ್ಪಟ್ಟಿವೆ.)

ಶಕೆ ೧೮೭೭] [ಬೆಲೆ ೩ ರೂಪಾಯಿ

ಅರ್ಪಣ ಪತ್ರಿಕೆ



ಶ್ರೀ ವಿಠ್ಠಲಾರ್ಪಣಮಸ್ತು

ಹರಿಭಕ್ತ ಸುಸಗ ಶ್ರೀನಿವಾಸರಾಯರು

ಮುನ್ನುಡಿ

ಶ್ರೀಯುತ ಶ್ರೀನಿವಾಸ ಕೃಷ್ಣ ಕುಲಕರ್ಣಿ ಸುನಗ ಇವರು ಬಹಳ ಶ್ರಮಪಟ್ಟು ಮಹಾರಾಷ್ಟ್ರ ಭಾಷೆಯಲ್ಲಿಯ ಜ್ಞಾನೇಶ್ವರಿಯನ್ನು ಕನ್ನಡಕ್ಕೆ ಪರಿವರ್ತಿಸಿದ್ದಾರೆ. ಜ್ಞಾನೇಶ್ವರ ಮಹಾರಾಜರೆಂದರೆ ಭಗವಂತನ ಚಿತ್ಕಲಾ ಸ್ವರೂಪರು. ಅವರ ವಾಣಿಯಲ್ಲಿ ರಸವಂತಿಯ ಮಾಧುರ್ಯವಿದೆ. ಲಾಲಿತ್ಯವಿದೆ. ಬ್ರಹ್ಮತೇಜಸ್ಸಿನ ಹೊಳಪಿದೆ. ಜ್ಞಾನೇಶ್ವರ ಮಹಾರಾಜರ ಈ ಜ್ಞಾನೇಶ್ವರಿಯಿಂದ ಭೂದೇವಿಯು ಅಮೃತವತಿಯಾದಳೆಂದು ಹೇಳಿದರೆ ಅತ್ಯುಕ್ತಿಯಾಗಲಾರದು. ಭಗವದ್ಗೀತೆಯ ಸ್ವಾರಸ್ಯವನ್ನು ಮಹಾರಾಜರು ಅತ್ಯುತ್ತಮವಾಗಿ ತಮ್ಮ ಗ್ರಂಥದಲ್ಲಿ ತೋರಿಸಿ ಬಿಟ್ಟಿದ್ದಾರೆ. ಅವರ ವಿವರಣಶಕ್ತಿಯು ಅನ್ಯಾದೃಶವಾಗಿರುವದು. ವಿಷಯವಿಸ್ತಾರವನ್ನು ಮಾಡುವಾಗ ಅವರು ಉಪಯೋಗಿಸಿದ ಉಪಮೆಗಳು ಸ್ವಾಭಾವಿಕವಾದವುಗಳೂ, ಹೃದಯಂಗಮವಾದವುಗಳೂ ಆಗಿರುತ್ತವೆ. ತತ್ವದ ಅರ್ಥವು ಎದ್ದಾಗಿಮೂಡುವಂತೆ ಉಪಮಾ ಸಾಮಗ್ರಿಯನ್ನು ಉಪಯೋಗಿಸಿದ ಕುಶಲತೆಯು ಅವರಿಗೊಬ್ಬರಿಗೆ ಸಲ್ಲುವದು. ಅವರಲ್ಲಿ ದಿವ್ಯದೃಷ್ಟಿ ಇದ್ದಿತು. ದಿವ್ಯಾನುಭವವು ಇದ್ದಿತು ದಿವ್ಯ ಸ್ಫೂರ್ತಿಯಿದ್ದಿತು. ದಿವ್ಯ ಸಂಸ್ಕಾರವಿದ್ದಿತು. ದಿವ್ಯವಾಣಿಯಿದ್ದಿತು. ಇವೆಲ್ಲವುಗಳ ವ್ಯಕ್ತಿಸೃಷ್ಟಿಯೇ ಜ್ಞಾನೇಶ್ವರಿಯು. ಅದು ಕಾವ್ಯವೂ ಅಹುದು. ಧರ್ಮಗ್ರಂಥವೂ ಅಹುದು. ನೀತಿಗ್ರಂಥವೂ ಅಹುದು. ವ್ಯವಹಾರಗ್ರಂಥವೂ ಅಹುದು. ಇಂತಹ ಗ್ರಂಥದ ಅನುವಾದವನ್ನು ಸರಳವಾದ ಗದ್ಯದಲ್ಲಿ ಮಾಡಿದ ಪ್ರಥಮ ಶ್ರೇಯವು ಶ್ರೀನಿವಾಸ ಕೃಷ್ಣ ಕುಲಕರ್ಣಿಯವರಿಗೆ ಸಲ್ಲತಕ್ಕದ್ದು. ಪಂಡಿತರಿಗೂ ಪಾಮರರಿಗೂ ಉಪಯೋಗವಾಗುವಂತೆ ಅವರ ಶೈಲಿಯಿದೆ. ಆದರಲ್ಲಿ ದೋಷ ವಿಲ್ಲದಿರಲಿಕ್ಕಿಲ್ಲ ಆದರೆ ವಿಷಯಗಾಂಭೀರ್ಯವನ್ನು ಅನುಲಕ್ಷಿಸಿದರೆ ಎಲ್ಲರೂ ಓದಿ ಆನಂದಪಡತಕ್ಕ ವಸ್ತುವದು. ಇಂಥ ಗ್ರಂಥವನ್ನು ಪ್ರಸಿದ್ಧಿಸಬೇಕಾದರೆ ಹಣವು ಹೇರಳವಾಗಿ ಬೇಕು. ಆದುದರಿಂದ ಉದಾರರಾದ ಸದ್ಗೃಹಸ್ಥರೂ ಹಿಂದು ಸಂಸ್ಕೃತಿಯ ಅಭಿಮಾನಿಗಳೂ ಶಕ್ಯವಿದ್ದಷ್ಟು ದ್ರವ್ಯಸಹಾಯವನ್ನು ಮಾಡಿ ಶ್ರೇಯೋಭಾಗಿಗಳಾಗಬೇಕೆಂದು ಬಿನ್ನವಿಸುವ,

ಹಣಮಂತರಾವ ಕೊಂಣೂರ. ಎಂ. ಎ.,
ವಿಜಾಪುರ.

ಪ್ರಸ್ತಾವನೆ.

ಶ್ರೀಪಾಂಡುರಂಗನ ಪ್ರೇರಣೆಯಿಂದಲೂ ಅಲಂದೀಪ ಶ್ರೀಜ್ಞಾನೇಶ್ವರ ಮಹಾರಾಜರ ಕೃಪೆಯಿಂದಲೂ ಸಾರ್ಥ ಜ್ಞಾನೇಶ್ವರೀ ಎಂಬ ಮಹಾರಾಷ್ಟ್ರ ಗ್ರಂಥದ ಮೊದಲಿನ ಒಂಬತ್ತು ಅಧ್ಯಾಯಗಳ ಕನ್ನಡ ಅನುವಾದದ ೧ ನೇ ಭಾಗ ಮುದ್ರಣಕಾರ್ಯವನ್ನು ಸಂಪೂರ್ಣ ಮುಗಿಸಿ ಕರ್ಣಾಟಕ ವಾಚಕರ ಕೈಯಲ್ಲಿ ಕೊಡುವ ಸುಯೋಗವು ಶಕೆ ೧೮೮೭ ಆಶ್ವಿನ ಶುದ್ಧ ವಿಜಯದಶಮಿ (ದಸರೆ) ಸುಮುಹೂರ್ತಕ್ಕೆ ಬಂದಿರುತ್ತದೆ. ಈ ಬಗ್ಗೆ ಆ ದಯಾಘನ ಶ್ರೀಪಾಂಡುರಂಗನ ಚರಣಕಮಲಗಳ ಸ್ಮರಣಮಾಡಿ ಪ್ರಸ್ತಾವನೆಯ ಒಂದೆರಡು ಶಬ್ದಗಳನ್ನು ಬರೆಯುವೆನು.

ಮಹಾರಾಷ್ಟ್ರ ವಾಙ್ಮಯದಲ್ಲಿ ಆದಿಕವಿ ಎಂದು, ಮಹಾರಾಷ್ಟ್ರ ಕವಿಕುಲತಿಲಕನೆಂದು **ಲೋಕವಿಖ್ಯಾತೆ**ಯಂ ಪಡೆದ ಮಹಾವೈಷ್ಣವ ಶಿರೋಮಣಿಯಾದ ಶ್ರೀ ಜ್ಞಾನೇಶ್ವರ ಮಹಾರಾಜರು ಭಾಗವತಧರ್ಮದ ಆದ್ಯಪ್ರವರ್ತಕರೂ ಆಚಾರ್ಯರೂ ಆಗಿರುವರು. ಇವರು ಭಗವದ್ಗೀತೆಯ ಮೇಲೆ ಮಹಾರಾಷ್ಟ್ರಭಾಷೆಯಲ್ಲಿ ಭಾವಾರ್ಥದೀಪಿಕೆ ಎಂಬ ಲೋಕೋತ್ತರವಾದ ಪದ್ಯಪ್ರಬಂಧವನ್ನು ೬೪೫ ವರುಷಗಳ ಹಿಂದೆ ರಚಿಸಿದ್ದು ಈ ಸುಪ್ರಸಿದ್ಧ ಕಾವ್ಯದ ಗುಣ ಗಾಂಭೀರ್ಯವೇ ಆ ಮಹಾಕವಿಯ ಆ ಮಹಾಗ್ರಂಥದ ಮಹಿಮೆಗೆ ಕನ್ನಡಿಯಾಗಿದೆ. ಇದರಲ್ಲಿ ಪದಲಾಲಿತ್ಯ, ಅರ್ಥ ಗಾಂಭೀರ್ಯ, ಸರಲತೆ, ಮಾಧುರ್ಯ ಶೈಲಿ, ಅರ್ಥಚಮತ್ಕೃತಿ, ಅಲಂಕಾರ ಮುಂತಾದವು ಎಷ್ಟು ಕೊಂಡಾಡಿದರೂ ಸಾಲದು. ಮಹಾರಾಷ್ಟ್ರದವರ ಭಾಗ್ಯವು ಬೊಡ್ಡದೆಂದು ಇಂಥ ಅಮೃತಸಿಧಿಯು ಅವರಿಗೆ ದೊರಕಿರುವದು. ಭಾವಾರ್ಥ ದೀಪಿಕೆಯಂದರೆ ಅದು ಶ್ರೀಕೃಷ್ಣ ಪರಮಾತ್ಮನ ಸಂಸ್ಕೃತಗೀತೆಯ ನಿಜವಾದ ಭಾವಾರ್ಥವನ್ನು ತಿಳಿಸುವ ವಿಸ್ತೃತವಾದ ಟೀಕೆಯು. ಈ ಭಾವಾರ್ಥದೀಪಿಕೆಯ ಗ್ರಂಥವೇ **ಜ್ಞಾನೇಶ್ವರಿ,** ಎಂಬ ಹೆಸರಿನಿಂದ ಪ್ರಸಿದ್ಧಹೊಂದಿರುವದು. ಭಕ್ತಿಮಾರ್ಗದ ಕೇಂದ್ರಸ್ಥಾನವಾದ ಭೂವೈಕುಂಠವೆನಿಸಿದ ಶ್ರೀಕ್ಷೇತ್ರ ಪಂಢರಿಯಲ್ಲಿ ಭಾಗವತ ಧರ್ಮಾನುಯಾಯಿಗಳಲ್ಲಿ ಈ ಜ್ಞಾನೇಶ್ವರೀ ಗ್ರಂಥಕ್ಕೆ ಮೂಲ ಗೀತೆಗಿಂತಲೂ ಹೆಚ್ಚಿಗೆ ಮಹತ್ವವಿರುತ್ತದೆ. ಮಹಾರಾಷ್ಟ್ರದಲ್ಲಿಯ ಪಟ್ಟಣ ಗ್ರಾಮ ಹಳ್ಳಿ ಊರು ಮುಂತಾದವುಗಳಲ್ಲಿ ಶ್ರೇಷ್ಠವರ್ಣದ ಬ್ರಾಹ್ಮಣರಿಂದ ಕನಿಷ್ಠವರ್ಣದ ಸ್ತ್ರೀ ಶೂದ್ರಾದಿಗಳಿಗೂ ಈ ಜ್ಞಾನೇಶ್ವರಿಯು ಅವಗತವಿರುವದು. ಇವರು ಪ್ರತಿಯೊಬ್ಬರು ಪ್ರತಿದಿವಸ ಭಕ್ತಿಯಿಂದ ಪಠಣ ಪಾರಾಯಣ ಮಾಡಿ ಓದಿ ಕೇಳಿ ಆನಂದಿಸದವರೇ ಇಲ್ಲ. ಸತತ ಜ್ಞಾನೇಶ್ವರಿ ಎಂಬ ಜ್ಞಾನಗಂಗಾನದಿಯು ಮಹಾರಾಷ್ಟ್ರದಲ್ಲಿ ಹರಿದು ಇದೀಗ ವಿಜಯದಶಮೀ ಸುಮುಹೂರ್ತದಲ್ಲಿ ಕನ್ನಡ ಸ್ವರೂಪವನ್ನು ಧರಿಸಿ ಕರ್ಣಾಟಕದಲ್ಲಿ ಹರಿದುಬಂದಿರುತ್ತದೆ. ಭಗವದ್ಭಕ್ತರು ಅದರಲ್ಲಿ ಅವಗಾಹನವನ್ನು ಮಾಡಿ ಪವಿತ್ರರಾಗಿ ಸಂಸಾರದುಃಖವನ್ನು ನೀಗಿ ಸುಖಿಗಳಾಗಬೇಕೆಂದು ಹಾರೈಸುವನು.

ನಮ್ಮ ಕರ್ಣಾಟಕದಲ್ಲಿ ಗೀತೆಯ ಪಠಣ ಪಾರಾಯಣ ಬ್ರಾಹ್ಮಣರ ಹೊರ್ತು ಇನ್ನಿತರ ವರ್ಣದವರು ಮಾಡಬಾರದೆಂದೂ ಬ್ರಾಹ್ಮಣರಷ್ಟೇ ಮಾಡಬೇಕೆಂದೂ ತಿಳುವಳಿಕೆಯು ನೆಲೆಗೊಂಡಿರುವದು. ಗೀತೆಯ ಪಠಣ ಪಾರಾಯಣದ ಗುತ್ತಿಗೆಯು ಬ್ರಾಹ್ಮಣರಿಗೇ ಕೊಟ್ಟಿದೆ ಎಂಬ ಮೂರ್ಖ ಕಲ್ಪನೆಯು ನಮ್ಮಲ್ಲಿರುವದು ಈ ಕಲ್ಪನೆಯು ಪೂರ್ವಕಾಲದಲ್ಲಿ ರೂಢಿಯಲ್ಲಿರಲಿಲ್ಲ. ಇಷ್ಟೇ ಅಲ್ಲ ಜೈವಲಿ, ಗಾರ್ಗ್ಯಾಯನಿಯಂಥ ಕ್ಷತ್ರಿಯರೇ ಗುರುಗಳಾಗಿ ಎಷ್ಟೋಸಾರೆ ಬ್ರಾಹ್ಮಣರಿಗೆ ಬ್ರಹ್ಮವಿದ್ಯೆಯನ್ನು ದೀಕ್ಷೆಯನ್ನು ಕೊಟ್ಟರೆಂಬದು ಒಳ್ಳೇ ಮಹತ್ವದ ಸಂಗತಿಯು. ಗೀತೋಪದೇಶವನ್ನು ಮಾಡಿದ ಶ್ರೀಕೃಷ್ಣ ಪರಮಾತ್ಮನು ಸ್ವತಃ ಕ್ಷತ್ರಿಯ ಶ್ರೇಷ್ಠನು ಅವನ್ನು ಕೇಳುವ ಪಾರ್ಥನು ಕ್ಷತ್ರಿಯ ವೀರನೇ ಮಹಾಭಾರತದಲ್ಲಿಯ ವ್ಯಾಧ, ವಿದುರ, ವಿದುಲಾ, ಮುಂತಾದವರು ಭಾಗವತದಲ್ಲಿಯ ಉದ್ಧವ ಮುಂತಾದ ಉದಾಹರಣೆಗಳನ್ನು ನೋಡಿದರೆ ಬ್ರಹ್ಮವಿದ್ಯದ ಜ್ಞಾನವೂ ಅದರ ಅಭ್ಯಾಸವೂ ಎಲ್ಲ ಬಗೆಯ ಜನರಲ್ಲಿ ಹಬ್ಬಿತ್ತೆಂದು ಕಂಡುಬರುವದು. ಗೀತೆಯು ಮಹಾಭಾರತವೆಂಬ ಪುರಾಣದ ಭಾಗವು ಶ್ರುತಿಬಾಹ್ಯವಿದ್ದ ವರ್ಣದವರ

ಸಲುವಾಗಿಯೇ ಅವರ ಉದ್ಧಾರಾರ್ಥವಾಗಿ ಮಹಾಭಾರತವೆಂಬ "ಪಂಚಮವೇದದ" ಅವತಾರವಾಗಿರುವದು. ಆದುದರಿಂದ ಅದರ ಅಭ್ಯಾಸಮಾಡಲಿಕ್ಕೂ ತದಂತರ್ಗತವಾದ ಗೀತೆಯ ಅಭ್ಯಾಸಮಾಡಲಿಕ್ಕೂ ಸ್ತ್ರೀ ಶೂದ್ರ ಮುಂತಾದವರಿಗೆ ಯಾವ ನಿರ್ಬಂಧವೂ ಇಲ್ಲ. ಈ ರೀತಿ ಗೀತೆಯು ಸಾಮಾನ್ಯಜನರ ಉದ್ಧಾರಕ್ಕಾಗಿ ಬರೆಯಲ್ಪಟ್ಟ ಗ್ರಂಥವು. ಎಲ್ಲರಿಗೂ ತಿಳಿಯಬೇಕು. ಎಲ್ಲರೂ ಅಧ್ಯಾತ್ಮವಿದ್ಯದ ಅಭ್ಯಾಸ ಮಾಡಬೇಕು, ಎಲ್ಲರಿಗೂ ಅತ್ಯುಚ್ಚಧ್ಯೇಯ ಪರಬ್ರಹ್ಮ ಪರಮಾತ್ಮನ ದರ್ಶನವಾಗಬೇಕು. ಎಲ್ಲರೂ ಪರಮಶಾಂತಿಯ ಸವಿಯನ್ನುಣಬೇಕು ಎಂಬ ಸದುದ್ದೇಶದಿಂದ ವ್ಯಾಸರು ಮಾಡಿದ ಪ್ರಯತ್ನವು ಅಂದರೆ ಶ್ರೀ ಕೃಷ್ಣಾರ್ಜುನರ ಸಂವಾದವನ್ನು ಸುಲಭ ಸಂಸ್ಕೃತದಲ್ಲಿ ರೂಪಗೊಳಿಸಿದ್ದೂ ಇದೇ ಸದುದ್ದೇಶದಿಂದಲ್ಲದೆ ಮತ್ತಿನ್ನೇನು ? ಗೀತೆಯು ಕೇವಲ ಹಿಂದೀಯರ ಗ್ರಂಥವಲ್ಲ ಅದು ಬಿಯ ಭಾರತೀಯರಿಗಾಗಿ ಹೇಳಿದ ಉಪದೇಶವಲ್ಲ. ಇಡೀ ಮಾನವಜಾತಿಗೆ ಮಾಡಿದ ಉಪದೇಶವಿರುವದು. ವಿಚಾರವಾಡಿ ನೋಡಲು ಗೀತೆಯನ್ನು ಎಲ್ಲರೂ ಓದಬಹುದು. ಕೇಳಬಹುದು. ಆದರೂ ಅದರ ಯೋಗ್ಯ ಫಲವು ದೊರಕಬೇಕಾದರೆ ಶ್ರೀಕೃಷ್ಣನು ಕೊನೆಗೆ ಹೇಳಿದಂತೆ " ಇದಂ ತೇ ನಾತಪಸ್ಕಾಯ ನಾ ಭಕ್ತಾಯ ಕದಾಚನ ॥ ತಪಸ್ಸಿಲ್ಲದ ಭಕ್ತಿಯಿಲ್ಲದ ಕೇಳುವ ಇಚ್ಛೆಯಿಲ್ಲದ ಹಾಗೂ ನನ್ನನ್ನು ದೂಷಿಸುವವನಿಗೆ ಇದನ್ನು ಹೇಳಕೂಡದು. ನನ್ನ ಮತ್ತು ನನ್ನ ಭಕ್ತರ ವಿಷಯದಲ್ಲಿ ಯಾವನ ಪೂಜ್ಯಬುದ್ಧಿ ಇರುವದಿಲ್ಲವೋ ಇಂಥವನಿಗೆ ಗೀತಾಶಾಸ್ತ್ರವನ್ನು ಮುಟ್ಟಿಗೊಡಬಾರದು. ಅರ್ಥಾತ್ ಅರ್ಜುನನ ಮನಸ್ಥಿತಿಯು ಗೀತೆಯನ್ನು ಶ್ರವಣಮಾಡುವಾಗ ಅವನಲ್ಲಿ ಧೃಡವಿಶ್ವಾಸವೂ ಆಸ್ಥಾಬುದ್ಧಿಯೂ ಸಂಪೂರ್ಣ ತುಂಬಿ ತುಳುಕುತ್ತಿತ್ತು. ಆದುದರಿಂದಲೇ ಶ್ರೀಕೃಷ್ಣನು " ಗುಹ್ಯಾತ್ ಗುಹ್ಯತರಂ " ಅಂದರೆ ಯಾರಿಗೂ ಹೇಳದೇ ನುವೆಮಾಡಿ ಇಟ್ಟ ಗುಟ್ಟಿನ ಗುಟ್ಟನ್ನು ಅವನಿಗೆ ಹೇಳಿದನು. ಜ್ಞಾನೇಶ್ವರ ಮಹಾರಾಜರು ಅನ್ನುವದೇನಂದರೆ ಶ್ರೋತ್ರುಗಳು ನಿಷ್ಕಾಮಬುಳ್ಳವರಾಗಿ ಕುಶಾಗ್ರ ಬುದ್ಧಿಯಿಂದ ಈ ಭಗವದ್ಗೀತೆಯ ಅನುಭವವನ್ನು ತೆಗೆದುಕೊಳ್ಳಬೇಕು. (ಹೀಗೆ ಏಕೆ?) ಅಂದರೆ ಗೀತೆಯಲ್ಲಿಯ ಪರಮತತ್ವವು ಶಬ್ದಾತೀತವಿರುವದರಿಂದ ತಿಳಿಯಲಿಕ್ಕೆ ಕಠಿಣವಿರುತ್ತದೆ. ಈ ಗೀತೆಯಲ್ಲಿಯ ಕಥೆಯನ್ನು ಮಾತನಾಡದೆ ವಿಚಾರಮಾಡಬೇಕು. ಇಂದ್ರಿಯಗಳಿಗೆ ತಿಳಿಯಗೊಡದೇ ಅದರ ಅನುಭವ ತೆಗೆದುಕೊಳ್ಳಬೇಕು. ಮತ್ತು ಅದನ್ನು ಕೇಳುವ ಮೊದಲು ಅದರಲ್ಲಿಯ ರಹಸ್ಯ ತಿಳಿದುಕೊಳ್ಳಬೇಕು. ಭ್ರಮರಗಳು ಕಮಲದಲಕ್ಕೆ ತಿಳಿಯಗೊಡದಂತೆ ಅದರೊಳಗಿನ ಪುಷ್ಪರೇಣುವನ್ನು ಹೇಗೆ ಸೇವಿಸುತ್ತವೆಯೋ ಅದೇ ಪದ್ಧತಿಯಿಂದ ಈ ಗ್ರಂಥವಲ್ಲಿಯ ತತ್ವಸೇವನೆಯನ್ನು ಮಾಡಬೇಕೆಂದು ಅರ್ಜುನನಿಗೆ ಶ್ರೀಕೃಷ್ಣನು ಹೇಳಿರುವನು. ಅರ್ಜುನನ ಗುಣಗಳ ಸ್ವಲ್ಪಾಂಶವಾದರೂ ನಮ್ಮಲ್ಲಿರದೇ ಹೋದರೆ ನಾವು ಗೀತೆಯನ್ನು ಕೇಳಲಿಕ್ಕೆ ಅನಧಿಕಾರಿಗಳು. ಅನೇಕ ಗ್ರಂಥಗಳಲ್ಲಿ ಬೇರೆ ಬೇರೆ ಋಷಿಮುನಿಗಳು ವೇದಾಂತಿಗಳು ಗೀತೆಯ ಮಹಾತ್ಮ್ಯವನ್ನು ಪರಿಪರಿಯಿಂದ ವರ್ಣಿಸಿದ್ದಾರೆ. ಅದನ್ನೆಲ್ಲ ಇಲ್ಲಿ ವಿವರಿಸಲು ಸಾಧ್ಯವಿರುವದಿಲ್ಲ.

" ಯಸ್ಯ ನಿಶ್ವಸಿತೋನೇದಃ " ಯಾವ ಪರಮಾತ್ಮನ ನಿಶ್ವಾಸವೇ ವೇದವು ಅಂದರೆ ಈ ವೇದಗಳು ಯಾವ ಸರ್ವೇಶ್ವರನ ಯೋಗ ನಿದ್ರೆಯ ಶ್ವಾಸದಲ್ಲಿ ಸಹಜವಾಗಿ ಉದ್ಭವಿಸಿರುವರೋ, ಆ ವೇದಗಳಿಗೆ ಪರಮಾತ್ಮನ ಪ್ರತ್ಯಕ್ಷ ಸ್ವರೂಪದ ಅಂತ ತಿಳಿಯದೆ ನೇತಿ, ನೇತಿ, ಎಂದು ಹಿಂದೆ ತಿರುಗಿದವು. ಜಗದೀಶ್ವರ ಶ್ರೀಕೃಷ್ಣನು ಸ್ವಮುಖದಿಂದ ಈ ಗೀತಾಶಾಸ್ತ್ರವನ್ನು ತನ್ನ ಪ್ರೇಮದ ಶಿಷ್ಯನಾದ ಅರ್ಜುನನಿಗೆ ಉಪದೇಶಿಸಿದ ಈ ಅಮೃತರೂಪ ಗೀತಾಶಾಸ್ತ್ರವು ವೇದಗಳಿಗಿಂತಲೂ ಹೆಚ್ಚಿನದೆಂದು ಹೇಳಲು ಅಭ್ಯಂತರನೇನು ? ಅದರ ವರ್ಣನವನ್ನು ಇನ್ನಾನ ಶಬ್ದಗಳಿಂದ ಮಾಡಬೇಕು ? ಇದಂತೂ ಇರಲಿ. ಇನ್ನೊಂದುಕಡೆ ಮಹಾರಾಜರು ಗೀತೆಯ ಮಹತ್ಮೆಯ ವಿಷಯವಾಗಿ ಮಾಡಿದ ವರ್ಣನೆಯನ್ನು ಅವರ ಪರಿಭಾಷೆಯಲ್ಲಿಯೇ ಹೇಳುವೆನು ಚಿತ್ತವಿಡಿರಿ " ಸಾಚಚಿ ಬೋಲಾಚೆ ನಹ್ವೆ ಹೇ ಶಾಸ್ತ್ರ । ಪೈ ಸಂಸಾರ ಜಿಣತೇ ಹೆ ಶಸ್ತ್ರ । ಆತ್ಮಾ ಅವತರವಿತೆ ಮಂತ್ರ । ಅಕ್ಷರೇ ಇಯೇ ॥

ಅರ್ಥ:— ನಿಜವಾಗಿ ಗೀತೆಯು ಶಬ್ದಪಾಂಡಿತ್ಯ ತೋರಿಸುವ ಮಾತಿನಶಾಸ್ತ್ರವಿರುವದಿಲ್ಲ. ಆದರೆ, ಗೀತಾಶಾಸ್ತ್ರವು ಸಂಸಾರವನ್ನು ಜಯಿಸುವ ಶಸ್ತ್ರವಾಗಿರುವದು. ಬಹಳ ಹೇಳುವದೇನು ? ಈ ಗೀತಾಕ್ಷರಗಳು ಆತ್ಮಭಾವ

ವನ್ನುಂಟು ಮಾಡುವಂಥ ಮಂತ್ರವಿರುತ್ತದೆ. ಇದರಲ್ಲಿ ಪರಮಾತ್ಮಪ್ರಾಪ್ತಿಯನ್ನು ಮಾಡಿಕೊಡುವಂಥ ಸಂಪೂರ್ಣ ಶಕ್ತಿಯಿರುತ್ತದೆಂದು ಹೇಳಿರುವರು. "ಗೀತಾ ಸುಗೀತಾ ಕರ್ತವ್ಯಾ ಕಿಮನ್ಯೈಃ ಶಾಸ್ತ್ರ ಸಂಗ್ರಹೈಃ। ಗೀತೆಯೊಂದನ್ನೇ ಪೂರಾ ಜನ್ನಾಗಿ ಅಧ್ಯಯನ ಮಾಡಿದರಾಯಿತು. ಮಿಕ್ಕ ಸಾವಿರಾರು ಶಾಸ್ತ್ರಗಳನ್ನು ಓದಿ ಮಾಡುವದೇನು ? ಎಂದು ಹೇಳಿರುವದು ನಿಜವಾಗಿರುವದು. ಆದುದರಿಂದಲೇ ಇದಕ್ಕೆ ಶ್ರೀಮದ್ಭಗವದ್ಗೀತಾ ಸೂಪನಿಷತ್ಸು–ಬ್ರಹ್ಮವಿದ್ಯಾಯಾಂ ಯೋಗ ಶಾಸ್ತ್ರೇ ಶ್ರೀ ಕೃಷ್ಣಾರ್ಜುನ ಸಂವಾದೇ ಎಂಬ ಶಬ್ದಗಳು ಪ್ರತಿಯೊಂದು ಅಧ್ಯಾಯದ ಕಡೆಯಲ್ಲಿ ಸಂಕಲ್ಪವಿರುವದು. ಅಂದರೆ ಇದರಲ್ಲಿ ಪರಿಪೂರ್ಣವಾಗಿ ಬ್ರಹ್ಮವಿದ್ಯೆಯೇ ಓತಪ್ರೋತವಾಗಿ ತುಂಬಿಕೊಂಡಿರುವದು. ಗೀತೆಯ ಮೇಲೆ ಭಾವಾರ್ಥದೀಪಿಕೆ ಎಂಬ ಟೀಕೆಯನ್ನು ಮಹಾರಾಜರು ಶಕೆ ೧೨೧೨ ನೇದರಲ್ಲಿ ಬರೆದರು. ಆಗಿನ ಕಾಲಕ್ಕೆ ಮಹಾರಾಷ್ಟ್ರದಲ್ಲಿ ಅನೇಕ ಪ್ರಕಾರದ ರಾಜಕೀಯ ಕ್ರಾಂತಿಗಳು ನಡೆದು ನಾಮಶೇಷವಾಗಲಾರಂಭಿಸಿದ ಭಾಗವತ ಧರ್ಮದ ಸ್ಥಾಪನೆಮಾಡುವದಕ್ಕೋಸ್ಕರ ಭಕ್ತರ ಮೇಲಿನ ಪ್ರೇಮದದೆಶೆಯಿಂದ ಮನನುರುಗಿ ಪಾಂಡುರಂಗನೇ ಜ್ಞಾನೇಶ್ವರರೂಪದಲ್ಲಿ ಪ್ರಕಟವಾದನು. ಮತ್ತು ತನ್ನ ಪುರಾತನ ಭಕ್ತರಿಗೆ ಹೊಸ ಹೆಸರುಗಳನ್ನು ಕೊಟ್ಟು ಅವತಾರ ಮಾಡಿಸಿದನು. ಭಕ್ತರೇ ಆಗಿನ ಕಾಲದ ಸಾಧುಸಂತರ ಸಮುದಾಯವು. ನಾಮದೇವ, ಗೋರಾಕುಂಬಾರ, ಸಾಂವತಾಮಾಳಿ, ನರಹರಿ ಸೋನಾರ, ಚೋಖಾ ಮೇಳಾ, ಜಗಮಿತ್ರ ನಾಗಾ, ವಿಸೋಬಾ ಖೇಚರ, ಜನಾಬಾಯಿ, ಚಾಂಗದೇವ ಇವರೇ ಸಮಕಾಲೀನ ಭಕ್ತಸಂತರು. ಭಾಗವತ ಧರ್ಮದ ಅರ್ಥಾತ್ ಭಕ್ತಿಮಾರ್ಗದ ಯಶೋಧ್ವಜ ವನ್ನು ಮೆರಿಸಿದವರು. ಜ್ಞಾನೇಶ್ವರ ಮಹಾರಾಜರು ಪೈಠಣದಲ್ಲಿ ಕೋಣನ ಮುಖದಿಂದ ನಾಲ್ಕು ವೇದಗಳನ್ನು ನುಡಿಸಿದರು. ಚಾಂಗದೇವನ ಗರ್ವ ಹರಣ ಮಾಡುವದಕ್ಕೋಸುಗ ಗೋಡೆಯನ್ನು ನಡಿಸಿದರು. ಸ್ವರ್ಗದ ಪಿತರು ಗಳನ್ನು ಅಮಂತ್ರಣಮಾಡಿ ಶ್ರಾದ್ಧದ ಭೋಜನಕ್ಕೆ ತರಿಸಿದರು. ಇಂಥ ಅಮಾನುಷಕೃತಿಗಳಿಂದ ಪರಮೇಶ್ವರನ ಅವತಾರವೆಂದು ಜಗತ್ಪ್ರಸಿದ್ಧ ಹೊಂದಿ ಅವರು ಬರೆದ ಗ್ರಂಥವೇ ಜ್ಞಾನೇಶ್ವರಿಯು. ಈ ದಿವ್ಯ ಗ್ರಂಥವನ್ನು ವಾಣಿ ಯಿಂದ ಓದಿ ಬುದ್ಧಿಯಿಂದ ತಿಳಿದು ಒಗೆದು ಬಿಡುವ ಪುಸ್ತಕವು ಇದಲ್ಲ. ಸಕಲ ಜೀವರುಗಳನ್ನು ಅಧ್ಯಾತ್ಮಮಯ ಮಾಡು ವದೇ ಇದರ ಉದ್ದೇಶವಿರುವದರಿಂದ ಅಧ್ಯಾತ್ಮಾನುಭವಕ್ಕೆ ಸಿದ್ಧರಾಗಿ ನಾವು ಜ್ಞಾನೇಶ್ವರಿಯ ಅಭ್ಯಾಸನವನ್ನು ಪ್ರಾರಂಭ ಮಾಡಬೇಕು. ಶಾಬ್ದಿಕ ಸಂಸ್ಕೃತ ಜ್ಞಾನವನ್ನು ಮಾಡಿಕೊಂಡು ಎಷ್ಟೋ ಗ್ರಂಥಗಳನ್ನೋದಿ ಪರಿಶೀಲಿಸಿದರೂ ಅಧ್ಯಾತ್ಮಾನುಭವವು ಏನೂ ಇಲ್ಲದೇ ಹೋದರೆ " ಕತ್ತೆಯು ತಾ ಹೊತ್ತರೇನು ಶಾಸ್ತ್ರಂಗಳ್ " ಎಂಬಂತೆ ಸ್ಥಿತಿ ಯಾಗುವದು.

ದ್ವೈತಾ ದ್ವೈತಗಳ ತಿರುಳು ತಿಳಿಯದೇ ಹುರುಳು ಹೊಳಿಯದೇ ನಾನು ದ್ವೈತ ನಾನು ಅದ್ವೈತ ಎಂದು ಹೇಳುವ ಹಟವಾದಿಗಳು ಆಚಾರ್ಯತ್ರಯರ ಅನುಯಾಯಿಗಳಲ್ಲಿ ತಂಮ ಸಂಪ್ರದಾಯದ ಪುಸ್ತಕಗಳನ್ನು ಮಾತ್ರ ಓದುವರು. ಅನ್ಯ ಸಂಪ್ರದಾಯದ ಗ್ರಂಥಗಳನ್ನು ದೂರ ಸರಿಸಿಬಿಡುವರು. ಓದಿದರೆ ಕೇವಲ ಟೀಕಿಸುವ ಮುದ್ರೆ ಯಿಂದಲೂ ಅಂಧ ಶ್ರದ್ಧೆಯಿಂದಲೂ ಓದುತ್ತಾರೆ. ಪಂಢರಿ ಕ್ಷೇತ್ರದಲ್ಲಿ ಯಾವ ಜ್ಞಾನದೇವನ ನಾಮಸ್ಮರಣೆಯ ಜಯ ಘೋಷವೇ ನಡೆಯುತ್ತಿರುವದೋ, ಆ ಜ್ಞಾನೇಶ್ವರರ ಹೆಸರು ಉಚ್ಚರಿಸುವದು ನಮ್ಮಲ್ಲಿಯ ವೈಷ್ಣವರಿಗೆ ಸಹನ ವಾಗುವದಿಲ್ಲ; ಕರ್ಣಕಠೋರವಾಗುವದು. ಅಂದಬಳಿಕ ಜ್ಞಾನೇಶ್ವರೀಗ್ರಂಥವನ್ನೋದುವದು ಅಥವಾ ಶ್ರವಣ ಮಾಡುವ ದಂತೂ ದೂರೇ ಉಳಿಯಿತು. ಈ ಜ್ಞಾನೇಶ್ವರಿ ಗ್ರಂಥವು ದ್ವೈತವೋ ಅದ್ವೈತವೋ ಇದರಿಂದ ನಾವು ಏನು ಅರಿತು ಕೊಳ್ಳಬೇಕೆಂಬುವದೇ ಮಹತ್ವದ ಸಂಗತಿಯಾಗಿರುವದು. ವೇದ ಉಪನಿಷತ್ತುಗಳ ರಹಸ್ಯವನ್ನು ಆಚಾರ್ಯತ್ರಯರು ಮೂರು ಬೇರೆ ಬೇರೆ ಬಗೆಯಾಗಿ ಮಾಡಿದ್ದಾರೆ. ಅವುಗಳಲ್ಲಿ ಯಾವದು ಸರಿಯಾದದ್ದು ಎಂಬದನ್ನು ನಿರ್ಣಯಿಸುವದು ಸಾಮಾನ್ಯ ಕೆಲಸವಲ್ಲ. ಆಚಾರ್ಯತ್ರಯರು ಧರ್ಮಗ್ಲಾನಿ ಆದಾಗ್ಗೆ ಧರ್ಮ ಸಂಸ್ಥಾಪನೆ ಮಾಡುವದರ ದೆಶೆಯಿಂದ ದೇಶಕಾಲಮಾನಾನುಸಾರವಾಗಿ ಮತ ಸ್ಥಾಪನಾ ಮಾಡಿದರು. ಶ್ರೀ ಜ್ಞಾನೇಶ್ವರರು ಎಲ್ಲ ಮತದವರ ಮತ್ತು ಮಾನವೀ ಪ್ರಾಣಿಗಳ ಉದ್ಧಾರಾರ್ಥವಾಗಿ ಅವರ ಅವತಾರವು. ಜೀವದ ಪರಮ ಧರ್ಮ ಅಂದರೆ ಶ್ರೀಹರಿಯ ನಾಮಸಂಕೀರ್ತನೆ ಯಿಂದ ಭಗವಂತನಲ್ಲಿ ಭಕ್ತಿಯೋಗವನ್ನು ಸಾಧಿಸುವದೇ ಶ್ರೇಷ್ಠ ಉಪಾಯವೆಂದು ಜ್ಞಾನೇಶ್ವರಿ ಗ್ರಂಥದಲ್ಲಿ ಹೇಳಿರು

ವರು. ಭಾಗವತ ಧರ್ಮದ ಪ್ರವರ್ತಕರಾದ ಜ್ಞಾನೇಶ್ವರ ನಾಮದೇವ ಏಕನಾಥ ತುಕಾರಾಮ ಈ ನಾಲ್ಕು ಕಂಬಗಳ ಮೇಲೆ ಮಹಾರಾಷ್ಟ್ರದೊಳಗಿನ ಭಕ್ತಿಪಂಥದ ಧ್ವಾರಕಾ ಅರ್ಥಾತ್ ಪಂಢರಪುರವು ನಿರ್ಮಾಣವಾಗಿರುವದು. ಇದು ಅವಿನಾಶವಿದ್ದು ಕಾಲಯಮನಿಂದಲೂ ಮುಳುಗಿಸುವದಾಗಲಾರದು. ಪಂಢರಪುರವು ಭಕ್ತರ ಯುನಿವ್ಹರ್ಸಿಟಿ (University) ವಿಶ್ವವಿದ್ಯಾಲಯ ವಿರುವದು. ಅದರ ಕೆಳಗೆ ಆಳಂದಿ, ದೇವು, ಪೈಠಣ, (College) ಕಾಲೇಜ ಇರುತ್ತವೆ. ಶ್ರೀಕೃಷ್ಣನೆಂದರೆ ವಿಠ್ಠಲನು. ಇವನು ನಂನು ಉಪಾಸ್ಯ ದೈವತನಾಗಿರುವನು. ರಾಮಕೃಷ್ಣಹರಿನಾಮಸ್ಮರಣವು ಸರ್ವಜಾತಿಯವರ ಸರ್ವ ಮತದವರ ಉಳಿಪವಾದ ತಾರಕಮಂತ್ರವಿರುವದು. ಬ್ರಾಹ್ಮಣರಿಂದ ಅಂತ್ಯಜರವರೆಗೆ ಸರ್ವರಿಗೆ ತಮ್ಮ ತಮ್ಮ ಸ್ವಧರ್ಮಕ್ಕನುಸರಿಸಿ ಈ ಮಂತ್ರದ ಜಯಘೋಷವನ್ನು ಮಾಡಿ ವಿಠ್ಠಲಪದವನ್ನು ಪ್ರಾಪ್ತಿ ಮಾಡಿಕೊಳ್ಳುವ ಅಧಿಕಾರವದೆ ಎಂಬ ನಿರ್ಣಯವನ್ನು ಶ್ರೀಜ್ಞಾನೇಶ್ವರರು ಸಿದ್ಧಾಂತಮಾಡಿರುವರು. ಶ್ರೀಜ್ಞಾನೇಶ್ವರಿ ಗ್ರಂಥವು ಶ್ರೀಮದಾನಂದ ತೀರ್ಥರ ಭಾಷ್ಯಕ್ಕೂ ಶ್ರುತಿ ಸ್ಮೃತಿಗಳ ಆಶಯಕ್ಕೂ ಯುಕ್ತಿಗೂ ಅನುಭವಕ್ಕೂ ಹೊಂದುವಂಥದಿರುವದೆಂದು ನಿರ್ವಿವಾದವಾಗಿ ಹೇಳಬಹುದು. ಈ ಗ್ರಂಥನಿಧಿಯು ಮಹಾರಾಷ್ಟ್ರದಲ್ಲಿ ಹುಟ್ಟಿ ೬೦೦ ವರ್ಷಗಳಾಗಿ ಹೋದರೂ ಇಂದಿನ ವರೆಗೆ ಕನ್ನಡ ಬಾಂಧವರು ಕನ್ನಡದಲ್ಲಿ ಪರಿವರ್ತಿಸಲು ಯಾರೂ ಯತ್ನಿಸಿರುವದಿಲ್ಲ. ಕನ್ನಡಿಗರಿಗೆ ಜ್ಞಾನೇಶ್ವರಿಯ ಪರಿಚಯವೇ ಇರುವದಿಲ್ಲ. ಇಲ್ಲವೆಂದರೆ ೨-೩ ವರ್ಷಗಳ ಹಿಂದೆ ಶ್ರೀಯುತ ಮೂಡಕಟ್ಟೆ ಮಾವುಲೇದಾರರೊಬ್ಬರೇ ಕನ್ನಡ ಭಾಮಿನಿ ಷಟ್ಪದಿಯಲ್ಲಿ ಜ್ಞಾನೇಶ್ವರಿಯ ನೇಲೆ ಕವಿತ್ವವನ್ನು ಮಾಡಿರುವರು. ಜ್ಞಾನೇಶ್ವರರ ಮರಾಠಿ ಓವಿಗಳು ಪ್ರಾಸಾದಿಕವಿದ್ದು ದೈವೀಸಂಪತ್ತಿ ಸಂಚಾರವಾದಾಗ ರಚಿಸಲ್ಪಟ್ಟಿರುವವು. ಮೂಡ ಕಟ್ಟೆಯವರು ಮಾಡಿದ ಕವಿತ್ವದಲ್ಲಿ ಜ್ಞಾನೇಶ್ವರಿಯ ಭಾವವನ್ನು ತರಲು ಯತ್ನಿಸಿರುವರು. ಇವರ ಕವಿತ್ವಗಳು ವರ್ಣ ನೀಯವಿರುವವು ಆದರೆ ಪ್ರಾಸಾದಿಕ ಓವಿಗಳಲ್ಲಿಯ ತಿರುಳು ಈ ಬರಿಯ ಭಾಮಿನಿಷಟ್ಪದಿ ಭಾಷಾಂತರದಿಂದ ಸರಿಯಾದ ಅರ್ಥಬೋಧವಾಗಲಾರದು. ಇವರು ಮೂಲಪ್ರಾಸಾದಿಕ ಓವಿಗಳನ್ನೇ ಲೋಪಗೊಳಿಸಿರುವರು. ಇದು ವ್ಯರ್ಥವಾದ ಶ್ರಮವೇ ಸರಿ. ಅವರೀ ಕೃತ್ಯವು ಸುವರ್ಣದ ಆಲಂಕಾರಗಳಿಗೆ ಬೆಳ್ಳಿಯ ಮಲಮು ಮಾಡಿದಂತೆ ಇರುವದು. ಮತ್ತು ಜ್ಞಾನೇಶ್ವರಿಯ ಪ್ರತಿಯೊಂದು ಅಧ್ಯಾಯದ ಕಡೆಯಲ್ಲಿ "ಇತಿ ಶ್ರೀ ಜ್ಞಾನದೇವ ವಿರಚಿತಾಯಾಂ ಭಾವಾರ್ಥ ದೀಪಿಕಾಯಾಂ" ಅಂಬುವ ಜ್ಞಾನೇಶ್ವರರ ಸಂಕಲ್ಪವನ್ನು ಕಿತ್ತುಹಾಕಿ "ಇತಿ ಶ್ರೀ ಮೂಡಕಟ್ಟೆ ಸುಬ್ಬರಾವಾತ್ಮಜ ರಾಘವೇಂದ್ರರಾಯಕೃತ" ಜ್ಞಾನೇಶ್ವರಿ ಎಂದು ಬರೆದಿದ್ದಾರೆ. ಇದು ಕೆಲವು ಪಂಢರಿ ಸತ್ಪುರುಷರಿಗೆ ಸಾಮಾನ್ಯ ವೆನಿಸುವದು.

ಅಖಿಲವಿಶ್ವವೇ ಯಾವ ಈ ದಿವ್ಯಗ್ರಂಥವನ್ನು ಕೊಂಡಾಡುತ್ತಿರುವದೋ, ಪರದೇಶದಲ್ಲಿ ಪರಸಂಸ್ಕೃತಿಯವರು ಸಹ ಯಾವ ಗ್ರಂಥವನ್ನು ಮಾನ್ಯಮಾಡಿರುವರೋ ಅಂತಹ ಆ ಜ್ಞಾನೇಶ್ವರೀ ಮಹಾಗ್ರಂಥದ ಕಿಂಚಿತ್ತಾದರೂ ಪರಿಚಯ ವನ್ನು ನನ್ನ ಕನ್ನಡ ಬಾಂಧವರಿಗೆ ಮಾಡಿಕೊಡಬೇಕೆಂದು ಈ ಸಹಾಸವನ್ನು ಮಾಡಿರುವೆನು. ಆದರೆ ಇದುವರೆಗೆ ಯಾವ ಗ್ರಂಥದ ಎಷ್ಟೋ ಭಾಷಾಂತರಗಳು ಇನ್ನಿತರ ಎಲ್ಲ ರಾಷ್ಟ್ರಭಾಷೆಗಳಲ್ಲಿ ಆಗಿಹೋಗಿರುವದೋ ಆ ಜ್ಞಾನೇಶ್ವರಿ ಕನ್ನಡ ಅನುವಾದವು ನಮ್ಮಲ್ಲಿ ಆಗಬಾರದೆಂದರೆ ಅದು ನಮ್ಮ ಕೇವಲ ಸೋಮಾರಿತನವೇ ಸರಿ. ಅದಕ್ಕಾಗಿ ಈ ಶ್ರೇಷ್ಠ ಜ್ಞಾನೇಶ್ವರಿಯ ಪದ್ಯಗಳನ್ನು ೨೫ ವರ್ಷಗಳ ವರೆಗೆ ಪಠಣ ಪಾರಾಯಣ ಮಾಡಿ ಸಂತರ ಮುಖದಿಂದ ಶ್ರವಣ ಮಾಡಿ ಶ್ರೀ ಜ್ಞಾನೇಶ್ವರರ ಅಮೋಘವಾದ ಕೃಪಾಪ್ರಸಾದದಿಂದಲೇ ಜ್ಞಾನೇಶ್ವರಿಯ (ಓವಿ) ಪದ್ಯಗಳಲ್ಲಿ ಅಡಕವಾಗಿ ರುವ ಅಮೃತವನ್ನು ಸವಿದು ನನ್ನ ಕನ್ನಡ ಬಂಧುಗಳಿಗೂ ಅದರ ಸ್ವಾದವನ್ನು ಸವಿಸಬೇಕೆಂದು ಈ ಪ್ರಯತ್ನವನ್ನು ಮಾಡಿರುವೆನು. ಮರಾಠೀ ಭಾಷೆಯನ್ನು ಪೂರ್ಣ ಬಲ್ಲ ಪಂಡಿತರು ಕೂಡ ಈ ಜ್ಞಾನೇಶ್ವರಿಯ ಓವಿಗಳ ಅರ್ಥವನ್ನು ಎಷ್ಟು ಸ್ಪಷ್ಟಮಾಡಿ ಹೇಳಿದರೂ ಮೂಲ ಓವಿಗಳಿಂದಾಗುವ ದಿವ್ಯ ಬೋಧವು ಯಾವ ವಿವೇಚನದಿಂದಲೂ ಆಗದು ಎಂದು ಅಭಿಪ್ರಾಯಪಟ್ಟಿರುವರು. ಈ ಓವಿಗಳ ಭಾಷಾಂತರವನ್ನಾಗಲೀ ಸ್ಪಷ್ಟೀಕರಣವನ್ನಾಗಲೀ ಯಾರೇ ಯಾವ ಭಾಷೆಯಲ್ಲಿ ಮಾಡಿದರೂ ಅದು ಮೂಲ ಓವಿಗಳ ಮಹತ್ವವನ್ನು ತೋರಿಸಿ ಅವುಗಳನ್ನು ಅಭ್ಯಸಿಸಿರಿ. ಎಂದು ಹೇಳುವ ಉದ್ದೇಶದಿಂದಲೇ ಹೊರತು ಅವುಗಳನ್ನು ಬಿಟ್ಟು ಭಾಷಾಂತರದಿಂದಲೇ ಸಂತುಷ್ಟರಾಗಿರೆಂದು ಹೇಳಲಿಕ್ಕಲ್ಲ. ನಾನೀಗ

ಆ ಶ್ರೇಷ್ಠ ಓವಿಗಳ ಅಸಕು ಮನಕು ಪ್ರತಿಬಿಂಬವನ್ನು ಕನ್ನಡದಲ್ಲಿ ತೋರಿಸಲು ಪ್ರಯತ್ನ ಮಾಡಿದ್ದೇನೆ. ಮುಖ್ಯವಾಗಿ ಅದರಲ್ಲಿ ಜಗತ್ಯದ ವಿದ್ವಾಂಸರನ್ನೇ ಬೆರಗುಗೊಳಿಸುವಂಥ ದಿವ್ಯ ವಿಚಾರಗಳು ತುಂಬಿರುವವೆಂದು ಮನಗಂಡು ಅದನ್ನು ನನ್ನ ಕನ್ನಡಿಗರಿಗೆ ಮನವರಿಕೆ ಮಾಡಿಕೊಡಬೇಕೆಂಬುವದೇ ನನ್ನ ಉದ್ಯಶ್ಯ. ಈ ಕೆಲಸವನ್ನು ಕೈಕೊಳ್ಳ ಬೇಕೆನ್ನುವಷ್ಟರಲ್ಲಿಯೇ ನನಗೆ ಮೂಲವ್ಯಾಧಿ ಮುಂತಾದ ನಾನಾತರದ ರೋಗಗಳು ಅಂಟಿಕೊಂಡವು. ಆ ಕಷ್ಟದಿಂದ ಬಳಲುತ್ತಿರುವೆನು. ಇದಲ್ಲದೇ ಎಲ್ಲಕ್ಕೂ ಮುಖ್ಯವಾದ ಅಡಚಣೆ ಎಂದರೆ ದುಡ್ಡಿನದು. ಮುದ್ರಣಕ್ಕೆ ಬೇಕಾಗುವ ಒಂದು ಸಾವಿರ ರೂಪಾಯಿ ಸುಮಾರು ಹಣವನ್ನು ಎಲ್ಲಿಂದ ತರುವದು, ಎಂಬ ವಿಚಾರದಿಂದ ಮುದ್ರಣಕಾರ್ಯವು ಹಾಗೇ ಮುಂದೆ ಬೀಳುತ್ತ ನಡೆದಿತ್ತು. ಉದಾಶೀನನಾದ ನಾನು ಅಕಸ್ಮಾತ್ತಾಗಿ ಇಲಕಲ್ಲ ಗ್ರಾಮಕ್ಕೆ ಹೋದಾಗ್ಗೆ ಅಲ್ಲಿ ನನ್ನ ಕೆಲಜನ ಉದಾರ ಸದ್ಗೃಹಸ್ಥರು ಪ್ರೋತ್ಸಾಹನೆಯನ್ನೀಯಲು ಒಂದುತರದ ಧೈರ್ಯದಿಂದ ಕೊನೆಗೆ ಸಾಲವಾದರೂ ಚಿಂತೆಇಲ್ಲ ಎಂದು ಧೃಡವಾಗಿ ಈ ಕೆಲಸವನ್ನು ಕೈಕೊಂಡಿರುವೆನು. ಇದೀಗ ಸಿದ್ಧಪಡಿಸಿದ ಜ್ಞಾನೇಶ್ವರೀ ಗ್ರಂಥದ ಕನ್ನಡ ಅನುವಾದದ ಮೊದಲನೆಯ ಒಂಬತ್ತು ಅಧ್ಯಾಯಗಳಿಂದ ಕೂಡಿದ ಗನೆಯಭಾಗವು ಪೂರ್ಣಹೊಂದಿರುವದು. ಆ ಗ್ರಂಥವು ನಿಮ್ಮೆಲ್ಲರ ಕೈಸೇರಬೇಕಾಗಿದೆ. ಮುಂದಿನ ಭಾಗದಲ್ಲಿ ಉಳಿದ ೯ ಅಧ್ಯಾಯಗಳ ಅರ್ಥವು ಬರುವದು. ಆ ಭಾಗವೂ ಕೂಡ ಈಗಿನಕಿಂತಲೂ ಹೆಚ್ಚು ದೊಡ್ಡದಾಗುವ ಸಂಭವವದೆ. ಅದು ತೀವ್ರ ಮುದ್ರಿಸಿ ಪ್ರಸಿದ್ಧವಾಗುವದು ಕೇವಲ ತಮ್ಮಂಥ ವಾಚಕರ ಆಶ್ರಯವನ್ನೇ ಅವಲಂಬಿಸಿದೆ ಆದುದರಿಂದ ಎಲ್ಲರೂ ಪ್ರಕೃತ ಗ್ರಂಥಕ್ಕೆ ಆಶ್ರಯ ಕೊಟ್ಟು ಮುಂದಿನ ಭಾಗವು ತೀವ್ರ ಹೊರಡುವಂತೆ ಪ್ರೋತ್ಸಾಹನೆಗೊಳಿಸುವಿರೆಂದು ಆಶಿಸುತ್ತೇನೆ.

ಆಭಾರಪ್ರದರ್ಶನದ ಎರಡೇ ಮಾತುಗಳು

ಶ್ರೀ ಜ್ಞಾನೇಶ್ವರೀಗ್ರಂಥದ ಮುದ್ರಣ ಕಾರ್ಯಕ್ಕೆ ಹಣಕೊಟ್ಟು ಸಹಾಯಮಾಡಿದ ಮಹನೀಯರು

ಇಲಕಲ್ಲ

ಶ್ರೀಯುತ	ಮ॥	ರಾ॥ ಓಂಕಾರೆಪ್ಪಾ ವಿರಭದ್ರಪ್ಪಾ ಅರಳಿಕಟ್ಟಿ ಮರ್ಚಂಟ	ರೂಪಾಯಿ ೫೧
,,	,,	ಯಲ್ಲೂಸಾವಜಿ ನರಸಿಂಗಸಾ ಚವ್ಹಾಣ ಮರ್ಚಂಟ	೫೧
,,	,,	ನಾರಾಯಣ ಸಾವಜಿ ಚವ್ಹಾಣ ಮರ್ಚಂಟ	೨೫
	ಹರಿಭಕ್ತ	ಹನುಮಂತಪ್ಪಾ ತುಳಜಪ್ಪಾ ಮಿರ್ಜಕರ	೧೦
	,,	ಪರಸಪ್ಪಾ ಫಕೀರಪ್ಪಾ ಚವದರಿ	೫
			೧೪೨

ಗೂಡೂರ

ಶ್ರೀಯುತ ಮ॥ ರಾ॥ ಗಣಪತಸಾ ರಾಜಂಣಸಾ ಪಾಟೀಲ ಗೂಡೂರ ಇವರು ಬಿನ್ನ ವ್ಯಾಜ ಕೈಗಡ ಕೊಟ್ಟು ಸಹಾಯ ಮಾಡಿದ ರೂಪಾಯಿ (೨೦೦)

ಈ ಉದಾರ ಚರಿತರ ಉಪಕಾರದೆಶೆಯಿಂದಾ ನಾನು ಋಣಿಯಾಗಿದ್ದೇನೆ.

ಕರ್ನಾಟಕ ಪ್ರಿಂಟಿಂಗಪ್ರೆಸ್ಸಿನ ಒಡೆಯರಾದ **ಜಹಾರ ಬಳವಂತರಾಯರೂ** ಅವರ ಚಿರಂಜೀವರಾದ ಮ್ಯಾನೇಜರ **ಅಣ್ಣಾರಾಯರೂ** ಶಾಂತಮನಸ್ಸಿನಿಂದ ತಪ್ಪುತಡೆಗಳಿಲ್ಲದೇ ಅಂದವಾಗಿ ಜ್ಞಾನೇಶ್ವರೀ ಗ್ರಂಥವನ್ನು ಮುದ್ರಿಸಿ ಸಹಾಯ ಮಾಡಿದ್ದರಿಂದ ಅವರ ಉಪಕಾರವನ್ನು ಸ್ಮರಿಸದೇ ಇರಲಾರೆನು.

ಮುಖ್ಯಮ **ಧಾರವಾಡ,**
ಆಶ್ವಿನ ಶು ೧೦ (ವಿಜಯದಶಮಿ)
ಶಕೆ ೧೮೪೭
ಸನ್ ೧೯೩೫

ಗ್ರಂಥಕರ್ತ—

ಶ್ರೀನಿವಾಸ ಕೃಷ್ಣ ಕುಲಕರ್ಣಿ ಸುನಗ,
ಶ್ರೀ ವಿಠ್ಠಲಮುಂದಿರ ಜಾವಲತ್ತಿ.

ಜ್ಞಾನೇಶ್ವರ ಮಹಾರಾಜರ ಚರಿತ್ರೆ

ಶ್ರೀಜ್ಞಾನೇಶ್ವರ ಮಹಾರಾಜರಪೂರ್ವಜರು ಪೈಠಣದಿಂದ ನಾಲ್ಕು ಹರದಾರಿಯ ಮೇಲೆ ಗೋದಾವರೀ ತೀರದಲ್ಲಿರುವ ಆಪೇಗ್ರಾಮದ ಕುಲಕರ್ಣಿಯರು. ಇವರು ಮಧ್ಯಾಂಚಿನ ಶಾಖಾದ ದೇಶಸ್ಥ ಯಜುರ್ವೇದ ಬ್ರಾಹ್ಮಣರು. ಪಂಚಪ್ರವರಾನ್ವಿತ ವತ್ಸಗೋತ್ರವು. ಇವರ ವಂಶದಲ್ಲಿ ಭಗವದ್ಭಕ್ತ ಗೋವಿಂದಪಂತನ ಭಾರ್ಯಾ ಮಿರಾಬಾಯಿ ಇವಳಿಂದ ಅವಳ ೫೫ ನೇ ವರ್ಷಕ್ಕೆ ಭಗವದನುಗ್ರಹದಿಂದ ವಿಠ್ಠಲಪಂತನೆಂಬ ಮಗನು ಹುಟ್ಟಿದನು. ಇವರೇ ಶ್ರೀ ಜ್ಞಾನೇಶ್ವರ ಮಹಾರಾಜರ ಜನಕರು. ಮಿರಾಬಾಯಿಯು ಪೈಠಣದಲ್ಲಿ ದೇವಕುಳಿ ಇವರ ಮನೆತನದವಳು. ಈ ಮನೆತನವು ಇನ್ನೂ ವರೆಗೆ ಪೈಠಣದಲ್ಲಿರುತ್ತದೆ. ವೇದಮಾತಾ ಗಾಯತ್ರೀ ಪುರಶ್ಚರಣದಿಂದ ಗೋವಿಂದಪಂತನಿಗೆ ವಿಠ್ಠಲಪಂತನೆಂಬ ಮಗನು ಹುಟ್ಟಿದನು. ವಿಠ್ಠಲಪಂತನು ಚಿಕ್ಕಂದಿನಿಂದ ವೈರಾಗ್ಯಶೀಲನಿದ್ದನು. ಅವರ ೬ ನೇ ವರ್ಷದಲ್ಲಿ ವೃತಬಂಧವು ಆಯಿತು. ಗಾಯತ್ರಿ ಮಂತ್ರೋಪದೇಶವಾಯಿತು. ಆ ಮೇಲೆ ಅವರು ಪೈಠಣದಲ್ಲಿ ಮಾತುಲಗ್ರಹದಲ್ಲಿಯೇ ಬೆಳೆದು ವೇದಪಠಣ, ಕಾವ್ಯ, ವ್ಯಾಕರಣ ಮುಂತಾದ ವಿದ್ಯಗಳಲ್ಲಿ ನಿಪುಣನಾಗಿ ಪಂಡಿತರಲ್ಲಿ ಇವನ ಗಣನೆಯಾಯಿತು. ಅವನು ತೀರ್ಥಾಟನ ಮಾಡುವುದಕ್ಕೆ ತಂದೆಯ ಅಪ್ಪಣೆಯನ್ನು ಪಡೆದು ಹೊರಟನು. ವಿಠ್ಠಲಪಂತನು ಸಕಲ ಪುಣ್ಯಕ್ಷೇತ್ರಗಳನ್ನು ಸುತ್ತುತ್ತಾ ಆಳಂದಿಗೆ ಬಂದು ಶ್ರೀ ಸಿದ್ಧೇಶ್ವರ ದೇವಾಲಯವಲ್ಲಿ ಉಳಕೊಂಡನು. ಆಲಂದೀ ಗ್ರಾಮದಲ್ಲಿ ಸಿದ್ಧೋಪಂತ ನೆಂಬ ಸದಾಚಾರಸಂಪನ್ನಜ್ಞಾನಿಪುರುಷನಿದ್ದನು. ಅವನು ೨೪ ಗ್ರಾಮಗಳ ವತನದಾರಕುಲಕರ್ಣಿಯು ಅವನ ಹೆಂಡತಿ ಉಮಾಬಾಯಿ ಎಂಬವಳು ಧರ್ಮಾನುಕೂಲೆಯಾಗಿದ್ದಳು. ಈ ದಂಪತಿಗಳಿಗೆ ಬಂದು ಉಪವರ ಕನ್ಯೆ ಇತ್ತು. ಅವಳ ಹೆಸರು ರುಕ್ಮಿಣಿಬಾಯಿ. ಅವಳಿಗೆ ವರವನ್ನು ಶೋಧ ಮಾಡುವದರ ದೆಶೆಯಿಂದ ಸಿದ್ಧೋಪಂತನು ಯಾವಾಗಲೂ ಆಲೋಚಿಸುತ್ತಿದ್ದನು. ಆಕಸ್ಮಾತ್ ಆ ಸಿದ್ಧೇಶ್ವರ ದೇವಾಲಯಕ್ಕೆ ಹೋದಾಗ್ಗೆ ಆ ಬ್ರಹ್ಮಚಾರಿಯ ನಿಷ್ಠೆಯನ್ನು ನೋಡಿ ಎಲೈ ಮಹಾತ್ಮನೇ ! ನಿನ್ನ ದೇಶ ಯಾವದು ? ನಿನ್ನ ತಂದೆ ತಾಯಿಗಳು ಇರುವರೇ ? ಇಲ್ಲಿ ಏತಕ್ಕೆ ಬಂದಿರುವಿ ಎಂದು ಕೇಳಿದನು. ಅದಕ್ಕೆ ವಿಠ್ಠಲನು ಪ್ರತ್ಯುತ್ತರವಾಗಿ ಅಯ್ಯಾ ! ನಾನು ಗೋದಾವರಿತೀರದಲ್ಲಿರುವ ಆಪೇಗ್ರಾಮದವನು. ಅಲ್ಲಿ ನನ್ನ ತಾಯಿತಂದೆಗಳಿರುವರು. ನಾನು ತೀರ್ಥಯಾತ್ರಾರ್ಥವಾಗಿ ಹೊರಟು ದ್ವಾರಕೆ ಮೊದಲಾದಪುಣ್ಯ ಕ್ಷೇತ್ರಗಳನ್ನು ನೋಡಿಕೊಂಡು ಪುಣ್ಯ ತೀರ್ಥಗಳಲ್ಲಿ ಸ್ನಾನ ಮಾಡಿ ಇಲ್ಲಿಗೆ ಬಂದಿರುನೆನು ಎಂದನು. ಸಿದ್ಧೋಪಂತನು ಆ ಬ್ರಹ್ಮಚಾರಿಯನ್ನು ತಮ್ಮ ಮನೆಗೆ ಕರೆದುಕೊಂಡು ಹೋಗಿ ಆತನನ್ನು ಸತ್ಕರಿಸಿದನು. ಆ ರಾತ್ರಿ ಸಿದ್ಧೋಪಂತನ ಸ್ವಪ್ನದಲ್ಲಿ ಪಾಂಡುರಂಗನು ಬಂದು, ನಿನ್ನ ಮಗಳನ್ನು ಈ ಬ್ರಹ್ಮಚಾರಿಗೆ ಕೊಟ್ಟು ಮದುವೆಮಾಡು ಎಂದು ಹೇಳಿ ಅದೃಶ್ಯನಾದನು. ಮರುದಿನ ಬೆಳಿಗ್ಗೆ ಆ ಗ್ರಹಸ್ಥನು ಆ ಬ್ರಹ್ಮಚಾರಿ ವಿಠ್ಠಲನನ್ನು ನೋಡಿ, ಭಗವಂತನ ಸ್ವಪ್ನವನ್ನು ತಿಳುಹಿಸಿದನು. ವಿಠ್ಠಲನು ಭಗವದಾಜ್ಞೆಯಂತೆ ಆಗಬಹುದೆಂದು ಒಡಂಬಟ್ಟಮೇಲೆ ಒಂದು ಶುಭಲಗ್ನದಲ್ಲಿ ತನ್ನ ಮಗಳಾದ ರುಕ್ಮಿಣಿಯನ್ನು ಆ ಬ್ರಹ್ಮಚಾರಿಗೆ ಕೊಟ್ಟು ಸಾಲಂಕೃತ ಕನ್ಯಾದಾನವ ಮಾಡಿದನು. ಆಮೇಲೆ ತನ್ನ ಮಗಳನ್ನೂ ಅಳಿಯನನ್ನೂ ಕರೆದುಕೊಂಡು ಪಂಢರಪುರಕ್ಕೆ ಹೋಗಿ ಆಷಾಢಯಾತ್ರೆಯನ್ನು ಮಾಡಿಕೊಂಡು ಪಾಂಡುರಂಗನ ದರ್ಶನದಿಂದ ಧನ್ಯರಾಗಿ ಮರಳಿ ಊರಿಗೆ ಬಂದರು. ಕೆಲವು ದಿನಗಳತರುವಾಯ ಸಿದ್ಧೋಪಂತನಿಗೆ ಆರ್ಯರೇ ! ನಾನು ಶೇತುಯಾತ್ರೆಯನ್ನು ಮಾಡಿಕೊಂಡು ಜಾಗ್ರತೆಯಲ್ಲಿ ಬಂದು ಸೇರುನೆನು ಎಂದು ಹೇಳಿ ವಿಠ್ಠಲನು ಅವರ ಅಪ್ಪಣೆಯಂಪಡೆದು ರಾಮೇಶ್ವರಕ್ಕೆ ಹೋಗಿ ಶೇತು ಸ್ನಾನ ಮಾಡಿಕೊಂಡು ಜಾಗ್ರತೆಯಲ್ಲಿ ಮಾವನ ಮನೆಗೆ ಬಂದು ಸೇರಿದನು. ಅಲ್ಲಿಒಂದೆರಡು ದಿವಸವಿದ್ದು ತನ್ನ ಸ್ಥಳಕ್ಕೆ ಹೋಗಿ ತಾಯಿ ತಂದೆಗಳನ್ನು ನೋಡಿಕೊಂಡು ಬರಬೇಕೆಂದು ಹೇಳಲು ಸಿದ್ಧೋಪಂತನು ಸಂತೋಷಪಟ್ಟು ತನ್ನ ಹೆಂಡತಿಯನ್ನೂ ಮಗಳನ್ನೂ ಕರೆದುಕೊಂಡು ಬೀಗರನ್ನು ನೋಡಿಕೊಂಡು

ಬರುವದಕ್ಕೋಸ್ಕರ ತಾನು ಪ್ರಯಾಣ ಮಾಡಿ ಹೊರಟನು. ಜಾಗ್ರತೆಯಲ್ಲಿ ಗೋವಿಂದ ಪಂತನನ್ನು ಕಂಡು ನಡೆದ ಸಮಾಚಾರವನ್ನೆಲ್ಲ ತಿಳಿಸಲು ಅತ್ಯಾನಂದದಿಂದ ಅವರನ್ನು ಸತ್ಕರಿಸಿ ಕೆಲವು ದಿವಸಗಳತನಕ ಇರಿಸಿಕೊಂಡಿದ್ದು ಕಳುಹಿಸಿಕೊಡಲು ಆತನು ಪತ್ನಿಸಹಿತವಾಗಿ ಆಲಂಕಾಪುರಕ್ಕೆ ಬಂದು ಸೇರಿದನು. ಇತ್ತ ವಿಠ್ಠಲನೂ ಅವನ ಹೆಂಡತಿಯೂ ತಾಯಿತಂದೆಗಳಿಗೆ ಭಕ್ತಿಯಿಂದ ಶುಶ್ರೂಷೆ ಮಾಡಿಕೊಂಡಿದ್ದರು. ಕೆಲವು ದಿನಗಳ ತರುವಾಯ ಆ ವೃದ್ಧ ದಂಪತಿಗಳು ಪರಮ ಪದಕ್ಕೆ ಸೇರಿದರು. ಸಿದ್ದೋಪಂತನು ಈ ಸುದ್ದಿಯನ್ನು ಕೇಳಿ ಅಲ್ಲಿಗೆ ಬಂದು ಅಳಿಯನನ್ನು ನೋಡಿ ಅಯ್ಯಾ ! ನೀನು ವೈರಾಗ್ಯದಿಂದಿದ್ದರೆ, ಸಂಸಾರ ನಿರ್ವಹಿಸುವದು, ಕಷ್ಟವಾಗುವದು ನೀನೂ ನಿನ್ನ ಹೆಂಡತಿಯೂ ನಮ್ಮ ಮನೆಗೆ ಬಂದು ಸುಖವಾಗಿರಿ. ಎಂದು ಪ್ರಾರ್ಥಿಸಿದನು. ಅವನ ಮಾತಿಗೆ ಸಮ್ಮತಿಸಿ ಪತ್ನಿಯೊಂದಿಗೆ ಹೊರಟು ಆಲಂದಿಗೆ ಬಂದು ತನ್ನ ಮಾವನಮನೆಗೆ ಬಂದು ಸೇರಿದನು. ಆತನಿಗೆ ದಿನೇದಿನೇ ವೈರಾಗ್ಯವು ಹೆಚ್ಚುತ್ತಾ ಒಂದುದಿನ ತನ್ನ ಹೆಂಡತಿಯನ್ನು ನೋಡಿ ಸತಿಯೇ ! ನನಗೆ ಇದುವರೆಗೂ ಮಕ್ಕಳಾಗಿಲ್ಲ. ಮುಂದೆ ಆಗುವದೆಂಬ ಭರವಸೆ ಇಲ್ಲ. ನಾನು ಕಾಸಿಗೆ ಹೋಗಿ ಸನ್ಯಾಸ ತೆಗೆದುಕೊಳ್ಳಬೇಕೆಂದಿದ್ದೇನೆ ನೀನು ದಯಮಾಡಿ ಅನುಮತಿ ಕೊಡಬೇಕೆಂದನು. ಅವಳು ಪತಿಯ ಮಾತುಗಳನ್ನು ಕೇಳಿ ಚಿಂತಿಸಿ ಅವನಿಗೇನೂ ಉತ್ತರ ಕೊಡದೆ ತನ್ನ ತಂದೆಯಬಳಿಗೆ ಹೋಗಿ ಪತಿಯ ಆಜ್ಞೆಯನ್ನು ತಿಳಿಸಿದಳು. ಅದನ್ನು ಕೇಳಿ ಸಿದ್ದೋಪಂತನು ಮಗಳೇ ಚಿಂತಿಸಬೇಡ ಪುತ್ರರನ್ನು ಪಡೆದು ಪಿತೃಋಣವನ್ನು ತೀರಿಸುವದಕ್ಕೆ ಮುಂಚೆ ಸನ್ಯಾಸವನ್ನು ತೆಗೆದುಕೊಳ್ಳಕೂಡದೆಂದು ಶಾಸ್ತ್ರದಲ್ಲಿ ಹೇಳಿದೆ. ಇವನು ಆ ಶಾಸ್ತ್ರವನ್ನು ಉಲ್ಲಂಘಿಸುವನೇ ? ನೀನು ಸನ್ಯಾಸಕ್ಕನುಮತಿಕೊಡದೆ ಮೌನವಾಗಿರು. ಎಂದು ಹೇಳಿಕಳುಹಿದನು. ಒಂದುದಿನ ರುಕುಮಾಬಾಯಿ ಮಲಗಿ ನಿದ್ರಿಸುತ್ತಿರುವಾಗ ಅರ್ಧರಾತ್ರಿಯಲ್ಲಿ ವಿಠ್ಠಲನು ಎದ್ದು ಯಾರಿಗೂ ತಿಳಿಯದ ಹಾಗೆ ಹೊರಟು ಪ್ರಯಾಗ ಕ್ಷೇತ್ರಕ್ಕೆ ಹೋಗಿ ಅಲ್ಲಿಂದ ಕಾಶೀ ಕ್ಷೇತ್ರಕ್ಕೆ ಬಂದು ಜ್ಞಾನನಿಧಿಯಾದ ರಾಮಾನಂದರ ಚರಣಕ್ಕೆ ಶರಣಾಗತನಾಗಿ ತನಗೆ ಸನ್ಯಾಸವನ್ನು ಕೊಡಿಸಬೇಕೆಂದು ಬೇಡಿಕೊಂಡನು. ಅದಕ್ಕಾತನು ವಿಠ್ಠಲನನ್ನು ನೋಡಿ ಪುತ್ರನನ್ನು ಪಡೆದು ಪಿತೃಋಣವನ್ನು ತೀರಿಸಿದ್ದೀಯಾ ? ನಿನ್ನ ತಾಯಿ ತಂದೆ ಹೆಂಡತಿಗಳಿಗೆ ಯಾವ ಕೊರತೆಯೂ ಇಲ್ಲದೇ ತೃಪ್ತಿ ಪಡಿಸಿ ಅವರ ಅನುಮತಿಯನ್ನು ಪಡೆದು ಬಂದಿರುವೆಯಾ ? ಎಂದು ಕೇಳಿದನು. ವಿಠ್ಠಲನು ಗುರುಗಳಿಗೆ ಕೈಮುಗಿದು ಸ್ವಾಮೀ ತಮ್ಮ ಆಜ್ಞೆಯಂತೆ ಎಲ್ಲವನ್ನೂ ಮಾಡಿ ಬಂದಿದ್ದೇನೆ ಎಂದು ಹೇಳಲು ಅವನ ಮಾತು ನಿಜವೆಂದು ನಂಬಿ ಸ್ವಾಮಿಗಳು ಅವನಿಗೆ ಸನ್ಯಾಸವನ್ನು ಕೊಟ್ಟರು. ಈ ಸುದ್ದಿಯನ್ನು ರುಕುಮಾಬಾಯಿಯು ಕೇಳಿ ದುಃಖದಿಂದ ಗೋಳಾಡುತ್ತಿದ್ದಳು. ಆಸಾಧ್ವಿಯು, ಮನಸನ್ನು ಧೃಡಪಡಿಸಿ ವೈರಾಗ್ಯ ಸೀಲಳಾಗಿ ಅಶ್ವತ್ಥನನ್ನು ಭಯಭಕ್ತಿಯಿಂದ ನಿಯಮಗಳೊಂದಿಗೆ ಪೂಜಿಸುತ್ತಿದ್ದಳು. ಕೆಲವು ದಿನಗಳಮೇಲೆ ಅಶ್ವತ್ಥ ನಾರಾಯಣನಿಗೆ ಆಕೆಯನ್ನೇಲೆ ಕೃಪೆಯುಂಟಾಯಿತು. ಅವಳ ಪತಿಗೆ ಗುರುವಾದ ರಾಮಾನಂದಸ್ವಾಮಿಯು ಶೇತು ಯಾತ್ರೆಗೆ ಹೊರಟು ಬರುವಾಗ ಮಾರ್ಗವಶದಿಂದ ಆಲಂದಿಗೆ ಬಂದು ರುಕುಮಾಬಾಯಿಯು ಪ್ರದಕ್ಷಿಣೆ ಮಾಡುತ್ತಿದ್ದ ಅಶ್ವತ್ಥ ವೃಕ್ಷದ ಕಟ್ಟೆಯಮೇಲೆ ಕುಳಿತುಕೊಂಡರು ರುಕುಮಾಬಾಯಿಯು ಭಯಭಕ್ತಿಗಳಿಂದ ಆ ಯತಿಗೆ ನಮಸ್ಕರಿಸಿದಳು. ನೀನು ಸುಪುತ್ರರನ್ನು ಪಡೆದು ದೀರ್ಘ ಸುಮಂಗಲಿಯಾಗಿ ಬಾಳು. ಎಂದು ಆಶೀರ್ವದಿಸಿದರು. ಆ ಸತಿಯು ಕಿರುನಗೆ ನಕ್ಕಳು. ಸ್ವಾಮಿಯು ಮಗಳೇ ! ಏಕೆ ನಗುತ್ತೀ ಎಂದು ಕೇಳಲು ಆಕೆಯು ಮಹಾತ್ಮನೇ ಪತಿ ಇಲ್ಲದೇ ಮಕ್ಕಳು ಹೇಗೆ ಜನಿಸುವರು ? ನನ್ನ ಪತಿಯು ಸನ್ಯಾಸ ವಹಿಸಿರುವನು. ತಮ್ಮ ಆಶೀರ್ವಾದವು ಭಾಗ್ಯಹೀನಿಯಾದ ನನಗೆ ವಿಫಲವಾಗುವದಲ್ಲ ! ಎಂದು ಚಿಂತಿಸಿ ನಕ್ಕೆನು ಎಂದಳು. ನಡೆದ ಸಮಾಚಾರವನ್ನೆಲ್ಲ ಅವಳ ತಂದೆಯನ್ನು ಕರೆಯಿಸಿ ತಿಳಿದುಕೊಂಡರು. ಇವಳ ಗಂಡನೇ ನನಗೆ ಸುಳ್ಳು ಹೇಳಿದ್ದರಿಂದ ನಾನು ಸನ್ಯಾಸ ದೀಕ್ಷೆಯನ್ನು ಕೊಟ್ಟೆರುವೆನು ಎಂದು ಕಂಡು ಬಂತು ಅಪುತ್ರವಂತರು ಸನ್ಯಾಸ ಪಡೆಯಕೂಡದೆಂದು ಶಾಸ್ತ್ರವಿದೆ. ಇದಕ್ಕೆ ವಿರುದ್ಧವಾಗಿ ಸನ್ಯಾಸ ಪಡೆಯುವವನೂ ಸನ್ಯಾಸ ಕೊಟ್ಟವನೂ ಅಪರಾಧಿಗಳಾಗುವರು. ಎಂದು ಹೇಳಿ ತನ್ನ ತಪ್ಪನ್ನು ಸರಿಮಾಡಿಕೊಳ್ಳಲು ನಾನು ಮರಳಿ ಕಾಸಿಗೆ ಹೋಗುವೆನು. ನಿನ್ನ ಮಗಳನ್ನು ಕರೆದುಕೊಂಡು ಅಲ್ಲಿಗೆ ಬಾ ಎಂದು ಸಿದ್ದೋಪಂತನಿಗೆ ಹೇಳಿ ಕಾಸಿಗೆ ಹೋದರು. ಆ ಯೋಗಿಯ ಹಿಂದೆಯೇ ಹೊರಟು ಕಾಶೀ ಕ್ಷೇತ್ರಕ್ಕೆ ಹೋಗಿ ಅವರ ಆಶ್ರಮದಲ್ಲಿಯೇ ಇಳಿದುಕೊಂಡರು. ಶ್ರೀರಾಮಾನಂದರು ವಿಠ್ಠಲನನ್ನು ಕರೆಯಿಸಿ ಅಯ್ಯಾ !

ನೀನು ನನ್ನನ್ನು ವಂಚಿಸಿ ಸುಳ್ಳಾಡಿ ಆಶ್ರಮವನ್ನು ಪಡೆದಿಯೋ ಎಂದು ಗದರಿಸಿದನು. ವಿಠ್ಠಲನು ಭಯಕಂಪಿತನಾಗಿ ಕ್ಷಮಿಸಬೇಕೆಂದು ಪಾದಗಳಲ್ಲಿ ಬಿದ್ದನು. ವಿಠ್ಠಲನೇ ನಿನ್ನ ಹೆಂಡತಿಯನ್ನು ಕರೆದುಕೊಂಡು ಬಂದಿರುವೆನು. ಇಕೋ ಆಕೆಯೊಡನೆ ಕೂಡಿ ನಿನ್ನ ಸ್ಥಳಕ್ಕೆ ಹೋಗಿ ಗೃಹಸ್ಥನಾಗಿ ಸುಖದಿಂದಿರು. ನನ್ನ ಗುರುವಾಜ್ಞೆಯನ್ನು ಪರಿಪಾಲಿಸು ನಿನ್ನಿಂದ ನಿನ್ನ ಹೆಂಡತಿಯಲ್ಲಿ ದೇವತಾಂಶರಾದ ತ್ರಿಮೂರ್ತಿಗಳೇ ಜನಿಸುವರು ಅವರಿಂದ ಜಗದುದ್ಧಾರವಾಗುವದು. ನನ್ನ ಅಂತರ್ಯಾಮಿಯಾದ ಶ್ರೀರಾಮಚಂದ್ರನೇ ನನ್ನ ಬಾಯಿಯಿಂದ ಹೊರಡಿಸಿದುದರಿಂದ ನನ್ನ ಮಾತು ಎಂದಿಗೂ ವ್ಯರ್ಥವಾಗುವದಿಲ್ಲ ಪಾಂಡುರಂಗನು ಸ್ವಪ್ನದಲ್ಲಿ ಒಂದು ರುಕುಮಾಬಾಯಿಯನ್ನು ನಿನಗೆ ಮದುವೆಮಾಡಿಕೊಡೆಂದು ನಿಮ್ಮ ಮಾವನಿಗೆ ನಿಯಮಿಸಿದಾಗ ನಿನ್ನಿಂದ ದೇವತಾಂಶರಾದ ನಾಲ್ವರು ಭಕ್ತರು ಅವತರಿಸಬೇಕೆಂದು ಅನುಗ್ರಹಿಸಿರುವನು. ಈ ಸಂದರ್ಭವನ್ನು ಯೋಚಿಸಿ ನೀನು ಗೃಹಸ್ಥಾಸಾಗಿ ಮಕ್ಕಳನ್ನು ಪಡೆ. ಇದರಿಂದ ನಿನಗೆ ಪಾಪವಿಲ್ಲ ಎಂದು ಹೇಳಿ ಆತನೊಂದಿಗೆ ರುಕುಮಾಬಾಯಿಯನ್ನು ಆಲಂಕಾಪುರಕ್ಕೆ ಕಳಿಸಿದನು. ವಿಠ್ಠಲನಿಗೆ ಆ ಸಾಧ್ವಿಯಲ್ಲಿ ಮೂವರು ಗಂಡುಮಕ್ಕಳೂ ಒಬ್ಬ ಹೆಣ್ಣುಮಗಳೂ ಹುಟ್ಟಿದರು.

ಶ್ರೀಜ್ಞಾನೇಶ್ವರಾದಿ ಸಂತಮಕ್ಕಳ ಜನ್ಮಕಾಲವು

ಅವರಲ್ಲಿ ಹಿರಿಯ ಮಗ ನಿವೃತ್ತಿದೇವನು ಶ್ರೀಸದಾಶಿವಾಂಶವೆಂದಲೂ ಎರಡನೇಯವನಾದ ಜ್ಞಾನದೇವನು ವಿಷ್ಣುವಿನ ಅಂಶದಿಂದಲೂ ಕಿರಿಯವನಾದ ಸೋಪಾನದೇವನು ಬ್ರಹ್ಮನ ಅಂಶದಿಂದಲೂ ಕಡೆಯಮಗಳಾದ ಮುಕ್ತಾಬಾಯಿಯು ಯೋಗಸಾಯಾಂಶದಿಂದಲೂ ಅವತರಿಸಿದರು ನಿವೃತ್ತಿನಾಥರು ಶಕೆ ೧೧೯೫ ರಲ್ಲಿ ಮತ್ತು ಶ್ರೀ ಜ್ಞಾನೇಶ್ವರರು ಶಕೆ ೧೨೧೭ ಯುವನಾಮ ಸಂವತ್ಸರ ಶ್ರಾವಣ ಕೃಷ್ಣಾಷ್ಟಮಿ ಬುಧವಾರ ರೋಹಿಣಿ ನಕ್ಷತ್ರದ ಮಧ್ಯರಾತ್ರಿಯಲ್ಲಿ ಜನಿಸಿದರು ಶ್ರೀಕೃಷ್ಣನ ಜನ್ಮವಾದರೂ ಇದೇ ಸುಮೂಹೂರ್ತದ ಮೇಲೆ ಆಗಿರುವನು ಸೋಪಾನದೇವರು ಮುಕ್ತಾಬಾಯಿಯವರು ಎರಡೆರಡು ವರ್ಷದ ಅಂತರದಿಂದ ಜನಿಸಿದರು. ಈ ನಾಲ್ಕು ಮಕ್ಕಳು ನಾಲ್ಕು ಸೂರ್ಯರೇ ಭೂಮಿಯ ಮೇಲೆ ಪ್ರಗಟವಾಗಿರುವರೆಂದು ಅಥವಾ ಚತುರ್ವಿಧ ಪುರುಷಾರ್ಥವೇ ಸಾಕಾರರೂಪವೆಂದ ಅವತರಿಸಿದರೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ವಿಠ್ಠಲ ಪಂತನು ಅಕಾಲದಲ್ಲಿ ಸನ್ಯಾಸ ತೆಗೆದುಕೊಂಡದ್ದರಿಂದ ರುಕ್ಮಿಣಿಬಾಯಿಗೆ ೧೨ ವರ್ಷ ಘೋರವಾದ ತಪಶ್ಚರ್ಯವನ್ನು ಮಾಡುವ ಸಂದಿಯು ಬೊರಕಿತು. ವಿಠ್ಠಲಪಂತನಂಥ ವೈರಾಗ್ಯಶೀಲ ತಂದೆಯು ಮಹಾಪತಿವ್ರತಾ ಶಿರೋಮಣಿಯಾದ ಮಾತೋಶ್ರಿಯ ಉದರದಲ್ಲಿ ಜ್ಞಾನೇಶ್ವರಾದಿ ಬ್ರಹ್ಮನಿಷ್ಠರು ಜನಿಸಿದರು. ಅವರು ತಮಗೆ ಯೋಗ್ಯರಾದ ತಾಯಿತಂದೆಗಳನ್ನು ಹುಡುಕುತ್ತಿದ್ದರು. ಅವರಿಗೆ ಎಲ್ಲಿಯೂ ಕಾಣಲಿಲ್ಲ ಕಾರಣಾ, ವಿಠ್ಠಲರುಕ್ಮಿಣಿಬಾಯಿಗೆ ತೀವ್ರ ತಪಶ್ಚರ್ಯದ ಸಂಧಿಯನ್ನು ಅನಾಯಾಸವಾಗಿ ಸಾಧಿಸಿಕೊಟ್ಟು ಅವರ ಪರಮ ಪವಿತ್ರವಾದ ಉದರದಲ್ಲಿ ಜನ್ಮತೆಗಿದುಕೊಂಡರು. ಕಾಮನಾತ್ಯಾಗವಾದ ಸನ್ಯಾಸದ ಹೊಟ್ಟೆಯಲ್ಲಿಯೇ ಜ್ಞಾನವು ಜನ್ಮಹೊಂದುವದು. ಇದು ಯುಕ್ತವಾದದ್ದೇ.

"ಶುಚೀನಾಂ ಶ್ರೀಮತಾಂ ಗೇಹೆ ಯೋಗ ಭ್ರಷ್ಟೋಽಭಿಜಾಯತೇ ।
ಅಥವಾ ಯೋಗಿನಾಮೇವ ಕುಲೇ ಭವತಿ ಧೀಮತಾಂ ॥ ಭ. ಗೀ. ಅ. ೬

ಯೋಗಭ್ರಷ್ಟ ಮಹಾತ್ಮರು ದೈವಿಸಂಪತ್ತಿಯಿಂದ ಶ್ರೀಮಂತ ಅಥವಾ ಪವಿತ್ರಕುಲದಲ್ಲಿ ನಿಷ್ಕಾಮಉಳ್ಳ ತಾಯಿತಂದೆಗಳ ಹೊಟ್ಟೆಯಲ್ಲಿಯೇ ಜನ್ಮತೆಗಿದುಕೊಳ್ಳುತ್ತಾರೆ. ಈ ಸರ್ವೋತ್ಕೃಷ್ಟವಾದ ಸಿದ್ಧಾಂತಕ್ಕೆ ಅನುಸರಿಸಿ ಶ್ರೀ ಜ್ಞಾನೇಶ್ವರಾದಿ ಪ್ರಭೃತಿಗಳು ಜಗತ್ಯದ ಜಡಜೀವರ ಉದ್ಧಾರಾರ್ಥವಾಗಿ ಶುಚಿ ಮತ್ತು ಶ್ರೀಮಂತ ಮಾತಾಪಿತರರನ್ನು ಹುಡುಕಿ ಪಿತರರಿಗೆ ಅನುರೂಪವಾದ ಪುತ್ರರು ಪುತ್ರರಿಗೆ ಅನುರೂಪವಾದ ತಾಯಿತಂದೆಗಳ ಉದರವನ್ನು ಜನ್ಮತೆಗಿದುಕೊಂಡರು. ತಪಾಚರಣೆಯು ನಿರ್ವಿಷಯವಾಸನೆಯು ಲೋಕೋತ್ತರ ಇರವ ಹೊರ್ತು ವಿಭೂತಿಗಳ ಜನ


ಕಶ್ವವು ಎಂದಿಗೂ ಬರಲಾರದು. ಈ ದೇವತಾಂಶ ಸಂಭೂತ ಮಕ್ಕಳು ಹುಟ್ಟಿ ದಿನದಿನ ಪ್ರವರ್ಧಮಾನವಾಗುತ್ತ ಬಂದರು. ಸ್ವಜಾತಿಯ ಬಂಧುಜನರಲ್ಲಿ ಅನೇಕ ಬ್ರಾಹ್ಮಣರು ಈ ಹುಡುಗರನ್ನು ಸನ್ಯಾಸಿಯ ಮಕ್ಕಳೆಂದು ನಿಂದಿಸಿ ಬಹಿಷ್ಕಾರ ಹಾಕಿದರು. ಊರ ಹೊರಗೆ ಇರಿಸಿದರು. ಅನೇಕ ಕಷ್ಟನಷ್ಟಗಳನ್ನು ಸೋಸಬೇಕಾಯಿತು. ಆಗ, ರುಕ್ಮಿಣಿಬಾಯಿಯು ತಂನ ಪತಿಯನ್ನು ನೋಡಿ ನಾಥ ! ನಮ್ಮ ಮಕ್ಕಳಿಗೆ ವ್ರತಬಂಧವು ಇಲ್ಲದೆ ಇರುವದರಿಂದ ನನಗೆ ತುಂಬ ವ್ಯಸನವಾಗಿದೆ ಎಂದಳು. ಆಗ ವಿಠ್ಠಲನು ತನ್ನ ಮಕ್ಕಳನ್ನೇ ಕರೆದುಕೊಂಡು ಬ್ರಾಹ್ಮಣ ಸಭೆಗೆ ಹೋಗಿ ನಮಸ್ಕರಿಸಿ ವೇದಮೂರ್ತಿಗಳಿರಾ ! ನನ್ನ ಅಪರಾಧವನ್ನು ಕ್ಷಮಿಸಿ ನನಗೆ ಪ್ರಾಯಶ್ಚಿತವನ್ನು ವಿಧಿಸಿ ನನ್ನ ಮಕ್ಕಳಿಗೆ ವ್ರತಬಂಧಮಾಡಿಸಬೇಕೆಂದು ಬೇಡಿಕೊಂಡನು. ಅವರು ಸ್ವಲ್ಪಾದರೂ ದಯವಿಲ್ಲನೇ, ಎಲೈ ಭ್ರಷ್ಟನೇ ! ನಿನಗೆ ಪ್ರಾಯಶ್ಚಿತ್ತವು ಮರಣವೇ ಹೊರ್ತು ಮತ್ತೊಂದು ಇಲ್ಲವು. ನಿಮ್ಮ ಶರೀರಗಳನ್ನು ತ್ರಿವೇಣೀಸಂಗಮಗಳಲ್ಲಿ ತಳ್ಳಿಬಿಡಬೇಕು. ಎಂದು ಹೇಳಿದರು. ಉಭಯ ದಂಪತಿಗಳು ಬ್ರಾಹ್ಮಣರ ಆಜ್ಞಾನುಸಾರವಾಗಿ ವ್ಯಸನಗೊಂಡು ಮಕ್ಕಳನ್ನು ಬಿಟ್ಟು ಗಂಗೆಯಲ್ಲಿ ತನ್ನು ದೇಹ ಅರ್ಪಣಮಾಡಿದರು. ಮುಂದೆ ಕೆಲವು ದಿವಸಗಳ ಮೇಲೆ ನಿವೃತ್ತಿನಾಥ ಮೊದಲಾದವರು ಬ್ರಾಹ್ಮಣರ ಬಳಿಗೆ ಬಂದು ನಮ್ಮ ತಂದೆತಾಯಿಗಳು ನಿಮ್ಮ ಆಜ್ಞಾನುಸಾರವಾಗಿ ದೇಹಾಂತ ಪ್ರಾಯಶ್ಚಿತ್ತವನ್ನು ಪಡೆದರು. ಇನ್ನಾದರೂ ನಮಗೆ ಮುಂಜಿವಿಯನ್ನು ಮಾಡಿ ಗಾಯತ್ರೀ ಮಂತ್ರೋಪದೇಶವನ್ನು ಕೊಟ್ಟು ಉದ್ಧರಿಸಬೇಕೆಂದು ಬೇಡಿಕೊಂಡರು. ಆ ನಿರ್ದಯರಾದ ಬ್ರಾಹ್ಮಣರು ಹೀಗೆ ಮಾಡಲು ಶಾಸ್ತ್ರಾಧಾರ ವಿರುವದಿಲ್ಲ. ನೀವು ಪೈಠಣಕ್ಕೆ ಹೋಗಿರಿ. ಅಲ್ಲಿ ಶಾಸ್ತ್ರಜ್ಞ ಬ್ರಾಹ್ಮಣರು ಬಹು ಮಂದಿ ಇರುವರು. ಅವರು ಯಾವ ರೀತಿ ಪ್ರಾಯಶ್ಚಿತ್ತ ಮಾಡಿದರೆ ನೀವು ಶುದ್ಧರಾಗುವಿರೆಂದು ಹೇಳುವರೋ ಅದನ್ನು ಅವರಿಂದ ಬರೆಯಿಸಿಕೊಂಡು ಬಂದರೆ ಅವರಂತೆ ನಡೆದುಕೊಳ್ಳುವೆವೆಂದು ಹೇಳಿದರು. ಆಗ ನಿವೃತ್ತಿದೇವ ಮೊದಲಾದವರು ಪೈಠಣಕ್ಕೆ ಹೋಗಿ ಬ್ರಾಹ್ಮಣ ಸಭೆಯಲ್ಲಿ ಯಾವದ್ವೃತ್ತಾಂತವನ್ನು ಶ್ರುತಪಡಿಸಿದರು. ನಿವೃತ್ತಿನಾಥರು ಸದ್ಗತಿತಾಂತಃಕರಣದಿಂದ

ಸಮಸ್ತ ಸಂಪತ್ಸಮವಾಪ್ತ ಹೇತವಃ ॥ ಸಮುತ್ಥಿತಾಪತ್ಕುಲ ಧೂಮಕೇತವಃ ।
ಅಪಾರ ಸಂಸಾರ ಸಮುದ್ರಸೇತವಃ । ಪುನಂತುಮಾಂ ಬ್ರಾಹ್ಮಣಪಾದ ಪಾಂಸವಃ ॥ ೧ ॥

ಹೀಗೆ ಅಂದು ಬ್ರಹ್ಮನೈಂದಕ್ಕೆ ಸಾಷ್ಟಾಂಗ ನಮಸ್ಕಾರಮಾಡಿದರು. ಬ್ರಹ್ಮಸಭೆಯಲ್ಲಿ ದೊಡ್ಡ ದೊಡ್ಡ ವೈದಿಕರು ಶಾಸ್ತ್ರಜ್ಞರು ಶ್ರುತಿ ಸ್ಮೃತ್ಯಾಧ್ಯಯನದಿಂದ ಪಂಡಿತರೆನಿಸಿಕೊಂಡ ನೂರಾರು ಮಂದಿ ಬ್ರಾಹ್ಮಣರು ಸಭಾಸ್ಥಾನಕ್ಕೆ ಬಂದು ಕುಳಿತರು. ಈ ನಾಲ್ಕೂ ಸಂಣ ಮಕ್ಕಳ ಮುಖದಲ್ಲಿ ದಿವ್ಯತೇಜವು ಹೊಳೆಯುತ್ತಿತ್ತು. ಆದರೆ ಮಾಡುವದೇನು, ನಿಷ್ಕರುಣಿಗಳಾದ ಆ ಬ್ರಾಹ್ಮಣರು ಸನ್ಯಾಸಿಗಳ ಮಕ್ಕಳಿಗೆ ಮುಂಜಿವೆಯನ್ನು ಮಾಡಲಿಕ್ಕೆ ಧರ್ಮಶಾಸ್ತ್ರದಲ್ಲಿ ಎಲ್ಲಿಯೂ ವಿಧಿ ಹೇಳಿರುವದಿಲ್ಲ, ಪ್ರಾಯಶ್ಚಿತ್ತದಿಂದ ನಿಮ್ಮನ್ನು ಪಾವನರನ್ನಾಗಿ ಮಾಡಲು ಬರುವಂತಿಲ್ಲ. ನೀವು ಚಿತೇಂದ್ರಿಯರಾಗಿ ಇರ್ರಿ. ಲಗ್ನಮಾಡಿಕೊಂಡು ಸಂಸಾರ ವಿಸ್ತಾರವನ್ನು ಮಾಡಬೇಡಿರಿ. ಭಗವಂತನಿಗೆ ಶರಣಾಗತರಾಗಿ ಸರ್ವ ಭೂತ ಮಾತ್ರಗಳಲ್ಲಿ ಭಗವದ್ಭಾವನವನ್ನಿಟ್ಟು ಹರಿಚಿಂತನದಲ್ಲಿ ಕಾಲ ಕಳೆಯಿರಿ. ಎಂದು ಬ್ರಾಹ್ಮಣರ ಮುಖದಿಂದ ಈ ನಿರ್ಣಯವನ್ನು ಕೇಳಿ ನಿವೃತ್ತಿನಾಥರಿಗೆ ಜ್ಞಾನೇಶ್ವರರಿಗೆ ಪರಮ ಸಂತೋಷವಾಯಿತು. ಯಾರಿಗೆ ವಿಷಯದ ಸ್ಮರಣವೇ ಇಲ್ಲ ಅವರಿಗೆ ವಿಷಯ ಸೇವನೆಯನ್ನು ಬಿಟ್ಟು ಬಿಡು ಎಂದು ಹೇಳುವದು ಆವು ಅವರಿಗೆ ಶಿಕ್ಷೆಯನಿಸದು. ನಾಲ್ಕು ಮಂದಿ ಅಣ್ಣ ತಮ್ಮಂದಿರು ಅಜನ್ಮ ಬ್ರಹ್ಮಚರ್ಯ ವ್ರತಸ್ಥರಾಗಿದ್ದರು. ಜನ್ಮ ಪ್ರಸಂಗದಲ್ಲಿ ಅವರು ಸ್ತ್ರೀ ದೇಹವನ್ನು ಸ್ಪರ್ಶ ಮಾಡಿದ್ದರಲ್ಲದೇ ಅವರು ಅನಂತರ ಸರ್ವಜನ್ಮದಲ್ಲಿ ಸ್ತ್ರೀಸ್ಪರ್ಶವಿಲ್ಲದೇ ತನ್ನು ಜನ್ಮವನ್ನು ಮಡಿಯಿಂದ ಪವಿತ್ರವಾಗಿಟ್ಟುಕೊಂಡರು. ಬ್ರಾಹ್ಮಣರ ಮುಖದಿಂದ ಹೊರಟ ನಿರ್ಣಯವನ್ನು ಕೇಳಿದಕೂಡಲೇ ನಾಲ್ಕು ಮಂದಿ ಅಣ್ಣ ತಮ್ಮಂದಿರಿಗೆ ಮನಸಿನೊಳಗಿನ ಮಾತೇ ದೊರಕಿದಂತಾಯಿತು. ಅದರಿಂದ ಅವರಿಗೆ ಸಂತೋಷವಾಗುವದೇನಾಶ್ಚರ್ಯ ?

॥ ಶ್ರೀ ಜ್ಞಾನೇಶ್ವರ ಪ್ರಸನ್ನ ॥

ನಮಾಮಿ ಸದ್ಗುರುಂ ಶಾಂತಂ ಸಚ್ಚಿದಾನಂದ ವಿಗ್ರಹಂ ।
ಪೂರ್ಣ ಬ್ರಹ್ಮ ಪರಾನಂದಮೀಶಂ ಅಲಂದಿ-ವಲ್ಲಭಮ್ ॥



ಜ್ಞಾನೇಶೋ ಭಗವಾನ್ ವಿಷ್ಣು । ನಿವೃತ್ತಿರ್ಭಗವಾನ್ ಹರಃ ।
ಸೋಪಾನೋ ಭಗವಾನ್ಬ್ರಹ್ಮಾ । ಮುಕ್ತಾಖ್ಯಾ ಬ್ರಹ್ಮಚಿತ್ಕಲಾ ॥ ೧ ॥

ಜ್ಞಾನೇಶ್ವರ ಮಹಾರಾಜರು ಕೋಣನ ಬಾಯಿಂದ ವೇದ ನುಡಿಸಿದುದು.

ಬ್ರಹ್ಮ ಸಮಾಜವು

ಮತ್ತು

ಪೈಠಣದ ಚಮತ್ಕಾರವು.

ಇಷ್ಟರಲ್ಲಿ ಬ್ರಹ್ಮವೃಂದವಲ್ಲಿ ಯಾರೋ ಕುಟಿಲರು, ಜ್ಞಾನದೇವನನ್ನು ನೋಡಿ ಅಯ್ಯಾ ನಿನಗೆ ಹೆಸರನ್ನು ಕೊಟ್ಟವರಾರು ? ವೇದಶಾಸ್ತ್ರಗಳನ್ನು ನೀನು ಸಾಂಗವಾಗಿ ಅಭ್ಯಾಸಮಾಡಿರುವೆಯಾ ? ಎಂದು ಅಪಹಾಸ್ಯ ಮಾಡುತ್ತಿದ್ದರು. ಆ ವೇಳೆಯಲ್ಲಿ ಒಬ್ಬ ತುರುಕನು ಕೋಣನ ಮೇಲೆ ಚರ್ಮದ ಕಪಾಲಿಯನ್ನು ಹೇರಿಕೊಂಡು ಬರುತ್ತಿದ್ದನು. ಆ ಬ್ರಾಹ್ಮಣರು ಜ್ಞಾನದೇವನನ್ನು ನೋಡಿ ಈ ಕೋಣನಿಗೆ ಜ್ಞಾನೇಶ್ವರನೆಂದು ನಾಮಕರಣ ಮಾಡಿದೆವು ಎಂದರು. ಜ್ಞಾನದೇವನು ಬ್ರಾಹ್ಮಣರಿಗೆ ಕೈಮುಗಿದು ವಿಪ್ರರೇ ! ಈ ಕೋಣನಿಗೂ ನನಗೂ ಯಾವ ಭೇದವೂ ಇಲ್ಲ. ಸಮಸ್ತ ಪ್ರಾಣಿಗಳಲ್ಲಿಯೂ ವಾಸವಾಗಿರುವ ಪರಮಾತ್ಮನು ಈ ಕೋಣನಲ್ಲಿಲ್ಲವೇ ? ಎಂದನು. ಆ ವಿಪ್ರರು ಅವನನ್ನು ನೋಡಿ ನಿನ್ನ ಅಧ್ಯವಸಾಯವು ನಿಜವಾಗಿದ್ದರೆ ಈ ಕೋಣನನ್ನು ಹೊಡೆದರೆ, ನಿನ್ನ ಮೈಯಲ್ಲಿ ಗಾಯಗಳು ಕಾಣಬರಬೇಕಲ್ಲವೇ? ಎಂದರು. ನಿಜವೆಂದು ಜ್ಞಾನದೇವನು ಒಪ್ಪಿದನು. ಬ್ರಾಹ್ಮಣರು, ಆ ತುರುಕನಿಂದ ಕೋಣನನ್ನು ಒಳಿತಾಗಿ ಬಾರ ಕೋಲಿನಿಂದ ಹೊಡೆಯಿಸಿದರು. ಆ ಗಾಯಗಳೆಲ್ಲ ಜ್ಞಾನದೇವನ ಬೆನ್ನಿನಮೇಲೆ ಕಾಣಬಂದವು. ಆದರೂ ಬ್ರಾಹ್ಮಣರಿಗೆ ತೃಪ್ತಿ ಇಲ್ಲದೇ '' ಜ್ಞಾನದೇವಾ ! ನಿನಗೆ ನಿನ್ನ ಸರ್ವಕುಲವನ್ನು ಪಾವನಮಾಡಿಕೊಳ್ಳುವದಿದ್ದರೆ ಈ ಕೋಣನ ಮುಖದಿಂದ ವೇದವನ್ನು ನುಡಿಸು, ಎಂದರು. ಜ್ಞಾನದೇವನು ಎದ್ದು ನಿಂತು ಬ್ರಾಹ್ಮಣರಿಗೆ ಅಭಿವಂದನ ಮಾಡಿ ಅನ್ನುತ್ತಾನೆ— ತಾವು ಭೂದೇವರೇ ಇದ್ದೀರಿ. ನಮ್ಮ ಮುಖದಿಂದ ಹೊರಟ ಅಕ್ಷರಗಳು ಎಂದಿಗೂ ನಿಷ್ಫಲವಾಗಲಾರವು ಎಂದು ಹೇಳಿ, ತನ್ನ ಪದ್ಮಕರದಿಂದ ಕೋಣನ ತಲೆಯನ್ನು ಸವರಿ ನೀನು ವೇದಗಳನ್ನುಚ್ಚರಿಸಿ ಈ ಬ್ರಾಹ್ಮಣರಿಗೆ ಸಂತೋಷವನ್ನುಂಟು ಮಾಡು ಎಂದು ನಿಯಮಿಸಿದನು. ಕೂಡಲೇ ಆ ಕೋಣವು ಬಾಯಿ ತೆರೆದು ನಾಲ್ಕೂ ವೇದಗಳನ್ನು ಉಚ್ಚರಿಸತೊಡಗಿತು. ಈ ಆಶ್ಚರ್ಯವನ್ನು ನೋಡಿ ಬ್ರಾಹ್ಮಣರು ಕೋಲಾಹಲ ಧ್ವನಿಯಿಂದ ಕೂಗಿ ಕೊಳ್ಳಲಿಕ್ಕೆ ಹತ್ತಿದರು. ಆ ಕೋಣನ ಮುಖದಿಂದ ವೇದ ಉಚ್ಚಾರವು ಸ್ವಚ್ಛವಾಗುತ್ತಿತ್ತು. ಸ್ವರವರ್ಣವು ಎಳ್ಳಷ್ಟು ತಪ್ಪುತ್ತಿದ್ದಿಲ್ಲ. ದೊಡ್ಡ ದೊಡ್ಡ ವೇದ ಪಾಠಕರು ನಾಚಿಕೆಯಿಂದ ಕೆಳಗೆ ನೋರೆಯನ್ನು ತಗ್ಗಿಸಿಕೊಂಡು ನಿಂತಿದ್ದರು. ಒಂದು ಪ್ರಹರದ ವರೆಗೆ ವೇದಘೋಷವಾಗುತ್ತಿತ್ತು. ಇಂಥ ಅಪೂರ್ವವಾದ ಪ್ರಸಂಗವು ಯಾರು ಯಾವ ಕಣ್ಣಿನಿಂದ ಪ್ರತ್ಯಕ್ಷ ನೋಡಿರುವರು, ಆ ಕಣ್ಣುಗಳೇ ಧನ್ಯವೆಂದು ಹೇಳಬೇಕು. ಇಂಥ ಅಪೂರ್ವವಾದ ಚಮತ್ಕಾರವನ್ನು ನೋಡುವ ಭಾಗ್ಯವು ಶಕೆ ೧೩೧೯ ಮಾಘ ಶುದ್ಧ ೫ ಮಿತಿಗೆ ಪೈಠಣದಲ್ಲಿ ಗೋದಾವರೀ ನದಿಯ ದಂಡೆಯಮೇಲೆ ಕಂಡುಬಂದಿತು. ಶ್ರೀಜ್ಞಾನೇಶ್ವರರು ಸಾಕ್ಷಾತ್ ವಿಷ್ಣುವಿನ ಅವತಾರವಾಗಿರುವರೆಂಬದು ಅವರಿಗೆ ನಿಶ್ಚಯವಾಯಿತು. ಬ್ರಹ್ಮವೃಂದವು ಲಜ್ಜಿತವಾಯಿತು. ಬ್ರಾಹ್ಮಣರು ಗಲಿತ ಗರ್ವಉಳ್ಳವರಾಗಿ ಜ್ಞಾನೇಶ್ವರ ಮಹಾರಾಜರ ಬ್ರಹ್ಮತೇಜವನ್ನು ನೋಡಿ ಪೈಠಣದ ಬ್ರಾಹ್ಮಣರು ತಮ್ಮ ನಿಜವಾದ ಸ್ವರೂಪದ ಗುರುತು ಹಿಡಿದರು. ಅವರು ಅನುತಾಪದಿಂದ ತಪ್ತರಾದರು. ಅವರು ಕರ್ಮನಿಷ್ಠರಿದ್ದರು. ಅವರಿಗೆ ಆಕರ್ತಾತ್ಮಸ್ಥಿತಿಯ ಬೋಧವು ಆಗಿದ್ದಿಲ್ಲ. ಅವರು ಶಬ್ದಶಾಸ್ತ್ರವನ್ನೆ ತಿಳಿದವರಿದ್ದರು. ಆದರೆ ನಿಃಶಬ್ದ ಸ್ಥಿತಿಯ ಅನುಭವವು ಅವರಿಗೆ ಇದ್ದಿಲ್ಲ. ಅವರು ವಿಧಿವಿಧಾನವನ್ನು ಯಥಾಶಾಸ್ತ್ರ ಬಲ್ಲವರಿದ್ದರು. ಆದರೆ ವಿಧಿ ನಿಷೇಧ ಎಲ್ಲಿ ಮುಳುಗಿ ಹೋಗುತ್ತವೆ ಎಂಬ ಅವಸ್ಥಾದ ಸಾಕ್ಷಾತ್ಕಾರವು ಅವರಿಗೆ ಆಗಿದ್ದಿಲ್ಲ. ಶ್ರೀಜ್ಞಾನೇಶ್ವರ ರೂಪವೆಂಬ ಕನ್ನಡಿಯಲ್ಲಿ ಅವರು ತಮ್ಮ ವೊರೆಯನ್ನು ನೋಡಿಕೊಂಡರು. ಅವರಿಗೆ ತಮ್ಮ ಮುಖವು ಅಮಂಗಲ ಹೊಲಸು ಇರುವದೆಂಬದು ಕಂಡುಬಂತು. ನಾವು ವೇದಶಾಸ್ತ್ರದ ಅಧ್ಯಯನ ಮಾಡಿದೆವು. ಆದರೆ ವೇದವು ಯಾರ ನಿಶ್ವಾಸವದೆ. ಆ ಪರಮಾತ್ಮನನ್ನು ನಾವು ಗುರ್ತು ಹಿಡಿಯಲಿಲ್ಲವೆಂಬ ವಿಷಯದಲ್ಲಿ ಅವರಿಗೆ ಬಹಳೇ ದುಃಖವಾಯಿತು. ನಿಜವಾದ ಬ್ರಾಹ್ಮಣನೆಂದರೆ ಬ್ರಹ್ಮನೇತ್ಯಾ ಪುರುಷನು. ಆ ಬ್ರಹ್ಮನಿಷ್ಠಪುರುಷ ಜ್ಞಾನ್ನದೇವನನ್ನು ನೋಡಿ ಅವರ ದೇಹಬುದ್ಧಿ ಎಂಬ ಅಮಂಗಲ ಪದಾರ್ಥದಲ್ಲಿ ಕೂಡಿ ಬೆಳೆದ ಮಿಥ್ಯಾಭೂತವಾದ

ಜಾತ್ಯಾಭಿಮಾನವು ಲಯ ಹೊಂದಿತು. ಈ ಮೂವರು ತ್ರಿಮೂರ್ತಿಗಳ ಅವತಾರವೇ ಹೊರತು ಬೇರೆಯಲ್ಲ. ಇವರ ಪಾದಸ್ಪರ್ಶದಿಂದ ಜನರ ಪಾಪರಾಶಿಗಳೆಲ್ಲವೂ ತೊಲಗುವವು. ಇಂಥವರಿಗೆ ಪ್ರಾಯಶ್ಚಿತ್ತವೆಂದರೆ ಏನು ? ಇವರೇ ಪರಮ ಪಾವನರು ಎಂದು ಹೇಳಿ ಆ ಮಹಾತ್ಮರನ್ನು ತಮ್ಮ ಜಾತಿಯಲ್ಲಿ ಸೇರಿಸಿಕೊಂಡು ಗೌರವಿಸಿದರು. ಬ್ರಾಹ್ಮಣರು ಈ ಆಶ್ಚರ್ಯವನ್ನು ಜ್ಞಾನದೇವರ ಮಹಿಮೆಯನ್ನು ವಿಶದವಾಗಿ ಬರೆದು ಮೂವರು ಪ್ರತ್ಯಕ್ಷ ಬ್ರಹ್ಮ, ವಿಷ್ಣು, ಮಹೇಶ್ವರರ ಮೂರ್ತಿಮಂತ ಅವತಾರವಿದ್ದು ಇವರೇ ಜಗದ್ಗುರುಗಳಿರುವರು. ಇವರಿಗೆ ಪ್ರಾಯಶ್ಚಿತ್ತ ಕಾರಣವಿರುವದಿಲ್ಲೆಂದು ನಿಶ್ಚಯಿಸಿ ಶುದ್ಧೀಪತ್ರವನ್ನು ಬರೆದು ಶ್ರೀನಿವೃತ್ತಿನಾಥನ ಸ್ವಾಧೀನದಲ್ಲಿ ಕೊಟ್ಟರು.

ತೀರ್ಥಯಾತ್ರೆಯು

ಪೈಠಣದ ನಾನೀ ನರರಿಗೆ ತಮ್ಮ ವಿಭೂತಿಮತ್ವದ ತೇಜನನ್ನು ತೋರಿಸಿ ಜ್ಞಾನೇಶ್ವರ ಮಹಾರಾಜರು, ತಮ್ಮ ಅಣ್ಣತಮ್ಮಂದಿರೊಡನೆ ನೇದವನ್ನುಚ್ಚರಿಸುವ ಕೋಣನನ್ನು ಸಂಗಡ ತೆಗೆದುಕೊಂಡು ತೀರ್ಥಯಾತ್ರೆಗೆ ಹೊರಟರು. ಆ ಕೋಣವು ವೇದಘೋಷವನ್ನು ಉಘಡವಾಗಿ ಉಚ್ಚರಿಸುತ್ತ ಅವರ ಸಂಗಡನೇ ತಿರುಗುತ್ತಿತ್ತು. '' ಆಳಿ, ಮುಕ್ತಾಯಿನಲ್ಲಿ ಕೋಣನಿಗೆ ಸಮಾಧಿಯನ್ನು ಕೊಟ್ಟು ಮುಂದೆ ತನ್ನ ಸಂಚಾರಮಾಡುತ್ತ ತಮ್ಮ ಕಾಲುಗಳಿಂದ ಸ್ಪರ್ಶವಾದ ಭೂಭಾಗವನ್ನು ಪವಿತ್ರ ಮಾಡುತ್ತ ನೇವಾಸೀ ಗ್ರಾಮಕ್ಕೆ ಬಂದು ಮುಟ್ಟಿದರು. ಈ ಗ್ರಾಮವು ನಗರ ಜಿಲ್ಲೆಯಲ್ಲಿ ಪ್ರವರಾ ನದಿಯ ದಂಡೆಗೆ ಇರುತ್ತದೆ. ಸಮುದ್ರಮಂಥನ ಸಮಯದಲ್ಲಿ ಹೊರಟ ಅಮೃತ ಪ್ರಾಪ್ತಿಯ ಸಲುವಾಗಿ ದೇವದೈತ್ಯರಲ್ಲಿ ಜಗಳ ಉದ್ಭವಿಸಿತು. ಅಮೃತ ಕಲಶವು ದೈತ್ಯರ ಕೈವಶವಾದ್ದರಿಂದ ದೇವಪಕ್ಷಪಾತಿಯಾದ ವಿಷ್ಣುವು ಮೋಹಿನೀ ರೂಪವನ್ನು ಧರಿಸಿದನು. ಅದೇ ಮೊಹಿನೀರಾಜನ ದೇವಾಲಯವು ನೇವಾಸೀ ಗ್ರಾಮದಲ್ಲಿ ಇರುವದು. ಈ ಪವಿತ್ರ ಪುಣ್ಯದೇವಸ್ಥಾನದಲ್ಲಿ ಜ್ಞಾನೇಶ್ವರರು ಭಗವದ್ಗೀತೆಯಮೇಲೆ ಭಾವಾರ್ಥ ದೀಪಿಕೆಎಂಬ ಟೀಕೆಯನ್ನು ಗೋಡೆಯಮೇಲೆ ನಿತ್ಯ ಬರೆಯುವದನ್ನು ನೇವಾಸಿ ಗ್ರಾಮದ ಕುಲಕರ್ಣಿ ಸಚ್ಚಿದಾನಂದಬಾಬಾ ಎಂಬವರು ಶಕೆ ೧೭೧೬ನೇದರಲ್ಲಿ ಜ್ಞಾನೇಶ್ವರಿಯ ಲೇಖಕರಾದರೆಂದು ಮಹಾರಾಜರೇ ಕಡೆಯ ಅಧ್ಯಾಯದಲ್ಲಿ ಬರೆದಿರುವರು. ಗ್ರಂಥಕರ್ತನು ಶ್ರೀಜ್ಞಾನೇಶ್ವರರ ಚರಣಗಳನ್ನು ಹೃದಯದಲ್ಲಿಟ್ಟು ಯಾವಾಗಲೂ ಚಿಂತಿಸುವನು.

ಜ್ಞಾನೇಶ್ವರಿಯ ಅಧ್ಯಾಯದ

ಅನುಕ್ರಮಣಿಕೆ

ಅಧ್ಯಾಯ	ವಿಷಯಗಳ ಹೆಸರು	ಶ್ಲೋಕ ಸಂಖ್ಯಾ	ಓವಿಗಳ ಸಂಖ್ಯಾ	ಪುಟ ಸಂಖ್ಯಾ
೧	ಅರ್ಜುನ ವಿಷಾದಯೋಗ	೪೭	೨೭೫	೧
೨	ಸಾಂಖ್ಯಯೋಗ	೭೨	೩೭೫	೩೨
೩	ಕರ್ಮಯೋಗ	೪೩	೨೭೬	೭೩
೪	ಬ್ರಹ್ಮಾರ್ಪಣಯೋಗ	೪೨	೨೨೫	೧೦೩
೫	ಸನ್ಯಾಸಯೋಗ	೨೯	೧೪೦	೧೨೯
೬	ಅಭ್ಯಾಸಯೋಗ	೪೭	೪೯೭	೧೫೦
೭	ಜ್ಞಾನ ವಿಜ್ಞಾನಯೋಗ	೩೦	೨೧೦	೨೦೦
೮	ಅಕ್ಷರ ಬ್ರಹ್ಮಯೋಗ	೨೮	೨೭೧	೨೨೪
೯	ರಾಜವಿದ್ಯಾ ರಾಜಗುಹ್ಯಯೋಗ	೩೪	೫೩೫	೨೫೧
		೪೭೨	೨೮೪೪	

॥ ಶ್ರೀ ವಿಠ್ಠಲರುಕ್ಮಿಣಿ ಪ್ರಸನ್ನ ॥



ಜ್ಞಾನೇಶ್ವರೀ

ಶ್ರೀಗಣೇಶಾಯ ನಮಃ

ಮೊದಲನೇ ಅಧ್ಯಾಯವು

[ಓಂಕಾರನೇ ಪರಮಾತ್ಮನಿರುವನೆಂಬ ಭಾವನೆಯಿಂದ ಶ್ರೀ ಜ್ಞಾನೇಶ್ವರ ಮಹಾರಾಜರು ಇಲ್ಲಿ ಮಂಗಲ ಮಾಡುತ್ತಾರೆ.]

ಓಂ ನಮೋ ಜೀ ಆದ್ಯಾ । ವೇದಪ್ರತಿಪಾದ್ಯಾ । ಜಯು ಜಯು ಸ್ವಸಂವೇದ್ಯಾ । ಆತ್ಮರೂಪಾ ॥೧॥
ದೇವಾ ತೂಚಿ ಗಣೇಶು । ಸಕಲಾರ್ಥಮತಿಪ್ರಕಾಶು । ಮ್ಹಣೆ ನಿವೃತ್ತಿದಾಸು । ಅವಧಾರಿಜೋ ಜೀ ॥೨॥
ಹೇ ಶಬ್ದಬ್ರಹ್ಮ ಅಶೇಷ । ತೇಚಿ ಮೂರ್ತಿ ಸುವೇಶ । ತೇಥ ವರ್ಣ ಅವಪು ನಿದೋಷ । ಮಿರವತ ಅಸೇ ॥೩॥
ಸ್ಮೃತಿ ತೇಚಿ ಆವಯವ । ದೇಖಾ ಆಂಗೀಕಭಾವ । ತೇಥ ಲಾವಣ್ಯಾಚೇ ತೇವ । ಅರ್ಥಶೋಭಾ ॥೪॥
ಆಷ್ಟಾದಶ ಪುರಾಣೆ । ತೀಚಿ ಮಣಿಭೂಷಣೆ । ಪದಪದ್ದತಿ ಜೀವನೇ । ಪ್ರಮೇಯ ರತ್ನಾಂಚಿ ॥೫॥
ಪದಬಂಧ ನಾಗರ । ತೇಚಿ ರಂಗಾಥಿಲೇ ಅಂಬರ । ಜೀಥ ಸಾಹಿತ್ಯ ವಾಣೇ ಸಪೂರ । ಉಜಾಳಾಚಿ ॥೬॥
ದೇಖಾ ಕಾವ್ಯನಾಟಕಾ । ಜೇ ನಿರ್ಧಾರಿತಾ ಸಕೌತುಕಾ । ತ್ಯಾಚಿ ರುಣರುಣಿತೀ ಕ್ಷುದ್ರಘಂಟಿಕಾ

ಅರ್ಥ—ಈ ಸರ್ವಕ್ಕೂ ಮೂಲವಾಗಿರುವ, ಮತ್ತು ವೇದಪ್ರತಿಪಾದ್ಯವಾಗಿರುವ, ಓಂಕಾರಸ್ವರೂಪನೇ ನಿನಗೆ ನಮಸ್ಕಾರವಿರಲಿ. ಸ್ವಸಂವೇದ್ಯವೂ, ಸರ್ವವ್ಯಾಪಿಯೂ, ಆದ ಓಂಕಾರನೇ ನಿನಗೆ ಜಯಜಯಕಾರವಿರಲಿ ॥ ೧ ॥ ಸರ್ವಬುದ್ಧಿಪ್ರಕಾಶಕನಾದ ಗಣೇಶನೂ ನೀನಿರುವಿ. ನಿವೃತ್ತಿ ನಾಥರ ಶಿಷ್ಯರು (ಶ್ರೀ ಜ್ಞಾನೇಶ್ವರರು) ಅನ್ನುತ್ತಾರೆ. ಮಹಾ ರಾಜರೇ ಶ್ರವಣಮಾಡಿರಿ ॥ ೨ ॥ ಸ್ವರ ವ್ಯಂಜನ ಇವುಗಳು ಆ ರೂಪದ ಸುಂದರ ಕಾಂತಿಯಿರುತ್ತವೆ. ಆ ಶಬ್ದಮಾತ್ರುಗಳು ಅಂದರೆ ಸಂಪೂರ್ಣ ವೇದವು ಇದೇ ನಿನ್ನ ಉತ್ತಮವಾದ ಗಣೇಶನ ಮೂರ್ತಿ ಇರುತ್ತದೆ ॥ ೩ ॥ ವಿಚಾರಮಾಡಿ ನೋಡಿದರೆ ಮನ್ವಾದಿಕರ ಸ್ಮೃತಿಗಳೇ ಆ ವಿಘ್ನೇಶ್ವರನ ಅವಯವಗಳಾಗಿರುವವು. ಆ ಸ್ಮೃತಿಯೊಳಗಿನ ಅರ್ಥ ಸೌಂದರ್ಯದಿಂದ ಆ ಅವಯವಗಳು ಕೇವಲ ಲಾವಣ್ಯದ ಖಣಿಯೇ ಆಗಿರುವವು ॥ ೪ ॥ ಹದಿನೆಂಟು ಪುರಾಣಗಳು ಇವೇ ಆ ವಿಘ್ನೇಶ್ವರನ ಮೈಮೇಲಿನ ರತ್ನಖಚಿತ ಆಲಂಕಾರಗಳು ಅವರಲ್ಲಿ ಪ್ರತಿಪಾದನ ಮಾಡಿದ ತತ್ವಗಳು ಇವೇ ರತ್ನ ಗಳು. ಛಂದೋಬದ್ಧ ಶಬ್ದಗಳು ಇವೇ ಅವುಗಳ ಕುಂದಣಗಳಿರುತ್ತವೆ ॥ ೫ ॥ ಉತ್ತಮ ಪ್ರಕಾರದ ಶಬ್ದರಚನೆಯೇ ಆ ಗಣಪತಿಯ ಮೈಮೇಲಿನ ಬಣ್ಣವ ವಸ್ತ್ರಗಳಿರುತ್ತವೆ. ಮತ್ತು ಆ ಶಬ್ದರಚನೆಯೊಳಗಿನ ಅಲಂಕಾರಗಳು ಆ ವಸ್ತ್ರದ ಚಕಚಕಿತವಾದ ಎಳೆಗಳಿರುತ್ತವೆ ॥ ೬ ॥ ಕಾವ್ಯ ಮತ್ತು ನಾಟಕಗಳನ್ನು ವಿಚಾರಮಾಡಿ ನೋಡಿದರೆ! ಆ ಕಾವ್ಯ ನಾಟಕ ಗಳು ಆ ವಿಘ್ನೇಶ್ವರನ ಕಾಲೊಳಗಿನ ಸಂಣ ಗೆಜ್ಜೆಗಳಿದ್ದು ಅರ್ಥರೂಪವಾದಂಥ ಶಬ್ದಗಳ ನಾದವು ಝಣಝಣಿಯೆಂದು

ಅರ್ಥಧ್ವನಿ ॥೭॥ ನಾನಾ ಪ್ರಮೇಯಾಂಚೀ ಪರೀ । ನಿಪುಣಪಣೇ ಪಾಹತಾ ಋಸರೀ। ದಿಸತೀ ಉಚಿತ ಪದೇ ಮಾಝಾರೀ। ರತ್ನೇ ಭಲೀ ॥ ೮ ॥ ತೇಥ ವ್ಯಾಸಾದಿಕಾಂಚ್ಯಾ ಮತಿ । ಮೇಖಳಾ ವಿರವತೀ । ಚೋಜಾಳಪಣೇ ಝಳಕತೀ । ಪಲ್ಲವ ಸಡಕಾ ॥೯॥ ದೇಖಾ ಷಡ್‌ದರ್ಶನೆ ಮ್ಹಣಿಪತಿ । ತೇಚ ಭುಜಾಂ-ಚೀ ಆಕೃತೀ । ಮ್ಹಣವೂನಿ ವಿಸಂವಾದೇ ಧರಿತೀ । ಆಯುಧೇ ಹಾತೀ ॥ ೧೦ ॥ ತರೀ ತರ್ಕು ತೋಚಿ ಪರಶು । ನೀತಿಭೇದು ಅಂಕುಶು । ವೇದಾಂತು ತೋ ಮಹಾರಸು । ಮೋದಕು ವಿರವೆ ॥೧೧॥ ಏಕೇ ಹಾತೀ ದಂತು । ಜೋ ಸ್ವಭಾವತಾ ಖಂಡಿತು । ತೋ ಚಾದ್ದಮತ ಸಂಕೇತು । ವಾರ್ತಿಕಾಚಾ ॥೧೨॥ ಮಗ ಸಹಜೇ ಸತ್ಕಾರವಾದು । ತೋ ಪದ್ಮಕರು ವರದು । ಧರ್ಮ ಪ್ರತಿಷ್ಠಾ ತೋ ಸಿದ್ಧು । ಅಭಯ ಹಸ್ತು ॥೧೩॥ ದೇಖಾ ವಿವೇಕವಂತು ಸುವಿಮಳು । ತೋಚಿ ಶುಂಡಾದಂಡು ಸರಳು । ಜೇಥ ಪರಮಾ-ನಂದು ಕೇವಳು । ಮಹಾಸುಖಾಚಾ ॥೧೪॥ ತರೀ ಸಂವಾದು ತೋಚಿ ದಶನು । ಜೋಸವಂತಾ ಶುಭ್ರ ವರ್ಣು । ದೇವೋ ಉನ್ಮೇಷ ಸೂಕ್ಷ್ಮೇಕ್ಷಣು । ವಿಷ್ಣುರಾಜು ॥೧೫॥ ಮಜ ಅವಗ ಮಂಲಿಯಾ ದೋನೀ । ಮೀಮಾಂಸಾ ಶ್ರವಣಸ್ಥಾನೀ । ಬೋಧ ಮದಾಮೃತ ಮುನೀ । ಅಲೀ ಸೇವಿತೀ ॥೧೬॥ ಪ್ರಮೇಯ ಪ್ರವಾಳ ಸುಪ್ರಭ । ದ್ವೈತಾದ್ವೈತ ತೇಜಿ ನಿಕುಂಭ । ಸರಿಸೇ ಪಣೇ ಏಕವಟತ ಇಭ ಮಸ್ತಕಾವರೀ ॥೧೭॥

ನುಡಿಯುತ್ತದೆ ॥ ೬ ॥ ಯಾಕಂದರೆ ಅದರಲ್ಲಿ ಪ್ರತಿಪಾದನ ಮಾಡಿದ ಅನೇಕ ಪ್ರಕಾರದ ತತ್ವಗಳು ಮತ್ತು ಅದರೊಳಗಿನ ಕುಶಲತೆಯನ್ನೂ ಸೂಕ್ಷ್ಮರೀತಿಯಿಂದ ವಿಚಾರಮಾಡಲು ಅಲ್ಲಿ ಆರಿಸಿದ ವಾಕ್ಯಗಳಲ್ಲಿ ಕೆಲವು ಉತ್ತಮ ರತ್ನಗಳೆಂದು ಕಂಡು ಬರುತ್ತವೆ ॥ ೮ ॥ ಇಲ್ಲಿ ವ್ಯಾಸಾದಿಕರ ಬುದ್ಧಿಯು ಇದೇ ಒಂದು (ಆ ಗಣಪತಿಯ) ಟೊಂಕಕ್ಕೆ ಕಟ್ಟಿದ ವಸ್ತ್ರದಂತೆ ಶೋಭಾಯಮಾನವಾಗಿರುತ್ತದೆ. ವ್ಯಾಸಾದಿಕರ ಬುದ್ಧಿಯು ನಿರ್ದೋಷತನವು ಮೇಖಲಾದ ವದರಿನ ತುದಿಗಳಂತೆ ಹೊಳೆಯುತ್ತದೆ ॥ ೯ ॥ ವಿಚಾರಮಾಡಿ ನೋಡಲು ಆರು ಶಾಸ್ತ್ರಗಳು ಅಂತಾ ಯಾವದಕ್ಕೆ ಅನ್ನುತ್ತಾರೋ ಅದೇ ಆ ಗಣಪತಿಯ ಆರು ಹಸ್ತಗಳಿರುತ್ತವೆ. ಅದರೊಳಗಿನ ಭಿನ್ನ ಭಿನ್ನ ಮತಗಳು ಇವುಗಳೇ ವಿಷ್ಣ್ವೀಶ್ವರನ ಕೈಯೊಳಗಿನ ಶಸ್ತ್ರಗಳಿರುತ್ತವೆ ॥ ೧೦ ॥ ಅವುಗಳಲ್ಲಿಯು ತರ್ಕಶಾಸ್ತ್ರವು ಪರಶು, ನ್ಯಾಯಶಾಸ್ತ್ರವು ಅಂಕುಶ, ಮತ್ತು ವೇದಾಂತ ಶಾಸ್ತ್ರವು ಸವಿಯಾದ ರಸಪೂರ್ಣ ಮೋದಕ ದಂತೆ ಶೋಭಿಸುತ್ತದೆ ॥ ೧೧ ॥ ಬೌದ್ಧಮತವು ನಿದರ್ಶನಮಾಡುವಂಥ ಬೌದ್ಧ ವಾರ್ತಿಕಕಾರನು ವ್ರತಿಪಾದನ ಮಾಡಿದಂಥ ಬೌದ್ಧಮತವು ಇದೇ ಒಂದು ಸ್ವಭಾವತಃ ಖಂಡಿತವಾದ ದಂತವು ಅದು ಪಾತಂಜಲ ದರ್ಶನ ರೂಪಿ ಒಂದು ಕೈಯಲ್ಲಿ ಹಿಡಿದಿದ್ದಾನೆ ॥ ೧೨ ॥ ಆ ಮೇಲೆ ಕಲ್ಯಾಣಕರ ವರದಾಯಕವಾದ ಯಾವ ಹಸ್ತವೋ, ಅದು ಸತ್ಕಾರವಾದವು. ಅಂದರೆ ಬ್ರಹ್ಮವಿಷಯಕ ವಾದವಾಗಿರುತ್ತದೆ. ಅದು ಧರ್ಮಸಂಸ್ಥಾಪನೆ ಮಾಡುವಂಥ ಸ್ವಭಾವಸಿದ್ಧವಾದ ಅಭಯಹಸ್ತವಿರುತ್ತದೆ ॥ ೧೩ ॥ ಯಾವಸ್ಥಾನದಲ್ಲಿ ಮಹಾಸುಖದ ವರವಾನಂದವಿರುತ್ತದೆಯೋ, ಅದು ಅತಿ ನಿರ್ಮಲವಾದ ವಿಚಾರನೆಂಬುವದೇ ಸೊಂಡಿಯಾಗಿರುತ್ತದೆ ॥ ೧೪ ॥ ಹಾಗೆಯೇ ಉತ್ತಮವಾದ ಸಂವಾದವು ತರುಣ ಶುಭ್ರವಾದ ಹಲ್ಲಿನಂತೆ ಇದ್ದು ಜ್ಞಾನದೃಷ್ಟಿಯಂದರೆ ಆ ವಿಷ್ಣುರಾಜನ ಸೂಕ್ಷ್ಮವಾದ ನೇತ್ರಗಳೇ ಸರಿ ॥ ೧೫ ॥ ಪೂರ್ವ ಮತ್ತು ಉತ್ತರ ಮೀಮಾಂಸೆಗಳು ನನಗೆ ಕವಿಗಳಂತೆ ತೋರಿದವು ಬೋಧಾಮೃತವು ಗಂಡಸ್ಥಲದಿಂದ ಹೊರಡುವ ಮದವು ಅದನ್ನು ಸೇವನ ಮಾಡುವ ಮುನಿಗಳೇ ಭ್ರಮರಗಳಾಗಿರುತ್ತಾರೆ ॥ ೧೬ ॥ ಮೇಲೆ ಹೇಳಿದ ಶ್ರುತಿ ಸ್ಮೃತ್ಯಾದಿಗಳಲ್ಲಿ ಪ್ರತಿಪಾದನ ಮಾಡಿದ ತತ್ವಗಳು ಇವೇ ಆ ಗಣಪತಿಯ ಮೈಮೇಲಿನ ತೇಜಃಪುಂಜವಾದ ಹವಳಗಳಂತೆ ತೋರುತ್ತವೆ. ಮತ್ತು ದ್ವೈತ, ಅದ್ವೈತ ಸಿದ್ಧಾಂತಗಳು ಇವೇ ಆ ಗಜವದನನ ಮಸ್ತಕದೊಳಗಿನ ಗಂಡಸ್ಥಲಗಳಿದ್ದು ಅವು ಸಮಾನನಾದ ಬಲದಿಂದ ಒಂದೇ ಸಮನಾಗಿ ಶೋಭಿಸುತ್ತವೆ ॥ ೧೭ ॥

ಉಪರಿ ದಶೋಪನಿಷದೇ । ಜಿಯೇ ಉದಾರೇ ಜ್ಞಾನ ಮಕರಂದೇ । ತಿಯೇ ಕುಸುಮೇ ಮುಗುಟೇ ಸುಗಂಧೇ ಶೋಭತೀ ಭಲೀ ॥ ೧೪ ॥ ಅಕಾರ ಚರಣಯುಗುಲ । ಉಕಾರ ಉದರ ವಿಶಾಲ । ಮಕಾರ ಮಹಾಮಂಡಲ । ಮಸ್ತಕಾ ಕಾರೇ ॥ ೧೫ ॥ ಹೇತಿನ್ಹೀ ಏಕವಟಲೇ । ತೇಥ ಶಬ್ದಬ್ರಹ್ಮ ಕವಳಲೇ । ತೇ ಮಿಯಾ ಶ್ರೀಗುರು ಕೃಪಾ ನಮಿಲೇ । ಆದಿ ಬೀಜ ॥ ೨೦ ॥ ಆತಾ ಅಭಿನವ ವಾಗ್ವಿಲಾಸಿನೀ । ಜೇ ಚಾತುರ್ಯಾರ್ಥಕಲಾ ಕಾಮಿನೀ । ತೇ ಶಾರದಾ ವಿಶ್ವಮೋಹಿನೀ । ನಮಿಲೀ ಮಿಯಾ ॥ ೨೧ ॥ ಮಜ ಹೃದಯೀ ಸದ್ಗುರೂ । ಜೇಣೇ ತಾರಿಲೋ ಹಾ ಸಂಸಾರ ಪುರೂ । ಮ್ಹಣೂನಿ ವಿಶೇಷೆ ಆತ್ಯಾದರೂ ವಿನೇಕಾವರೀ ॥ ೨೨ ॥ ಜೈಸೇ ಡೋಳ್ಯಾ ಅಂಜನ ಭೇಟೇ । ತೇ ವೇಳೀ ದೃಷ್ಟೀಸೀ ಫಾಂಟಾ ಫುಟೆ । ಮಗವಾಸ ಪಾಹಿಜೆ ತೇಥ ಪ್ರಗಟೇ । ಮಹಾನಿಧೀ ॥ ೨೩ ॥ ಕಾ ಚಿಂತಾಮಣೀ ಆಲಿ ಯಾ ಹಾತೀ । ಸದಾ ವಿಜಯವೃತ್ತೀ ಮನೋರಥೀ । ಶೈಸಾ ಮೀ ಪೂರ್ಣ ಕಾಮು ಶ್ರೀ ನಿವೃತ್ತಿ । ಜ್ಞಾನದೇವೋ ಮ್ಹಣೆ ॥ ೨೪ ॥ ಮ್ಹಣೋನಿ ಜಾಣತೇನೆ ಗುರೂ ಭಜಿಜೇ । ತೇಣೇ ಕೃತಕಾರ್ಯ ಹೋ ಈ ಜೇ । ಜೈಸೆ ಮೂಳ ಸಿಂಚನೇ ಸಹಜೇ । ಶಾಖಾ ಪಲ್ಲವ ಸಂತೋಷತೀ ॥ ೨೫ ॥ ಕಾ ತೀರ್ಥೆ ಜಿಯೇ ತ್ರಿಭುವನೀ । ತಿಯೇ ಘಡತೀ ಸಮುದ್ರಾವ ಗಾಹನೀ । ನಾತರೀ ಅಮೃತ ರಸಾಸ್ವಾದನೀ । ರಸ ಸಕಳ ॥ ೨೬ ॥

ಈ ಗಂಡಸ್ಥಲದ ಮುಕುಟದ ಮೇಲೆ ಶೋಭಿಸುವ ಸುಗಂಧಿತವಾದ ಪುಷ್ಪಗಳೆಂದರೆ ಜ್ಞಾನಮಕರಂದದಿಂದ ಪರಿಪೂರ್ಣವಾದ ದಶೋಪನಿಷತ್ತುಗಳು ॥ ೧೪ ॥ ಓಂಕಾರದಲ್ಲಿಯ ಅಕಾರವು ಎರಡೂ ಕಾಲುಗಳಂತೆಯೂ ಉಕಾರವು ವಿಶಾಲವಾದ ಉದರದಂತೆಯೂ ಮತ್ತು ಮಕಾರವು ಸರ್ವ ಅವಯವಗಳಲ್ಲಿ ಶ್ರೇಷ್ಠವಾದ ಮಸ್ತಕ ದಂತೆಯೂ ಇರುತ್ತವೆ ॥ ೧೫ ॥ ಅಕಾರ ಉಕಾರ ಮಕಾರಗಳು ಯಾವ ಕಾಲಕ್ಕೆ ಬಂದಾಗಿ ಕೂಡಿದವೋ ಆಗ್ಗೆ ಅವರಲ್ಲಿ ಶಬ್ದಬ್ರಹ್ಮವು ಕೂಡಿ ಓಂಕಾರ ರೂಪವಾಯಿತು. ಆ ಮೂಲ ಬೀಜಕ್ಕೆ ನಾನು ಶ್ರೀಗುರು ನಿವೃತ್ತಿ ನಾಥರ ಕೃಪೆಯಿಂದ ನಮಸ್ಕಾರ ಮಾಡುತ್ತೇನೆ. ॥ ೨೦ ॥ ಇನ್ನು ಅಪೂರ್ವವಾದ ವಾಣಿಯಲ್ಲಿ ವಿಲಾಸಮಾಡುವಂಥ ಮತ್ತು ಚಾತುರ್ಯ, ಅರ್ಥ, ಕಲಾ, ಇವುಗಳಿಗೆ ಅಧಿದೇವತೆಯಾಗಿರುವ ಮತ್ತು ವಿಶ್ವವನ್ನು ಮೋಹಿಸಿ ಬಿಡುವಂಥ ಸರಸ್ವತಿಗೆ ನಾನು ನಮಸ್ಕಾರ ಮಾಡುತ್ತೇನೆ. ॥ ೨೧ ॥ ನನ್ನ ಹೃದಯದಲ್ಲಿ ವಾಸಮಾಡುವಂಥ ಸದ್ಗುರುಗಳ ಕೃಪೆಯಿಂದ ಸಂಸಾರವೆಂಬ ಮಹಾಪೂರದಿಂದ ನಾನು ಪಾರಾದೆನು. ಆದುದರಿಂದ ವಿಚಾರದ ಮೇಲೆ ನನ್ನ ಪ್ರೀತಿಯು ಬಹಳೇ ಆಗಿರುವದು ॥ ೨೨ ॥ ಯಾವ ಪ್ರಕಾರ ಕಣ್ಣಿನಲ್ಲಿ ದಿವ್ಯಾಂಜನವನ್ನು ಹಾಕಲಾಗಿ ಅವನ ದೃಷ್ಟಿಗೆ ಭೂಮಿಗತ ದ್ರವ್ಯದ ರಾಶಿಯು ಕಾಣಿಸುತ್ತದೆ ॥ ೨೩ ॥ ಅಥವಾ ಚಿಂತಾಮಣಿಯು ಹಸ್ತಗತ ವಾದಮೇಲೆ ಯಾವ ಪ್ರಕಾರ ಮನಸಿನಲ್ಲಿಯ ಅಪೇಕ್ಷೆಗಳು ಸರ್ವಕಾಲದಲ್ಲಿಯೂ ಪೂರ್ಣವಾಗುತ್ತವೆ ಆ ಪ್ರಕಾರ ಶ್ರೀ ಜ್ಞಾನದೇವರು ಅನ್ನುತ್ತಾರೆ. ಶ್ರೀಗುರು ನಿವೃತ್ತಿನಾಥರ ಕೃಪೆಯಿಂದ ನನ್ನ ಯಾವತ್ತೂ ಮನೋರಥಗಳು ಸಫಲ ವಾಗುತ್ತವೆ ॥ ೨೪ ॥ ಆದುದರಿಂದ ಯಾರು ಸುಜ್ಞರಿರುತ್ತಾರೋ ಅವರು ಶ್ರೀಗುರುಗಳ ಸೇವೆಮಾಡಿ ಧನ್ಯರಾಗಬೇಕು. ಹ್ಯಾಗಂದರೆ ಯಾವ ಪ್ರಕಾರ ಗಿಡದ ಬೊಡ್ಡಿಗೆ ನೀರು ಹಾಕಿದರೆ ಅದರ ಟೊಂಗೆಗಳು ಮತ್ತು ಎಲೆಗಳು ಕಳೆ ಉಳ್ಳವು ಗಳಾಗುತ್ತವೆಯೋ ॥ ೨೫ ॥ ಅಥವಾ ಸ್ವರ್ಗ, ಮೃತ್ಯು, ಪಾತಾಳ ಈ ಮೂರು ಲೋಕಗಳಲ್ಲಿ ಎಷ್ಟು ತೀರ್ಥಗ ಳಿರುತ್ತವೆಯೋ ಅವೆಲ್ಲವುಗಳಲ್ಲಿ ಸ್ನಾನಮಾಡಿದರೆ ಬರುವ ಪುಣ್ಯವು ಒಂದೇ ಸಮುದ್ರಾವಗಾಹನ ಮಾಡಿದರೆ ಬರುವದು ಅಥವಾ ಅಮೃತರಸ ಸೇವಿಸುವದರಿಂದ ಎಲ್ಲ ರಸಗಳ ಸೇವನೆ ಮಾಡಿದಂತೆ ಆಗುತ್ತದೆ ॥ ೨೬ ॥

ಕೈಸಾ ಪುಢತ ಪುಢತೀ ತೋಟಿ । ಮಿಯಾ ಅಭಿವಂದಿಲಾ ಶ್ರೀ ಗುರುಚಿ । ಜೋ ಅಭಿಲಾಷಿತ ಮನೋರಥಚಿ । ಪುರವಿತಾ ತೋ ॥ ೨೭ ॥ ಆತಾ ಆವಧಾರಾ ಕಥಾ ಗಹನ । ಜೇ ಸಕಳಾ ಕೌತುಕಾ ಜನ್ಮಸ್ಥಾನ । ಕೀ ಅಭಿನವ ಉದ್ಯಾನ । ವಿವೇಕ ತರೂಚೆ ॥ ೨೮ ॥ ನಾತರೀ ಸರ್ವ ಸುಖಾಚಿ ಆದಿ । ಜೇ ಪ್ರಮೇಯ ಮಹಾನಿಧಿ । ನಾನಾ ನವರಸ ಸುಧಾಬ್ಧಿ । ಪರಿ ಪೂರ್ಣ ಹೇ ॥ ೨೯ ॥ ಕೀ ಪರಮ ಧಾಮ ಪ್ರಕಟ । ಸರ್ವ ವಿದ್ಯಾಚೆ ಮೂಳಪೀಠ । ಶಾಸ್ತ್ರಾ ಚಾತಾ ವಿಶಿಷ್ಟ । ಅಶೇಷಾಚೆ ॥ ೩೦ ॥ ನಾತರೀ ಸಕಳ ಧರ್ಮಾಚೆ ಮಾಹೇರ । ಸಜ್ಜನಾಚೆ ಜಿವ್ಹಾರ । ಲಾವಣ್ಯ ರತ್ನಭಾಂಡಾರ । ಶಾರದೇಚೆ ॥ ೩೧ ॥ ನಾನಾ ಕಥಾ ರೂಪೇ ಭಾರತೀ । ಪ್ರಕಟಲೀ ಅಸೇ ತ್ರಿಜಗತೀ । ಅವಿಷ್ಕರೋನಿ ಮಹಾಮತೀ । ವ್ಯಾಸಾಚೀ ಯೇ ॥ ೩೨ ॥ ಮ್ಹಣೋನಿ ಹಾಕಾವ್ಯಾ ರಾವೋ । ಗ್ರಂಥ ಗುರೂ ನತೀಚಾ ಠಾವೋ । ಏಥೂನಿ ರಸಾರ್ಣವಾಲಾ ಆವೋ । ರಸಾಳಪಣಾಚಾ ॥ ೩೩ ॥ ತೇವಿಚೆ ಅಇಕಾ ಆಣೀ ಕ ಏಕ । ಏಥೂನಿ ಶಬ್ದ ಶ್ರೀ ಸಚ್ಛಾಸ್ತ್ರಿಕ । ಆಣೀ ಮಹಾಬೋಧೀ ಕೋವಳೀಕ । ದುಣಾವಲೀ ॥ ೩೪ ॥ ಏಥ ಚಾತುರ್ಯ ಶಾಹಣೇ ಝಾಲೇ । ಪ್ರಮೇಯ ರುಚೀ ಸಅಲೇ । ಆಣಿ ಸೌಭಾಗ್ಯ ಪೋಸಲೆ । ಸುಖಾಚೆ ಏಥ ॥ ೩೫ ॥ ಮಾಧುರ್ಯಿಂ ಮಧುರತಾ । ಶೃಂಗಾರೀ ಸುರೇಖತಾ । ರೂಢಪಣ ಉಚಿತಾ । ದಿಸಲೇ ಭಲೇ ॥೩೬॥ ಏಥ ಕಳಾವಿದ ಪಣ ಕಳಾ । ಪುಣ್ಯಾಸಿ ಪ್ರಕಾಪು ಆಗಳಾ । ಮ್ಹಣವೂನಿ ಜನವೇಜಯಾಚೆ ಅವ ಲೀಳಾ । ದೋಷಹರಲೆ ॥ ೩೭ ॥

ಆ ಪ್ರಕಾರ ಇಚ್ಛಿತ ಮನೋರಥವನ್ನು ಪೂರ್ಣಮಾಡುವ ಯಾವ ಶ್ರೀಗುರುಗಳು ಅವರಿಗೇನೇ ನಾನು ಪುನಃ ಪುನಃ ನಮಸ್ಕಾರ ಮಾಡುತ್ತೇನೆ ॥ ೨೭ ॥ ಇನ್ನು ಮುಂದೆ ಯಾವತ್ತೂ ಆನಂದಗಳನ್ನು ಉಂಟುಮಾಡುವಂಥ ಅಥವಾ ವಿಚಾರ ರೂಪ ವೃಕ್ಷದ ಸುಂದರವಾದ ತೋಟವೇ ಆದಂಥ ಗಹನವಾದ ಕಥೆಯನ್ನು ಶ್ರವಣಮಾಡಿರಿ ॥೨೮॥ ಆಥವಾ ಆ ಕಥೆಯು ಯಾವತ್ತು ಸುಖಗಳಿಗೆ ಕಾರಣವಾದ ಮತ್ತು ಸರ್ವಸಿದ್ಧಾಂತಗಳ ನಿಧಿಯಾದ ನವರಸದಿಂದ ತುಂಬಿದ ಅಮೃತಸಿಂಧುವೇ ಆಗಿರುತ್ತದೆ ॥೨೯॥ ಅದು ಮೋಕ್ಷದ ಪ್ರತಿಬಂಧರಹಿತ ಸ್ಥಾನವು ಅಥವಾ ಸರ್ವವಿದ್ಯಗಳ ಆದಿಸ್ಥಾನವು ಸರ್ವಶಾಸ್ತ್ರಗಳಿಗೆ ಆಶ್ರಯವೇ ಆಗಿರುತ್ತದೆ ॥ ೩೦ ॥ ಇದು ಎಲ್ಲ ಧರ್ಮಗಳ ತೌರಮನೆಯು ಅಥವಾ ಸಜ್ಜನರ ಹೃದಯವು ಅಥವಾ ಸರಸ್ವತಿಯ ಲಾವಣ್ಯರೂಪದ ರತ್ನಗಳ ನಿಧಿಯೇ ಆಗಿರುತ್ತದೆ ॥ ೩೧ ॥ ಅಥವಾ ಶ್ರೀ ವ್ಯಾಸದೇವರ ಮಹಾಮತಿಯಲ್ಲಿ ಪ್ರವೇಶಮಾಡಿ ಭಾರತದಲ್ಲಿ ಕಥಾರೂಪದಿಂದ ಈ ಮೂರೂ ಲೋಕಗಳಲ್ಲಿ ಪ್ರಕಟವಾಗಿರುತ್ತದೆ ॥ ೩೨ ॥ ಆದುದರಿಂದ ಈ ಕಥೆಯು ಎಲ್ಲ ಕಾವ್ಯಗಳಲ್ಲಿ ರಾಜನೆನಿಸಿದ್ದು ಎಲ್ಲ ಗ್ರಂಥಗಳಲ್ಲಿ ಶ್ರೇಷ್ಠವಾದ ಸ್ಥಾನವಾಗಿರುತ್ತದೆ. ಇದುಂದಲೇ ಶೃಂಗಾರಾದಿ ನವರಸಗಳಿಗೆ ರಸಗಾಂಭೀರ್ಯದ ಶೋಭೆಯು ಉಂಟಾಗಿರುತ್ತದೆ ॥೩೩॥ ಹಾಗೆಯೇ ಇನ್ನೊಂದು ಮಾತು ನೆನಪಿನಲ್ಲಿ ಇಡತಕ್ಕದ್ದು ಏನಂದರೆ ಈ ಕಥೆಯಿಂದಲೇ ಶಬ್ದರೂಪ ಲಕ್ಷ್ಮಿಗೆ ಸತ್‌ಶಾಸ್ತ್ರೀಯ ರೂಪವುಂಟಾಗಿ ಆತ್ಮ ಬೋಧನೆಗೆ ವಿಶೇಷ ಶೋಭೆಯುಂಟಾಗಿದೆ ॥ ೩೪ ॥ ಈ ಕಥೆಯಿಂದಲೇ ಚಾತುರ್ಯವು ಜಾಣತನವನ್ನು ಹೊಂದಿತು ತತ್ವಾರ್ಥಕ್ಕೆ ವಿಶೇಷವಾಗಿ ರಸ ಉತ್ಪನ್ನವಾಯಿತು ಈ ಕಥೆಯಿಂದಲೇ ಸುಖದ ಸೌಭಾಗ್ಯವು ಬೆಳೆಯಿತು ॥ ೩೫ ॥ ಮಾಧುರ್ಯಕ್ಕೆ ಮಧುರತೆಯೂ ಶೃಂಗಾರಕ್ಕೆ ಸುರಸವೂ ಮತ್ತು ಯೋಗ್ಯವಸ್ತುವಿಗೆ ಶ್ರೇಷ್ಠತೆಯೂ ಉತ್ಪನ್ನವಾಗಿ ಅವೆಲ್ಲವೂ ಉತ್ತಮವಾಗಿ ಶೋಭಿಸಹತ್ತಿದವು ॥ ೩೬ ॥ ಈ ಕಥೆಯಿಂದಲೇ ಕಲೆಗಳಿಗೆ ಕೌಶಲ್ಯವು ಪ್ರಾಪ್ತವಾಯಿತು. ಮತ್ತು ಪುಣ್ಯದ ಮಹಾತ್ಮ್ಯವು ಬಹಳೇ ವೃದ್ಧಿಂಗತವಾಯಿತು ಆದ್ದರಿಂದಲೇ (ಹದಿನೆಂಟು ದಿವಸಗಳಲ್ಲಿ ಭಾರತದ ಹದಿನೆಂಟು ಪರ್ವಗಳನ್ನು ಕೇಳಿದ್ದರಿಂದ) ಜನಮೇಜಯನ ಬ್ರಹ್ಮಹತ್ಯೆಯ ದೋಷವು ಸಹಜವಾಗಿ ನಾಶವಾಯಿತು ॥೩೭॥

ಅಣಿಪಾಹತಾ ನಾನೇಕ । ರಂಗೀ ಸುರಂಗ ತೇಚೀ ಅಗಳಿಕೆ । ಗುಣಾ ಸಗುಜ ಪಣಾಚೆಬಿಳ । ಬಹುವಸ ಏಥ ॥ ೩೮॥ ಭಾನುಚೇನಿ ತೇಜೆ ಧವಳಲೇ । ಜೈಸೇ ತ್ರೈಲೋಕ್ಯ ದಿಸೆ ಉಜಳಲೇ । ತೈಸೇ ವ್ಯಾಸವತಿ ಕವಳಲೇ । ಮಿರವೇ ವಿಶ್ವ ॥ ೩೯ ॥ ಕಾಸುಷ್ಟೇತ್ರೀ ಬೀಜ ಘಾತಲೇ । ತೇ ಅಪುಲಿಯಾ ಪರೀ ವಿಸ್ತಾರಲೇ । ತೈಸೇ ಭಾರತೀ ಸುರವಾಡಲೇ । ಅರ್ಥ ಜಾತ ॥ ೪೦ ॥ ನಾತರೀ ನಗರಾತರೀ ವಸಿಜೆ । ತರೀ ನಾಗರಾಚಿ ಹೋಈಜೆ । ತೈಸೆ ವ್ಯಾಸೋಕ್ತ ತೇಜೇ । ಧವಳತ ಸಕಲ ॥ ೪೧॥ ಈ ಪ್ರಥಮ ವಯ ಸಾಕಾಳೇ । ಲಾವಣ್ಯಾಚೀ ನವ್ಹಾಳೇ । ಪ್ರಕಟೇ ಜೈಸೀ ಅಗಳೀ । ಅಂಗನಾಅಂಗೀ ॥ ೪೨ ॥ ನಾತರೀ ಉದ್ಯಾನೀ ಮಾಧವೀ ಫುಡೆ । ತೇಥ ವನಶೋಭೇಚೀ ಖಾಣೇ ಉಘಡೆ । ಆದಿಲಾಪಾಸೋನಿ ಅಪಾಡೆ । ಜಿಯಾಪರೀ ॥ ೪೩ ॥ ನಾನಾ ಘನಿಭೂತ ಸುವರ್ಣ । ಜೈಸೇ ನ್ಯಾಹಾಳಿತಾ ಸಾಧಾರಣ । ಮಗ ಅಳಂಕಾರೀ ಬರವೇ ಪಣ । ನಿವಾಡು ದಾವೀ ॥ ೪೪ ॥ ತೈಸೆ ವ್ಯಾಸೋಕ್ತ ಅಳಂಕಾರೀಲೇ । ಅವಡೇ ತೇ ಬರವೇಪಣ ಪಾತಲೆ । ತೇ ಜಾಣೋನಿ ಕಾಯ ಆಶ್ರಯಿಲೇ । ಇತಿಹಾಸೀ ॥ ೪೫ ॥ ನಾನಾ ಪುರತಿಯೇ ಪ್ರತಿಷ್ಠೇಲಾಗಿ ಸಾನೀವ ಧರೂನಿ ಆಂಗೀ । ಪುರಾಣೇ ಆಖ್ಯಾನರೂಪೇ ಜಗೀ । ಭಾರತಾ ಆಲೀ ॥ ೪೬॥ ಮ್ಹಣವೂನಿ ಮಹಾ ಭಾರತೀ ನಾಹೀ । ತೇ ನೋಹೇಚಿ ಲೋಕತಿಹೀ । ಯೇಣೇ ಕಾರಣೇ ಮ್ಹಣಿಸೇ ಪಾಹೀ । ವ್ಯಾಸೋಚ್ಛಿಷ್ಟ ಜಗತ್ರಯ ॥ ೪೭ ॥ ಐಸೀ ಜಗೀ ಸುರಸ ಕಥಾ । ಜೇ ಜನ್ಮಭೂಮಿ ಪರಮಾರ್ಥ । ಮುನಿಸಾಂಗೇ ನೃಪನಾಥಾ । ಜನಮೇಜಯಾ ॥ ೪೮ ॥

ಮತ್ತು ಒಂದು ಕ್ಷಣ ನೋಡಲು ಶೃಂಗಾರಾದಿ ರಸಗಳಿಗೆ ವಿಶೇಷವಾಗಿ ಸೋಪಕತೆಯು ಮತ್ತು ಗುಣಗಳಿಗೆ ಒಳ್ಳೇ ತನದ ಕಾಂತಿಯೂ ಈ ಕಥೆಯಿಂದಲೇ ಉತ್ಪನ್ನವಾಯಿತು ॥ ೩೮ ॥ ಯಾವ ಪ್ರಕಾರ ಸೂರ್ಯೋದಯವಾದ ಕೂಡ್ಲೆ ಮೂರು ಲೋಕಗಳಲ್ಲಿಯೂ ಪ್ರಕಾಶ ವುಂಟಾಗುತ್ತದೆ ಆಪ್ರಕಾರ ಶ್ರೀ ವ್ಯಾಸರ ಬುದ್ಧಿಯಿಂದ ಈ ಕಥೆಯು ಹೊರಟಿದ್ದರಿಂದ ಎಲ್ಲ ಜಗತ್ತಿಗೂ ಇದರ ಪ್ರಕಾಶಬಿದ್ದು ಅದು ಬಹಳ ಶೋಭಾಯಮಾನವಾಗಿ ತೋರಿತು ॥ ೩೯ ॥ ಅಥವಾ ಉತ್ತಮವಾದ ಹೊಲದಲ್ಲಿ ಬೀಜವನ್ನು ಬಿತ್ತಲಾಗಿ ಯಾವ ಪ್ರಕಾರ ಸಹಜವಾಗಿ ಅದರ ವಿಸ್ತಾರವಾಗುತ್ತದೆ. ಹಾಗೆ ಈ ಭಾರತದಲ್ಲಿ ಎಲ್ಲ ವಿಷಯಗಳು ಶೋಭಿಸುತ್ತವೆ ॥ ೪೦ ॥ ಅಥವಾ ಶಹರದಲ್ಲಿ ಇರುವದರಿಂದ ಮನುಷ್ಯನು ಬುದ್ಧಿವಂತನಾಗುವಂತೆ ಶ್ರೀ ವ್ಯಾಸರ ವಾಣಿಯ ತೇಜದಿಂದ ಎಲ್ಲ ಜಗವು ಸ್ವಚ್ಛ (ಜ್ಞಾನಮಯ) ವಾಯಿತು ॥ ೪೧ ॥ ಹಾಗೆಯೇ ತಾರುಣ್ಯಾವಸ್ಥೆಯಲ್ಲಿ ಸೌಂದರ್ಯದ ಶೋಭೆಯು ಸ್ತ್ರೀಯರಲ್ಲಿ ಯಾವ ಪ್ರಕಾರಾ ವಿಶೇಷವಾಗಿ ಕಂಡು ಬರುತ್ತದೆ. ಮತ್ತು ವಸಂತಋತುವು ಬರಲಾಗಿ ಸಂಣ ದೊಡ್ಡ ಎಲ್ಲ ವೃಕ್ಷಗಳು ಪ್ರಫುಲ್ಲಿತವಾಗಿ ವನಶ್ರೀಯ ಶೋಭೆಯು ಹ್ಯಾಗೆ ಉಂಟಾಗುತ್ತದೆ ॥ ೪೨ ॥ ಅಥವಾ ಬಂಗಾರದ ಗಟ್ಟಿಗಳನ್ನು ನೋಡಿದರೆ ಸಾಧಾರಣವಾಗಿ ಕಾಣಿಸುತ್ತವೆ. ಆದರೆ ಅವುಗಳ ಅಲಂಕಾರಗಳನ್ನು ಮಾಡಿದರೆ ಅವುಗಳ ಶೋಭೆಯು ವಿಶೇಷ ಸುಂದರವಾಗಿ ಬೇರೆಯೇ ಕಾಣಿಸುತ್ತದೆ ॥ ೪೪ ॥ ಶ್ರೀ ವ್ಯಾಸರು ಅಲಂಕರಿಸಿದ ಯಾವದೇ ಕಥೆಗೆ ಪವಿತ್ರತೆಯು ಉತ್ಪನ್ನವಾಯಿತು. ಎಂಬದನ್ನು ತಿಳಿದುಕೊಂಡೇ ಇತಿಹಾಸಕಾರರು ತಾವಾಗಿಯೇ ಆ ಕಥೆಯನ್ನು ಆಶ್ರಯಿಸಿದರು ॥ ೪೫ ॥ ಅಥವಾ ಜಗತ್ತಿನಲ್ಲಿ ಪೂರ್ಣ ಪ್ರತಿಷ್ಠೆಯು ದೊರಿಯುವದೆಂದು ನನ್ನುತೆಯಿಂದ ಎಲ್ಲ ಪುರಾಣಗಳು ಆಖ್ಯಾನ ರೂಪದಿಂದ ಭಾರತದಲ್ಲಿ ಬಂದು ಶೇರಿದವು ॥ ೪೬ ॥ ಆದುದರಿಂದ ಭಾರತದಲ್ಲಿ ಯಾವ ಕಥೆಯು ಇಲ್ಲವೋ ಅದು ಮೂರು ಲೋಕಗಳಲ್ಲಿಯೂ ಇರುವದಿಲ್ಲ. ಈ ಕಾರಣದ ದೆಸೆಯಿಂದ ಜಗತ್ತಿನಲ್ಲಿ ಯಾವ ಕಥೆಗಳು ಇರುತ್ತವೆ. ಅವು ವ್ಯಾಸೋಚ್ಛಿಷ್ಟವೆಂದು ಅನ್ನುತ್ತಾರೆ ॥ ೪೭ ॥ ಸರ್ವ ಜಗತ್ತಿನಲ್ಲಿ ಅತಿಶಯ ಮಧುರ ಪಾರಮಾರ್ಥದ ಉತ್ಪತ್ತಿಯ ಸ್ಥಾನವಾದ ಈ ಕಥೆಯನ್ನು ವೈಶಂಪಾಯನರು ಜನಮೇಜಯರಾಯನಿಗೆ ಹೇಳಿದರು ॥ ೪೮ ॥

ಜೇ ಅದ್ವಿತೀಯ ಉತ್ತಮ । ಪವಿತ್ರೈಕ ನಿರುಪಮ । ಪರಮ ಮಂಗಲ ಧಾಮ । ಅವಧಾರಿಜೋ ॥ ೪೯ ॥ ಅತಾ ಭಾರತ ಕಮಳ ಪರಾಗು । ಗೀತಾಖ್ಯ ಪ್ರಸಂಗು । ಜೋ ಸಂವಾದಲಾ ಶ್ರೀರಂಗು । ಅರ್ಜುನೇಸಿ ॥ ೫೦ ॥ ನಾತರೀ ಶಬ್ದಬ್ರಹ್ಮಾಬ್ಧಿ । ಮಥಿಯಲಾ ವ್ಯಾಸಬುದ್ಧೀ । ನವಡಿಲೇ ನಿರವಧಿ । ನವನೀತ ಹೇ ॥ ೫೧ ॥ ಮಗಜ್ಞಾನಾಗ್ನಿ ಸಂಪರ್ಕೇ । ಕಡಸಿಲೇನಿ ವಿವೇಕೇ । ಪದ ಅಲೇ ಪರಿಪಾಕೇ । ಅನೋದಾಸೀ ॥ ೫೨ ॥ ಜೇ ಅಪೇಕ್ಷಿಜೇ ವಿರಕ್ತೀ । ಸದಾ ಅನುಭವಿಜೇ ಸಂತೀ । ಸೋಹಂಭಾನೇ ಪಾರಾಂಗತೀ । ರವಿಜೇ ಜೇಥ ॥ ೫೩ ॥ ಜೇ ಆಕರ್ಣಿ ಜೇ ಭಕ್ತೀ । ಜೇ ಆದಿವಂದ್ಯ ತ್ರಿಜಗತೀ । ಜೇ ಭೀಷ್ಮ ಪರ್ವ ಸಂಗತೀ । ಮ್ಹಣಿತಲೀ ಕಥಾ ॥ ೫೪ ॥ ಜೇ ಭಗವದ್ಗೀತಾ ಮ್ಹಣಿಜೇ । ಜೇ ಬ್ರಹ್ಮೇಶಾನೀ ಪ್ರಶಂಸಿಜೇ । ಜೇ ಸನಕಾದಿಕೀ ಸೇವಿಜೆ । ಅದರೇಸೀ ॥ ೫೫ ॥ ಜೈಸೇ ಶಾರದಿಯೇಚೇ ಚಂದ್ರಕಳೇ । ಮಾಜೀ ಅಮೃತಕಣ ಕೋವಳೇ । ತೇ ವೇಂಚಿತೀ ಮನೇ ಮವಾಳೇ । ಚಕೋರ ತಲಗೇ ॥ ೫೬ ॥ ತಿಯಾಪರೀ ಶ್ರೋತಾ । ಅನುಭವಾವೀ ಹೇ ಕಥಾ । ಅತಿ ಹಳುವಾರ ಪಣಚೆತ್ತಾ । ಅಣುನಿಯಾ ॥ ೫೭ ॥ ಹೇ ಶಬ್ದೀವಿಣ ಸಂವಾದಿಜೇ । ಇಂದ್ರಿಯಾನೇಣತಾ ಭೋಗಿಜೇ । ಬೋಲಾ ಆದಿ ರೆಗೋಂಬಿಜೇ । ಪ್ರನೆಯೇಯಾಸೀ ॥ ೫೮ ॥

ಯಾವದು ಅದ್ವಿತೀಯ ಉತ್ತಮ ಪಾವನ ಮಾಡುವಂಥ ಅನುಪಮೇಯವಾದದ್ದೂ ಮತ್ತು ಮೋಕ್ಷದ ತವರ ಮನೆಯು ಆಗಿರುತ್ತದೆ. ಅಂಥ ಕಥೆಯನ್ನು ಕೇಳಿರಿ ॥ ೪೯ ॥ ಇನ್ನು ಭಾರತ ಇದೇ ಒಂದು ಕಮಲ ಪುಷ್ಪವು ಮತ್ತು ಭಗವಂತನು ಸ್ವತಃ ಅರ್ಜುನನಿಗೆ ಹೇಳಿದ ಗೀತಾ ವಿಷಯವು ಇದೇ ಅದರಲ್ಲಿಯ ಪುಷ್ಪ ರೇಣು ಇರುತ್ತದೆ ॥ ೫೦ ॥ ಅಥವಾ ಶ್ರೀ ವ್ಯಾಸರು ವೇದರೂಪ ಸಮುದ್ರವನ್ನು ಬುದ್ಧಿರೂಪ ಕಡಗೋಲಿನಿಂದ ಕಡೆದು ಅದರಲ್ಲಿ ಗೀತಾರೂಪ ಅನುಪಮೇಯವಾದ ಬೆಣ್ಣೆಯನ್ನು ತೆಗೆದರು ॥ ೫೧ ॥ ಅದಕ್ಕೆ ಜ್ಞಾನರೂಪ ಅಗ್ನಿಯ ಕಾವು ಕೊಟ್ಟು ವಿಚಾರರೂಪ ಉಕ್ಕು ಬಂದ ಮೇಲೆ ಭಗವದ್ಗೀತಾ ಎಂಬ ಪದ್ಯರೂಪ ಸುವಾಸಿಕ ತುಪ್ಪವಾಯಿತು. । ೫೨ ॥ ವೈರಾಗ್ಯ ಉಳ್ಳವರು ಯಾವ ಗೀತಾರೂಪ ತುಪ್ಪವ ಅಪೇಕ್ಷೆ ಮಾಡುತ್ತಾರೆ. ಸಂತರು ಅದನ್ನು ಯಾವಾಗಲೂ ಅನುಭವಿಸುತ್ತಾರೋ, (ಸೇವನ ಮಾಡುತ್ತಾರೆ) ಯಾವ ಸ್ಥಾನದಲ್ಲಿ ಬ್ರಹ್ಮಾತ್ಮೈಕ್ಯಭಾವದಿಂದ ನಿಷ್ಣಾತರಾದ ಬ್ರಹ್ಮನಿಷ್ಠರು ಆನಂದ ಹೊಂದುತ್ತಾರೋ, ॥ ೫೩ ॥ ಆ ಗೀತಾಖ್ಯವನ್ನು ಭಕ್ತರು ಶ್ರವಣ ಮಾಡಲಿಕ್ಕೆ ಯೋಗ್ಯವಾಗಿರುವದು ಮತ್ತು ಅದು ಮೂರು ಲೋಕಗಳಲ್ಲಿಯೂ ಪರಮಪೂಜ್ಯ ವಾಗಿರುವದು. ಆ ಗೀತೆಯನ್ನು ಭೀಷ್ಮಪರ್ವದಲ್ಲಿ ಪ್ರಸಂಗಾನುಸಾರವಾಗಿ ಹೇಳಿರುತ್ತದೆ. ॥ ೫೪ ॥ ಯಾವದಕ್ಕೆ ಭಗವದ್ಗೀತೆಯೆಂದೆನ್ನುತ್ತಾರೋ, ಆ ಗೀತಾಖ್ಯವನ್ನು ಬ್ರಹ್ಮ ಮತ್ತು ಶಂಕರನು ಸ್ತವನ ಮಾಡುವರೋ ಅದನ್ನು ಸನಕಾದಿಕರು ಅತಿ ಆದರದಿಂದ ಸೇವನ ಮಾಡುತ್ತಾರೆ. ॥ ೫೫ ॥ ಯಾವ ಪ್ರಕಾರಾ ಶರದ್ಋತುವಿನಲ್ಲಿ ಪೌರ್ಣಿಮೆಯ ಬೆಳದಿಂಗಳದ ಅತಿಸೂಕ್ಷ್ಮವಾದ ಅಮೃತ ಕಣಗಳನ್ನು ಚಕೋರ ಪಕ್ಷಿಯ ಮರಿಗಳು ಆನಂದಯುಕ್ತವಾಗಿ ಬಹು ಕುಶಲತೆಯಿಂದ ಪ್ರಾಶನ ಮಾಡುತ್ತವೆ ॥ ೫೬ ॥ ಅದೇ ಪ್ರಕಾರಾ ಶ್ರೋತೃಗಳು ನಿಷ್ಠಾವುಳ್ಳವರಾಗಿ ಕುಶಾಗ್ರ ಬುದ್ಧಿಯಿಂದ ಈ ಭಗವದ್ಗೀತೆಯ ಅನುಭವವನ್ನು ತೆಗೆದುಕೊಳ್ಳಬೇಕು. (ಹೀಗೆಯೇಕೆ ?) ಅಂದರೆ ಗೀತೆಯಲ್ಲಿಯ ಪರಮ ತತ್ವವು ಶಬ್ದಾತೀತವಿರುವದರಿಂದ ತಿಳಿಯಲಿಕ್ಕೆ ಕಠಿಣವಿರುತ್ತದೆ. ॥ ೫೭ ॥ ಈ ಗೀತೆಯಲ್ಲಿಯ ಕಥೆಯನ್ನು ಮಾತನಾಡದೆ ವಿಚಾರ ಮಾಡಬೇಕು. ಇಂದ್ರಿಯಗಳಿಗೆ ತಿಳಿಯಗೊಡದೆ ಅದರ ಅನುಭವ ತೆಗೆದುಕೊಳ್ಳಬೇಕು. ಮತ್ತು ಅದನ್ನು ಕೇಳುವ ಮೊದಲು ಅದರಲ್ಲಿಯ ರಹಸ್ಯ ತಿಳಕೊಳ್ಳಬೇಕು. ॥ ೫೮ ॥

ಜೈಸೇ ಭ್ರಮರ ಪರಾಗು ನೇತೀ । ಪರೀ ಕಮಳದಳೇ ನೇಣತೀ । ತೈಸೀ ಪರೀ ಆಹೇ ಸೇವಿತೀ । ಗ್ರಂಥೀ ಇಯೇ ॥ ೫೯ ॥ಕಾ ಆಪುಲಾ ಠಾವೋ ನಸತಾಂಡಿತಾ । ಆಲಿಂಗೀಜೆ ಚಂದ್ರು ಪ್ರಕಟತಾ । ಹಾ ಅನುರಾಗು ಭೋಗಿತಾ । ಕುಮುದಿನೀ ಜಾಣೇ ॥ ೬೦ ॥ ಐಸೇನಿ ಗಂಭೀರಪಣೇ । ಸ್ಥಿರಾವಲೇನಿ ಅಂತಃಕರಣೇ । ಅಥಿಲಾತೋಚಿ ಜಾಣೆ । ಮಾನೂ ಇಯೇ ॥ ೬೧ ॥ ಅಹೋ ಅರ್ಜುನಾಚಿಯೇ ಪಾಂತೀ । ಜೇ ಪರಿಸಣಯಾ ಯೋಗ್ಯ ಹೋತೀ । ತಿಹೀ ಕೃಪಾಕರೂನಿ ಸಂತೀ । ಅವಧಾನದ್ಯಾವೇ ॥ ೬೨ ॥ ಹೇ ಸಲಗೀ ಮ್ಯಾ ಮ್ಹಣಿತಲೇ । ಚರಣಾಲಾಗೋನಿ ವಿನವಿಲೇ । ಪ್ರಭೊ ಸಪೋಲ ಹೃದಯು ಆಪುಲೇ । ಮ್ಹಣೂನಿಯಾ ॥ ೬೩ ॥ ಜೈಸಾ ಸ್ವಭಾವೋ ಮಾಯಬಾಪಾಂಚಾ ॥ ಅಪತ್ಯಬೋಲೇ ಜರೀ ಬೋಬಡೀ ವಾಚಾ । ತರೀ ಅಧಿಕಚಿ ತಯಾಚಾ । ಸಂತೋಷ ಅಥೀ ॥ ೬೪ ॥ ತೈಸಾ ತುಮ್ಹೀಮೀ ಅಂಗಿಕಾರಿಲಾ । ಸಜ್ಜನೀ ಆಪುಲಾ ಮ್ಹಣಿತಲಾ । ತರೀ ಉಣೆ ಸಹಜೇ ಉಪಸಾಹಲಾ । ಪ್ರಾರ್ಥೂ ಕಾಈ ॥ ೬೫ ॥ ಪರೀ ಅಪರಾಧುತೋ ಅಣೇಕ ಆಹೆ । ಜೇ ಮೀ ಗೀತಾರ್ಥು ಕವಳೂ ಪಾಹೆ । ತೇ ಅವಧಾರಾ ವಿನವೂಲಾಹೇ । ಮ್ಹಣಾನಿಯಾ ॥ ೬೬ ॥ ಹೇ ಆನಾವರ ನ ವಿಚಾರಿತಾ । ವಾಯಾಚಿ ಧಿನಸಾ ಉಪನಲಾ ಚಿತ್ತಾ । ಯೇರ್ಹವೀ ಕಾಯ ಭಾನುತೇಜೀ ಖದ್ಯೋತಾ । ಶೋಭಾ ಅಥೀ ॥ ೬೭ ॥

ಯಾವ ಪ್ರಕಾರಾ ಭ್ರಮರಗಳು ಕಮಲ ದಲಕ್ಕೆ ತಿಳಿಯಗೊಡದಂತೆ ಅದರೊಳಗಿನ ಪುಷ್ಪ ರೇಣುವನ್ನು ಸೇವಿಸುತ್ತವೆಯೋ ಅದೇ ಪದ್ಧತಿಯಿಂದ ಈ ಗ್ರಂಥದಲ್ಲಿಯ ತತ್ವಸೇವನೆಯನ್ನು ಮಾಡಬೇಕು. ॥೫೯॥ ಚಂದ್ರಪ್ರಕಾಶ ಬಿದ್ದ ಕೂಡ್ಲೆ ಕಮಲವು ಅರಳಿ ತನ್ನ ಸ್ಥಳವನ್ನು ಬಿಡದೇ ಯಾವ ಪ್ರಕಾರಾ ಚಂದ್ರನನ್ನು ಪ್ರೀತಿಯಿಂದ ಆಲಂಗಿಸುವ ಸುಖವನ್ನು ಹೊಂದುತ್ತದೋ, ॥೬೦॥ ಅದೇ ಪ್ರಕಾರಾ ಶಮದಮಗಳಿಂದ ಯಾವನ ಅಂತಃಕರಣವು ಸ್ಥಿರವಾಗಿರುತ್ತದೆ ಅವನೇ ಈ ಕಥೆಯ ರಹಸ್ಯವನ್ನು ತಿಳಿಯುವನು ಎಂದು ನಾವು ತಿಳಿಯುತ್ತೇವೆ. ॥೬೧॥ ಅದೇ ಪ್ರಕಾರಾ ಅರ್ಜುನನು ಅಧಿಕಾರವುಳ್ಳವನಿದ್ದನೆಂದು (ಶ್ರೀ ಜ್ಞಾನೇಶ್ವರ ಮಹಾರಾಜರು ಸಂತರ ಮುಂದೆ ಪ್ರತಿಪಾದನೆ ಮಾಡುತ್ತಾರೆ) ಅರ್ಜುನನ ಯೋಗ್ಯತೆಯುಳ್ಳ ಶ್ರೋತೆಗಳು ಯಾರು ಇರುವರೋ (ಆ ಸಚ್ಛಕ್ತ) ಸಂತರು ದಯವಿಟ್ಟು ಈ ಕಥೆಯ ಕಡಿಗೆ ಲಕ್ಷ ಕೊಡಬೇಕು. (ಈ ಸಂಭಾಷಣವು ಸ್ವಲ್ಪು ಅಧಿಕವಾಯಿತೆಂದು ಅದರ ಪರಿಹಾರ ಮಾಡುತ್ತಾರೆ) ॥೬೨॥ ಪ್ರಭೋನಿಮ್ಮ ಹೃದಯವು ಬಹಳೇ ಗಂಭೀರವಾದದ್ದಿರುತ್ತದೆ. ಆದುದರಿಂದ ನಿಮ್ಮ ಚರಣಾರವಿಂದದಲ್ಲಿ ಇದು ನನ್ನ ಸಲುಗೆಯ ವಿನಂತಿ ಇರುತ್ತದೆ॥ ೬೩ ॥ ಯಾವ ಪ್ರಕಾರಾ ಸಂಣ ಬಾಲಕನು ತೊದಲ ನುಡಿಗಳನ್ನಾಡಿದರೂ ಕೂಡ ತಾಯಿತಂದೆಗಳಿಗೆ ಸ್ವಭಾವಿಕವಾಗಿ ಅದರ ವಿಷಯವಾಗಿ ಬಹಳ ಸಂತೋಷ ಉಂಟಾಗುತ್ತದೆ ॥೬೪॥ ಆ ಪ್ರಕಾರಾ ನೀವು ಸಜ್ಜನರು ನನ್ನ ಅಂಗೀಕಾರ ಮಾಡಿದ್ದು ಯಾವಾಗ್ಗೆ ನೀವು ನನಗೆ " ನಮ್ಮವ"ನೆಂದು ತಿಳಿದಿರುವಿರಿ ಆಗ್ಗೆ ನನ್ನಲ್ಲಿ ಯಾವ ನ್ಯೂನತೆಗಳಿದ್ದರೂ ಅವುಗಳನ್ನು ನೀವು ಸಹಜವಾಗಿ ಸಹನ ಮಾಡುವಿರಿ ! ಅದಕ್ಕಾಗಿ ನಾನು ತಮ್ಮ ಪ್ರಾರ್ಥನೆ ಮಾಡಬೇಕೆಂಬ ಆವಶ್ಯನೇ ಇರುವದಿಲ್ಲ. ॥೬೫॥ ಆದರೆ ಯಾವ ಅಪರಾಧವು ನನ್ನ ಕೈಯಿಂದ ಆಗುತ್ತದೆ ಅದು ಬೇರೆಯೇ ಆಗಿರುತ್ತದೆ. ಗೀತೆಯ ಅರ್ಥವನ್ನು ನಾನು ಸ್ಪಷ್ಟಮಾಡಬೇಕೆಂದು ಅನ್ನುತ್ತೇನೆ. ಅದಕ್ಕೆ ಇತ್ತ ಕಡೆಗೆ ಲಕ್ಷ ಕೊಡಿರಿ. ಎಂದು ತಮ್ಮಂಥ ಜ್ಞಾನಿಗಳಿಗೆ ವಿನಂತಿ ಮಾಡುತ್ತೇನೆ. ಇದೇ ಅಪರಾಧವಿರುವದಿಲ್ಲೇನು ? ॥ ೬೬ ॥ ಈ ಗೀತೆಯ ಅರ್ಥ ಮಾಡುವ ಕೆಲಸವು ಬಹಳೇ ಕಠಿಣವಿರುತ್ತದೆ. ಇದರ ವಿಚಾರ ಮನಸಿನಲ್ಲಿ ಮಾಡದೇ ಅದನ್ನು ಸ್ಪಷ್ಟ ಮಾಡಲಿಕ್ಕೆ ನನ್ನ ಮನಸಿನಲ್ಲಿ ವ್ಯರ್ಥವಾಗಿ ಧೈರ್ಯವು ಉತ್ಪನ್ನವಾಗಿದೆ. ಸೂರ್ಯನ ತೇಜದ ಮುಂದೆ ಹೊನ್ನಿಹುಳದ ತೇಜವು ಹ್ಯಾಗೆ ಬಿದ್ದೀತು ? ॥ ೬೭ ॥

ಈ ಟೆಟೆಥೂ ಚಾಂಚೂವರೀ । ಮಾಪ ಸುಯೇಸಾಗರೀ । ಮೀ ನೇಣತೂ ತ್ಯಾಪರೀ । ಪ್ರವರ್ತೇ ಯೇಥ ॥ ೬೮ ॥ ಅಯಕಾ ಆಕಾಶ ಗಿವಸಾವೇ । ತರೀ ಅಣೇಕ ತ್ಯಾಹುನಿ ಥೋರ ಹೋ ಆವೆ । ಮ್ಹಣವೂನಿ ಅಪಾಡು ಹೇ ಅಥವೆ । ನಿರ್ಧಾರಿತಾ ॥ ೬೯ ॥ ತಯಾ ಗೀತಾರ್ಥಾಚೇ ಥೋರೀ । ಸ್ವಯೇ ಶಂಭೂ ವಿವರೀ । ಜೇಥ ಭವಾನೀ । ಪ್ರಶ್ನು ಕರೀ । ಚನುತ್ಕಾರೋ ನೀ ॥ ೭೦ ॥ ತೇಥ ಹರೂವ್ಹುಣೇನೇಣಜೆ । ದೇವೀ ಜ್ವಿಸೇ ಕಾಸ್ವರೂಪ ತುಝೊ । ತೈಸೇ ಹೇ ನಿತ್ಯ ನೂತನ ದೇಖಿಜೆ । ಗೀತಾ ತತ್ವ ॥ ೭೧ ॥ ಹಾವೇದಾರ್ಥ ಸಾಗರು ಜಯೂ ನಿದ್ರಿತಾಚಾ ಘೋರೂ । ತೋ ಸ್ವಯೇ ಸರ್ವೇಶ್ವರೂ । ಪ್ರತ್ಯಕ್ಷ ಅನುವಾದಲಾ ॥ ೭೨ ॥ ಐಸೇ ಜೇ ಆಗಾಧ । ಜೇಥ ವೇಡಾವತೀ ವೇದ । ತೇಥ ಅಲ್ಪಮೀ ಮತಿನುಂದ । ಕಾಯಹೋಯ ॥ ೭೩ ॥ ಹೇ ಅಪಾರ ಕೈಸೇನಿ ಕವಳಾವೆ । ಮಹಾತೇಜ ಕವಣೆ ಧವಳಾವೆ । ಗಗನ ಮುಠೀ ಸುವಾವೇ । ಮಶಕೇ ಕೇವೀ ॥ ೭೪ ॥ ಪರೀ ಏಥ ಅಸೇ ಏಕು ಆಧಾರು । ತೇಣೇಚಿ ಬೋಲೆ ಮೀ ಸಧರೂ । ಜೈಸಾನುಕೂಳ ಶ್ರೀಗುರೂ । ಜ್ಞಾನದೇವೋ ವ್ಹಣೆ ॥ ೭೫ ॥ ಯೇರ್ಹವೀ ತರೀ ಮೀ ಮೂರ್ಖ । ಜರೀ ಜಾಹಲಾ ಅವಿವೇಕ । ತರೀ ಸಂತ ಕೃಪಾದೀಪಕ । ಸೋಜ್ವಳು ಅಸೇ ॥ ೭೬ ॥

ಅಥವಾ (ತನ್ನ ಮರಿಗಳನ್ನು ಸಮುದ್ರವು ಎಳೆದೊಯ್ಯಿತು ಎಂದು ಅದರ ಸೇಡು ತೀರಿಸುವದಕ್ಕಾಗಿ) ಯಾವ ಪ್ರಕಾರಾ ಟಿಂವಕ್ಕಿಯು ಸಮುದ್ರವನ್ನು ಶೋಷಿಸಬೇಕೆಂದು ತನ್ನ ಚುಂಚಿನಿಂದ ಸಮುದ್ರದ ನೀರನ್ನು ಅಟ್ಟುಸುವ ಪ್ರಯತ್ನ ಮಾಡುವದಕ್ಕೆ ಯತ್ನಿಸುವದೋ ಅದೇ ಪ್ರಕಾರಾ ನನ್ನ ಅಧಿಕಾರವಿಲ್ಲದೇ ಗೀತೆಯಂಥ ಗ್ರಂಥದ ಅರ್ಥವನ್ನು ಮಾಡಲಿಕ್ಕೆ ನಾನು ಪ್ರವೃತ್ತನಾಗಿರುವೆನು ॥ ೬೮ ॥ ಹೀಗೆ ನೋಡಿರಿ. ಯಾವ ಆಕಾರವನ್ನು ಹಿಡಿಯಬೇಕೆಂದು ಮಾಡಿದರೆ ಅದಕ್ಕಿಂತಲೂ ತಾವು ಹೆಚ್ಚು ಬೆಳೆಯಬೇಕಾಗುತ್ತದೆ. ಆ ಪ್ರಕಾರಾ ನಿಜವಾಗಿ ಗೀತೆಯ ಅರ್ಥ ಮಾಡಲು ನನ್ನಕಿಂತಲೂ ಹೆಚ್ಚಿನ ಯೋಗ್ಯ ಮನುಷ್ಯರು ಬೇಕಾಗಿದ್ದರು. ಯಾಕಂದರೆ ಆ ಕೆಲಸವು ನನ್ನ ಶಕ್ತಿಯ ಹೊರಗೆ ಇರುತ್ತದೆ. ॥ ೬೯ ॥ ಯಾಕಂದರೆ ಈ ಗೀತೆಯ ಮಹತ್ಮೆಯು ವಿಶೇಷವಾಗಿರುತ್ತದೆ. ಸ್ವತಃ ಶಂಕರನು ಇದರ ಚರ್ಚೆಯನ್ನು ಮಾಡುವಾಗ್ಗೆ ಭವಾನಿಗೆ ಚಮತ್ಕಾರವೆನಿಸಿ ಅವಳು ಶಂಕರನಿಗೆ ಪ್ರಶ್ನ ಮಾಡಲಾಗಿ ॥ ೭೦ ॥ ಶ್ರೀ ಶಂಕರನು ಅನ್ನುತ್ತಾನೆ. ಎಲೈ ಪಾರ್ವತಿ ನಿನ್ನ ಸ್ವರೂಪವು ನಿತ್ಯ ಹೊಸದಾಗಿ ಇದ್ದದರಿಂದ ಯಾವ ಪ್ರಕಾರಾ ಅದರ ಅಂತಹತ್ತುವದಿಲ್ಲವೋ ಹಾಗೆ ಗೀತೆಯ ತತ್ವವು ನಿತ್ಯವಾಗಿ ಹೊಸದಾಗಿ ಇದ್ದದರಿಂದ ಅದಾವದರೂ ತಿಳಿಯಲಾರದು ॥ ೭೧ ॥ ಯಾಕಂದರೆ ಯಾವ ಸರ್ವೇಶನ ನಿದ್ರೆಯ ಶಬ್ದದಿಂದ ವೇದಗಳು ಸಹಜವಾಗಿ ಉತ್ಪನ್ನವಾದವೋ, ಆ ಜಗದೀಶ್ವರನು ತನ್ನ ಸ್ವಮುಖದಿಂದ ಈ ಗೀತಾಶಾಸ್ತ್ರವನ್ನು ಅರ್ಜುನನಿಗೆ ಹೇಳಿದನು ॥ ೭೨ ॥ ಹೀಗೆ ಈ ಗೀತಾಶಾಸ್ತ್ರವು ಗಹನವಿದ್ದು ಈ ಸ್ಥಾನದಲ್ಲಿ ವೇದಗಳ ಮತಿಯೂ ಕೂಡಾ ಕುಂಠಿತವಾಗುತ್ತದೆ. ಅಂದ ಬಳಿಕ ಈ ಸ್ಥಳದಲ್ಲಿ ಅಲ್ಪಜ್ಞನೂ ಮಂದಮತಿಯೂ ಆದ ನನ್ನಂಥವನ ಪಾಡೇನು ? ॥ ೭೩ ॥ ಈ ಅಪಾರವಾದ ಗೀತಾ ತತ್ವವನ್ನು ಹ್ಯಾಗೆ ತಿಳಿಕೊಳ್ಳಬೇಕು ? ಸೂರ್ಯನ ತೇಜಸ್ಸನ್ನು ಯಾರು ಬೆಳಗಬೇಕು ? ಅಥವಾ ಸಂಣ ಹುಳವು ಆಕಾಶವನ್ನು ತನ್ನ ಮುಷ್ಟಿಯಲ್ಲಿ ಹೇಗೆ ಹಿಡಿಯಬೇಕು ? ॥ ೭೪ ॥ ಆದರೆ ಶ್ರೀ ಜ್ಞಾನದೇವರು ಅನ್ನುತ್ತಾರೆ. ಯಾವಾಗ್ಗೆ ಶ್ರೀಗುರುಗಳು ನನಗೆ ಅನಕೂಲ ಇರುತ್ತಾರೆ. ಆಗ್ಗೆ ಇಂಥ ಮಹತ್ಕೃತ್ಯವನ್ನು ಮಾಡಲಿಕ್ಕೆ ಅವರದೇ ನನಗೆ ಆಧಾರವಿರುತ್ತದೆ. ಮತ್ತು ಇದರಿಂದಲೇ ನನಗೆ ಧೈರ್ಯ ಬಂದಿರುತ್ತದೆ ॥೭೫॥ ನಾನು ಅಜ್ಞಾನಿಯೂ ಅವಿವೇಕಿಯೂ ಇದ್ದಾಗ್ಯೂ ಸಂತರ ಕೃಪಾರೂಪ ದೀಪದಿಂದ ಸೋಜ್ವಲ (ಯೋಗ್ಯ) ನಾಗಿರುತ್ತೇನೆ ॥ ೭೬ ।

ಲೋಹಾಚೆ ಕನಕ ಹೋಯೇ । ಹೇ ಸಾಮರ್ಥ್ಯ ಪರಿಸೀಚ ಆಹೆ ಕೀ ಮೃತಹೀ ಜೀವಿತ ಲಾಹೆ। ಅಮೃತ ಸಿದ್ಧಿ ॥ ೭೭ ॥ ಜರೀ ಪ್ರಕಟೀ ಸಿದ್ಧ ಸರಸ್ವತೀ। ತರೀ ಮುಕಯಾ ಅಥೀಭಾರತೀ। ಏಥ ವಸ್ತು ಸಾಮರ್ಥ್ಯ ಶಕ್ತೀ। । ನವಲ ಕಾಯೀ ॥ ೭೮ ॥ ಜಯಾತೇ ಕಾಮಧೇನು ಮಾಯ । ತಯಾಸೀ ಅಪ್ರಾಪ್ಯ ಕಾಹೀ ಆಹೆ । ಮ್ಹಣವೂನಿ ಮೀ ಪ್ರವರ್ತೋ।ಲಾಹೇ। ಗ್ರಂಥೀ ಇಯೇ ॥ ೭೯ ॥ ತರೀ ನ್ಯೂನತೇ ಪುರತೇ। ಅಧಿಕತೇ ಸರತೇ । ಕರೂನಿ ಫೇಯಾವೆ ಹೇತುಮತೇ । ವಿನವಿತು ಅಸೇ ॥ ೮೦ ॥ ಆತಾ ದೇಈಜೋ ಅವಧಾನ ತುಮ್ಹೀ ಬೋಲ ವಿಲಾ ಮೀ ಬೋಲೇನ। ಜೈಸೇ ಚೇಷ್ಟೇ ಸೂತ್ರಾಧೀನ। ದಾರೂಯಂತ್ರ ॥ ೮೧ ॥ ತೈಸಾಮೀ ಅನುಗ್ರಹೀತು ಸಾಧೂಚಾ ನಿರೂಪಿತು। ತೇ ಅಪುಲಿಯಾ ಪರಿ ಅಲಂಕರಿತು। ಭಲತಯಾಪರೀ ॥ ೮೨ ॥ ತವ ಶ್ರೀಗುರೂ ಮ್ಹಣತೀ ರಾಹೀ । ಹೇತ.ಜ ಬೋಲಾವೇ ನಲಗೇ ಕಾಹೀ । ಆತಾ ಗ್ರಂಥಾ ಚಿತ್ತದೇಈ । ಝುಂಡಕರೀ ನೇಗಾ ॥ ೮೩ ॥ ಯಾ ಬೋಲಾ ನಿವೃತ್ತಿದಾಸು। ಪಾವೂನಿ ಪರಮ ಉಲ್ಹಾಸು। ಮ್ಹಣೆಪರಿಯೇಸಾ ಮನಾ ಅವಕಾಶು । ದೇವೂನಿಯಾ ॥ ೮೪ ॥

ಪರಿಸ ಮಣಿಯ ಸಾಮರ್ಥ್ಯದಿಂದ ಕಬ್ಬಿಣವು ಬಂಗಾರವಾಗುತ್ತದೆ. ಅಥವಾ ಮೃತ ಮನುಷ್ಯನು ಅಮೃತ ಪಾನದಿಂದ ಚೀವಂತವಾಗುತ್ತಾನೆ. ॥ ೭೭ ॥ ಅಥವಾ ಸರಸ್ವತಿಯೇ ಪ್ರಸಂನವಾದರೆ ಮೂಕನಿಗೂ ಕೂಡಾ ವಾಚಾ ಉತ್ಪನ್ನವಾಗುತ್ತದೆ. ಅಂದಬಳಿಕ ಇದರಲ್ಲಿ ಆಶ್ಚರ್ಯವೇನು? ಇದು ಕೇವಲ ವಸ್ತು ಮಾಹತ್ಮೆ ಇರುತ್ತದೆ. ॥ ೭೮ ॥ ಕಾಮಧೇನುವೇ ಯಾರತಾಯಿಯು ಆ ಕೂಸಿಗೆ ದುರ್ಲಭವಾದದ್ದು ಯಾವದಿರುತ್ತದೆ? ಆದುದರಿಂದ ನಾನು ಈ ಗ್ರಂಥವನ್ನು ಮಾಡಲಿಕ್ಕೆ ಪ್ರವೃತ್ತನಾಗಿರುವೆನು. ॥ ೭೯ ॥ ಆದರೂ ಇದರಲ್ಲಿ ಕಡಿಮೆ ಇದ್ದದ್ದನ್ನು ಪೂರ್ಣಮಾಡಿಕೊಂಡು ಹೆಚ್ಚಾದದ್ದನ್ನು ಬಿಟ್ಟುಬಿಡರಿ ಎಂದು ತಮಗೆ ನನ್ನ ವಿನಂತಿ ಇರುತ್ತದೆ. ॥ ೮೦ ॥ ಶ್ರೀಗುರು ನಿವೃತ್ತಿನಾಥ ಮಹಾರಾಜರೇ ಇನ್ನುಮೇಲೆ ನೀವು (ಈ ಕಥೆಯ ಕಡೆಗೆ) ಅವ ಧಾನವನ್ನು ಕೊಡಬೇಕು. ಮತ್ತು ನೀವು ನನ್ನ (ಅಂತರಂಗದಲ್ಲಿ ನಿಂತು. ಮಾತಾಡಿಸುವದರಿಂದಲೇ ನಾನು ಗೀತೆ ಯಂಥ ಗ್ರಂಥದಮೇಲೆ ವ್ಯಾಖ್ಯಾನ ಮಾಡುತ್ತೇನೆ) ಸಂಭಾಷಣ ಮಾಡುತ್ತೇನೆ. ಕಳಸೂತ್ರದ ಕಟ್ಟಗೆಯ ಗೊಂಬೆಯು ಸೂತ್ರಧಾರನು ಕುಣಿಸುವಂತೆ ಅದು ಕುಣಿಯುತ್ತದೆ. ॥ ೮೧ ॥ ಅದರಂತೆ ನೀವು ನನ್ನಮೇಲೆ ಅನುಗ್ರಹ ಮಾಡಿರು ವಿರಿ. ನಾನು ಸಾಧುಗಳ ಅಜ್ಞಾಧಾರಿ ಇದ್ದೇನೆ. ನೀವು ನಿಮ್ಮ ಅಪೇಕ್ಷೆಯಂತೆ ನನ್ನನ್ನು ಸುಶೋಭಿತನನ್ನಾಗಿ ಮಾಡಿ ಕುಣಿಸಿದಂತೆ ನಾನು ಕುಣಿಯುವೆನು. ॥ ೮೨ ॥ ಆ ಕಾಲಕ್ಕೆ ಶ್ರೀಗುರು ನಿವೃತ್ತಿನಾಥರು ಅನ್ನುತ್ತಾರೆ. ಸಾಕು ಬಿಡು ಇದನ್ನು ನೀನು ನಮಗೆ ಹೇಳಬೇಕಾಗಿರುವದೇನು? ಇನ್ನು (ವ್ಯರ್ಥವಾಗಿ ಕಾಲಕಳೆಯದೆ) ತೀಪ್ರವೇ, ಗೀತಾರ್ಥ ಹೇಳುವದರ ಕಡೆಗೆ ಲಕ್ಷಪೂರೈಸು ॥ ೮೩ ॥ ಅಂತಾ ಶ್ರೀಗುರುಗಳ ಆಜ್ಞೆಯಾದವ್ದನ್ನು ನೋಡಿ ಶ್ರೀ ನಿವೃತ್ತಿನಾಥರ ಶಿಷ್ಯ ಜ್ಞಾನದೇವರು, ಪರಮ ಸಂತುಷ್ಟ ಚಿತ್ತ ಉಳ್ಳವರಾಗಿ ನಾನು (ಗೀತೆಯಲ್ಲಿಯ ಶ್ರೀ ಕೃಷ್ಣಾರ್ಜುನರ ಸಂವಾದದ) ಸಂಭಾಷಣವನ್ನೇ ಮಾಡುತ್ತೇನೆ. ಆ ಸಂವಾದವನ್ನು ಶಾಂತಮನಸ್ಸಿನಿಂದ ಶ್ರವಣ ಮಾಡಬೇಕು. ॥೮೪॥

ಶ್ರೀಮದ್ಭಗವದ್ಗೀತೆ ಅಥವಾ ಶ್ರೀ ಜ್ಞಾನೇಶ್ವರೀ

ಮೊದಲನೆಯ ಅಧ್ಯಾಯವು

ಧೃತರಾಷ್ಟ್ರ ಉವಾಚ—

ಧರ್ಮಕ್ಷೇತ್ರೇ ಕುರುಕ್ಷೇತ್ರೇ ಸಮವೇತಾ ಯುಯುತ್ಸವಃ ।
ಮಾಮಕಾಃ ಪಾಂಡವಾಶ್ಚೈವ ಕಿಮಕುರ್ವತ ಸಂಜಯ ॥ ೧ ॥

[**ಧರ್ಮಕ್ಷೇತ್ರೇ ಇತಿ**] ತರೀ ಪುತ್ರಸ್ನೇಹೇ ಮೋಹಿತ । ಧೃತರಾಷ್ಟ್ರ ಅಸೇ ಪ್ರಸತ । ಮ್ಹಣೇ ಸಂಜಯಾ ಸಾಂಗೇ ಮಾತ । ಕುರುಕ್ಷೇತ್ರಿಚೀ ॥ ಅಗ ॥ ಜೇ ಧರ್ಮಾಲಯ ಮ್ಹಣಿಜೇ । ತೇಥ ಪಾಂಡವ ಆಣಿ ಮಾಝೇ । ಗೇಲೇ ಅಸತೀ ವ್ಯಾಜೇ । ಜುಂಝಾ ಚೇನಿ ॥ಅಟ॥ ತರೀ ತಿಂಹೀ ಯೇತುಲಾ ಅವಸರೀ। ಕಾಯ ಕಿಜತ ಅಸೇ ಯೇರ ಯೇರೀ । ತೇ ಝುಡಕರೀ ಕಥನ ಕರೀ । ಮಜ ಪ್ರತಿ ॥ ಅಟ ॥

ಅರ್ಥ— ಪುತ್ರಪ್ರೇಮದಿಂದ ಮೋಹಿತನಾದ ಧೃತರಾಷ್ಟ್ರ ರಾಜನು ಅನ್ನುತ್ತಾನೆ. " ಸಂಜಯನೇ ಕುರು ಕ್ಷೇತ್ರದಲ್ಲಿ ನಡೆದ ಸಂಗತಿಯನ್ನು ನನ್ನ ಮುಂದೆ ಹೇಳು. ॥ ಅಗ ॥ ಯಾವ ಕುರುಕ್ಷೇತ್ರವು ಧರ್ಮಸಾಧನಕ್ಕೆ ಯೋಗ್ಯವಾದ ಸ್ಥಳವೆಂದು ಕರೆಯಲ್ಪಡುತ್ತಿದೆಯೋ, ಅಲ್ಲಿ ನನ್ನ ಮಕ್ಕಳೂ ಮತ್ತು ಪಂಡುರಾಜನ ಮಕ್ಕಳೂ ಯುದ್ಧಕ್ಕೋಸುಗ ಹೋಗಿದ್ದಾರೆ. ॥ ಅಟ ॥ ಆದರೆ ಅವರು ಪರಸ್ಪರರಲ್ಲಿ ಇಷ್ಟು ಹೊತ್ತಿನವರೆಗೆ ಏನು ಮಾಡುತ್ತಿರುವರೆಂಬುದನ್ನು ನನಗೆ ಬೇಗನೇ ಹೇಳು. ॥ ಅಒ ॥

ಸಂಜಯ ಉವಾಚ—

ದೃಷ್ಟ್ವಾ ತು ಪಾಂಡವಾನೀಕಂ ವ್ಯೂಢಂ ದುರ್ಯೋಧನಸ್ತದಾ ।
ಆಚಾರ್ಯಮುಪಸಂಗಮ್ಯ ರಾಜಾ ವಚನಮಬ್ರವೀತ್ ॥ ೨ ॥
ಪಶ್ಯೈತಾಂ ಪಾಂಡು ಪುತ್ರಾಣಾಮಾಚಾರ್ಯ ಮಹತೀಂ ಚಮೂಂ ।
ವ್ಯೂಢಾಂ ದ್ರುಪದಪುತ್ರೇಣ ತವ ಶಿಷ್ಯೇಣ ಧೀಮತಾ ॥ ೩ ॥

[**ಧೃಷ್ಟ್ವಾತು ಇತಿ**] ತಿಯೇ ವೇಳೇ ತೋಸಂಜಯ ಬೋಲೇ । ಮ್ಹಣೇ ಪಾಂಡವ ಸೈನ್ಯ ಉಚ ಲಲೇ । ಜೈಸೇ ಮಹಾಪ್ರಳಯೀಪಸರಿಲೆ । ಕೃತಾಂತ ಮುಖ ॥ ಅಲ ॥ ತೈಸೇ ತೇ ಘನದಾಟ। ಉಠಾವಲೇ ಏಕನಟ । ಜೈಸೇ ಉಸಳಲೇ ಮಹಾ ಪ್ರಳಯೀ ಕಾಲಕೂಟ । ಧರೀ ಕವಣ ॥ಅಳ॥ ನಾತರೀ ವಡವಾನಲ ಸಾದು ಕಲಾ । ಪ್ರಲಯವಾತೇ ಪೋಖಲಾ । ಸಾಗರ ಶೋಷೂನಿ ಉಧವಲಾ । ಅಂಬರಾಸೀ ॥ ೯೦ ॥ ತೈಸೇ ದಳ ದುರ್ಧರ । ನಾನಾ ವ್ಯೂಹೀ ಪರಿಕರ । ಅವಗಮಲೇ ಭಯಾಸುರ ತಿಯೇಕಾಳೀ ॥ ೯೧ ॥ ತೇ ದೇಖೋನಿ ದುರ್ಯೋಧನೇ । ಆಹ್ವೇರಿಲೇ ಕವಣೇ ಮಾನೇ । ಜೈಸೇ ನ ಗಣಿಜೇ ಪಂಚಾನನೇ । ಗಜ ಘಟಾಂತೇ ॥ ೯೨ ॥ ಮಗ ದ್ರೋಣಾಪಾಸೀ ಆಲಾ । ತಯಾ ತೇ ಮ್ಹಣೇ ಹಾ ದೇಖಲಾ? । ಕೈಸಾ ದಳಧಾರ ಉಚಳಲಾ ಪಾಂಡವಾಂಚಾ ॥ ೯೩ ॥ ಗಿರಿ ದುರ್ಗ ಜೈಸೇ ಚಾಲತೇ । ತೈಸೇ ವಿವಿಧ ವ್ಯೂಹ ಭಂವತೇ । ರಚಲೇ ಆಥಿ ಬುದ್ಧಿಮಂತೇ । ದೃಪದ ಕುಮರೇ ॥ ೯೪ ॥ ಜೋ ಕಾ ತುಮ್ಹಿ ಶಿಷ್ಯ ಆಪುಲಾ । ವಿದ್ಯೇಸಿ ವಸೌಟಾಕೇಲಾ । ತೇಣೇ ಹಾ ಸೈನ್ಯಸಿಂಧು ಪಾಖಾರಿಲಾ । ದೇಖ ದೇಖ ॥ ೯೫ ॥

ಅರ್ಥ – ಆಗ ಸಂಜಯನು ಅನ್ನುತ್ತಾನೆ. "ಮಹಾ ಪ್ರಳಯದಕಾಲಕ್ಕೆ ಕಾಲನ್ಮೃತ್ಯುವಿನ ಬಾಯಿಯು ವಿಕರಾಲವಾಗಿಯೂ, ವಿಶಾಲವಾಗಿಯೂ ತೆರೆದಿರುವಂತೇ ಪಾಂಡವರ ಸೈನ್ಯವು ಭಯಾವಹವಾಗಿರುವದು. ॥ ೮೮ ॥ ಕಾಳಕೂಟ ವಿಷವು ಉಕ್ಕೇರಿ ಬಂದರೆ ಅದನ್ನು ಸಹಿಸುವುದು ಹೇಗೆ ತಾನೇ ಅಸಾಧ್ಯವೋ ಹಾಗೆಯೇ ಯುದ್ಧಸನ್ನದ್ಧವಾಗಿ ಮೇಲೇರಿ ಬರುತ್ತಿರುವ ಪಾಂಡವರ ಮಹಾಸೈನ್ಯವನ್ನು ತಡೆಯುವದೂ ಅಸಾಧ್ಯವಾದದ್ದು. ॥ ೮೯ ॥ ಪ್ರಳಯಾಗ್ನಿಯು ಪ್ರಳಯವಾಯುವಿನಿಂದ ವಿಸ್ತಾರವಾಗಿ ಮಹಾಸಮುದ್ರದ ಜಲವನ್ನೇ ಶೋಷಿಸಿ ಆಕಾಶದವರೆಗೆ ವ್ಯಾಪ್ತವಾಗಿ ಭೀಕರವಾಗುವಂತೆ ॥ ೯೦ ॥ ಪಾಂಡವರ ಪ್ರಚಂಡವಾದ ಸೈನ್ಯವೂ ನಾನಾತರಹದ ವ್ಯೂಹ ರಚನೆಯಿಂದ ಕೂಡಿಕೊಂಡು ಬಹು ಭಯಂಕರವಾಗಿ ತೋರುತ್ತದೆ. ॥ ೯೧ ॥ ಆದರೆ ಸಿಂಹವು ಆನೆಯ ಹಿಂಡನ್ನು ನೋಡಿ ಗಣನೆಗೆ ತಾರದೇ ಅದನ್ನು ತಿರಸ್ಕರಿಸುವಂತೆ ದುರ್ಯೋಧನನು ಪಾಂಡವರ ಸೈನ್ಯವನ್ನು ನೋಡಿ ಅದೊಂದು ಕಃಪದಾರ್ಥವೆಂದು ತಿಳಿದಿರುವನು. ॥ ೯೨ ॥ ಆ ಮೇಲೆ ದುರ್ಯೋಧನನು ದ್ರೋಣಾಚಾರ್ಯರ ಹತ್ತಿರಕ್ಕೆ ಬಂದು ಅನ್ನುತ್ತಾನೆ. "ಆಚಾರ್ಯರೇ ಪಾಂಡವರ ಸೈನ್ಯವು ಹೇಗೆ ಸನ್ನದ್ಧವಾಗಿರುವುದೆಂಬುದನ್ನು ನೋಡಿರುವಿರಾ ? ॥೯೩॥ ಬುದ್ಧಿವಂತನಾದ ದೃಪದಪುತ್ರನಾದ ದೃಷ್ಟದ್ಯುಮ್ನನು ಸೈನ್ಯದ ವ್ಯೂಹವನ್ನು ಒಳ್ಳೇ ಚಾತುರ್ಯದಿಂದ ರಚಿಸಿದ್ದಾನೆ. ಅದನ್ನು ನೋಡಿದರೆ, ಅದೇನು ಪ್ರತ್ಯಕ್ಷ ಗಿರಿಗಳೂ, ಕೋಟೆಗಳೂ ನಡೆದು ಬರುತ್ತಿವೆಯೋ ಎಂಬಂತೆ ಭಾಸವಾಗುತ್ತಿದೆ. ॥೯೪॥ ಆಚಾರ್ಯರೇ, ಅದೋ ಅಲ್ಲಿ ನೋಡಿ, ನೀವು ಬಹು ಪ್ರೀತಿಯಿಂದ ಕಲಿಸಿ ಪಾರಂಗತನನ್ನಾಗಿ ಮಾಡಿದ ಶಿಷ್ಯಶ್ರೇಷ್ಠ ದೃಷ್ಟದ್ಯುಮ್ನನು ತನ್ನ ಸೈನ್ಯವನ್ನು ವಿಸ್ತಾರವಾಗಿ ಹೇಗೆ ಶಿಸ್ತಿನಿಂದ ನಿಲ್ಲಿಸಿದ್ದಾನೆ ! ॥ ೯೫ ॥

ಅತ್ರ ಶೂರಾ ಮಹೇಷ್ವಾಸಾ ಭೀಮಾರ್ಜುನ ಸಮಾಯುಧಿ ।
ಯುಯುಧಾನೋ ವಿರಾಟಶ್ಚ ದ್ರುಪದಶ್ಚ ಮಹಾರಥಃ ॥ ೪ ॥

[**ಅತ್ರ ಶೂರ ಇತಿ**] ಆನೇಕಹೀ ಅಸಾಧಾರಣ । **ಜೇ** ಶಸ್ತ್ರಾಸ್ತ್ರೀ ಪ್ರವೀಣ । ಕ್ಷತ್ರಧರ್ಮೀ ನಿಪುಣ । ವೀರ ಆಹಾತೀ ॥ ೯೬ ॥ ಜೇ ಬಳೇ ಪ್ರೌಢೀ ಪೌರುಷೇ । ಭೀಮಾರ್ಜುನಾ ಸಾರಿಖೇ । ತೇ ಸಾಂಗೇನ ಕೌತುಕೇ । ಪ್ರಸಂಗೇಚೀ ॥ ೯೭ ॥ ಏಥ ಯುಯುಧಾನ ಸುಭಟ । ಆಲಾ ಅಸೇ ವಿರಾಟ । ಮಹಾರಥೀ ಶ್ರೇಷ್ಠ । ದೃಪದ ವೀರ ॥ ೯೮ ॥

ಅರ್ಥ:— ಇನ್ನೂ ಅವೆಷ್ಟೋ ಶಸ್ತ್ರಾಸ್ತ್ರ ವಿಶಾರದರೂ, ಕ್ಷಾತ್ರ ಧರ್ಮನಿಪುಣರೂ, ದೊಡ್ಡ ದೊಡ್ಡ ಪರಾಕ್ರಮಿಗಳೂ ಇದ್ದಾರೆ. ॥ ೯೬ ॥ ಅಲ್ಲದೇ ಬಲದಿಂದಲೂ, ಯೋಗ್ಯತೆಯಿಂದಲೂ ಪುರುಷಾರ್ಥದಿಂದೂ ಭೀಮಾರ್ಜುನರನ್ನು ಸರಿಗಟ್ಟುವ ಮಹಾವೀರರಿನ್ನೆಷ್ಟೋ ಜನರಿದ್ದಾರೆ. ಅವರೆಲ್ಲರನ್ನೂ ಪ್ರಸಂಗಾನುಸಾರವಾಗಿ ಬಣ್ಣಿಸುತ್ತೇನೆ. ॥ ೯೭ ॥ ಮತ್ತು ಈ ಸಂಗ್ರಾಮಕ್ಕೆ ಮಹಾವೀರನಾದ ಯುಯುಧಾನ ರಾಜನೂ, ವಿರಾಟಭೂಪನೂ, ಶ್ರೇಷ್ಠ ಮಹಾರಥಿಯಾದ ದೃಪದ ರಾಜನೂ ಬಂದಿರುವರು. ॥ ೯೮ ॥

ಧೃಷ್ಟಕೇತುಶ್ಚೇಕಿತಾನಃ ಕಾಶಿರಾಜಶ್ಚ ವೀರ್ಯವಾನ್ ।
ಪುರುಜಿತ್ಕುಂತಿ ಭೋಜಶ್ಚ ಶೈಬ್ಯಶ್ಚ ನರಪುಂಗವಃ ॥ ೫ ॥
ಯುಧಾಮನ್ಯುಶ್ಚ ವಿಕ್ರಾಂತ ಉತ್ತಮೌಜಾಶ್ಚ ವೀರ್ಯವಾನ್ ।
ಸೌಭದ್ರೋ ದ್ರೌಪದೇಯಾಶ್ಚ ಸರ್ವ ಏವ ಮಹಾರಥಾಃ ॥ ೬ ॥

[**ಧೃಷ್ಟಕೇತುರಿತಿ**] ಚೇಕಿತಾನ ಧೃಷ್ಟಕೇತು। ಕಾಶಿರಾಜ ವಿಕ್ರಾಂತು। ಉತ್ತಮೌಜಾ ನೃಪನಾಘು। ಶೈಬ್ಯದೇಖು ॥ ೯೯ ॥ ಹಾ ಕುಂತಿಭೋಜ ಪಾಹೆ । ಏಥ ಯುಧಾಮನ್ಯು ಆಲಾ ಆಹೆ । ಆಣಿ ಪುರುಜಿತಾದಿ ರಾಯ ಹೇ । ಸಕಳ ದೇಖು ॥ ೧೦೦ ॥ ಹಾ ಸುಭದ್ರಾಹೃದಯ ನಂದನ । ಜೋ ಅಪರ ನವಾರ್ಜುನ । ತೋ ಅಭಿಮನ್ಯು ಮ್ಹಣೇ ದುರ್ಯೋಧನ । ದೇಖೇ ದ್ರೋಣಾ ॥ ೧ ॥ ಆನೇಕಹೀ ದ್ರೌಪದೀ ಕುಮರ । ಹೇ ಸಕಳ ಹೀ ಮಹಾರಥೀ ವೀರ । ಮಿತೀ ನೇಣಿಜೇ ಪರಿ ಅಪಾರ । ಮಿನಲೇ ಅಸತೀ ॥ ೨ ॥

ಅರ್ಥ— ಚೇಕಿತಾನ, ದೃಷ್ಟಕೇತು, ಪರಾಕ್ರಮಿಯಾದ ಕಾಶಿರಾಜ ರಾಜಶ್ರೇಷ್ಠನಾದ ಉತ್ತಮೌಜ, ಮತ್ತು ಶೈಬ್ಯರಾಜ ಇವೇ ಮೊದಲಾದ ರಾಜರು ಬಂದುದನ್ನು ನೋಡಿರಿ.” ॥ ೯೯॥ ಅಲ್ಲದೇ ಅದೋ ಆ ಕುಂತಿ ಭೋಜನನ್ನು ನೋಡಿರಿ. ಅಕೋ ಅಲ್ಲಿರುವ ಯುಧಾಮನ್ಯುವಿನನ್ನು ನೋಡಿರಿ. ಅಲ್ಲಿಯೇ ಕಾದಿರುವ ಪುರೂಜಿತ್ ಮೊದಲಾದ ಅಖಿಲ ರಾಜಸಮೂಹವನ್ನೂ ಅವಲೋಕಿಸಿರಿ. ॥ ೧೮೦॥ ದುರ್ಯೋಧನನು ಮತ್ತೆ ಹೇಳುತ್ತಾನೆ. “ಆಚಾರ್ಯರೇ, ಸುಭದ್ರೆಗೆ ಆಹ್ಲಾದವನ್ನುಂಟುಮಾಡುವ ಪ್ರಬಲ ಪ್ರರಾಕ್ರಮಿಯಾದ ಅಭಿಮನ್ಯುವು ನೂತನ ಅರ್ಜುನನಂತೆ ವೀರ ಶ್ರೀಯಿಂದ ನಿಂತಿರುವನು. ನೋಡಿರಿ. ॥ ೧॥ ಅದರಂತೆಯೇ ದ್ರೌಪದಿಯ ಮಕ್ಕಳೂ ಎಲ್ಲ ಮಹಾರಥಿಗಳೂ, ಅಸಂಖ್ಯ ವೀರರೂ ಈ ಸಂಗ್ರಾಮದಲ್ಲಿ ನೆರೆದಿದ್ದಾರೆ. ॥ ೨॥

ಅಸ್ಮಾಕಂತು ವಿಶಿಷ್ಯಾಯೇ ತಾನ್ನಿಬೋಧ ದ್ವಿಜೋತ್ತಮ ।
ನಾಯಕಾ ಮಮ ಸೈನ್ಯಸ್ಯ ಸಂಜ್ಞಾರ್ಥಂ ತಾನ್ ಬ್ರವೀಮಿತೇ ॥ ೬॥
ಭವಾನ್ ಭೀಷ್ಮಶ್ಚ ಕರ್ಣಶ್ಚ ಕೃಪಶ್ಚ ಸಮಿತಿಂಜಯಃ ।
ಅಶ್ವತ್ಥಾಮಾ ವಿಕರ್ಣಶ್ಚ ಸೌಮದತ್ತಿಸ್ತಥೈವಚ ॥ ೮॥

[ಅಸ್ಮಾಕಂತು ಇತಿ] ಆತಾ ಆಮಚ್ಯಾದಳೀ ನಾಯಕ । ಜೇ ರೂಢವೀರ ಸೈನಿಕ । ತೇ ಪ್ರಸಂಗೀ ಆಜಿಕ । ಸಾಂಗಿಜತೀ ॥ ೩॥ ಉದ್ದೇಶೀ ಏಕದೋನೀ । ಜಾಯಿ ಜತೀ ಬೋಲೋನೀ । ತುಮ್ಹೀ ಆಇ ಕರೂನಿ । ಮುಖ್ಯ ಜೇ ಜೇ ॥ ೪॥ ಹಾ ಭೀಷ್ಮ ಗಂಗಾನಂದನು । ಜೋ ಪ್ರತಾಪ ತೇಜಸ್ವೀ ಭಾನು । ರಿಪುಗಜ ಪಂಚಾನನು । ಕರ್ಣವೀರ ॥ ೫॥ ಏಕೇಕಾತೇನೆ ಮನೋ ವ್ಯಾಪಾರೇ । ಹೇ ವಿಶ್ವ ಹೋಯ ಸಂಹರೇ । ಹಾ ಕೃಪಾಚಾರ್ಯ ನಪುರೆ । ಏಕಲಾಚಿ ॥ ೬॥ ಏಥ ವಿಕರ್ಣ ವೀರ ಆಹೆ । ಹಾ ಅಶ್ವತ್ಥಾಮಾ ಪೈಲ ಪಾಹೆ । ಯಾಜಾ ಅಡವರಸದಾ ವಾಹೆ । ಕೃತಾಂತ ಮನಿ ॥ ೭॥ ಸಮಿತಿಂಜಯ ಸೌಮದತ್ತಿ । ಐಸೇ ಆಣಿಕಹೀ ಬಹುತ ಆಹಾತಿ । ಜಯಾಚಿಯಾ ಬಳಾ ಮಿತಿ । ಧಾತಾ ಹಿ ನೇಣಿಜೇ ॥ ೮॥

ಅರ್ಥ— ಎಲೈ ಬ್ರಾಹ್ಮಣ ಶ್ರೇಷ್ಠರೇ, ಇನ್ನು ನಮ್ಮೊಳಗಿರುವ ಮಹತ್ವದ ಸೇನಾನಾಯಕರ ಹೆಸರುಗಳನ್ನು ನಿದರ್ಶನಾರ್ಥವಾಗಿ ಹೇಳುವೆನು ಕೇಳಿರಿ. ॥ ೪॥ ಶೌರ್ಯದಿಂದಲೂ, ಬಲದಿಂದಲೂ ಪ್ರತಿ ಸೂರ್ಯನಂತೆ ಪ್ರಕಾಶಿಸುತ್ತಿರುವ ಗಂಗಾನಂದನನಾದ ಭೀಷ್ಮಾಚಾರ್ಯರೂ, ಶತ್ರುರೂಪೀ ಆನೆಗಳಿಗೆ ಕೇವಲ ಸಿಂಹನಂತೆ ಕೋಪಿಸುವ ಆ ಭೀಮ ಪರಾಕ್ರಮಿಯಾದ ಕರ್ಣನು ॥ ೫॥ ಇವರಲ್ಲಿ ಒಬ್ಬೊಬ್ಬರೇ ತಮ್ಮ ಮನಸ್ಸಿಗೆ ಬಂದರೆ ವಿಶ್ವದ ಸಂಹಾರವನ್ನೇ ಮಾಡಿಬಿಡುವರು. ಹೆಚ್ಚಿಗೆ ಹೇಳುವದೇನು ? ಈ ಕೃಪಾಚಾರ್ಯರೊಬ್ಬರೇ ಸಹ ಈ ಕೃತ್ಯವನ್ನು ಮಾಡಲಿಕ್ಕೆ ಸಮರ್ಥರಾಗಿರುವರು. ॥ ೬॥ ಈ ಸ್ಥಳದಲ್ಲಿ ಮಹಾವೀರನಾದ ಕರ್ಣನೂ ಇರುವನು. ಅದರಂತೆ ಅಲ್ಲಿರುವ ಅಶ್ವತ್ಥಾಮನು ಪ್ರತ್ಯಕ್ಷ ಕಾಲಯಮನಿಗೆ ಕೂಡಾ ಭೀತಿದಾಯಕನಾಗಿರುವನು. ॥ ೧೨॥ ಯುದ್ಧದಲ್ಲಿ ಸದೈವ ವಿಜಯಿಯಾದ ಈ ಸೋಮದತ್ತಿಯೂ ಅಲ್ಲದೇ ಪ್ರತ್ಯಕ್ಷ ಬ್ರಹ್ಮದೇವನಿಗೂ ತಿಳಿಯಲಸದಳವಾದ ಪರಾಕ್ರಮ ಉಳ್ಳ ಮಹಾ ವೀರರೂ ಇನ್ನೆಷ್ಟೋ ಇದ್ದಾರೆ. ॥ ೧೦೮॥

ಅನ್ಯೇಚ ಬಹವಃ ಶೂರಾ ಮದರ್ಥೇ ತ್ಯಕ್ತ ಜೀವಿತಾಃ ।
ನಾನಾ ಶಸ್ತ್ರ ಪ್ರಹರಣಾಃ ಸರ್ವೇ ಯುದ್ಧ ವಿಶಾರದಾಃ ॥ ೯॥

[ಅನ್ಯೇಚ ಬಹವಃ ಶೂರಾ ಇತಿ] ಜೇ ಶಸ್ತ್ರವಿದ್ಯಾ ಪಾರಂಗತ । ಮಂತ್ರಾವತಾರ ಮೂರ್ತ । ಹೋ ಕಾ ಜೇ ಅಸ್ತ್ರಜಾತ । ಏಥೂನಿ ರೂಢ ॥ ೯॥ ಹೇ ಅಪ್ರತಿಮಲ್ಲ ಜಗೀ । ಪ್ರರತಾ ಪ್ರತಾಪ ಆಂಗೀ । ಪರೀ ಸರ್ವಪ್ರಾಣೇ ಮಜಚಿ ಲಾಗೀ । ಆರಾಯಿಲೇ ಅಸತಿ ॥ ೧೦॥ ಪತಿವ್ರತೇಚೆ ಹೃದಯ ಜೈಸೇ ।

ಪತಿವಾಂಛೂನಿ ನ ಸ್ಪರ್ಶೇ । ಮೀ ಸರ್ವಸ್ವ ಯಾ ತೈಸೇ । ಸುಭಟಾಸೀ ॥೧೧॥ ಆಮುಚಿಯಾ ಕಾಜಾಚೇ ನಿಪಾಡೇ । ದೇಖತೀ ಆಪುಲೇ ಜೀವಿತ ಥೋಕಡೇ । ಐಸೇ ನಿರವಧಿ ಜೋಖಡೇ । ಸ್ವಾಮಿಭಕ್ತ ॥೧೨॥ ಜುಂಝುತಿ ಕುಳಕಣಿಂ ಜಾಣತೀ । ಕಳೀ ಕೀರ್ತಿಸೀ ಚಿತೀ । ಹೇ ಬಹು ಅಸೋ ಕ್ಷತ್ರಾ ನೀತಿ । ಯಥೋ ನಿಯಾ ॥ ೧೩ ॥ ಐಸೇ ಸರ್ವಾಪಯೀ ಪುರತೇ । ವೀರದಳೀ ಆಮುತೇ । ಆತಾ ಕಾಯಗಣೂ ಯಾತೇ । ಅಪಾರ ಹೇ ॥ ೧೪ ॥

ಅರ್ಥ— ಅವರು ಶಸ್ತ್ರವಿದ್ಯೆಯಲ್ಲಿ ನಿಪುಣರೂ, ಮೂರ್ತಿಮಂತ ಸುಂತ್ರಾನಕಾರರೂ, ಹೆಚ್ಚೇನು ಅಸ್ತ್ರವಿದ್ಯೆಯು ಪ್ರಸಿದ್ಧಿಗೆ ಬಂದುದೇ ಇವರಿಂದ. ॥ ೯ ॥ ಇವರು ಅಪ್ರತಿಮ ಪರಾಕ್ರಮಿಗಳೂ, ಬಲವಂತರೂ ಇದ್ದು ಈ ಜಗತ್ತಿನಲ್ಲಿ ಇವರ ಸಮಾನರಾವ ಯುದ್ಧವಿಶಾರದರು ಯಾರೂ ಇರುವದಿಲ್ಲ. ಆದರೆ ಅವರು ಜೀವಭಾವದಿಂದ ನನ್ನನ್ನೇ ಆಶ್ರಯಿಸಿರುವರು. ॥ ೧೦ ॥ ಪತಿವ್ರತೆಯ ಮನಸ್ಸು ತನ್ನ ಪತಿಯ ಹೊರ್ತು ಅನ್ಯ ಸ್ಥಳದಲ್ಲಿ ಸೇರುವದಿಲ್ಲ. ಆದರೆ ಕೇವಲ ಪತಿಯನ್ನೇ ಆಶ್ರಯಿಸಿರುವದು ಅದರಂತೆಯೇ ಈ ವೀರರಿಗೆ ನಾನು ಪ್ರಾಣದಂತೆ ಪ್ರೀಯನಾಗಿರುವೆನು. ॥ ೧೧ ॥ ಇವರು ಸ್ವಾಮಿಭಕ್ತಿಯಲ್ಲಿ ಧೃಡವಾದ ವಿಶ್ವಾಸಪಳ್ಳವರಾಗಿರುವರು. ಯಾಕಂದರೆ ಅವರು ನಮ್ಮ ಕಾರ್ಯದ ಮುಂದೆ ತಮ್ಮ ಪ್ರಾಣವನ್ನು ಸಹ ತುಚ್ಛವೆಂದು ತಿಳಿದಿರುವರು. ಇವರು ಯುದ್ಧಕಲೆಯಲ್ಲಿ ಬಹು ಚತುರರಲ್ಲದೇ ಸರ್ವಕಲೆಗಳಲ್ಲಿ ನಿಪುಣರೂ, ಕೀರ್ತಿಶಾಲಿಗಳೂ ಇರುವರು. ಬಹಳ ಹೇಳುವದೇನು ಕ್ಷತ್ರಧರ್ಮವು ಬೆಳಕಿಗೆ ಬಂದುದು ಇವರಿಂದಲೇ. ॥ ೧೩ ॥ ಹೀಗೆ ನಮ್ಮ ಸೈನ್ಯದಲ್ಲಿ ಶೂರರಾದ ಯುದ್ಧಪಟುಗಳೂ, ಅಗಣಿತ ಮಹಾವೀರರೂ ಇರುವರು. ಅವರು ಅಪಾರವಾಗಿರುವರು. ಅವರ ಎಣಿಕೆಯನ್ನು ಹೇಗೆ ಮಾಡುವದು ? ॥ ೧೪ ॥

ಅಪರ್ಯಾಪ್ತಂ ತದಸ್ಮಾಕಂ ಬಲಂ ಭೀಷ್ಮಾಭಿರಕ್ಷಿತಂ ।
ಪರ್ಯಾಪ್ತಂ ತ್ವಿದಮೇತೇಷಾಂ ಬಲಂ ಭೀಮಾಭಿರಕ್ಷಿತಂ ॥ ೧೦ ॥

[ಅಪರ್ಯಾಪ್ತಾಮಿತಿ] ಪಾಂ ಕ್ಷತ್ರಿಯಾ ಮಾಜಿ ಶ್ರೇಷ್ಠ । ಜೋ ಜಗಜೇತೀ ಜಗೀ ಸುಭಟ । ತಯಾ ದಳಪೈ ಪರಾಷಾ ಪಾಟ । ಭೀಷ್ಮಾಸಿನೈ ॥ ೧೫ ॥ ಆತಾ ಯಾಚೇನಿ ಬಳೇ ಗವಸಲೇ । ಹೇ ದುರ್ಗ ಜೈಸೇ ಪನ್ನಾಸಿಲೇ । ಯೆಸೇ ಪಾಡೇ ಧೇಕುಲೆ । ಲೋಕತ್ರಯ ॥ ೧೬ ॥ ಆಧೀಚ ಸಮುದ್ರಪಾಹೀ । ತೇಥ ದುವಾಡಪಣ ಕವಣಾ ನಾಹಿ । ಮಗ ವಡವಾನಳ ತೈಸೇಯಾಹಿ । ವಿರಜಾ ಜೈಸಾ ॥ ೧೭ ॥ ನಾತರಿ ಪ್ರಲಯನಸ್ಥಿ ಮಹಾವಾತ । ಯಾ ದೋಘಾ ಜೈಸಾ ಸಾಂಘಾತ । ತೈಸಾ ಹಾಗಂಗಾಸುತ । ಸೇನಾಪತಿ ॥ ೧೮ ॥ ಅತಾ ಯೇಣೇಸೀ ಕವಣ ಭಿಡೇ । ಹೇ ಪಾಂಡವ ಸೈನ್ಯಕೇರ ಥೋಕಡೆ । ವರಚಿಲೇ ನಿ ಪಾಡೆ । ದಿಸತ ಅಸೆ ॥ ೧೯ ॥ [ಇದಮಿತಿ] ಪರೀ ಭೀಮಸೇನ ಬೇಧು । ತೋ ಜಾಹಲಾ ಅಸೆ ಸೇನಾನಾಧು । ಐಸೇ ಬೋಲೋನಿಯಾ ಮಾತು । ಸಾಂಡಿಲೀತೆಸೇ ॥ ೨೦

ಅರ್ಥ— ಎಲ್ಲ ಕ್ಷತ್ರಿಯರಲ್ಲಿಯೂ ಯುದ್ಧಪಿಶಾರದರಲ್ಲಿಯೂ ಶ್ರೇಷ್ಠರೂ ವ್ರತಾಪಶಾಲಿಗಳೂ ಆದ ಭೀಷ್ಮಾಚಾರ್ಯರ ಕಡೆಗೆ ಎಲ್ಲ ಸೈನ್ಯವು ಆಧಿಪತ್ಯವನ್ನು ಕೊಟ್ಟಿರುತ್ತದೆ. ॥ ೧೫ ॥ ಭೀಷ್ಮರು ಈ ಎಲ್ಲ ಸೈನ್ಯವನ್ನು ಕೂಡಹಾಕಿ ಒಳ್ಳೇ ಯುಕ್ತಿಯಿಂದ ರಚನೆಯನ್ನು ಮಾಡಿರುವರು. ಅವನ್ನು ನೋಡಿದರೆ ಬಂದು ಕಿಲ್ಮೆಯನ್ನು ಕಚ್ಚಿದಂತೆ ತೋರುತ್ತದೆ. ಅವರ ಪರಾಕ್ರಮದ ಮುಂದೆ ಸ್ವರ್ಗ, ಮೃತ್ಯು, ಪಾತಾಳ ಈ ಮೂರು ಲೋಕಗಳೂ ಸಹ ತುಚ್ಛವಾಗಿರುವವು. ॥ ೧೬ ॥ ವಿಚಾರ ಮಾಡಿ ನೋಡಿದರೆ, ಸಮುದ್ರವು ಮೊದಲೇ ದುಸ್ತರವಾದುದು. ಅದಕ್ಕೆ ವಡವಾನಲದ ಜೊತೆಯು ಸಿಕ್ಕುಮೇಲೆ ಕೇಳುವದೇನು? ॥ ೧೭ ॥ ಇಲ್ಲವೇ ಪ್ರಲಯಾಗ್ನಿಗೆ ಬಿರುಗಾಳಿಯ ಸಹಾಯವಾಗಿ ಅದ್ಭುತವಾದ ಸಂಯೋಗವಾಗುವಂತೆ ನಮ್ಮ ಈ ಅಪರಿಮಿತವಾದ ಸೈನ್ಯಕ್ಕೆ ಗಂಗಾನಂದನರಾದ ಭೀಷ್ಮರು ಸೇನಾಪತಿಯಾಗಿ ದೊರಕಿರುವದರಿಂದ ॥ ೧೮ ॥ ನಮ್ಮ ಈ ಸೈನ್ಯದ ಸಂಗಡ ಯುದ್ಧಮಾಡಲಿಕ್ಕೆ ಯಾರು ಸಮರ್ಥರಿರುವರು ? ಪಾಂಡವರ

ಸೈನ್ಯವು ನಿಜವಾಗಿ ತೀರ ಸ್ವಲ್ಪವಿದ್ದಾಗ್ಯೂ ಆ ಸೈನ್ಯದ ರಚನೆಯು ಮಾತ್ರ ಬಹು ದೊಡ್ಡದಾಗಿ ತೋರುವದು ॥ ೧೯ ॥ ಪಾಂಡವರ ಸೇನಾಧಿಪತ್ಯವನ್ನು ವಜ್ರದೇಹಿಯಿದ್ದು, ಜಡನಾಗಿರುವ ಭೀಮನು ಸ್ವೀಕಾರಮಾಡಿರುವನು. ಇಷ್ಟು ಹೇಳಿದರೂ ಕೂಡ ದ್ರೋಣಾಚಾರ್ಯರ ಮನಸಿನ ಮೇಲೆ ಯಾವ ಪರಿಣಾಮವೂ ಆಗದಿರುವದನ್ನು ಕಂಡು ದುರ್ಯೋಧನನು ಸ್ಫುರ್ತಿನಾದನು. ॥ ೧೭೦ ॥

ಅಯನೇಷು ಚ ಸರ್ವೇಷು ಯಥಾಭಾಗ ಮವಸ್ಥಿತಾಃ ।
ಭೀಷ್ಮ ಮೇವಾಭಿರಕ್ಷಂತು ಭವಂತಃ ಸರ್ವ ಏವಹಿ ॥ ೧೧ ॥

[ಅಯನೇಷು ಚೇತಿ] ಮಗ ಪುನರಪಿ ಕಾಯಬೋಲೆ । ಸಕಳ ಸೈನಿಕಾತೇ ಮ್ಹಣಿತಲೇ । ಆತಾ ದಳಭಾರ ಆಪುಲಾಲೆ । ಸರಸೇ ಕರಾ ॥ ೨೧ ॥ ಜಯಾ ಜಯಾ ಅಕ್ಷೌಹಿಣೀ । ತೇಣೇ ತಿಯಾ ಆರಣೀ । ವರಗಣ ಕವಣ ಕವಣೀ । ಮಹಾರಥಿಯಾ ॥ ೨೨ ॥ ತೇಣೇ ತಿಯಾ ಆವರಿಜೇ । ಭೀಷ್ಮಾತಳೀ ರಾಹಿಜೆ । ದ್ರೋಣಾತೇಮ್ಹಣೇ ಪಾಹಿಜೇ । ತುಮ್ಹೀಸಕಳ ॥ ೨೩ ॥ ಹಾಚಿ ಏಕರಕ್ಷಾವಾ । ಮೀ ತೈಸಾ ಪಾ ದೇಖಾವಾ । ಏಸೆ ದಳಭಾರ ಆಘವಾ । ಸಾಚ ಅಮುಚಾ ॥ ೨೪ ॥

ಅರ್ಥ— ಆ ಮೇಲೆ ಎಲ್ಲ ಸೇನಾನಾಯಕರನ್ನು ಕುರಿತು ದುರ್ಯೋಧನರಾಜನು ಅನ್ನುತ್ತಾನೆ. "ಎಲ್ಲರೂ ನಿಮ್ಮ ನಿಮ್ಮ ಸೈನ್ಯವನ್ನು ಸಿದ್ಧಪಡಿಸಬೇಕು. ॥ ೨೧ ॥ ಅಕ್ಷೌಹಿಣೀ ಸೈನ್ಯವಿದ್ದ ಆ ಮಹಾರಥಿಗಳೆಲ್ಲರೂ ತಮ್ಮ ತಮ್ಮ ಸೈನ್ಯದ ಮುಂದೆ ನಿಲ್ಲಬೇಕು ॥ ೨೨ ॥ ಮತ್ತು ಎಲ್ಲರೂ ತಮ್ಮ ತಮ್ಮ ಅಕ್ಷೌಹಿಣೀ ಸೈನ್ಯವನ್ನು ಸಂಬಾಳಿಸಿ ಭೀಷ್ಮರ ಆಧೀನವಲ್ಲಿದ್ದುಕೊಂಡು ಅವರ ಅಪ್ಪಣೆಯಂತೆ ನಡೆದುಕೊಳ್ಳಬೇಕು. " ಆ ಮೇಲೆ ಅವನು ದ್ರೋಣಾಚಾರ್ಯರಿಗೆ ಅನ್ನುತ್ತಾನೆ. "ನೀವು ಎಲ್ಲ ಸೈನ್ಯದ ಸೇಲ್ವಿಚಾರಣೆಯನ್ನು ಮಾಡಬೇಕು. ॥೨೩॥ ಭೀಷ್ಮಪಿತಾಮಹನನ್ನು ನನ್ನಂತೆಯೇ ತಿಳಿದು ಅವರನ್ನು ರಕ್ಷಿಸಬೇಕು. ಯಾಕಂದರೆ ನನ್ನ ಎಲ್ಲ ಸೈನ್ಯದ ಭಾರವು ಅವರನ್ನೇ ಅವಲಂಬಿಸಿರುವದು. ॥೨೪॥

ಸಂಜಯ ಉವಾಚ—

ತಸ್ಯ ಸಂಜನಯನ್ ಹರ್ಷಂ ಕುರುವೃದ್ಧಃ ಪಿತಾಮಹಃ ।
ಸಿಂಹನಾದಂ ವಿನದ್ಯೋಚ್ಚೈಃ ಶಂಖಂದಧ್ಮೌ ಪ್ರತಾಪವಾನ್ ॥ ೧೨ ॥

[ತಸ್ಯ ಸಂಜನಯನ್ನಿತಿ] ಯಾ ರಾಜಯಾಚಿಯಾ ಬೋಲಾ । ಸೇನಾಪತಿ ಸಂತೋಷಲಾ । ಮಗ ತೇಣೇ ಕೇಲಾ ಸಿಂಹನಾವ ॥ ೨೫ ॥ ತೋ ಗಾಜತ ಅಸೇ ಅದ್ಭುತ । ದೋಹೀ ಸೈನ್ಯ ಆತ । ಪ್ರತಿಧ್ವನಿ ನಸಮಾತ । ಉಪಜತ ಅಸೆ ॥ ೨೬ ॥ ತಯಾಚಿ ತುಲಗಾಸವೆ ವೀರವೃತ್ತಿ ಚೇನಿ ಥಾವೆ । ದಿವ್ಯಶಂಖ ಭೀಷ್ಮದೇವೆ । ಆಸ್ಫುಲಾ ॥ ೨೭ ॥ ತೇ ದೋಸ್ಹೀ ನಾದ ಮಿನಲೇ । ತೇಥ ತ್ರೈಲೋಕ್ಯ ಬಧಿರೀ ಭೂತ ಜಾಹಲೇ । ಜೈಸೆ ಆಕಾಶ ಕಾ ಪಡಲೆ । ತುಟೋನಿಯಾ ॥ ೨೮ ॥ ಘುಘಘಡೀತ ಅಂಬರ । ಉಚಂಬಳತ ಸಾಗರ । ಕ್ಷೋಭಲೇ ಚರಾಚರ । ಕಾಂಪತ ಅಸೆ ॥ ೨೯ ॥ ತೇಣೇ ಮಹಾಘೋಷ ಗಜರೆ । ದುಮದುಮಿತೀ ಗಿರಿಕಂದರೆ । ತವ ದಳಾ ಮಾಜಿ ರಣತುರೆ । ಅಸ್ಫುರಲೀ ॥ ೧೩೦ ॥

ಅರ್ಥ— ದುರ್ಯೋಧನರಾಜನ ಈ ಭಾಷಣವನ್ನು ಕೇಳಿ ಭೀಷ್ಮನಿಗೆ ಬಹಳೇ ಸಂತೋಷವಾಗಿ ಸಿಂಹ ಗರ್ಜನೆಯನ್ನು ಮಾಡಿದನು ॥ ೨೫ ॥ ಆ ಗರ್ಜನೆಯೂ ಎರಡೂ ಸೈನ್ಯಗಳಲ್ಲಿ ಗಲಭೆಯನ್ನುಂಟು ಮಾಡಿತು. ಆ ಗರ್ಜನೆಯ ಪ್ರತಿಧ್ವನಿಯು ಆಕಾಶಮಂಡಲವನ್ನೆಲ್ಲ ವ್ಯಾಪಿಸಿತು. ॥ ೨೬ ॥ ಆ ಪ್ರತಿ ಧ್ವನಿಯು ಹೊರಡು ವಷ್ಟರಲ್ಲಿ ವೀರ ವೃತ್ತಿಯ ಬಲದಿಂದ ಭೀಷ್ಮನು ತನ್ನ ದಿವ್ಯವಾದ ಶಂಖವನ್ನು ಊದಿದನು ॥ ೨೭ ॥ ಆ ಎರಡೂ

ಧ್ವನಿಗಳು ಒಟ್ಟುಗೂಡಿದ ಕೂಡಲೇ ಆಕಾಶದಲ್ಲಿ ಭೂಡಭೂಡಾಟ ಶಬ್ದವು ಉದ್ಭವಿಸಿ ಆಕಾಶವೇ ಬಿರಿದು ಬೀಳುವದೋ ಎಂಬಂತೆ ಭಾಸವಾಯಿತು. ಮತ್ತು ಮೂರು ಲೋಕಗಳಲ್ಲಿಯ ಎಲ್ಲರ ಕಿವಿಗಳೂ ಗಡುಚಿಕ್ಕಿದವು ॥ ೨೮ ॥ ಆ ಕಾಲಕ್ಕೆ ಆಕಾಶದಲ್ಲಿ ಭೂಡಭೂಡಾಟ ಶಬ್ದವು ಘಂಟಾಗಿ ಅದೊಂದು ಭೀಕರ ಸ್ವರೂಪವನ್ನು ತಾಳಿತು. ಸಮುದ್ರವು ಉಕ್ಕೇರಿತು ಮತ್ತು ಈ ಸ್ಥಾವರ ಜಂಗಮಾತ್ಮಕ ವಿಶ್ವವು ಗಾಬರಿಯಾಗಿ ಬಿಟ್ಟಿತು. ಪೃಥ್ವಿಯು ಥರಥರ ನಡುಗಿತು ॥ ೨೯ ॥ ಮತ್ತು ಈ ಮಹಾಧ್ವನಿಯ ಘೋಷದಿಂದ ಪರ್ವತಗಳ ಗುಹೆಗಳಲ್ಲಿ ಸಹ ಪ್ರತಿಧ್ವನಿಯು ಉಂಟಾಯಿತು. ಹೀಗೆಲ್ಲ ನಡೆದಿರುವ ಸಮಯದಲ್ಲಿ ಆ ಸೈನ್ಯದೊಳಗೆ ರಣವಾದ್ಯಗಳನ್ನು ಬಾರಿಸಲಿಕ್ಕೆ ಹತ್ತಿದರು ॥ ೩೦ ॥

ತತಃ ಶಂಖಾಶ್ಚ ಭೇರ್ಯಶ್ಚ ಪಣವಾನಕ ಗೋಮುಖಾಃ ।
ಸಹಸೈ ವಾಭ್ಯ ಹನ್ಯಂತ ಸ ಶಬ್ದಸ್ತುಮುಲೋ ಭವತ್ ॥ ೧೩ ॥

[ತತಃ ಶಂಖಾಇತಿ] ಉದಂಡ ಸೈಭ ವಾಜತೇ । ಭಯಾನಕೇ ಖಾಖಾತೇ । ಮಹಾ ಪ್ರಳಯಜೇಥೆ । ಧೋಕಡಾಸೀ ॥ ೩೧ ॥ ಭೇರೀ ನಿಶಾಣ ಮಾಂದಳ । ಶಂಖಕಾಹಳಾ ಭೋಗಳ । ಆಣಕೆಭಯಾಸೂರ ರಣಕೋಲ್ಹಾಳಸುಭಟಾಂಚೆ ॥ ೩೨ ॥ ಆವೇಶೇ ಭುಜಾ ತ್ರಾಪಾಟಿತೀ । ವಿಸಣತೇಲೇ ಹಾಂಕಾ ದೇತೀ । ಜೇಥ ಮಹಾಮವ ಭವ್ರಜಾತೀ । ಆವರತೀ ನಾ ॥ ೩೩ ॥ ತೇಥ ಭೇಡಾಂಚೀ ಕವಣ ಮಾತ । ಕಾಂಚಯಾ ಕೇರಫಿಟತ । ಜೇಣೇ ದಚಕಲಾ ಕೃತಾಂತ । ಆಂಗನೇಫೆ ॥ ೩೪ ॥ ಏಕಾ ಉಭಯಾಚ ಪ್ರಾಣಗೇಲೆ । ಚಾಂಗಾಂಚೆದಾಂತ ಬೈಸಲೇ । ಬಿರುದಾಚೆ ದಾದುಲೇ । ಹಿವತಾತೀ ॥ ೩೫ ॥ ಐಸಾ ಆದ್ಭುತ ತೂರ ಬಂಬಾಳ । ಐಕೋನಿ ಬ್ರಹ್ಮಾ ವ್ಯಾಕುಳ । ದೇವ ಮ್ಹಣತೀ ಪ್ರಳಯ ಕಾಳ । ವೋಢವಲಾ ಆಜೀ ॥ ೩೬ ॥

ಅರ್ಥ— ಉದ್ದಂಡವಾದ ರಣವಾದ್ಯಗಳ ಧ್ವನಿಯು ಭಯಂಕರವಾಗಿಯೂ ಕರ್ಕಶವಾಗಿಯೂ ಎಲ್ಲೆಲ್ಲಿಯೂ ತುಂಬ ಹೋಗಿರಲು ಆ ರಣಭೂಮಿಯಲ್ಲಿದ್ದ ಪರಾಕ್ರಮಿಗಳಿಗೆ ಕೂಡ ಪ್ರಳಯಕಾಲವು ಸಮೀಪಿಸಿತೆಂಬಂತೆ ತೋರಿತು ॥ ೩೧ ॥ ನೌಬತ್ತು ನಿಶಾನೆ, ಶಂಖ, ಝಾಂಗಟೆ, ತುತೂರಿ ಮುಂತಾದ ನಾನಾಪ್ರಕಾರದ ರಣವಾದ್ಯಗಳ ಧ್ವನಿಯೂ ಶೂರ ಪರಾಕ್ರಮಿಗಳ ಯುದ್ಧೋತ್ಸಾಹದ ರಣಕಲ್ಲೋಲವೂ ಪ್ರಾರಂಭವಾದವು. ॥ ೩೨ ॥ ಕೆಲವರು ಆ ವೇಶದಿಂದ ಸಡ್ಡು ಹೊಡೆಯುತ್ತಲಿದ್ದರು, ಕೆಲವರು ಎಚ್ಚರದಪ್ಪಿ ದೊಡ್ಡ ಧ್ವನಿಯಿಂದೂ ಕೂಗಿಡುತ್ತಲಿದ್ದರು, ಮತ್ತು ಮಮೋನ್ಮತ್ತವಾದ ಆನೆಗಳು ಎಚ್ಚರದಪ್ಪಿ ಹೋಗಿ ಮಾಪುತರಿಗೆ ಅಸುಕೊಳ್ಳದಂತಾದವು. ॥ ೩೩ ॥ ಆ ಸ್ಥಳದಲ್ಲಿ ಅಂಜುಬುರುಕರ ಸ್ಥಿತಿಯನ್ನು ಏನೆಂದು ಕೇಳುವದು ! ಬೆದರಿದವರೆಲ್ಲರೂ ಕಸದಂತೆ ಹಾರಿ ಹೋದರು. ಯಮುದೇವನಿಗೆ ಸಹ ಭಯವುಂಟಾಗಿ ಅವನು ರಣಾಂಗಣದ ಕಡೆಗೆ ಮೋರೆ ತಿರುವಿ ನೋಡದಾದನು. ॥ ೩೪ ॥ ಎಷ್ಟೋ ಜನರು ನಿಂತ ನಿಂತಲ್ಲಿಯೇ ಪ್ರಾಣವನ್ನು ನೀಗಿದರು. ಧೈರ್ಯಶಾಲಿಗಳಿದ್ದವರ ಹಲ್ಲುಗಳು ಕುಳಿತು ಬಿಟ್ಟವು. (ಗಟಗರಿಸಿದವು.) ಹೆಸರು ವಾಸಿಗಳಾದ ಯುದ್ಧವಿಶಾರದರ ಶರೀರಗಳು ನಡುಗ ತೊಡಗಿದವು. ॥ ೩೫ ॥ ಈ ಪ್ರಕಾರದ ವಾದ್ಯ ಧ್ವನಿಗಳನ್ನು ಕೇಳಿ ಬ್ರಹ್ಮದೇವರು ಸಹ ವ್ಯಾಕುಲಪಟ್ಟರು. ಮತ್ತು ಇಂದ್ರಾದಿ ದೇವತೆಗಳು ಈ ಹೊತ್ತಿನದಿವಸ ಪ್ರಳಯಕಾಲವೇ ಬಂದೊದಗಿತು. ಎಂದು ಮಾತನಾಡತೊಡಗಿದರು. ॥ ೩೬ ॥

ತತಃ ಶ್ವೇತೈರ್ಹಯೈರ್ಯುಕ್ತೇ ಮಹತಿ ಸ್ಯಂದನೇ ಸ್ಥಿತೌ ।
ಮಾಧವಃ ಪಾಂಡವಶ್ಚೈವ ದಿವ್ಯೌ ಶಂಖೌ ಪ್ರದಧ್ಮತುಃ ॥ ೧೪ ॥
ಪಾಂಚಜನ್ಯಂ ಹೃಷೀಕೇಶೋ ದೇವದತ್ತಂ ಧನಂಜಯಃ ।
ಪೌಂಡ್ರಂ ದಧ್ಮೌ ಮಹಾಶಂಖಂ ಭೀಮಕರ್ಮಾ ವೃಕೋದರಃ ॥ ೧೫ ॥

ಅನಂತವಿಜಯಂ ರಾಜಾ ಕುಂತಿ ಪುತ್ರೋ ಯುಧಿಷ್ಠಿರಃ ।
ನಕುಲಃ ಸಹದೇವಶ್ಚ ಸುಘೋಷ ಮಣಿ ಪುಷ್ಪಕೌ ॥ ೧೬ ॥

[ತತಃ ಶ್ವೇತೈರಿತಿ] ಐಸೀ ಸ್ವರ್ಗೀ ಮಾತ । ದೇಖೋನಿ ತೋ ಆಕಾಂತ । ತವ ಪಾಂಡವ ದಳಾ ಆಂತ । ವರ್ತಲೇ ಕಾಯೀ ॥ ೩೭ ॥ ಹೋ ಕಾ ನಿಜಸಾರ ವಿಜಯಾಚೆ । ಕೀ ತೇ ಭಾಂಡಾರ ಮಹಾತೇಜಾಚೇ । ಜೇಥ ಗರುಡಾಚಿಯೇ ಜಾವಳಿಚೇ । ಕಾತಲೇ ಚಾರ್ಹೀ ॥ ೩೮ ॥ ಕೀ ಪಾಂಖಾಂಚಾ ಮೇರೂ ಜೈಸಾ । ರಹವರ ಮಿರವ ತಸೇ ತೈಸಾ । ತೇಜೇ ಕೋಂದಾಟಲಿಯಾ ದಿಸಾ । ಜಯಾ ಚೇನಿ ॥ ೩೯ ॥ ಜೇಥ ಅಶ್ವವಾಹಕ ಆಪಣ । ವೈಕುಂಠೀಚಾ ರಾಣಾ ಜಾಣ । ತಯಾ ರಥಾಚೇ ಗುಣ । ಕಾಯ ವರ್ಣೂ ॥ ೧೪೦ ॥ ಧ್ವಜಸ್ತಂಭಾವರೀ ವಾನರ । ತೋ ಮೂರ್ತಿಮಂತ ಶಂಕರ । ಸಾರಥೀ ಶಾರ್ಙ್ಗಧರ । ಅರ್ಜುನೇಸೀ ॥ ೪೧ ॥ ದೇಖಾ ನವಲ ತಯಾ ಪ್ರಭೂಚೇ । ಅದ್ಭುತ ಪ್ರೇಮಭಕ್ತಾಂಚೆ । ಜೇ ಸಾರಥ್ಯಪಣ ಪಾರ್ಥಾಚೇ । ಕರೀತ ಅಸೇ ॥ ೪೨ ॥ ಪಾಈಕು ಪಾರಿಸೀ ಘಾತಲಾ । ಆಪಣ ಪುಢಾ ರಾಹಿಲಾ । ತೇಣೇ ಪಾಂಚಜನ್ಯ ಆಸ್ಫುರಿಲಾ । ಅವಲೀಳಾಜೀ ॥ ೪೩ ॥ ಪರೀ ತೋ ಮಹಾಘೋಷ ಥೋರು । ಗರ್ಜತ ಅಸೇ ಗಹಿರು । ಜೈಸೇ ಉದೇಲಾ ಲೋಪೀ ದಿನಕರು । ನಕ್ಷತ್ರಾಂತೇ ॥ ೪೪ ॥ ತೈಸೇ ತೂರಬಂಬಾಳ ಭಂಪತೇ । ಕೌರವಪಳೀ ಗಾಜತ ಹೋತೇ । ತೇ ಹಾರಪೋನಿ ನೇಣೋ ಕೇ ಉತೇ । ಗೇಲೇ ತೇಥೇ ॥ ೪೫ ॥ ತೈಸಾಚಿ ದೇವೀ ಯೇರೀ । ನಿನಾದೇ ಅತಿ ಗಜರೇ । ದೇವದತ್ತ ಧನುರ್ಧರೇ । ಆಸ್ಫುರಿಲಾ ॥ ೪೬ ॥ ತೇ ದೋಸೀ ಶಬ್ದ ಅಚಾಟ । ಮಿನಲೇ ಏಕವಟ । ತೇಥ ಬ್ರಹ್ಮಕಟಾಹ ಶತಕೂಟ । ಹೋ ಪಾಹತ ಅಸೇ ॥ ೪೭ ॥ ತವ ಭೀಮಸೇನ ವಿಸಣೇಲಾ । ಜೈಸಾ ಮಹಾಕಾಳ ಖವಳಲಾ । ತೇಣೆ ಪೌಂಡ್ರು ಆಸ್ಫುರಿಲಾ । ಮಹಾ ಶಂಖ ॥ ೪೮ ॥ ತೋಮಹಾ ಪ್ರಲಯ ಜಲಧರ । ಜೈಸೇ ಗಡಗಡಿತ ಗಹಿರ । ತವ ಅನಂತ ವಿಜಯ ಯುಧಿಷ್ಠಿರ । ಆಸ್ಫುರಿತ ಅಸೇ ॥ ೪೯ ॥ ನಕುಳೇ ಸುಘೋಷ । ಸಹ ದೇವೇ ಮಣಿಪುಷ್ಪಕ । ಜೇಣೇ ನಾದೇ ಅಂತಕ । ಗಜಬಜಲಾ ಠಾಕೇ ॥ ೧೫೦ ॥

ಅರ್ಥ— ಹೀಗೆ ಸ್ವರ್ಗಲೋಕದಲ್ಲಿ ಗಲಭೆಯೆದ್ದಿರಲು (ಗೊಂದಲು) ಇತ್ತ ಕಡೆಗೆ ಪಾಂಡವ ಸೈನ್ಯದಲ್ಲಿ ಏನು ನಡೆದಿರುವದೆಂಬುದನ್ನು ನೋಡಿರಿ. ॥ ೩೭ ॥ ಅರ್ಜುನನ ರಥವು ವಿಜಯದ ಪ್ರತ್ಯಕ್ಷತೆ ತೌರುಮನೆಯಾಗಿದ್ದು, ಪ್ರಫುಲ್ಲಿತವಾದ ತೇಜದ ಕೇವಲ ಭಾಂಡಾರವೇ ಆಗಿದ್ದಿತು. ಮತ್ತು ಆ ರಥಕ್ಕೆ ಗರುಡನಂತೆ ವೇಗವುಳ್ಳ ನಾಲ್ಕು ಕುದುರೆಗಳನ್ನು ಹೂಡಿದ್ದು ॥ ೩೮ ॥ ಆ ಶ್ರೇಷ್ಠ ರಥವು ಪಕ್ಕದಿಂದ ಯುಕ್ತವಾದ ಮೇರೂ ಪರ್ವತದೋಪಾದಿಯಲ್ಲಿ ಶೋಭಾಯಮಾನವಾಗಿ ಕಂಗೊಳಿಸುತಲಿದ್ದಿತು. ಆ ರಥದ ತೇಜದಿಂದ ಹತ್ತೂ ದಿಕ್ಕುಗಳು ಮಿಂಚಿನಂತೆ ಹೊಳೆಯುತ್ತಿದ್ದವು. ॥ ೩೯ ॥ ಯಾವ ರಥದ ಮೇಲೆ ಪ್ರತ್ಯಕ್ಷ ವೈಕುಂಠಾಧಿಪತಿ ಶ್ರೀಕೃಷ್ಣ ಪರಮಾತ್ಮನು ಸಾರಥಿಯಾಗಿರುವನೋ, ಆ ರಥದ ಗುಣವರ್ಣನೆಯನ್ನು ಮಾಡುವದು ಯಾರಿಂದ ಸಾಧ್ಯವು ? ॥ ೧೪೦ ॥ ಸಾಕ್ಷಾತ್ ಶ್ರೀ ಶಂಕರಾವತಾರನಾದ ಮಾರುತಿರಾಯನು ಧ್ವಜಸ್ತಂಭದ ಮೇಲೆ ಕುಳಿತಿರುವನು. ಮತ್ತು ಆ ರಥದಲ್ಲಿ ಶಾರ್ಙ್ಗ ಪಾಣಿಯಾದ ಭಗವಾನ್ ಶ್ರೀಕೃಷ್ಣನು ಅರ್ಜುನನ ಸಾರಥಿಯಾಗಿರುವನು. ॥ ೪೧ ॥ ಆ ಪರಮಾತ್ಮನ ಆಶ್ಚರ್ಯಕರವಾದ ಅದ್ಭುತ ಪ್ರೇಮವನ್ನು ನೋಡಿರಿ. ಭಕ್ತರ ಮೇಲಿನ ಅತ್ಯಂತ ಪ್ರೇಮ ವಾತ್ಸಲ್ಯದಿಂದ ಅರ್ಜುನನ ಸಾರಥ್ಯ ಕೆಲಸವನ್ನು ಮಾಡುತ್ತಿರುವನು. ॥ ೪೨ ॥ ತನ್ನ ಸೇವಕನನ್ನು ತನ್ನ ಬೆನ್ನ ಹಿಂದೆ ಹಾಕಿಕೊಂಡು ತಾನು ಮುಂದೆ ಕುಳಿತಂಥ ಭಗವಾನ್ ಶ್ರೀಕೃಷ್ಣನು ತನ್ನ ಪಾಂಚಜನ್ಯವೆಂಬ ಶಂಖವನ್ನು ಸಹಜವಾಗಿ ಲೀಲೆಯಿಂದ ಊದಿದನು. ॥ ೪೩ ॥ ಆದರೆ ಸೂರ್ಯೋದಯವಾದ ಮೇಲೆ ನಕ್ಷತ್ರಗಳು ಅಡಗುವಂತೆ ಶಂಖದ ದೊಡ್ಡ ಧ್ವನಿಯಿಂದ ॥ ೪೪ ॥ ಕೌರವರ ಸೈನ್ಯದಲ್ಲಿಯ ಮೊಳಗತಕ್ಕಂತ ವಾದ್ಯ ಧ್ವನಿಯು

ಎಲ್ಲ ಕಡೆಗೂ ಅಡಗಿ ಹೋಯಿತು. ಆದರೆ ಆ ಧ್ವನಿಯು ಅಡಗಿ ಹೋದುದೆಲ್ಲಿ ಎಂಬುದೇತಿಳಿಯದಾಯಿತು. ॥ ೪೫ ॥ ಅದೇ ಪ್ರಕಾರ ಅರ್ಜುನನಾದರೂ ತನ್ನ ದೇವದತ್ತವೆಂಬ ಭಯಂಕರ ನಾದವುಳ್ಳ ಶಂಖವನ್ನು ಒಳ್ಳೇ ಆವೇಶದಿಂದ ಊದಿದನು ॥ ೪೬ ॥ ಆವಾಗ ಎರಡೂ ಶಂಖಗಳ ಅದ್ಭುತ ಧ್ವನಿಗಳು ಒಂದೇ ಕಡೆಗೆ ಕೂಡಿದ್ದರಿಂದ ಬ್ರಹ್ಮಾಂಡವೇ ಒಡೆದು ನೂರಾರು ತುಣುಕುಗಳು ಆಗುತ್ತವೆಯೋ ಎನ್ನುವಂತೆ ತೋರಿತು. ॥ ೪೭ ॥ ಇಷ್ಟರಲ್ಲಿ ಭೀಮಸೇನನಿಗೂ ಆವೇಶಬಂದಿತು. ಅವನು ಮಹಾಕಾಲನಂತೆ ಮೈಮರೆತು ತನ್ನ ಪೌಂಡ್ರವೆಂಬ ಹೆಸರಿನ ಮಹಾಶಂಖವನ್ನೂದಿದನು. ॥ ೪೮ ॥ ಆ ಶಂಖದ ಭಯಾನಕವಾದ ಧ್ವನಿಯು ಮಹಾ ಪ್ರಲಯ ಕಾಲದ ಮೇಘಗರ್ಜನೆಯಂತೆ ಆಗುತ್ತಿರುವಷ್ಟರಲ್ಲಿ ಧರ್ಮರಾಜನು ಅನಂತವಿಜಯವೆಂಬ ಶಂಖವನ್ನು ಊದಿದನು. ॥ ೪೯ ॥ ನಕುಲನು ಸುಘೋಷವನ್ನೂ, ಸಹದೇವನು ಮಣಿಪುಷ್ಪಕವೆಂಬ ಶಂಖವನ್ನೂ ಊದಿದರು. ಆ ನಾದದಿಂದ ಪ್ರತ್ಯಕ್ಷ ಯಮನು ಸಹ ಭಯಗ್ರಸ್ತನಾದನು ॥ ೧೫೦ ॥

ಕಾಶ್ಯಶ್ಚ ಪರಮೇಷ್ವಾಸಃ ಶಿಖಂಡೀಚ ಮಹಾರಥಃ ।
ಧೃಷ್ಟದ್ಯುಮ್ನೋ ವಿರಾಟಶ್ಚ ಸಾತ್ಯಕಿಶ್ಚಾ ಪರಾಜಿತಃ ॥ ೧೭ ॥
ದ್ರುಪದೋ ದ್ರೌಪದೇಯಾಶ್ಚ ಸರ್ವಶಃ ಪೃಥಿವೀಪತೇ ।
ಸೌಭದ್ರಶ್ಚ ಮಹಾಬಾಹುಃ ಶಂಖಾನ್ ದಧ್ಮುಃ ಪೃಥಕ್ ಪೃಥಕ್ ॥ ೧೮ ॥
ಸಘೋಷೋ ಧಾರ್ತರಾಷ್ಟ್ರಾಣಾಂ ಹೃದಯಾನಿ ವ್ಯದಾರಯತ್ ।
ನಭಶ್ಚ ಪೃಥಿವೀಂ ಚೈವ ತುಮುಲೋ ವ್ಯನುನಾದಯನ್ ॥ ೧೯ ॥

[**ಕಾಶ್ಯಶ್ಚೇತಿ**] ತೇಥ ಭೂಪತಿ ಹೋತೆ ಅನೇಕ । ದ್ರುಪದ ದ್ರೌಪದೇಯಾದಿಕ । ಹಾಕಾಸೀ ಪತಿ ದೇಖು । ಮಹಾಬಾಹು ॥ ೫೧ ॥ ತೇಥ ಅರ್ಜುನಾಚಾ ಸುತ । ಸಾತ್ಯಕೇ ಅಪರಾಜಿತ । ಧೃಷ್ಟದ್ಯುಮ್ನು ನೃಪನಾಥ । ಶಿಖಂಡೀ ಹನ ॥ ೫೨ ॥ ವಿರಾಟಾದಿ ನೃಪವರ । ಜೇ ಸೈನಿಕ ಮುಖ್ಯ ವೀರ । ತಿಹೀನಾನಾ ಶಂಖ ನಿರಂತರ । ಅಸ್ಫುರಿಲೇ ॥ ೫೩ ॥ ತೇಣೇ ಮಹಾಘೋಷನಿರ್ಘಾತೇ ಶೇಷಕೂರ್ಮ ಅವಚಿತೆ । ಗಜಬಜೋನಿ ಭೂಭಾರಾತೆ । ಸಾಂಡೂ ಪಾಹತೀ ॥ ೫೪ ॥ ತೇಥ ತಿನ್ಹೀ ಲೋಕ ಡಳಮಳಿತ । ಮೇರೂ ಮಾಂದಾರ ಅಂದೋಲಿತ । ಸಮುದ್ರ ಜಳ ಉಸಳತ । ಕೈಲಾಸವರೀ ॥ ೫೫ ॥ ಪೃಥ್ವೀತಳ ಉಲಥೋ ಪಹಾತ । ಆಕಾಶ ಅಸೇ ಆಸುಡತ । ತೇಥ ಸಡಾ ಹೋತ । ನಕ್ಷತ್ರಾಂಚಾ ॥ ೫೬ ॥ ಸೃಷ್ಟಿ ಗೇಲೀರೇ ಗೇಲೀ । ದೇವಾ ಮೋಕಳವಾದೀ ಜಾಹಲೀ । ಐಸೀ ಏಕ ಟಾಳೀ ಪಿಟಲೀ । ಸತ್ಯಲೋಕೀ ॥ ೫೭ ॥ ದಿಹಾಚಿ ದಿನಥೋಕಲಾ । ಜೈಸಾ ಪ್ರಳಯ ಕಾಳ ಮಾಂಡಲಾ । ತೈಸಾ ಹಾಹಾಕಾರ ಜಾಹಲಾ । ತಿಹೀ ಲೋಕೀ ॥ ೫೮ ॥ ತೇ ದೇಖೋನಿ ಆದಿಪುರುಷ ವಿಸ್ಮಿತ । ಮ್ಹಣೆ ಝುಣೆ ಹೋಯಪಾ ಅಂತ । ಮಗ ಲೋಪಲಾ ಅದ್ಭುತ । ಸಂಭ್ರಮ ತೋ ॥ ೫೯ ॥ ಮ್ಹಣೋನಿ ವಿಶ್ವ ಸಾವರಲೆ । ವಿಷ್ಣುವೀ ಯುಗಾಂತ ಹೋತೇ ನೋಡವಲೇ । ಜೈ ಮಹಾಶಂಖ ಆಸ್ಫುರಿಲೇ । ಕೃಷ್ಣಾದಿಕೆ ॥ ೧೬೦ ॥ ತೋ ಘೋಷ ತರೀ ಉಪಸಂಹರಲಾ । ಪರೀಪಡಿಸಾದ ಹೋತಾ ರಾಹಿಲಾ । ತೇಣೇ ದಳಭಾರ ವಿಧ್ವಂಸಿಲಾ । ಕೌರ ವಾಂಚಾ ॥ ೬೧ ॥ ಜೈಸಾ ಗಜಘಟಾ ಆತ । ಸಿಂಹಲೀಲಾ ವಿದಾರಿತ । ತೈಸಾ ಹೃದ ಯಾತೇ ಭೇದಿತ । ಕೌರವಾಚಿಯಾ ॥ ೬೨ ॥ ತೋ ಗಾಜತ ಜವ ಆ ಇಕತೀ । ತವ ಉಭೇಚೀ ಹಿಯೇ ಘಾಲಿತೀ । ಏಕ ಮೇಕಾತೇ ಮ್ಹಣತೀ । ಸಾವಧ ರೇ ಸಾವಧ ॥ ೬೩ ॥

ಅರ್ಥ— ದ್ರುಪದರಾಜನೂ, ಮಹಾಶೂರನಾದ ಕಾಶೀರಾಜನೂ ದ್ರೌಪದಿಯ ಮಕ್ಕಳೂ ಇನ್ನೂ ಅನೇಕ ಸಮರ್ಥರಾಜರೂ ಆ ಸಂಗ್ರಾಮದಲ್ಲಿ ನೆರೆದಿದ್ದರು. ॥ ೬೧ ॥ ಅವರೆಲ್ಲರೂ ಅರ್ಜುನನ ವೀರಪುತ್ರನಾದ ಅಭಿಮನ್ಯುವೂ ಜಯಿಸಲಸದಳನಾದ ಸಾತ್ಯಕಿಯು, ರಾಜಶ್ರೇಷ್ಠ ದೃಷ್ಟದ್ಯುಮ್ನನೂ, ಶಿಖಂಡಿಯೂ ॥ ೬೨ ॥ ವಿರಾಟನೇ ಮೊದಲಾದ ಅನೇಕ ಸೇನಾನಾಯಕರೂ ಒಂದೇಸಮನೆ ತಮ್ಮ ತಮ್ಮ ಶಂಖುಗಳನ್ನು ಊದಿದರು. ॥ ೬೩ ॥ ಆ ಶಂಖದ ಮಹಾಧ್ವನಿಯ ಆ ಘಾತದಿಂದ ಶೇಷ ಮತ್ತೂ ಕೂರ್ಮನೂ ಒಂದೇಕಾಲಕ್ಕೆ ಭಯದಿಂದ ಎದೆಗುಂದಿದರು. ಮತ್ತು ಪೃಥ್ವಿಯ ಭಾರವನ್ನು ಬಿಸುಟಿ ಬಿಡಲಿಕ್ಕೆ ಉದ್ಯುಕ್ತರಾದರು. ॥ ೬೪ ॥ ಆ ಯೋಗದಿಂದ ಮೂರು ಲೋಕಗಳೂ ಅಲ್ಲೋಲ ಕಲ್ಲೋಲವಾದವು. ಮೇರು ಮತ್ತು ಮಂದಾರ ಪರ್ವತಗಳು ಅಗುಳಾಡಲಿಕ್ಕೆ ಹತ್ತಿದವು. ಸಮುದ್ರದ ನೀರು ಕೈಲಾಸದವರೆಗೆ ಉಕ್ಕೇರಿತು. ॥ ೬೫ ॥ ಪೃಥ್ವಿಯು ಬೊಕ್ಕುಬೊರಲು ಬೀಳುವಂತೆಯೂ ಆಕಾಶವು ಮುರಿದು ಬೀಳುವಂತೆಯೂ ಭಾಸವಾಯಿತು. ॥ ೬೬ ॥ ಸತ್ಯಲೋಕದಲ್ಲಿ ಸುರರು " ಸೃಷ್ಟಿಯು ಮುಳಿಗಿತೋ ಮುಳಿಗಿತು " ಎಂದು ಕೂಗಿ ಚಪ್ಪಾಳೆಯನ್ನಿಕ್ಕಿದರು. " ಇನ್ನುನೆಲೆ ದೇವತೆಗಳು ನಿರಾಶ್ರೀತರಾದರು. " ಎಂಬುದೊಂದೇ ಕೂಗು ಕೇಳಿಸುತ್ತಲಿದ್ದಿತು ॥ ೬೭ ॥ ಸೂರ್ಯನು ಹಗಲಿನಲ್ಲಿ ಸ್ತಬ್ಧವಾಗಿ ನಿಂತನು. ಪ್ರಳಯಕಾಲನೇ ಬಂದೊದೊಗಿತೆಂದು ಮೂರು ಲೋಕಗಳಲ್ಲಿಯೂ ಹಾ ಹಾ ಕಾರವು ಉಂಟಾಯಿತು. ॥ ೬೮ ॥ ಅದನ್ನು ನೋಡಿ ಆದಿಪುರುಷನಾದ ಭಗವಾನ್ ಶ್ರೀಕೃಷ್ಣನು ಬಹಳೇ ಆಶ್ಚರ್ಯಚಕಿತನಾದನು. ಮತ್ತು ಒಂದು ವೇಳೆ ಸೃಷ್ಟಿಯ ಅಂತವಾದರೂ ಆಗಬಹುದೆಂಬ ಭಯದಿಂದ ಅವನು ಆ ಅದ್ಭುತವಾದ ಶಂಖ ಧ್ವನಿಯನ್ನು ಅಡಗಿಸಿದನು.॥೬೯॥ ಆಂತೆಯೇ ಈ ಸೃಷ್ಟಿಯು ಬದುಕಿ ಉಳಿಯಿತು. ಇಲ್ಲದಿದ್ದರೆ ಕೃಷ್ಣ ಮೊದಲಾದ ವೀರರು ಶಂಖನನ್ನು ಊದಿದಾಗಲೇ ಅದರ ಅವಸಾನಕಾಲವು ಬಂದಿದ್ದಿತು. ॥ ೭೬೦ ॥ ಆ ಶಂಖದ ಧ್ವನಿಗಳು ಇಲ್ಲದಂತಾದರೂ ಪ್ರತಿಧ್ವನಿಯ ನಿನಾದವು ಹಾಗೆಯೇ ನಡೆದಿದ್ದಿತು. ಇಷ್ಟರಿಂದಲೇ ಕೌರವ ಸೈನ್ಯದಲ್ಲಿ ಗಲಭೆಯೆದ್ದಿತು. ॥ ೬೧ ॥ ಸಿಂಹವು ಸಹಜ ಲೀಲೆಯಿಂದ ಹೇಗೆ ಆನೆಗಳ ಸಮುದಾಯವನ್ನು ಸೀಳಿ ಹಾಕುತ್ತದೋ, ಅಪರಂತೆಯೇ ಆ ಶಂಖುಗಳ ನಾದದಿಂದ ಕೌರವರ ಹೃದಯವು ಒಡೆದು ಹೋಯಿತು ॥ ೬೨ ॥ ಆ ಧ್ವನಿಯನ್ನು ಕೇಳಿ ನಿಂತ ನಿಂತಲ್ಲಿ ಎಲ್ಲರೂ ಧೈರ್ಯಬಿಟ್ಟರು. ಮತ್ತು ಒಬ್ಬರಿಗೊಬ್ಬರು " ಎಚ್ಚರಿಕೆ, ಎಚ್ಚರಿಕೆ ! " ಎಂದು ಹೇಳುತ್ತಿದ್ದರು. ॥ ೬೩ ॥

ಅಥ ವ್ಯವಸ್ಥಿತಾನ್ದೃಷ್ಟ್ವಾ ಧಾರ್ತರಾಷ್ಟ್ರಾನ್ ಕಪಿಧ್ವಜಃ ॥
ಪ್ರವೃತ್ತೇ ಶಸ್ತ್ರಸಂಪಾತೇ ಧನುರುದ್ಯಮ್ಯ ಪಾಂಡವಃ ॥ ೨೦ ॥

[ಅಥ ವ್ಯವಸ್ಥಿತಾನಿತಿ] ತೇಥ ಬಳಪೌಢೀ ಪರತೇ । ಮಹಾರಥಿ ವೀರ ಹೋತೇ । ತಿಹೀ ಪುನರಪಿ ದಳಾತೇ । ಆವರಿಲೇ ॥ ೬೪ ॥ ಮಗ ಸರಿಸೆಪಣೆ ಉಠಾವಲೇ । ದುಣವಟೋನಿ ಉಚಲಲೇ । ತಯಾದಂಡೀ ಕ್ಷೋಭಲೇ । ಲೋಕತ್ರಯ ॥ ೬೫ ॥ ತೇಥ ಬಾಣವರೀ ಧನುರ್ಧರ । ವರ್ಷತಾತಿ ನಿರಂತರ ಜೈಸೇ ಪ್ರಳಯಾತ ಜಲಧರ । ಅನಿವಾರ ಕಾ ॥ ೬೬ ॥ ತೇ ದೇಖಿಲಿಯಾ ಅರ್ಜುನೇ । ಸಂತೋಷ ಫೇನ್ವೋನಿ ಮನೇ । ಮಗ ಸಂಭ್ರಮೆ ಸೇನೇ । ದಿಠೀ ಘಾಲೀತಸೇ ॥ ೬೭ ॥ ತವ ಸಂಗ್ರಾಮೀ ಸಜ್ಜ ಜಾಹಲೇ । ಸಕಳ ಕೌರವ ದೇಖಿಲೆ । ತವ ಲೀಲಾ ಧನುಷ್ಯ ಉಚಲಿಲೆ । ಪಾಂಡುಕುಮರೇ ॥ ೬೮ ॥

ಅರ್ಥ— ಆ ಸ್ಥಳದಲ್ಲಿ ಬಲದಿಂದಲೂ ಪುರುಷಾರ್ಥದಿಂದಲೂ ಯುಕ್ತರಾದ ಮಹಾರಥಿಗಳು, ಸೈನಿಕರಿಗೆ ಪುನಃ ಧೈರ್ಯಕೊಟ್ಟು ಯುದ್ಧಕ್ಕೆ ನಿಲ್ಲಿಸಿದರು. ॥ ೬೪ ॥ ಆ ಮೇಲೆ ಅವರು ಒಳ್ಳೇ ತಯಾರಿಯಿಂದ ಯುದ್ಧಕ್ಕೆ ಸನ್ನದ್ಧರಾದರು. ಮತ್ತು ಅವರು ಬಹಳೇ ಆವೇಶದಿಂದ ನಡೆದುಬಂದರು. ಆ ವೇಗವಾಗಿ ಹೊರಟ ಸೈನ್ಯದ ಆವೇಶಕ್ಕೆ ಮೂರು ಲೋಕಗಳೂ ಹೆಚ್ಚಾಗಿ ಕ್ಷೋಭೆಗೊಂಡವು. ॥ ೬೫ ॥ ಆ ಧನುರ್ಧಾರಿಗಳಾದ ವೀರರು

ಒಂದೇಸವನೇ ಭಯಂಕರವಾದ ಬಾಣದ ಮಳೆಗಳನ್ನು ಕರೆದರು. ಅದರಿಂದ ಪ್ರಳಯ ಕಾಲದ ಭಯಂಕರವಾದ ಪರ್ಜನ್ಯ ವೃಷ್ಟಿಯೇ ಆಗುತ್ತಿದಿಯೋ ಎನೋ ಎಂಬಂತೆ ಭಾಸವಾಯಿತು. ॥ ೬೬ ॥ ಅದನ್ನು ನೋಡಿ ಅರ್ಜುನನ ಮನಸಿಗೆ ಬಹಳೇ ಸಂತೋಷವಾಯಿತು. ಅವನು ಒಳ್ಳೇ ಗಂಭೀರತನದಿಂದ ಸೈನ್ಯವೆಲ್ಲವನ್ನು ದಿಟ್ಟಿಸಿ ನೋಡಿದನು. ॥ ೬೭ ॥ ಆಗ್ಗೆ ಎಲ್ಲ ಕೌರವರೂ ಯುದ್ಧಕ್ಕೆ ಸಿದ್ಧರಾದದ್ದನ್ನು ನೋಡಿ ಪಾಂಡುಪುತ್ರನು ಸಹಜ ವಿನೋದದಿಂದ ಧನುಷ್ಯವನ್ನು ಎತ್ತಿದನು. ॥ ೬೮ ॥

ಹೃಷೀಕೇಶಂ ತದಾ ವಾಕ್ಯಮಿದಮಾಹ ಮಹೀಪತೇ ।

ಅರ್ಜುನ ಉವಾಚ —

ಸೇನಯೋರುಭಯೋರ್ಮಧ್ಯೇ ರಥಂ ಸ್ಥಾಪಯಮೇಽಚ್ಯುತ ॥ ೨೧ ॥
ಯಾವದೇ ತಾನ್ನಿರೀಕ್ಷೇಽಹಂ ಯೋದ್ಧು ಕಾಮಾನವಸ್ಥಿತಾನ್ ।
ಕೈರ್ಮಯಾ ಸಹ ಯೋದ್ಧವ್ಯಮಸ್ಮಿನ್ರಣ ಸಮುದ್ಯಮೇ ॥ ೨೨ ॥
ಯೋತ್ಸ್ಯ ಮಾನಾನವೇಕ್ಷೇಽಹಂ ಯ ಏತೇತ್ರ ಸಮಾಗತಾಃ ।
ಧಾರ್ತರಾಷ್ಟ್ರಸ್ಯ ದುರ್ಬುದ್ಧೇರ್ಯುದ್ಧೇ ಪ್ರಿಯಚಿಕೀರ್ಷವಃ ॥ ೨೩ ॥

[ಹೃಷೀಕೇಶಾಮಿತಿ] ತೇವೇಳೀ ಅರ್ಜುನ ಮ್ಯಣತಸೆ ದೇವಾ । ಆತಾ ಝುಡಕರಿ ರಥ ಸೇಲಾವಾ । ನೇವೂನಿ ಮಧ್ಯೆ ಘಾಲಾವಾ । ದೋಹೀದಳಾ ॥ ೬೯ ॥

[ಯಾವ ದೇತಾನಿತ್ಯರ್ಥ] ಜವ ಮೀ ನಾವೇಕ । ಹೇ ಸಕಳ ವೀರ ಸೈನಿಕ । ನ್ಯಾ ಹೂಳೀನ ಅಲೇಖು–ಜುಂಝುತೇ ಜೇ ॥ ೧೭೦ ॥ ಏಥ ಆಲೇ ಅಸತೀ ಆಘವೇ । ಪರೀ ಕವಣೇಸೀ ಮ್ಯಾ ಝುಂಜಾವೇ । ಹೇ ರಣೀ ಲಾಗೇ ಪಪಾವೆ । ಮ್ಹಣವೂನಿಯಾ ॥ ೧೭೧ ॥ ಬಹುತ ಕರೂನಿ ಕೌರವ । ಹೇ ಆತುರ ದುಃಸ್ವಭಾವ । ವಾಟವಾವೀಣ ಹಾವ । ಬಾಂಧಿತೀ ಜುಂಝೋ ॥ ೧೭೨ ॥ ಜುಂಝೂಚೀ ಆವಡೀ ಧರಿತೀ । ಪರೀ ಸಂಗಾತ್ರಾವೀ ಧೀರ ನನ್ಹತೀ ಹೇ ಸಾಂಗೋನಿ ರಾಯಾಪ್ರತೀ । ಕಾಯ ಸಂಜಯೋ ಮ್ಹಣೇ ॥ ೧೭೩ ॥

ಅರ್ಥ— ಆ ಸಮಯದಲ್ಲಿ ಅರ್ಜುನನು ಅನ್ನುತ್ತಾನೆ. "ದೇವಾ, ನನ್ನ ರಥವನ್ನು ತೀವ್ರವೇ ಒಯ್ದು ಎರಡೂ ಸೈನ್ಯದ ಮಧ್ಯದಲ್ಲಿ ನಿಲ್ಲಿಸು. ॥ ೬೯ ॥ ಅಂದರೆ ಹೋರಾಟದ ಇಚ್ಛೆಯಿಂದ ಈ ಸಂಗ್ರಾಮದಲ್ಲಿ ನೆರೆದಿರುವ ವೀರರನ್ನು ಕ್ಷಣಹೊತ್ತು ಚನ್ನಾಗಿ ನೋಡುವೆನು. ॥ ೭೦ ॥ ಯಾಕಂದರೆ ಈ ರಣಾಂಗಣದಲ್ಲಿ ಎಲ್ಲ ಯುದ್ಧವಿಶಾರದರು ಕೂಡಿರುವರು ? ಯಾರ ಕೂಡ ಹೋರಾಡಬೇಕಾಗಿರುವುದು ಎಂಬುದನ್ನು ನಾನು ನೋಡಬೇಕಾಗಿರುವದು. ॥ ೭೧ ॥ ಈ ಚಪಲರೂ ದುಷ್ಟಬುದ್ಧಿಯವರೂ ಆದ ಕೌರವರು, ತನ್ನು ಮೈಯಲ್ಲಿ ಪರಾಕ್ರಮವಿಲ್ಲದೇ ಯುದ್ಧವಾಡುವ ಬಿಂಕವನ್ನು ತೋರಿಸುತ್ತಲಿದ್ದಾರೆ. ॥ ೭೨ ॥ ಇವರಿಗೆ ಯುದ್ಧದ ಆಪೇಕ್ಷೆ ಇರುವುದೇನೋ ನಿಜ. ಆದರೆ ಇವರಲ್ಲಿ ರಣಭೂಮಿಯಲ್ಲಿ ಧೈರ್ಯದಿಂದ ಎದೆತಟ್ಟಿ ನಿಲ್ಲುವ ಶೌರ್ಯವು ಇರುವದಿಲ್ಲವೆಂದೂ ಧೃತರಾಷ್ಟ್ರ ರಾಜನ ಮುಂದೆ ಹೇಳಿ ಸಂಜಯನು ಮತ್ತೆ ಮುಂದೆ ಮಾತನಾಡುತ್ತಾನೆ. ॥ ೭೩ ॥

ಸಂಜಯ ಉವಾಚ

ಏವ ಮುಕ್ತೋ ಹೃಷೀಕೇಶೋ ಗುಡಾಕೇಶೇನ ಭಾರತ ।
ಸೇನಯೋರುಭಯೋರ್ಮಧ್ಯೇ ಸ್ಥಾಪಯಿತ್ವಾ ರಥೋತ್ತಮಂ ॥ ೨೪ ॥

[ವಿವಮಿತಿ] ಆಇಕಾ ಅರ್ಜುನ ಇತುಕೇ ಬೋಲಿಲಾ । ತವ ಶ್ರೀಕೃಷ್ಣೇ ರಥ ಸೇಲಿಲಾ ।
ದೋಹೀ ಸೈನ್ಯಾಮಾಜಿ ಕೇಲಾ । ಉಭಾ ತೇಣೇ ॥ ೭೪ ॥

ಅರ್ಥ— ರಾಜನೇ ಕೇಳು. ಅರ್ಜುನನ ಈ ಭಾಷಣವನ್ನು ಕೇಳಿದ ಕೂಡಲೇ ಶ್ರೀಕೃಷ್ಣನು ರಥವನ್ನು ಒಯ್ದು ಎರಡೂ ಸೈನ್ಯದ ಮಧ್ಯದಲ್ಲಿ ನಿಲ್ಲಿಸಿದನು. ॥ ೭೪ ॥

ಭೀಷ್ಮ ದ್ರೋಣ ಪ್ರಮುಖತಃ ಸರ್ವೇಷಾಂಚ ಮಹೀಕ್ಷಿತಾಮ್ ।
ಉವಾಚ ಪಾರ್ಥ ಪಶ್ಯೈತಾನ್ಸಮವೇತಾನ್ಕುರುನಿತಿ ॥ ೨೫ ॥

ತತ್ರಾಪಶ್ಯತ್ ಸ್ಥಿತಾನ್ ಪಾರ್ಥಃ ಪಿತೃಸಥ ಪಿತಾಮಹಾನ್ ।
ಆಚಾರ್ಯಾನ್ಮಾತುಲಾನ್ ಭ್ರಾತೃನ್ ಪುತ್ರಾನ್ ಪೌತ್ರಾನ್ ಸಖೀಂಸ್ತಥಾ ॥ ೨೬ ॥

ಶ್ವಶುರಾನ್ ಸುಹೃದಶ್ಚೈವ ಸೇನಯೋರುಭಯೋರಪಿ ।
ತಾನ್ ಸಮೀಕ್ಷ್ಯ ಸ ಕೌಂತೇಯಃ ಸರ್ವಾನ್ ಬಂಧೂನವಸ್ಥಿತಾನ್ ॥ ೨೭ ॥

[ಭೀಷ್ಮೇತಿ] ಜೇಥ ಭೀಷ್ಮ ದ್ರೋಣಾದಿಕ । ಜನಳಿಕೇಚಿ ಸನ್ಮುಖ । ಪೃಥಿವೀಪತಿ ಆಣಿಕ । ಬಹು ಆಹಾತೀ ॥ ೭೫ ॥ ತೇಥ ಸ್ಥಿರ ಕರೂನಿಯಾ ರಥ । ಅರ್ಜುನ ಅಸೇಹಾತ । ತೋ ದಳಥಾರ ಸಮಸ್ತ । ಸಂಭ್ರಮೇಸೀ ॥ ೭೬ ॥ ಮಗ ದೇವಾ ಮ್ಹಣೆ ದೇಖ ದೇಖ । ಹೇ ಗೋತ್ರಗುರು ಅಶೇಖ ತವ ಕೃಷ್ಣಾಮನೋ ನಾವೇಕ । ವಿಸ್ಮೋ ಜಾಇಲಾ ॥ ೭೭ ॥ ತೋ ಆಪಣಯಾ ಆವಣ ಮ್ಹಣೇ । ಏಥ ಕಾಯೀ ಕವಣ ಜಾಣೇ । ಹೇ ಮನೀ ಧರಿಲೇ ಏಣೇ । ಪರೀ ಕಾಹೀ ಆಶ್ಚರ್ಯ ಅಸೇ ॥ ೭೮ ॥ ಐಸೀ ಪುಢೀಲ ಸೇಘೇತ । ತೋ ಸಹಜೇ ಜಾಣೇ ಹೃದಯಸ್ಥ । ಪರಿ ಉಗಾ ಅಸೇ–ನಿವಾಂತ । ತಿಯೇ ವೇಳ ॥ ೭೯ ॥ ತವ ತೇಥ ಪಾರ್ಥ ಸಕಳ । ಪಿತೃ ಪಿತಾಮಹ ಕೇವಳ । ಗುರು ಬಂಧೂ ಮಾತುಳ । ದೇಖತಾ ಜಾಹಲಾ ॥ ೮೦ ॥ ಇಷ್ಟಮಿತ್ರ ಆಪುಲೆ । ಕುಮರಜನ ದೇಖಿಲೆ । ಹೇ ಸಕಳ ಅಸತಿ ಆಲೆ । ತಯಾಮಾಜೇ ॥ ೮೧ ॥ ಸುಹೃಜ್ಜನ ಸಾಸರೇ । ಆಣೀ ಕಹೀಸಬೀ ಸೋಯಿರೇ । ಕುಮರ ಪೌತ್ರ ಧನುರ್ಧರೇ । ದೇಖಿಲೇ ತೇಥ ॥ ೮೨ ॥ ಜಯಾ ಉಪಕಾರ ಹೋತೇ ಕೇಲೇ । ಕೀ ಅಪದೀ ಜೇ ರಕ್ಷಿಲೇ । ಹೇ ಆಸೋ ವಡಿಲ ಧಾಕುಲೆ । ಆದಿ ಕರುನೀ ॥ ೮೩ ॥ ಐಸೆ ಗೋತ್ರಚೀದೋಹೀದಳೀ। ಉದಿತಜಾಹಲೆ ಅಸೇಕಳೀ! ಹೇ ಅರ್ಜುನೆ ತಿಯೇವೇಳೀ । ಅವಲೋಕಿಲೆ ॥೮೪॥

ಅರ್ಥ— ಭೀಷ್ಮ ದ್ರೋಣ ಮೊದಲಾದ ಆಸ್ಥೇಷ್ಟರು ನಿಂತಲ್ಲಿ ॥ ೭೫ ॥ ಶ್ರೀಕೃಷ್ಣನು. ರಥವನ್ನು ಸ್ಥಿರವಾಗಿ ನಿಲ್ಲಿಸಲು ಅರ್ಜುನನು ಆ ಸೈನಿಕರ ಕಡೆಗೆ ಗಂಭೀರ ಮುದ್ರೆಯಿಂದ ಪರೀಕ್ಷಿಸಿ ನೋಡಲನುವಾದನು. ॥ ೭೬ ॥ ಆ ಮೇಲೆ (ಅರ್ಜುನನು) ಅನ್ನುತ್ತಾನೆ "ದೇವಾ, ನೋಡು, ನೋಡು ಈ ಜನರೆಲ್ಲರೂ ನನ್ನ ಆಪ್ತವರ್ಗಕ್ಕಾಗಲಿ, ಗುರುವರ್ಗಕ್ಕಾಗಲಿ ಸೇರಿದವರಿದ್ದಾರೆ. ಇದನ್ನು ಕೇಳಿ ಶ್ರೀ ಕೃಷ್ಣನಿಗೆ ಕ್ಷಣಹೊತ್ತು ಆಶ್ಚರ್ಯವೆನಿಸಿತು. ॥ ೭೭ ॥ ಶ್ರೀಕೃಷ್ಣನು ಅನ್ನುತ್ತಾನೆ– "ಅರ್ಜುನನ ಮನಸಿನಲ್ಲಿ ಯಾವ ಸಂಶಯವು ಉದ್ಭವಿಸಿದೆಂಬುದನ್ನು ಯಾರು ಬಲ್ಲರು ? ಯಾವ ಕಾರಣದ ದೆಸೆಯಿಂದ ಹೀಗೆ ಅನ್ನುತ್ತಿರಬಹುದು ? ಇದರಲ್ಲಿ ಏನಾದರೂ ಚಮತ್ಕಾರವಾದ ಕಾರಣವಿರಬಹುದು." ॥ ೭೮ ॥ ಭಗವಾನ್ ಶ್ರೀಕೃಷ್ಣನು ಎರಡನೆಯವರ ಮನೋಗತವನ್ನು ಸಹಜವೇ ತಿಳಿಯುವಂಥವನಾದುದರಿಂದ, ಅವನು ಮುಂದಿನ ಭವಿಷ್ಯವನ್ನು ತಿಳಿದುಕೊಂಡನು. ಆದರೆ ಆ ಕಾಲಕ್ಕೆ ಏನೊಂದೂ ಮಾತನಾಡದೇ ಸ್ತಬ್ಧನಾಗಿದ್ದನು. ॥ ೭೯ ॥ ಆಗ ಅರ್ಜುನನು ತಮ್ಮ ಎಲ್ಲ ಹಿರಿಯರೂ, ಅಜ್ಜಂದಿರೂ, ಗುರುಗಳೂ, ಬಂಧು

ಗಳೂ, ಮೂವಂದಿರೂ, ಇವರೇ ಮೊದಲಾದವರನ್ನು ನೋಡಿದನು. ॥ ೧೮೦ ॥ ಮತ್ತು ತಮ್ಮ ಇಷ್ಟಮಿತ್ರರೂ, ಮಕ್ಕಳೂ ಆ ಸ್ಥಳದಲ್ಲಿ ಬಂದಿರುವದನ್ನು ನೋಡಿದನು. ॥ ೮೧ ॥ ಅದರಂತೆಯೇ ತನ್ನ ಜೀವದ ಗೆಳೆಯರೂ ಅಳಿಯಂದಿರೂ, ಆಪ್ತವರ್ಗದವರೂ ಮೊಮ್ಮಕ್ಕಳೂ ಇವರೆಲ್ಲರನ್ನು ಅರ್ಜುನನು ನೋಡಿದನು ॥ ೮೨ ॥ ತನ್ನ ಮೇಲೆ ಉಪಕಾರ ಮಾಡಿದವರೂ, ಸಂಕಟ ಸನುಯದಲ್ಲಿ ತನ್ನನ್ನು ರಕ್ಷಣಮಾಡಿದವರೂ ಹಿರಿಯರೂ ಕಿರಿಯರೂ ॥ ೮೩ ॥ ತನ್ನ ಗೋತ್ರಜರೂ ಬಂದು ಎರಡೂ ಸೈನ್ಯದಲ್ಲಿ ಯುದ್ಧೋತ್ಸಾಹದಿಂದ ಸಿದ್ಧರಾಗಿ ನಿಂತಂಥವರನ್ನು ಆ ಕಾಲ ದಲ್ಲಿ ನೋಡಿದನು ॥ ೮೪ ॥

ಕೃಪಯಾ ಪರಯಾಽವಿಷ್ಟೋ ವಿಷೀದನ್ನಿದ ಮಬ್ರವೀತ್ ।

ಅರ್ಜುನ ಉವಾಚ—

ದೃಷ್ಟ್ವೇಮಂ ಸ್ವಜನಂ ಕೃಷ್ಣಯುಯುತ್ಸುಂ ಸಮುಪಸ್ಥಿತಂ ॥ ೨೮ ॥
ಸೀದಂತಿ ಮಮಗಾತ್ರಾಣಿ ಮುಖಂಚ ಪರಿ ಶುಷ್ಯತಿ ।
ವೇಪಥುಶ್ಚ ಶರೀರೇನೆ ರೋಮ ಹರ್ಷಶ್ಚ ಜಾಯತೇ ॥ ೨೯ ॥
ಗಾಂಡೀವಂ ಸ್ರಂಸತೇ ಹಸ್ತಾತ್ತ್ವ ಕ್ಚೈವ ಪರಿದಹ್ಯತೇ ।
ನಚ ಶಕ್ನೋಮ್ಯವಸ್ಥಾತುಂ ಭ್ರಮತೀವಚನೇಮನಃ ॥ ೩೦ ॥

[ಕೃಪಯಾ ಪರಯಾಽವಿಷ್ಟಃ] ತೆಥಮನಿ ಗಜಬಜಜಾಹಲೀ । ಆಣಿ ಆಪೈಸಿ ಕ್ರಪಾಉಪ ಜಲಿ । ತೇಣೆ ಅವಮಾನೆ ನಿಘಾಲಿ । ವೀರನ್ರತ್ತಿ ॥ ೮೫ ॥ ಜೀಯಾ ಉತ್ತುಮಕುಳೀ ಚಿಯಾಹೋತಿ । ಆಣಿ ಗುಣ ಲಾವಣ್ಯ ಆಥಿ । ತೀಯಾ ಆಣಿಕೀತೆ ನಸಾಹತಿ । ಸುತೇಜಪಣೆ ॥ ೮೬ ॥ ನವಿಯೇ ಅವಡಿಚೇನಿ ಭವೆ । ಕಾಮುಕ ನಿಜವನಿತಾವಿಸರೆ । ಮಗಪಾಡೆವಿಣ ಅನುಸರೆ । ಭ್ರಮಲಾ ಜೈಸಾ ॥ ೮೭ ॥ ಕೀತಪೋಬಳೆಖುದ್ಧಿ । ಪಾತಲಿಯಾ ಭ್ರಂಶೆ ಬುದ್ಧಿ । ಮಗತಯಾ ವಿರಕ್ತತಾ ಸಿದ್ಧಿ । ನಾತವೇತೀ ॥ ೮೮ । ತೈಸೇ ಆರ್ಜುನಾ ತೆಥಜಾಹಲೀ । ಅಸತೇ ಪುರುಷತ್ವ ಗೇಲೆ । ಜೇ ಅಂತಃಕರಣ ದಿಧಲೇ । ಕಾರುಣ್ಯಾಸಿ ॥ ೮೯ ॥ ದೇಖಾ ಮಂತ್ರಜ್ಞ ಬರಳ ಜಾಯ । ತೆಥಕಾ ಜೈಸಾ ಸಂಚಾರ ಹೋಯೆ । ತೈಸಾ ತೋ ಧನುರ್ಧರ ಮಹಾಮೋಹೆ । ಆ ಕಳಿಲಾ ॥ ೯೦ ॥ ವ್ಯಾಣೋನಿ ಅಸತಾ ಧೀರಗೇಲಾ । ಹೃದಯಾದ್ರವ ಆಲಾ । ಜೈಸಾ ಚಂದ್ರಕರಿ ಸಿಂಪಿಲಾ । ಸೋಮಕಾಂತ ॥ ೯೧ ॥ ತಯಾ ಪರಿಪಾರ್ಥ । ಅತಿ ಸ್ನೇಹೆ ಮೋಹಿತ । ಮಗ ಸಖೇದ ಅಸೆ ಬೋಲತ । ಶ್ರೀ ಅಚ್ಯುತೇಸಿ ॥ ೯೨ ॥ ತೋವ್ಯಾಣೆ ಅವಧಾರಿ ದೇವಾ । ವ್ಯಾಪಾಹಿಲಾ ಹಾ ಮೇಳಾವಾ । ತಂವ ಗೋತ್ರವರ್ಗ ಆಘವಾ । ದೇಖಿಲಾ ಏಥ ॥ ೯೩ ॥ ಸಂಗ್ರಾಮಿ ಉದಿತ । ಜಾಹಲೇ ಅಸತೀ ಕೀರ ಸಮಸ್ತ । ಪಣ ಆಪಣ ಯಾ ಉಚಿತ । ಕೇವಿ ಹೋಯ ॥ ೯೪ ॥ ಏಣೇ ನಾನೇಚಿ ನೇಣೋಕಾಯೀ । ಮಜ ಆಪಣಪೇ ಸರ್ವಥಾ ನಾಹೀ । ಮನಬುದ್ಧಿ ತಾಯೀ । ಸ್ಥಿರ ನೋ ಹೇ ॥ ೯೫ ॥ ದೇಖೆ ದೇಹ ಕಾಂಪತ । ತೋಂಡ ಅಸೇ ಕೋರಡೆ ಹೋತ । ವಿಕಳತಾ ಉಪಜತ । ಗಾತ್ರಾಸೇ ॥ ೯೬ ॥ ಸರ್ವಾಂಗಾ ಕಂಟಾಳಾ ಆಲಾ । ಅತಿಸಂತಾಪ ಉಪಜಲಾ । ತೇಥೆ ಬೆಂಬಳ ಹಾತಗಲಾ । ಗಾಂಡೀವಾಚಾ ॥ ೯೭ ॥ ತೇನ ಧರತಚಿ ನಿಸ್ಪಲೇ । ಪರೀ ನೇಣೇಚಿ ಹಾತೋನಿ ವಡಿಲೇ । ಐಂಸೇ ಹೃದಯ ಅಸೇ ವ್ಯಾಪಿಲೇ । ಮೋಹೇ ಏಣೇ ॥ ೯೮ ॥ ಜೇ ವಜ್ರಾಪಾಸೂನಿ ಕಠಿಣ । ದುರ್ಧರ ಅತಿ ದಾರುಣ । ತಯಹೂನ ಅಸಾಧಾರಣ । ಹೇಸ್ನೇಹ ನವಲ ॥ ೯೯ ॥ ಜೇಣೇ ಸಂಗ್ರಾಮೀ ಹರಜಿಂತಿಲಾ । ನಿವಾತ ಕವಚಾಚಾತಾವ ಫೋಡಿಲಾ । ತೋ ಅರ್ಜುನ ನೋಹೇಕವಳಿಲಾ । ಕ್ಷಣಾ ಮಾಜೀ ॥ ೧೦೦ ॥ ಜೈಂಸೇ

ಭ್ರಮರ ಭೇದೀ ಕೋಡೇ । ಭಲತೈಸೇ ಕಾಷ್ಠ ಕೋರಡೇ । ಪರಿ ಕಳಿಕೇ ಮಾಜೀ ಸಾಂಪಡೇ ।
ಕೊವಳಿಯೆ ॥೨೦೧॥ ತೇಥ ಉತ್ತೀರ್ಣ ಹೋಯೀಲ ಪ್ರಾಣೇ । ಪರಿ ತೇ ಕಮಳದಳ ಚಿರೂನೇಣೆ ।
ತೈಸೇ ಕಠಿಣ ಕೋವಳೇ ಪಣೇ । ಸ್ನೇಹದೇಖಾ ॥೨॥ ಹೇ ಆದಿ ಪುರುಷಾಚೀ ಮಾಯಾ । ಬ್ರಹ್ಮೇಯಾಹಿ
ನಯೇಚಿ ಆಯಾ । ಮ್ಹಣವೂನಿ ಭುಲವಿಲಾ ಐಕೇರಾಯಾ । ಸಂಜಯೋಮ್ಹಣೆ ॥ ೩ ॥ ಅವಧಾರಿ
ಮಗತೋ ಅರ್ಜುನ । ದೇಖೋನಿಸಕಳ ಸ್ವಜನ । ವಿಸರಲಾ ಅಭಿಮಾನ । ಸಂಗ್ರಾಮೀಚಾ ॥ ೪ ॥
ಕೈಸೀ ನೇಣೋ ಸದಯತಾ । ಉಪನಲೀ ತೇಥ ಚಿತ್ತಾ । ಮಗ ಮ್ಹಣೇ ಕೃಷ್ಣ ಆತಾ । ನಸಿಜೇ
ಯೇಥ ॥ ೫ ॥ ಮಾರ್ಪು ಅತಿಶಯ ಮನವ್ಯಾಕುಳ । ಹೋತಸೇ ವಾಚಾ ಬರಳ । ಜೇ ವಧಾವೆ ಹೇ
ಸಕಳ । ಯೇಣೇ ನಾವೇ ॥ ೬ ॥

ಅರ್ಥ— ಅರ್ಜುನನು ಅನ್ನುತ್ತಾನೆ— ನನ್ನ ಮನಸ್ಸು ತಲ್ಲಣಗೊಂಡಿದೆ. ಅವನಲ್ಲಿ ತನ್ನಿಂದ ತಾನೇ ಅಂತಃಕರಣವು ಉದ್ಭವಿಸಿತು ಮತ್ತು ಆ ಅಪಮಾನದ ದೆಸೆಯಿಂದ ವೀರನೃತ್ತಿಯೇ ಅರ್ಜುನನ್ನು ಬಿಟ್ಟು ಹೊರಟು ಹೋಯಿತು ॥ ೮೫ ॥ ಯಾವ ಸ್ತ್ರೀಯು ಉತ್ತಮ ಕುಲದಲ್ಲಿ ಜನಿಸಿರುವಳೊ ಗುಣವತಿಯೂ ಸುಂದರ ರೂಪವತಿಯೂ ಇರುವಳೋ ಅವಳು ತನ್ನ ಉತ್ತಮವಾದಂಥ ತೇಜಸ್ವಿತನದ ದೆಸೆಯಿಂದ ಅನ್ಯ ಸ್ತ್ರೀಯರ ವರ್ಚಸ್ಸು ಸಹಿಸುವದಾಗುವದಿಲ್ಲ. ॥ ೮೬ ॥ ಹೊಸ ಸ್ತ್ರೀಯಳ ಮೇಲಿನ ಪ್ರೀತಿಯು ಭರದಲ್ಲಿ ಸ್ತ್ರೀಲಂಪಟನು ತನ್ನ ಸ್ವಸ್ತ್ರೀಯಳನ್ನು ಮರೆತು ಭ್ರಮಿಷ್ಟ ಮನುಷ್ಯನಂತೆ ತನ್ನ ಯೋಗ್ಯತೆಯನ್ನು ಕೂಡ ಮರೆತು ಅನಳ ವ್ಯಸನದಲ್ಲಿ ಮುಳುಗುತ್ತಾನೆ. ॥ ೮೭ ॥ ಅದರಂತೆಯೇ ತಪಶ್ಚರ್ಯದ ಯೋಗದಿಂದ ಅಷ್ಟ ಮಹಾಸಿದ್ಧಿಗಳು ಪ್ರಸನ್ನವಾಗಿರಲು ವೈರಾಗ್ಯಶೀಲ ಮನುಷ್ಯನ ಬುದ್ಧಿಗೆ ಭ್ರಮವುಂಟಾಗಿ ಅನಸಿಗೆ ವೈರಾಗ್ಯದ ಸ್ಮರಣೆಯೇ ಉಳಿಯುವದಿಲ್ಲ. ॥ ೮೮ ॥ ಅದೇ ಪ್ರಕಾರ ಅರ್ಜುನನು ತನ್ನ ಅಂತಃಕರಣದಲ್ಲಿ ಕರುಣೆಗೆ ಆಶ್ರಯನನ್ನು ಕೊಟ್ಟು ಪೌರುಷವನ್ನು ಕಳೆದು ಕೊಂಡನು. ॥ ೮೯ ॥ ಮಾಂತ್ರಿಕನು ಮಂತ್ರೋಚ್ಚಾರವನ್ನು ಮಾಡಲು ತಪ್ಪಿದರೆ ಅನಸಿಗೆ ಬಾಧೆ ಉಂಟಾಗುತ್ತದೆ. ಅದರಂತೆಯೇ ಅರ್ಜುನನೂ ಮಪಾಮೋಹದಿಂದ ವ್ಯಾಕುಲಗೊಂಡನು. ॥ ೯೦ ॥ ಅವನ ಹೃದಯದಲ್ಲಿ ಅಂತಃಕರಣದ ಶಿಲೆಯು ಹೊರಟಿತು. ಯಾವ ಪ್ರಕಾರ ಚಂದ್ರಕಿರಣದ ಸ್ಪರ್ಶವಾದ ಕೂಡಲೇ ಚಂದ್ರಕಾಂತ ಮಣಿಗೆ ಶಿಲೆಯು ಹೊರಡುವದೋ ॥ ೯೧ ॥ ಅದೇ ಪ್ರಕಾರ ಅರ್ಜುನನು ಸ್ನೇಹದಿಂದ ಅತಿಶಯ ಮೋಹಿತನಾದನು. ಆನಂತರ ದುಃಖದಿಂದ ಕೂಡಿದ ಅಂತಃಕರಣದಿಂದ ಶ್ರೀಕೃಷ್ಣನ ಸಂಗಡ ಮಾತನಾಡಲಾರಂಭಿಸಿದನು ॥ ೯೨ ॥ ಅರ್ಜುನನು ಅನ್ನುತ್ತಾನೆ– ದೇವಾ ಇತ್ತಕಡಿಗೆ ಲಕ್ಷಕೊಡಿರಿ– ನಾವು ಈ ಸ್ಥಳದಲ್ಲಿ ಎಲ್ಲ ಸೈನಿಕರ ಸಮುದಾಯವನ್ನು ನೋಡಿದೆನು. ಅವರೆಲ್ಲರೂ ನನ್ನ ಗೋತ್ರಜರೇ. (ಬಾಂಧವರೇ.) ॥ ೯೩ ॥ ಇವರೆಲ್ಲರೂ ನಿಜವಾಗಿ ನಮ್ಮ ಕೂಡ ಹೋರಾಡುವ ಇಚ್ಛೆಯಿಂದ ಸಿದ್ಧರಾಗಿ ನಿಂತಿದ್ದಾರೆ. ಆದರೆ ಇವರ ಸಂಗಡ ಯುದ್ಧ ಮಾಡುವದು ನಮಗೆ ಅನುಚಿತವಾಗಿರುವದು. ॥ ೯೪ ॥ ಇವರ ಕೂಡ ಯುದ್ಧಮಾಡುವ ಮಾತು ತೆಗೆದಕೂಡಲೇ ನನಗೆ ಏನೂ ತಿಳಿಯದಂತಾಗುತ್ತದೆ. ನನ್ನ ಬುದ್ಧಿಯು ಭ್ರಂಶವಾಗಿ ಚಂಚಲವೃತ್ತಿಯನ್ನು ಹೊಂದಿ ಮನಸ್ಸಿಗೆ ನೆಮ್ಮದಿ ಇಲ್ಲವಂತೆ ಆಗಿದೆ. ॥ ೯೫ ॥ ಇದೋ ನೋಡಿ, ನನ್ನ ಶರೀರವು ಕಂಪಿಸುತ್ತಿದೆ, ಬಾಯಿಯು ಆರುತ್ತಲಿದೆ. ನನ್ನ ಅವಯವಗಳು ಶಿಥಿಲವಾಗಹತ್ತಿವೆ. ॥ ೯೬ ॥ ನನ್ನ ಮೈಮೇಲೆ ಮುಳ್ಳುಬರುತ್ತಲಿದೆ. ಹೀಗೆ ನನಗೆ ಬಹು ಕಷ್ಟವಾದುದರಿಂದ ನನ್ನ ಕೈಯಲ್ಲಿ ಹಿಡಿದ ಗಾಂಡೀವ ಧನುಷ್ಯವು ತನ್ನಿಂದ ತಾನೇ ಕಳಚಿಬೀಳಹತ್ತಿದೆ. ॥ ೯೭ ॥ ಮತ್ತು ಅದರಿಂದ ಆ ಗಾಂಡೀವ ಧನುಷ್ಯವು ನನ್ನ ಕೈಯಿಂದ ಕಳಚಿ ಯಾವಾಗಬಿದ್ದಿರುವುದೆಂಬ ಅರಿವೂ ನನಗಿಲ್ಲದಾಗಿದೆ. ಈ ಪ್ರಕಾರ ನನ್ನ ಮನಸ್ಸು ಭ್ರಮಿಷ್ಟವಾಗಿ, ನನ್ನ ಅಂತಃಕರಣವು ಆಪ್ತವರ್ಗದ ಮೋಹದಿಂದ ವ್ಯಾಪ್ತವಾಗಿರುತ್ತದೆ. ॥ ೯೮ ॥ ನನ್ನ ಮನಸ್ಸು ವಜ್ರದಕಿಂತಲೂ ಕಠಿಣವಾದದ್ದೂ, ದುರ್ಧರವಾದದ್ದೂ, ಅತಿ ಭಯಂಕರವಾದದ್ದೂ ಆಗಿದ್ದರೂ ಅದರಕಿಂತಲೂ ಈ ಮೋಹವು ವಿಶೇಷವಾಗಿ ದುರ್ಧರವಾಗಿರುವದು. ಇನ್ನೊಂದು

ಮಹದಾಶ್ಚರ್ಯದ ಸಂಗತಿಯೇ ಆಗಿರುವದು. ॥ ೯೯ ॥ ಯಾವನು ಯುದ್ಧದಲ್ಲಿ ಶ್ರೀ ಶಂಕರನನ್ನು ಜಯಿಸಿದನೋ, ಮತ್ತು ನಿವಾತಕವಚ ರಾಕ್ಷಸರನ್ನು ನಿರ್ನಾಮಮಾಡಿದನೋ, ಆ ಮಹಾ ಪರಾಕ್ರಮಿ ಅರ್ಜುನನು ಮೋಹದಿಂದ ಒಂದೇ ಕ್ಷಣದಲ್ಲಿ ದಿಙ್ಮೂಢನಾಗಿದ್ದನು. ॥ ೩೦೦ ॥ ಭೃಂಗವು ಬೇಕಾದ ಜಾತಿಯ ಒಣಗಿದ ಕಟ್ಟಿಗೆಯನ್ನು ಸಹಜವಾಗಿ ಕೊರೆದು ಛಿದ್ರಮಾಡುವದು. ಆದರೆ ಕೋಮಲವಾದ ಕಮಲ ಪುಷ್ಪದ ಪರಾಗದಲ್ಲಿ ಪ್ರವೇಶಮಾಡಿದ ಕೂಡಲೇ ಬಂಧನದಲ್ಲಿ ಬೀಳುವದು. ॥ ೧ ॥ ಆದು ಆ ಸ್ಥಳದಲ್ಲಿ (ಕಮಲದಲ್ಲಿ) ಪ್ರಾಣವನ್ನಾದರೂ ಬಿಟ್ಟೀತು; ಆದರೆ ಕಮಲದಳವನ್ನು ಕೊರೆದು ಹೊರಗೆ ಬರುವದು. ಆ ಭೃಂಗರದ ಮನಸ್ಸಿನಲ್ಲಿಸಹ ಬರಲಾರದು. ಅದೇ ಪ್ರಕಾರ ಆಪ್ತವರ್ಗದ ಮೋಹ, ಮಮತೆಯನ್ನು ಬಿಟ್ಟುಬಿಡುವದು ಸುಲಭವಿದ್ದು ಅದು ಅರ್ಜುನನಿಗೆ ಬಹು ಕಷ್ಟ ಮತ್ತು ಅಸಾಧ್ಯವಿರುವದು. ॥ ೨ ॥ ಸಂಜಯನು ಧೃತರಾಷ್ಟ್ರ ರಾಜನಿಗೆ ಹೇಳುತ್ತಾನೆ. ಈ ಮೋಹವು ಆದಿಪುರುಷ ಭಗವಾನ್ ಶ್ರೀಹರಿಯ ಮಾಯೆಯೇ. ಈ ಮಾಯೆಯನ್ನು ಬ್ರಹ್ಮದೇವರಿಂದಲೂ ಕೂಡ ತಡೆಯುವದು ಅಸಾಧ್ಯವಾಗಿರುವದು. ಅಂತೆಯೇ ಅರ್ಜುನನು ಮೋಹದಿಂದ ವ್ಯಾಕುಲನಾದನು. ॥ ೩ ॥ ರಾಜನೇ ಕೇಳು, ಆ ಮೇಲೆ ಅರ್ಜುನನು ತನ್ನ ಯಾವತ್ತು ಸ್ವಜನರನ್ನು ನೋಡಿ ಅವನ ಹೃದಯದಲ್ಲಿ ಯುದ್ಧವಿಷಯದ ಅಭಿಮಾನವು ಸಂಪೂರ್ಣವಾಗಿ ಅಡಗಿಹೋಯಿತು. ॥ ೪ ॥ ಅರ್ಜುನನ ಚಿತ್ತದಲ್ಲಿ ಹೇಗೆ ಅಂತಃಕರಣವು ಉದ್ಭವಿಸಿತೋ ತಿಳಿಯುವದಿಲ್ಲ. ಆ ಮೇಲೆ ಅವನು ಶ್ರೀಕೃಷ್ಣನಿಗೆ ಅನ್ನುತ್ತಾನೆ— ದೇವಾ, ನನಗಿಲ್ಲಿ ಸಿಲ್ಲುವದೇ ಬೇಸರವಾಗಿರುವದು. ಎಲ್ಲಿಗಾದರೂ ಹೊರಟು ಹೋಗುವದೇ ಒಳಿತು. ॥ ೫ ॥ ಈ ಎಲ್ಲ ಬಾಂಧವರನ್ನು ಕೊಲ್ಲಬೇಕೆಂಬ ಮಾತು ಮನಸ್ಸಿನಲ್ಲಿ ಬಂದ ಕೂಡಲೇ ನನ್ನ ಅಂತಃಕರಣವು ವ್ಯಾಕುಲವಾಗಿ ನನ್ನ ಮುಖದಿಂದ ಶಬ್ದಗಳೇ ಹೊರಡದಾಗಿವೆ. ॥ ೬ ॥

ನಿಮಿತ್ತಾನಿ ಚ ಪಶ್ಯಾಮಿ ವಿಪರೀತಾನಿ ಕೇಶವ।
ನ ಚ ಶ್ರೇಯೋಽನು ಪಶ್ಯಾಮಿ ಹತ್ವಾ ಸ್ವಜನ ಮಾಹವೆ ॥ ೩೧ ॥

[ನಿಮಿತ್ತಾ ನಿತಿ] ಯಾ ಕೌರವಾ ಜರೀ ವಧಾವೆ । ತರೀ ಯುಧಿಷ್ಠಿರಾದಿಕಾ ಕಾನವಧಾವೆ। ಹೇ ಏರ ಏರ ಆಳವೆ । ಗೋತ್ರಜ ಆಮುಚೆ ॥ ೭ ॥ ವ್ಯಾಣೋನಿ ಜಳೋ ಹೇ ಜುಂಝು । ಪ್ರತ್ಯಯಾನಯೆಮಜ । ಯೇಣೆ ಕಾಯ ಕಾಜ । ಮಹಾಪಾಪೆ ॥ ೮ ॥ ದೇವಾಬಹುತಾಪರೀ ಪಾಹತಾ। ಏಥ ವೋಖಟೆ ಹೋಯೀಲ ಜುಂಝುತಾ। ವರೀ ಕಾಂಹೀಚುಕವಿತಾ ಲಾಭ ಆಥೀ ॥೯॥

ಅರ್ಥ— ಈ ನಮ್ಮ ಬಂಧುಗಳಾದ ಕೌರವರನ್ನು ಯುದ್ಧದಲ್ಲಿ ಸಂಹರಿಸುವದು ಯೋಗ್ಯವೆಂದು ತೋರಿದರೆ, ಧರ್ಮರಾಜ ಮೊದಲಾದವರನ್ನಾದರೂ ನಾವು ಯಾಕೆ ಸಂಹರಿಸಬಾರದು ? ಪರಸ್ಪರರು ನಮ್ಮ ಅಣ್ಣ ತಮ್ಮಂದಿರೂ ಗೋತ್ರಜರೂ ಇದ್ದಾರೆ. ॥ ೭ ॥ ಆದರೆ ದೇವ ದೇವೇಶನೆ ಈ ಯುದ್ಧಕ್ಕೆ ಬೆಂಕೀ ಹಚ್ಚು (ಅದರ ಗೊಡವೆಯೇ ನಮಗೆ ಬೇಡ) ಈ ಯುದ್ಧವು ನನಗೆ ಎಷ್ಟೂ ಯೋಗ್ಯನೆಂದು ತೋರುವದಿಲ್ಲ. ಇಂಥ ಮಹಾತ್ಪಾತಕವನ್ನು ಮಾಡಿ ನಾವು ಮುಂದೆ ಮಾಡತಕ್ಕದ್ದಾದರೂ ಏನು ? ॥ ೮ ॥ ದೇವಾ, ಅನೇಕ ಪ್ರಕಾರದಿಂದ ವಿಚಾರಮಾಡಿನೋಡಿದರೂ, ಯುದ್ಧಮಾಡುವದರಿಂದ ಅದರ ಪರಿಣಾಮವು ಅನಿಷ್ಟವೇ ಆದೀತೆಂದು ತೋರುತ್ತದೆ. ಅದರಿಂದ ನಾವು ಪರಾವೃತ್ತರಾದರೆ (ವಿಮುಖರಾದರೆ) ಮಾತ್ರ ಏನಾದರೂ ನಮ್ಮ ಕಲ್ಯಾಣವಾದೀತು. ॥ ೯ ॥

ನ ಕಾಂಕ್ಷೇ ವಿಜಯಂ ಕೃಷ್ಣ ನಚ ರಾಜ್ಯಂ ಸುಖಾನಿ ಚ ।
ಕಂ ನೋ ರಾಜ್ಯೇನ ಗೋವಿಂದ ಕಂ ಭೋಗೈರ್ಜೀವಿತೇನ ವಾ ॥ ೩೨ ॥
ಯೇಷಾಮರ್ಥೇ ಕಾಂಕ್ಷಿತಂ ನೋ ರಾಜ್ಯಂ ಭೋಗಾಃ ಸುಖಾನಿ ಚ ।
ತ ಇಮೇಽವಸ್ಥಿತಾ ಯುದ್ಧೇ ಪ್ರಾಣಾಂಸ್ತ್ಯಕ್ತ್ವಾ ಧನಾನಿ ಚ ॥ ೩೩ ॥

ಆಚಾರ್ಯಾಃ ಪಿತರಃ ಪುತ್ರಾಸ್ತ್ಥೈವಚ ಪಿತಾಮಹಾಃ ।
ಮಾತುಲಾಃ ಶ್ವಶುರಾಃ ಪೌತ್ರಾಃಶ್ಯಾಲಾಃ ಸಂಬಂಧಿನಸ್ತ್ಥಾ ॥ ೩೪ ॥

[ನ ಕಾಂಕ್ಷೇ ವಿಜಯಂ ಕೃಷ್ಣೇತಿ] ತಯಾ ವಿಜಯ ವೃತ್ತೀ ಕಾಹೀ । ಮಜ ಸರ್ವಥಾ ಕಾಜ ನಾಹಿ । ಏಥ ರಾಜ್ಯ ತರೀ ಕಾಯೀ । ಪಾವೋನಿಯಾ ॥ ೨೧೦ ॥ ಯಾಸಕಳಾತೇ ವಧಾವೆ । ಮಗಜೇ ಭೋಗ ಭೋಗಾವೆ । ತೇ ಜಳೋತ ಆಳವೆ । ಪಾರ್ಥವ್ಹಾಣೇ ॥ ೨೧೧ ॥ ತೇಣೇ ಸುಖೇವಿಣ ಹೋಯೀಲ । ತೇ ಭಲತೈಸೆ ಸಾಹಿಜೇಲ । ವರೀ ಜೀವಿತಹೀ ವೇಂಚಿಜೇಲ । ಯಾಚಿಲಾಗೀ ॥ ೧೨ ॥ ಪರೀ ಯಾಸೀ ಘಾತುಕೀಜೇ । ಮಗ ಆಪಣ ರಾಜ್ಯಸುಖ ಭೋಗಿಜೇ । ಹೇ ಸ್ವಪ್ನಿಹಿ ಮನಮಾಝೇ । ಕರೂನ ಶಕೇ ॥ ೧೩ ॥ ತರೀ ಆಮ್ಹಿ ಕಾ ಜನ್ಮಾವೇ । ಕವಣಾ ಲಾಗೀ ಜೀ ಯಾವೇ । ಜರೀ ಒಡಿಲಾ ಯಾ ಚಿಂತಾವೇ । ವಿರುದ್ಧ ಮನೇ ॥ ೧೪ ॥ ಪುತ್ರಾತೆ ಇಚ್ಛೀಲೇ ಕುಳ । ತಯಾಚೆ ಕಾಯೀ ಹೇಚಿ ಫಳ । ಜೀ ನಿರ್ದಳಿಜೆ ಕೇವಳ । ಗೋತ್ರ ಆಪುಲೇ ॥ ೧೫ ॥ ಹೇ ಮನೀಚ ಕೇವಿ ಧರಿಜೇ । ಆಪಣ ವಜ್ರಾಚೇಯಾ ಹೋ ಈಜೇ । ವರೀ ಘಡೇ ತರೀ ಕೀಜೇ । ಭಲೇ ಇಯಾ ॥ ೧೬ ॥ ಆಮ್ಹೀ ಜೇ ಜೇ ಚೋಡಾವೆ । ತೇ ಸಮಸ್ತೆ ಇಹೀ ಭೋಗಾವೇ । ಹೇ ಜೀವಿತಹೀ ಉಪಕಾರಾವೇ । ಕಾಜೀ ಯಾಚ್ಯಾ ॥ ೧೭ ॥ ಆಮ್ಹಿ ದಿಗಂತೀಜೇ ಭೂಪಾಳ । ವಿಭಾಂಡುನಿ ಸಕಳ । ಮಗ ಸಂತೋಷವಿಜೇ ಕುಳ । ಆಪುಲೇಜೇ ॥ ೧೮ ॥ ತೇಚಿ ಹೇ ಸಮಸ್ತ । ಪರೀ ಕೈಸೇ ಕರ್ಮ ವಿಪರೀತ । ಜೇ ಜಹಾಲೇ ಅಸತೀ ಉದ್ಯತ । ಝುಂಜಾವಯಾ ॥ ೧೯ ॥ ಅಂತೋರಿಯಾ ಕುನುರೇ । ಸಾಂಡೋನಿಯಾ ಭಾಂಡಾರೇ । ಶಸ್ತ್ರಾಗ್ರೀ ಜೀವ್ಹಾರೇ । ಆರೋಪುನೀ ॥ ೨೨೦ ॥ ಐಸಿಯಾತೇ ಕೈಸೇನಿ ಮಾರೂ । ಕವಣಾವರಿ ಶಸ್ತ್ರ ಧರೂ । ನಿಜ ಹೃದಯಾ ಕರೂ । ಘಾತು ಕೇವೀ ॥ ೨೧ ॥ ಹೇ ನೆಣಸೀ ತೂ ಕವಣ । ಪರೀ ಪೈಲ ಭೀಷ್ಮ ದ್ರೋಣ । ಜಯಾಚೆ ಉಪಕಾರ ಅಸಾಧಾರಣ । ಆಮ್ಹಾ ಬಹುತ ॥ ೨೨ ॥ ಏಥ ಶಾಲಕ ಸಾಸರೇ ಮಾತುಳ । ಆಣೆ ಬಂಧುಕೀ ಹೇ ಸಕಳ । ಪುತ್ರ ನಾತೂ ಕೇವಳ । ಇಷ್ಟಹೀ ಅಸತೀ ॥ ೨೩ ॥ ಅವಧಾರೀ ಅತೀ ಜವಳಿಕೇಚೇ । ಹೇ ಸಕಳಹೀ ಸೋಯರೇ ಆಮುಜೇ । ವ್ಹಾಕೋನಿ ರೋಷ ಆಥೀ ವಾಚೇ । ಬೋಲತಾಚಿ ॥ ೨೪ ॥

ಅರ್ಥ— ಇಂಥಾ ರೀತಿಯಿಂದ ಜಯನನ್ನು ದೊರಕಿಸುವ ಇಚ್ಛೆಯು ನನ್ನಲ್ಲಿರುವದಿಲ್ಲ. ಈ ಪ್ರಕಾರದ ರಾಜ್ಯವನ್ನಾದರೂ ದೊರಕಿಸುವದರಿಂದ ಏನು ಪ್ರಯೋಜನ? ॥ ೧೦ ॥ ಅರ್ಜುನನು ಅನ್ನುತ್ತಾನೆ. "ಈ ಎಲ್ಲ ರನ್ನೂ ಕೊಂದು ಯಾವ ಭೋಗವನ್ನು ಭೋಗಿಸತಕ್ಕದ್ದೋ ಅಂತಹ ಆ ಭೋಗವೆಲ್ಲನನ್ನೂ ಸುಟ್ಟುಬಿಡುವದೇ ಒಳಿತು." ॥ ೧೧ ॥ ಈ ತರಹದ ಸುಖದಕಂತಲೂ ನಾವು ಬೇಕಾದಂತಹ ದುಃಖವನ್ನೂ ಭೋಗಿಸಬಹುದು. ನಮ್ಮ ಬಂಧುವರ್ಗದವರ ದೆಸೆಯಿಂದ ನಮ್ಮ ಪ್ರಾಣವನ್ನಾದರೂ ಕೊಡುವೆವು. ॥ ೧೨ ॥ ಆದರೆ ಇವರೆಲ್ಲರನ್ನೂ ಘಾತಿಸಿ ನಾನೇ ರಾಜ್ಯಸುಖವನ್ನು ಭೋಗಿಸುವ ಇಚ್ಛೆಯು ಸ್ವಪ್ನದಲ್ಲಿಯೂ ಸುಳಿಯಲಾರದು. ॥ ೧೩ ॥ ಒಂದು ಸಮಯ, ನಮ್ಮ ಹಿರಿಯರಿಗೇ ಅಹಿತವನ್ನು ಬಯಸುವದಾದರೆ ನಾವು ಜನ್ಮವನ್ನೆತ್ತಿದ ಫಲವೇನು? ಮತ್ತು ಬದುಕಿರುವದಾದರೂ ಯಾರ ಸಲುವಾಗಿ? ॥ ೧೪ ॥ ಗೋತ್ರಜರು ತಮ್ಮ ಕುಲದಲ್ಲಿ ಪುತ್ರಪ್ರಾಪ್ತಿಯ ಅಪೇಕ್ಷೆಯನ್ನೇನೋ ಮಾಡುತ್ತಾರೆ. ಆದರೆ ಆ ಮಗನು ಅವರ ವಂಶವನ್ನು ಸಮೂಲವಾಗಿ ನಿರ್ಮೂಲ ಮಾಡುವದೇ ಅದರ ಫಲಿತೆಯೇ? ॥ ೧೫ ॥ ನಮ್ಮ ಮನಸ್ಸನ್ನು ಗುರುಹಿರಿಯರ ವಿಷಯದಲ್ಲಿ ವಜ್ರದಂತೆ ಕಠೋರ (ಕಠಿಣ) ಮಾಡಿ ಅವರ ಅಹಿತವನ್ನು ಚಿಂತಿಸುವದನ್ನಾದರೂ ಮನಸಿನಲ್ಲಿ ಹೇಗೆ ತರಬೇಕು? ಅವರಿಗೆ ನಮ್ಮ ಕೈಯಿಂದಾ ದಷ್ಟು ಉಪಕಾರವನ್ನೇ ಮಾಡಬೇಕು. ॥ ೧೬ ॥ ನಾವು ಏನೇನು ದೊರಕಿಸುವೆವೋ ಆ ಎಲ್ಲ ಪದಾರ್ಥಗಳ ಉಪಭೋಗವನ್ನು ಅವರು ತೆಗೆದುಕೊಳ್ಳಬೇಕು. ಇಷ್ಟರಿಂದಲೇ ತೀರಿತೇನು? ಅವರ ಕಾರ್ಯದ ಸಲುವಾಗಿ

ನಾವು ನಮ್ಮ ಜೀವವನ್ನೂ ಕೊಡಬೇಕಾಗುವದು. ॥ ೧೭ ॥ ನಾವು ಪೃಥ್ವಿಯ ಮೇಲಿನ ಎಲ್ಲ ರಾಜರನ್ನು ಜಯಿಸಬೇಕು, ಆ ಆ ಯೋಗದಿಂದ ನಮ್ಮ ಗೋತ್ರಜರಿಗೆ ಸಂತೋಷವನ್ನುಂಟು ಮಾಡಬೇಕು. ॥ ೧೮ ॥ ಹೀಗಿದ್ದು, ಕರ್ಮದ ಗತಿಯು ಎಷ್ಟು ವಿಪರೀತವಾಗಿರುವುದೆಂಬುದನ್ನು ನೋಡಿದರೆ ನಮ್ಮ ಗೋತ್ರಜರೇ ನಮ್ಮ ಸಂಗಡ ಯುದ್ಧ ಮಾಡುವದಕ್ಕೆ ಉದ್ಯುಕ್ತರಾಗಿರುವರು. ॥ ೧೯ ॥ ಹೆಂಗಸರೂ, ಸಣ್ಣ ಹುಡುಗರೂ ಮತ್ತು ದ್ರವ್ಯವೂ, ಸಂಪತ್ತೂ ಇದನ್ನೆಲ್ಲವನ್ನೂ ಬಿಟ್ಟು ತೀಕ್ಷ್ಣವಾದ ಶಸ್ತ್ರಾಸ್ತ್ರಗಳ ಆಧಾರದಿಂದ ಅವರು ತಮ್ಮ ಪ್ರಾಣ ವನ್ನು ಇಟ್ಟಿರುವರು. ॥ ೨೦ ॥ ಇಂಥವರನ್ನು ನಾನು ಹೊಡೆಯುವದಾದರೂ ಹೇಗೆ ? ಯಾರ ಮೇಲೆ ನಾನು ಶಸ್ತ್ರವನ್ನು ಹಿಡಿಯಲಿ ? ನನ್ನ ಪ್ರೀತಿಯ ಆಪ್ತರನ್ನು ಹೇಗೆ ಘಾತಮಾಡಲಿ ? ॥ ೨೧ ॥ ಇವರಾರೆಂಬುದು ನಿನಗೆ ಗೊತ್ತಿಲ್ಲವೇ ? ಆ ಕಡೆಗೆ ಭೀಷ್ಮ ಮತ್ತು ದ್ರೋಣರೂ ಇದ್ದಾರೆ. ಅವರು ನಮ್ಮ ಮೇಲೆ ಮಹತ್ವವಾದ ಉಪಕಾರವನ್ನು ಮಾಡಿದ್ದಾರೆ. ಈ ಸ್ಥಳದಲ್ಲಿ ಬೇಗರೂ, ಆಚಾರ್ಯರೂ, ಹಿರಿಯರೂ ಮಕ್ಕಳೂ, ಮೊಮ್ಮ ಕ್ಕಳೂ ಹಾಗೆಯೇ ಅಜ್ಜಂದಿರೂ, ಸೋದರ ಮಾವಂದಿರೂ, ಅಳಿಯಂದಿರೂ, ಆಪ್ತರೂ ಇದ್ದಾರೆ. ॥ ೨೩ ॥ ಶ್ರೀಕೃಷ್ಣನೇ, ಕೇಳು— ಈ ಎಲ್ಲರೂ ನಮ್ಮ ಸಮೀಪದ ಆಪ್ತರೇ ಇರುವರು. ಅಂದಬಳಿಕ ಇವರನ್ನು ಕೊಲ್ಲ ಬೇಕೆಂಬ ಉಚ್ಚಾರವು ನಮ್ಮ ಮುಖದಿಂದ ಹೊರಟರೆ ಅದೂ ಕೂಡ ದೋಷವೆಂದು ಗಣಿಸಲ್ಪಡುತ್ತದೆ. ॥ ೨೪ ॥

ಏತಾನ್ನ ಹಂತುಮಿಚ್ಛಾಮಿ ಘ್ನತೋಽಪಿ ಮಧುಸೂದನ ।
ಅಪಿ ತ್ರೈಲೋಕ್ಯ ರಾಜ್ಯಸ್ಯ ಹೇತೋಃ ಕಿಂನುಮಹೀಕೃತೇ ॥ ೩೫ ॥

[ಏತಾನ್ನೇತಿ] ಹೇ ವರೀ ಛಲತೇ ಕರಿತು । ಆತಾಚಿ ಎಥೆಮಾರಿತು । ವರೀ ಆಪಣ ಮನೇ ಘಾತು । ನ ಚಿಂತಾವಾ ॥ ೩೫ ॥ ತ್ರೈಲೋಕ್ಯಾಚೆ ಅನಕಳಿತ । ಜರೀ ರಾಜ್ಯ ಹೋಯಿಲ ಪ್ರಾಪ್ತ । ತರೀ ಹೇ ಅನುಚಿತ । ನಾಚರೇ ಮೀ ॥ ೩೬ ॥ ಜರೀ ಆಜಿ ಏಥ ಐಸೇ ಕೀಜೇ । ತರೀ ಕವಣಾಚ್ಯಾ ಮನೀ ಉರಿಜೇ । ಸಾಂಗೇ ಮುಖ ಕೇವೀ ಪಾಹಿಜೇ । ತುಝೀ ಕೃಷ್ಣಾ ॥ ೩೭ ।

ಅರ್ಥ— ನಮ್ಮ ವಿರುದ್ಧ ಪಕ್ಷದಿಂದ ಇವರು ನಮಗೆ ಬೇಕಾದ್ದು ಮಾಡಿದರೂ, ಇಲ್ಲವೇ ನಮ್ಮನ್ನು ಒಂದು ವೇಳೆ ಇಲ್ಲಿಯೇ ಕೊಂದರೂ, ನಾವು ಅವರ ಘಾತ ಮಾಡುವದನ್ನು ನಮ್ಮ ಮನ್ಸಿನಲ್ಲಿ ಸಹ ತರಬಾರದು ॥ ೩೫ ॥ ಹೆಚ್ಚೇನು, ನಿಷ್ಠುಂಟವಾದ ಈ ತ್ರಿಭುವನದ ರಾಜ್ಯವೇ ದೊರೆತರೂ ನಾನು ಈ ಅನುಚಿತ ಕರ್ಮವನ್ನು ಮಾಡಲಾರೆನು. ॥ ೩೬ ॥ ಕೃಷ್ಣಾ ಒಂದು ಸಮಯ ನಾವು ಇವರನ್ನು ಇಲ್ಲಿಯೇ ಕೊಲ್ಲುವದಾದರೆ ನಮ್ಮ ಪಾಲಿಗೆ ಮಹಾ ಪಾಪವೇ ಬರುವದು. ಆಲ್ಲದೇ ನಮ್ಮ ವಿಷಯಕವಾಗಿ ಆದರ ಭಾವವನ್ನು ತಾಳುವವರಾರು ? ಆಮೇಲೆ ನಿನ್ನ ದರ್ಶನ ವಾಗುವ ದಾದರೂ ಹೇಗೆ ? ॥ ೩೭ ॥

ನಿಹತ್ಯ ಧಾರ್ತರಾಷ್ಟ್ರಾನ್ನಃ ಕಾ ಪ್ರೀತಿಃ ಸ್ಯಾಜ್ಜನಾರ್ದನ ।
ಪಾಪಮೇವಾಶ್ರಯೇದಸ್ಮಾನ್ ಹತ್ವೈತಾ ನಾತತಾಯಿನಃ ॥ ೩೬ ॥

[ನಿಹತ್ಯೇತಿ] ಜರೀ ವಧ ಕರೀ ಗೋತ್ರಜಾಂಚಾ । ತರೀ ವಸೌಟಾ ಹೋವುನಿ ದೋಘಾಚಾ । ಮಜ ಜೋಡಲಾಸಿ ತೂ ಹಾತೀಚಾ । ದೂರ ಹೋಸಿ ॥ ೩೮ ॥ ಕುಲಹರಣೇ ಪಾತಕೇ । ತಿಯೇ ಆಂಗೀ ಜಡತೀ ಅಶೇಪೇ । ತಯೇ ವೇಳೀ ತೂ ಕವಣೇ ಕೇ । ದೇಖಾವಾಸೀ ॥ ೩೯ ॥ ಜೈಸಾ ಉದ್ಯಾನಾಮಾಜಿ ಅನಳ । ಸಂಚರಲಾ ದೇಪೋನಿ ಪ್ರಬಳ । ಮಗ ಕ್ಷಣಭರೀ ಕೋಕಿಳ । ಸ್ಥಿರನೋಹೇ ॥ ೪೦ ॥ ಕಾ ಸಕರ್ದಮ ಸರೋವರ । ಅವಲೋಕುನಿ ಜಕೋರ । ನ ಸೇವಿತ ಅವ್ಹೇರ । ಕರೂನಿ ನಿಘೆ ॥ ೪೧ ॥ ತಯಾಪರೀ ತೂ ದೇವಾ । ಮಜ ಝುಕಊನ ನ ಯೇಸೀ ಮಾವಾ । ಜರೀ ಪುಣ್ಯಾಚಾ ವೋಲಾವಾ । ನಾತಿಜೈಲ ॥ ೪೨ ॥

ಅರ್ಥ— ಒಂದು ವೇಳೆ ನಾನು ಗೋತ್ರ ಜರ ವಧ ಮಾಡಿದರೆ ದೋಷದ ತವರು ಮನೆಯೇ ಆದೇನು. ಶ್ರೀ ಕೃಷ್ಣಾ, ಹೀಗಾಗುವದರಿಂದ ನೀನು ಕೂಡ ನನ್ನ ಕೈ ಬಿಟ್ಟು ಹೋಗಬಹುದು. ಮುಂದೆ ನಿನ್ನ ಪ್ರಾಪ್ತಿಯಾಗುವ ಬಗೆ ಹೇಗೆ? ॥ ೨೮ ॥ ದೇವಾ, ಕುಲಕ್ಷಯ ಮಾಡುವದರಿಂದ ಅನಂತ ಪಾತಕಗಳು ತಗಲುತ್ತವೆ. ಆವಾಗ ನಿನ್ನನ್ನು ಎಲ್ಲಿ ಶೋಧ ಮಾಡಬೇಕು? ಅದು ಯಾರಿಗೆ ಸಾಧ್ಯ? ॥ ೨೯ ॥ ಉದ್ಯಾನದಲ್ಲಿ ಅಗ್ನಿಯು ಪ್ರಜ್ವಲಿತವಾದದ್ದನ್ನು ನೋಡಿ ಕೋಕಿಲೆಯು ಅಲ್ಲಿ ಕ್ಷಣಕಾಲವೂ ಕೂಡ ಹೇಗೆ ನಿಲ್ಲುವದಿಲ್ಲವೋ, ॥ ೩೩೦ ॥ ಕೆಸರಿನಿಂದ ಕಲಂಕಿತ (ತುಂಬಿದ) ಸರೋವರವನ್ನು ನೋಡಿ ಚಕೋರವು ಸೇವನವನ್ನು ಮಾಡದೇ ಹೇಗೆ ತಿರುಗಿ ಹೋಗುವದೋ, ॥ ೩೧ ॥ ಹಾಗೆಯೇ ದೇವಾ, ಒಂದು ವೇಳೆ ನನ್ನ ಪುಣ್ಯಾಂಶವು ಕಡಿಮೆಯಾದರೆ ನೀವು ನಿಮ್ಮ ಮಾಯೆಯಿಂದ ತಕ್ಕಿಸಿ ನನ್ನನ್ನು ಬಿಟ್ಟು ಹೊರಟು ಹೋಗುವಿರಿ. ॥ ೩೨ ॥

ತಸ್ಮಾನ್ನಾರ್ಹಾ ವಯಂ ಹಂತುಂ ಧಾರ್ತರಾಷ್ಟ್ರಾನ್ಸ್ವಬಾಂಧವಾನ್।
ಸ್ವಜನಂ ಹಿ ಕಥಂ ಹತ್ವಾ ಸುಖಿನಃ ಸ್ಯಾಮ ಮಾಧವ ॥ ೩೭ ॥

[ತಸ್ಮಾನ್ನಾರ್ಹಾವಯಂ ಹಂತುಮಿತಿ] ಮ್ಹಣೋನಿ ಮೀ ಹೇ ನ ಕರೀ । ಇಯೇ ಸಂಗ್ರಾಮೀ ಶಸ್ತ್ರನ ಧರೀ । ಹೇ ಕಿಡಾಳ ಬಹುತೀ ಪರೀ । ದಿಸತಸೇ ॥ ೩೩ ॥ ತುಜಸೀ ಅಂತರಾಯ ಹೋಈಲ । ಮಗ ಸಾಂಗೇ ಆಮುಚೇ ಕಾಯ ಉರೇಲ । ತೇಣೇ ದುಬೆ ಹಿಯೇ ಫುಟೇಲ । ತುಜವೀಣ ಕೃಷ್ಣಾ ॥ ೩೪ ॥ ಮ್ಹಣೋನಿ ಕೌರವ ಹೇ ವಧಿಜತೀ । ಮಗ ಅಮ್ಹಿ ಭೋಗ ಭೋಗಿಜತೀ । ಹೇ ಅಸೋ ಮಾತ ಅಘಡತೀ । ಅರ್ಜುನ ಮ್ಹಣೆ ॥ ೩೫ ॥

ಅರ್ಥ— ಈ ಕಾರಣದ ದೆಸೆಯಿಂದ ಈ ಕಾರ್ಯವನ್ನು ನಾನೆಂದೂ ಮಾಡೆನು. ಮತ್ತು ಈ ಸಮರ ಭೂಮಿಯಲ್ಲಿ ನನ್ನ ಕೈಯಿಂದ ಶಸ್ತ್ರವನ್ನು ಎಂದೂ ಹಿಡಿಯಲಿಕ್ಕಿಲ್ಲ. ಯಾಕಂದರೆ ಈ ಕೆಲಸವು ಬಹಳೇ ರೀತಿಯಿಂದಲೂ ನಿಂದ್ಯಾಸ್ಪದವಿರುವದೆಂದು ನನಗೆ ಕಾಣುತ್ತದೆ. ॥ ೩೩ ॥ ಕೃಷ್ಣಾ ನೀವು ನನ್ನನ್ನು ಬಿಟ್ಟುಹೋದರೆ ನಮ್ಮ ಗತಿ ಏನು? ಆ ದುಃಖದಿಂದ ಧೈರ್ಯಗುಂದಿ ನಮ್ಮ ಹೃದಯವು ಒಡೆದು ಹೋಗುವದು ॥ ೩೪ ॥ ಅರ್ಜುನನು ಅನ್ನುತ್ತಾನೆ—ದೇವಾ, ಈ ಕೌರವರನ್ನು ಸಂಹಾರ ಮಾಡಿ, ಆ ಮೇಲೆ ನಾವು ರಾಜ್ಯದ ಉಪ ಭೋಗ ತೆಗೆದುಕೊಳ್ಳಬೇಕೆಂಬ ಮಾತು ನನ್ನಿಂದ ಸರ್ವಥಾ ಆಗಲರಿಯದು. ॥ ೩೫ ॥

ಯದ್ಯಪ್ಯೇತೇ ನ ಪಶ್ಯಂತಿ ಲೋಭೋಪಹತಚೇತಸಃ।
ಕುಲಕ್ಷಯಕೃತಂ ದೋಷಂ ಮಿತ್ರದ್ರೋಹೇ ಚ ಪಾತಕಂ ॥ ೩೮ ॥

ಕಥಂ ನ ಜ್ಞೇಯಮಸ್ಮಾಭಿಃ ಪಾಪಾದಸ್ಮಾನ್ನಿವರ್ತಿತುಂ।
ಕುಲಕ್ಷಯ ಕೃತಂ ದೋಷಂ ಪ್ರಪಶ್ಯದ್ಭಿರ್ಜನಾರ್ದನ ॥ ೩೯ ॥

[ಯದ್ಯಪ್ಯೇತೇ ಇತಿ] ಹೇ ಅಭಿಮಾನ ಮದೇ ಭುಲಲೇ । ಜರ್ಹೀ ಪಾ ಸಂಗ್ರಾಮಾ ಆಲೆ । ತರ್ಹೀ ಆಮ್ಹಾಹಿತ ಆಪುಲೆ । ಜಾಣಾವೆ ಲಾಗೇ ॥ ೩೬ ॥ ಹೆ ಐಸೇ ಕೈಸೇ ಕರಾವೆ । ಜೇ ಆಪುಲೆ ಆಪಣ ಮಾರಾವೆ । ಜಾಣತ ಜಾಣತಾಚಿ ಸೇವಾವೆ । ಕಾಳಕೂಟ ॥ ೩೭ ॥ ಹಾಂಜೀ ಮಾರ್ಗ ಚಾಲತಾ । ಪುಢಾ ಸಿಂಹ ಜಾಹಲಾ ಅವಚಿತಾ । ತೋತವ ಚುಕವಿತಾ । ಲಾಭ ಆಥಿ ॥ ೩೮ ॥ ಅಸತಾ ಪ್ರಕಾಶ ಸಾಂಡಾವಾ । ಮಗ ಅಂಧಕೂಪ ಆಶ್ರಾವಾ । ತರೀ ತೇಥ ಕವಣ ದೇವಾ । ಲಾಭ ಸಾಂಗೇ ॥ ೩೯ ॥ ಕಾ ಸಮೋರ ಅಗ್ನಿ ದೇಪೋನಿ । ಜರೀ ನ ವಂಚಿಜೆವೋ ಸಂಡೋನಿ । ತರೀ ಕ್ಷಣೇ ಏಕಾ ಕವಳುನೀ ಜಾಳೂ ಸಕೇ ॥ ೩೪೦ ॥ ತೈಸೇ ದೋಷ ಹೇ

ಮೂರ್ತ । ಅಂಗೀವಾಜೋ ಅಸತೀ ಪಾಹತ । ಹೇ ಜಾಣತಾಹಿ ಕೇವಿ ಏಥ । ಪ್ರವರ್ತಾವೆ ॥ ೪೧ ॥ ಐಸೇ ಪಾರ್ಥ ತಿಯೇ ಅವಸರೀ । ಮ್ಹಣೇ ದೇವಾ ಅವಧಾರೀ । ಯಾ ಕಲ್ಮಷಾಚೀ ಥೋರೀ । ಸಾಂಗೇನ ತುಜ ॥ ೪೨ ॥

ಅರ್ಥ— ಈ ಕೌರವರು ಅಭಿಮಾನದಿಂದ ಉನ್ಮತ್ತರಾಗಿ ಯುದ್ಧ ಮಾಡಲಿಕ್ಕೆ ಬಂದಿರುವರೇನೋ ನಿಜ. ಆದರೆ ನಮ್ಮ ಹಿತವು ಯಾವುದರಿಂದೆಂಬುದನ್ನು ನಾವು ನೋಡಲೇಬೇಕು. ॥ ೩೬ ॥ ನಮ್ಮ ಆಪ್ತರನ್ನು ನಾವೇ ಕೊಲೆ ಮಾಡುವ ಅನುಚಿತ ಕರ್ಮವನ್ನು ಕೈಗೆ ಮಾಡುವುದು? ತಿಳಿದೂ ತಿಳಿದೂ ಕಾಳಕೂಟ ವಿಷವನ್ನು ಕುಡಿಯಬಹುದೇ? ॥ ೩೭ ॥ ಹಾದೀ ಹಿಡಿದು ಹೋಗುವಾಗ ಒಂದು ಸಮಯ, ಸಿಂಹವು ಎದುರಿಸಿದರೆ ಅದನ್ನು ತಪ್ಪಿಸಿ ಹೋಗುವುದೇ ಲಾಭದಾಯಕವು. ॥ ೩೮ ॥ ದೇವಾ, ಅನಾಯಾಸವಾಗಿ ದೊರಕಿದ ಬೆಳಕನ್ನು ತೊರೆದು, ಅಂಧಕೂಪದಲ್ಲಿ ಸೇರುವದರಿಂದ ಆಗುವ ಲಾಭವೇನು? ॥ ೩೯ ॥ ಎದುರಿಗೆ ಭಯಂಕರವಾಗಿ ಪ್ರಜ್ವಲಿತವಾಗಿರುವ ಅಗ್ನಿಜ್ವಾಲೆಯನ್ನು ನೋಡಿಯೇ ಅದನ್ನು ಬಿಟ್ಟು ಹೋಗವಿದ್ದಲ್ಲಿ ಅದು ನಮ್ಮನ್ನು ಕ್ಷಣದಲ್ಲಿಯೇ ಸುಟ್ಟು ಭಸ್ಮಮಾಡುವದು. ॥ ೪೦ ॥ ಅದೇ ಪ್ರಕಾರ ಈ ಮೂರ್ತಿಮಂತ ದೋಷವು ನಮ್ಮ ಜೆನ್ನು ಪತ್ತಿರುವುದೆಂಬುದನ್ನು ತಿಳಿದ ಮೇಲೂ, ಈ ಪಾಪಕರ್ಮವನ್ನು ಮಾಡಲಿಕ್ಕೆ ಹೇಗೆ ಪ್ರವರ್ತರಾಗಬೇಕು ॥ ೪೧ ॥ ಹೀಗೆ ಪಾರ್ಥನು ಆ ಸಮಯದಲ್ಲಿ ಅನ್ನುತ್ತಾನೆ—ದೇವಾ, ಈ ಪಾತಕದ ಮಹತ್ವವು ಎಷ್ಟಿರುವುದೆಂಬುದನ್ನು ಹೇಳುತ್ತೇನೆ ಕೇಳು. ॥ ೪೨ ॥

ಕುಲಕ್ಷಯೇ ಪ್ರಣಶ್ಯಂತಿ ಕುಲಧರ್ಮಾಃ ಸನಾತನಾಃ ।
ಧರ್ಮೇ ನಷ್ಟೇ ಕುಲಂ ಕೃತ್ಸ್ನಮಧರ್ಮೋಽಭಿಭವತ್ಯುತ ॥ ೪೦ ॥

[**ಕುಲಕ್ಷಯೆ ಇತಿ**] ಜೈಸೇ ಕಾಷ್ಠೆ ಕಾಷ್ಠ ಮಂಥಿಜೇ । ತೇಥವಹ್ನಿ ಏಕ ಉಪಜೇ । ತೇಣೇ ಕಾಷ್ಠ ಜಾತ ಜಾಳಿಜೇ । ಪ್ರಜ್ವಳಲೇಸಿ ॥ ೪೩ ॥ ತೈಸಾ ಗೋತ್ರೀಚಿ ಪರಸ್ಪರೆ । ಜರೀ ವಧ ಘಡೇ ಮತ್ಸರೇ । ತರೀ ತೇಣೆ ಮಹಾದೋಷೇ ಘೋರೇ । ಕುಳಚಿನಾಶೇ ॥ ೪೪ ॥ ಮ್ಹಣವೂನ ಏಣೆ ಪಾಪೇ । ಪಂಶಜಧರ್ಮ ಲೋಪೇ । ಮಗ ಅಧರ್ಮಚೀ ಆರೋಪೇ । ಕುಳಾಮಾಜಿ ॥ ೪೫ ॥

ಅರ್ಥ— ಕಟ್ಟಿಗೆಯ ಮೇಲೆ ಕಟ್ಟಿಗೆಯನ್ನಿಟ್ಟು ತಿಕ್ಕುವದರಿಂದ ಅಲ್ಲಿ ಅಗ್ನಿಯು ಉತ್ಪನ್ನವಾಗುತ್ತದೆ. ಮತ್ತು ಆ ಅಗ್ನಿಯು ಪ್ರಜ್ವಲಿತವಾದಮೇಲೆ ಎಲ್ಲ ಜಾತಿಯ ಕಟ್ಟಿಗೆಗಳೂ ಸುಟ್ಟು ಹೋಗುತ್ತವೆ. ॥ ೪೩ ॥ ಅದೇಪ್ರಕಾರ ತಮ್ಮ ಗೋತ್ರಜರಲ್ಲಿ ಒಂದುವೇಳೆ ಮತ್ಸರದಿಂದ ಒಬ್ಬರಿಗೊಬ್ಬರು ವಧಮಾಡುವವರಿಂದ ಆ ಮಹಾಘೋರವಾದ ದೋಷಾಗ್ನಿಯಿಂದ ಸರ್ವಕುಲದ ನಾಶವಾಗುತ್ತದೆ. ॥ ೪೪ ॥ ಕಾರಣ ಈ ಕುಲಕ್ಷಯದ ಪಾಪದಿಂದ ಕುಲಧರ್ಮದ ನಾಶವಾಗುತ್ತದೆ. ಮತ್ತು ಆ ಕುಲದಲ್ಲಿ ಅಧರ್ಮದ ಪ್ರವೇಶವಾಗುತ್ತದೆ. ॥ ೪೫ ॥

ಅಧರ್ಮಾಭಿಭವಾತ್ಕೃಷ್ಣ ಪ್ರದುಷ್ಯಂತಿ ಕುಲಸ್ತ್ರಿಯಃ ।
ಸ್ತ್ರೀಷು ದುಷ್ಟಾಸು ವಾರ್ಷ್ಣೇಯ ಜಾಯತೇ ವರ್ಣ ಸಂಕರಃ ॥ ೪೧ ॥

[**ಅಧರ್ಮಾಭಿಭವಾದಿತಿ**] ಏಥ ಸಾರಾಸಾರ ವಿಚಾರಾವೇ । ಕವಣೇಕಾಯ ಆಚರಾವೇ । ಆಣಿ ಪಿಧಿನಿಷೇಧ ಆಘವೇ । ಪಾರುಷತೀ ॥ ೪೬ ॥ ಅಸತಾ ದೀಪ ದವಡಿಜೆ । ಮಗ ಅಂಧಕಾರೀ ರಹಾಟಿಜೇ । ತರೀ ಉಜೂಟ ಕಾ ಅಡಖುಳಿಜೇ । ಜಯಾಪರೀ ॥ ೪೭ ॥ ತೈಸಾ ಕುಳೀ ಕುಳಕ್ಷಯ ಹೋಯ । ತಯೇ ವೇಳೀತೋ ಆದ್ಯಧರ್ಮ ಜಾಯ । ಮಗ ಆಸ ಕಾಹೀ ಆಹೇ । ಪಾಪಾ ವಾಂಚುನೀ ॥ ೪೮ ॥ ಜೈ ಯಮು ನಿಯಮು ಟಾಕತೀ । ತೇಥ ಇಂದ್ರಿಯೇ ಸೈರಾ ರಾಹಟತೀ ।

ವ್ಯಭಿಚಾರೇ ವ್ಯಭಿಚಾರ ಘಡತೀ । ಕುಲಸ್ತ್ರಿಯಾ ॥ ೪೯ ॥ ಉತ್ತಮ ಅಧಮೀ ಸಂಚರತೀ । ಐಸೇ ವರ್ಣಾವರ್ಣ ಮಿಸಳತೀ । ತೇಥ ಸಮೂಳ ಉಪಡತೀ । ಜಾತಿಧರ್ಮ ॥ ೫೦ ॥ ಜೈಸೀ ಚೋರಾ ಟಾಚಿಯೇ ಬಳೇ । ಪಾವಿಜೇ ಸೈರಾ ಕಾಉಳೇ । ತೈಸೀ ಮಹಾಪಾಪೇ ಕುಳೇ । ಸಂಚರತೀ ॥ ೫೧ ॥

ಅರ್ಥ— ಅಧರ್ಮದ ಪ್ರಾಬಲ್ಯವಾಯಿತೆಂದರೆ ಈ ಸ್ಥಳದಲ್ಲಿ ಸಾರ, (ಸತ್ಯ) ಅಸಾರ (ಅಸತ್ಯ) ವಿಚಾರ ಯೋಗ್ಯಾ ಯೋಗ್ಯ ಆಚರಣ, ಮತ್ತು ಕರ್ತವ್ಯಾಕರ್ತವ್ಯ ಈ ಎಲ್ಲವೂ ನಾಶಹೊಂದುತ್ತವೆ. ॥೪೬॥ ಇದ್ದ ದೀವಿಗೆಯನ್ನು ಆರಿಸಿ ಕತ್ತಲೆಯಲ್ಲಿ ತಿರುಗಾಡಹತ್ತಿದರೆ ಯಾವಪ್ರಕಾರ ಮನುಷ್ಯನು ಸರಳವಾದ ಹಾದಿಯಲ್ಲಿಯೂ ಎಡವು ತ್ತಾನೆಯೋ, ॥ ೪೭ ॥ ಅದರಂತೆಯೇ ಕುಲನಾಶಕವಾದ ಈ ಪಾಪದಿಂದ ಸನಾತನವಾದ ಕುಲಧರ್ಮಗಳು ಸಂಪೂರ್ಣವಾಗಿ ನಷ್ಟವಾಗುವುದೇ ಆ ಕುಲದಲ್ಲಿ ಪಾಪದ ಸಂಚಯವಾಗುವದು. ಆ ಪಾಪದ ಫಲವನ್ನು (ನರಕವನ್ನು) ಭೋಗಿಸಬೇಕಾಗುವದಲ್ಲದೇ ಮತ್ತೇನು ? ॥ ೪೮ ॥ ಯಮ-ನಿಯಮವು (ಯಮ=ಮನಸಿನ ನಿಗ್ರಹ; ನಿಯಮ=ಇಂದ್ರಿಯ ನಿಗ್ರಹ) ಆಗದಂತೆ ಆದಕೂಡಲೇ ಇಂದ್ರಿಯಗಳು ಸ್ವೇಚ್ಛೆಯಿಂದ ವರ್ತನ ಮಾಡಲಿಕ್ಕೆ ಹತ್ತುತ್ತವೆ. ಆದುದರಿಂದ ಕುಲಸ್ತ್ರೀಯರ ಕಡೆಯಿಂದ ಪಾಪಾಚರಣೆಯು ಉಂಟಾಗುತ್ತದೆ. ॥ ೪೯ ॥ ಮತ್ತು ಉತ್ತಮ, ಅಧಮ ಇವರ ಸಮಾಗಮವಾಗಿ ಬ್ರಾಹ್ಮಣ ಶೂದ್ರಾದಿ ಪರಸ್ಪರ ವರ್ಣಗಳು ಕೂಡಿ ಹೋಗುತ್ತವೆ. ಆ ಯೋಗದಿಂದ ಎಲ್ಲ ಕುಲ ಧರ್ಮಗಳು ಸಂಪೂರ್ಣವಾಗಿ ನಾಶಹೊಂದುತ್ತವೆ. ॥ ೫೦ ॥ ನಾಲ್ಕೂ ಕಡೆಯ ಹಾದಿಗಳು ಕೂಡಿವ ಸ್ಥಳದಲ್ಲಿ ಇಟ್ಟ 'ಬಲಿ'ಯ (ಅನ್ನದ) ಮೇಲೆ ನಾಲ್ಕೂಕಡೆಯಿಂದ ಕಾಗೆಗಳು ಹೇಗೆ ಕೂಡುತ್ತವೆಯೋ, ಅದೇ ಪ್ರಕಾರಾ ಇಂಥ ವರ್ಣಸಂಕರವಾದ ಕುಲವಲ್ಲಿ ಮಹಾಪಾತಕಗಳ ಪ್ರವೇಶವು ಆಗುತ್ತದೆ. ॥ ೫೧ ॥

ಸಂಕರೋ ನರಕಾಯೈವ ಕುಲಘ್ನಾನಾಂ ಕುಲಸ್ಯ ಚ ।
ಪತಂತಿ ಪಿತರೋ ಹ್ಯೇಷಾಂ ಲುಪ್ತಪಿಂಡೋದಕಕ್ರಿಯಾಃ ॥ ೪೨ ॥

[**ಸಂಕರ ಇತಿ**] ಮಗ ಕುಳಾ ತಯಾ ಅನೇಖಾ । ಆಣಿ ಕುಳಘಾತಕಾ । ಯೇರ ಯೇರಾ ನರಕಾ । ಜಾಣೇ ಆಧಿ ॥ ೫೨ ॥ ದೇಖೀ ವಂಶವೃದ್ಧಿ ಸಮಸ್ತ । ಯಾಪಾ ಹೋಯ ಪತಿತ । ಮಗವೋವಾಂಡತಿ ಸ್ವರ್ಗಸ್ಥ । ಪೂರ್ವಪುರುಷ ॥ ೫೩ ॥ ಜೇಥ ನಿತ್ಯಾದಿ ಕ್ರಿಯಾ ತಾಕೆ । ಆಣಿ ನೈಮಿತ್ತಿಕ ಕ್ರಿಯಾ ಪಾರುಪೆ । ತೇಥ, ಕವಣಾ ತಿಳೋದಕೇ । ಕವಣ ಅರ್ಪೀ ॥ ೫೪ ॥ ತರೀ ಪಿತರ ಕಾಯ ಕರಿತೀ । ಕೈಸೇನಿಸೀ ಸ್ವರ್ಗಿ ವಸತೀ । ವ್ಯಾಜೋನಿ ತೇಹೀಯೇತೀ । ಕುಳಾಪಾಸೀ ॥೫೫॥ ಜೈಸಾ ನಖಾಗ್ರೀ ವ್ಯಾಳ ಲಾಗೇ । ತೋ ಶಿಖಾತ ವ್ಯಾಪೀ ವೇಗೆ । ತೈಸೀ ಆ ಬ್ರಹ್ಮ ಕುಳ ಅವಘೇ । ಆಪ್ಲ್ಯವಿಜೇ ॥ ೫೬ ॥

ಅರ್ಥ— ಆ ಮೇಲೆ ಆ ಕುಲಕ್ಕೆ, ಆ ಕುಲದ ನಾಶಮಾಡುವವರಿಗೆ ಉಭಯತರಿಗೂ ನರಕ ಪ್ರಾಪ್ತಿಯಾಗುತ್ತದೆ. ॥ ೫೨ ॥ ಹೀಗೆ ನೋಡು ಇದೇ ಪ್ರಕಾರ ಎಲ್ಲ ವಂಶದ (ವೃದ್ಧಿ) ದೂಷಿತವಾಗಿ ಸ್ವರ್ಗಸ್ಥ ಪಿತರರು (ಶ್ರಾದ್ಧಾದಿ ಪಿಂಡೋದಕಗಳಿಲ್ಲದೇ) ತಮ್ಮಿಂದ ತಾವೇ ಪತನ ಹೊಂದುತ್ತಾರೆ. ॥ ೫೩ ॥ ಯಾವ ಕುಲದಲ್ಲಿ ನಿತ್ಯ ನೈಮಿತ್ತಿಕ ಕರ್ಮಗಳು ಲೋಪವಾಗಿರುವವೋ, ಆ ಸ್ಥಳದಲ್ಲಿ ಪಿತೃಗಳಿಗೆ ತಿಲೋದಕವನ್ನು ಕೊಡುವವರಾರು ? ॥೫೪॥ ಹೀಗೆ ಸ್ಥಿತಿಯು ಆದಮೇಲೆ ಆ ಪಿತೃಗಳು ಏನು ಮಾಡಬೇಕು, ಸ್ವರ್ಗದಲ್ಲಿ ಹೇಗೆ ಇರಬೇಕು ? ಅಂತಾ ಅವರಾ ದೂ ತಮ್ಮ ಕುಲದ ಹತ್ತರ ಬರುತ್ತಾರೆ. ॥ ೫೫ ॥ ಯಾವ ಪ್ರಕಾರ ನಖಾಗ್ರುಕ್ಕೆ ಸರ್ಪದಂಶವಾದಕೂಡಲೇ ಅವರ ವಿಷವು ತಲೆಯು ಕೂದಲವರೆಗೆ ಏರಿ ಶರೀರವನ್ನೆಲ್ಲ ವ್ಯಾಪಿಸಿ ಬಿಡುತ್ತದೆ. ಅದರಂತೆ ಆಪ್ತವರ್ಗದ ವಧ ಮಾಡುವದರಿಂದ ಉತ್ಪನ್ನವಾಗುವ ದೋಷವು ಈಗ ಜೀವಂತವಿರುವ ಕುಲದಿಂದ ಮೂಲ ಪುರುಷರವರೆಗೆ ಎಲ್ಲರನ್ನೂ (ನರಕದಲ್ಲಿ) ಹಾಕುತ್ತದೆ. ॥ ೫೬ ॥

ದೋಷೈರೇತೈಃ ಕುಲಘ್ನಾನಾಂ ವರ್ಣಸಂಕರಕಾರಕೈಃ ।
ಉತ್ಸಾದ್ಯಂತೇ ಜಾತಿಧರ್ಮಾಃ ಕುಲಧರ್ಮಾಶ್ಚ ಶಾಶ್ವತಾಃ ॥ ೪೩ ॥
ಉತ್ಸನ್ನ ಕುಲಧರ್ಮಾಣಾಂ ಮನುಷ್ಯಾಣಾಂ ಜನಾರ್ದನ ।
ನರಕೇ ನಿಯತಂ ವಾಸೋ ಭವತೀತ್ಯನು ಶುಶ್ರುಮ ॥ ೪೪ ॥
ಅಹೋಬತ ಮಹತ್ಪಾಪಂ ಕರ್ತುಂ ವ್ಯವಸಿತಾ ವಯಂ ।
ಯದ್ರಾಜ್ಯ ಸುಖಲೋಭೇನ ಹಂತುಂ ಸ್ವಜನಮುದ್ಯತಾಃ ॥ ೪೫ ॥

[ದೊಷೈರಿತಿ] ದೇವಾ ಅವಧಾರೀ ಆತೀಕ ಏಕ । ಏಥ ಘುತೇ ಸುಪಾ ಪಾತಕ । ಜೇ ಸಂಗ ದೋಷೇ ಹಾ ಲೌಕಿಕ । ಭ್ರಂಶ ವಜೇ ॥ ೨೭ ॥ ಚೈಸಾ ಘುತೇ ಆಪುಲಾ । ವಾನಿನಸೇ ಅಗ್ನಿ ಲಾಗಲಾ । ತೋ ಆಣಿ ಕಾಪಿ ಪ್ರಜ್ವಾಳಲಾ । ಜಾಳೂನಿ ಘಾಲೀ ॥ ೨೮ ॥ ತೈಸಿಯಾ ತಯಾ ಕುಳ ಸಂಗತೀ । ಜೇ ಜೇ ಲೋಕ ವರ್ತತೀ । ತೇಹೀ ಬಾಧಾ ವಾಪತೀ । ನಿಮಿತ್ತೇ ಏಕೇ ॥ ೨೯ ॥ ತೈಸೇ ನಾನಾ ದೋಷೇ ಸಕಳ । ಅರ್ಜುನ ಮ್ಹಣೇ ತೇ ಕುಳ । ಮಗ ಮಹಾ ಘೋರ ಕೇವಳ । ನಿರಯ ಭೋಗಿಗೇ ॥ ೨೬೦ ॥ ವಡಿಲಿಯಾ ತಿಯೇ ರಾಯೀ । ಮಗ ಕಲ್ಪಾಂತೀಹೀ ಉಕಲ ನಾಹೀ । ಯೇ ಸಣೇ ವತನ ಕುಳಕ್ಷಯೀ । ಅರ್ಜುನ ಮ್ಹಣೇ ॥ ೬೧ ॥ ದೇವಾ ಹೇ ವಿವಿಧ ಕಾನೀ ಐಕಿಜೇ । ಮನೀ ಅಝುನಿನವೀ ತ್ರಾಸ ನುಪಜೇ ! ಹೃದಯು ವಜ್ರಾಚೇ ಹೇ ಕಾಯಕೀಚೇ । ಅವಧಾರೀ ಪಾ ॥ ೬೨ ॥ ಅಪೇಕ್ಷಿಜೇ ರಾಜ್ಯಸುಖ । ಜಯಾ ಲಾಗೀ ತೇ ತನ ಕ್ಷಣಿಕ । ಐಸೇ ಜಾಣತಾಹೀ ದೂಖು । ಅಹ್ಹೇರೂನಾ ॥ ೬೩ ॥ ಜೇ ಹೇ ವಡಿಲ ಸಕಳ ಆಪುಲೀ । ಸಧಾವಯಾ ದಿರೀ ಸೂದಲೀ । ಸಾಂಗ ಪಾ ಕಾಯ ಥೇಕುಲೀ । ಘಡಲೇ ಆಮ್ಹಾ ॥೬೪॥

ಅರ್ಥ— ದೇವಾ, ಕೇಳು. ಇಲ್ಲಿ ಇನ್ನೂ ಒಂದು ಮಹತ್ವವಾದ ಪಾತಕವು ಉಂಟಾಗುತ್ತದೆ. ಅದು ಯಾವುದೆಂದರೆ— ಈ ದುಸ್ಸಂಗತಿಯ ದೋಷದಿಂದ ಲೋಕಾಚಾರವು ಇಲ್ಲದಂತೆ ಆಗುತ್ತದೆ. ॥ ೨೭ ॥ ಯಾವ ಪ್ರಕಾರ ಮನೆಗೆ ಒಮ್ಮೊಮ್ಮೊಲೇ ಬೆಂಕಿ ಹತ್ತಿ ಆ ಅಗ್ನಿಯು ಪ್ರಜ್ವಲಿತವಾದ ಕೂಡಲೇ ಮನೆಯ ಹೊಂದಿಗೆ ಇರುವ ಎರಡನೇ ಮನೆಗಳನ್ನು ಸಹ ಹೇಗೆ ಸುಡುತ್ತದೆಯೋ ॥ ೨೮ ॥ ಅದೇ ಪ್ರಕಾರ ಇಂಥ ಕುಲದ ಸಹವಾಸವು ಯಾವ ಜನರಿಗೆ ತಗಲುವದೋ ಅವರಿಗೂ, ಅವರ ಸಂಗತಿಯ ಯೋಗದಿಂದ ಪಾತಕವು ಹತ್ತುತ್ತದೆ. ॥ ೨೯ ॥ ಅರ್ಜುನನು ಅನ್ನುತಾನೆ — ದೇವಾ, ಅದೇ ಪ್ರಕಾರ ಆ ಕುಲದಲ್ಲಿ ನಾನಾಪ್ರಕಾರದ ದೋಷಗಳು ಬಂದೊದಗುವವರಿಂದ ಅವರು ಭಯಂಕರವಾದ ನರಕವಾಸವನ್ನು ಭೋಗಿಸಬೇಕಾಗುತ್ತದೆ. ॥ ೬೦ ॥ ಅರ್ಜುನನು ಮತ್ತೆ ಅನ್ನುತ್ತಾನೆ – ಆ ನರಕದಲ್ಲಿ ಅವರು ಬಿದ್ದ ಮೇಲೆ ಕಲ್ಪಾಂತರವಪರೆಗೂ ಅವರಿಗೆ ಬಿಡುಗಡೆ ಯಾಗುವದಿಲ್ಲ. ಇಷ್ಟು ಈ ಕುಲಕ್ಷಯ ಪಾತಕದಿಂದ ನರಕವಾಸದಂಥ ಕಷ್ಟವನ್ನು ಭೋಗಿಸಬೇಕಾಗುತ್ತದೆ. ॥ ೬೧ ॥ ದೇವಾ, ಇಷ್ಟು ಕಾಲದವರೆಗೆ (ದೈನ್ಯಯುಕ್ತನಾಗಿ) ನಾನಾ ತರಹದ ಸಂಭಾಷಣವನ್ನು ನೂಡಿದ್ದು ಕೇಳಿಯೂ ನಿಮಗೆ ಅವಂದ ಸ್ವಲ್ಪಾದರೂ ತ್ರಾಸು ಆಗುವದಿಲ್ಲ. ಅಂದ ಬಳಿಕ ನೀವು ನಿಮ್ಮ ಮನಸ್ಸನ್ನು ಇಷ್ಟು ಕಠಿಣವನ್ನೇಕೆ ಮಾಡುವಿರಿ. ॥ ೬೨ ॥ ಯಾವ ಸಕ್ಷಯವಾದ ಈ ಶರೀರದ ದೆಸೆಯಿಂದ ರಾಜ್ಯಸುಖದ ಅಪೇಕ್ಷೆಯನ್ನು ನೂಡುತ್ತಿನೆಯೋ, ಆ ಶರೀರವು ಕ್ಷಣಭಂಗುರವಾದದ್ದೆಂಬುದು ತಿಳಿದಾಗ್ಯೂ ನಾವು ಕುಲಕ್ಷಯದ ದೋಷ ನೂಡುವದನ್ನು ಬಿಟ್ಟುಬಿಡಬಾರದೇ ? ॥ ೬೩ ॥ ನಮ್ಮ ಅಜ್ಜಂದಿರೂ, ಗುರುಗಳೂ ಮುಂತಾದ ಎಲ್ಲ ಹಿರಿಯರೂ ಇಲ್ಲಿ ಕೂಡಿರುವರು. ಅವರನ್ನು ಸಂಹಾರ ಮಾಡಬೇಕೆಂಬ ಹೇತುವಿನಿಂದ ಅವರ ಕಡೆಗೆ ದೃಷ್ಟಿಯನ್ನಿಟ್ಟದ್ದು ನಮ್ಮ ಕಡೆಯಿಂದ ಸಾಮಾನ್ಯವಾದ ಪಾಪವೇ ಎಂಬುದನ್ನು ನೀವೇ ಹೇಳಿ ನೋಡುವಾ. ॥ ೬೪ ॥

ಯದಿ ಮಾಮಪ್ರತೀಕಾರಮಶಸ್ತ್ರಂ ಶಸ್ತ್ರಪಾಣಯಃ ।
ಧಾರ್ತರಾಷ್ಟ್ರಾ ರಣೇ ಹನ್ಯುಸ್ತನ್ಮೇ ಕ್ಷೇಮತರಂ ಭವೇತ್ ॥ ೪೬ ॥

[ಯದೀತಿ] ಆತಾ ಯಾವರೀ ಜೇ ಚಿಯಾವೇ । ತಯಾ ಪಾಸೂನಿ ಹೇ ಬರವೇ । ಜೇ ಶಸ್ತ್ರೇ ಸಾಂಡೂನಿ ಸಾಹಾವೇ । ಬಾಣಯಾಂಚೆ ॥ ೬೫ ॥ ತಯಾವರೀ ಹೋಯ ಜಿತುಕೇ । ತೇ ಮರಣಹೀ ವರೀ ಸಿಕೇ । ಪರೀ ಯೇಣೇ ಕಲ್ಮಷೇ । ಚಾಡ ನಾಹೀ ॥ ೬೬ ॥ ಐಸೇ ದೇಖೂನ ಸಕಳ । ಅರ್ಜುನೇ ಆಪುಲೇ ಕುಳ । ಮಗ ಮ್ಹಣೇ ರಾಜ್ಯ ತೇ ಕೇವಳ । ನಿರಯ್ಯಭೋಗ ॥ ೬೭ ॥

ಅರ್ಥ— ಆದರೆ ಹೀಗೆ ಮಾಡಿ ರಾಜ್ಯಸುಖ ಲೋಭದಿಂದ ನಮ್ಮ ಬಾಂಧವರನ್ನು ಕೊಲ್ಲಲುದ್ಯುಕ್ತರಾಗಿ ಇಂಥ ಕುಲನಾಶಕವಾದ ಪಾಪಕರ್ಮವನ್ನು ಮಾಡುವದಕ್ಕಿಂತ ನಿಃಶಸ್ತ್ರನಾಗಿ ವಿರೋಧಿಸದೇ ವೈರಿಗಳ ಬಾಣಗಳನ್ನು ಸಹನ ಮಾಡಿ, ಅವರ ಬಾಣಗಳಿಂದ ಹತನಾದರೆ ಬಳಿತಾಗುವದು. ॥ ೬೫ ॥ ಹೀಗೆ ಮಾಡುವದರಿಂದ ನಮಗೆ ಒಂದು ವೇಳೆ ಮರಣ ಪ್ರಾಪ್ತವಾದರೂ ಬಹಳೇ ಬಳಿತಾಗುವದು. ಆದರೆ ಈ ಕೌರವರ ಸಂಹಾರ ಮಾಡಿ ಪಾಪದ ಸಂಗ್ರಹ ಮಾಡಿ ಕೊಳ್ಳುವ ಅಪೇಕ್ಷೆಯು ನನಗಿರುವದಿಲ್ಲ. ॥ ೬೬ ॥ ಈ ಪ್ರಕಾರ ಅರ್ಜುನನು ತನ್ನ ಎಲ್ಲ ಸ್ವಜನರನ್ನೂ, ಆಪ್ತರನ್ನೂ ನೋಡಿ ಅನ್ನುತ್ತಾನೆ— ಇವರ ವಧೆಯನ್ನು ಮಾಡಿ ರಾಜ್ಯ ದೊರಕಿಸುವದು ಅಂದರೆ ಕೇವಲ ನರಕ ಪ್ರಾಪ್ತಿ ಮಾಡಿ ಕೊಳ್ಳುವದೇ ಆಗಿರುವದು. ॥ ೬೭ ॥

ಸಂಜಯ ಉವಾಚ—

ಏವ ಮುಕ್ತ್ವಾರ್ಜುನಃ ಸಂಖ್ಯೇ ರಥೋಪಸ್ಥ ಉಪಾವಿಶತ್ ।
ವಿಸೃಜ್ಯ ಸಶರಂ ಚಾಪಂ ಶೋಕ ಸಂವಿಗ್ನ ಮಾನಸಃ ॥ ೪೭ ॥

ಇತಿ ಶ್ರೀ ಮದ್ಭಗವದ್ಗೀತಾ ಸೂಪ ನಿಷತ್ಸು ಬ್ರಹ್ಮ ವಿದ್ಯಾಯಾಂ ಯೋಗ ಶಾಸ್ತ್ರೇ ಶ್ರೀ ಕೃಷ್ಣಾರ್ಜುನ ಸಂವಾದೇಽರ್ಜುನ ವಿಷಾದ ಯೋಗೋ ನಾಮ ಪ್ರಥಮೋಧ್ಯಾಯ ಃ ॥ ೧ ॥

[ಏವ ಮುಕ್ತ್ವಾರ್ಜುನ ಇತೀ-] ಐಸೇ ತೀಯೇ ಅವಸರೀ । ಅರ್ಜುನ ಬೋಲಿಲಾ ಸಮರೀ । ಸಂಜಯ ಮ್ಹಣೇ ಅವಧಾರೀ । ಧೃತರಾಷ್ಟ್ರತೇ ॥ ೬೪ ॥ ಮಗ ಅತ್ಯಂತ ಉದ್ವೇಗಲಾ । ನ ಧರತ ಗಹಿನರೂ ಆಲಾ । ತೇಥ ಉಡೀ ಘಾತಲೀ ಖಾಲಾ । ರಥಾಸನಿಯಾ ॥ ೬೯ ॥ ಜೈಸಾ ರಾಜಕುಮರೂ ಪದಚ್ಯುತು । ಸರ್ವಥಾ ಹೋಯ ಉಪಹತು । ಕಾರವಿ ರಾಹುಗ್ರಸ್ತು । ಪ್ರಭಾಹೀನು ॥ ೭೦ ॥ ನಾ ತರೀ ಮಹಾ ಸಿದ್ಧೀ ಸಂಭ್ರಮೇ । ಚಿಂತಿಲಾ ತಾಪಸ ಭ್ರಮೇ । ಮಗ ಆಕಳುನಿ ಕಾಮೇ । ದೀನುಕೀಜೇ ॥ ೭೧ ॥ ತೈಸಾತೋ ಧನುರ್ಧರು । ಅತ್ಯಂತ ದುಃಖೇ ಜರ್ಜರೂ । ದೀಸೇ ಜೇಥ ರಂಹವರು । ತ್ಯಜಿಲಾ ತೇಣೇ ॥ ೭೨ ॥ ಮಗ ಧನುಷ್ಯ ಬಾಣ ಸಾಂಡಿಲೇ । ನಧರತ ಅಶ್ರುಪಾತ ಆಲೇ । ಐಸೇ ಐಕರಾಯಾ ವರ್ತಲೇ । ಸಂಜಯೋ ಮ್ಹಣೇ ॥ ೭೩ ॥ ಆತಾ ಯಾವರೀ ತೋ ನೈಕುಂಠ ನಾಥೂ । ದೇಖೋನಿ ಸಖೇದ ಪಾರ್ಥು । ಕವಣೇ ಪರೀ ಪರವಾರ್ಥೂ । ನಿರುಪೀಲ ॥ ೭೪ ॥ ತೇ ಸವಿಸ್ತರ ಪುಢಾರೀ ಕಥಾ ! ಅತಿ ಸಕೌತಕ ಐಕತಾ ಜ್ಞಾನದೇವೋ ಮ್ಹಣೇ ಆತಾ । ನಿವೃತ್ತಿದಾಸ ॥ ೭೫ ॥ ಇತೀ ಶ್ರೀ ಜ್ಞಾನದೇವ ವಿರಚಿತಾಯಾಂ ಭಾವಾರ್ಥ ದೀಪಿಕಾಯಾಂ ಪ್ರಥಮೋಽಧ್ಯಾಯ: ॥ ೧ ॥ ಶ್ಲೋಕ ೪೭, ಓವೀ ೭೬೫

ಅರ್ಥ— ಸಂಜಯನು ಅಂದದ್ದು- ರಾಜಾ ಧೃತರಾಷ್ಟ್ರನೇ ಕೇಳು, ಈ ಸಮಯಕ್ಕೆ ಸಮರಾಂಗಣದಲ್ಲಿ ನಿಂತಂಥ ಅರ್ಜುನನು ಹೀಗೆ ಮಾತಾಡಿದನು. ॥ ೬೪ ॥ ಆ ಮೇಲೆ ಉದಾಸೀನನಾಗಿ, ಹಿಡಿಯಲಸಾಧ್ಯವಾದ ದುಃಖದಿಂದ ರಥದಿಂದ ಕೆಳಗೆ ಹಾರಿಕೊಂಡನು. ॥ ೬೯ ॥ ಯಾವ ಪ್ರಕಾರ ಒಬ್ಬಾನೊಬ್ಬ ರಾಜಕುಮಾರನು ಪದಚ್ಯುತನಾಗಿರಲು

ಅವನಿಗೆ ಯಾರೂ ಮಾನ ಮರ್ಯಾದೆ ಮಾಡುವದಿಲ್ಲ; ಇಲ್ಲವೇ, ರಾಹುಗ್ರಸ್ತನಾದ ಸೂರ್ಯನು ಹೇಗೆ ನಿಸ್ತೇಜನಾಗುತ್ತಾನೆ. ॥ ೨೭ ॥ ಇಲ್ಲವೇ ತಪಸ್ವಿಯು ಮಹಾಸಿದ್ಧಿಯ ಪ್ರಾಪ್ತಿಯ ಭ್ರಮೆಯಿಂದ ವ್ಯಾಪ್ತನಾದ ಕೂಡಲೇ ತಪಶ್ಚರ್ಯದ ತ್ಯಾಗಮಾಡಿ ಕಾಮಾಪೇಕ್ಷೆಯ ಬಲೆಯೊಳಗೆ ಶಿಕ್ಕು ನಿಂದೆಗೆ ಪಾತ್ರನಾಗುತ್ತಾನೋ, ॥ ೭೧ ॥ ಅದೇ ಪ್ರಕಾರ ಅರ್ಜುನನು ರಥದ ಕೆಳಗೆ ಇಳಿದಮೇಲೆ ಅತಿಶಯವಾದ ದುಃಖದಿಂದ ವ್ಯಾಪ್ತನಾಗಿರುವದು ಕಂಡುಬಂತು ॥೭೨॥ ಸಂಜಯನು ಅನ್ನುತ್ತಾನೆ– ಅರ್ಜುನನು ಧನುರ್ಬಾಣಗಳನ್ನು ಚಲ್ಲಿಕೊಟ್ಟನು, ಮತ್ತು ಅವನ ಕಣ್ಣಿನೊಳಗಿಂದ ಅಶ್ರುಧಾರೆಗಳು ಸುರಿಯುತ್ತಿದ್ದವು. ॥ ೭೩ ॥ ಆಗ ಅರ್ಜುನನಿಗೆ ದುಃಖವಾದದ್ದನ್ನು ನೋಡಿ ವೈಕುಂಠನಾಯಕ ಭಗವಾನ್ ಶ್ರೀ ಕೃಷ್ಣನು ಅವನಿಗೆ ಯಾವರೀತಿಯಿಂದ ತತ್ವಜ್ಞಾನೋಪದೇಶವನ್ನು ಮಾಡುವನು ॥ ೭೪ ॥ ಅದು ಮುಂದೆಬರುವ ವಿಸ್ತಾರವಾದ ಕಥೆಯನ್ನೂ ಉತ್ಸುಕತೆಯಿಂದ ಕೇಳಬೇಕೆಂದು ಶ್ರೀ ನಿವೃತ್ತಿ ನಾಥರ ಶಿಷ್ಯ ಶ್ರೀ ಜ್ಞಾನೇಶ್ವರ ಮಹಾರಾಜರು ಅನ್ನುತ್ತಾರೆ. ॥ ೭೭ ॥

ಶ್ರೀ ಮದ್ಭಗವದ್ಗೀತೆಯ ಮತ್ತು ಜ್ಞಾನೇಶ್ವರಿಯ ಸರಲ, ಸುಲಭ ಕನ್ನಡ ಭಾಷಾಂತರದ ಒಂದನೆಯ ಅಧ್ಯಾಯವು

ಸಮಾಪ್ತವು

ಶ್ರೀ ಕೃಷ್ಣಾರ್ಪಣಮಸ್ತು



ಜ್ಞಾನೇಶ್ವರಿ

೨ನೆಯ ಅಧ್ಯಾಯ

ಸಂಜಯ ಉವಾಚ –

ತಂ ತಥಾ ಕೃಪಯಾವಿಷ್ಟಮಶ್ರುಪೂರ್ಣಾಕುಲೇಕ್ಷಣಂ ।
ವಿಷೀದಂತಮಿದಂ ವಾಕ್ಯಮುವಾಚ ಮಧುಸೂದನಃ ॥ ೧ ॥

[ಸಂಜಯ ಉವಾಚ–] ಮಗ ಸಂಜಯೊ ಮ್ಹಣೇ ರಾಯಾತೇ । ಆಇಕೆ ತೋ ಪಾರ್ಥ ತೇಥೇ । ಶೋಕಾಕುಳ ರುದನಾತೆ । ಕರೀತ ಅಸೇ ॥ ೧ ॥ ತೇ ಕುಳ ದೇಖೋನಿ ಸಮಸ್ತ । ಸ್ನೇಹ ಉವಸತಿ ಅಪ್ಪುತ । ತೆಣೇ ದ್ರುಪಲೇ ಅಸೇ ಚಿತ್ತ । ಕವಣೇವಯೇ ॥ ೨ ॥ ಜೈಸೇ ಲವಣ ಜಳೇ ಝುಳಂಬಲೇ । ನಾ ಅಭ್ರವಾತೇ ಹಾಲೇ । ತೈಸೇ ಸಧೀರ ಪರೀ ವಿರಮಲೇ । ಹೃದಯ ತಯಾಚೇ ॥ ೩ ॥ ಮ್ಹಣೋನಿ ಕೃಪಾ ಆಕಳಲಾ ! ದಿಸತಸೇ ಅತಿ ಕೋವಸಾ ಇಲಾ । ಜೈಸಾ ಕರ್ದಮೀ ರುಪಲಾ । ರಾಜಹಂಸ ॥ ೪ ॥ ತಯಾಪರೀ ತೋ ಪಾಂಡು ಕುಮರ । ಮಹಾಮೋಹೇ ಅತಿ ಜರ್ಜರ । ದೇಖೋನಿ ಶ್ರೀ ಶಾರ್ಙ್ಗಧರ । ಕಾಯ ಬೋಲೇ ॥ ೫ ॥

ಅರ್ಥ— ಆ ಮೇಲೆ ಸಂಜಯನು ಧೃತರಾಷ್ಟ್ರ ರಾಜನಿಗೆ ಅನ್ನುತ್ತಾನೆ– ರಾಜನೇ ಕೇಳು, ಅರ್ಜುನನು ಆ ರಣಾಂಗಣದಲ್ಲಿ ವ್ಯಾಕುಲವುಳ್ಳವನಾಗಿ ಶೋಕಿಸಹತ್ತಿದನು. ॥ ೧ ॥ ಅವನು ಆ ಎಲ್ಲ ಸ್ವಜನರನ್ನು ನೋಡಿ ಅತ್ಯಂತ ಕರುಣದಿಂದ ಹಣ್ಣಾಗಿ ಅವನ ಮನಸಿನಲ್ಲಿ ವಿಲಕ್ಷಣ ಮೋಹ ವುಂಟಾಯಿತು. ಆ ಯೋಗದಿಂದ ಅವನ ಅಂತಃಕರಣವು ಕರಗಿತು ॥ ೨ ॥ ನೀರಿನಿಂದ ಉಪ್ಪು ಕರಗಿಹೋಗುವಂತೆ, ಗಾಳಿಯಿಂದ ಮೋಡವು ಮಾಯವಾಗುವಂತೆ, ಅರ್ಜುನನ ಹೃದಯದಲ್ಲಿಯ ಧೈರ್ಯವು ಮೋಹದಿಂದ ಕರಗಿಸೀರಾಯಿತು. ॥ ೩ ॥ ಕೆಸರಿನಲ್ಲಿ ಸಿಕ್ಕ ರಾಜಹಂಸದ ಮುಖವು ಬಾಡುವಂತೆ, ಮೋಹಪಂಕದಲ್ಲಿ ಸಿಕ್ಕು ಬಿದ್ದ ಅರ್ಜುನನ ಮುಖವು ಕಳವಳದಿಂದ ಬಾಡಿ ಬತ್ತಿ ಹೋಯಿತು. ॥ ೪ ॥ ಹೀಗೆ ಆ ಪಾಂಡುಪುತ್ರನು ಮಹಾಮೋಹದಿಂದ ಅತಿಶಯವಾಗಿ ಜರ್ಜರಿತವಾದದ್ದನ್ನು ನೋಡಿ ಭಗವಾನ್ ಶ್ರೀಕೃಷ್ಣನು ಅನ್ನುತ್ತಾನೆ ॥ ೫ ॥

ಶ್ರೀ ಭಗವಾನುವಾಚ –

ಕುತಸ್ತ್ವಾ ಕಶ್ಮಲಮಿದಂ ವಿಷಮೇ ಸಮುಪಸ್ಥಿತಂ ।
ಅನಾರ್ಯಜುಷ್ಟಮಸ್ವರ್ಗ್ಯಮಕೀರ್ತಿಕರ ಮರ್ಜುನ ॥ ೨ ॥

[ಶ್ರೀ ಭಗವಾನುವಾಚೀತ] ಮ್ಹಣೇ ಅರ್ಜುನಾ ಆದಿ ಪಾಹೀ । ಹೇ ಉಚಿತ ಕಾಯ ಇಯೇ ಠಾಯೀ । ತೂ ಕವಣ ಹೇ ಕಾಯೀ । ಕರೀತ ಆಹಾಸೀ ॥ ೬ ॥ ತುಜ ಸಾಂಗೇ ಕಾಯ ಝೂಲೇ । ಕವಣ ಉಣೇ ಆಲೇ । ಕರಿತಾ ಕಾಯ ರೇಲೇ । ಖೇದ ಕಾಯಿಸಾ ॥ ೭ । ತೂ ಅನುಚಿತಾ ಚಿತ್ತ ನೇದಿಸೀ । ಧೀರ ಕಹೀ ನ ಸಂಡಿಸೀ । ತುಝೀನ ನಾಮೇ ಅಪಯಶೀ । ದಿಶಾ ಲಂಘಿಜೇ ॥ ೮ ॥ ತೂ ಶೂರ ವೃತ್ತೀಚಾ ಠಾವೋ । ಕ್ಷತ್ರಿಯಾ ಮಾಜಿ ರಾವೋ । ತುಝಿಯಾ ಲಾಠೇಪಣಾಚಾ ಆವೋ । ತಿಹೀ ಲೋಕೀ ॥ ೯ ॥ ತುವಾ ಸಂಗ್ರಾಮೀ ಹರ ಜಿಂಕಿಲಾ । ನಿವಾತ ಕವಚಾಚಾ ಠಾಯ ಪೇಡಿಲಾ ।

ಪವಾಡಾ ತುವಾ ಕೇಲಾ । ಗಂಧರ್ವಾಸೀ ॥ ೧೦ ॥ ಪಾಹತಾ ತುಝೇನಿ ಪಾಡೇ । ದಿಸೇ ತ್ರೈಲೋಕ್ಯಹೀ ಥೋಕಡೇ । ಐಸೇ ಪುರುಷತ್ವ ಚೋಖಡೇ । ಪಾರ್ಥಾ ತುಝೇ ॥ ೧೧ ॥ ತೂ ತೂ ಕೀ ಆಚಿಯೇಥೇ । ಸಾಂಡೂನಿಯಾ ವೀರ ವೃತ್ತೀತೇ । ಅಧೋ ಮುಖ ರುಪ ನಾತೆ । ಕರೀತ ಆಹಾಸೀ ।. ೧೨ ॥ ವಿಚಾರೀ ತೂ ಅರ್ಜುನು । ಕೀ ಕಾರುಣ್ಯೇ ಕಿಜಸೀ ದೀನು । ಸಾಂಗ ಪಾ ಅಂಧಕಾರೇ ಭಾನು । ಗ್ರಾಸಿಲಾ ಆಥೀ ॥ ೧೩ ॥ ನಾ ತರೀ ಪವನು ಮೇಘಾಸಿ ಬಿಹೇ । ಕಿ ಅಮೃತಾಸಿ ಮರಣ ಉಹೇ । ಪಾಹೇ ಪಾ ಇಂಧನಾಚ ಗಿಳೋನಿ ಜಾಯೇ । ಪಾವ ಕಾತೆ ॥ ೧೪ ॥ ಕೀ ಲವಣೇಚಿ ಜಳ ವಿರೇ । ಸಂಸರ್ಗೆ ಕಾಳಕೂಟ ಮರೇ । ಸಾಂಗ ಪಾ ಮಹಾಫಣೀ ದರ್ದುರೆ । ಗಿಳಿಜೇ ಕಾಯೀ ॥ ೧೫ ॥ ಸಿಂಹಾಸಿ ಝೊಂಬೆ ಕೋಲ್ಹಾ । ಐಸಾ ಅಪಾಡ ಆಥಿ ಕೇ ಜಹಾಲಾ । ಪರೀ ತೋ ತ್ವಾ ಸಾಚ ಕೇಲಾ । ಆಜಿ ಏಥ ॥ ೧೬ ॥ ನ್ಯಹೋನಿ ಅಝುನೀ ಅರ್ಜುನಾ । ಝುಣೇ ಚಿತ್ತ ದೇಸೀ ಯಾ ಹೀನಾ । ವೇಗೀ ಧೀರ ಕರೂನಿಯಾ ಮನಾ । ಸಾವಧ ಹೋಯೀ ॥ ೧೭ ॥ ಸಾಂಡೀ ಹೇ ಮೂರ್ಖ ಪಣ । ಉಠೀ ಘೇ ಧನುಷ್ಯಬಾಣ । ಸಂಗ್ರಾಮೀ ಹೇ ಕವಣ । ಕಾರುಣ್ಯ ತುಝೇ ॥ ೧೮ ॥ ಹಾ ಗಾ ತೂ ಜಾಣತಾ । ತರೀ ಏನ ವಿಚಾರಿಸೀ ಕಾ ಆತಾ । ಸಾಂಗೇ ಜುಂಝಾ ವೇಳೀ ಸದಯತಾ । ಉಚಿತ ಕಾಯೀ ॥ ೧೯ ॥ ಹೇ ಅಸತಿಯೇ ಕೀರ್ತಿಸೀ ನಾಶ । ಆಣಿ ಪಾರತ್ರಿಕಾಸಿ ಅಪಭ್ರಂಶ । ಮ್ಹಣೇ ಜಗನ್ನಿವಾಸ । ಅರ್ಜುನಾತೇ ॥ ೨೦ ॥

ಅರ್ಥ— ಎಲೋ ಅರ್ಜುನನೇ ಹೀಗೆ ನೋಡು. ಈ ಯುದ್ಧ ಸ್ಥಳದಲ್ಲಿ ಇದು ನಿನಗೆ ಉಚಿತವೇ ? ನೀನು ಯಾರಿರುವಿರಿ ? ಮತ್ತು ಇಲ್ಲಿ ಏನು ನಡೆಸಿರುವೆ ? ಮೊದಲು ಈ ಮಾತಿನ ವಿಚಾರವನ್ನು ಮಾಡು. ॥ ೬ ॥ ನಿನಗೆ ಏನು ಆಗಿರುವದು ? ಇದನ್ನಾದರೂ ಹೇಳು. ಯಾವುದು ಕಡಿಮೆಯಾಗಿರುವುದು ? ಏನು ಮಾಡುವದು ಉಳಿದಿರುವದು ? ಇಷ್ಟು ದುಃಖವು ಯಾವ ಕಾರಣದ ದೆಸೆಯಿಂದ ಉಂಟಾಗಿರುವುದು ? ॥ ೭ ॥ ನೀನು ಅನುಚಿತವಾದ ಮಾತಿನ ದೆಸೆಯಿಂದ ಎಂದೂ ಧೈರ್ಯ ಬಿಡುವವನಲ್ಲ. ಕೇವಲ ನಿನ್ನ ವಿಜಯವೆಂಬ ನಾಮವನ್ನು ಸ್ಮರಣ ಮಾಡುವದರಿಂದಲೇ ಅವಜಯವು ದಿಕ್ಕುದಿಕ್ಕಿಗೆ ಓಡಿಹೋಗುತ್ತಿದೆ. ॥ ೮ ॥ ನೀನು ಕೇವಲ ಶೌರ್ಯದ ತವರುಮನೆ. ಮೇಲಾಗಿ ಕ್ಷತ್ರಿಯ ರಾಜರಲ್ಲಿ ಒಳ್ಳೇ ಶ್ರೇಷ್ಠನಾದ ವೀರನು. ನಿನ್ನ ಶೌರ್ಯದ ಪ್ರತಿಷ್ಠೆಯಾದರೂ ಮೂರು ಲೋಕಗಳಲ್ಲಿ ಪಸರಿಸಿರುವದು. ॥ ೯ ॥ ನೀನು ಯುದ್ಧದಲ್ಲಿ ಸಾಕ್ಷಾತ್ ಶ್ರೀ ಶಂಕರನನ್ನು ಜಯಿಸಿರುವಿ. ನಿವಾತ ಕವಚರನ್ನು ಸಂಪೂರ್ಣವಾಗಿ ನಿರ್ನಾಮ (ನಾಶ) ಮಾಡಿರುವಿ. ಮತ್ತೂ ನಿನ್ನ ಕೀರ್ತಿಗೀತೆಯನ್ನು ಗಂಧರ್ವರು ಹಾಡಿ ನಲಿಯುತ್ತಿರುವರು. ॥ ೧೦ ॥ ಅರ್ಜುನನೇ, ನಿನ್ನ ಪರಾಕ್ರಮದ ಮಹಾತ್ಮ್ಯವನ್ನು ತುಲನೆ ಮಾಡಿ ನೋಡಿದರೆ ತ್ರಿಭುವನವು ಸಹ ಕಡಿಮೆ ಬೀಳುತ್ತದೆ. ಹೀಗೆ ನಿನ್ನ ಪರಾಕ್ರಮವು ಇರಲು ॥ ೧೧ ॥ ನೀನು ಈ ಹೊತ್ತಿನ ದಿವಸ ಉದಗ್ರವಾದ ವೀರ ವೃತ್ತಿಯನ್ನು ಬಿಟ್ಟು (ಹೇಡಿಯಂತೆ) ಕೆಳಗೆ ಮೋರೆಯನ್ನು ಮಾಡಿ ಏಕೆ ಅಳುತ್ತ ಕುಳಿತಿರುವೆ ? ॥ ೧೨ ॥ ಅರ್ಜುನಾ ವಿಚಾರ ಮಾಡಿ ನೋಡು, ಅಂತಃಕರಣವು ನಿನ್ನನ್ನು ಇಷ್ಟು ದೀನನನ್ನಾಗಿ ಮಾಡಬೇಕೇ ? ಕತ್ತಲೆಯು ಎಂದಾದರೂ ಸೂರ್ಯನನ್ನು ನುಂಗಿರುವುದೇ ? ॥ ೧೩ ॥ ಗಾಳಿಗೆ ಮೇಘದ ಭಯವೆಂದಾದರೂ ಉಂಟಾಗಿರುವುದೇ ? ಅಥವಾ ಅಮೃತಕ್ಕೆ ಎಂದಾದರೂ ಮರಣಭಯವು ಉಂಟೇ ? ಕಟ್ಟಿಗೆಗಳು ಅಗ್ನಿಯನ್ನು ನುಂಗಬಹುದೇ ? ॥ ೧೪ ॥ ಅಥವಾ ಉಪ್ಪಿನಿಂದ ನೀರು ಎಂದಾದರೂ ಹೆರೆಯಬಹುದೋ ? ಇಲ್ಲವೇ ಕಾಲಕೂಟ ವಿಷವು ಅನ್ಯ ಪದಾರ್ಥದ ಸಂಸರ್ಗದಿಂದ ಎಂದಾದರೂ ಮೃತ್ಯುವನ್ನು ಹೊಂದಿರುವದೋ ? ಅಥವಾ ಬಹು ದೊಡ್ಡದಾದ ಭುಜಂಗವನ್ನು ಯಾವ ಕಾಲದಲ್ಲಿಯಾದರೂ ಕಪ್ಪೆಯು ನುಂಗುವದು ಸಾಧ್ಯವೋ ? ॥ ೧೫ ॥ ಒಳ್ಳೆಯದು, ಎಂದಾದರೂ ನರಿಯು ಸಿಂಹದ ಕೂಡ ಯುದ್ಧಕ್ಕೆ ಸನ್ನದ್ಧವಾಗಿ ಎದುರಿಸಬಲ್ಲದೊ ? ಇಂಥ ವಿಲಕ್ಷಣವಾದ ಮಾತುಗಳು ಎಂದಾದರೂ ಸಂಭವಿಸಿರು

ವನೇ ? ಆದರೆ ಆ ಅಸಂಭವನೀಯವಾದ ಮಾತುಗಳನ್ನು ನೀನು ಈ ಹೊತ್ತು ನಿಜವೆಂದು ಸಿದ್ಧಮಾಡಿ ತೋರಿಸಿದಿ. ॥೧೬॥ ಅರ್ಜುನಾ, ಇನ್ನಾವರೂ ಈ ಅಯೋಗ್ಯವಾದ ಮಾತಿನಕಡೆಗೆ ಲಕ್ಷ ಪೂರೈಸಬೇಡ ಕಂಡೆಯಾ ? ತೀವ್ರವಾಗಿ ಮನಸಿನಲ್ಲಿ ಧೈರ್ಯವನ್ನು ತಂದುಕೊಂಡು ಸಾವಧನನಾಗಿರು. ॥ ೧೭ ॥ ಈ ಹುಚ್ಚುತನವನ್ನು ಬಿಟ್ಟುಬಿಡು. ಎಳು, ಏಳು ಧನುರ್ಬಾಣಗಳನ್ನು ನಿನ್ನ ಕೈಯಲ್ಲಿ ತೆಗೆದುಕೊಳ್ಳು. ಈ ರಣಭೂಮಿಯಲ್ಲಿ ನಿನ್ನ ಕಾರುಣ್ಯದ ಉಪಯೋಗವೇನು ? (ನಿರರ್ಥಕವೇ ಸರಿ.) ॥ ೧೮ ॥ ಎಲೋ ಅರ್ಜುನನೇ, ನೀನು ಜ್ಞಾನಿಯಲ್ಲವೇ ? ಈ ಕಾಲದಲ್ಲಿ ನೀನು ಚನ್ನಾಗಿ ವಿಚಾರವನ್ನೇಕೆ ಮಾಡುವದಿಲ್ಲ ? ಹೇಳು, ಈ ಯುದ್ಧ ಪ್ರಸಂಗದಲ್ಲಿ ದಯೆಯು ಯೋಗ್ಯವಾದುದೆ ? ॥೧೯॥ ಅರ್ಜುನಾ, ಈ ನಿನ್ನ ವರ್ತನವು ಈ ಹೊತ್ತಿನವರೆಗೆ ಸಂಪಾದನ ಮಾಡಿದ ಕೀರ್ತಿಯನ್ನೇ ನಾಶಗೊಳಿಸುವಂತಹದು. ಮತ್ತು ವರಲೋಕ ಪ್ರಾಪ್ತಿಗೇ ವಿಘ್ನವನ್ನು ತರುವಂತಹದು.

ಕ್ಲೈಬ್ಯಂ ಮಾಸ್ಮಗಮಃ ಪಾರ್ಥ ನೈತತ್ತ್ವಯ್ಯುಪ ಪದ್ಯತೆ ।
ಕ್ಷುದ್ರಂ ಹೃದಯದೌರ್ಬಲ್ಯಂ ತ್ಯಕ್ತ್ವೋತ್ತಿಷ್ಠ ಪರಂತಪ ।೩।

[**ಕ್ಲೈಬ್ಯಂ ಮಾಸ್ಮಇತಿ**] ವ್ಯರ್ಥೋನಿ ಶೋಕು ನಕರೀ । ತೂ ಪುರತಾಧಿರೂ ಧರೀ । ಹೇ ಶೋಚ್ಯತಾ ಅಹ್ಮೇರೀ । ಪಂಡು ಕುಮರಾ ॥೨೧॥ ತುಜನಹ್ಮೆ ಹೇ ಉಚಿತ । ಯೇಣೇ ನಾಸೇಲ ಜೋಡಲೇ ಬಹುತ ತೂಲಝುಸಿತರೀ ಓತ । ವಿಚಾರೀ ವಾ ॥ ೨೨॥ ಯೇಣೇ ಸಂಗತ್ರಾ ಮಾಚೇನೀ ಅವಸರೆ । ಏಥ ಕೃಪಾಳೂವಣ ನುಪಕರೇ । ಹೇ ಅತಾಚಿ ಕಾಯ ಸೋಯರೆ । ಜಾಹಲೆ ತುಜ ॥ ೨೩ ॥ ತೂ ಆಧೀಚಿ ಕಾಯನೇಣಸೀ । ಕೀ ಹೇ ಗೋತ್ರಜ ನೋಳಖಸೀ । ವಾಯಾಚಿ ಕಾಯಕರಿಸೀ । ಅತಿಶೋ ಆತಾ ॥ ೨೪ ॥ ಆಜಿಚೇ ಹೇ ಝುಂಜ । ಕಾಯ ಜನ್ಮಾ ನನಲ ತುಜ ಹೇ ಪರಸ್ಪರೇ ತುಮ್ಹಾವ್ಯಾಜ ಸದಾಚಿ ಆಥೀ ॥ ೨೫ ॥ ತರೀ ಆತಾ ಕಾಯ ಜಾಹಲೆ । ಕಾಯಿ ಸ್ನೇಹ ಉಪನಲೇ ! ಹೇ ನೇಣಿಜೆ ಪರೀ ಕುಡೇ ಕೇಲೇ । ಅರ್ಜುನಾ ತುವಾ ॥ ೨೬ ॥ ಮೋಹ ಧರಿಲಿಯಾ ಐಸೇ ಹೋಯೀಲ । ಜೇ ಅಸತೀ ಪ್ರತಿಷ್ಠಾ ಜಾ ಉಲ । ಆಣಿ ವರಲೋಕಹೀ ಅಂತರೇಲ । ಐಹಿಕೇಸೀ ॥ ೨೭ ॥ ಹೃದಯಾಚೆ ಢಿಲೇ ಪಣ । ಏಥ ನಿಶ್ಚಯಾಸಿ ನವ್ಹೇ ಕಾರಣ । ಹೇ ಸಂಗತ್ರಾಯೀ ಪತನ ಜಾಣ । ಕ್ಷತ್ರಿಯಾಸೀ ॥ ೨೮ ॥ ಐಸೇನಿ ತೋ ಕೃಪಾವಂತ । ನಾನಾಪರೀ ಅಸೇ ಶಿಕವಿತ । ಹೇ ಏಕೋನಿ ಪಾಂಡುಸುತ । ಕಾಯ ಬೋಲೆ ॥ ೨೯ ॥

ಅರ್ಥ— ಕಾರಣ ಅರ್ಜುನನೇ, ದುಃಖಿಸಬೇಡ ಪೂರ್ಣವಾಗಿ ಧೈರ್ಯವನ್ನು ತಂದುಕೊಳ್ಳು. ಹೇಡಿಯಾಗ ಬೇಡ. ಕ್ಷುದ್ರ ಮನೋ ದೌರ್ಬಲ್ಯವನ್ನು ಬಿಸಾಟಬಿಡು. ॥ ೨೧ ॥ ಹೀಗೆ ದುಃಖಮಾಡುವದು ನಿನಗೆ ಅಸುಚಿತ ವಾಗಿರುವದು. ನೀನು ಈ ಹೊತ್ತಿನವರೆಗೆ ಸಂಪಾದನಮಾಡಿದ ಕೀರ್ತಿಯು ಈ ದೌರ್ಬಲ್ಯದಿಂದ ನಾಶವಾದೀತು. ಆದುದರಿಂದ ನೀನು ನಿನ್ನ ಹಿತವೆಲ್ಲಿರುವುದೆಂಬುದನ್ನು ವಿಚಾರಮಾಡಿ ನೋಡು. ॥ ೨೨ ॥ ಇಂತಹ ಯುದ್ಧ ಪ್ರಸಂಗದಲ್ಲಿ ಮೃದುವಾದ ಅಂತಃಕರಣವು ಯೋಗ್ಯವಾದದ್ದಲ್ಲ. ಈ ಕೌರವರು ಇಷ್ಟೇ ಕಾಲಕ್ಕೆ ನಿನ್ನ ಆಪ್ತರಾಗಿರುವರೇನು ? ॥ ೨೩ ॥ ಪಾರ್ಥ, ಈ ಮಾತು ನಿನಗೆ ಪೂರ್ವದಲ್ಲಿಯೇ ಗೊತ್ತಾಗಿರುವದಿಲ್ಲವೇನು ? ಅರ್ಥಾತ್ ಇವರು ನನ್ನ ಆಪ್ತರು ಇರುವರೆಂಬದನ್ನು ಅರಿಯದಿದ್ದಿಯಾ ಹೇಗೆ ? ಆದರೆ ಈ ರಣಾಂಗಣದ ಸಂಕಟಸಮಯದಲ್ಲಿಯೇ ವ್ಯರ್ಥವಾಗಿ ಈ ರಗಳೆಯನ್ನು ಏಕೆ ಹಚ್ಚಿರುವಿ ? ॥ ೨೪ ॥ ಈ ಹೊತ್ತಿನದಿವಸ ನಡೆದ ಯುದ್ಧ ಪ್ರಸಂಗವು ನಿನ್ನ ಯಾವತ್ತೂ ಜನ್ಮದಲ್ಲಿ ಅಪೂರ್ವವಾದದ್ದು ಇದೆ. ಇಲ್ಲದೇ ಇದ್ದರೆ ನಿಮ್ಮ ವರಸ್ಪರರಲ್ಲಿ (ಕೌರವ ಪಾಂಡವರಲ್ಲಿ) ಕಲಹದ ಕಾರಣಗಳು ಯಾವಾಗಲೂ ಇದ್ದೇ ಇರುತ್ತವೆ. ॥ ೨೫ ॥ ಅಂದಬಳಿಕ ಈ ಪ್ರಸಂಗದಲ್ಲಿ ನಿನಗೆ ಆಗಿರುವದಾದರೂ ಏನು ? ಈ ಮೋಹವು ನಿನಗೆ ಹೇಗೆ ಉತ್ಪನ್ನವಾಯಿತೆಂಬುದನ್ನು ಯಾರು ಬಲ್ಲರು ? (ಆಶ್ಚರ್ಯ)

ಆದರೆ ಅರ್ಜುನನೇ, ಈ ನೀಚ ಪ್ರವೃತ್ತಿಯು ನಿನಗೆ ಉಂಟಾಗಿರುವದನ್ನು ನೋಡಿದರೆ ಅದು ಹಾನಿಕರನಾದದ್ದೆಂದು ನನಗೆನಿಸುತ್ತದೆ. ॥ ೨೬ ॥ ನೀನು ಒಂದುವೇಳೆ ಈ ಮೋಹವಲ್ಲಿ ಸಿಲುಕಿ ಬಿದ್ದರೆ ಈ ಹೊತ್ತಿನನರೆಗೆ ದೊರಕಿಸಿದ ಲೌಕಿಕವು ಹಾಳಾಗಿ ಹೋಗಿ ಇಹ ಪರಲೋಕಗಳಲ್ಲಿಯೂ ನೀನು ಗತಿಗಾಣವೇ ಹೋಗುವೆ. ॥೨೭॥ ನಿನ್ನ ಅಂತಃಕರಣ ವಲ್ಲಿ ಉಂಟಾವ ಹೇಡಿತನವು ನಿನ್ನ ಕಲ್ಯಾಣಕ್ಕೆ ಕಾರಣವಾಗಲಾಯುದು ಅದು ಯುದ್ಧದಲ್ಲಿ ಕ್ಷತ್ರಿಯರಿಗೆ ದುರ್ಗತಿಗೆ ಕಾರಣವಾದೀತು. ॥ ೨೮ ॥ ಈ ಪ್ರಕಾರ ಆ ದಯಾಶಾಲಿಯಾದ ಭಗವಾನ್ ಶ್ರೀ ಕೃಷ್ಣ ಪರಮಾತ್ಮನು ಬಹಳೇ ರೀತಿಯಿಂದ ಮಾಡಿದ ಉಪದೇಶವನ್ನು ಕೇಳಿ ಅರ್ಜುನನು ಅನ್ನುತ್ತಾನೆ ॥ ೨೯ ॥

ಅರ್ಜುನ ಉವಾಚ—

ಕಥಂ ಭೀಷ್ಮಮಹಂ ಸಂಖ್ಯೇ ದ್ರೋಣಂಚ ಮಧುಸೂದನ ।
ಇಷುಭಿಃ ಪ್ರತಿಯೋತ್ಸ್ಯಾಮಿ ಪೂಜಾರ್ಹಾವರಿಸೂದನ ॥ ೪ ॥

[ಅರ್ಜುನ ಉವಾಚ–ಕಥಾಮಿತಿ] ದೇವಾ ಹೇ ಯೇತುಲೇವಾ । ಬೋಲಾವೇ ನಲಗೇ ಅವಧಾರೀ । ಆಧೀ ತೂಚೀ ವಿಚಾರೀ । ಸಂಗಾಮು ಹಾ ॥ ೩೦ ॥ ಹೇ ಝುಂಜ ನಹೈ ಪುನಾದು । ಏಥ ಪುನರ್ತಲಿಯಾ ದಿಸತಸೇ ಬಾಧು । ಹಾ ಉಘಡ ಲಿಂಗಭೇದು । ಸ್ತೋಧನಲಾ ಅಮ್ಹಾ ॥ ೩೧ ॥ ದೇವೇ ಮಾತಾಪಿತರೇ ಅರ್ಚಿಜತೀ । ಸರ್ವಸ್ವೇ ತೋಷಪಾವಿಜತೀ । ತಿಯೇಪಾರೀ ಕೇವಿ ವಧಿಜತೀ । ಆಪುಲಿಯಾ ಹಾತೀ ॥ ೩೨ ॥ ದೇವಾ ಸಂತವೃಂದ ನಮಸ್ಕಾರಿಜೇ ಕಾ ಘಸಿಜೇ ತರೀ ಪೂಜಿಜೆ । ಹೇ ವಾಚೂನಿ ಕೇವೀ ನಿಂದಿಜೇ । ಸ್ವಯೇವಾಚಾ ॥ ೩೩ ॥ ತೈಸೇ ಗೋತ್ರ ಗುರೂ ಆಮುಚೆ । ಹೇ ಪೂಜನೀಯ ಆಮ್ಹಾ ನಿಯಮಾಚೆ । ಮಜ ಬಹುತ ಭೀಷ್ಮ ದ್ರೋಣಾಚೆ । ನರ್ತತಸೇ ॥ ೩೪ ॥ ಜಯಾ ಲಾಗೀ ಮನೇ ಪಿರೂ । ಆಮ್ಹೀ ಸ್ವಪ್ನೀಹೀ ನ ರೋಕಧರೂ । ತಯಾ ಪ್ರತ್ಯಕ್ಷ ಕೇವೀ ಕರೂ । ಘಾತು ದೇವಾ ॥ ೩೫ ॥ ಮಗೆ ಜಳೋ ಹೇ ಚಿಯಾಲೆ । ಏಥ ಆಘವೇ ಯಾಸಿ ಹೆಚಿ ಕಾಯ ಜಾಹಲೆ । ಜೇ ಯಾಜ್ಯಾ ವಧೀ ಅಭ್ಯಾಸಿಲೇ । ಮಿರವಿಜೇ ಆಮ್ಹೀ ॥ ೩೬ ॥ ಮೀ ಪಾರ್ಥೂ ದ್ರೋಣಾಚಾ ಕೇಲಾ । ಯೇಣೇ ಧನುರ್ವೇದು ಮಜ ದಿಧಲಾ । ತೇಣೆ ಉಸಕಾರೇ ಕಾಯ ಆಘಾ ರೈಲಾ । ವಧೀ ತಯಾತೇ ॥೩೭॥ ಚೇಥೀಚಿಯಾ ಕೃಪಾ ಲಾಹಿಜೆನರೂ । ತೇಥೇಚಿ ಮನೇ ವ್ಯಭಿಚಾರೂ । ತರೀ ಕಾಯ ಮೀ ಭಸ್ಮಾಸುರೂ । ಅರ್ಜುನ ಮ್ಹಣೇ ॥ ೩೮ ॥

ಅರ್ಥ— ದೇವಾ ಬಹಳ ಮಾತಾಡುವದರ ಆವಶ್ಯಕತೆಯಿಲ್ಲ. ಈ ಯುದ್ಧದ ವಿಷಯದಲ್ಲಿ ಮೊದಲು ನೀವೇ ವಿಚಾರ ಮಾಡಿ ನೋಡಿರಿ. ॥ ೩೦ ॥ ಇದು ಯುದ್ಧವಲ್ಲ ಪೂಜ್ಯ ಜನರ ಅಮರ್ಯಾದೆಗಾಗಿ ನಾವು ಪ್ರಯತ್ನಪಡುವಂತಿದೆ. ಹೀಗೆ ಮಾಡಲು ಪ್ರವೃತ್ತರಾದುದು ದೋಷವಿರುತ್ತದೆ. ಇಷ್ಟೇ ಅಲ್ಲ. ಆದರೆ ನಾವು ಆರಾಧ್ಯ ದೈಸತವನ್ನು ಅರ್ಥಾತ್ ಪೂಜ್ಯರನ್ನು ಬಹಿರಂಗವಾಗಿ ಅಪಮಾನ ಮಾಡುತ್ತಿರುತ್ತೇವೆ. ॥ ೩೧ ॥ ತನುಮನ ಧನಗಳಿಂದ ತಾಯಿ ತಂದೆಗಳ ಸೇವೆಯನ್ನು ಮಾಡಿ ಅವರಿಗೆ ಎಲ್ಲ ರೀತಿಯಿಂದಲೂ ಸಂತೋಷ ಪಡಿಸಿ ಅವರನ್ನೇ ನಾವು ನಮ್ಮ ಕೈಯಿಂದಲೇ ಹೇಗೆ ವಧಮಾಡಬೇಕು. ॥ ೩೨ ॥ ದೇವಾ ಸಂತ ಸಮುದಾಯವನ್ನು ಕಂಡರೆ ನಮಸ್ಕರಿಸಬೇಕು. ಸಾಧ್ಯವಾದರೆ (ಫಲ ಪುಷ್ಪ ಗಂಧಾಕ್ಷತೆಗಳಿಂದ) ಅವರನ್ನು ಪೂಜಿಸಬೇಕು. ಹೀಗೆ ಮಾಡದೆ ನಾವು ನಮ್ಮ ಮುಖದಿಂದಲೇ ಅವರ ನಿಂದೆಯನ್ನು ಮಾಡಬೇಕೇ ? ॥ ೩೩ ॥ ಇವರು ನಮ್ಮ ಕುಲಗುರುಗಳಿದ್ದು ನಮಗೆ ನಿತ್ಯ ನಿಯಮಗಳಿಂದ ಪೂಜ್ಯರಾಗಿದ್ದಾರೆ. ಅದರಲ್ಲಿಯೂ ಭೀಷ್ಮರ ಮತ್ತು ದ್ರೋಣರ ಉಪಕಾರವು ನಮ್ಮ ಮೇಲೆ ಬಹಳವಾಗಿರುತ್ತದೆ. ॥೩೪॥ ನಾನು ಅವರಿಗೆ ಋಣಿಯಾಗಿದ್ದೇನೆ. ದೇವಾ, ಯಾವ ವಿಷಯದಲ್ಲಿ ನಾವು ಸ್ವಪ್ನದಲ್ಲಿ ಕೂಡಾ ವೈರತ್ವವನ್ನು ಮಾಡಬಾರದೋ, ಅವರನ್ನು ಪ್ರತ್ಯಕ್ಷವಾಗಿ ನಾವು ಘಾತಿಸುವದು ಹೇಗೆ ? ॥ ೩೫ ॥ ಈ ಹೊತ್ತಿನ ದಿವಸ ಎಲ್ಲರ ಬುದ್ಧಿಯು

ಹೇಗೆ ಭ್ರಷ್ಟವಾಗಿರುವದೋ ತಿಳಿಯದು ! ಯಾವ ಶಸ್ತ್ರವಿದ್ಯದ ಅಭ್ಯಾಸವನ್ನು ನಾವು ಇವರ ಹತ್ತರ ಮಾಡಿ ಪ್ರವೀಣರಾಗಿರುವೆವೋ ಅದರ ಉಪಯೋಗವನ್ನು ಇವರನ್ನು ಕೊಲ್ಲುವದರಲ್ಲಿ ಮಾಡಿ ನಮ್ಮ ಪ್ರತಿಷ್ಠೆಯನ್ನು ಮೆರಿಸುವ ದಾದರೆ, ನಾವು ಬದುಕಿರುವದಕ್ಕಿಂತಲೂ ಈ ಜೀವಿತವನ್ನು ಸುಡುವದೇ ಲೇಸು. ॥ ೩೬ ॥ ನಾನು ಅರ್ಜುನನು, ದ್ರೋಣಾಚಾರ್ಯರ ಪಟ್ಟಶಿಷ್ಯನು ಅವರೇ ನನಗೆ ಧನುರ್ವಿದ್ಯೆಯನ್ನು ಕಲಿಸಿ ನನ್ನನ್ನು ಪ್ರವೀಣನನ್ನಾಗಿ ಮಾಡಿದರು. ಆದರೆ ಈಗ ಅವರ ಸಂಗಡ ಹೋರಾಡಿ ಅವರನ್ನು ಕೊಂದು ಅವರ ಉಪಕಾರವನ್ನು ತೀರಿಸಬೇಕೋ ಹೇಗೆ ? ॥ ೩೭ ॥ ಮತ್ತು ನಾನು ಯಾರ ಕೃಪೆಯನ್ನು ಸಂಪಾದಿಸಿ ವರಪ್ರಾಪ್ತಿಯನ್ನು ಪಡಕೊಳ್ಳಬೇಕೋ ಅವರ ವಿಷಯದಲ್ಲಿಯೇ ಕೃತಘ್ನನಾಗಿ ಅವರನ್ನು ಕೊಲ್ಲಲುದ್ಯುಕ್ತನಾದರೆ ನಾನು ಭಸ್ಮಾಸುರನಾದಂತೆಯೇ ಸರಿ ! ॥ ೩೮ ॥

ಗುರೂನಹತ್ವಾ ಹಿ ಮಹಾನುಭಾವಾನ್ ।
ಶ್ರೇಯೋ ಭೋಕ್ತುಂ ಭೈಕ್ಷ್ಯಮಪೀಹಲೋಕೇ ॥
ಹತ್ವಾರ್ಥ ಕಾಮಾಂಸ್ತು ಗುರೂನಿಹೈವ ।
ಭುಂಜೀಯ ಭೋಗಾನ್ ರುಧಿರಪ್ರದಿಗ್ಧಾನ್ ॥ ೫ ॥

[ಗುರೂನ ಹತ್ವಾ ಇತಿ] ದೇವಾ ಸಮುದ್ರ ಗಂಭೀರ ಆಇಕಿಜೆ । ವರೀ ತೋಹಿ ಆಪಾಚ ದೇಪಿಜೆ । ಪರೀಕ್ಷೋಭ ಮನೀ ನೇಣಿಜೆ । ದ್ರೋಣಾಚಿಯೇ ॥ ೩೯ ॥ ಹೇ ಅಪಾರ ಜೇಗಗನ । ವರೀ ತಯಾಹೀ ಹೋಈಲ ಮಾನ । ಪರೀ ಅಗಾಧ ಭಲೇ ಗಹನ । ಹೃದಯಯಾಚೆ ॥ ೪೦ ॥ ವರೀ ಅಮೃತಹೀ ವಿಟೇ । ಕೀ ಕಾಳವಶೇ ವಜ್ರಹೀ ಫುಟೇ । ಪರೀ ಮನೋಧರ್ಮ ನ ಲೋಟಿ । ವಿಕರವಿಲಾಹೀ ॥ ೪೧ ॥ ಸ್ನೇಹಾಲಾಗೀ ಮಾಯೇ । ಮ್ಹಣಿಪೇತೇ ಕೀರ ಹೋಯೆ । ಪರೀ ಕೃಪಾತೇ ಮೂರ್ತ ಆಹೇ । ದ್ರೋಣೀ ಇಯೆ ॥ ೪೨ ॥ ಹಾ ಕಾರುಣ್ಯಾಚೀ ಆದೀ ಸಕಲ ಗುಣಾಚಾ ನಿಧೀ ವಿದ್ಯಾಸಿಂಧು ನಿರವಧಿ । ಅರ್ಜುನ ಮ್ಹಣೆ ॥ ೪೩ ॥ ಹಾ ಯೇಣೇ ಮಾನೇ ಮಹಾಂತ । ವರೀ ಅಮ್ಹಾಲಾಗೀ ಕೃಸಾವಂತ । ಅತಾ ಸಾಂಗ ಪಾ ಯೇಥೆ ಘಾತ । ಚಿಂತೂ ಯೇಈಲ ॥ ೪೪ ॥ ಐಸೇ ಹೇ ರಣೀ ವಧಾವೇ । ಮಗ ಆಪಣ ಸುಖೇ ರಾಜ್ಯ ಭೋಗಾವೇ । ತೇ ಮನಾ ನಯೇ ಆಘವೇ । ಜೀವಿತೇಸೀ ॥ ೪೫ ॥ ಹೇ ಯೇಣೇ ಮಾನೇ ದುರ್ಧರ । ಜೇಯಾಹೀ ಹೂನಿ ಭೋಗ ಸಧರ । ತೇ ಅಸತು ವಿಥವರ । ಭಿಕ್ಷಾ ಮಾಗತಾ ಭಲೇ ॥ ೪೬ ॥ ನಾತರೀ ದೇಶತ್ಯಾಗೇ ಜಾಇಜೆ ಕಾಗಿರಿ ಕಂದರ ಸೇವಿಜೆ । ಪರೀ ಶಸ್ತ್ರ ಆತಾ ನ ಧರಿಜೆ । ಇಯಾವರೀ ॥ ೪೭ ॥ ದೇವಾ ನವನಿಶಿತೀ ಶರೀ । ವಾವರೋನಿ ಯಾಚ್ಯಾಜಿ ವ್ಹಾರೀ । ಭೋಗ ಗಿವಸಾವೆ ರುಧಿರೀ । ಬುಡಾಲೇ ಜೇ ॥ ೪೮ ॥ ತೇ ಕಾಢೂನಿ ಕಾಯ ಕಿಜತೀ । ಲಿಪ್ತ ಕೇವೀ ಸೇವಿಜತೀ । ಮಜ ನಯೇ ಹೇ ಉಪಪತ್ತಿ । ಯಾಚಿಲಾಗೀ ॥ ೪೯ ॥ ಐಸೇ ಅರ್ಜುನ ತೇ ಅವಸರೀ । ಮ್ಹಣೇ ಶ್ರೀಕೃಷ್ಣ ಅವಧಾರೀ । ಪರೀ ತೇ ಮನಾ ನಯೇಚಿ ಮುರಾರಿ । ಆಇಕೋನಿಯಾ ॥ ೫೦ ॥ ಹೇ ಜಾಣೋನಿ ಪಾರ್ಥ ಭ್ಯಾಲಾ । ಮಗ ಪುನರಪಿ ಬೋಲೋ ಲಾಗಲಾ । ಮ್ಹಣೇ ದೇವೋ ಕಾ ಚಿತ್ತಯಾ ಬೋಲಾ । ದೇತೀಚಿ ನಾ ॥ ೫೧ ॥

ಅರ್ಥ— ದೇವಾ, ಸಮುದ್ರವು ಗಂಭೀರವೆಂದು ಕೇಳುತ್ತೇನೆ. ಆದರೆ ಅದು ಕ್ಷುಬ್ಧವಾಗುತ್ತದೆ. ಆದರೆ ದ್ರೋಣಾಚಾರ್ಯರಿಗೆ ಕ್ರೋಧವೆಂಬುವದು ಗೊತ್ತೇ ಇರುವದಿಲ್ಲ. ಅಂದ ಮೇಲೆ ಅವರ ಗಾಂಭೀರ್ಯವು ಸಮುದ್ರಕ್ಕಿಂತಲೂ ವಿಾಗಿಲು ॥ ೩೯ ॥ ಆಕಾಶವು ಅಪಾರವಾಗಿರುವದು. ಆದರೂ ಅದರ ಅಳತೆಯನ್ನು ಮಾಡಲಿಕ್ಕೆ ಬರಬಹುದು. ಆದರೆ ದ್ರೋಣಾಚಾರ್ಯರ ಅಂತಃಕರಣದ ನೆಲೆಯು ತಿಳಿಯಲಸಾಧ್ಯವಾಗಿರುವದು ॥ ೪೦ ॥

ಒಂದು ವೇಳೆ ಅಮೃತವಾದರೂ ಕೆಡಬಹುದು. ಇಲ್ಲವೇ ಕಾಲಪರತ್ವದಿಂದ ನಜ್ರುವೂ ಒಡೆಯಬಹುದು. ಆದರೆ ದ್ರೋಣಾಚಾರ್ಯರಿಗೆ ಕ್ಷೋಭ (ಕ್ರೋಧ) ಬರುವಂತೆ ಮಾಡಿದರೂ ಅವರ ಮನೋಧರ್ಮವು ಎಂದಿಗೂ ವಿಕಾರವಶವಾಗಲರಿಯದು ॥ ೪೧ ॥ ತಾಯಿಯ ಸಮಾನ ಪ್ರೇಮವುಳ್ಳವರು ಅನ್ಯರಾರೂ ಇರುವದಿಲ್ಲವೆಂಬ ರೂಢಿಯು ನಿಜ. ಆದರೆ ಈ ದ್ರೋಣಾಚಾರ್ಯರಲ್ಲಿ ಪ್ರೇಮವು ಮೂರ್ತಿಮಂತವಾಸವಾಗಿರುತ್ತದೆ. ॥ ೪೨ ॥ ಈ ಆಚಾರ್ಯರ ಹೃದಯವೆಂದರೆ ಅಂತಃಕರಣವ ಕೇವಲ ಉಗಮಸ್ಥಾನವೇ ಆಗಿರುವದು. ಇವರು ಸಕಲ ಗುಣಗಳಿಗೆ ಖಣಿಯಾಗಿದ್ದು ಮತ್ತು ವಿದ್ಯೆಯ ಮಹಾನಿಧಿಗಳಾಗಿರುತ್ತಾರೆ. ॥ ೪೩ ॥ ಹೀಗೆ ಇವರು ಸರ್ವೋತ್ತಮರೂ ಸರ್ವ ಶ್ರೇಷ್ಠರೂ ಇದ್ದು ನಮ್ಮ ವಿಷಯದಲ್ಲಿಯಂತೂ ಸಂಪೂರ್ಣವಾಗಿ ಕೃತಾಮೂರ್ತಿಗಳಾಗಿದ್ದಾರೆ. ಅಂದಬಳಿಕ ಇವರ ಘಾತವನ್ನು ಮಾಡಬೇಕೆಂಬ ವಿಚಾರವು ಮನಸ್ಸಿನಲ್ಲಿ ಬರುವ ಬಗೆಯಾದರೂ ಹೇಗೆ? ॥ ೪೪ ॥ ಇಂತಹ ಅಂತಃಕರಣದವರನ್ನು ರಣದಲ್ಲಿ ಕೊಂದು ಆ ಮೇಲೆ ನಾವು ರಾಜ್ಯಸುಖವನ್ನು ಭೋಗಿಸಬೇಕೆಂಬ ಮನಸ್ಸು ಜೀವ ಹೋದರೂ ನನಗಾಗಲಾರದು ॥ ೪೫ ॥ ರಾಜ್ಯಸುಖವನ್ನು ಭೋಗಿಸಬೇಕೆಂಬ ಅವಿಚಾರದ ಕಲ್ಪನೆಗಿಂತಲೂ ತಿರಿದು ತಿನ್ನುವದೇ ಲೇಸು ॥ ೪೬ ॥ ಇಲ್ಲವೇ ದೇಶತ್ಯಾಗವನ್ನೂ ಮಾಡಬಹುದು; ಗಿರಿಕಂದರ ಗಳನ್ನೂ ಸೇರಬಹುದು; ಆದರೆ ಇವರ ಮೇಲೆ ಶಸ್ತ್ರಗಳನ್ನು ಸೂತ್ರ ಎತ್ತುವದು ತಸಾಧ್ಯವು. ॥ ೪೭ ॥ ದೇವಾ, ಹೊಸದಾಗಿ ಸಾಣೆ ಹಿಡಿದ ಬಾಣದ ಅಲಗಿನಿಂದ ಇವರ ಮರ್ಮಸ್ಥಾನಕ್ಕೆ ಪ್ರಹಾರ ಮಾಡಿ ರಕ್ತ ಪಾತ ಮಾಡಿದ ಮೇಲೆ ಅದೇ ಅಂಬರ (ಬಳಿಗದ) ನೆತ್ತರದಿಂದ ತೊಯ್ದು ತಕ್ತಪವೆನ್ನುವ ರಾಜ್ಯಭೋಗ ಗಳನ್ನು ಭೋಗಿಸಲೆಳಿಸಿ ಕುಳಿತುಕೊಳ್ಳಲೇ? ॥ ೪೮ ॥ ಅದನ್ನು ಪ್ರಾವೃತ್ತನಾಡಿಕೊಂಡು ಮಾಡುವದಾದರೂ ಏನು? ಮತ್ತು ರಕ್ತಮಯವಾದ ಆ ಭೋಗಗಳನ್ನು ಉಪಭೋಗ ಮಾಡುವದಾದರೂ ಹೇಗೆ! ಆದಕಾರಣ ಈ ನೀಚ ವಾದ ಕೆಲಸವು ನನ್ನ ಮನಸಿಗೆ ಒರುವದಿಲ್ಲ. ॥ ೪೯ ॥ ಎಂದು ಅರ್ಜುನನು ಮಾತನಾಡಲು ಕೃಷ್ಣನಿಗೆ ಅವನ ಮಾತು ಸರಿದೋರಲಿಲ್ಲ. ॥ ೫೦ ॥ ಅದನ್ನು ಕಂಡು ತನ್ನ ಮನಸ್ಸಿನಲ್ಲಿ ಭಯಗ್ರಸ್ತನಾಗಿ ಅರ್ಜುನನು ಪುನಃ ಬೇಡಿಕೊಳ್ಳುತ್ತಾನೆ. ದೇವಾ, ನನ್ನ ಮಾತಿನ ಕಡೆಗೆ ನೀನು ಲಕ್ಷವನ್ನೇಕೆ ಕೊಡಲೊಲ್ಲೆ? ಇವರ ಕಾರಣವಂತೂ ತಿಳಿಯದಾಗಿದೆ. ॥ ೫೧ ॥

ನ ಚೈತದ್ವಿದ್ಮಃ ಕತರನ್ನೋ ಗರೀಯೋ ಯದ್ವಾ ಜಯೇಮ ಯದಿವಾ ನೋ ಜಯೇಯುಃ।
ಯಾನೇವ ಹತ್ವಾ ನಜಿಜೀವಿಷಾಮಸ್ತೇಽವಸ್ಥಿತಾಃ ಪ್ರಮುಖೇ ಧಾರ್ತರಾಷ್ಟ್ರಾಃ ॥ ೬ ॥

[ನ ಚೈತದ್ವಿದ್ಮ ಇತಿ] ಯೇರ್ಹವೀ ಪಾರುಪ್ಯಾ ಚತ್ತೀ ಜೇ ಹೋತೇ। ತೇ ವೀ ವಿವರೂನಿ ಬೋಲಿಲೋ ಏಥೆ। ಪರೀನಿಕೇ ಕಾಯ ಯಾಪರೌತೇ। ತೇ ತುವ್ಹೀ ಜಾಣಾ ॥ ೫೨ ॥ ಪೈವಿರೂ ಜಯಾಸಿ ಐಕಿಜೆ। ಆಣಿ ಯಾ ಬೋಲೀಜೆ ಪ್ರಾಣ ಸಾಂಡಿಜೆ। ತೇ ಏಥ ಸಂಗ್ರಾಮವ್ಯಾಜೆ। ಉಭೇ ಆಹಾತೀ ॥ ೫೩ ॥ ಆತಾ ಐಸೇ ಯಾತೆ ಸಧವೆ। ಕೀ ಅವ್ಹೇರೂನಿಯಾ ನಿಘಾವೆ। ಯಾ ದೋಹೀ ಮಾಜೆ ಬರವೇ। ತೇ ನೇಣೋ ಆಮ್ಹಿ ॥ ೫೪ ॥

ಅರ್ಥ— ನನ್ನ ಮನಸಿನಲ್ಲಿ ಇದ್ದದ್ದನ್ನೆಲ್ಲ ವಿಸ್ತಾರವಾಗಿ ನಿಮ್ಮ ಮುಂದೆ ವಿವರಿಸಿದ್ದೇನೆ ಆದರೆ ಇದರಲ್ಲಿ ಯಾವದು ವಿಹಿತನೆಂಬುದು ನಿಮಗೇ ಗೊತ್ತು. ॥ ೫೨ ॥ ಯಾರ ಸಂಗಡ ನಮ್ಮ ವೈರತ್ವವಿರುವದೆಂಬ ಮಾತನ್ನು ಕೇಳಿದ ಕೂಡಲೇ ನಾವು ಪ್ರಾಣವನ್ನು ತ್ಯಜಿಸಬೇಕೋ ಅವರೆಲ್ಲರೂ ಈ ರಣಭೂಮಿಯಲ್ಲಿ ಯುದ್ಧಸನ್ನದ್ಧರಾಗಿ ನಿಂತಿರುವರು. ॥ ೫೩ ॥ ಆದರೆ ಈ ಕೌರವರ ಸಂಗಡ ಹೋರಾಡಿ ಹೊಡೆಯಬೇಕೇ? ಇಲ್ಲವೇ ಬಿಟ್ಟುಕೊಟ್ಟು ಹೊರಟು ಹೋಗಬೇಕೇ! ಈ ಎರಡರಲ್ಲಿ ಉತ್ತಮವಾದ ಕಾರ್ಯವು ಯಾವುದೆಂಬುದು ನನಗೆ ತಿಳಿಯದಾಗಿದೆ ॥೫೪॥

ಕಾರ್ಪಣ್ಯ ದೋಷೋಪಹತ ಸ್ವಭಾವಃ ।
ಪೃಚ್ಛಾಮಿ ತ್ವಾಂ ಧರ್ಮ ಸಂಮೂಢಚೇತಾಃ ॥
ಯಚ್ಛ್ರೇಯಃ ಸ್ಯಾನ್ನಿಶ್ಚಿತಂ ಬ್ರೂಹಿ ತನ್ಮೇ ।
ಶಿಷ್ಯಸ್ತೇಹಂ ಶಾಧಿ ಮಾಂ ತ್ವಾಂ ಪ್ರಪನ್ನಂ ॥ ೭ ॥

[ಕಾರ್ಪಣ್ಯ ದೋಷೋಪಹತೇ ತಿ] ಆಮ್ಹಾ ಕಾಯ ಉಚಿತ । ತೇ ಪಾಹತಾ ನ ಸ್ಪುರೇ ಯೀಥ ಜೇ ಮೋಹೇ ಯೇಣೆ ಚಿತ್ತ । ವ್ಯಾಕುಳ ಮಾಝೆ ॥ ೫೫ ॥ ತಿಮಿರಾವರುದ್ಧ ಜೈಸೇ । ದೃಷ್ಟೀಚೆ ತೇಜ ಭ್ರಂಶೇ ಸುಗ ಪಾಸೀಜ ಅಸತಾ ನ ದಿಸೆ । ವಸ್ತುಜಾತ ॥ ೫೬ ॥ ದೇವಾ ತೈಸೇ ಮಜ ಜಾಹಲೆ । ಚೇ ಮನ ಹೇ ಭ್ರಾಂತೀ ಗ್ರಾಸಿಲೇ । ಆತಾ ಕಾಯ ಹಿತ ಆಪುಲೆ । ತೇಹೀ ನೆಣೇ ॥ ೫೭ ॥ ತರೀ ಶ್ರೀಕೃಷ್ಣ ತುವಾ ಜಾಣಾವೆ । ನಿಕೇ ತೇ ಆಮ್ಹಾ ಸಾಂಗಾವೆ । ಚೇ ಸಖಾ ಸರ್ವಸ್ವ ಆಘವೇ । ಆಮ್ಹಾಸಿ ತೂ ॥೫೮॥ ತೂ ಗುರೂ ಬಂಧು ಪಿತಾ । ತು ಆಮುತೀ ಇಷ್ಟದೇವತಾ । ತೂಚಿ ಸದಾ ರಕ್ಷಿತಾ । ಆಪದೀ ಆಮುತೆ ॥ ೫೯ ॥ ಜೈಸಾ ಶಿಷ್ಯಾತೆ ಗುರೂ । ಸರ್ವಥಾ ನೆಣೇ ಅವ್ಹೇರೂ । ಕೀ ಸರಿತಾತೇ ಸಾಗರೂ । ತ್ಯಚೀ ಕೇವೀ ॥ ೬೦ ॥ ನಾತರೀ ಅವತ್ಯಾತೇ ಮಾಯೇ । ಸಾಂಡೂನಿ ಜರೀ ಜಾಯೀ । ತರೀ ಕೈಸೇನಿ ಬಿಯೇ । ಐಕೇ ಕೃಷ್ಣಾ ॥ ೬೧ ॥ ತೈಸಾ ಸರ್ವಾಪರೀ ಏಮ್ಹಾಸೀ । ದೇವಾ ತೂಚಿ ಏಕ ಆಹಾಸೀ । ಆಣಿ ಬೋಲಿಲೇ ಜರೀ ನ ಮಸಿಸೀ ಮಾಗೀಲ ಮಾಝೆ । ೬೨ ॥ ತರೀ ಉಚಿತ ಕಾಯ ಆಮ್ಹಾ । ಜೇ ವ್ಯಭಿಚರೇನಾ ಧರ್ಮಾ । ತೇ ಮುಡಕರೀ ಪುರುಷೋತ್ತಮಾ । ಸಾಂಗಾ ಆತಾ ॥ ೬೩ ॥

ಅರ್ಥ— ನಮಗೆ ಯಾವುದು ವಿಹಿತವಾಗಿರುವುದೆಂಬುದು ಎಷ್ಟು ವಿಚಾರಿಸಿದರೂ ತಿಳಿಯದಾಗಿದೆ. ಆದುದರಿಂದ ಈ ಮೋಹದಿಂದ ನನ್ನ ಮನಸ್ಸು ತಳಮಳಗೊಂಡಿರುವುದು. ॥ ೫೫ ॥ ಯಾವ ಪ್ರಕಾರ ಕತ್ತಲೆಯಿಂದ ಕಣ್ಣಿನ ಕಾಂತಿಯು ನಾಶವಾಗಿ ಸಮೀಪದ ವಸ್ತುವೂ ಕಾಣಬಾರದೋ, ॥ ೫೬ ॥ ಅದೇ ಪ್ರಕಾರ ನನ್ನ ಸ್ಥಿತಿಯೂ ಆಗಿರುವುದು. ನನ್ನ ಮನಸು ಭ್ರಾಂತಿಯಿಂದ ಗ್ರಸ್ತವಾಗಿದ್ದು ನನ್ನ ಹಿತವು ಯಾತರಲ್ಲಿರುವುದೆಂಬುದು ಕೂಡ ನನಗೆ ತಿಳಿಯದಂತಾಗಿದೆ. ॥ ೫೭ ॥ ಆದರೆ ಶ್ರೀ ಕೃಷ್ಣಾ, ವಿಚಾರಮಾಡಿ ನಿಜವಾದದ್ದಾವುದೆಂಬುದನ್ನು ಹೇಳು. ಯಾಕಂದರೆ ನನ್ನ ಪ್ರೀತಿಯ ಮಿತ್ರನೂ, ಆಪ್ತನೂ, ಸರ್ವಸ್ವವೂ ನೀನೇ ಆಗಿರುವಿ. ॥ ೫೮ ॥ ನಮ್ಮ ಗುರುಗಳೂ, ಬಂಧು ಬಳಗವೂ, ತಂದೆಯೂ, ಕುಲದೈವತವೂ ನೀನೆ ಆಗಿರುವಿ. ಮತ್ತು ಯಾವಾಗಲೂ ನಮಗೆ ಸಂಕಟ ಸಮಯದಲ್ಲಿ ರಕ್ಷಣ ಮಾಡುವವನು ನೀನೇ ಆಗಿರುವಿ. ॥ ೫೯ ॥ ಯಾವ ಪ್ರಕಾರ ಗುರುಗಳು ಶಿಷ್ಯರನ್ನು ನಿರಾಕರಿಸುವದಿಲ್ಲವೋ, ಸಮುದ್ರವು ನದಿಗಳನ್ನು ಹೇಗೆ ನಿರಾಕರಿಸುವದಿಲ್ಲವೋ ॥ ೬೦ ॥ ಶ್ರೀ ಕೃಷ್ಣನೇ ನೀನೇ ಹೇಳು ತಾಯಿಯು ತನ್ನ ಕೂಸನ್ನು ಬಿಟ್ಟು ಹೋದರೆ ಆ ಕೂಸು ಹೇಗೆ ಬದಕುವದು ? ॥ ೬೧ ॥ ಅದೇ ಪ್ರಕಾರ ಸರ್ವರೀತಿಯಿಂದಲೂ ನಮ್ಮನ್ನು ಬಿಡದೆ ನೀನೇ ಸಂರಕ್ಷಕರಾಗಿರುವಿರಿ. (ಆಶ್ರಯಸ್ಥಾನರಾಗಿರುವಿರಿ.) ಮತ್ತು ಇಷ್ಟು ಹೊತ್ತಿನವರೆಗೆ ನಮ್ಮ ಮುಂದೆ ನಾನು ಹೇಳಿದುದು ನಿನಗೆ ಯೋಗ್ಯವೆಂದು ಕಾಣದಿದ್ದರೆ, ॥ ೬೨ ॥ ಪುರುಷೋತ್ತಮನೇ, ಯಾವ ಮಾತು ನಮಗೆ ಉಚಿತವಾಗಿದ್ದು, ಧರ್ಮಕ್ಕೆ ವಿರುದ್ಧವಾಗಿರುವಾಗಿರುವಲ್ಲವೋ (ಸಾಶ್ರು) ಅದನ್ನು ತೀವ್ರವಾಗಿ ನನ್ನ ಮುಂದೆ ಹೇಳಬೇಕು. ॥ ೬೩ ॥

ನ ಹಿ ಪ್ರಪಶ್ಯಾಮಿ ಮಮಾಪನುದ್ಯಾದ್ ।
ಯಚ್ಛೋಕಮುಚ್ಛೋಷಣ ಮಿನ್ದ್ರಿಯಾಣಾಂ ॥
ಅವಾಪ್ಯ ಭೂಮಾವಸಪತ್ನಮೃದ್ಧಂ ।
ರಾಜ್ಯಂ ಸುರಾಣಾಮಪಿಚಾಧಿ ಪತ್ಯಂ ॥ ೮ ॥

[ನ ಹಿಂ] ಹೇ ಸಕಳ ಕುಳ ದೇಖೋನಿ ಜೋ ಶೋಕು ಉಪನಲಾಸೇ ಮನೀ। ತೋ ತುಝಿಯಾ ವಾಕ್ಯಾ ವಾಚುನೀ । ನಜಾಯ ಆಣಿಕೇ ॥ ೬೪ ॥ ಏಥ ಪ್ರಥಿವೀ ತಳ ಆಪು ಹೋಈಲ । ಹೇ ಮಹೇಂದ್ರು ಪದಹೀ ಪಾವಿಜೇಲ । ಪರಿ ಮೋಹ ಹಾನ ಫಿಟಲ । ಮಾನಸೀಚಾ ॥ ೬೫ ॥ ಜೈಸೀ ಸರ್ವಥಾ ಬೀಜೇ ಆಡಾಳಲೀ । ತಿ ಸುಕ್ಷೇತ್ರೀ ಜರ್ಹೀ ಪೇರಲೀತರೀ ನ ವಿರೂಢತೀ ಸಿಂಚಲೀ । ಆವಡೇ ತೈಸೀ ॥ ೬೬ ॥ ನಾತರೀ ಆಯುಷ್ಯ ಪುರಲೇ ಆಹೆ । ತರೀ ಔಷಧೇ ಕಾಹೀ ನೋಹೇ । ಏಥ ಏಕಚೀ ಉವೇಗಾಜಾಯೇ । ಪರಮಾಮೃತ ॥ ೬೭ ॥ ತೈಸೇ ರಾಜ್ಯಭೋಗ ಸಮೃದ್ಧಿ । ಉಚ್ಚೈವನ ನೋಹೇ ಇಯೇ ಬುದ್ಧಿ । ಏಥ ಜೀವ್ಹಾಳಾ ಕೃಪಾನಿಧಿ । ಕಾರುಣ್ಯ ತುಝೆ ॥ ೬೮ ॥ ಐಸೇ ಅರ್ಜುನ ತೇಥ ಬೋಲಿಲಾ । ತವ ಕ್ಷಣಏಕ ಭ್ರಾಂತಿ ಸಾಂಡಿಲಾ । ಸುಗ ಪುನರಪಿ ವ್ಯಾಪಿಲಾ । ಉರ್ಮಿಗೇ ತೇಣೇ ॥ ೬೯ ॥ ಕೀಮಜ ಪಾಹತಾ ಉರ್ಮಿಗೇ ನೋಹೇ । ಹೇ ಅನಾರಿಸೇ ಗಮತ ಆಹೇ । ತೋ ಗ್ರಾಸಿಲಾ ಮಹಾ ಮೋಹೇ ಕಾಳಸರ್ಪೇ ॥ ೭೦ ॥ ಸವರ್ಮ ಹೃದಯ ಕಲ್ಯಾಗೇ । ತೇಧ ಕಾರುಣ್ಯ ವೇಳೇಚಾ ಭರೇ । ಲಾಗಲಾಮ್ಹಣೋನಿ ಲಹರೀ । ಭಾಜೇಚಿ ನಾ ॥ ೭೧ । ಹೇ ಜಾಣೋನಿ ಐಸೇ ಪೌಢೀ । ಜೋ ದೃಷ್ಟಿ ಸವೇಚಿ ವಿಷ ಫೇಡೀ । ತೋ ಧಾವಯಾ ಶ್ರೀಹರೀ ಗರುಡೀ । ಪಾತಲಾ ಕೀ ॥ ೭೨ ॥ ತೈಸಿಯಾ ಪಂಡು ಕುಮಾರಾ ವ್ಯಾಕುಳಾ । ಮಿರವತಸೇ ಶ್ರೀ ಕೃಷ್ಣಾ ಜವಳಾ । ತೋ ಕೃಪಾವಲೇ ಅವಲೀಳಾ । ರಕ್ಷೀಲ ಆತಾ ॥ ೭೩ ॥ ಮ್ಹಣೋನಿ ತೋ ವಾರ್ಥು । ಮೋಹಫಣಿಗ್ರಸ್ತು । ಮ್ಯಾ ಮ್ಹಣಿತಲಾ ಹಾ ಹೇತು । ಜಾಣೋನಿಯೂ ॥೭೪॥ ಮಗ ದೇಖಾ ತೇಥ ಫಾಲ್ಗುನು । ಘೇತಲಾ ಅಸೇ ಭ್ರಾಂತೀ ಕವಳೂನು । ಜೈಸಾಘನ ಪಡಳೀ ಭಾನೂ । ಆಚ್ಛಾದಿಜೆ ॥ ೭೫ ॥ ತಯಾಪರೀ ತೋ ಧನುರ್ಧರೂ । ಜಾಹಲಾಸೇ ದುಃಖೇ ಜರ್ಜರೂ । ಜೈಸೇ ಗ್ರೀಷ್ಮ ಕಾಳೀಗಿರಿವರೂ । ಪಣವಲಾಕಾ ॥ ೭೬ ॥ ಮ್ಹಣೋನಿ ಸಹಜೇ ಸುನೀಳು । ಕೃಪಾಮೃತೇ ಸಜಳು । ತೋ ವೋಳಲಾ ಶ್ರೀ ಗೋಪಾಳು । ಮಹಾಮೇಘು ॥ ೭೭ ॥ ತೇಥ ಸುದಶನಾಚಿದ್ಯುತಿ । ತೇಚಿ ವಿದ್ಯುಲ್ಲತಾ ಝಳಕತೇ । ಗಂಭೀರ ವಾಚಾತೇ ಆಯತೀ । ಗರ್ಜನೇಚೀ ॥ ೭೮ ॥ ಆತಾ ತೋ ಉದಾರ ಕೈಸಾ ವರ್ಷೇಲ । ತೇಣೆ ಅರ್ಜುನಾಚಳು ಸಿವೇಲ । ಮಗ ನವೀ ವಿರೂಢೀ ಫುಟೇಲ । ಉವ್ಮೇಷಾಚೀ ॥ ೭೯ ॥ ತೇ ಕಥಾ ಆಇಕಾ । ಮನಾಚಿಯಾ ಆರಾಣುಕಾ । ಜ್ಞಾನದೇವೋ ಮ್ಹಣೇ ದೇಖಾ । ನಿವೃತ್ತಿದಾಸು ॥ ೮೦ ॥

ಅರ್ಥ— ಈ ಸರ್ವಗೋತ್ರಜರನ್ನೂ ನೋಡಿ ನನ್ನ ಮನಸಿನಲ್ಲಿ ಉಂಟಾದ ದುಃಖಕ್ಕೆ ನಿಮ್ಮ ಉಪದೇಶದ ಹೊರತು ಮತ್ತಿನ್ನಾರ ಉಪದೇಶದಿಂದಲೂ ಇಲ್ಲದಂತೆ ಆಗಲಾರದು. ॥ ೬೪ ॥ ಈ ಸ್ಥಳದಲ್ಲಿ ಈ ಭೂಮಿಯ ಸಾರ್ವ ಭೌಮತ್ವವು ದೊರಕಿದರೂ, ಅಥವಾ ಸ್ವರ್ಗ ಸಾನ್ರಾಜ್ಯವು (ಇಂಪ್ರಪದವು) ಸಿಕ್ಕರೂ ಇಂದ್ರಿಯಗಳನ್ನು ಶೋಷಿ ಸುತ್ತಿರುವ ಈ ಮೋಹನನ್ನು (ಶೋಕವನ್ನು) ಕಳೆಯುವ ಉಪಾಯವನ್ನು ನಾನು ಕಾಣೆನು. ॥ ೬೫ ॥ ಹುರಿದ ಬೀಜವನ್ನು ಫಲವತ್ತಾದ ಭೂಮಿಯಲ್ಲಿ ಬಿತ್ತಿ ಸಾಕಷ್ಟು ನೀರನ್ನು ಹಣಿಸಿದರೂ ಅದು ಅಂಕುರಿಸಲಾರದು. ॥ ೬೬ ॥ ಆಯುಷ್ಯವು ಮುಗಿದಿರುವಾಗ ಯಾವ ಔಷಧಗಳೂ ಉಪಯೋಗಕ್ಕೆ ಬಾರವು. ಆದರೆ ಅಲ್ಲಿ ಪರಮಾಮೃತವೊಂದೇ ಉಪಯೋಗ ಬೀಳುವದು. ॥ ೬೭ ॥ ಅದೇ ಪ್ರಕಾರ ನನಗೆ ಸರ್ವ ರಾಜ್ಯಭೋಗವೂ, ಐಶ್ವರ್ಯಾದಿಗಳೂ ಪ್ರಾಪ್ತವಾದಾಗ್ಯೂ ಈ ಮೋಹ (ದುಃಖ) ದಿಂದ ಮುಕ್ತನಾಗಲಿಕ್ಕೆ ಆ ಸುಖೋಪಭೋಗಗಳು ಎಂದಿಗೂ ಉಪಕಾರಿಯಾಗ ಲಾರವು. ಆದರೆ ದೇವಾ ಕೃಪಾನಿಧೇ ನಿನ್ನ ಕೃಪಾಮೃತ ಪಾನವೇ ನನ್ನ ದುಃಖವನ್ನು ಕಳೆಯುವದಕ್ಕೆ ಸಮರ್ಥ ವಾಗಿರುವದು. ॥ ೬೮ ॥ ಹೀಗೆ ಕ್ಷಣಹೊತ್ತು ಭ್ರಾಂತಿಯಿಲ್ಲದಂತಾದುದರಿಂದಲೇ ಅವನು ಅಲ್ಲಿ ಪುನಃ ನಾಡಿದನು. ಆದರೆ ಉಪಯೋಗವೇನು ? ಅವನಿಗೆ ಅವ್ಯರಲ್ಲಿಯೇ ಪುನಃ ಮೋಹವು ಮುಸುಕಿತು. ॥ ೬೯ ॥

ಅರ್ಜುನನ ಈ ಸ್ಥಿತಿಯನ್ನು ನೋಡಿ ಶ್ರೀ ಜ್ಞಾನೇಶ್ವರ ಮಹಾರಾಜರು ರೂಪಕ ಮಾಡಿ ಹೇಳುವದೇನೆಂದರೆ "ಅರ್ಜುನನು ಮೋಹದಿಂದ ಗ್ರಸ್ತನಾಗಿರದೇ ಮಹಾ ಮೋಹರೂಪೀ ಕಾಲಸರ್ಪದಿಂದ ದಷ್ಟನಾಗಿದ್ದಾನೆ. ॥೭೦॥ ಮತ್ತು ಅವನ ಅಂತಃಕರಣವು ಕರಗಿ ನೀರಾಗಿರುವ ಸಂಧಿಯನ್ನು ಸಾಧಿಸಿ ಮರ್ಮಸ್ಥಾನದಲ್ಲಿ ಆ ಮೋಹರೂಪೀ ಹಾವು ಕಚ್ಚಿದ್ದರಿಂದ ಅದರ ವಿಷದ ವೇಗವು ಅವನಿಗೆ ಸಹಿಸಲಾರದಾಗಿದೆ. ॥ ೭೧ ॥ ಇಂತಹ ಪ್ರಸಂಗದಲ್ಲಿ ಕೇವಲ ದೃಷ್ಟಿಯಿಂದಲೇ ವಿಷವನ್ನು ಹೋಗಲಾಡಿಸುವ ಸಾಮರ್ಥ್ಯವುಳ್ಳ ಮಹಾಮಹಿಮನಾದ ಶ್ರೀಕೃಷ್ಣರೂಪವಾದ ಗಾರುಡಿಯು ಅರ್ಜುನನ್ನು ಸಂರಕ್ಷಿಸುವದಕ್ಕಾಗಿ ಓಡಿ ಬಂದನು. ॥ ೭೨ ॥ ಆಗ್ಗೆ ಅರ್ಜುನನು ಶ್ರೀಕೃಷ್ಣನ ಹತ್ತರ ಮೋಹದಿಂದ ವ್ಯಾಕುಲಪಟ್ಟು ಭ್ರಮಿಷ್ಟನಂತೆ ಕಾಣುತ್ತಿದ್ದನು. ಅವನನ್ನು ಶ್ರೀಕೃಷ್ಣಪರಮಾತ್ಮನು ಇನ್ನು ಮೇಲೆ ತನ್ನ ಕೃಪಾದೃಷ್ಟಿಯಿಂದ ಸಹಜವಾಗಿಯೇ ರಕ್ಷಿಸುವನು. ॥ ೭೩ ॥ ಮೋಹವೆಂಬ ಕಾಳಸರ್ಪವು ಪಾರ್ಥನನ್ನು ಕಚ್ಚಿರುವ ದೆಂಬ ಕಲ್ಪನೆಯನ್ನು ಮನಸಿನಲ್ಲಿ ತಂದು ನಾನು ಇಲ್ಲಿ ಈ ರೂಪಕವನ್ನು ಮಾಡಿರುವೆನು." ॥ ೭೪ ॥ ಮೋಡದಿಂದ ಸೂರ್ಯನು ಆಚ್ಛಾದಿತನಾಗುವಂತೆ, ಅರ್ಜುನನು ಆ ಸಮಯದಲ್ಲಿ ಭ್ರಾಂತಿಯಿಂದ ಆವರಿಸಲ್ಪಟ್ಟಿದ್ದನು. ॥ ೭೫ ॥ ಜೇಸಿಗೆಯಲ್ಲಿ ಗುಡ್ಡವು ಅಗ್ನಿಯಿಂದ ಪ್ರದೀಪ್ತವಾಗುವಂತೆ ಅರ್ಜುನನು ದುಃಖದಿಂದ ಅತಿಶಯವಾಗಿ ಜರ್ಜರಿತನಾಗಿದ್ದನು. ॥ ೭೬ ॥ ಅಗ್ನಿಯು ಪ್ರಜ್ವಲಿತವಾಗಿ ವನವನ್ನು ಸುಡುತ್ತಿರಲು, ನೀರಿನಿಂದ ತುಂಬಿದ ನೀಲ ಮೇಘಗಳು ಮಳೆ ಗರೆದು ಬೆಂಕಿಯನ್ನು ಆರಿಸುವಂತೆ, ನೀಲವರ್ಣನಾದ ಆ ಮಹಾಮೇಘರೂಪೀ ಶ್ರೀಕೃಷ್ಣನು ಕೃಪಾಮೃತ ಜಲವನ್ನು ಅರ್ಜುನನ ಮೇಲೆ ಸಿಂಪಡಿಸಿ ಅನುಗ್ರಹ ಮಾಡಿದನು. ॥ ೭೭ ॥ ಆ ಶ್ರೀಕೃಷ್ಣರೂಪೀ ಮೇಘದಲ್ಲಿ, ಶ್ಯಾಮಸುಂದರನಾದ ಶ್ರೀಹರಿಯ ಥಳ ಥಳ ಹೊಳೆಯುವ ಹಲ್ಲುಗಳ ಕಾಂತಿಯೇ ಮಿಂಚಿನಂತೆಯೂ ಗಂಭೀರವಾದ ಭಾಷಣವೇ ಗರ್ಜನೆಯಂತೆಯೂ ಶೋಭಿಸುತಲಿದ್ದವು. ॥ ೭೮ ॥ ಭಗವಾನ್ ಅನಂತರೂಪೀ ಉದಾರ ಮೇಘವು ಕೃಪಾದೃಷ್ಟಿಯನ್ನು ಕರೆದು ಅರ್ಜುನರೂಪಿಯಾದ ಸುಡುವ ಅರಣ್ಯವನ್ನು ಹೇಗೆ ಶಾಂತಮಾಡಿತು ಮತ್ತು ಅವನಲ್ಲಿ ಜ್ಞಾನದ ಅಂಕುರವು ಹೇಗೆ ಹುಟ್ಟಿತು, ॥ ೭೯ ॥ ಇದೇ ಮೊದಲಾದ ಕಥೆಯನ್ನು ಸಾವಧಾನ ಚಿತ್ತದಿಂದ ಕೇಳಬೇಕೆಂದು ಶ್ರೋತೃಗಳಿಗೆ ಶ್ರೀ ನಿವೃತ್ತಿದಾಸರಾದ ಶ್ರೀ ಜ್ಞಾನೇಶ್ವರ ಮಹಾರಾಜರು ಅನ್ನುತ್ತಾರೆ. ॥ ೮೦ ॥

ಸಂಜಯ ಉವಾಚ—

ಏವಮುಕ್ತ್ವಾ ಹೃಷೀಕೇಶಃ ಗುಡಾಕೇಶಃ ಪರಂತಪಂ ।
ನ ಯೋತ್ಸ್ಯ ಇತಿ ಗೋವಿಂದಮುಕ್ತ್ವಾ ತೂಷ್ಣೀಂ ಬಭೂವಹ ॥ ೯ ॥

[ಸಂಜಯ–ಉವಾಚ–ಏವಮಿತಿ] ಐಸೇ ಸಂಜಯ ಅಸೇ ಸಾಂಗತ । ಮ್ಹಣೇ ರಾಯಾ ತೋ ಪಾರ್ಥ । ಪುನರಪಿ ಶೋಕಾಕುಳಿತ । ಕಾಯಬೋಲೇ ॥ ೮೧ ॥ ಆಇಕೇ ಸಟೇದ ಬೋಲೇ ಶ್ರೀಕೃಷ್ಣತೇ । ಆತಾ ನಾಳವಾವೆ ತುಮ್ಹೀಪಮಾತೇ । ಮೀ ಸರ್ವಥಾ ನಜುಂಝೋ ಏಥೇ । ಭರವಸೇನಿ ॥ ೮೨ ॥ ಐಸೇ ಯೇಕಿಹೇಳಾ ಬೋಲಿಲಾ । ಮಗ ಮೌನ ಧರೂನಿ ಠೇಲಾ । ತೇಥ ಶ್ರೀ ಕೃಷ್ಣ ವಿಸ್ಮಯೋ ಪಾವಲಾ । ದೇಖೋನಿ ತಯಾತೆ ॥ ೮೩ ॥

ಅರ್ಥ— ಈ ಪ್ರಕಾರ ಧೃತರಾಷ್ಟ್ರ ರಾಜನಿಗೆ ಹೇಳಿ ಸಂಜಯನು ಮತ್ತೆ ಹೀಗೆ ಅನ್ನುತ್ತಾನೆ– ರಾಜನೇ, ಪುನಃ ಪಾರ್ಥನು ದುಃಖದಿಂದ ಕೂಡಿದ ಅಂತಃಕರಣವುಳ್ಳವನಾಗಿ ಏನು ಹೇಳಿದನು. ॥ ೮೧ ॥ ಅದನ್ನು ಕೇಳು ಅವನು ದುಃಖದಿಂದ ಶ್ರೀ ಕೃಷ್ಣನಿಗೆ ಅನ್ನುತ್ತಾನೆ ದೇವಾ, ನೀವು ಯುದ್ಧಮಾಡುವ ವಿಷಯದಲ್ಲಿ ನನಗೆ ಯಾವ ಪ್ರಕಾರದಿಂದಲೂ ಆಗ್ರಹ ಮಾಡಬಾರದು. ಈ ರಣಾಂಗಣದಲ್ಲಿ ನಾನು ನಿಸ್ಸಂದೇಹವಾಗಿ ಯುದ್ಧವನ್ನು ಮಾಡುವದಿಲ್ಲ. ॥೮೨॥ ಹೀಗೆ ಒಂದೇವೇಳೆ ಮಾತನಾಡಿ ಆ ಮೇಲೆ ಏನೂ ಮಾತನಾಡದೇ ಅವನು ಸ್ತಬ್ಧನಾಗಿ ನಿಂತುಬಿಟ್ಟನು. ಇಂಥ ಸ್ಥಿತಿಯಲ್ಲಿ ಅರ್ಜುನನ್ನು ನೋಡಿ ಭಗವಂತನಿಗೆ ಬಹಳೇ ಆಶ್ಚರ್ಯವೆನಿಸಿತು. ॥ ೮೩ ॥

ತಮುವಾಚ ಹೃಷೀಕೇಶಃ ಪ್ರಹಸನ್ನಿವ ಭಾರತ ।
ಸೇನಯೋರುಭಯೋರ್ಮಧ್ಯೆ ವಿಷೀದಂತಮಿದಂವಚಃ ॥ ೧೦ ॥

[ತಮುವಾಚೇತಿ] ಮಗ ಆವುಲಾ ಚಿತ್ತೀ ವ್ಹಣೆ । ಏಥ ಹೇಕಾಯಿ ಆದರಿಲೇಯೇಣೇ ॥ ಅರ್ಜುನ ಸರ್ವಥಾ ಕಾಹೀ ನೇಣೇ । ಕಾಯಕೀಜೇ ॥ ೪೪ ॥ ಹಾ ಉಮಜೇ ಆತಾ ಕವಣೇ ಪರೀ । ಕೈಸೇನಿ ಧೀರ ಸ್ವೀಕಾರೀ । ಜೈಸಾ ಗ್ರಹಾತೇ ಪಂಚಾಕ್ಷರೀ । ಅನುಗ್ರಾನೀ ಕಾ ॥ ೪೫ ॥ ನಾ ತರೀ ಅಸಾಧ್ಯದೇಖೋನಿ ವ್ಯಾಧಿ ! ಅಮೃತಾಸಮ ದಿವ್ಯ ಔಷಧೀ । ವೈದ್ಯ ಸೂಚೀ ನಿರವಧಿ । ಸಿದಾವೀಚೀ ॥ ೪೬ ॥ ತೈಸೇ ವಿವರೀತ ಅಸೇ ಶ್ರೀ ಅನಂತ । ತಯಾ ದೋಹೀ ಸೈನ್ಯಾ ಆಂತ । ಜಯಾ ಪರೀ ಪಾರ್ಥ । ಭ್ರಾಂತಿ ಸಾಂಡೀ ॥ ೪೭ ॥ ತೇ ಕಾರಣ ಮನೇ ಧರಿಲೀ । ಮಗ ಸರೋಷ ಬೋಲೋ ಆದರಿಲೇ । ಜೈಸೇ ಮಾತೇಚ್ಯಾ ಕೋಪೀ ಥೋಕಲೆ । ಸ್ನೇಹ ಆಥೀ ॥ ೪೪ ॥ ಕೇ ಔಷ ಧಾಚಿಯಾ ಕಡವಟಪಣೀ । ಜೈಸೀ ಅಮೃತಾಚೀ ಪುರವಣೀ । ತೇ ಆಹಾಚ ನದಿಸೆ ಪರಿ ಗುಣೇ । ಪ್ರಕಟಹೋಯ ॥ ೪೯ ॥ ತೈಸೀ ವರೀ ವಂಸೀ ಪಾಹತಾ ಉದಾಸೇ । ಆತ ತರೀ ಅತಿ ಸುರಸೇ । ತಿಯೇ ವಾಕ್ಯೆ ಹೃಪೀ ಕೇಲೇ ಬೋಲೋ ಆದರಿಲೀ ॥ ೯೦ ॥

ಅರ್ಥ— ಶ್ರೀ ಕೃಷ್ಣನು ತನ್ನ ಮನಸಿನಲ್ಲಿ ಅನ್ನುತ್ತಾನೆ– ಈ ಪ್ರಸಂಗದಲ್ಲಿ ಅರ್ಜುನನ ಮನಸಿನಲ್ಲಿ ಉದ್ಭವಿಸಿದು ದಾರೂ ಏನೆಂಬುದು ಯಾರಿಗೆ ಗೊತ್ತು ? ಇವನಿಗೆ ಏನೂ ತಿಳಿಯುವದಿಲ್ಲವಲ್ಲ ! ಇದಕ್ಕೆ ಉಪಾಯವೇನು ? ॥ ೪೪ ॥ ಇವನಿಗೆ ಯಾವ ಉಪಾಯದಿಂದ ತಿಳುವಳಿಕೆಯು ಉಂಟಾಗೀತು ? ಏನು ಉಪಾಯವನ್ನು ಮಾಡುವದರಿಂದ ಇವನಿಗೆ ಧೈರ್ಯ ಉಂಟಾಗೀತು ? " ಪಂಚಾಕ್ಷರಿಯು ಭೂತ ಬಾಧೆಯನ್ನು ಹೊಡೆದೋಡಿಸಲು ವಿಚಾರಮಾಡುವಂತೆ ॥ ೪೫ ॥ ಅಸಾಧ್ಯರೋಗವನ್ನು ನೆಟ್ಟಗೆ ಮಾಡಲು ವೈದ್ಯನು ಗುಣದಾಯಕವಾದ ಅಮೃತತುಲ್ಯವಾದ ದಿವ್ಯೌಷಧಿಯನ್ನು ತತಕ್ಷಣವೇ ಉಪಯೋಗಿಸುವಂತೆ, ॥ ೪೬ ॥ ಆ ಎರಡೂ ಸೈನ್ಯಗಳ ಮಧ್ಯದಲ್ಲಿ ನಿಂತಿರುವ ಭಗವಾನ್ ಶ್ರೀ ಕೃಷ್ಣ ಪರಮಾತ್ಮನು ಅರ್ಜುನನ ಮೋಹನವನ್ನು ದೂಡಲು ವಿಚಾರಮಾಡುತ್ತಿದ್ದನು. ಅದು ಹೇಗಂದರೆ– ಯಾವ ಕಾರಣ ದಿಂದ ಇಷ್ಟು ಮೋಹವು (ದುಃಖವು) ಇವನಲ್ಲಿ ಉತ್ಪನ್ನವಾಗಿರುವದು ಮತ್ತು ಆ ಭ್ರಾಂತಿಯನ್ನು ಹೇಗೆ ಬಿಡಿಸುವದು ? ॥ ೪೭ ॥ ಅಜ್ಞಾನನೇ ಭ್ರಾಂತಿಯ ಕಾರಣವೆಂಬುದನ್ನು ಮನಸಿನಲ್ಲಿ ತಂದು ಆ ಮೇಲೆ ಶ್ರೀ ಕೃಷ್ಣನು ಕ್ರೋಧವುಳ್ಳವನಾಗಿ ಭಾಷಣಮಾಡಲಾರಂಭಿಸಿದನು. ಮೇಲೆ ತೋರದಿದ್ದರೂ ತಾಯಿಯ ಕ್ರೋಧದಲ್ಲಿ ಗುಪ್ತರೂಪ ದಿಂದ ಸ್ನೇಹವು ತುಂಬಿರುವಂತೆ ॥ ೪೮ ॥ ಕಹಿಯಾದ ಔಷಧದಲ್ಲಿ ಪೂರ್ಣವಾಗಿ ಗುಣಹೊಂದುವ ಅಮೃತವಿ ರುವಂತೆ ಮೇಲಿಂದಲೇ ನೋಡಿದರೆ ಆ ಔಷಧದಲ್ಲಿ ಏನೂ ಕಾಣದೇ ಇದ್ದರೂ, ಪರಿಣಾಮದಲ್ಲಿ ಗುಣಕೊಡುವಂಥಾ ದ್ದೆಂಬುದು ಸ್ಪಷ್ಟವಾಗಿ ಕಂಡುಬರುತ್ತದೆ. ॥ ೪೯ ॥ ಅದರಂತೆ ಬಹಿರಂಗವಾಗಿ ನೋಡಿದರೇ ಕ್ರೋಧಯುಕ್ತನಂತೆ ತೋರಿದರೂ ಅಂತರಂಗದಲ್ಲಿ ಶ್ರೀಕೃಷ್ಣನ ಕ್ರೋಧದೋಳ್ ಪ್ರೇಮಪೂರ್ಣತೆಯಿದ್ದಿತು. ಹೀಗೆ ಒಳಗೆ ಅತಿ ಪ್ರೀತಿ ಯನ್ನು ತುಂಬಿಕೊಂಡಿರುವ ಶ್ರೀಕೃಷ್ಣನು ಅರ್ಜುನನಿಗೆ ಉಪದೇಶಮಾಡಲಾರಂಭಿಸಿದನು. ॥ ೯೦ ॥

ಶ್ರೀ ಭಗವಾನುವಾಚ —

ಅಶೋಚ್ಯಾನನ್ವಶೋಚಸ್ತ್ವಂ ಪ್ರಜ್ಞಾವಾದಾಂಶ್ಚ ಭಾಷಸೇ ।
ಗತಾಸೂನಗತಾಸೂಂಶ್ಚ ನಾನುಶೋಚಂತಿ ಪಂಡಿತಾಃ ॥ ೧೧ ॥

[ಶ್ರೀ ಭಗವಾನುವಾಚ] ಮಗ ಅರ್ಜುನಾತೆ ವ್ಹಣಿತಲೇ । ಅವ್ಹೀ ಆಜೀ ಹೇ ನವಲ ದೇಖಿಲೆ । ಜೀ ತೂವಾ ಏಥ ಆದರಿಲೇ । ಮಾಝುಪಾರಿಚಿ ॥ ೯೧ ॥ ತೂ ಜಾಣತಾ ತರೀ ವ್ಹಣ ವಿಸೇ । ಪರೀ ನೇಣವೇತೇ ನ ಸಾಂಡಿಸೇ । ಆಣಿ ತಿಕವೂ ವ್ಹಣೋತರೀ ಬೋಲಸೀ । ಬಹು

ಸಾಲ ನೀತಿ ॥ ೯೨ ॥ ಜಾತ್ಯಂಧಾ ಲಾಗೇ ಪಿಸೇ । ಮಗ ತೇ ಸೈರಾ ಧಾವೇ ಜೈಸೇ । ತುಝೀ ಶಾಹಣಪಣ ತೈಸೇ । ದಿಸತಸೇ ॥ ೯೩ ॥ ತೂ ಆಪಣಾಪೇ ತರೀ ನೇಣಸೀ । ಪರೀಯಾ ಕೌರ ವಾತೇ ಶೋಚೂ ಪಾಹಾಸೀ । ಹಾ ಬಹು ವಿಸ್ಮಯ ಆನ್ಹಾಸೀ ಪುಢತಪುಢತೀ ॥ ೯೪ ॥ ತರೀ ಸಾಂಗ ಪಾ ಅರ್ಜುನಾ । ತುಜ ಪಾಸೂನಿ ಸ್ಥಿತೀಯಾ ತ್ರಿಭುವನಾ । ಹೇ ಅನಾದಿ ವಿಶ್ವರಚನಾ । ತೇ ಲಟಕೇ ಕಾಯೀ ॥ ೯೫ ॥ ಏಕ ಸಮರ್ಥ ಏಕ ಆಥೀ । ತಯಾಪಾಸೂನಿ ಭೂತೇ ಹೋತೀ । ತರೀ ಹೇ ವಾಯಾಂಚಿ ಕಾಯ ಬೋಲತೀ । ಜಗಾ ಮಾಜೀ ॥ ೯೬ ॥ ಹೋಕಾ ಸಾಂಪ್ರತ ಐಸೇ ಜಾಹಾಲೇ । ಜೇ ಹೇ ಜನ್ಮಮೃತ್ಯೂ ತುವಾ ನೈಜಿಲೇ । ಆಣಿ ನಾಶ ಪಾವೇ ನಾತಿಲೇ । ತುಝೇನಿ ಕಾಯೀ । ೯೭ ॥ ತೂಭ್ರಮಲೇ ವಣೇ ಅಹಂಕೃತೀ । ಯಾಸೀ ಘಾತ ನ ಧರಿಸೀ ಚಿತ್ತೀ । ತರೀ ಸಾಂಗೇ ಕಾಯೀ ಹೇ ಹೋತೀ । ಚಿರಂತನ ॥ ೯೮ ॥ ಕೀ ತೂ ಏಕ ವಧಿತಾ । ಆಣಿ ಸಕಳ ಲೋಕ ಹಾಮರತಾ । ಐಸೀ ಭ್ರಾಂತೀ ಝುಣೇ ಚಿತ್ತಾ । ಯೇವೋ ದೇಸೀ ॥ ೯೯ ॥ ಅನಾದಿ ಸಿದ್ಧ ಹೇ ಲಘವೇ । ಹೋತ ಜಾತ ಸ್ವಭಾವೇ । ತರೀ ತುವಾಕಾ ಶೋಚಾವೆ । ಸಾಂಗೇ ಮಜ ॥ ೧೦೦ ॥ ಪರೀ ಮೂರ್ಖ ಪಣೇ ನೇಣಸೀ । ನ ಚಿಂತಾವೇ ತೇ ಚಿಂತಿಸೀ । ಆಣಿ ತೂಚಿ ನೀತಿ ಸಾಂಗಸೀ ಆಮ್ಹಾಪ್ರತಿ ॥ ೧೦೧ ॥ ದೇಖೇ ವಿವೇಕೀ ಜೇ ಹೋತೀ । ತೇ ದೋಹೀ ತೇಹೀ ನ ಶೋಚಿತೀ ಜೇ ಹೋಯ ಜಾಯ ಹೇ ಭ್ರಾಂತೀ । ವ್ಯಾಪುನಿಯಾ ॥ ೧೦೨ ॥

ಅರ್ಥ— ಶ್ರೀಕೃಷ್ಣನು ಅರ್ಜುನನಿಗೆ ಅನ್ನುತ್ತಾನೆ— ಈ ಯುದ್ಧಸಮಯದಲ್ಲಿ ನೀನು ನಡುವೆ ಇದನ್ನೇನು ಪ್ರಾರಂಭಿಸಿದೆ? ಈ ದಿವಸ ಇದೊಂದು ಆಶ್ಚರ್ಯವೇ ನನ್ನ ದೃಷ್ಟಿಗೆ ಬಿದ್ದಿದೆ. ॥ ೯೧ ॥ ಪಾರ್ಥಾ, ನಿನ್ನೊಳಗೇ ನೀನು ಒಳ್ಳೇ ಜ್ಞಾನಿಯೆಂದು ತಿಳಿದಿರುವಿ. ಆದರೆ ಅಜ್ಞಾನವನ್ನು ಬಿಡಲೊಲ್ಲೆ. ಒಳ್ಳೆಯದು ಯಾವ ದಾದರೂ ಒಂದು ಮಾತು ನಿನಗೆ ಕಲಿಸಬೇಕೆಂದು ಯೋಚಿಸಿದರೆ ನೀನು ನನಗೇ ಜಾಣತನದ ಮಾತನ್ನು ಸೂಚಿಸುತ್ತಿರುವಿ. ॥ ೯೨ ॥ ಹುಟ್ಟುಗುರುಡನಿಗೆ ಹುಚ್ಚು ಹಿಡಿದ ಮೇಲೆ ಅವನು ಹೇಗೆ ದಿಕ್ಕು ತಪ್ಪಿ ಓಡಾಡುತ್ತಾನೆಯೋ, ಅದರಂತೇ ನಿನ್ನ ಪಾಂಡಿತ್ಯದ ಸ್ಥಿತಿಯೂ ಆಗಿದೆ. ॥ ೯೩ ॥ ನೀನು ನಿನ್ನ ಸ್ವರೂಪವನ್ನು ತಿಳಿದು ಕೊಳ್ಳದೇ ಕೌರವರ ದೆಸೆಯಿಂದ ಶೋಕ ಮಾಡುತ್ತ ಕುಳಿತಿರುವಿ. ಈ ವಿಷಯವಾಗಿ ನಮಗೆ ಮೇಲಿಂದ ಮೇಲೆ ಆಶ್ಚರ್ಯವೆನಿಸುತ್ತದೆ. ॥ ೯೪ ॥ ಆದರೆ ಅರ್ಜುನಾ ನೀನೇ ಹೇಳು ನೋಡುವಾ, ಈ ಅನಾದಿ ಸಿದ್ಧವಾದ ವಿಶ್ವರಚನೆಯು ಅಸತ್ಯವೋ? ಈ ಮೂರು ಲೋಕದ ಪಾಲನಕರ್ತನು ನೀನೇ ಇರುವೆಯಾ ಹೇಗೆ? ॥ ೯೫ ॥ ಈ ಜಗತ್ತಿನಲ್ಲಿ ಯಾವನೋ ಒಬ್ಬ ಸಮರ್ಥ ಈಶ್ವರನಿದ್ದಾನೆ. ಅವನಿಂದಲೇ ಪ್ರಾಣಿಮಾತ್ರದ ಮತ್ತು ಪೃಥ್ವಿ, ಆಪ, ತೇಜ, ವಾಯು, ಆಕಾಶ ಇವುಗಳ ಉತ್ಪತ್ತಿಯಾಗುತ್ತದೆ, ಎಂದು ಜಗತ್ತು ಕೂಗುವ ಮಾತೂ ಅಸತ್ಯವೆನ್ನುವೆಯಾ? ॥ ೯೬ ॥ ಜನ್ಮಮೃತ್ಯುಗಳೂ ನಿನ್ನಿಂದಲೇ ಉತ್ಪನ್ನವಾಗಿರುವವೇ? ನಿನ್ನ ಚಿತ್ತಮಾತ್ರದಿಂದಲೇ ಅವೆಲ್ಲವೂ ನಾಶವಾಗುವವೆಂದು ತಿಳಿದಿರುವೆಯಾ? ಸಾಂಪ್ರತ ಈ ಎಲ್ಲ ಕಾರ್ಯಗಳು ನಿನ್ನಿಂದಲೆ ಆಗುತ್ತಿರುವ ವೆಂಬದನ್ನು ನೀನು ಸಿದ್ಧ ಮಾಡಿದಂತಾಯಿತು. ॥ ೯೭ ॥ ನೀನು ಭ್ರಮೆಯಿಂದ ಅಹಂಕಾರಯುಕ್ತನಾಗಿ ಕೌರವರ ನಾಶಮಾಡುವದಕ್ಕೆ ನಿನ್ನ ಮನಸು ಒಪ್ಪದಿದ್ದರೂ ಈ ಕೌರವರು ಚಿರಂಜೀವಿಗಳಾಗುವರೇನು ಹೇಳು ನೋಡುವಾ? ॥ ೯೮ ॥ "ನಾನೇ ಒಬ್ಬನು ಕೊಲ್ಲುವವನು. ಉಳಿದವರೆಲ್ಲರೂ ಮಾತ್ರ ಸಾಯುವವರು" ಎಂಬ ಭ್ರಾಂತಿಯನ್ನು ನಿನ್ನ ಚಿತ್ತದಲ್ಲಿ ತರಬೇಡ ಕಂಡೆಯಾ? ॥ ೯೯ ॥ ಪಾರ್ಥಾ, ಈ ಅನಾದಿಸಿದ್ಧವಾದ ಮಾತು ತನ್ನಿಂದ ತಾನೇ ಉಂಟಾಗುತ್ತಿರುತ್ತದೆ. ಆ ವಿಷಯದಲ್ಲಿ ನೀನು ವ್ಯರ್ಥವಾಗಿ ದುಃಖಿಸುವ ಕಾರಣ ವೇನು? ನನಗೆ ಹೇಳು. ॥೧೦೦॥ ಆದರೆ ಮೂರ್ಖತನದ ಮೂಲಕವಾಗಿ ನಿನಗೆ ಇದು ತಿಳಿಯುವದಿಲ್ಲ. ನೀನು ಯಾವ ಮಾತಿನ ಚಿಂತೆಯನ್ನು

ಮಾಡಬಾರದೋ ಆ ಮಾತಿನ ಬಗ್ಗೆ ಚಿಂತೆಯನ್ನು ಮಾಡಿ ವ್ಯರ್ಥವಾಗಿ ದುಃಖಿಸುತ್ತಿರುವಿ. ಅಲ್ಲದೇ ಮತ್ತೆ ನಮಗೇ ಪಂಡಿತತನದ ಉಪದೇಶವನ್ನು ಮಾಡುತ್ತಿರುವೆ. ॥ ೧೦೧ ॥ ಹೀಗೆ ನೋಡು ವಿಚಾರವಂತರಿರುವವರು ಜನ್ಮ-ಮೃತ್ಯುಗಳು ಭ್ರಾಂತಿಯೆಂದು ತಿಳಿದು ಎರಡೂ ಮಾತಿನ ಬಗ್ಗೆ ದುಃಖವನ್ನು ಪಡಲಾರರು ॥ ೧೦೨ ॥

ನ ತ್ವೇವಾಹಂ ಜಾತು ನಾಸಂ ನ ತ್ವಂ ನೇಮೇ ಜನಾಧಿಪಾಃ ।
ನ ಚೈವ ನ ಭವಿಷ್ಯಾಮಃ ಸರ್ವೇ ವಯಮತಃ ಪರಂ ॥ ೧೨ ॥

[ನ ತ್ವೇವಾಹಮಿತಿ] ಅರ್ಜುನಾ ಸಾಂಗೇನ ಆಇಕ । ಏಥ ಆಮ್ಹಿ ತುಮ್ಹೀ ದೇಖ । ಆಣಿ ಹೇ ಭೂಪತಿ ಅಶೇಖ । ಆದಿ ಕರೂನೀ ॥ ೩ ॥ ನಿತ್ಯತಾ ಐಸೇಚಿ ಅಸೋನಿ । ನಾತರೀ ನಿಶ್ಚಿತ ಕ್ಷಯಾ ಜಾವೂನಿ । ಹೇ ಭ್ರಾಂತಿ ವೇಗಳೀ ಕರೂನಿ । ದೋನ್ಹೀ ನಾಹೀ ॥ ೪ ಹೇ ಉಪಜೇ ಆಣಿ ನಾಶೇ । ತೇ ಮಾಯಾ ಪಶೆ ದಿಸೇ । ಯೇರ್ಹವೀ ತತ್ತ್ವತಾ ನಸ್ತುಜೇ ಅಸೇ । ತೇ ಅವಿನಾಶಚಿ ॥ ೫ ॥ ಜೈಸೇ ಪವನೇ ತೋಯ ಹಾಲವಿಲೇ । ಆಣಿ ತರಂಗಾಕಾರ ಜಾಹಾಲೆ । ತರೀ ಕವಣ ಕೇ ಜನ್ಮಲೇ । ಮ್ಹಣೋಯೇ ತೆಥ ॥ ೬ ॥ ತೇಚಿ ವಾಯೂಚೆ ಸ್ಫುರಣ ರೇಲೇ । ಆಣಿ ಉದಕ ಸಹಜ ಸಪಾಟ ಜಾಹಾಲೇ । ತರೀ ಆತಾ ಕಾಯ ನಿಮಾಲೇ । ವಿಚಾರೀ ಪಾ ॥ ೭ ॥

ಅರ್ಥ— ಪಾರ್ಥಾ, ಇನ್ನೂ ಹೇಳುತ್ತೇನೆ ಕೇಳು. ನೀವೂ ನಾವೂ ಮುತ್ತು ಎಲ್ಲರಾಜರೂ ಈ ಸ್ಥಳದಲ್ಲಿ ಕೂಡಿದವರೆಲ್ಲರೂ ॥ ೩ ॥ ಹೀಗೆ ಶಾಶ್ವತವಾಗಿ ಇರುವರು ಇಲ್ಲವೇ ನಾಶಹೊಂದುವರೆಂಬ ಭ್ರಮೆಯನ್ನು ಬಿಟ್ಟು ಬಿಟ್ಟರೆ ಈ ಎರಡೂ ಮಾತುಗಳು ನಿಜವಾದವು ಇರುವದಿಲ್ಲ. ॥ ೪ । ಯಾಕೆಂದರೆ ' ಉತ್ಪತ್ತಿ, ಅಥವಾ ನಾಶ ' ಇವುಗಳು ನಮ್ಮ ಕಣ್ಣಿಗೆ ಕಾಣುತ್ತಿರುವದೇನೋ ನಿಜ ಆದರೆ ಅವೆಲ್ಲವುಗಳೂ ಮಾಯಾ ಯೋಗದಿಂದಲೇ ಹಾಗೆ ಕಾಣುವವು. ನಿಜವಾಗಿ ನೋಡಿದರೆ ಆತ್ಮವು ಅವಿನಾಶಯಾಗಿರುತ್ತದೆ. ॥ ೫ ॥ ಗಾಳಿಯಿಂದ ನೀರು ಅಲ್ಲಾಡಿ ತೆರೆಗಳು ಉತ್ಪನ್ನವಾಗುವವು, ಆದರೆ ಅಲ್ಲಿ ಏನು ಹುಟ್ಟಿದವೆಂದು ತಿಳಿಯಬೇಕು ? ॥ ೬ ॥ ಇಲ್ಲವೇ ಗಾಳಿಯು ಸ್ತಬ್ಧವಾದ ಮೇಲೆ ನೀರು ಸ್ಥಿರವಾಗಿ ನಿಂತರೆ ಆ ಸ್ಥಳದಲ್ಲಿ ಯಾವುದು ನಾಶವಾಗಿರುವದು ? ಇದರ ವಿಚಾರವನ್ನು ಮಾಡು. ॥ ೭ ॥

ದೇಹಿನೋಽಸ್ಮಿನ್ಯಥಾ ದೇಹೇ ಕೌಮಾರಂ ಯೌವನಂ ಜರಾ ।
ತಥಾ ದೇಹಾಂತರ ಪ್ರಾಪ್ತಿರ್ಧೀರಸ್ತತ್ರ ನ ಮುಹ್ಯತಿ ॥ ೧೩ ॥

[ದೇಹಿನ ಇತಿ] ಆ ಇಕೇ ಶರೀರತರೀ ಏಕ । ಪರೀ ವಯಸಾಭೇದೇ ಅನೇಕ । ಹೇ ಪ್ರತ್ಯಕ್ಷಚಿ ದೇಖ । ಪ್ರಮಾಣತೂ ॥ ೮ ॥ ಏಥ ಕೌಮಾರತ್ವೇದಿಸೇ । ಮಗ ತಾರುಣ್ಯೇ ತೇ ಭ್ರಂಶೇ । ಪರೀ ದೇಹಚೀ ನ ನಾಶೇ । ಏಕೇಕಾಸವೆ ॥ ೯ ॥ ತೈಸೀ ಚೈತನ್ಯಾಚ್ಯಾ ಠಾಯೀ । **ಇಯೇ** ಶರೀರಾಂತರೇ ಹೋತೀ ಜಾತೀ ಪಾಹೀ । ಐಸೇ **ಜಾಣೇ** ತಯಾನಾಹೀ । **ವ್ಯಾಮೋಹ** ದುಃಖ ॥೧೧೦॥

ಅರ್ಥ— ಪಾರ್ಥಾ, ಹೀಗೆನೋಡು. ಶರೀರವು ಒಂದೇ ಆಗಿರುವದು. ಆವರೆ ವಯಪರತ್ವದಿಂದ ಅದರಲ್ಲಿಯೂ ಸಹ ಭೇದವು ದೃಷ್ಟಿಗೆ ಬೀಳುವದೆಂಬುವದು ಪ್ರತ್ಯಕ್ಷ ಪ್ರಮಾಣವಾಗಿರುವದು. ॥ ೮ ॥ ಅದೇ ಶರೀರಕ್ಕೆ ಬಾಲ್ಯವು ಪ್ರಾಪ್ತವಾದದ್ದನ್ನು ಕಾಣುತ್ತೇವೆ. ಅದೇ ಬಾಲ್ಯವೂ ಬರಬರುತ್ತ ಕುಮಾರ ಭಾವದಲ್ಲಿ ಪರಿಣಮಿಸುತ್ತದೆ. ಬಾಲ್ಯವು ಹೋಗಿ ಯೌವನವು ಪ್ರಾಪ್ತವಾಗುತ್ತದೆ. ಯೌವನವು ಕಳೆದನಂತರ ವೃದ್ಧಾಪ್ಯವು ಬರುತ್ತದೆ. **ಆದರೆ ಪ್ರತಿಯೊಂದು** ಅವಸ್ಥಾತ್ರಯದೊಡನೆ ಶರೀರವು ಇಲ್ಲದಂತಾಗುವದಿಲ್ಲ. ॥ ೯ ॥ ಅದೇ ಪ್ರಕಾರ ಆತ್ಮದ ಸ್ಥಳದಲ್ಲಿ ಅನಂತ ಶರೀರಗಳು ಆಗುತ್ತವೆ ಹೋಗುತ್ತವೆ. ಹೀಗೆ **ತಿಳಿಯುವ** ಜ್ಞಾನಿಗಳಿಗೆ ನಿನ್ನಂತೆ ಮೋಹದಿಂದ ದುಃಖವು ಉಂಟಾಗುವದಿಲ್ಲ. ॥ ೧೧೦ ॥

ಮಾತ್ರಾಸ್ಪರ್ಶಾಸ್ತು ಕೌಂತೇಯ ಶೀತೋಷ್ಣ ಸುಖದುಃಖದಾಃ ।
ಆಗಮಾಪಾಯಿನೋಽ ನಿತ್ಯಾಸ್ತಾಂಸ್ತಿತಿಕ್ಷಸ್ವ ಭಾರತ ॥ ೧೪ ॥

[ಮಾತ್ರಾಸ್ಪರ್ಶಾ ಇತಿ] ಏಥ ನೇಣವಯಾ ಹೇಚಿ ಕಾರಣ । ಜೇ ಇಂದ್ರಿಯಾ ಆಧೀನ ಪಣ । ತಿಹೀ ಆಕಳಿಜೆ ಅಂತಃಕರಣ । ಮ್ಹಣೂನಿ ಭ್ರಮೇ ॥ ೧೧ ॥ ಇಂದ್ರಿಯೇ ವಿಷಯ ಸೇವಿತೀ । ತೇಥ ಹರ್ಷಶೋಕ ಉಪಜತೀ । ತೇ ಅಂತರ ಆಪ್ಲ್ಯಾವಿತೀ । ಸಂಗೇಯೇಣೇ ॥ ೧೨ ॥ ಜಯಾ ವಿಷಯಾಚ್ಯಾ ಠಾಯೀ । ಏಕ ನಿಷ್ಕತಾ ಕಹೀ ನಾಹೀ । ತೇಥ ದುಃಖ ಆಣಿ ಕಾಹೀ । ಸುಖಹೀ ದಿಸೇ ॥ ೧೩ ॥ ದೇಖೇ ಶಬ್ದಾದಿಚೀ ವ್ಯಾಪ್ತಿ । ನಿಂದಾ ಆಣಿ ಸ್ತುತಿ । ತೇಥ ದ್ವೇಷಾದ್ವೇಷ ಉಪಜತೀ । ಶ್ರವಣ ದ್ವಾರೇ ॥ ೧೪ ॥ ಮೃದು ಆಣಿ ಕಠಿಣ । ಹೇ ಸ್ಪರ್ಶಾಚೆ ದೋನೀ ಗುಣ । ಜೇ ವಪೂಚೇನಿ ಸಂಗೇ ಕಾರಣ । ಸಂತೋಷ ಖೇದಾ ॥ ೧೫ ॥ ಭ್ಯಾಸುರ ಆಣಿ ಸುರೇಖ । ಹೇ ರೂಪಾಚೆ ಸ್ವರೂಪ ದೇಖ । ಜೇ ಉಪಜವೀ ಸುಖದುಃಖ । ನೇತ್ರದ್ವಾರೇ ॥ ೧೬ ॥ ಸುಗಂಧು ಆಣಿ ದುರ್ಗಂಧು । ಹಾ ಪರಿಮಳಾ ಚಾ ಭೇದು । ಜೋಘ್ರಾಣಸಂಗೇ ವಿಷಾದು । ತೋಷು ದೇತಾ ॥ ೧೭ ॥ ತೈಸಾಚಿ ದ್ವಿವಿಧರಸು । ಉಪಜವೀ ಪ್ರೀತಿ ತ್ರಾಸು । ಮ್ಹಣೂನಿ ಹಾ ಅಪಭ್ರಂಶು । ವಿಷಯಸಂಗು ॥ ೧೮ ॥ ದೇಖೇ ಇಂದ್ರಿಯಾ ಆಧೀನ ಹೋ ಜಿಜೆ । ತೈ ಶಿತೋಷ್ಣಾ ತೇ ಪಾವಿಜೆ । ಆಣಿ ಸುಖದುಃಖೀ ಆಕಳಿಜೇ । ಆಪಣಪೇ ॥ ೧೯ ॥ ಯಾ ವಿಷಯಾ ವಾಜೂನಿ ಕಾಹೀ । ಆಣೀಕ ಸರ್ವಥಾ ರಮ್ಯ ನಾಹೀ । ಐಸಾ ಸ್ವಭಾವಚಿ ಪಾಹೀ । ಇಂದ್ರಿಯಾಚಾ ॥ ೨೦ ॥ ಹೇ ವಿಷಯ ತರೀ ಕೈಸೇ । ರೋಹಿಣೀಚೆ ಜಳಜೈಸೇ । ಕಾ ಸ್ವಪ್ನೀಚಾ ಆಭಾಸೇ । ಭದ್ರಜಾತಿ ॥ ೨೧ ॥ ದೇಖೇ ಅನಿತ್ಯ ತೇ ಯಾಪರೀ । ಮ್ಹಣೂನಿ ತೂ ಅವ್ಹೇರೀ । ಹಾ ಸರ್ವಥಾ ಸಂಗುನಧರೀ । ಧನುರ್ಧರಾ ॥ ೨೨ ॥

ಅರ್ಥ— ಮನುಷ್ಯನು ಇಂದ್ರಿಯಗಳ ಆಧೀನನಾಗುವುದರಿಂದ ಅವನಿಗೆ ಇದೇನೂ ತಿಳಿಯುವದಿಲ್ಲ. ಇಂದ್ರಿಯಗಳು ಮನುಷ್ಯನ ಅಂತಃಕರಣವನ್ನು ವಿಷಯದ ಕಡೆಗೇ ಜಗ್ಗುತ್ತವೆ. ಆದುದರಿಂದ ಹೀಗೆ ಭ್ರಮೆಯುಂಟಾಗುತ್ತದೆ. ॥೧೧॥ ಇಂದ್ರಿಯಗಳು ವಿಷಯ ಸೇವನೆಮಾಡುವದರಿಂದ ಸುಖದುಃಖಗಳು ಉಂಟಾಗುತ್ತವೆ. ಆ ಕಾರಣದ ದೆಸೆಯಿಂದ ಅಂತಃಕರುಣವು ಸುಖದುಃಖದಲ್ಲಿ ಅಂಟಿಕೊಳ್ಳುತ್ತದೆ. ॥ ೧೨ ॥ ಶಬ್ದಾದಿಕ ವಿಷಯದಲ್ಲಿ ಒಂದೇ ಸ್ಥಿತಿಯು ಎಂದೂ ಇರುವದಿಲ್ಲ. ಅಲ್ಲಿ ಕಾಲಾನುಸಾರವಾಗಿ ಸುಖ ಮತ್ತು ದುಃಖ ಎರಡೂ ಭಾಸವಾಗುತ್ತವೆ. ॥ ೧೩ ॥ ಇನ್ನು ಮೇಲೆ ಶಬ್ದ ಮುಂತಾದ ವಿಷಯಗಳ ವ್ಯಾಪ್ತಿಯನ್ನು ನೋಡಿರಿ. ಒಂದುವೇಳೆ ಕಿವಿಯಿಂದ ನಿಂದೆಯನ್ನು ಕೇಳಿದರೆ ವೈರತ್ವವು ಉದ್ಭವಿಸುತ್ತದೆ. ಸ್ತುತಿಯನ್ನು ಕೇಳಿದ ಕೂಡಲೇ ಸಮಾಧಾನವಾಗುತ್ತದೆ. ॥ ೧೪ ॥ ಸ್ಪರ್ಶ ವಿಷಯದಲ್ಲಿ ಮೃದು ಮತ್ತು ಕಠಿಣ ಎಂಬ ಎರಡು ಭೇದಗಳಿರುತ್ತವೆ. ಆದರೆ ಅವು ತ್ವಚೆಯ ಸ್ಥಳದಲ್ಲಿ ಭಾಸವಾದ ಕೂಡಲೆ ಸುಖ ದುಃಖಗಳು ಉಂಟಾಗುತ್ತವೆ ॥ ೧೫ ॥ ಅದರಂತೆ ಕುರೂಪ ಮತ್ತು ಸುರೂಪವೂ ಎಂಬ ಈ ಎರಡು ಭೇದಗಳು ರೂಪದ ವಿಷಯದಲ್ಲಿ ಇರುತ್ತವೆ. ಆವರೆ ಆ ರೂಪಗಳನ್ನು ಕಣ್ಣಿನಿಂದ ನೋಡಿದ ಕೂಡಲೆ ಸುಖದುಃಖಗಳು ಉತ್ಪನ್ನವಾಗುತ್ತವೆ. ॥ ೧೬ ॥ ಅದೇ ಪ್ರಕಾರ ಗಂಧ ವಿಷಯದಲ್ಲಿ ಸುಗಂಧ ದುರ್ಗಂಧಗಳೆಂದು ಎರಡು ಭೇದಗಳಿರುತ್ತವೆ. ಇವುಗಳು ಘ್ರಾಣೇಂದ್ರಿಯದ ದ್ವಾರದಿಂದ ಸಂತೋಷ ಮತ್ತು ಅಸಂತೋಷಗಳನ್ನು ಉಂಟುಮಾಡುತ್ತವೆ. ॥ ೧೭ ॥ ಹಾಗೆಯೇ ರಸದಲ್ಲಿಯೂ ಎರಡು ಭೇದಗಳು ಒಂದರಿಂದ ಪ್ರೀತಿಯೂ ಮತ್ತೊಂದರಿಂದ ಅಪ್ರೀತಿಯೂ ಉಂಟಾಗುತ್ತದೆ. ಆದುದರಿಂದ ಈ ವಿಷಯಾಸಕ್ತಿಯು ಮುಖ್ಯವಾಗಿ ಮನುಷ್ಯನನ್ನು ಆತ್ಮ ಸ್ವರೂಪದಿಂದ ಭ್ರಷ್ಟನನ್ನಾಗಿ ಮಾಡಿ ಬಿಡುವಂತಹದು ॥ ೧೮ ॥ ನೋಡಿರಿ. ಇಂದ್ರಿಯಾಧೀನರಾದವರೆಲ್ಲರೂ ಶೀತೋಷ್ಣದ ಬಾಧೆಗೊಳಪಟ್ಟು ಅವರು ತಮ್ಮಿಂದ ತಾವೇ (ಆತ್ಮ ಘಾತಕಿಗಳಾಗಿ) ಸುಖದುಃಖದ ಆಧೀನರಾಗುತ್ತಾರೆ. ॥ ೧೯ ॥ ಇಂದ್ರಿಯಗಳ ದುಶ್ಚೇಷ್ಟಿತವು ಭಯಂಕರ ಚಮತ್ಕಾರವಾದದ್ದಿರುತ್ತದೆ. ಅವರಿಗೆ ಈ ವಿಷಯದ

ಹೊರ್ತು ಈ ಜಗತ್ತಿನಲ್ಲಿ ರಮ್ಯವಾದ ಎರಡನೆಯ ಶ್ರೇಷ್ಠವಾದ ವಸ್ತುವು ದೊರಕಿದರೂ ಅದು ತುಚ್ಛವಾಗಿ ತೋರುತ್ತದೆ ॥ ೧೨೦ ॥ ಈ ವಿಷಯದ ಸ್ವರೂಪವನ್ನು ವಿಚಾರಿಸಿ ನೋಡಿದರೆ ಮೃಗಜಲದಂತೆ ಇಲ್ಲವೆ ಸ್ವಪ್ನದಲ್ಲಿಯ ಐಶ್ವರ್ಯದಂತೆ ಅದು ಭಾಸವಾಗುತ್ತದೆ. ॥ ೨೧ ॥ ಈ ವಿಷಯವು ಅಶಾಶ್ವತವಾಗಿರುತ್ತದೆಂದು ನಿಶ್ಚಯವಾಗಿ ತಿಳಿದುಕೊಳ್ಳು. ಆದುದರಿಂದ ಅರ್ಜುನನೇ ! ಆ ವಿಷಯಗಳ ಸಂಗತಿಯನ್ನು ಸ್ವಲ್ಪವಾದರೂ ಮಾಡದೆ ನೀನು ಅವುಗಳನ್ನು ತ್ಯಾಗಮಾಡು ॥ ೨೨ ॥

ಯಂಹಿನ ವ್ಯಥಯಂತ್ಯೇತೇ ಪುರುಷಂ ಪುರುಷರ್ಷಭ ।
ಸಮುದುಃಖಸುಖಂ ಧೀರಂ ಸೋಽಮೃತತ್ವಾಯ ಕಲ್ಪತೇ ॥ ೧೫ ॥

ಹೇ ವಿಷಯ ಜಯಾತೆ ನಾಕಳಿತೀ । ತಯಾ ಸುಖದುಃಖೆ ದೋನೀ ನ ಪವತೀ । ಆಣಿ ಗರ್ಭ ವಾಸುಸಂಗತೀ । ನಾಹೀ ತಯಾ ॥ ೨೩ ॥ ತೋ ನಿತ್ಯರೂಪಾ ಪಾರ್ಥಾ । ಓಳಖಾವಾ ಸರ್ವಥಾ । ಜೋ ಯಾ ಇಂದ್ರಯಾರ್ಥಾ । ನಾಗವೇಚಿ ॥ ೨೪ ॥

ಅರ್ಥ— ಯಾವ ಪುರುಷನು ಈ ವಿಷಯಗಳ ಸ್ವಾಧೀನವಾಗುವದಿಲ್ಲವೋ ಅವನು ಸುಖದುಃಖಗಳಿಂದ ಅಲಿಪ್ತನಾಗುವನು. ಮತ್ತು ಅವನಿಗೆ ಗರ್ಭವಾಸದ ಸಂಗತಿಯು ದೊರಕುವದಿಲ್ಲ. ॥ ೨೩ ॥ ಅರ್ಜುನನೇ, ಯಾವನು ಈ ವಿಷಯದ ಬಲೆಯಲ್ಲಿ ಸಿಗುವದಿಲ್ಲವೋ ಅವನೇ ನಾಶರಹಿತನೆಂದು ತಿಳಿ. ॥ ೨೪ ॥

ನಾಸತೋ ವಿದ್ಯತೇ ಭಾವೋ ನಾಭಾವೋ ವಿದ್ಯತೇ ಸತಃ ।
ಉಭಯೋರಪಿ ದೃಷ್ಟೋಽನ್ತಸ್ತ್ವನಯೋಸ್ತತ್ತ್ವದರ್ಶಿಭಿಃ ॥ ೧೬ ॥

ಆತಾ ಅರ್ಜುನಾ ಕಾಹೀ ಏಕ । ಸಾಂಗೇ ನ ಮೀ ಆಇಕ । ಜೇ ವಿಚಾರಪರ ಲೋಕ ವೋಳಖಿತೀ ॥ ೨೫ ॥ ಯಾ ಉಪಾಧಿ ಮಾಜೀ ಗುಪ್ತ । ಚೈತನ್ಯ ಅಸೆ ಸರ್ವಗತ । ತೇ ತತ್ವಜ್ಞ ಸಂತ । ಸ್ವೀಕಾರಿತೀ ॥ ೨೬ ॥ ಸಲಿಲೀ ಪಯ ಜೈಸೇ । ಏಕ ಹೋವುನಿ ಮೀನಲೇ ಅಸೇ । ಪರೀ ನಿವಡೂನಿ ರಾಜಹಂಸೇ । ವೇಗಳೇ ಕೀಜೆ ॥ ೨೭ ॥ ಕೀ ಅಗ್ನಿಮುಖೇ ಕಿಡಾಳ । ತೊಡೋ ನಿಯಾ ಚೋಖಾಳ । ನಿವಡಿತೀ ಕೇವಳ । ಬುದ್ಧಿಮಂತ ॥ ೨೮ ॥ ನಾ ತರಿ ಜಾಣೆ ವೇಚ್ಯಾ ಆಯಣೀ । ಕರಿತಾ ದಧಿ ಕಡಸಣೀ । ಮಗ ನವನೀತ ನಿರ್ವಾಣೀ । ದಿಸೇ ಜೈಸೇ ॥ ೨೯ ॥ ಕೀ ಭೂಸ ಬೀಜ ಏಕವಟ । ಉಪಣಿತಾ ರಾಹೇ ಘನವಟ । ತೇಥ ಉಡೇ ತೇ ಫಲಕಟ । ಜಾಣೋ ಆಲೇ ॥ ೧೩೦ ॥ ತೈಸೇ ವಿಚಾರಿತಾ ನಿರಸಲೇ । ತೇ ಪ್ರಪಂಚು ಸಹಜೇ ಸಾಂಡವಲೇ । ಮಗ ತತ್ವತಾ ತತ್ವ ಉರಲೇ । ಜ್ಞಾನಿಯಾಸೀ ॥ ೩೧ ॥ ವ್ಯಾಪೋನಿ ಅನಿತ್ಯಾಚ್ಯಾ ಠಾಯೀ । ತಯಾ ಆಸ್ಕಿತ್ಯ ಬುದ್ಧಿ ನಾಹೀ । ನಿಷ್ಕರ್ಷ ದೋಹೀಹೀ । ದೇಖಿಲಾ ಅಸೇ ॥ ೩೨ ॥

ಅರ್ಥ— ಅರ್ಜುನನೇ, ಇನ್ನೂ ಒಂದು ಮಾತು ಹೇಳುತ್ತೇನೆ ವಿಚಾರವಂತರಿಗೆ ಮಾತ್ರ ಅದು ತಿಳಿಯುವಂತಹದು. ॥ ೨೫ ॥ ಈ ಜಗತ್ತಿನಲ್ಲಿ ಎಲ್ಲ ಕಡೆಗೂ ವ್ಯಾಪಕವಾದ ಒಂದು ಗುಪ್ತ ಚೈತನ್ಯವು ಇರುತ್ತದೆ. ಅದನ್ನು ತತ್ವಜ್ಞರು (ಬ್ರಹ್ಮಸ್ವರೂಪವನ್ನು ತಿಳಿದುಕೊಂಡ ಯಥಾರ್ಥ ಜ್ಞಾನಿಗಳು) ಯಾವಾಗಲೂ ಸ್ವೀಕಾರಮಾಡುತ್ತಾರೆ. ॥ ೨೬ ॥ ಹಾಲು ಮತ್ತು ನೀರು ಒತ್ತಟ್ಟಿಗೆ ಕೂಡಿಸಿದರೂ ರಾಜಹಂಸವಕ್ಷಿಯು ಅದನ್ನು ಬೇರೆ ಬೇರೆಯಾಗಿ ಹೇಗೆ ವಿಂಗಡಿಸುತ್ತದೋ, ॥ ೨೭ ॥ ಅಥವಾ ಬುದ್ಧಿವಂತರು ಹೀನ ಬಂಗಾರವನ್ನು ಅಗ್ನಿಯಲ್ಲಿ ಪುಟಹಾಕಿ ಕರಗಿಸಿ ಹೇಗೆ ಶುದ್ಧವಾದ ಚಿನ್ನವನ್ನು ತಯಾರಿಸುವರೋ, ॥ ೨೮ ॥ ಇಲ್ಲವೇ ಚಾತುರ್ಯದಿಂದ ಮೊಸರು ಕಡೆದರೆ ಬೆಣ್ಣೆಯನ್ನು ಹೇಗೆ ಸಿದ್ಧಪಡಿಸಿಕೊಳ್ಳುವರೋ ॥ ೨೯ ॥ ಅಥವಾ ಹೊಟ್ಟು ಮತ್ತು ಧಾನ್ಯ ಒಂದೇ ಕಡೆಗೆ ಕೂಡಿರುವದನ್ನು

ಗಾಳಿಯು ತೂರಿ ಅಸಾರವಾದ ಹೊಟ್ಟನ್ನು ಹಾರಿಸಿ ಸಾರವಾದ ಧಾನ್ಯವನ್ನು ಹೇಗೆ ತಳದಲ್ಲಿ ಉಳಿಸುವದೋ, ॥೧೩೮॥ ಅದೇ ಪ್ರಕಾರ ವಿಚಾರಾಂತ್ಯದಲ್ಲಿ ಜ್ಞಾನಿಯಾದ ಮನುಷ್ಯನು ಪ್ರಪಂಚದ ಸಾರಾಸಾರಗಳನ್ನು ವಿಚಾರಿಸಿ ನೋಡಲು ಅವನಿಗೆ ಪ್ರಪಂಚವು ಸಹಜವಾಗಿಯೇ ಭ್ರಮೆಯೆಂದು ಗೊತ್ತಾಗುತ್ತದೆ. ಮತ್ತು ನಿರ್ಮಲವಾದ ತತ್ವವೊಂದೇ ಅರ್ಥಾತ್ ಬ್ರಹ್ಮವೇ ಉಳಿಯುತ್ತದೆಂಬ ಮಾತು ಅನುಭವಸಿದ್ಧವಾಗುತ್ತದೆ. ॥ ೩೧ ॥ ಆದುದರಿಂದಲೇ ಅಸಾರವಾದ ಸಂಸಾರ ವಿಷಯದಲ್ಲಿ ಈತನಿಗೆ (ಜ್ಞಾನಿಗೆ) ಆಸ್ಥಿಕ ಬುದ್ಧಿಯು ಇರುವದಿಲ್ಲ. ಕಾರಣ, ಸತ್ ಮತ್ತು ಅಸತ್ ಈ ಎರಡೂ ವಿಷಯಗಳ ಪರಿಣಾಮವು ಅವನಿಗೆ ಗೊತ್ತಾಗಿರುತ್ತದೆ. ॥ ೩೨ ॥

ಅವಿನಾಶಿ ತು ತದ್ವಿದ್ಧಿಯೇನಸರ್ವಮಿದಂ ತತಂ ।
ವಿನಾಶಮವ್ಯಯಸ್ಯಾಸ್ಯ ನ ಕಶ್ಚಿತ್ಕರ್ತುಮರ್ಹತಿ ॥ ೧೭ ॥

ದೇಖೋ ಸಾರಾಸಾರ ವಿಚಾರಿತಾ । ಭ್ರಾಂತಿ ತೇ ಪಾಹೀ ಅಸಾರತಾ । ತರೀ ಸಾರ ತೇ ಸ್ವಭಾವತಾ । ನಿತ್ಯ ಜಾಣೇ ।। ೩೩ ॥ ಹಾಲೋಕತ್ರಯಾ ಕಾರೂ । ತೋ ಜಯಾಂತಾ ವಿಸ್ತಾರೂ । ತೇಥ ನಾಮವರ್ಣ ಆಕಾರೂ । ಚಿನ್ಹ ನಾಹೀ ॥ ೩೪ ॥ ಜೋ ಸರ್ವದಾ ಸರ್ವಗತು । ಜನ್ಮ ಕ್ಷಯಾ ತೀತು । ತಯಾ ಕೇಲಿಯಾಹಿ ಘಾತು । ಕದಾ ನೋಹೇ ॥ ೩೫ ॥

ಅರ್ಥ— ಸತ್ಯ-ಅಸತ್ಯಗಳ ವಿಷಯದಲ್ಲಿ ಒಂದು ವೇಳೆ ವಿಚಾರಿಸಿ ನೋಡಿದರೆ, ಸಹಜವೇ ಭ್ರಾಂತಿಯು ನಿಸ್ಸಾರವಾದದ್ದಿರುತ್ತದೆ. ಮತ್ತು ಸಾರವಾದರೊ ಸ್ವಭಾವತಃ ಅವಿನಾಶಿಯಾದದ್ದೆಂಬುದನ್ನು ಲಕ್ಷದಲ್ಲಿಡು. ॥ ೩೩ ॥ ಯಾರಿಂದ ಈ ಮೂರು ಲೋಕಗಳು ಉತ್ಪನ್ನವಾಗಿರುವವೋ ಅವನಿಗೆ ನಾಮ-ರೂಪ-ರಂಗ ಮೊದಲಾದ ಯಾವ ಚಿಹ್ನಗಳೂ ಇರುವದಿಲ್ಲ. ॥ ೩೪ ॥ ಅವನು ಯಾವಾಗಲೂ ಸರ್ವವ್ಯಾಪಕನಾಗಿದ್ದು ಜನನ ಮರಣ ವಿರಹಿತನಾಗಿದ್ದಾನೆ. ಅವನ ಘಾತನನ್ನು (ನಾಶವನ್ನು) ಮಾಡುವದು ಯಾರಿಗೂ ಸಾಧ್ಯವಾಗಲರಿಯದು. ॥ ೩೫ ॥

ಅಂತವಂತ ಇಮೇ ದೇಹಾ ನಿತ್ಯಸ್ಯೋಕ್ತಾಃ ಶರೀರಿಣಃ ।
ಅನಾಶಿನೋಽ ಪ್ರಮೇಯಸ್ಯ ತಸ್ಮಾದ್ಯುಧ್ಯಸ್ವ ಭಾರತ ॥ ೧೮ ॥

ಆಣಿ ಶರೀರ ಜಾತ ಆಘವೇ । ಹೇ ನಾಶವಂತ ಸ್ವಭಾವೇ । ಮ್ಹಣೋನಿ ತುವಾ ಝುಂಜಾವೇ । ಪಂಡುಕುಮರಾ ॥ ೩೬ ॥

ಅರ್ಥ— ಅರ್ಜುನಾ, ಶರೀರಧಾರಿಗಳಾದ (ಅರ್ಥಾತ್ ಆಕಾರಕ್ಕೆ ಬಂದ ಸರ್ವ) ಪ್ರಾಣಿ ಮಾತ್ರಗಳು ಸ್ವಭಾವಿಕವಾಗಿಯೇ ನಾಶವಂತವಾದವುಗಳು. ಆದಕಾರಣವೇ ನೀನು ಯುದ್ಧ ಮಾಡು. ॥ ೩೬ ॥

ಯ ಏನಂ ವೇತ್ತಿ ಹಂತಾರಂ ಯಶ್ಚೈನಂ ಮನ್ಯತೇ ಹತಂ ।
ಉಭೌ ತೌ ನ ವಿಜಾ ನೀತೋ ನಾಯಂ ಹಂತಿ ನ ಹನ್ಯತೇ ॥ ೧೯ ॥

ತೂ ಧರೂನಿ ದೇಹಾಭಿ ಮಾನಾತೇ । ದಿಠೀ ನೂನಿ ಶರೀರಾತೇ । ಮೀ ಮಾರಿತಾ ಹೇ ಮುರತೇ । ಮ್ಹಣತ ಆಹಾಸೀ ॥ ೩೭ ॥ ತರೀ ಅರ್ಜುನಾತೂ ಹೇ ನೇಣಸೀ । ಜರೀ ತತ್ವತಾ ವಿಚಾರಿಸೀ । ತರೀ ವಧಿತಾ ತೂ ನವ್ಹಸೀ । ತೇ ವಧ್ಯ ನವ್ಹತೀ ॥ ೩೮ ॥

ಅರ್ಥ— ನೀನು ದೇಹದ ಅಭಿಮಾನವನ್ನು ಹಿಡಿದು ಮತ್ತು ಶರೀರದ ಮೇಲೆ ದೃಷ್ಟಿಯನ್ನಿಟ್ಟು ನಾನು ಕೊಲ್ಲುವವನು, ಈ ಕೌರವರು ಸಾಯುವವರು ಎಂದು ಭಾವಿಸಿರುವಿ. ॥ ೩೭ ॥ ಆದರೆ ಅರ್ಜುನಾ, ಅದರೊಳಗಿನ ತತ್ವಾರ್ಥವು ನಿನಗೆ ತಿಳಿದಿಲ್ಲ. ನಿಜವಾಗಿ ವಿಚಾರ ಮಾಡಿ ನೋಡಿದರೆ ನೀನು ಕೊಲ್ಲುವವನೂ ಅಲ್ಲ, ಅವರು ಸಾಯುವವರೂ ಅಲ್ಲ. ॥ ೩೮ ॥

ನ ಜಾಯತೇ ಮ್ರಿಯತೇ ವಾ ಕದಾಚಿ ।
ನ್ಸಾಯಂ ಭೂತ್ವಾ ಭವಿತಾ ವಾ ನ ಭೂಯಃ ॥
ಅಜೋ ನಿತ್ಯಃ ಶಾಶ್ವತೋಽಯಂ ಪುರಾಣೋ ।
ನ ಹನ್ಯತೇ ಹನ್ಯಮಾನೇಶರೀರೇ ॥ ೨೦ ॥

ವೇದಾವಿನಾಶಿನಂ ನಿತ್ಯಂ ಯ ಏನಮಜಮವ್ಯಯಂ ।
ಕಥಂ ಸ ಪುರುಷಃ ಪಾರ್ಥ ಕಂಘಾತಯತಿ ಹಂತಿ ಕಂ ॥ ೨೧ ॥

[ವೇದಾವಿನಾಶಿನಮಿತಿ] ಜೈಸೇ ಸ್ವಪ್ನ ಮಾಜೀ ದೇಖಿಜೇ । ತೇ ಸ್ವಪ್ನಿಚಿ ಸಾಚ ಅಪಜೇ । ಮಗ ಚೇಊನಿಯಾ ಪಾಹಿಜೇ । ತವ ಕಾಹೀ ನಾಹೀ ॥ ೩೯ ॥ ತೈಸೀ ಹೇ ಜಾಣಮಾಯಾ । ತೂ ಭ್ರಮತ ಆಹಾಸಿ ವಾಯಾ । ಶಸ್ತ್ರೇ ಹಾಣಿತಲಿಯಾ ಛಾಯಾ । ಜೈಸೀ ಆಂಗೀ ನರೂಪೇ ॥೧೪೦॥ ಕಾ ಪೂರ್ಣ ಕುಂಭ ಉಲಂಡಲಾ । ತೇಧ ಬಿಂಬಾಕಾರ ದಿಸೇ ಭ್ರಂಶಲಾ । ಪರೀ ಛಾನು ನಾಹೀ ನಾಸಲಾ । ತಯಾಸವೇ ॥ ೪೧ ॥ ನಾತರೀ ಮರೀ ಆಕಾಶ ಜೈಸೇ । ಮತಾಕೃತಿ ಅವತರಲೇ ಅಸೇ । ತೋ ಭಂಗ ಲಿಯಾ ಆಪೈಸೇ । ಸ್ವರೂಪಚೀ ॥ ೪೨ ॥ ತೈಸೇ ಶರೀರಾಚ್ಯಾ ಲೋಪೀ । ಸರ್ವಥಾ ನಾಶನಾಹೀ ಸ್ವರೂಪೀ । ವ್ಹಣೂನ ತೂ ಹೆ ನಾರೋಪೀ । ಭ್ರಾಂತಿ ಬಾಪಾ ॥ ೪೩ ॥

ಅರ್ಥ— ಹೇಗೆ ಸ್ವಪ್ನದೊಳಗಿನ ವಿಷಯಗಳು ಸ್ವಪ್ನವಲ್ಲಿಯೇ ನಿಜವೆಂದು ತೋರಿ, ಜಾಗ್ರತವಾದಮೇಲೆ ಸುಳ್ಳಾಗುವವೋ ॥ ೩೯ ॥ ಅದರಂತೆಯೇ ಈ ಸರ್ವ ಪ್ರಪಂಚವು ಮಾಯಾಮಯವಾದದ್ದು ಇದ್ದು ಅದರ ವಿಷಯದಲ್ಲಿ ನೀನು ವ್ಯರ್ಥವಾಗಿ ಭ್ರಮೆಯಲ್ಲಿ ಬಿದ್ದಿರುವಿ. ಮನುಷ್ಯನು ನೆರಳಿನಮೇಲೆ ಶಸ್ತ್ರಪ್ರಯೋಗ ಮಾಡಿದರೆ ಅದರಿಂದ ಮನುಷ್ಯನಿಗೇನೂ ಗಾಯವಾಗಲಾರದು, ॥ ೧೪೦ ॥ ನೀರಿನಿಂದ ತುಂಬಿದ ಕೊಡವು ಬೊಕ್ಕಬೊರಲು ಬಿದ್ದರೆ ಅದರೊಳಗಿನ ಸೂರ್ಯಬಿಂಬವು ಕಾಣದಂತಾದರೂ ನಿಜವಾದ ಸೂರ್ಯನು ನಾಶ ಹೊಂದಲಾರನು. ॥ ೪೧ ॥ ಅಥವಾ ಮನೆಯಲ್ಲಿಯ ಆಕಾಶವು ಮನೆಯ ರೂಪವನ್ನು ಧರಿಸಿದ್ದರೂ ಮನೆಯು ನಾಶ ಹೊಂದಲು, ಅಲ್ಲಿಯ ಆಕಾಶವು ನಾಶಹೊಂದದೇ ತನ್ನ ವಿಸ್ತೃತವಾದ ಮೂಲರೂಪದಲ್ಲಿ ಬೆರೆತುಕೊಳ್ಳುವುದು. ॥ ೪೨ ॥ ಅದೇ ಪ್ರಕಾರ (ಹಾಗೆಯೇ) ಶರೀರವು ನಾಶಹೊಂದಿದರೂ ಅದರೊಳಗಿರುವ ಆತ್ಮದ ನಾಶವು ಮಾತ್ರ ಎಂದಿಗೂ ಆಗಲಾರದು. ಆದ್ದರಿಂದ ಅಯ್ಯಾ ಅರ್ಜುನನೇ, ನೀನು ಇಲ್ಲದ ಸಲ್ಲದ ಭ್ರಾಂತಿಯಿಂದ ಕೂಡಿದವನಾಗಿ ಕುಳಿತುಕೊಳ್ಳಬೇಡ. ॥ ೪೩ ॥

ವಾಸಾಂಸಿ ಜೀರ್ಣಾನಿ ಯಥಾ ವಿಹಾಯ ।
ನವಾನಿ ಗೃಹ್ಣಾತಿ ನರೋಽಪರಾಣಿ ॥
ತಥಾ ಶರೀರಾಣಿ ವಿಹಾಯ ಜೀರ್ಣಾ ।
ನ್ಯನ್ಯಾನಿ ಸಂಯಾತಿ ನವಾನಿ ದೇಹೀ ॥ ೨೨ ॥

[ವಾಸಾಂಸೀತಿ-] ಜೈಸೇ ಜೀರ್ಣ ವಸ್ತ್ರ ಸಾಂಡಿಜೇ । ಮಗ ನೂತನ ವೇಢಿಜೇ । ತೈಸೇ ದೇಹಾಂತರಾತೇ ಸ್ವಿಕಾರಿಜೇ । ಚೈತನ್ಯ ನಾಥೇ ॥ ೪೪ ॥

ಅರ್ಥ— ಮನುಷ್ಯನು ಜೀರ್ಣವಾದ ವಸ್ತ್ರಗಳನ್ನು ಬಿಟ್ಟು ಹೊಸ ವಸ್ತ್ರಗಳನ್ನು ಉಡುವಂತೆ ಆತ್ಮನು ಜೀರ್ಣ ದೇಹವನ್ನು ಬಿಟ್ಟು ಮತ್ತೊಂದು ಹೊಸ ದೇಹವನ್ನು ಪ್ರವೇಶಿಸುವನು. ॥ ೪೪ ॥

ನೈನಂ ಛಿಂದಂತಿ ಶಸ್ತ್ರಾಣಿ ನೈನಂ ದಹತಿ ಪಾವಕಃ ।
ನ ಚೈನಂ ಕ್ಲೇದಯಂತ್ಯಾಪೋ ನ ಶೋಷಯತಿ ಮಾರುತಃ ॥ ೨೩ ॥

ಅಚ್ಛೇದ್ಯೋಽಯಮದಾಹ್ಯೋಽಯಮಕ್ಲೇದ್ಯೋಽಶೋಷ್ಯ ಏವಚ ।
ನಿತ್ಯಃ ಸರ್ವಗತಃ ಸ್ಥಾಣುರಚಲೋಽಯಂ ಸನಾತನಃ ॥ ೨೪ ॥

[ನೈನಂ ಛಿಂದ ತೀತಿ] ಹೇ ಅನಾದಿ ನಿತ್ಯ ಸಿದ್ಧ । ನಿರೂಪಾಧಿ ವಿಶುದ್ಧ । ಮ್ಹಣೋನಿ ಶಸ್ತ್ರಾದಿಕೀ ಛೇದ । ನ ಘಡೇ ಯಯಾ ॥ ೪೫ ॥ ಹಾ ಪ್ರಳಯೋದಕೇ ನಾಪ್ಲವೇ । ಅಗ್ನಿ ದಾಹೋ ನ ಸಂಭವೇ । ಏಥ ಮಹಾಶೋಷ ನ ಪ್ರಭವೆ । ಮಾರುತಾಚಾ ॥ ೪೬ ॥ ಅರ್ಜುನಾ ಹಾ ನಿತ್ಯ । ಅಚಳ ಹಾ ಶಾಶ್ವತ । ಸರ್ವತ್ರ ಸದೋದಿತ । ಪರಿಪೂರ್ಣ ಹಾ ॥ ೪೭ ॥

ಅರ್ಥ ಆತ್ಮನು ಜನನ ಮರಣ ರಹಿತನೂ, ನಿತ್ಯಸಿದ್ಧನೂ, ಮಾಯಾ-ವರ್ಣಾದಿ ಉಪಾಧಿರಹಿತನೂ ಆಗಿರುವದರಿಂದ ಶಸ್ತ್ರಗಳು ಇವನನ್ನು ಕಡಿಯಲಾರವು. ॥ ೪೫ ॥ ಆತ್ಮನು ಪ್ರಳಯಕಾಲದ ನೀರಿನಲ್ಲಿ ಸಹ ಮುಳುಗಲಾರನು. ಬೆಂಕಿಯು ಅವನನ್ನು ಸುಡಲಾರದು. ಅದರಂತೆಯೇ ಗಾಳಿಯು ಅವನನ್ನು ಒಣಗಿಸಲಾರದು. ॥ ೪೬ ॥ ಆದುದರಿಂದ ಅರ್ಜುನಾ, ಇನನು (ಆತ್ಮನು) ಕಾಲತ್ರಯದಲ್ಲಿಯೂ ಅಬಾಧ್ಯನು; ಮತ್ತು ಶಾಶ್ವತನು; (ಸ್ಥಿರನು) ವ್ಯಾಪಕನು. ಮತ್ತು ಸರ್ವ ಸ್ಥಳದಲ್ಲಿಯೂ ತುಂಬಿಕೊಂಡಿರುವವನು. ॥ ೪೭ ॥

ಅವ್ಯಕ್ತೋಽಯಮಚಿಂತ್ಯೋಽಯಮವಿಕಾರ್ಯೋಽಯಂ ಮುಚ್ಯತೇ ।
ತಸ್ಮಾದೇವಂ ವಿದಿತ್ವೈನಂ ನಾನುಶೋಚಿತುಮರ್ಹಸಿ ॥ ೨೫ ॥

[ಅವಕ್ತೋಯ ಮಿತಿ-] ಹಾ ತರ್ಕಾಚಿಯೆ ದಿಟೀ । ಗೋಚರ ನೋಹೇ ಕಿರೀಟೀ । ಧ್ಯಾನ ಯಾಚಿಯೇ ಭೇಟೀ । ಉತ್ಯಾಂಶಾ ವಾಹೇ ॥ ೪೮ ॥ ಹಾ ಸದಾ ದುರ್ಲಭು ಮನಾ । ಆಪು ನೋಹೇ ಸಾಧನಾ । ನಿಃಸೀಮು ಹಾ ಅರ್ಜುನಾ । ಪುರುಷೋತ್ತಮು ॥ ೪೯ ॥ ಹಾ ಗುಣತ್ರಯಾ ರಹಿತು । ಅನಾದಿ ಅವಿಕೃತು । ವ್ಯಕ್ತೀಸಿ ಅತೀತು । ಸರ್ವರೂಪ ॥ ೧೫೦ ॥ ಅರ್ಜುನಾ ಐಸಾ ಹಾ ಜಾಣಾವಾ । ಸಕಳಾತ್ಮಕು ದೇಖಾವಾ । ಮಗ ಸಹಜೇ ಶೋಕು ಆಥವಾ । ಹರೇಲ ತುಝಾ ॥ ೧೫೧ ॥

ಅರ್ಥ— ಪಾರ್ಥಾ, ತರ್ಕಶಾಸ್ತ್ರ ದೃಷ್ಟಿಯಿಂದ ಆತ್ಮನು ಕಾಣದವನು. ಯೋಗಿಗಳ ಧ್ಯಾನವು ಉತ್ಕಟೇಚ್ಛೆಯಿಂದ ಇವನ ಬೆಟ್ಟಯಾಗಲು ಇಚ್ಛಿಸುವದು. ॥ ೪೮ ॥ ಅರ್ಜುನಾ, ಇವನು ಮನಸಿಗೆ ಯಾವಾಗಲೂ ನಿಲುಕದವನೂ, ಸಾಧನಗಳಿಗೆ ದೊರಕದೇ ಇದ್ದವನೂ, ಅನಂತನೂ, ಜೀವ ಮಾತ್ರಗಳಲ್ಲಿ ಶ್ರೇಷ್ಠನೂ ಇದ್ದಾನೆ. ॥ ೪೯ ॥ ಇವನು ಗುಣತ್ರಯದಿಂದ ಅಲಿಪ್ತನು. ಅನಾದಿಯು ವಿಕಾರ ರಹಿತನು. ಆಕಾರದ ಆಚೆಯ ಕಡೆಯವನು. ಮತ್ತು ವಸ್ತು ಮಾತ್ರ ಸ್ಥಳ ಸ್ವರೂಪಗಳಲ್ಲಿ ಪೂರ್ಣವಾಗಿ ತುಂಬಿಕೊಂಡಿರುವನು. ॥ ೫೦ ॥ ಆದುದರಿಂದ ಅರ್ಜುನಾ, ಆತ್ಮನು ಸರ್ವವ್ಯಾಪಿಯೂ, ಭೂತಾಂತರಾತ್ಮನೂ ಎಂಬುದನ್ನು ಅರಿತೆಯಾದರೆ ಸಹಜವಾಗಿಯೇ ನಿನ್ನ ದುಃಖವು ಇಲ್ಲದಂತಾಗುವದು. ॥ ೫೧ ॥

ಅಥ ಚೈನಂ ನಿತ್ಯಜಾತಂ ನಿತ್ಯಂ ವಾ ಮನ್ಯಸೇ ಮೃತಂ ।
ತಥಾಪಿ ತ್ವಂ ಮಹಾಬಾಹೋ ನೈನಂ ಶೋಚಿತುಮರ್ಹಸಿ ॥ ೨೬ ॥

[ಅಥ ಚೈನಮಿತಿ] ಅಥವಾ ಐಸಾ ನೇಣಸೀ । ತೂ ಅಂತವಂತಚಿ ಮಾನಿಸೀ । ತರ್ಹೀ ಶೋಚೂನ ಪವಸೀ । ಪಂಡುಕುಮರಾ ॥ ೫೨ ॥ ಜೋ ಆದಿ ಸ್ಥಿತಿ ಅಂತ । ಹಾ ನಿರಂತರ ಅಸೇ ನಿತ್ಯ ।

ಜೈಸಾ ಪ್ರವಾಹ ಅನುಸ್ಯೂತ । ಗಂಗಾಜಳಾಚಾ ॥ ೫೩ ॥ ತೇ ಆದಿನಾಹೀ ಖಂಡಲೇ । ಸಮುದ್ರೀ ತರೀ ಅಸೇ ಮಿನಲೇ । ಆಣಿ ಜಾತಾಂಚಿ ಮಧ್ಯೆ ಉರಲೇ । ದಿಸೇ ಜೈಸೇ ॥ ೫೪ ॥ ಇಯೇ ತೀನ್ಹೀ ತಯಾಪರೀ । ಸರಸೀಂಚ ಸದಾ ಅವಧಾರೀ । ಭೂತಾಸೀ ಕವಣೀ ಅವಸರೀ । ಠಾಕತೀ ನಾ ॥ ೫೫ ॥ ಮ್ಹಣೋನಿ ಹೇ ಆಘವೇ । ಏಥ ತುಜ ನಲಗೇ ಶೋಚಾವೇ । ಜೇ ಸ್ಮಿತಿಚೀ ಹೇ ಸ್ವಭಾವೇ । ಅನಾದಿ ಐಸೀ ॥ ೫೬ ॥ ನಾತರೀ ಹೇ ಅರ್ಜುನಾ । ನಯೇಚಿ ತುಝಿಯಾ ಮನಾ । ಜೇ ದೆಖೋನಿ ಲೋಕ ಅಧೀನಾ । ಜನ್ಮಕ್ಷಯಾ ॥ ೫೭ ॥ ತರೀ ಏಥೇ ಕಾಹೀ । ತುಜ ಶೋಕಾಸೀ ಕಾರಣ ನಾಹೀ । ಹೇ ಜನ್ಮ ಮೃತ್ಯೂಪಾಹೀ । ಅಪರಿಹರ ॥ ೫೮ ॥

ಅರ್ಥ— ಅಥವಾ ಹೀಗೆ ಆತ್ಮನನ್ನರಿತುಕೊಳ್ಳದೇ ಇವನು ನಾಶವಂತನಾಗಿರುವನೆಂದು ತಿಳಿದರೂ ಸಹ ನೀನು ದುಃಖಪಡುವ ಕಾರಣವಿಲ್ಲ. ॥ ೫೨ ॥ ಗಂಗಾನದಿಯ ನೀರಿನ ಓಘವು ಅಖಂಡವಾಗಿರುವಂತೆ ಉತ್ಪತ್ತಿ-ಸ್ಥಿತಿ-ಲಯಗಳಾದರೂ ಒಂದೇ ಸವನೆ ಅಬಾಧಿತವಾಗಿ ನಡೆದಿರುತ್ತವೆ. ॥ ೫೩ ॥ ಆ ಗಂಗಾನದಿಯ ನೀರು ಉಗಮಸ್ಥಾನದಲ್ಲಿ ಉತ್ಪನ್ನವಾಗುತ್ತದೆ; ಮತ್ತು ಮಧ್ಯದಲ್ಲಿ ಪ್ರವಾಹವಾಗಿ ಹರಿಯುತ್ತದೆ, ಕಡೆಗೆ ಸಮುದ್ರವನ್ನು ಸೇರುತ್ತದೆ. ॥ ೫೪ ॥ ಆ ಆತ್ಮನಿಗೆ ಈ ಮೂರೂ ಅವಸ್ಥೆಗಳು ಸಮಾನವಾಗಿರುತ್ತವೆ. ಪ್ರಾಣಿಮಾತ್ರಗಳಿಗೆ ಈ ಮೂರು ಅವಸ್ಥೆಗಳು ಯಾವ ಕಾಲವಲ್ಲಾದರೂ ಬಿಡಲಾರವೆಂಬುದನ್ನು ನಿಶ್ಚಯವೆಂದು ತಿಳಿ ॥ ೫೫ ॥ ಆದ್ದರಿಂದ ನೀನು ಇವರೆಲ್ಲರ ದೆಸೆಯಿಂದ ಶೋಕ ಮಾಡುವ ಕಾರಣವಿಲ್ಲ. ಸೃಷ್ಟಿಯ ಈ ಎಲ್ಲ ಕ್ರಮವೂ ಸ್ವಭಾವತಃ ಅನಾದಿ ಕಾಲದಿಂದ ನಡೆದುಬಂದಿರುತ್ತದೆ. ॥ ೫೬ ॥ ಇದು ನಿನ್ನ ಸುನಸಿಗೆ ಬಾರದಿದ್ದರೂ ಪ್ರಾಣಿಮಾತ್ರಗಳು ಜನನ ಮರಣಾಧೀನವಾಗಿರುವುದು ನಿಶ್ಚಯವಾದದ್ದು. ॥ ೫೭ ॥ ಆದರೆ ಈ ಜನನ ಮರಣವನ್ನು ತಪ್ಪಿಸುವದು ಅಪರಿಹಾರ್ಯವಾಗಿರುವದು. ಆದ್ದರಿಂದ ನೀನು ದುಃಖಪಡುವ ಕಾರಣವಿಲ್ಲ. ॥ ೫೮ ॥

ಜಾತಸ್ಯ ಹಿ ಧ್ರುವೋ ಮೃತ್ಯು ಧ್ರುವಂ ಜನ್ಮ ಮೃತಸ್ಯಚ ।
ತಸ್ಮಾದ ಪರಿಹಾರ್ಯೇರ್ಥೇನ ನತ್ವಂ ಶೋಚಿತು ಮರ್ಹಸಿ ॥ ೨೭ ॥

[ಜಾತಸ್ಯ ಹಿಧ್ರುವೋ ಮೃತ್ಯುರಿತಿ] ಉಪಜೇ ತೇ ನಾಶೇ । ನಾಶಲೇ ಪುನರಪಿ ದಿಸೇ । ಕೇ ಘಟಿಕಾ ಯಂತ್ರ ತೈಸೇ । ಪರಿಭ್ರಮೇಗಾ ॥ ೫೯ ॥ ನಾತರೀ ಉದೋ ಅಸ್ತು, ಆಪೈಸೇ । ಅಖಂಡಿತ ಹೋತ ಜಾತ ಜೈಸೇ । ಹೇ ಜನ್ಮ ಮರಣ ತೈಸೇ । ಅನಿವಾರ ಜಗೀ ॥ ೬೦ ॥ ಮಹಾಪ್ರಳಯ ಅವಸರೀ । ಹೇ ತ್ರೈಲೋಕ್ಯಹೀ ಸಂಹರೀ । ಮ್ಹಣೋನಿ ಹಾನವರಿಹರೀ । ಆದಿ ಅಂತ ॥ ೬೧ ॥ ತೂಜರೀ ಹೇ ಐಸೇ ಮಾನಿಸೀ । ತರೀ ಬೇದಕಾ ಕರಿಸೀ । ಕಾಯಜಾಣತಚಿ ನೇಣಸೀ । ಧನುರ್ಧರಾ ॥ ೬೨ ॥ ಏಥ ಅಣಿ ಕಹೀ ಪಾರ್ಥಾ । ತುಜ ಬಹುತೀಪರೀ ಪಾಹತಾ । ದುಃಖ ಕರಾವಯಾ ಸರ್ವಥಾ । ವಿಷೋ ನಾಹೀ ॥ ೬೩ ॥

ಅರ್ಥ— ಹುಟ್ಟಿದವನಿಗೆ ಸಾವೂ, ಸತ್ತವನಿಗೆ ಹುಟ್ಟೂ ಕಟ್ಟಿಟ್ಟಂತೆ ಹೀಗೆ ಇವೆರಡೂ ಘಟಿಕಾಯಂತ್ರದಂತೆ (ಹೊತ್ತು ತಿಳಿಯುವದರ ದೆಸೆಯಿಂದ ಮಾಡಿಸಿದ ಉಸುಕಿನ ಗಡಿಯಾರದಂತೆ ಅಥವಾ ರಾಹಟ ಗಾಡಿಗೆಯ ಯಂತ್ರದಂತೆ) ಅವ್ಯಾಹತವಾಗಿ ನಡೆದಿರುತ್ತವೆ. ॥ ೫೯ ॥ ಅಥವಾ ಸೂರ್ಯನ ಉದಯಾಸ್ತಗಳು ತಮ್ಮಿಂದತಾವೇ ತಪ್ಪದೇ ನಡೆದಿರುವಂತೆ ಈ ಜಗತ್ತಿನಲ್ಲಿ ಜನನ ಮರಣಗಳು ಅನಿವಾರವಾದದ್ದಿರುತ್ತವೆ. ॥ ೬೦ ॥ ಮಹಾಪ್ರಳಯ ಕಾಲದಲ್ಲಿ ಈ ಮೂರು ಲೋಕಗಳೂ ಕೂಡ ನಾಶವಾಗುತ್ತವೆ. ಅಂದಬಳಿಕ ಜನನ ಮತ್ತು ಮರಣ ಈ ಎರಡೂ ಅಪರಿಹಾರ್ಯವಾಗಿರುತ್ತವೆ. ॥ ೬೧ ॥ ಹೀಗೆ ನಿನ್ನ ತಿಳುವಳಿಕೆ ಇದ್ದದ್ದಾದರೆ ಅರ್ಜುನನೇ, ದುಃಖಿಸುವ ಕಾರಣವೇನು ? ಮತ್ತು ತಿಳಿದೂ ತಿಳಿದೂ ಅರಿಯದ ಹುಚ್ಚನಂತೆ ಹೀಗೇಕೆ ಮಾಡುವಿ ? ॥ ೬೨ ॥ ಪಾರ್ಥಾ, ಇನ್ನೂ ಒಂದು ರೀತಿ ತಿಳಿದು ನೋಡಿದರೂ ಜನನ ಮತ್ತು ಮರಣಗಳು ತಪ್ಪಸಲಿಕ್ಕೆ ಬರದಂಥವುಗಳು ಆದುದರಿಂದ ನೀನು ಶೋಕಿಸುವ ಕಾರಣವಿಲ್ಲ. ॥ ೬೩ ॥

ಅವ್ಯಕ್ತಾದೀನಿ ಭೂತಾನಿ ವ್ಯಕ್ತಮಧ್ಯಾನಿ ಭಾರತ।
ಅವ್ಯಕ್ತ ನಿಧನಾನ್ಯೇವ ತತ್ರ ಕಾ ಪರಿದೇವನಾ ॥೨೮॥

[ಅವ್ಯಕ್ತಾದೀನೀತಿ] ಜಿಯೇ ಸಮಸ್ತೇ ಇಯೇ ಭೂತೇ। ಜನ್ಮಾ ಆದಿ ಅಮೂರ್ತೇ। ಮಗ ಪಾತಲೀ ವ್ಯಕ್ತೀತೇ। ಜನ್ಮಲೇಯಾ ॥೬೪॥ ತಿಯೇ ಕ್ಷಯಾಸೀ ಜೇಥ ಜಾತೀ। ತೆಥ ನಿಧ್ರಾಂತ ಆನೇ ನನ್ವತೀ। ದೇಖೇ ಪೂರ್ವ ಸ್ಥಿತೀಚ ಯೇತೀ। ಆಪುಲಿಯೇ ॥೬೫॥ ಯೇರ ಮಧ್ಯೆ ಜೇ ಪ್ರತಿಭಾಸೇ। ತೇ ನಿದ್ರಿತಾ ಸ್ವಪ್ನ ಜೈಸೇ। ತೈಸಾ ಆಕಾರ ಹಾ ಮಾಯಾ ವಶೇ। ಸತ್ಸ್ವರೂಪೀ ॥೬೬॥ ನಾತರೀ ಪವನೇ ಸ್ಪರ್ಶಿಲೇ ನೀರ। ಪಡಿಯಾಸೇ ತರಂಗಾಕಾರ। ಕಾಪಾಸೇಕ್ಷಾ ಅಳಂಕಾರ। ವ್ಯಕ್ತೀ ಕನಕೀ ॥೬೭॥ ತೈಸೇ ಸಕಳ ಜೇ ಮೂರ್ತ। ಜಾಣಪಾ ಮಾಯಾಕಾರಿತ। ಜೈಸೇ ಆಕಾಶೀ ಬಿಂಬತ। ಅಭ್ರಪಟಿಲ ॥೬೮॥ ತೈ ಸೇ ಆದೀಚಿ ಜೇ ನಾಹೀ। ತಯಾಲಾಗೀ ತೂ ರುದಸಿ ಕಾಯೀ। ತೂ ಅವೀಟ ತೇ ವಾಹೀ। ಚೈತನ್ಯ ಏಕ ॥೬೯॥ ಜಯಾಚೀ ಆರ್ತೀಚಿ ಭೋಗಿತ। ವಿಷಯೀ ತ್ಯಜಿಲೇ ಸಂತ। ಜಯಾಲಾಗೀ ವಿರಕ್ತ। ವನವಾಸಿಯೇ ॥೭೦॥ ದಿಟೇ ಸೂನಿ ಜಯಾತೇ। ಬ್ರಹ್ಮ ಚರ್ಯಾದಿವೃತೇ। ಮುನೀಶ್ವರತಪಾತೇ। ಆಚರತಾತಿ ॥೭೧॥

ಅರ್ಥ— ಈ ಭೂತಗಳು ಆರಂಭದಲ್ಲಿ (ಉತ್ಪತ್ತಿ ಪೂರ್ವದಲ್ಲಿ) ನಿರಾಕಾರವಿದ್ದು ಮಧ್ಯದಲ್ಲಿ ಜನ್ಮಕ್ಕೆ ಬಂದಮೇಲೆ ಆಕಾರಕ್ಕೆ ಬರುವವು. ॥೬೪॥ ಅವುಗಳು ಅಂತ್ಯದಲ್ಲಿ ಲಯ ಹೊಂದಿದಮೇಲೆ ಅಲ್ಲಿ ಅವು ನಿಃಸಂಶಯವಾಗಿ ಅನ್ಯಸ್ಥಿತಿಯನ್ನು ಹೊಂದದೆ. ತಮ್ಮ ಆರಂಭದ ಸ್ಥಿತಿಯನ್ನು ಅಂದರೆ ಅವ್ಯಕ್ತ ಸ್ವರೂಪವನ್ನೇ ಹೊಂದುವವು. ॥೬೫॥ ನಿದ್ರೆಯಿಂದ ಮಲಗಿದ ಮನುಷ್ಯನಿಗೆ ಯಾವ ಪ್ರಕಾರ ಸ್ವಪ್ನವು ಕಾಣುತ್ತಿರುವದೋ, ಅದೇ ಪ್ರಕಾರ ಜನ್ಮ ಮೃತ್ಯುಗಳೆರಡರಲ್ಲಿಯೂ ಕಾಣುವ ಆಕಾರವು ಮಾಯಾ ಯೋಗದಿಂದುಂಟಾಗಿದ್ದು, ಅದು ಬ್ರಹ್ಮ ಸ್ವರೂಪದಮೇಲೆ ಭಾಸವಾಗುತ್ತದೆ. ॥೬೬॥ ಇಲ್ಲವೇ ನೀರಿಗೆ ಗಾಳಿಯ ಸ್ಪರ್ಶವಾದ ಕೂಡಲೇ ಅದರ ಮೇಲೆ ಬೇರೆ ಬೇರೆ ತೆರೆಗಳೇಳುವಂತೆ ಬಂಗಾರವು ಜನರ ಅಪೇಕ್ಷೆಯಂತೆ ನಾನಾತರಹದ ಅಲಂಕಾರಗಳಲ್ಲಿ ರೂಪಗೊಳ್ಳುವಂತೆ ॥೬೭॥ ಎಲ್ಲ ಪ್ರಾಣಿಗಳು ಮಾಯೆಯಿಂದಲೇ ಬೇರೆ ಬೇರೆ ರೂಪಗಳನ್ನು ಹೊಂದಿ ಉದ್ಭವಿಸಿರುವವೆಂದು ತಿಳಿ. ಆಕಾಶದಲ್ಲಿ ಮೋಡಗಳು ಹುಟ್ಟಿ ನಾಶವಾಗುವಂತೆ ॥೬೮॥ ಮೂಲತಃ ನಾಶವಂತವಾಗಿರುವಂಥ ವಸ್ತುವಿನ ಬಗ್ಗೆ ನೀನೇಕೆ ದುಃಖಿಸುವೆ. ಆದ್ದರಿಂದ ಅಕ್ಷಯವಾದ ಬ್ರಹ್ಮಸ್ವರೂಪದ ಕಡೆಗೆ ಲಕ್ಷಗೊಡು. ॥೬೯॥ ಸಾಧುಗಳಲ್ಲಿ ಆ ಪರಬ್ರಹ್ಮನ ಬಗ್ಗೆ ಪ್ರೇಮವು ಉದ್ಭವಿಸಿದ ಕೂಡಲೆ ಅವರು ವಿಷಯ ಸುಖದಿಂದ ನಿವೃತ್ತರಾಗುತ್ತಾರೆ. ಮತ್ತು ಆ ಪರಮಾತ್ಮಾ-ಪರಬ್ರಹ್ಮ ಶ್ರೀ ಹರಿಯ ಪ್ರೇಮದ ದೆಸೆಯಿಂದ ಅವರು ವನವಾಸಿಗಳಾಗಲಿ ವೈರಾಗ್ಯ ಸಂಪನ್ನರಾಗಲಿ ಆಗುತ್ತಾರೆ. ॥೭೦॥ ಮತ್ತು ಆ ಪರಬ್ರಹ್ಮನಮೇಲೆ ದೃಷ್ಟಿ (ಅಂತಃಕರಣ) ಯಿಟ್ಟು ಬ್ರಹ್ಮಚರ್ಯ ಮುಂತಾದ ವ್ರತಗಳನ್ನೂ, ತಪಶ್ಚರ್ಯಾದಿಗಳನ್ನೂ, ಮಾಡುತ್ತಾರೆ. ॥೭೧॥

ಆಶ್ಚರ್ಯವತ್ಪಶ್ಯತಿ ಕಶ್ಚಿದೇನಮ್ । ಆಶ್ಚರ್ಯವದ್ವದತಿ ತಥೈವ ಚಾನ್ಯಃ ॥
ಆಶ್ಚರ್ಯವಚ್ಚೈನಮನ್ಯಃ ಶೃಣೋತಿ । ಶ್ರುತ್ವಾಪ್ಯೇನಂ ವೇದನ ಚೈವಕಶ್ಚಿತ್॥ ೨೯॥

[ಆಶ್ಚರ್ಯ ವತ್ಪಶ್ಯತೀತಿ] ಏಕ ಅಂತರೀ ನಿಶ್ಚಳ। ಜೇ ನಿಹಾಳಿತಾ ಕೇವಳ। ವಿಸರಲೇ ಸಕಳ। ಸಂಸಾರ ಜಾತ ॥೭೨॥ ಏಕಾ ಗುಣಾನುವಾದ ಕರಿತಾ। ಉಪರತೀ ಹೋವೂನಿ ಚಿತ್ತಾ। ನಿರವಧಿ ತಲ್ಲೀನತಾ। ನಿರಂತರ ॥೭೩॥ ಏಕ ಏಕತಾಂಚಿ ನಿವಾಲೇ। ತೇ ದೇಹಭಾವೀ ಸಾಂಡಿಲೇ।

ಏಕ ಅನುಭವೇ ಪಾತಲೇ । ತದ್ರೂಪತಾ ॥ ೭೪ ॥ ಜೈಸೇ ಸರಿತಾ ಓಘು ಸಮಸ್ತ । ಸಮುದ್ರಾ ಮಾಜೀ ವಿಳತ । ಪರೀ ನಾಘೌತೇ ನ ಸವಾತ । ಪರತಲೇ ನಾಹೀ ॥ ೭೫ ॥ ತೈಸೀಯಾ ಯೋಗೀಶ್ವರಾಂಚಿಯಾ ಮತೀ । ವಿಳಣೇಸವೇ ಏಕವಟತೀ । ಪರೀಜೇ ವಿಚಾರೂನಿ ಪುನರಾವೃತ್ತೀ । ಭಜತೀಚಿ ನಾ ॥ ೭೬ ॥

ಅರ್ಥ— ಏಕಾಗ್ರವಾದ ಅಂತಃಕರಣದಿಂದ ಆ ಪರಬ್ರಹ್ಮನ ಕಡೆಗೆ ನೋಡುತ್ತ ಎಷ್ಟೋ ಜನರು ಅಂತರಂಗದಲ್ಲಿ ಧೃಡವಾದ ಪ್ರೇಮವನ್ನಿಟ್ಟು ಎಲ್ಲ ಸಂಸಾರವನ್ನು ಮರೆತು ಬಿಟ್ಟಿರುವರು. ॥ ೭೨ ॥ ಹಲಕೆಲವರು ಆ ಪರಬ್ರಹ್ಮನ ಗುಣ ಮಹಿಮೆಗಳನ್ನು ಹೊಗಳುತ್ತ ಚಿತ್ತದಲ್ಲಿ ವಿಷಯ ನಿವೃತ್ತಿಯನ್ನು ಹೊಂದಿ ನಿಸ್ಸೀಮ ಭಕ್ತಿಯಿಂದ ಕಡೆಗೆ ಆ ಪರಬ್ರಹ್ಮನಲ್ಲೇ ಯಾವಾಗಲೂ ಮಗ್ನರಾಗಿ ಲೀನರಾಗಿ ಹೋಗುತ್ತಾರೆ. ॥ ೭೩ ॥ ಒಬ್ಬರು ಅವನ ಸ್ವರೂಪವನ್ನು ಕೇಳಿದ ಕೂಡಲೇ ಶಾಂತರಾಗಿ ದೇಹಾಭಿಮಾನವನ್ನು ಬಿಟ್ಟುಬಿಟ್ಟಿರುತ್ತಾರೆ. ಹಲವರು ಅನುಭವದಿಂದ ಪರಮಾತ್ಮನಂತೆ ರೂಪವನ್ನು ಧರಿಸಿರುತ್ತಾರೆ. ॥ ೭೪ ॥ ನದಿಗಳ ಪ್ರವಾಹವು ಸಮುದ್ರಕ್ಕೆ ಕೂಡುವದೆನೋ ನಿಜ. ಆದರೆ ಸಮುದ್ರದಲ್ಲಿ ಸ್ಥಳವಿಲ್ಲವೆಂದು ಹಿಂತಿರುಗಿರುವದಿಲ್ಲ. ॥ ೭೫ ॥ ಅದರಂತೆಯೇ ಮಹಾತ್ಮರಾದ ಯೋಗಿಗಳ ಬುದ್ಧಿಯು ಬ್ರಹ್ಮ ಸಾಕ್ಷಾತ್ಕಾರದ ಸಂಗಡನೇ ತದಾಕಾರವಾಗಿ ಹೋಗುತ್ತದೆ. ಆದರೆ ಇಂಥ ರೀತಿಯಿಂದ ವಿಚಾರ ಮಾಡಿ ತದ್ರೂಪರಾದಂಥ ಪುರುಷರು ಪುನಃ ಸಂಸಾರಕ್ಕೆ ಬರುವದಿಲ್ಲ. । ೭೬ ॥

ದೇಹೀ ನಿತ್ಯಮವಧ್ಯೋಽಯಂ ದೇಹೇ ಸರ್ವಸ್ಯ ಭಾರತ ।
ತಸ್ಮಾತ್ಸರ್ವಾಣಿ ಭೂತಾನಿ ನ ತ್ವಂ ಶೋಚಿತುಮರ್ಹಸಿ ॥ ೩೦ ॥

[ದೇಹೀತಿ] ಜೇ ಸರ್ವತ್ರ ಸರ್ವ ಹೀ ದೇಹೀ । ಜಯಾ ಕರಿ ತಾಹೀ ಘಾತ ನಾಹೀ । ತೇ ವಿಶ್ವಾತ್ಮಕ ತೂ ಪಾಹೀ । ಚೈತನ್ಯ ಏಕ ॥ ೭೭ ॥ ಇಯಾಚೇನಿ ನ್ಯಭಾವೇ । ಹೇ ಹೋತ ಜಾತ ಆಘವೇ । ತರೀ ಸಾಂಗ ಕಾಯ ಶೋಚಾವೇ । ಏಥ ತುವಾ ॥ ೭೮ ॥ ಏರ್ಹವೀ ತರೀ ಪಾರ್ಥಾ । ತುಜಕಾನೇಣೋನ ಮನೇ ಚಿತ್ತಾ । ಪರೀ ಕಿಡಾಳ ಹೇ ಶೋಚಿ ತಾ । ಬಹುತಾ ಪರೀ ॥ ೭೯ ॥

ಅರ್ಥ— ಅರ್ಜುನನೇ, ಎಲ್ಲ ಸ್ಥಳದಲ್ಲಿಯೂ ಸರ್ವ ದೇಹಗಳಲ್ಲಿಯೂ ಸರ್ವ ಭೂತಾಂತರಾತ್ಮನಾದ ಪರಬ್ರಹ್ಮನು ವ್ಯಾಪ್ತನಾಗಿರುವದರಿಂದ ಅವನನ್ನು ಕೊಲ್ಲುವದು ಸಾಧ್ಯವಾಗದು. ಇಂತಹ ಒಂದು ಚೈತನ್ಯನೇ ಜಗದ್ರೂಪವಾಗಿದೆಯೆಂಬದನ್ನು ಲಕ್ಷದಲ್ಲಿಡು. ॥ ೭೭ ॥ ಚೈತನ್ಯದಲ್ಲಿ ಸ್ವಾಭಾವಿಕವಾಗಿ ನಡೆದು ಹೋಗುವ ಸಂಗತಿಗಳಿಗಾಗಿ ನೀನು ಏಕೆ ದುಃಖಿಸುವಿ ? ॥ ೭೮ ॥ ಪಾರ್ಥಾ, ಈ ಮಾತು ನಿನ್ನ ಮನಸಿನಲ್ಲೇ ಏಕೆ ಬರುವದಿಲ್ಲ? ಇದು ನನಗೆ ತಿಳಿಯದಾಗಿದೆ. ಒಟ್ಟಿನ ಮೇಲೆ ಈ ದುಃಖವು ನಿಂದನೀಯವಾಗಿದೆ. ॥ ೭೯ ॥

ಸ್ವಧರ್ಮಮಪಿ ಚಾವೇಕ್ಷ್ಯ ನ ವಿಕಂಪಿತುಮರ್ಹಸಿ ।
ಧರ್ಮ್ಯಾದ್ಧಿ ಯುದ್ಧಾಚ್ಛ್ರೇಯೋಽನ್ಯತ್ಕ್ಷತ್ರಿಯಸ್ಯ ನ ವಿದ್ಯತೇ ॥ ೩೧ ॥

[ಸ್ವಧರ್ಮ ಮಿತಿ] ತು ಅರ್ಜುನೀ ಕಾ ನ ವಿಚಾರಿಸೀ । ಕಾಯ ಹೇ ಚಿಂತಿತ ಆಪಾಸಿ । ಸ್ವಧರ್ಮ ತೋ ವಿಸರಲಾಸೀ । ತರಾವೇ ಜೇಣೇ ॥ ೧೪೦ ॥ ಯಾ ಕೌರವಾ ಭಲತೇ ಜಾಹಲೀ । ಅಥವಾ ತುಜಚಿ ಕಾಹೀ ಪಾತಲೆ । ಕೀ ಯುಗಾಚಿ ಹೇ ಬುಡಾಲೇ । ಜಹ್ನೀ ಏಥ ॥ ೮೧ ॥ ತರೀ ಸ್ವಧರ್ಮ ಏಕ ಆಹೆ । ತೋ ಸರ್ವಥಾ ತ್ಯಾಜ್ಯ ನೋಹೆ । ಮಗ ತರೀ ಜೇಲಕಾಯ ಪಾಹೇ । ಕೃಪಾಳೂಪಣೇ ॥ ೮೨ ॥ ಅರ್ಜುನಾ ತುಝೆ ಚಿತ್ತ ಜಹ್ನೀ ಜಾಹಲೇ ದ್ರವೀ ಭೂತ । ತಹ್ನೀ

ಹೇ ಅನುಚಿತ । ಸಂಗ್ರಾಮು ಸಮಯೀ ॥ ೬೩ ॥ ಅಗಾ ಗೋಕ್ಷೀರ ಜರೀ ಜಾಹಾಲೇ । ತರೀ ಪಥ್ಯಾಸೀ ನಾಹೀ ಘೇತಲೇ । ಐಸೇನಿಹೀ ವಿಷಹೋಯ ಸುದಲೇ । ನವಜ್ವರೀ ದೇತಾ ॥ ೬೪ ॥ ತೈಸೇ ಆನೀ ಅನ ಕರಿತಾ । ನಾಶ ಹೋಈಲ ಸ್ವಹಿತಾ । ಮ್ಹಣವೂನಿ ತೂ ಆತಾ ಸಾವಧ ಹೋಈ ॥ ೬೫ ॥ ವಾಯಾಚಿ ವ್ಯಾಕುಳ ಕಾಯೀ । ಆಪುಲಾ ನಿಜ ಧರ್ಮ ಪಾಹೀ । ಜೋ ಆಚರಿತಾ ಬಾಧ ನಾಹೀ । ಕವಣೇ ಕಾಳೀ ॥ ೬೬ ॥ ಜೈಸೇ ಮಾಗೇರ್ ಚಿ ಚಾಲತಾ ॥ ಅಪಾಯೋ ನ ಪವೇ ಸರ್ವಥಾ । ಕಾದೀಪಾಧಾರೆ ವರ್ತತಾ । ನಾ ಡಳಿಜೆ ॥ ೬೭ ॥ ತಯಾಪರೀ ಪಾರ್ಥಾ । ಸ್ವಧರ್ಮೀ ರಾಹಾಟತಾ । ಸಕಳ ಕಾಮ ಪೂರ್ಣತಾ । ಸಹಜೇ ಹೋಯ ॥ ೬೮ ॥ ಮ್ಹಣೋನಿ ಯಾ ಲಾಗೀ ಪಾಹೀ । ತುಮ್ಹಾ ಕ್ಷತ್ರಿಯಾ ಆಣಿಕ ಕಾಹೀ । ಸಂಗ್ರಾಮಾ ವಾಚೂನಿ ನಾಹೀ । ಉಚಿತ ಚಾಣೇ ॥ ೬೯ ॥ ನಿಶ್ಚಪಟ ಹೋವಾವೇ । ಉಸಿಣಾ ಘಾಈ ಜುಂಝಾವೇ । ಹೇ ಅಸೋ ಕಾಯ ಸಾಂಗಾವೇ । ಪ್ರತ್ಯಕ್ಷಾವರೀ ॥ ೭೦ ॥

ಅರ್ಥ—ಇನ್ನೂ ವರೆಗೆ ನೀನು ವಿಚಾರವನ್ನೇಕೆ ಮಾಡುವದಿಲ್ಲ? ನೀನು ಮನಸಿನಲ್ಲಿ ಏನು ಚಿಂತಿಸುತ್ತಿರುವಿ? ಸ್ವಧರ್ಮವನ್ನು ಮರೆತುಬಿಟ್ಟಿರುವಿ. ಅಂದಮೇಲೆ ನಿನ್ನ ತರುಣೋಪಾಯವು ಆಗುವ ಬಗೆಯಾದರೂ ಹೇಗೆ? ॥ ೧೯೦ ॥ ಈ ಕೌರವರಿಗೆ ಏನಾದರೂ ಘಾತವಾದರೆ ಇಲ್ಲವೇ ನಿನಗೇನಾದರೂ ಹೆಚ್ಚುಕಡಿಮೆಯಾದರೆ ಅರ್ಥಾತ್ ಎಲ್ಲ ಜಗತ್ತೂ ಇಲ್ಲದಂತಾದರೆ ॥ ೬೧ ॥ ಸ್ವಧರ್ಮವನ್ನು ಮಾತ್ರ ನೀನು ಎಂದಿಗೂ ಬಿಡಕೂಡದು. ಅದನ್ನು ತ್ಯಾಗ ಮಾಡಿದ ಮೇಲೆ ನಿನ್ನ ಮನಸಿನಲ್ಲಿ ಉದ್ಭವಿಸಿದ ಈ ಕಾರುಣ್ಯದಿಂದ ನಿನ್ನ ತರಣೋಪಾಯವಾದೀತೇ ಹೇಗೆ? ॥ ೬೨ ॥ ಅರ್ಜುನಾ, ನಿನ್ನ ಚಿತ್ತವು ಸ್ನೇಹನುಯವಾಗಿದ್ದು ಅಂತಃಕರುಣವು ಕರಗಿ ಹೋಗಿದೆ. ಆದುದರಿಂದ ನಿನ್ನಲ್ಲಿ ದಯೆಯು ಉತ್ಪನ್ನವಾಗಿರುವದು. ಆದರೆ ಆ ದಯೆಯು ಈ ಯುದ್ಧ ಪ್ರಸಂಗದಲ್ಲಿ ಅಯೋಗ್ಯವಾದದ್ದು । ೬೩ । ಎಲೈ ಅರ್ಜುನನೇ, ಹೀಗೆ ನೋಡು—ಆಕಳ ಹಾಲು ಶ್ರೇಷ್ಠವಾಗಿರುವದು. ಆದರೂ ವಿಷವು ಜ್ವರದಿಂದ ಪೀಡಿತನಾದ ಮನುಷ್ಯನಿಗೆ, ಅದು ಅಪಥ್ಯವಿದ್ದುದರಿಂದ ವಿಷಪ್ರಾಯವಾಗಿರುವದು. ॥ ೬೪ ॥ ಅದೇ ಪ್ರಕಾರ ಬ್ರಾಹ್ಮಣನು ಕ್ಷತ್ರಿಯರ ಕರ್ಮಮಾಡುವದರಿಂದ ಇಲ್ಲವೇ ಕ್ಷತ್ರಿಯರು ಬ್ರಾಹ್ಮಣ ಮುಂತಾದವರ ಧರ್ಮವನ್ನು ಆಚರಿಸುವದರಿಂದ ಅವರು ಸ್ವಹಿತದಿಂದ ಮುಕ್ತರಾಗುವರು. ಆದುದರಿಂದ ನೀನು ಎಚ್ಚರುಳ್ಳವನಾಗಿರು ಕಂಡೆಯಾ? ॥ ೬೫ ॥ ವ್ಯರ್ಥವಾಗಿ ಶೋಕಿಸಬೇಡ. ಸ್ವಧರ್ಮವನ್ನು ಅಂದರೆ ಕ್ಷಾತ್ರ ಧರ್ಮವನ್ನು ನೀನು ಸ್ವೀಕರಿಸುವದರಿಂದ ಯಾವ ಕಾಲದಲ್ಲಿಯೂ ನಿನಗೆ ದೋಷವು ತಗಲುವದಿಲ್ಲ. ॥ ೬೬ ॥ ಸರಳವಾದ ಮಾರ್ಗದಿಂದ ನಡೆಯುವವರಿಗೆ ಸರ್ವಥಾ ಅಪಾಯ ವುಂಟಾಗುವದಿಲ್ಲ. ಇಲ್ಲವೇ ದೀವಿಗೆಯ ಆಶ್ರಯದಿಂದ ನಡೆಯುವವರು ಎಡಹುವದಿಲ್ಲ. ॥ ೬೭ ॥ ಅದರಂತೆಯೇ ಅರ್ಜುನಾ, ಸ್ವಧರ್ಮದಿಂದ ನಡೆಯುವವನಿಗೆ ತೊಂದರೆಗಳು ತಪ್ಪಿ ಅವನ ಎಲ್ಲ ಮನೋರಥಗಳು ಸಹಜವಾಗಿಯೇ ಪೂರ್ಣವಾಗುತ್ತವೆ ॥ ೬೮ ॥ ಆದ್ದರಿಂದ ಕ್ಷತ್ರಿಯರಾದ ನಿಮಗೆ ಸಂಗ್ರಾಮದ ಹೊರತು ಮತ್ತೊಂದಾವುದೂ ಉಚಿತವಾದ ಕರ್ಮವಿರುವದಿಲ್ಲ. ॥ ೬೯ ॥ ನಿಶ್ಚಪಟ ಮನಸಿನಿಂದ ಎದುರಾಗಿ ನಿಂತು ಒಬ್ಬರೊಬ್ಬರು ಶತ್ರುಗಳ ಸಂಗಡ ಹೋರಾಡಿ ಯುದ್ಧಮಾಡಿ ಅವರ ಮುಯ್ಯಕ್ಕೆ ಮುಯ್ಯ ತೀರಿಸಬೇಕೆಂಬುವದು ನಿನಗೆ ಚನ್ನಾಗಿ ಗೊತ್ತಿದೆ. ಇದನ್ನು ನಾವು ಬೇರೆ ಹೇಳುವ ಕಾರಣವಿಲ್ಲ. ॥ ೭೦ ॥

ಯದೃಚ್ಛಯಾ ಚೋಪಪನ್ನಂ ಸ್ವರ್ಗದ್ವಾರ ಮಪಾವೃತಂ ।
ಸುಖಿನಃ ಕ್ಷತ್ರಿಯಾಃ ಪಾರ್ಥ ಲಭಂತೇ ಯುದ್ಧಮೀದೃಶಂ ॥ ೩೨ ॥

[ಯದೃಚ್ಛಯಾ ಚೋಪಪನ್ನಮಿತಿ] ಅರ್ಜುನಾ ಜುಂಝು ದೇಖ ಆತಾಚೆ । ಹೇ ಹೋಕಾ ದೈವ ತುಮಚೆ । ಕೀ ನಿಧಾನ ಸಕಳ ಧರ್ಮಾಚೆ । ಪ್ರಕಟಲೇ ಅಸೇ ॥ ೯೧ ॥ ಹಾ ಸಂಗ್ರಾಮು

ಕಾಯ ಮ್ಹಣಿಪೇ । ಕೀ ಸ್ವರ್ಗಚಿಯೇಣೇ ರೂಪೇ । ಮೂರ್ತ ಕಾ ಪ್ರತಾಪೇ । ಉದಯ ಕೇಲಾ ॥ ೯೨ ॥ ನಾತರೀ ಗುಣಾಚೇನಿ ಪತಿಕರೇ । ಆರ್ತೀಚೇನಿ ಪಡಿಭರೆ । ಹೇಕೀರ್ತೀಚಿ ಸ್ವಯಂವರೇ । ಆಲೀ ತುಜ ॥ ೯೩ ॥ ಕ್ಷತ್ರಿಯೇ ಬಹುತ ಪುಣ್ಯಕೇಜೆ । ತೈಜುಂಧ್ರು ಐಸೇ ಲಾಹಿಜೇ । ಜೈಸೇ ಮಾರ್ಗೇ ಜಾತಾ ಆಡಳಿಜೇ । ಚಿಂತಾಮಣೀ ॥ ೯೪ ॥ ನಾತರೀ ಜಾಂಧ್ಯಯಾ ಪಸರೇ ಮುಖ । ತೇಥ ಅಪಜಟೇ ಪಡೇ ಪೀಯೂಖ । ತೈಸಾ ಹಾಸಂಗ್ರಾಮದೇಖ । ಪಾತಲಾ ಅಸೇ ॥೯೫॥

ಅರ್ಥ— ಅರ್ಜುನಾ, ಈ ಯುದ್ಧವೆಂದರೆ ನಿನ್ನ ಪೂರ್ವಜನ್ಮದ ಭಾಗ್ಯೋದಯನೆಂದೇ ತಿಳಿ. ಅಥವಾ ಸರ್ವಧರ್ಮದ ನಿಕ್ಷೇಪನೇ ವ್ಯಕ್ತವಾಗಿರುವದು. ॥ ೯೧ ॥ ಎಲೋ ಪಾರ್ಥಾ, ಇದು ಸಂಗ್ರಾಮವಲ್ಲ. ನಿಮ್ಮ ಪ್ರತಾಪದಿಂದ ಮೂರ್ತಿಮಂತ ಸ್ವರ್ಗವೇ ಸಂಗ್ರಾಮದ ರೂಪವಾಗಿ ಪರಿಣಮಿಸಿದೆಯೆಂದು ತಿಳಿ. ॥ ೯೨ ॥ ಇಲ್ಲವೇ ನಿನ್ನ ಗುಣದ ಲೌಕಿಕವನ್ನು ಕೇಳಿ ಕೀರ್ತಿಕಾಂತೆಯು ನೋಹಿತಳಾಗಿ ನಿನ್ನನ್ನು ವರಿಸಲೋಸುಗ ಬಂದಿರುವಳೆಂಬಂತೆ ಕಾಣುತ್ತದೆ. ॥ ೯೩ ॥ ಇಂತಹ ಪ್ರಕಾರದ ಯುದ್ಧವು ಸಹಜವೇ ಪ್ರಾಪ್ತವಾಗಲಾರದು. ಕ್ಷತ್ರಿಯರು ಪುಣ್ಯಮಾಡಿದ್ದರೆ ಮಾತ್ರ ಇಂತಹ ಯುದ್ಧದ ಪ್ರಸಂಗವು ಪ್ರಾಪ್ತವಾಗುತ್ತದೆ. ಹಾದೀ ಹೋಗುವಾಗ ಇಚ್ಛಿತವಾದದ್ದನ್ನು ಕೊಡುವಂಥ ಚಿಂತಾಮಣಿಯು ದಾರಿಕಾರನಿಗೆ ಸಿಕ್ಕಂತೆ ॥ ೯೪ ॥ ಇಲ್ಲವೇ ಆಕಳಿಸಬೇಕೆಂದು ಬಾಯಿ ತೆರೆದಾಗ ಆಕಸ್ಮಾತ್ ಅದರಲ್ಲಿ ಅಮೃತ ಬಿದ್ದಂತೆ ಈ ಯುದ್ಧ ಪ್ರಸಂಗವು ನಿನಗೆ ದೈವ ಯೋಗದಿಂದ ಪ್ರಾಪ್ತವಾಗಿರುವದು ॥೯೫॥

ಅಥ ಚೇತ್ತ್ವಮಿಮಂ ಧರ್ಮ್ಯಂ ಸಂಗ್ರಾಮಂ ನ ಕರಿಷ್ಯಸಿ ।
ತತಃ ಸ್ವಧರ್ಮಂ ಕೀರ್ತಿಂ ಚ ಹಿತ್ವಾ ಪಾಪಮವಾಪ್ಸ್ಯಸಿ ॥ ೩೩ ॥

[ಅಥಿತಿ] ಆತಾ ಹಾ ಐಸಾ ಅವ್ಹೇರಿಜೇ । ಮಗನಾಥಿಲೇ ಶೋಚೂ ಬೈಸಿಜೇ । ತರೀ ಆಪಣ ಆಪಾಣಾ ಹೋ ಇಜೇ : ಆಪಣಪೇಯಾ ॥ ೯೬ ॥ ಪೂರ್ವ ಜಾಚೆ ಜೋಡಲೇ । ಆಪಣಚಿ ಹೋಯ ಧಾಡಿಲೇ । ಜರೀ ಆಜೀ ಶಸ್ತ್ರ ಸಾಂಡಿಲೇ । ರಣೀ ಇಯೇ ॥ ೯೭ ॥ ತರೀ ಅಸತೀ ಕೀರ್ತಿ ಜಾಈಲ । ಜಗಾಚಿ ಅಭಿಶಾಪ ದೇಈಲ । ಆಣಿ ಗಿವಸತ ಪಾವತೀಲ । ಮಹಾದೋಷ ॥ ೯೮ ॥ ಜೈಸೀ ಭರ್ತಾ ರೇಹೀನ ವನಿತಾ । ಉಪಹತೀ ಪಾವೇ ಸರ್ವಥಾ । ಮಗ ತೈಸೀ ದಶಾಚೀವಿತಾ ಸ್ವಧರ್ಮೆಂ ವೀಣ ॥ ೯೯ ॥ ನಾತರೀ ರಣೀ ಶವಸಾಂಡಿಜೇ । ತೇ ಚೌಮೇರೀ ಗಧೀ ವಿದಾರಿಜೇ । ತೈಸೇ ಸ್ವಧರ್ಮ ಹೀನಾ ಅಭಿಭವಿಜೇ । ಮಹಾದೋಷೀ ॥ ೨೦೦ ॥

ಅರ್ಥ - ಇಂತಹ ಯುದ್ಧವನ್ನು ಬಿಟ್ಟು ವ್ಯರ್ಥವಾದ ಮಾತಿನ ದೆಸೆಯಿಂದ ದುಃಖಿಸುತ್ತ ಕುಳಿತಿರುವದರಿಂದ ನಿನ್ನ ಘಾತವನ್ನು ನೀನೇ ಮಾಡಿಕೊಳ್ಳುತ್ತಿರುವಿ, ॥ ೯೬ ॥ ಈ ರಣಾಂಗಣದಲ್ಲಿ ಒಂದುನೇಳೆ ಇಂದು ನೀನು ಶಸ್ತ್ರವನ್ನು ಚಲ್ಲಿಕೊಟ್ಟರೆ ಪೂರ್ವಜರು ದೊರಕಿಸಿದ ಕೀರ್ತಿಯನ್ನು ನೀನೇ ಹಾಳುಮಾಡಿದಂತಾಗುವದು. ॥ ೯೭ ॥ ಇಷ್ಟೇ ಅಲ್ಲ. ಇದ್ದಂತಹ ನಿನ್ನ ಕೀರ್ತಿಯೂ ನಾಶವಾಗುವದು. ಎಲ್ಲ ಜಗತ್ತಿನ ಜನರೂ ನಿಂದಿಸುವರು. ಆ ಮೇಲೆ ನಿನ್ನಲ್ಲಿ ವಾಸಮಾಡಲು ಮಹಾದೋಷಗಳು ಓಡಿ ಬರುವವು. ॥ ೯೮ ॥ ಪತಿವಿರಹಿತ ಸ್ತ್ರೀಯು ಎಲ್ಲರಿಂದ ತಿರಸ್ಕಾರವನ್ನು ಹೊಂದುವಂತೆ ಸ್ವಧರ್ಮತ್ಯಾಗ ಮಾಡುವವರು ತಿರಸ್ಕಾರವನ್ನು ಹೊಂದುವರು. ಅವರ ಅವಸ್ಥೆಯು ಅಂಥ ಸ್ತ್ರೀಯರ ಅವಸ್ಥೆಯಂತೆ ಹೀನವಾಗುವದು. ॥ ೯೯ ॥ ಅಥವಾ ರಣದಲ್ಲಿ ಹೆಣಗಳು ಬಿದ್ದಕೂಡಲೇ ನಾಲ್ಕೂ ಕಡೆಯಿಂದ ಹದ್ದುಗಳು ಬಂದು ಹೆಣಗಳನ್ನು ಹರಿದು ತಿನ್ನುವಂತೆ ಸ್ವಧರ್ಮಹೀನನಾದ ಮನುಷ್ಯನನ್ನು ಮಹಾದೋಷಗಳು ಮುತ್ತಿಕೊಂಡು ನಾಶಮಾಡುತ್ತವೆ. ॥ ೨೦೦ ॥

ಅಕೀರ್ತಿಂ ಚಾಪಿ ಭೂತಾನಿ ಕಥಯಿಷ್ಯಂತಿ ತೇಽವ್ಯಯಾಂ ।
ಸಂಭಾವಿತಸ್ಯ ಚಾಕೀರ್ತಿರ್ಮರಣಾದತಿರಿಚ್ಯತೇ ॥ ೩೪ ॥

[ಅಕೀರ್ತಿ ಮಿತಿ] ಮ್ಹಣೋನಿ ಸ್ವಧರ್ಮ ಹಾ ಸಾಂಡಸೀಲ । ತರೀ ಪಾಪಾ ವರಪಡಾ ಹೋ ಸೀಲ । ಆಣಿ ಅಪೇಶ ತೇನ ವಚೇಲ । ಕಲ್ಪಾಂತವರೀ ॥ ೧ ॥ ಜಾಣತೇನಿ ತವಚಿ ಜಿಯಾವೇ । ಜವ ಅಪಕೀರ್ತಿ ಆಂಗಾ ನ ಪವೇ । ಆಣಿ ಸಾಂಗಪಾ ಕೇವಿ ನಿಗಾವೇ । ಏಥೋ ನಿಯಾ ॥ ೨ ॥ ತೂ ನಿರ್ಮತ್ಸರ ಸದಯತಾ । ಏಥೂನೀ ನಿಘಸೀಲ ಕೀರ ಮಾಘೌತಾ । ಪರೀ ತೇ ಗತಿ ಸಮಸ್ತಾ । ನ ಮನೇಲ ಯಯಾ ॥ ೩ ॥ ಹೇ ಚಹೂ ಕಡೂನಿ ಕವಳಿ ತೀಲ । ಬಾಣವರೀ ಘೇತೀಲ । ಯೇಧ ಪಾರ್ಥಾ ನ ನುಟ ಜೇಲ । ಕೃಪಾಳೂಪಣೇ ॥ ೪ ॥ ಐಸೇ ನಿಹಿ ವ್ಯಾಣ ಸಂಕಟೀ । ಜರೀ ವಿಪಾಯೇ ಪಾ ನಿಘಣೇ ಘಟೇ । ತರೀ ತೇ ಜಿಯಾಲೀ ಪೋಖಟೇ । ಮರ ಣಾಹುನಿ ॥ ೫ ॥

ಅರ್ಥ— ಇಷ್ಟರ ದೆಸೆಯಿಂದಲೇ ಒಂದು ವೇಳೆ ಪ್ರಸ್ತುತ ಪ್ರಾಪ್ತವಾದ ಕ್ಷತ್ರಿಯ ಧರ್ಮವನ್ನು ತ್ಯಾಗ ಮಾಡಿದರೆ ನಿನಗೆ ಪಾಪವು ಬರುವದು. ಮತ್ತು ಕಲ್ಪಾಂತದ ವರೆಗೆ ನಿನ್ನ ಈ ಅಪಕೀರ್ತಿಯ ಕಲಂಕವು ಅಳಿಯದೆ ಉಳಿಯುವದು. ಎಲ್ಲಿಯ ವರೆಗೆ ಅಪಕೀರ್ತಿಯುಂಟಾಗಿರುವದಿಲ್ಲವೋ, ಅಲ್ಲಿಯ ವರೆಗೆ ಜ್ಞಾನಿಯು ಬದುಕಿರಬೇಕು. (ಅಪಕೀರ್ತಿಯು ಸಂಭಾವಿತನಿಗೆ ಸಾವಿಗಿಂತ ಹೆಚ್ಚು.) ಹೀಗಿರಲು ಈ ರಣಭೂಮಿಯನ್ನು ಬಿಟ್ಟು ವಿಮುಖನಾಗಿ ಹೇಗೆ ಹೋಗುವೆ? ॥ ೨ ॥ ಸದಯಾಂತಃಕರಣದಿಂದ ಮತ್ಸರರಹಿತನಾಗಿ ನೀನು ಹಿಂದಕ್ಕೆ ತಿರುಗಬಹುದು. ಇದು ನಿಜ. ಆದರೆ ಈ ಎಲ್ಲ ಮನುಷ್ಯರಿಗೆ ಆ ಮಾತು ಸರಿದೋರಲಾರದು. ಮತ್ತು ಅವರು ನಿಜವೆಂದೂ ನಂಬಲಾರರು. ॥ ೩ ॥ ನೀನು ಬಿಟ್ಟರೂ ಈ ಕೌರವರು ನಾಲ್ಕೂ ಕಡೆಯಿಂದ ನಿನ್ನನ್ನು ಮುತ್ತಿ ನಿನ್ನ ಮೇಲೆ ಬಾಣದ ಮಳೆಗಳನ್ನೂ ಸುರಿಸುವರು. ಹೀಗಿದ್ದ ಮೇಲೆ ಈ ಪ್ರಸಂಗದಲ್ಲಿ ನಿನ್ನ ಕಾರುಣ್ಯದಿಂದ ನಿನ್ನ ಬಿಡುಗಡೆಯು ಎಂದಿಗೂ ಆಗಲರಿಯದು. ॥ ೪ ॥ ಇಷ್ಟು ಮಾಡಿದರೂ ಅಕಸ್ಮಾತ್ ಬಹಳೇ ಕಷ್ಟದಿಂದ ನಿನ್ನ ಬಿಡುಗಡೆಯಾದರೆ, ಆ ನಿನ್ನ ಬದುಕಿರೋಣವು ಮರಣದಕಿಂತಲೂ ಕಷ್ಟವುದವಾದುದು. ॥ ೫ ॥

ಭಯಾದ್ರಣಾದು ಪರತಂ ಮಂಸ್ಯಂತೇ ತ್ವಾಂ ಮಹಾರಥಾಃ ।
ಯೇಷಾಂ ಚ ತ್ವಂ ಬಹುಮತೋ ಭೂತ್ವಾ ಯಾಸ್ಯಸಿ ಲಾಘವಂ ॥ ೩೫ ॥

[ಭಯಾದಿತಿ] ತೂ ಆಣಿ ಕಹೀ ಏಕ ನ ವಿಚಾರಿಸೀ । ಏಥ ಸಂಭ್ರಮೇ ಜುಂಝೋ ಆಲಾಸೀ । ಆಣಿ ಸಕಣವ ಪಣೆ ನಿಘಾಲಾಸೀ । ಮಾಗುತಾ ಜರೀ ॥ ೬ ॥ ತರೀ ತುಝೆ ತೇ ಅರ್ಜುನಾ । ಯ ವೈರಿ ಯಾ ದುರ್ಜನಾ । ಕಾ ಪ್ರತ್ಯಯಾ ಯೇಈಲ ಮನಾ । ಸಾಂಗೇಮಜ ॥ ೭ ॥

ಅರ್ಥ— ನೀನು ಇನ್ನೂ ಒಂದು ಮಾತಿನ ವಿಚಾರ ಮಾಡಿರುವದಿಲ್ಲ. ನೀನು ಈ ಸ್ಥಳದಲ್ಲಿ ಒಳ್ಳೇ ಆವೇಶದಿಂದ ಯುದ್ಧಕ್ಕೆ ಸನ್ನದ್ಧನಾಗಿ ಬಂದು ಈಗ ಸದಯಾಂತಃಕರಣದಿಂದ ಹಿಂತಿರುಗಲು ಸಿದ್ಧನಾದರೆ, ॥ ೬ ॥ ರಣದಿಂದ ಅಂಜಿಹೋದನೆಂದು ಮಹಾರಥಿಗಳೆಲ್ಲರೂ ನಿನ್ನನ್ನು ಹೀಯಾಳಿಸದೇ ಬಿಡರು. ಅರ್ಜುನಾ ನಿನ್ನ ಪ್ರತ್ಯಕ್ಷ ಶತ್ರುಗಳೂ, ದುರ್ಜನರೂ ಆದ ಕೌರವರಿಗೆ ಈ ಮಾತು ನಿಜವೆಂದು ಕಂದುಬರುವದೇ? ॥ ೭ ॥

ಅವಾಚ್ಯವಾದಾಂಶ್ಚ ಬಹೂನ್ವದಿಷ್ಯಂತಿ ತವಾಹಿತಾಃ ।
ನಿಂದಂತಸ್ತವ ಸಾಮರ್ಥ್ಯಂ ತತೋದುಃಖತರಂ ನುಕಂ ॥ ೩೬ ॥

[ಅವಾಚ್ಯವಾದಾನಿತಿ] ಹೇ ಮ್ಹಣತೀ ಗೇಲಾ ರೇ ಗೇಲಾ । ಅರ್ಜುನ ಆಮ್ಹಾಬಿಹಾಲಾ । ಹಾ ಸಾಂಗೇ ಬೋಲ ಉರಲಾ । ನಿಕಾ ಕಾಯೀ ॥ ೮ ॥ ಲೋಕ ಸಾಯಾಸೇ ಕರೂನಿ ಬಹುತೇ । ವೇಚಿತೀ ಆಪುಲೇ । ಜೀವಿತೇ । ಪರೀ ವಾಢವಿತೀ ಕೀರ್ತಿತೇ । ಧನುರ್ಧರಾ ॥ ೯ ॥ ತೇ ತುಜ ಅನಾ

ಯಾಸೇ । ಅನಕಳಿತ ಜೋಡಿಲೀ ಅಸೇ । ಹೇ ಅದ್ವಿತೀಯ ಜೈಸೇ । ಗಗನ ಆಹೇ ॥ ೨೧೦ ॥ ತೈಸೀ ಕೀರ್ತಿ ನಿಃಸ್ಸೀಮ । ತುಝ್ಯಾ ಠಾಯೀ ನಿರುಪಮ । ತುಝೆ ಗುಣ ಉತ್ತಮ । ತಿಹಿಲೋಕೀ ॥ ೧೧ ॥ ದಿಗಂತೀಚೆ ಭೂಪತಿ । ಭಾಟ ಹೋವೂನಿ ವಾಖಾಣಿತೀ । ಜೀ ಐಕಿಲಿಯಾ ದಚಕತೀ । ಕೃತಾಂತಾದಿಕ ॥ ೧೨ ॥ ಐಕ ಐಸೀ ಮಹಿಮಾ ಘನವಟ । ಗಂಗಾ ತೈಸೀ ಚೋಖಟ । ಜಿಯಾ ದೇಖೀ ಜಗೀ ಸುಭಟ । ವಾಂಠ ಜಾಹಾಲೇ ॥ ೧೩ ॥ ತೇ ಪೌರುಷ ತುಝೇ ಅದ್ಭುತ । ಆ ಇಕೋನಿಯಾ ಹೇ ಸಮಸ್ತ । ಜಾಲೇ ಅತಿವಿರಕ್ತ । ಜೀವಿತೇಸೀ ॥ ೧೪ ॥ ಜೈಸಾ ಸಿಂಹಾಚಿಯಾ ಹಾಂಕಾ । ಯುಗಾಂತ ಹೋಯ ಮದ ಮುಖಾ । ತೈಸಾ ಕೌರವಾ ಅಶೇಖಾ । ಧಾಕ ತುಝಾ ॥ ೧೫ ॥ ಜೈಸೇ ಪರ್ವತ ವಜ್ರಾತೇ । ನಾತರೀ ಸರ್ಪಗರುಡಾತೇ । ತೈಸೇ ಅರ್ಜುನಾ ಹೇ ತೂತೇ । ಮಾನಿತೀ ಸದಾ ॥ ೧೬ ॥ ತೇ ಅಗಾಧ ಪಣ ಜಾಯೀಲ । ಮಗ ಹೀನತ್ವ ಅಂಗಾ ಯೇಈಲ । ಜರೀ ಮಾಗುತಾ ನಿಘು ಸೀಲ । ನ ಜುಂಝುತಚಿ ॥ ೧೭ ॥ ಆಣಿ ಹೇ ಪಳತಾ ಪಳ, ನೇದಿತೀ । ಧರೂನಿ ಅವಕಳಾ ಕರಿತೀ । ನ ಗಣಿತ ಕುಟೇ ಬೋಲತೀ । ಆ ಇಕತಾ ತುಜ ॥೧೮॥ ಮಗ ತೇ ವೇಳೀ ಹಿಯೇ ಘುಟಾವೇ । ಆತಾ ಲಾತೇವಣೇ ಕಾ ನ ಜುಂಝೂನಿವೇ। ಹೇ ಚಿಂತಲೇ ತರೀ ಭೋಗಾವೇ । ಮಹೀತಳ ॥ ೧೯ ॥

ಅರ್ಥ— ನಿನ್ನ ಶತ್ರುಗಳು "ಅದೋ, ಓಡಿದನು. ಓಡಿದುನು. ಇಂದು ಅರ್ಜುನನು ನಮಗೆ ಹೆದರಿ ಭೀತಿಯಿಂದ ಪಲಾಯನಮಾಡಿದನು." ಎಂದು ಕೂಗುವರು. ಅರ್ಜುನಾ ಈ ತರಹದ ದೋಷವು ನಿನಗೆ ಬರುವದು ಒಳ್ಳೆಯದೇ ? ॥ ೪ ॥ ಬೇಕಾದಷ್ಟು ಕಷ್ಟಬಟ್ಟು, ಇಲ್ಲವೇ ಪ್ರಾಣವನ್ನಾದರೂ ತ್ಯಜಿಸಿ ಜನರು ಆಕಾಶದಂತೆ ಅನುಪಮೇಯವಾದುದೂ ನಿಷ್ಪ್ರತಿಬಂಧವಾದುದೂ ಆದ ಯಾವ ಕೀರ್ತಿಯನ್ನು ಸಂಪಾದನ ಮಾಡುತ್ತಾರೋ, ॥ ೯ ॥ ಅದನ್ನು ಸಂಪಾದನಮಾಡುವ ಪ್ರಸಂಗವು ಅನಾಯಾಸವಾಗಿಯೇ ಪ್ರಾಪ್ತವಾಗಿರುತ್ತದೆ. ॥ ೨೧೦ ॥ ನಿನ್ನ ಕೀರ್ತಿಯು ಅಮರ್ಯಾದಿತವಿದ್ದು ನಿನ್ನ ಗುಣವಾದರೂ ಅದ್ವಿತೀಯವಾಗಿರುವದು. ಹೀಗೆ ಮೂರು ಲೋಕಗಳಲ್ಲಿ ನಿನ್ನ ಪ್ರಖ್ಯಾತಿಯು ಹಬ್ಬಿದೆ. ॥ ೧೧ ॥ ದೇಶದೇಶಗಳ ರಾಜರು ಸ್ತುತಿಪಾಠಕರಾಗಿ ನಿನ್ನ ಕೀರ್ತಿಯನ್ನು ಹಾಡುತ್ತಾರೆ. ಅದನ್ನು ಕೇಳಿ ಯಮ ಮೊದಲಾದವರೂ ಭಯಪಡುತ್ತಾರೆ. ॥ ೧೨ ॥ ಆ ನಿನ್ನ ಕೀರ್ತಿಯ ಮಹಿಮೆಯು ಗಂಗಾನದಿಯ ನೀರಿನಂತೆ ನಿರ್ಮಲವೂ, ಆಗಾಧವೂ ಆಗಿರುತ್ತದೆ. ಅದನ್ನು ಕೇಳಿ ಮಹಾರಥಿಗಳ ಕೀರ್ತಿಯೂ ಅಡಗಿ ಹೋಗಿರುವದು ॥೧೩॥ ಇಂಥ ನಿನ್ನ ಅದ್ಭುತ ಶೌರ್ಯದ ಮಹಿಮೆಯನ್ನು ಕೇಳಿ ಈ ಸರ್ವ ಕೌರವರು ತಮ್ಮ ಪ್ರಾಣದ ಮೇಲೆ ಉದಾರರಾಗಿರುವರು. ॥ ೧೪ ॥ ಸಿಂಹದ ಗರ್ಜನೆಯನ್ನು ಕೇಳಿದ ಕೂಡಲೇ ಮದೋನ್ಮತ್ತವಾದ ಆನೆಗೆ ಪ್ರಳಯಕಾಲದ ಭಾಸವಾಗುವಂತೆ ಈ ಎಲ್ಲ ಕೌರವರಿಗೆ ನಿನ್ನ ಕೀರ್ತಿಯನ್ನು ಕೇಳಿದೊಡನೆ ಭಯವುಂಟಾಗಿದೆ. ॥ ೧೫ ॥ ಪರ್ವತವು ವಜ್ರಕ್ಕೆ, ಹಾವು ಗರುಡನಿಗೆ ಭಯವಡುವಂತೆ ಈ ಕೌರವರು ನಿನಗೆ ಅಂಜುತ್ತಾರೆ. ॥ ೧೬ ॥ ಅಂದನೋಲೆ ಯುದ್ಧ ಮಾಡದೇ ಒಂದು ವೇಳೆ ಒಂದೆ ತಿರುಗಿದರೆ ನಿನ್ನ ದೊಡ್ಡಸ್ತಿಕೆಯು ಇಲ್ಲದಂತಾಗಿ ನಿನಗೆ ಹೀನತ್ವವು (ನೀಚತನವು) ಪ್ರಾಪ್ತವಾಗುವದು. ॥ ೧೭ ॥ ಒಳ್ಳೆದು ಓಡಿ ಹೋಗಬೇಕೆಂದರೂ ಇವರು ಹೋಗಗೊಡುವದಿಲ್ಲ. ನಿನ್ನನ್ನು ಹಿಡಿದು ತಂದು ನಿನ್ನ ಅವಮಾನವನ್ನು ಮಾಡುವರು. ದುಷ್ಟ ಶಬ್ದಗಳನ್ನಾಡುವರು. ॥ ೧೮ ॥ ಆ ಮರ್ಮಭೇದಕ ಶಬ್ದಗಳನ್ನು ಕೇಳಿ ನಿನ್ನ ಅಂತಃಕರಣವು ಒಡೆದು ಹೋಗಬಹುದು. ಅಂದಬಳಿಕ ಶೂರತನದಿಂದ ಯುದ್ಧವನ್ನೇಕೆ ಮಾಡಬಾರದು ? ಒಂದು ವೇಳೆ ಇವರನ್ನು ಜಯಿಸಿದರೆ ಪೃಥ್ವಿಯ ರಾಜ್ಯಸುಖವನ್ನು ಭೋಗಿಸುವಿ. ॥ ೧೯ ॥

ಹತೋ ವಾ ಪ್ರಾಪ್ಸ್ಯಸಿ ಸ್ವರ್ಗಂ ಜಿತ್ವಾ ವಾ ಭೋಕ್ಷ್ಯಸೇ ಮಹೀಂ ।
ತಸ್ಮಾದುತ್ತಿಷ್ಠ ಕೌಂತೇಯ ಯುದ್ಧಾಯ ಕೃತನಿಶ್ಚಯಃ ॥ ೩೭ ॥

[ಹತ ಇತಿ] ನಾತರೀ ರಣೀ ಏಥ । ಜುಂಝುತಾ ವೇಚಲೇ ಜೀವಿತ । ತರೀ ಸ್ವರ್ಗಸುಖ ಅನಕಳಿತ । ಪಾವಸೀಲ ॥ ೨೨೦ ॥ ಮ್ಹಣೋನಿಯೇ ಗೋಷ್ಟೀ । ವಿಚಾರ ನಕರೀ ಕಿರೀಟೇ । ಆತಾ

ಧನುಷ್ಯ ಘೇವೂನಿ ಉಠೀ । ಜುಂಝುನೇಗೀ ॥ ೨೧ ॥ ದೇಖೇ ಸ್ವಧರ್ಮ ಹಾ ಆಚರತಾ । ದೋಷ ನಾಶೇ ಅಸತಾ । ತುಜ ಭ್ರಾಂತಿ ಹೇ ಕವಣಚಿತ್ತಾ । ಪಾತಕಾಚೀ ॥ ೨೨ ॥ ಸಾಂಗೇ ಪ್ಲವೇಚಿ ಕಾಯ ಬುಡಿಜೇ । ಕಾ ಮಾಗಿರೀ ಜಾತಾ ಆಡಳಜೇ । ಪರೀ ವಿಪಾಯೇ ಚಾಲೋ ನೇಣಿಜೇ । ತರೀ ತೇಹೀ ಘಡೇ ॥ ೨೩ ॥ ಅಮೃತೇ ತರೀಚಿ ಮರಿಜೇ । ಜರೀ ವಿಷೇಸೀ ಸೇವಿಜೇ । ತೈಸಾ ಸ್ವಧರ್ಮೀ ದೋಷ ಪಾವಿಜೆ । ಹೇತು ಕವಣೇ ॥ ೨೪ ॥ ನ್ಹುಣೋನಿಯಾ ಪಾರ್ಥಾ । ಹೇತು ಸಾಂಡೂನಿ ಸರ್ವಥಾ । ತುಜ ಕ್ಷಾತ್ರನೃತ್ತೀಚೇ ಜುಂಝುತಾ । ಪಾಪನಾಹೀ ॥ ೨೫ ॥

ಅರ್ಥ— ಇಲ್ಲವೇ ರಣಾಂಗಣದಲ್ಲಿ ಹೋರಾಡುವಾಗ ನಿನಗೆ ಮರಣವಾದರೆ ಸಹಜವೇ ಸ್ವರ್ಗಸುಖವನ್ನು ಭೋಗಿಸುವಿ. ॥ ೨೨೦ । ಆದ್ದರಿಂದ ಅರ್ಜುನನೇ ಈ ವಿಷಯವಾಗಿ ವಿಚಾರಮಾಡುತ್ತ ಕುಳಿತುಕೊಳ್ಳುವದು ಯೋಗ್ಯವಲ್ಲ. ಆದರೆ ಇನ್ನುಮೇಲೆ ಎದ್ದೇಳು. ಕೈಯಲ್ಲಿ ಧನುರ್ಬಾಣಗಳನ್ನು ತೆಗೆದುಕೊಂಡು ಯುದ್ಧಕ್ಕೆ ಸಿದ್ಧನಾಗು. ॥ ೨೧ ॥ ಹೀಗೆ ನೋಡು– ಸ್ವಧರ್ಮದ ಆಚರಣ ಮಾಡುವದರಿಂದ ಇದ್ದ ದೋಷಗಳು ನಾಶಹೊಂದುತ್ತವೆ. ಹೀಗಿದ್ದೂ ಸ್ವಧರ್ಮಾಚರಣೆಯನ್ನು ತ್ಯಜಿಸಿ, ಪಾಪಮಯವಾದ ಈ ಭ್ರಮೆಗೆ ನಿನ್ನ ಅಂತಃಕರಣದಲ್ಲಿ ಹೇಗೆ ನೀನೆಡೆಯನ್ನು ಕೊಟ್ಟೆ ॥ ೨೨ ॥ ನೀನೇ ಹೇಳು– ನಾವಿನಲ್ಲಿ ಕುಳಿತುಕೊಳ್ಳುವವನಿಗೆ ಎಂದಾದರೂ ನೀರಿನಲ್ಲಿ ಮುಳುಗುವ ಭಯವುಂಟೇ ? ರಾಜನಮಾರ್ಗದಿಂದ ನಡೆಯುವವನೆಂದಾದರೂ ಎಡವಿ ಬೀಳಬಹುದೇ ? ನಡೆಯಲಿಕ್ಕೆ ಬರದವನು ಮಾತ್ರ ಎಡವಿಬೀಳಬಲ್ಲನು. ॥ ೨೩ ॥ ಹಾಲು ಕುಡಿಯುವದರಿಂದ ಮರಣವು ಬರುವದಿಲ್ಲ. ಆದರೆ ವಿಷವನ್ನು ಕೂಡಿಸಿ ಕುಡಿಯುವದರಿಂದ ಸಾವು ನಿಶ್ಚಯವು. ಅದೇ ಪ್ರಕಾರ ಫಲಾಶೆಯಿಂದ ಸ್ವಧರ್ಮಾಚರಣೆಯನ್ನು ಮಾಡುವವನಿಗೆ ಮಾತ್ರ ದೋಷವುಂಟಾಗುವದು. ॥ ೨೪ ॥ ಆದ್ದರಿಂದ ಅರ್ಜುನಾ ಫಲಾಪೇಕ್ಷೆಯನ್ನು ಬಿಟ್ಟುಕೊಟ್ಟು ಕ್ಷತ್ರಿಯ ಧರ್ಮದಿಂದ ಯುದ್ಧಮಾಡು. ಅಂದರೆ ಪಾತಕದ ಲೇಶವೂ ನಿನಗೆ ತಗುಲಲಾರದು. ॥ ೨೫ ॥

ಸುಖದುಃಖೇ ಸಮೇ ಕೃತ್ವಾ ಲಾಭಾ ಲಾಭೌ ಜಯಾ ಜಯೌ ।
ತತೋ ಯುದ್ಧಾಯ ಯುಜ್ಯಸ್ವ ನೈವಂ ಪಾಪಮವಾಪ್ಸ್ಯಸಿ ॥ ೩೮ ॥

[**ಸುಖದುಃಖೇ ಇತಿ**] ಸುಖೀ ಸಂತೋಷಾ ನಯಾವೇ । ದುಃಖೀ ವಿಷಾದಾ ನ ಭಜಾವೇ । ಆಣಿ ಲಾಭಾ ಲಾಭ ನ ಧರಾವೇ । ಮನಾ ಮಾಜೇ ॥ ೨೬ ॥ ಏಥ ವಿಜಯ ಪಣ ಹೋಈಲ ಕೀ ಸರ್ವಥಾ ದೇಹ ಜಾಈಲ । ಹೇ ಆಧೀಚಿ ಕಾಹೀ ಪುಢೀಲ । ಚಿಂತಾವೇ ನಾ ॥ ೨೭ ॥ ಆಪಣಯಾ ಉಚಿತಾ । ಸ್ವಧರ್ಮೇ ರಾಹಾಟತಾ । ಜೇ ಪಾವೇ ತೇ ನಿವಾಂತಾ । ಸಾಹೋನಿ ಜಾವೇ ॥ ೨೮ ॥ ಐಸೇಯಾ ಮನೇ ಹೋ ಆವೇ । ತರೀ ದೋಷ ನಘಡೇ ಸ್ವಭಾವೇ । ನ್ಹುಣೋನಿ ಆತಾ ಜುಂಝುಆವೇ । ನಿಭ್ರಾಂತ ತುವಾ ॥ ೨೯ ॥

ಅರ್ಥ— ಸುಖವಾದರೆ ಹಿಗ್ಗಬಾರದು. ದುಃಖವಾದರೆ ಕುಗ್ಗಬಾರದು. ಮನಸಿನಲ್ಲಿ ಲಾಭ ಹಾನಿಗಳನ್ನು ಸಮನೆಂದು ಭಾವಿಸಬೇಕು. ॥ ೨೬ ॥ ಈ ಯುದ್ಧ ಭೂಮಿಯಲ್ಲಿ ತನಗೆ ಜಯವು ದೊರಕೀತು ಇಲ್ಲವೇ ತಾನು ಸೋತು ಸಾಯಬಹುದು. ಮುಂದೆ ಆಗುವ ಮಾತಿನ ವಿಚಾರವನ್ನು ಮೊದಲೇ ಮಾಡುತ್ತ ಕುಳಿತುಕೊಳ್ಳಬಾರದು. ॥೨೭॥ ನಾವು ಸ್ವಧರ್ಮದಿಂದ ನಡೆಯುತ್ತಿರಲು ಸುಖ ದುಃಖಗಳು ಪ್ರಾಪ್ತವಾದರೆ ಅವುಗಳನ್ನು ಸ್ವಸ್ಥ ಚಿತ್ತದಿಂದ ಸಹನ ಮಾಡಿಕೊಳ್ಳಬೇಕು. ॥ ೨೮ ॥ ಹೀಗೆ ಮನಸಿನ ದೃಢನಿಶ್ಚಯಮಾಡುವದರಿಂದ ಸಹಜವೇ ನಿನಗೆ ಪಾಪವು ತಗಲಲಾರದು. ಆದುದರಿಂದ ನೀನು ಯುದ್ಧಕ್ಕೆ ಪ್ರಾರಂಭಮಾಡು. ॥ ೨೯ ॥

ಏಷಾ ತೇಽಭಿಹಿತಾ ಸಾಂಖ್ಯೇ ಬುದ್ಧಿರ್ಯೋಗೇ ತ್ವಿಮಾಂ ಶೃಣು ।
ಬುದ್ಧ್ಯಾಯುಕ್ತೋ ಯಯಾ ಪಾರ್ಥ ಕರ್ಮಬಂಧಂ ಪ್ರಹಾಸ್ಯಸಿ ॥ ೩೯ ॥

[**ಏಷೇತಿ**] ಹೇ ಸಾಂಖ್ಯ ಸ್ಥಿತಿ ಮುಕುಳಿತ । ಸಾಂಗಿತಲೀ ತುಜ ಏಥ । ಆತಾ ಬುದ್ಧಿ ಯೋಗ ನಿಶ್ಚಿತ । ಅವಧಾರೀ ಪಾ ॥ ೨೩೦ ॥ ಜಯಾ ಬುದ್ಧಿ ಯುಕ್ತಾ । ಜಾಲಿಯಾ ಪಾರ್ಥಾ । ಕರ್ಮಬಂಧ ಸರ್ವಥಾ । ಬಾಂಧೂ ನ ಪನೇ ॥ ೨೩೧ ॥ ಜೈಸೇ ವಜ್ರಕವಚಲೇಇಜೇ । ಮಗ ಶಸ್ತ್ರಾಂಚಾ ವರ್ಷಾವ ಸಾಹಿಜೇ । ಪರೀ ಜೈತೇಸೀ ಉರಿಜೇ । ಆಚುಂಬಿತ ॥ ೨೨ ॥

ಅರ್ಥ— ಇಲ್ಲಿಯ ವರೆಗೆ ಈ ಸಾಂಖ್ಯ ಶಾಸ್ತ್ರಕ್ಕೆ ಅನುಸರಿಸಿ ನಿನಗೆ ಜ್ಞಾನಯೋಗವನ್ನು ಸಂಕ್ಷಿಪ್ತವಾಗಿ ಹೇಳಿದೆನು. ಇನ್ನು ಮೇಲೆ (ಯಾವ ಜ್ಞಾನವನ್ನಾಶ್ರಯಿಸಲಾಗಿ ಬುದ್ಧಿಗೆ ಸ್ವರೂಪದ ಪ್ರತ್ಯಕ್ಷ ಅನುಭವವಾಗತ್ತದೋ) ಆ ಬುದ್ಧಿಯೋಗವನ್ನು ಹೇಳುವೆನು ಕೇಳು. ॥ ೨೩೦ ॥ ಪುರುಷನಿಗೆ ಬುದ್ಧಿಯೋಗವು ಪ್ರಾಪ್ತವಾದ ಕೂಡಲೇ ಅವನಿಗೆ ಮೂಲತಃ ಕರ್ಮಬಂಧದ ಬಾಧೆಯು ಆಗುವದಿಲ್ಲ ॥ ೨೩೧ ॥ ಮೈಯಲ್ಲಿ ವಜ್ರಕವಚವನ್ನು ಹಾಕಿದ ಕೂಡಲೇ ಶಸ್ತ್ರಾಸ್ತ್ರಗಳ ಗಾಯ ತಪ್ಪಿ ಜಯವು ದೊರಕಿಸುವದಕ್ಕೆ ಎಡೆಯಾಗುವಂತೆ ॥ ೨೩೨ ॥

ನೇಹಾಭಿಕ್ರಮನಾಶೋಽಸ್ತಿ ಪ್ರತ್ಯವಾಯೋ ನ ವಿದ್ಯತೇ ।
ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್ ॥ ೪೦ ॥

[**ನೇಹಾಭಿಕ್ರಮ ಇತಿ**] ತೈಸೇ ಆಹಿಕ ತರೀ ನ ನಸೇ । ಆಣಿ ಮೋಕ್ಷ ತೋ ಉರಲಾ ಅಸೇ । ಜೇಥ ಪೂರ್ವಾನುಕ್ರಮದಿಸೇ । ಚೋಖಾಳತ ॥ ೨೩ ॥ ಕರ್ಮಾಧಾರೇ ರಾಹಾಟಜೇ । ಪರೀ ಕರ್ಮ ಫಳಾನ ನಿರೀಕ್ಷಿಜೇ । ಜೈಸಾ ಮಂತ್ರಜ್ಞ ನ ಬಾಧಿಜೆ । ಭೂತ ಬಾಧಾ ॥ ೨೪ ॥ ತಿಯಾಪರೀ ಜೇ ಸುಬುದ್ಧಿ । ಆವು ಜಾಲಿಯಾ ನಿರವಧಿ । ಪಾ ಅಸತಾಚಿ ಉಪಾಧಿ । ಆಕಳೂ ನಸಕೇ ॥ ೨೫ ॥ ಜೇಥ ನ ಸಂಚರೇ ಪುಣ್ಯ ಪಾಪ । ಜೇ ಸೂಕ್ಷ್ಮ ಅತಿ ನಿಷ್ಕಂಪ । ಗುಣತ್ರ ಯಾದಿಲೇವ । ನ ಲಗತೀ ಜೇಥ ॥ ೨೬ ॥ ಅರ್ಜುನಾ ತೇ ಪುಣ್ಯವಶೇ । ಜರೀ ಅಲ್ಪ ಚೀ ಹೃದಯೀ ಬುದ್ಧೀ ಪ್ರಕಾಶೇ । ತರೀ ಅಶೇಷ ಹೀ ನಾಶೇ । ಸಂಸಾರ ಭಯ ॥ ೨೭ ॥

ಅರ್ಥ— ಬುದ್ಧಿಯೋಗದಿಂದ ಮನುಷ್ಯನಿಗೆ ಇಹಲೋಕದ ಸುಖವು ಪ್ರಾಪ್ತವಾಗುವದಲ್ಲದೆ ಮೋಕ್ಷವು ದೊರಕುವದು. ಈ ಕರ್ಮಯೋಗ ಮಾರ್ಗಕ್ಕನುಸರಿಸಿ ಒಮ್ಮೆ ಆರಂಭಿಸಿದ ಕ್ರಮವು ಮುಂದೆ ನಿಂತು ಹೋದರೂ ನಷ್ಟವಾಗಲಾರದು. ॥ ೨೩ ॥ ಕರ್ಮದ ಆಧಾರದಿಂದ ವರ್ತನವನ್ನು ಇಡಬೇಕು. ಆದರೆ ಆ ಕರ್ಮದಿಂದ ಆಗತಕ್ಕಂಥ ಫಲಾಪೇಕ್ಷೆಯನ್ನು ಹಿಡಿಯಬಾರದು. ಮಂತ್ರಜ್ಞನು ಭೂತ ಬಾಧೆಯಿಂದ ಪೀಡಿತ ನಾಗದಂತೆ ॥ ೨೪ ॥ ನಿರಾಭಿಮಾನ ಬುದ್ಧಿಯಿಂದ ಕರ್ಮ ಮಾಡುವವನಿಗೆ ಪೀಡೆಯಾಗುವದಿಲ್ಲ. ಫಲಾಭಿ ಸಂಧಿ ರಹಿತವಾಗಿ ಕರ್ಮ ಮಾಡುವದೇ ಸದ್ಬುದ್ಧಿಯು. ಇದು ಪ್ರಾಪ್ತವಾಗಿರುವ ಜನರಿಗೆ ಜನ್ಮ ಮರಣದ ಉಪಾ ಧಿಯು ಎಂದಿಗೂ ಆಗಲಾರದು. ॥ ೨೫ ॥ ಯಾವ ಬುದ್ಧಿಗೆ ಪಾಪ ಪುಣ್ಯದ ಬಾಧೆಯು ಆಗುವದಿಲ್ಲವೊ ಮತ್ತು ಯಾವದು ಅತಿಶಯ ಸೂಕ್ಷ್ಮವಿದ್ದು ನಿಶ್ಚಲವಾಗಿರುವದೋ ಅಂಥ ಬುದ್ಧಿಯನ್ನು ಸತ್ವ, ರಜ, ತಮ ಈ ಮೂರೂ ಗುಣಗಳು ಎಂದೂ ಪೀಡಿಸಲಾರವು ॥ ೨೬ ॥ ಅರ್ಜುನಾ ಇಂಥ ಸದ್ಬುದ್ಧಿಯು ಸುಕೃತದಿಂದ ಸ್ವಲ್ಪವಾದರೂ ಪ್ರಾಪ್ತವಾದರೆ ಸಾಕು. ಅದು ಸಂಸಾರದ ಭಯವನ್ನು ನಾಶವಡಿಸುತ್ತದೆ. ॥ ೨೭ ॥

ವ್ಯವಸಾಯಾತ್ಮಿಕಾ ಬುದ್ಧಿರೇಕೇಹ ಕುರುನಂದನ ।
ಬಹುಶಾಖಾಹ್ಯನಂತಾಶ್ಚ ಬುದ್ಧಯೋಽವ್ಯವಸಾಯಿನಾಮ್ ॥ ೪೧ ॥

[**ವ್ಯವ ಸಾಯೇತಿ**] ಜೈಸೀ ದೀಪ ಕಳಿಕಾ ಧಾಕುಟೇ । ಪರೀ ಬಹು ತೇಜಾತೇ ಪ್ರಗಟೇ । ತೈಸೇ ಸದ್ಬುದ್ಧೀ ಹೇ ಥೇಂಕುಟೇ । ವ್ಹಣೋ ನಯೇ ॥ ೪೮ ॥ ಪಾರ್ಥಾ ಬಹುತೀ ಪರೀ । ಹೇ ಅಪೇಕ್ಷಿಜೇ ವಿಚಾರ ಶೂರೀ । ಜೇ ದುರ್ಲಭಾ ಚರಾಚರೀ । ಸದ್ವಾಸನಾ ॥ ೪೯ ॥

ಆಣಿಕಾ ಸಾರಿಖಾ ಬಹುವಸ । ಜೈಸಾನ ಜೋಡೇ ಪರಿಸ । ಕಾ ಅಮೃತಾಚಾ ಲೇಶ । ದೈವ ಗುಣೇ ॥ ೨೪೦ ॥ ತೈಸೀ ದುರ್ಲಭ ಸದ್ ಬುದ್ಧಿ । ಜಿಯೇ ಪರಮಾತ್ಮಾಚಿ ಅವಧಿ । ಜೈಸಾ ಗಂಗೇಸೀ ಉದಧಿ । ಸಿರಂತರ ॥ ೪೧ ॥ ತೈಸೇ ಈಶ್ವರಾವಾಚುನಿ ಕಾಹೀ । ಜಿಯೇ ಆಣಿಕ ಲಾಣೇ ನಾಹೀ । ತೇ ಏಕಚಿ ಬುದ್ಧಿ ಪಾಹೀ । ಅರ್ಜುನಾ ಜನೀ ॥ ೪೨ ॥ ಯೇರ ತೇ ದುರ್ಮತೀ । ಜೇ ಬಹುಧಾ ಅಸೇ ವಿಕರತೀ । ತೇಥ ನಿರಂತರ ರಮತೀ । ಅವಿವೇಕಿಯೇ ॥ ೪೩ ॥ ವ್ಹಣೋನಿ ತಯಾ ಪಾರ್ಥಾ । ಸ್ವರ್ಗ ಸಂಸಾರ ನರಕಾವಸ್ಥಾ । ಆತ್ಮ ಸುಖ ಸರ್ವಥಾ । ದೃಷ್ಟ ನಾಹೀ ॥ ೪೪ ॥

ಅರ್ಥ— ದೀಪದ ಬೆಳಕು ಸಣ್ಣದಿದ್ದಾಗ್ಯಾದರೂ ಅದರ ಪ್ರಕಾಶವು ದೊಡ್ಡದಾಗಿ (ವಿಸ್ತಾರವಾಗಿ ಮನೆ ತುಂಬಾ) ಬೀಳುತ್ತದೆ. ಅದರಂತೆ ಸದ್‌ಬುದ್ಧಿಯು ಅಲ್ಪವಿದ್ದಾಗ್ಯಾದರೂ ಅದು ಸಣ್ಣದಿರುವದೆಂದು ತಿಳಿಯ ಬಾರದು ॥ ೩೮ ॥ ಅರ್ಜುನಾ ಜ್ಞಾನಿಗಳು ಬಹಳವಾಡಿ ಸದ್ಬುದ್ಧಿಯ ಅಪೇಕ್ಷೆಯನ್ನು ಮಾಡುತ್ತಾರೆ. ಆದರೆ ಅದು ಈ ಜಗತ್ತಿನಲ್ಲಿ ಬಹಳೇ ದುರ್ಲಭವಾಗಿರುತ್ತದೆ. ॥ ೩೯ ॥ ಬೇರೆ ಕಲ್ಲುಗಳಂತೆ ಸ್ಪರ್ಶಶಿಲೆಯು ಎಲ್ಲಿ ಬೇಕಾದಲ್ಲಿ ದೊರಿಯುವದಿಲ್ಲ. ಒಂದು ಹನಿ ಅಮೃತವು ಪ್ರಾಪ್ತವಾಗಬೇಕಾದರೆ ದೈವವು ಬಲವತ್ತರವಾಗಿರ ಬೇಕಾಗುತ್ತದೆ. ॥ ೪೦ ॥ ಗಂಗಾನದಿಯ ಪ್ರವಾಹವು ಸಮುದ್ರದಲ್ಲಿ ಪರ್ಯವಸಿತವಾಗುವಂತೆ, ಪರಮಾತ್ಮನಲ್ಲಿ ಪರಿಣತವಾಗುವ ಸದ್ಬುದ್ಧಿಯು ಬಹಳ ದುರ್ಲಭವು. ॥ ೪೧ ॥ ಆದುದರಿಂದ ಅರ್ಜುನಾ ಈಶ್ವರ ಪ್ರಾಪ್ತಿಯ ಅಂತಿಮ ಧ್ಯೇಯವಾಗಿರುವ ಜಗತ್ತಿನಲ್ಲಿಯ ಒಂದೇ ಶ್ರೇಷ್ಠವಾದ ಬುದ್ಧಿಯು. ॥ ೪೨ ॥ ಇದರ ಹೊರತು ಅನ್ಯ ಬುದ್ಧಿಗಳು (ನಿಶ್ಚಯವಿಲ್ಲದವರ ಬುದ್ಧಿಗಳು ಬಗೆಬಗೆಯಾಗಿ ಹರಿದಾಡುವವು) ಇದೇ ದುರ್ಬುದ್ಧಿಯು. ಇದರಲ್ಲಿ ವಿಕಾರಗಳು ಉದ್ಭವಿಸುವದರಿಂದ ಅವಿವೇಕಿ ಜನರು ಯಾವಾಗಲೂ ಅದರಲ್ಲಿ ಪ್ರೇಮವನ್ನಿಡುತ್ತಾರೆ. ॥ ೪೩ ॥ ಆದ್ದರಿಂದ ಅರ್ಜುನನೇ ಆ ಜನರಿಗೆ ಸ್ವರ್ಗ ಸಂಸಾರಗಳ ಮತ್ತು ನರಕದ ಪ್ರಾಪ್ತಿಯು ಆಗುತ್ತದೆ. ಆದರೆ ಆತ್ಮಸುಖವು ಅವರಿಗೆ ಕನಸಿನಲ್ಲಿ ಕೂಡ ಸಿಕ್ಕುವದಿಲ್ಲ. ॥ ೪೪ ॥

ಯಾಮಿಮಾಂ ಪುಷ್ಪಿತಾಂ ವಾಚಂ ಪ್ರವದಂತ್ಯವಿಪಶ್ಚಿತಃ ।
ವೇದವಾದರತಾಃ ಪಾರ್ಥ ನಾನ್ಯದಸ್ತೀತಿವಾದಿನಃ ॥ ೪೨ ॥
ಕಾಮಾತ್ಮಾನಃ ಸ್ವರ್ಗಪರಾ ಜನ್ಮಕರ್ಮಫಲಪ್ರದಾಂ ।
ಕ್ರಿಯಾ ವಿಶೇಷ ಬಹುಲಾಂ ಭೋಗೈಶ್ವರ್ಯ ಗತಿಂ ಪ್ರತಿ ॥ ೪೩ ॥
ಭೋಗೈಶ್ವರ್ಯ ಪ್ರಸಕ್ತಾನಾಂ ತಯಾಪಹೃತ ಚೇತಸಾಂ ।
ವ್ಯವಸಾಯಾತ್ಮಿಕಾ ಬುದ್ಧಿಃ ಸಮಾಧೌನ ವಿಧೀಯತೇ ॥ ೪೪ ॥

[ಯಾಮಿಮಾಂ ಮಿತಿ] ನೇದಾಧಾರೇ ಬೋಲತೀ । ಕೇವಳ ಕರ್ಮ ಪ್ರತಿಷ್ಠಿತೀ । ಪರೀ ಕರ್ಮ ಫಳೀ ಅಸಕ್ತೀ । ಧರೂನಿಯಾ ॥ ೪೫ ॥ ವ್ಹಣತೀ ಸಂಸಾರೀ ಜನ್ಮಿಜೇ । ಯಜ್ಞಾದಿಕ ಕರ್ಮ ಕೀಜೆ । ಮಗ ಸ್ವರ್ಗಸುಖ ಭೋಗಿಜೇ । ಮನೋಹರ ॥ ೪೬ ॥ ಏಥ ಹೇವಾ ಚೂನಿ ಕಾಹೀ । ಆಣಿಕ ಸರ್ವಥಾ ಸುಖಚಿ ನಾಹೀ । ಐಸೇ ಅರ್ಜುನಾ ಬೋಲತೀ ಪಾಹೀ । ದುರ್ಬುದ್ಧಿತೇ ॥ ೪೭ ॥ ದೇಖೇ ಕಾಮನಾ ಅಭಿಭೂತ । ಹೋವುನಿ ಕರ್ಮೀ ಅಚರತ । ತೇ ಕೇವಳ ಭೋಗೀ ಚಿತ್ತ । ದೇವೂನಿಯಾ ॥ ೪೮ ॥ ಕ್ರಿಯಾ ವಿಶೇಷೇ ಬಹುತೇ । ನ ಲೋಪಿತೀ ವಿಧೀತೇ । ನಿಪ್ರಣ ಹೋವುನಿ ಧರ್ಮಾತೇ । ಅನುಷ್ಠಿತೀ ॥ ೪೯ ॥ ಪರೀ ಏಕಚಿ ಕುಡೇ ಕರಿತೀ । ಜೇ ಸ್ವರ್ಗಕಾಮು ಮನಿ ಧರಿತೀ । ಯಜ್ಞ ಪುರುಷಾ ಜುಅಕತೀ । ಭೋಕ್ತಾಜೋ ॥ ೫೦ ॥

ಜೈಸಾ ಕರ್ಪೂರಾಚಾ ರಾಶಿ ಕೀಜೇ । ಮಗ ಅಗ್ನಿ ಲಾವೂನಿ ದೀಜೇ । ಕಾಮಿಷ್ಟಾನ್ನೀ ಸಂಚರ
ವಿಜೇ । ಕಾಳಕೂಟ ॥ ೫೧ ॥ ದೈವೇ ಅಮೃತಕುಂಭ ಜೋಡಲಾ । ತೋ ಪಾಯೇ ಹಾಣೋನಿ
ಉಲಂಡಿಲಾ । ತೈಸಾ ನಾಸಿತೀ ಧರ್ಮ ನಿಪಜಲಾ । ಹೇತುಕಪಣೇ ॥ ೫೨ ॥ ಸಾಯಾಸೇ
ಪುಣ್ಯ ಅರ್ಜಿ ಜೇ । ಮಗ ಸಂಸಾರ ಕಾ ಅಪೇಕ್ಷಿ ಜೇ । ಪುಢೇ ನೇಣತೀ ತೇ ಕಾಯ ಕೀಜೆ ।
ಆಪ್ರಾಪ್ತ ದೇಖೇ ॥ ೫೩ ॥ ಜೈಸೀ ರಾಂಧವಣೀ ರಸಸೋಯ ನಿಕೀ । ಕರೂನಿಯಾ ವೋಲೇ
ವಿಕೀ । ತೈಸಾ ಭೋಗಾ ಸಾಠೀ ಅವಿವೇಕೀ । ಧಾಡಿತೀ ಧರ್ಮ ॥ ೫೪ ॥ ಮ್ಹಣೋನಿ ಹೇ
ಪಾರ್ಥಾ । ದುರ್ಬುದ್ಧಿ ದೇಖ ಸರ್ವಥಾ । ತಯಾ ವೇದವಾದರತಾ ಮನೀವಸೇ ॥ ೫೫ ॥

ಅರ್ಥ— ವೇದಾಧಾರದಿಂದ ಸಂಭಾಷಣಮಾಡಿ ಕೇವಲ ಕರ್ಮಕಾಂಡದ ಶ್ರೇಷ್ಠತ್ವವನ್ನು ಸ್ಥಾಪನೆಮಾಡುತ್ತಾರೆ. ಆದರೆ ಆ ಕರ್ಮದ ಫಲಾಪೇಕ್ಷೆಯಮೇಲೆ ಪ್ರೀತಿಯನ್ನಿಡುತ್ತಾರೆ. ॥ ೪೪ ॥ ಮೃತ್ಯುಲೋಕದಲ್ಲಿ ಜನ್ಮ ತೆಗೆದುಕೊಂಡು ಯಜ್ಞಾದಿ ಕರ್ಮಗಳನ್ನು ಆಚರಿಸಬೇಕು. ಮತ್ತು ಪುನೋಹರವಾದ ಸ್ವರ್ಗಸುಖವನ್ನು ಭೋಗಿಸ ಬೇಕೆಂದು ಬಯಸುತ್ತಾರೆ. ॥ ೪೬ ॥ ಅರ್ಜುನಾ, ಆ ದುರ್ಬುದ್ಧಿಗಳು (ಇಂಥ ಯಜ್ಞಾದಿ ಕರ್ಮವಂನಾಚರಿಸಿ ಸ್ವರ್ಗಸುಖವನ್ನು ದೊರಕಿಸದ ಹೊರ್ತು) ನಿರಂತರ ಸುಖಕೊಡುವಂಥ ಅನ್ಯಸುಖವೇ ಇರುವದಿಲ್ಲವೆಂದು ಹೇಳುತ್ತಾರೆ. ॥ ೪೭ ॥ ಅವರು ಕೇವಲ ಭೋಗದಲ್ಲಿ ಆಸಕ್ತವುಳ್ಳವರಾಗಿ ಕರ್ಮಫಲದಮೇಲೆ ದೃಷ್ಟಿಯನ್ನಿಟ್ಟು ಸಕಾಮ ಕರ್ಮವನ್ನು ಮಾಡುತ್ತಾರೆ. ॥ ೪೮ ॥ ಮತ್ತು ಅನೇಕ ಪ್ರಕಾರದ ಅನುಷ್ಠಾನಗಳನ್ನು ವಿಧಿಯುಕ್ತವಾಗಿ ಮಾಡಿ ಅವುಗಳನ್ನು ಪೂರ್ಣಮಾಡುವದರ ದೆಸೆಯಿಂದ ಬಹು ಎಚ್ಚರಿಕೆಯಿಂದ ದರ್ಮಾಚರಣೆಯನ್ನು ಮಾಡುತ್ತಾರೆ. ॥ ೪೯ ॥ ಆದರೆ ಅವರು ಒಂದು ಕೆಟ್ಟ ಕೆಲಸವನ್ನು ಮಾಡುತ್ತಾರೆ. ಅದು ಯಾವುದೆಂದರೆ ಅರ್ಜುನಾ, ಅವರು ತಮ್ಮ ಮನಸಿನಲ್ಲಿ ಸ್ವರ್ಗಸುಖದ ಅಪೇಕ್ಷೆಯನ್ನಿಟ್ಟುಕೊಂಡು ಯಜ್ಞಭೋಕ್ತೃವಾದ ಪರಮಾತ್ಮನನ್ನೇ ಮರೆತು ಬಿಡುತ್ತಾರೆ ॥ ೫೦ ॥ ಶುಭ್ರವಾದ ಕರ್ಪೂರದ ರಾಶಿಗೆ ಬೆಂಕಿಯನ್ನು ಹಚ್ಚಿ ಅದನ್ನು ವ್ಯರ್ಥವಾಗಿ ಸುಟ್ಟುಬಿಡುವಂತೆ ಅಥವಾ ಮೃಷ್ಟಾನ್ನದಲ್ಲಿ ಕಾಲಕೂಟ ವಿಷವನ್ನು ಕೂಡಿಸಿ ಕೆಡಿಸುವಂತೆ ॥ ೫೧ ॥ ಇಲ್ಲನೇ ದೈವಯೋಗದಿಂದ ದೊರಕಿದ ಅಮೃತದ ಕೊಡವನ್ನು ಕಾಲಿನಿಂದ ಒದ್ದು ಉರುಳಿಸಿ ಬಿಡುವಂತೆ ಜನರು ಫಲಾಪೇಕ್ಷೆಯ ಆಶೆಯಿಂದ ಗಳಿಸಿದ ಧರ್ಮವನ್ನು ವ್ಯರ್ಥಮಾಡಿ ಬಿಡುತ್ತಾರೆ. ॥ ೫೨ ॥ ಬಹಳೇ ಶ್ರಮಬಟ್ಟು ಪುಣ್ಯ ಸಂಪಾದನೆ ಮಾಡಿದಮೇಲೆ ಸಂಸಾರದ ಅಪೇಕ್ಷೆಯನ್ನೇಕೆ ಮಾಡಬೇಕು ? ಆದರೆ ಮಾಡುವದೇನು ? ಅಜ್ಞಾನೀಗಳಾದ ಆ ಜನರಿಗೆ ಇದು ತಿಳಿಯುವದಿಲ್ಲ. ॥ ೫೩ ॥ ಉತ್ತಮವಾದ ಅಡಿಗೆಯನಳು ಉತ್ತಮ ಅಡಿಗೆಯನ್ನು ತಯಾರಿಸಿ ಬೇರೆ ಬೇರೆ ಪಕ್ವಾನ್ನಗಳನ್ನು ದ್ರವ್ಯದ ಆಶೆಯಿಂದ ಮಾರುತ್ತಾಳೆ. ಅದರಂತೆ ಅವಿಚಾರಿಗಳಾದ ಜನರು ಸುಖೋಪಭೋಗದದೆಶೆಯಿಂದ ಪ್ರಯತ್ನವಟ್ಟು ಗಳಿಸಿದ ಧರ್ಮವನ್ನು ಕಳೆದುಕೊಳ್ಳುತ್ತಾರೆ. ॥೫೪॥ ಆದ್ದರಿಂದ ಪಾರ್ಥಾ, ವೇದದೊಳಗೆ ಅರ್ಥ ವಾದದಲ್ಲಿ ಮಗ್ನರಾದ ಜನರ ಮನಸಿನಲ್ಲಿ ಯಾವಾಗಲೂ ದುರ್ಬುದ್ಧಿಯೇ ತುಂಬಿಕೊಂಡಿರುತ್ತದೆ. ಇದು ನಿನ್ನ ಲಕ್ಷದಲ್ಲಿರಲಿ. ॥ ೫೫ ॥

ತ್ರೈಗುಣ್ಯವಿಷಯಾ ವೇದಾ ನಿಸ್ತ್ರೈಗುಣ್ಯೋ ಭವಾರ್ಜುನ ।
ನಿರ್ದ್ವಂದ್ವೋ ನಿತ್ಯ ಸತ್ವಸ್ಥೋ ನಿರ್ಯೋಗಕ್ಷೇಮ ಆತ್ಮವಾನ್ ॥ ೪೫ ॥

[ತ್ರೈಗುಣ್ಯ ವಿಷಯಾ ಇತಿ] ತಿಹೀ ಗುಣೇ ಆವೃತ್ತ । ಹೇ ವೇದ ಜಾಣ ನಿಭ್ರಾಂತ ।
ಮ್ಹಣೋನಿ ಉಪ ನಿಷದಾದಿ ಸಮಸ್ತ । ಸಾತ್ವಿಕತೇ ॥ ೫೬ ॥ ಯೇರ ರಜತಮಾತ್ಮಕ । ಜೇಥ ನಿರೂಪಿಜೇ
ಕರ್ಮಾದಿಕ । ಜೇ ಕೇವಲ ಸ್ವರ್ಗಸೂಚಕ । ಧನುರ್ಧರಾ ॥ ೫೭ ॥ ಮ್ಹಣೋನಿ ತೂ ಜಾಣ । ಹೇ
ಸುಖದುಃಖಾಸೀಚ ಕಾರಣ । ಏಥ ಝುಣೇ ಅಂತಃಕರಣ । ರಿಘೋ ದೇಸೀ ॥ ೫೮ ॥ ತೂ ಗುಣತ್ರ
ಯಾತೇ ಅವ್ಹೇರೀ । ಮೀ ಮಾಝೀ ಹೇ ನಕರೀ । ಏಕ ಆತ್ಮಸುಖ ಅಂತರೀ । ನಿಸಂಬಝುಣೇ ॥ ೫೯ ॥

ಅರ್ಥ— ವೇದಗಳು ಸತ್ವ-ರಜ-ತಮೋ ಗುಣಗಳಿಂದ ತುಂಬಿರುವವು; ಆದ್ದರಿಂದ ಎಲ್ಲ ಉಪನಿಷತ್ತುಗಳನ್ನು ಸತ್ವಗುಣದಲ್ಲಿಯೇ ಎಣಿಸಿದ್ದಾರೆ. ॥ ೫೬ ॥ ಇನ್ನುಳಿದ ಕೆಲುವುಗಳಲ್ಲಿ ಕರ್ಮ ಉಪಾಸನಾ ಮೊದಲಾದವುಗಳ ನಿರೂಪಣವಿದ್ದರೂ ಅವೆಲ್ಲವುಗಳೂ ರಜತಮೋಗುಣಗಳಿಂದಯುಕ್ತವಾಗಿದ್ದು ಕೇವಲ ಸ್ವರ್ಗ ಸೂಚಕಗಳಾಗಿರುತ್ತವೆ. ॥ ೫೭ ॥ ಆದುದರಿಂದ ಇವುಗಳು ಸುಖದುಃಖಕ್ಕೆ ಕಾರಣವಾಗಿರುತ್ತವೆನ್ನುವದನ್ನು ನಿಶ್ಚಯವಾಗಿ ನಂಬು. ಈ ಕಾರಣದ ದೆಸೆಯಿಂದ ನಿನ್ನ ಅಂತಃಕರಣದಲ್ಲಿ ಅವುಗಳಿಗೆ ಪ್ರವೇಶವಾಗಡಕೊಡಬೇಡ. ॥ ೫೮ ॥ ನೀನು ಈ ಗುಣತ್ರಯಗಳನ್ನು ಬಿಟ್ಟು ಬಿಡು. ನಾನು ನನ್ನದು ಎನ್ನುವ ಭ್ರಾಂತಿಯನ್ನು ಬಿಟ್ಟು ಅಂತಃಕರಣದಲ್ಲಿ ಆತ್ಮಸುಖದ ಸ್ಮರಣೆಯನ್ನು ಯಾವಾಗಲೂ ಮಾಡು. ॥ ೫೯ ॥

ಯಾವಾನರ್ಥ ಉದಪಾನೇ ಸರ್ವತಃ ಸಂಪ್ಲುತೋದಕೇ ।
ತಾವಾನ್ ಸರ್ವೇಷು ವೇದೇಷು ಬ್ರಾಹ್ಮಣಸ್ಯ ವಿಜಾನತಃ ॥ ೪೬ ॥

[ಯಾವಾನಿತಿ] ಜರೀ ವೇದೇ ಬಹುತ ಬೋಲಿಲೇ । ವಿವಿಧ ಭೇದ ಸೂಚಿಲೇ । ತರ್ಹೀ ಆಪಣ ಹಿತ ಆಪುಲೇ । ತೇಚಿ ಘೇವೇ ॥ ೬೬೦ ॥ ಜೈಸಾ ಪ್ರಗಟಲಿಯಾ ಗಭಸ್ತೀ । ಅಶೇಷಹೀ ಮಾರ್ಗ ದಿಸತೀ । ತರೀ ತೇತು ಲೇಹೀ ಕಾಯ ಜಾಲಿಜತೀ । ಸಾಂಗೇ ಮಜ ॥ ೬೬೧ ॥ ಕಾ ಉದಕಮಯ ಸಕಳ । ಜರ್ಹೀ ಜಾಹಲೀ ಅಸೇ ಮಹೀತಳ । ತರೀ ಆಪಣ ಘೇಪೇ ಕೇವಳ। ಆರ್ತಿಚ ಜೋಗೇ ॥೬೬೨॥ ತೈಸೇ ಜ್ಞಾನಿಸೀ ಜೇ ಹೋತೀ । ತೇ ವೇದಾರ್ಥಾತೇ ವಿವರಿತೀ । ಮಗ ಅಪೇಕ್ಷಿತ ತೇ ಸ್ವೀಕಾರಿತೀ । ಶಾಶ್ವತ ಜೇ ॥ ೬೬೩ ॥

ಅರ್ಥ— ವೇದಗಳಲ್ಲಿ ಅದೆಷ್ಟೋ ಮಾತುಗಳನ್ನು ಹೇಳಿದ್ದರೂ ನಾನಾ ಪ್ರಕಾರದ ಭೇದಗಳನ್ನು ಸೂಚಿಸಿದ್ದರೂ ನಾವು ಮಾತ್ರ ಉಚಿತವಾದವುಗಳನ್ನೇ ಸ್ವೀಕರಿಸಬೇಕು. ॥ ೬೬೦ ॥ ಸೂರ್ಯೋದಯವಾದಮೇಲೆ ಅನೇಕ ಮಾರ್ಗಗಳು ದೃಷ್ಟಿಗೆ ಬೀಳುತ್ತವೆ ಅವೆಲ್ಲ ಪಾದಿಗಳಿಂದ ನಡೆಯಲು ನನುಗೆ ಸಾಧ್ಯವೇ ಹೇಗೆ ? ಹೇಳು ನೋಡುವಾ ! ॥ ೬೧ ॥ (ಪುತ್ತೊಂದು ಉದಾಹರಣೆಯನ್ನು ತೆಗೆದುಕೊಳ್ಳುವಾ) ಸರ್ವ ಜಗತ್ತೇ ನೀರಿನಿಂದ ತುಂಬಿ ತುಳುಕುತ್ತಿದ್ದರೂ ನಮಗೆ ಬೇಕಾದಷ್ಟು ನೀರನ್ನು ತೆಗೆದುಕೊಳ್ಳಬೇಕಷ್ಟೇ ? ॥ ೬೨ ॥ ಅದರಂತೆಯೇ ಜ್ಞಾನಿಗಳಾದವರು ಆ ವೇದಾರ್ಥದ ವಿಚಾರವನ್ನು ಮಾಡಿ, ಅಪೇಕ್ಷಿತವಾದ ಶಾಶ್ವತ (ಅಖಂಡ ಕಲ್ಯಾಣಕರವಾದ) ಬ್ರಹ್ಮವನ್ನಷ್ಟೇ ಸ್ವೀಕಾರ ಮಾಡುತ್ತಾರೆ. ॥ ೬೩ ॥

ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ ।
ಮಾ ಕರ್ಮ ಫಲಹೇತುರ್ಭೂರ್ಮಾತೇ ಸಂಗೋಽಸ್ತ್ವಕರ್ಮಣಿ ॥ ೪೭ ॥

[ಕರ್ಮಣ್ಯೇ ವಾಧಿಕಾರಸ್ತೇ ಇತಿ] ಮ್ಹಣೋನಿ ಆ ಇಕೇ ಪಾರ್ಥಾ । ಯಾಚಿಪರೀ ಪಾಹತಾ। ತುಜ ಉಚಿತ ಹೋಯ ಅತಾ । ಸ್ವಕರ್ಮ ಹೇ ॥ ೬೪ ॥ ಆಮ್ಹೀ ಸಮಸ್ತಹೀ ವಿಚಾರಿಲೇ । ತವ ಐಸೇಚಿ ಹೇ ಮನಾ ಆಲೇ । ಜೇ ನ ಸಾಂಡಿಜೇ ತುವಾ ಆಪುಲೇ । ವಿಹಿತ ಕರ್ಮ ॥ ೬೫ ॥ ಪರೀಕರ್ಮ ಫಳೀ ಆಸ ನ ಕರಾವೀ । ಆಣಿ ಅಕರ್ಮೀ ಸಂಗತೀ ನ ವ್ಹಾವೀ । ಹೇ ಸತ್ಕ್ರಿಯಾಚಿ ಆಚರಾಪೀ । ಹೇತೂವಿಣ ॥ ೬೬ ॥

ಅರ್ಥ— ಆದುದರಿಂದ ಪಾರ್ಥಾ ಕೇಳು– ಈ ಸರ್ವಮಾತಿನ ವಿಚಾರ ಮಾಡಿ ನೋಡಿದರೆ ನಿನಗೆ ಸ್ವಧರ್ಮವೇ ಉಚಿತವಾದದ್ದಿರುತ್ತದೆ. ॥ ೬೪ ॥ ನಾವು ಎಲ್ಲ ಮಾತಿನ ವಿಚಾರಮಾಡಿ ನೋಡಿದ ಮೇಲೆ ' ನಮ್ಮ ಕರ್ತವ್ಯವನ್ನು ಬಿಡಲಾರದೆಂದೇ ' ನಮ್ಮ ಮನಸಿಗೆ ಹೊಳೆಯುವದು. ॥ ೬೫ ॥ ಕರ್ಮಫಲದ ಅಪೇಕ್ಷೆಯನ್ನು ಬಿಟ್ಟು ನಿಷಿದ್ಧ ಕರ್ಮದ ಅಂಗೀಕಾರವನ್ನು ತೊರೆದು ಸತ್ಕರ್ಮಗಳನ್ನೇ ನಿಷ್ಕಾಮ ಬುದ್ಧಿಯಿಂದ ಆಚರಿಸಬೇಕು. ॥ ೬೬ ॥

ಯೋಗಸ್ಥಃ ಕುರು ಕರ್ಮಾಣಿ ಸಂಗಂ ತ್ಯಕ್ತ್ವಾ ಧನಂಜಯ ।
ಸಿದ್ಧ್ಯ ಸಿದ್ಧ್ಯೋಃ ಸಮೋ ಭೂತ್ವಾ ಸಮತ್ವಂ ಯೋಗ ಉಚ್ಯತೇ ॥ ೪೮ ॥

[ಯೋಗಸ್ಥ ಇತಿ] ತೂ ಯೋಗಯುಕ್ತ ಹೋವುನೀ । ಫಳಾಚಾ ಸಂಗ ಟಾಕುನೀ । ಮಗ ಅರ್ಜುನಾಚಿತ್ಯ ದೇವುನೀ । ಕರೀ ಕರ್ಮೆ ॥ ೧೬೭ ॥ ಪರೀ ಆವರಿಲೀ ಕರ್ಮ ದೈವೇ । ಜರೀ ಸವಾಸ್ತೀತೇ ಪಾವೇ । ತರೀ ವಿಶೇಷೇ ತೇಧ ತೋಷಾವೇ । ಹೇ ಓ ನಕೋ ॥ ೧೬೮ ॥ ಕೀ ನಿಮಿತ್ತೇ ಕೋಣೇ ಏಕೇ । ತೇ ಸಿದ್ಧೀ ನ ವಚತ ರಾಕೇ । ತರೀ ತೇಥಿಚೇನಿ ಅಪರಿತೋಷೇ । ಕ್ಷೋಭಾ ವೇನಾ ॥ ೪೯ ॥ ಆಚರತಾ ಸಿದ್ಧೀ ಗೇಲೇ । ತರೀ ಕಾಜಾಚಿ ಕೀರ ಆಲೆ । ಪರೀ ತೇಲಿಯಾ ಹೀ ಸಗುಣಜಾಹಲೇ । ಐಸೇ ಚಿ ಮಾನೇ ॥ ೪೦ ॥ ದೇಖೇ ಜೇತುಲಾಲೇ ಕರ್ಮ ನಿಪಜೇ । ತೇ ತುಲೇ ಆದಿಪುರುಷೀ ಸಮರ್ಪಿಜೇ । ತರೀ ಪರಿಪೂರ್ಣ ಸಹಜೇ । ಜಾಹಲೇ ಜಾಣೇ ॥ ೪೧ ॥ ದೇಖೇ ಸತಾಸತ ಕರ್ಮೀ । ಹೇ ಚೇ ನರಸೇಪಣ ಮನೋಧರ್ಮೀ । ತೇಚಿ ಯೋಗಸ್ಥಿತೀ ಉತ್ತಮೀ । ಪ್ರಶಂಸಿಜೇ ।೪೨॥

ಅರ್ಥ— ಅರ್ಜುನಾ, ನೀನು ಯೋಗಯುಕ್ತನಾಗಿ ಫಲದ ಅಪೇಕ್ಷೆಯನ್ನು ಬಿಟ್ಟು ಮನಃಪೂರ್ವಕವಾಗಿ ಕರ್ಮಾಚರಣೆಯನ್ನು ಮಾಡಬೇಕು. ॥ ೬೭ ॥ ಆದರೆ ಆರಂಭಮಾಡಿದ ಕರ್ಮವು ದೈವಯೋಗದಿಂದ ಪೂರ್ಣವಾದರೂ ಅದರ ಬಗ್ಗೆ ಸಂತೋಷ ಹಚ್ಚಿಕೊಳ್ಳಬಾರದು. ॥ ೬೮ ॥ ಇಲ್ಲವೇ ಯಾವದಾದರೊಂದು ಕಾರಣದಿಂದ ಆ ಕರ್ಮವು ಸಿದ್ಧಿಗೆ ಹೋಗದೇ ಹಾಗೇ ನಿಂತು ಬಿಟ್ಟರೆ ಆ ಬಗ್ಗೆ ಮನಸಿನಲ್ಲಿ ಅಸಂತೋಷವನ್ನು ಪಡಲಾರದು ॥೬೯॥ ಕರ್ಮಮಾಡುವಾಗ್ಗೆ ಒಂದುವೇಳೆ ಪೂರ್ಣವಾದರೆ ನಿಜವಾಗಿ ಅದು ಉಪಯೋಗವೇ ಆಗುವದು. ಆದರೆ ಒಂದು ವೇಳೆ ವಿಘ್ನ ಬಂದು ಅಪೂರ್ತಿಯಾಗಿ ಉಳಿದರೆ ಒಳಿತೇ ಆಯಿತೆಂದು ತಿಳಿದುಕೊಳ್ಳಬೇಕು. ॥ ೭೦ ॥ ಆದ ಕರ್ಮವನ್ನೆಲ್ಲ ಆದಿ ಪುರುಷನಾದ ಶ್ರೀಹರಿಗೆ ಸಮರ್ಪಿಸಬೇಕು. ಅಂದರೆ ಸಹಜವೇ ಆ ಕರ್ಮವು ಪರಿಪೂರ್ಣವಾಗುವದು. ॥ ೭೧ ॥ ಸಿದ್ಧಿ ಅಸಿದ್ಧಿಗಳಲ್ಲಿ ಮನಸಿನ ಸಮತ್ವವಾಗಿರುವದೇ ನಿಜವಾದಯೋಗವೆಂದು (ನಿಷ್ಕಾಮ ಕರ್ಮಯೋಗ ಜ್ಞಾನಿ ಪುರುಷರು ಪ್ರಶಂಶಿಸುತ್ತಾರೆ. ॥ ೭೨ ॥

ದೂರೇಣ ಹ್ಯವರಂ ಕರ್ಮ ಬುದ್ಧಿಯೋಗಾದ್ಧನಂಜಯ ।
ಬುದ್ಧೌ ಶರಣಮನ್ವಿಚ್ಛ ಕೃಪಣಾಃ ಫಲಹೇತವಃ ॥ ೪೯ ॥
ಬುದ್ಧಿಯುಕ್ತೋ ಜಹಾತೀಹ ಉಭೇ ಸುಕೃತ ದುಷ್ಕೃತೇ ।
ತಸ್ಮಾದ್ಯೋಗಾಯ ಯುಜ್ಯಸ್ವಯೋಗಃ ಕರ್ಮಸು ಕೌಶಲಂ ॥ ೫೦ ॥

[ದೂರೇಣೇತಿ] ಅರ್ಜುನಾ ಸಮತ್ವ ಚಿತ್ತಾಚೆ । ತೇಚಿಸಾರ ಜಾಣ ಯೋಗಾಚೆ । ಚೇಥ ಮನ ಆಣಿ ಬುದ್ಧೀಚೆ । ಐಕ್ಯ ಅಥಿ ॥ ೭೩ ॥ ತೋ ಬುದ್ಧಿಯೋಗ ಏವರಿತಾ । ಬಹುತೇ ಪಾಡೇ ಪಾರ್ಥಾ । ದಿಸೇಹಾ ಅರುತಾ । ಕರ್ಮಯೋಗ ॥ ೭೪ ॥ ಪರೀ ತೋಚಿ ಕರ್ಮ ಆಚರಿಜೆ । ತರೀಜ ಹಾ ಯೋಗ ಪಾವಿಜೆ । ಜೇ ಕರ್ಮಶೇಷ ಸಹಜೇ । ಯೋಗಸ್ಥಿತೀ ॥ ೭೫ ॥ ಮ್ಹಣೋನಿ ಬುದ್ಧಿಯೋಗ ಸಧರ । ತೇಥ ಅರ್ಜುನಾ ಹೋ ಈ ಸ್ಥಿರ । ಮನೇ ಕರೀ ಅಪ್ಪೇರ । ಫಳ ಹೇ ತೂಚಾ ॥ ೭೬ ॥ ಜೇ ಬುದ್ಧಿಯೋಗಾ ಯೋಜಿಲೇ । ತೇಚಿ ಪಾರಂಗತ ಜಾಹಲೇ । ಇಹೀ ಉಭಯ ಸಂಬಂಧೀ ಸಾಂಡಿಲೀ । ಪಾಪ ಪುಣ್ಯೇ ॥ ೭೭ ॥

ಅರ್ಥ— ಅರ್ಜುನಾ ಬುದ್ಧಿಮನಸ್ಸುಗಳ ಐಕ್ಯವಿರುವಲ್ಲಿಯೇ ಚಿತ್ತದ ಸಮದೃಷ್ಟಿಯೂ ಇರುತ್ತದೆ. ಮತ್ತು ಅದೇ ಯೋಗದ ಸಾರವೂ ಆಗಿರುವದು. ॥ ೭೩ ॥ ಪಾರ್ಥಾ, ವಿಚಾರಾಂತ್ಯದಲ್ಲಿ ಬುದ್ಧಿಯೋಗದ ಮತ್ತು ಕರ್ಮಯೋಗದ ತುಲನೆ ಮಾಡುವದರಿಂದ (ಅಹಂಕಾರಯುಕ್ತ ಫಲಾಪೇಕ್ಷೆಯಿಂದ ಮಾಡಿದ) ಕ

ಯೋಗವು ಕಡಿಮೆ ಯೋಗ್ಯತೆಯದಾಗುತ್ತದೆ. ॥ ೭೪ ॥ ಆದರೆ ಫಲದ ಅಪೇಕ್ಷೆಯನ್ನುಳಿದು ಆ ಕರ್ಮದ ಆಚರಣೆ ಮಾಡುವದರಿಂದಲೇ ಬುದ್ಧಿಯೋಗವು ಸಾಧ್ಯವಾಗುತ್ತದೆ. ಮತ್ತು ಈ ಪ್ರಕಾರ ಕರ್ಮಸಿದ್ಧಿಯಾದರೆ ಅದಕ್ಕೆ ಯೋಗಸ್ಥಿತಿಯೆನ್ನುತ್ತಾರೆ. ॥ ೭೫ ॥ ಆದ್ದರಿಂದ ಅರ್ಜುನಾ ಬುದ್ಧಿಯೋಗವೇ ಯೋಗ್ಯವಾದುದಾಗಿರುವದರಿಂದ ಅಲ್ಲಿಯೇ ನೀನು ನಿನ್ನ ಮನಸ್ಸನ್ನು ಧೃಡವಾಗಿ ನಿಲ್ಲಿಸು. ಆದರೆ ಮನಸ್ಸಿನಲ್ಲಿ ಫಲಪ್ರಾಪ್ತಿಯ ವಿಷಯದಲ್ಲಿ ಆಶೆಯಸ್ಸಿಡಬೇಡ. ॥ ೭೬ ॥ ಬುದ್ಧಿಯೋಗದ ಕಡೆಗೆ ಪ್ರವೃತ್ತಿಯಿರುವವರೇ ಮುಕ್ತರಾಗಿ ಪಾಪ ಪುಣ್ಯಗಳ ಬಂಧನಗಳಿಂದ ಬಿಡುಗಡೆ ಹೊಂದುತ್ತಾರೆ. ॥ ೭೭ ॥

ಕರ್ಮಜಂ ಬುದ್ಧಿಯುಕ್ತಾಹಿ ಫಲಂ ತ್ಯಕ್ತ್ವಾ ಮನೀಷಿಣಃ ।
ಜನ್ಮಬಂಧ ವಿನಿರ್ಮುಕ್ತಾಃ ಪದಂ ಗಚ್ಛಂತ್ಯನಾಮಯಂ ॥ ೫೧ ॥

[ಕರ್ಮ ಜಮಿತಿ] ತೇ ಕರ್ಮೀ ತರೀ ವರ್ತತೀ । ಪರೀ ಕರ್ಮ ಫಳಾ ನಾತಳತೀ । ಆಣೀ ಯಾತಾಯಾತೀನ ಲೋಪತೀ । ಅರ್ಜುನಾ ತಯಾ ॥ ೭೮ ॥ ಮಗ ನಿರಾಮಯ ಭರಿತ । ಪಾವತೀ ಪದ ಅಚ್ಯುತ । ತೇ ಬುದ್ಧಿಯೋಗ ಯುಕ್ತ । ಧನುರ್ಧರಾ ॥ ೭೯ ॥

ಅರ್ಥ— ಅರ್ಜುನಾ, ಕರ್ಮವನ್ನು ಮಾಡಿಯೂ ಆ ಕರ್ಮದ ಫಲಾಪೇಕ್ಷೆಯನ್ನು ಬಯಸದಿರುವವನು ಜನನ ಮರಣಗಳ ಬಾಧೆಯಿಂದ ಮುಕ್ತನಾಗುತ್ತಾನೆ. ॥ ೭೮ ॥ ಧನುರ್ಧರಾ, ಆಮೇಲೆ ಅವರು ಬುದ್ಧಿಯೋಗ ಯುಕ್ತರಾಗಿ ಬ್ರಹ್ಮಾನಂದದ ಸುಖದಿಂದ ತುಂಬಿದ, ನಾಶರಹಿತವಾದ ಪದವನ್ನು ಹೊಂದುತ್ತಾರೆ. ॥ ೭೯ ॥

ಯದಾ ತೇ ಮೋಹಕಲಿಲಂ ಬುದ್ಧಿರ್ವ್ಯತಿತರಿಷ್ಯತಿ ।
ತದಾ ಗಂತಾಸಿ ನಿರ್ವೇದಂ ಶ್ರೋತವ್ಯಸ್ಯ ಶ್ರುತಸ್ಯಚ ॥ ೫೨ ॥

[ಯದಾ ತೇ ಮೋಹೇತಿ] ತೂ ಐಸಾ ತೈ ಹೋಸೀ । ಜೈಮೋಹಾತೇ ಯಯಾ ಸಾಂಡಿಸೀ । ಆಣಿ ವೈರಾಗ್ಯ ಮಾನಸೀ । ಸಂಚರೇಲ ॥ ೭೮೦ ॥ ಮಗ ನಿಷ್ಕಳಂಕ ಗಹನ । ಉಪಜೇಲ ಆತ್ಮಜ್ಞಾನ । ತೇಣೇ ನಿಚಾಡ ಹೋಈಲ ಮನ । ಅಪೈಸೇ ತುಝೆ ॥ ೭೮೧ ॥ ತೇಥ ಆಣಿಕ ಕಾಹೀ ಜಾಣಾವೇ । ಕಾ ಮಾಗೀಲ ತೇಸ್ಮರಾವೇ । ಹೇ ಅರ್ಜುನಾ ಆಳುವೇ । ಪಾರುಷೇಲ ॥ ೮೨ ॥

ಅರ್ಥ— ನೀನು ಈ ಮೋಹದ ತ್ಯಾಗವನ್ನು ಮಾಡಿದೊಡನೆ ನಿನ್ನ ಮನಸಿನಲ್ಲಿ ವೈರಾಗ್ಯದ ಪ್ರವೇಶವಾಗುವದು. ॥ ೭೮೦ ॥ ಆ ಯೋಗದಿಂದ ನಿರ್ದುಷ್ಟವಾದ ಮತ್ತು ಅಗಾಧವಾದ ಆತ್ಮಜ್ಞಾನವು ಉದ್ಭವಿಸಿ ನಿನ್ನ ಅಂತಃಕರಣವು ಸರ್ವ ಪ್ರಕಾರದಿಂದಲೂ ನಿರಿಚ್ಛವಾಗುವದು. ಆಗ ನಿನಗೆ ಚ್ಯುತವಾಗದ ಶಾಶ್ವತವಾದ ಪರಮಪದವು ಪ್ರಾಪ್ತವಾಗುವದು. ॥ ೭೮೧ ॥ ಈ ಪರಮಪದ ಪ್ರಾಪ್ತವಾದ ಮೇಲೆ ಭೂತಭವಿಷ್ಯಗಳೆಲ್ಲ ಅಲ್ಲಿಂದಲ್ಲಿಯೇ ಅಡಗಿ ಹೋಗುವವು. ॥ ೮೨ ॥

ಶ್ರುತಿ ವಿಪ್ರತಿಪನ್ನಾ ತೇ ಯದಾ ಸ್ಥಾಸ್ಯತಿ ನಿಶ್ಚಲಾ ।
ಸಮಾಧಾವ ಚಲಾ ಬುದ್ಧಿಸ್ತದಾಯೋಗ ಮವಾಪ್ಸ್ಯಸಿ ॥ ೫೩ ॥

[ಶ್ರುತೀತಿ] ಇಂದ್ರಿಯಾಂಚಿಯಾ ಸಂಗತೀ । ಜಿಯೇ ಪಸರ ಹೋತಸೇ ಮತೀ । ತೇ ಸ್ಥಿರ ಹೋಈಲ ಮಾಗುತೀ । ಆತ್ಮ ಸ್ವರೂಪೀ ॥ ೮೩ ॥ ಸಮಾಧಿ ಸುಖೀ ಕೇವಳ । ಜೈ ಬುದ್ಧಿ ಹೋಈಲ ನಿಶ್ಚಳ । ತೈಪಾವಸೀ ತೂ ಸಕಳ । ಯೋಗಸ್ಥಿತಿ ॥ ೮೪ ॥

ಅರ್ಥ— ಇಂದ್ರಿಯಗಳ ಸಂಗತಿಯಿಂದ ಚಂಚಲ ವೃತ್ತಿಯನ್ನು ಹೊಂದಿದ ಬುದ್ಧಿಯು ಪುನ್ಹಾ ಆತ್ಮ ಸ್ವರೂಪದಲ್ಲಿ ಸ್ಥಿರವಾದೀತು. ॥ ೬೩ ॥ ಆಗ್ಗೆ ನಿನ್ನ ಬುದ್ಧಿಯು ನಿಶ್ಚಲವಾಗಿ ಸಮಾಧಿ ಸುಖದಲ್ಲಿ (ಆತ್ಮಸುಖದಲ್ಲಿ) ಸ್ಥಿರವಾಗುವದು. ಅದೇಕಾಲಕ್ಕೆ ನಿನಗೆ ಸರ್ವಯೋಗ ಸ್ಥಿತಿಯು ಪ್ರಾಪ್ತವಾಗುವದು. ॥ ೬೪ ॥

ಅರ್ಜುನ ಉವಾಚ—

ಸ್ಥಿತ ಪ್ರಜ್ಞಸ್ಯ ಕಾ ಭಾಷಾ ಸಮಾಧಿಸ್ಥಸ್ಯ ಕೇಶವ ।
ಸ್ಥಿತಧೀಃ ಕಂ ಪ್ರಭಾಷೇತ ಕಮಾಸೀತ ವ್ರಜೇತ ಕಂ ॥ ೫೪ ॥

[ಅರ್ಜುನ ಉವಾಚ] ತೇಥ ಅರ್ಜುನ ಮ್ಹಣೇ ದೇವಾ । ಹಾಚಿ ಅಭಿಪ್ರಾವೋ ಆಳವಾ । ಮೀ ಪುಸೇನ ಆತಾಸಾಂಗಾವಾ । ಕೃಪಾನಿಧಿ ॥ ೬೫ ॥ ಮಗ ಅಚ್ಯುತ ಮ್ಹಣೇಸುಬೇ ಜೇ ಕಿರೀಟೇ ತುಜ ನಿಕೇ । ತೇ ಪೂಸ ಪಾ ಉನ್ಮೇಬೇ । ಮನಾಚೇನಿ ॥ ೬೬ ॥ ಯಾ ಬೋಲಾ ಪಾರ್ಥೆ । ಮ್ಹಣೇತಲೇ ಸಾಂಗ ಪಾ ಶ್ರೀಕೃಷ್ಣಾತೇ । ಕಾಯ ಮ್ಹಣಿಪೇ ಸ್ಥಿತ ಪ್ರಜ್ಞಾತೇ । ವೋಳಖೋಕೇವೀ ॥೬೭॥ ಆಣಿ ಸ್ಥಿರಬುದ್ಧಿ ಜೋ ಮ್ಹಣಿಜೇ । ತೋ ಕೈಸಿಯಾ ಚಿನ್ಹೀ ಜಾಣಿಜೇ । ಜೋ ಸಮಾಧಿಸುಖ ಭುಂಜೇ । ಅಖಂಡಿತ ॥೬೮॥ ತೋ ಕವಣೇ ಸ್ಥಿತೀ ಅಸೇ । ಕೈಸೇನಿ ರೂಪೀ ವಿಲಸೇ । ದೇವಾ ಸಾಂಗಾವೇ ಹೇ ಐಸೇ । ಲಕ್ಷ್ಮೀಪತೀ ॥ ೬೯ ॥ ತವ ಪರಬ್ರಹ್ಮ ಅವತರಣ । ಜೋಷಡ್ ಗುಣಾಧಿ ಕರಣ । ತೋಕಾಯ ತೇಥ ಶ್ರೀ ನಾರಾಯಣ । ಬೋಲತ ಅಸೇ ॥ ೭೦ ॥

ಅರ್ಥ— ಆ ಸಮಯದಲ್ಲಿ ಅರ್ಜುನನು ಅನ್ನುತ್ತಾನೆ– ದೇವಾ, ಈ ವಿಷಯವಾಗಿ ನಾನು ಸ್ಪಷ್ಟವಾಗಿ ಯಾವ ಮಾತಿನಬಗ್ಗೆ ಕೇಳುತ್ತೇನೆ, ಅದನ್ನು ಕೃಪೆಯಿಂದ ನನಗೆ ಹೇಳಬೇಕು. ॥ ೬೫ ॥ ಆ ಮೇಲೆ ಶ್ರೀ ಕೃಷ್ಣನು ಅನ್ನುತ್ತಾನೆ– ಅರ್ಜುನಾ, ನಿನಗೆ ಯೋಗ್ಯಕಂಡದ್ದನ್ನು ಸಂತೋಷದಿಂದ ಕೇಳು ॥ ೬೬ ॥ ಹೀಗೆ ಅಂದಮೇಲೆ ಅರ್ಜುನನು ಶ್ರೀಕೃಷ್ಣನಿಗೆ ಅನ್ನುತ್ತಾನೆ– ಸ್ಥಿತ ಪ್ರಜ್ಞ (ಸ್ಥಿರಬುದ್ಧಿ) ನೆಂದು ಯಾರಿಗೆ ಅನ್ನಬೇಕು ? ಅವನನ್ನು ಹೇಗೆ ಗುರುತಿಸಬೇಕು ? ಇದನ್ನು ಒಡೆದು ಕಾಣುವಂತೆ ನೀನು ನನಗೆ ಸ್ಪಷ್ಟವಾಗಿ ಹೇಳು. ॥ ೬೭ ॥ ಯಾವನಿಗೆ ಸ್ಥಿರಬುದ್ಧಿಯುಳ್ಳವನೆಂದೆನ್ನುತ್ತಾರೆಯೋ ಮತ್ತು ಯಾವನು ನಿರಂತರ ಸಮಾಧಿ ಸುಖವನ್ನು ಅನುಭವಿಸುತ್ತಾನೆಯೋ ಅವನನ್ನು ಯಾವ ಚಿಹ್ನದಿಂದ ಗುರುತಿಸಬೇಕು ? ॥ ೬೮ ॥ ದೇವಾ, ಲಕ್ಷ್ಮೀಪತಿಯೇ, ಅವನಿರುವ ಸ್ಥಿತಿ ಹೇಗೆ ? ಅವನ ರೂಪವು ಹೇಗೆ ? ಅವನು ವರ್ತನ ಮಾಡುವ ರೀತಿಯು ಹೇಗೆಂಬುದನ್ನು ಕೃಪಾಮಾಡಿ ನನಗೆ ಹೇಳಬೇಕು॥೬೯॥ ಆಗ್ಗೆ ಷಡ್ಗುಣೈಶ್ವರ್ಯ ಸಂಪನ್ನನೂ ಸರ್ವಗುಣದ ಅಧಿಷ್ಠಾನನೂ ಪರಬ್ರಹ್ಮಾವತಾರನೂ ಆದ ಭಗವಾನ ಶ್ರೀಕೃಷ್ಣ ಪರಮಾತ್ಮನು ಮಾತನಾಡಲಾರಂಭಿಸಿದನು. ॥ ೭೦ ॥

ಶ್ರೀ ಭಗವಾನುವಾಚ—

ಪ್ರಜಹಾತಿ ಯದಾ ಕಾಮಾನ್ಸರ್ವಾನ್ ಪಾರ್ಥ ಮನೋಗತಾನ್ ।
ಆತ್ಮನ್ಯೇವಾತ್ಮನಾ ತುಷ್ಟಃ ಸ್ಥಿತಪ್ರಜ್ಞಸ್ತದೋಚ್ಯತೇ ॥ ೫೫ ॥

[ಶ್ರೀ ಭಗವಾನುವಾಚ ಇತಿ] ಮ್ಹಣೇ ಅರ್ಜುನಾ ಪರಿಯೇಸೀ । ಜೋ ಹಾ ಅಭಿಲಾಷ ಪ್ರೌಢ ಮಾನಸೀ । ತೋ ಅಂತರಾಯ ಸ್ವ ಸುಖೇಸೀ । ಕರೀತ ಅಸೇ ॥ ೭೧ ॥ ಜೋ ಸರ್ವದಾನಿತ್ಯ ತೃಪ್ತ । ಅಂತಃಕರಣ ಭರಿತ । ಪರೀ ವಿಷಯಾ ಮಾಜೀ ಪತಿತ । ಜೇಣೇ ಸಂಗೇ ಕೀಜೇ ॥ ೭೨ ॥ ತೋ ಕಾಮ ಸರ್ವಥಾ ಜಾಯೀ । ಜಯಾಚ ಅತ್ಮಸಂತೋಷೀ ಮನ ರಾಹೇ । ತೋಚಿ ಸ್ಥಿತಪ್ರಜ್ಞ ಹೋಯೀ । ಪುರುಷ ಜಾಣೇ ॥ ೭೩ ॥

ಅರ್ಥ ಶ್ರೀಕೃಷ್ಣನು ಅನ್ನುತ್ತಾನೆ:— ಅರ್ಜುನನೇ ಕೇಳು; ಮನಸ್ಸಿನಲ್ಲಿ ಬಲವತ್ತರವಾದ ವಿಷಯಾಸಕ್ತಿ ಉಂಟಾದರೆ ಅದು ಆತ್ಮಸುಖದಲ್ಲಿ ವಿಘ್ನವನ್ನುಂಟು ಮಾಡುತ್ತದೆ. ೬೧॥ ಸದಾ ತೃಪ್ತನಿರುವವನ ಅಂತಃಕರಣವು (ಯಾವಾಗಲೂ ಆನಂದದಿಂದ) ತುಂಬಿಕೊಂಡಿರುತ್ತದೆ. ಇಂಥ ಆತ್ಮಜ್ಞಾನಿಯು ಕೂಡಾ (ಕಾಮದ) ಸಂಗತಿಯಿಂದ ವಿಷಯದಲ್ಲಿ ವತನ ಹೊಂದುತ್ತಾನೆ. ॥ ೬೨ ॥ ನಿತ್ಯತೃಪ್ತನೂ, ಆತ್ಮಜ್ಞಾನಿಯೂ, ಕಾಮನಾನಿವೃತ್ತನೂ ಸ್ವಾನಂದರತನೂ ಆದ ಮನುಷ್ಯನೇ "ಸ್ಥಿತಪ್ರಜ್ಞ"ನು ಅವನೇ ಸ್ಥಿರಬುದ್ಧಿಯುಳ್ಳವನು. ॥ ೬೩ ॥

ದುಃಖೇಷ್ವನುದ್ವಿಗ್ನಮನಾಃ ಸುಖೇಷು ವಿಗತಸ್ಪೃಹಃ ।
ವೀತರಾಗಭಯಕ್ರೋಧಃ ಸ್ಥಿತಧೀರ್ಮುನಿರುಚ್ಯತೇ ॥ ೫೬ ॥

[ದುಃಖೇಷ್ವಿತಿ] ನಾನಾ ದುಃಖೀ ಪ್ರಾಪ್ತೀ । ಜಯಾ ಉದ್ವೇಗ ನಾಹೀ ಚಿತ್ತೀ । ಆಣಿ ಸುಖಾಚಿಯಾ ಆರ್ತಿಗೆ । ಅಡಪೈಚಿ ಜೀನಾ ॥ ೪೪॥ ಅರ್ಜುನಾ ತಯಾಚ್ಯಾ ಠಾಯೀ । ಕಾಮ ಕ್ರೋಧ ಸಹಜೇ ನಾಹೀ । ಆಣಿ ಭಯಾತೇ ನೇಣೇ ಕಹೀ । ಪರಿಪೂರ್ಣತೋ ॥ ೪೫ ॥ ಐಸಾ ಜೋ ನಿರವಧಿ । ಜಾಣಪಾ ಸ್ಥಿರಬುದ್ಧೀ । ಜೋ ನಿರಸೂನಿ ಉಪಾಧೀ । ಭೇದ ರಹಿತ ॥೪೬॥

ಅರ್ಥ— ನಾನಾ ಪ್ರಕಾರದ ದುಃಖಗಳು ಪ್ರಾಪ್ತವಾಗುವದರಿಂದ ಯಾವನ ಮನಸ್ಸಿಗೆ ಕಷ್ಟವಾಗುವದಿಲ್ಲವೋ ಮತ್ತು ಯಾವನು ಸುಖದ ಅಪೇಕ್ಷೆಯಿಂದ ಬದ್ಧನಾಗುವದಿಲ್ಲವೋ ॥ ೪೪ ॥ ಅರ್ಜುನಾ ಆ ಸತ್ಪುರುಷನ ಅಂತಃಕರಣದಲ್ಲಿ ಸಹಜವೇ ಕಾಮಕ್ರೋಧಗಳು ಇಲ್ಲದಂತೆ ಆಗಿರುತ್ತವೆ. ಮತ್ತು ಆ ಪೂರ್ಣಾವಸ್ಥೆಗೆ ಮುಟ್ಟಿದ ಪುರುಷನಿಗೆ ಭಯದ ಅಂಜಿಕೆಯು ಲೇಶಮಾತ್ರವೂ ಇರುವದಿಲ್ಲ. ॥ ೪೫ ॥ ಈ ಪ್ರಕಾರ ಸಂಸಾರವನ್ನು ಬಿಟ್ಟುಕೊಟ್ಟು ಯಾವನು ಕೇವಲ ಭೇದ (ದ್ವೇಷ) ರಹಿತನಾಗಿರುವನೋ ಅದೇ ಪುರುಷನು ಸ್ಥಿರ ಬುದ್ಧಿಯುಳ್ಳವನೆಂದು ತಿಳಿಯಬೇಕು. ॥ ೪೬ ॥

ಯಃ ಸರ್ವತ್ರಾನಭಿಸ್ನೇಹಸ್ತತ್ತತ್ಪ್ರಾಪ್ಯ ಶುಭಾಶುಭಂ ।
ನಾಭಿನಂದತಿ ನ ದ್ವೇಷ್ಟಿ ತಸ್ಯ ಪ್ರಜ್ಞಾ ಪ್ರತಿಷ್ಠಿತಾ ॥ ೫೭ ॥

[ಯಃ ಸರ್ವತ್ರಾ ನಭಿ ಸ್ನೇಹ ಇತಿ] ಜೋ ಸರ್ವತ್ರ ಸದಾ ಸರಿಸಾ । ಪರಿಪೂರ್ಣ ಚಂದ್ರಕಾ ಜೈಸಾ । ಅಧಮೋತ್ತಮ ಪ್ರಕಾಶಾ । ಮಾಜಿ ನ ವ್ಹಾಣೇ ॥ ೪೭ ॥ ಐಸೀ ಅನವಚ್ಛಿನ್ನ ಸಮತಾ । ಭೂತ ಮಾತ್ರೀ ಸದಯತಾ । ಆಣಿ ಪಾಲಟೂ ನಾಹೀ ಚಿತ್ತಾ । ಕವಣೇ ವೇಳೇ ॥ ೪೮ ॥ ಗೋಮಟೇ ಕಾಹೀ ಪಾವೇ । ತರೀ ಸಂತೋಷೇ ತೇಣೇ ನಾಭಿಭವೇ । ಜೋ ಓಖಟೇನಿ ನಾಗವೇ । ವಿಷಾದಾಸೀ ॥ ೪೯ ॥ ಐಸಾ ಹರಿಖಶೋಕರಹಿತ । ಜೋ ಆತ್ಮಬೋಧ ಭರಿತ । ತೋ ಜಾಣ ಪಾ ಪ್ರಜ್ಞಾಯುಕ್ತ । ಧನುರ್ಧರಾ ॥ ೫೦೦ ॥

ಅರ್ಥ— ಹುಣ್ಣಿಮೆಯ ಚಂದ್ರನು ಉತ್ತಮ-ಅಧಮ ಜನರಿಗೆ ಕೂಡ ಸಮನಾಗಿ ಬೆಳಕನ್ನು ಹೇಗೆ ದಯಪಾಲಿಸುವಂತೆ ॥ ೪೭ ॥ ಅವನು ಸರ್ವರ ಮೇಲೂ ಸಮನಾದ ಭಾವವನ್ನಿಟ್ಟಿರುತ್ತಾನೆ. ಪ್ರಾಣಿಮಾತ್ರಗಳ ವಿಷಯದಲ್ಲಿ ಅಂತಃಕರಣವುಳ್ಳವನಾಗಿ ಅವನು ತನ್ನ ಚಿತ್ತದಲ್ಲಿ ಹೆಚ್ಚು ಕಡಿಮೆ ಎಂದೂ ಮಾಡುವದಿಲ್ಲ. ॥೪೮॥ ಉತ್ತಮವಾದ ಲಾಭವಾದರೆ ಅವನು ಸಂತೋಷದಿಂದ ಗರ್ವವನ್ನು ವಹಿಸುವದಿಲ್ಲ. ಹಾನಿಯುಂಟಾದರೆ ವ್ಯಥೆ ಪಡುವದಿಲ್ಲ. ॥ ೪೯ ॥ ಹೀಗೆ ಹರ್ಷ ಶೋಕ ರಹಿತನಾಗಿದ್ದು ಯಾವಾಗಲೂ ಆತ್ಮವಿಚಾರದಲ್ಲಿ ಮಗ್ನನಾಗಿರುವನೇ ಸ್ಥಿತಪ್ರಜ್ಞ (ಸ್ಥಿರ ಬುದ್ಧಿ) ನೆಂದು ಕಂಡು ಹಿಡಿ. ॥ ೫೦೦ ॥

ಯದಾ ಸಂಹರತೇ ಚಾಯಂ ಕೂರ್ಮೋಂಽಗಾನೀವ ಸರ್ವಶಃ ।
ಇಂದ್ರಿಯಾಣೀಂದ್ರಿಯಾರ್ಥೇ ಭ್ಯಸ್ತಸ್ಯ ಪ್ರಜ್ಞಾ ಪ್ರತಿಷ್ಠಿತಾ ॥ ೫೮ ॥

[ಯದೇತಿ] ಕಾ, ಕೂರ್ಮಾಚಿಯಾ ಪರಿ । ಉವಾಇಲಾ ಅನೇನ ಪಸರೀ । ನಾತರೀ ಇಚ್ಛಾವನಶೇ ಆವರೀ ಆಪುಲೇ ಆಪಣ ॥ ೧ ॥ ತೈಸೀ ಇಂದ್ರಿಯೇ ಆಪೈತೀ ಹೋತೀ । ಜಯಾಚಿ ಮ್ಹಣಿತಲೇ ಕರಿತೀ । ತಯಾಚೀ ಪ್ರಜ್ಞಾ ಜಾಣಿಜ್ಜಿತಿ । ಪಾತಲೀ ಅಸೇ ॥ ೨ ॥

ಅರ್ಥ— ಆವೆಯು ಆನಂದದಲ್ಲಿರುವಾಗ್ಗೆ ತನ್ನ ಕೈಕಾಲುಗಳನ್ನು ಪಸರಿಸುತ್ತದೆ. ಬೇಡಾಗಿದ್ದರೆ ತನ್ನ ಅವಯವಗಳನ್ನು ಮುಚ್ಚಿಕೊಳ್ಳುತ್ತದೆ. ॥ ೧ ॥ ಅದೇ ಪ್ರಕಾರ ಇಂದ್ರಿಯಗಳು ಸ್ವಾಧೀನವುಳ್ಳವುಗಳಾಗಿ ಯಾವನ ಆಧೀನದಲ್ಲಿದ್ದು ಅವನು ಹೇಳಿದಂತೆ ವರ್ತಿಸುತ್ತವೆಯೋ ಅವನ ಬುದ್ಧಿಯು ಸ್ಥಿರವಾಗಿರುವದೆಂದು ತಿಳಿ. ॥೨॥

ವಿಷಯಾ ವಿನಿವರ್ತಂತೇ ನಿರಾಹಾರಸ್ಯ ದೇಹಿನಃ ।
ರಸವರ್ಜಂ ರಸೋಽಪ್ಯಸ್ಯ ಪರಂದೃಷ್ಟ್ವಾ ನಿವರ್ತತೇ ॥ ೫೯ ॥

[ವಿಷಯಾಇತಿ] ಅರ್ಜುನಾ ಆಣಿಕಹೀ ಏಕ । ಸಾಂಗೇನ ಏಕೇ ಕವತಿಕ । ಯಾ ವಿಷಯಾತೇ ಸಾಧಕ । ತ್ಯಜಿತೀ ನಿಯಮೇ ॥ ೩ ॥ ಶ್ರೋತ್ರಾದಿ ಇಂದ್ರಿಯೇ ಆವರಿತೀ । ವರೀ ರಸನೇ ನಿಯಮು ನ ಕರಿತೀ । ತೇ ಸಹಸ್ರಧಾ ಕನಳಜತೀ । ವಿಷಯೀ ಇಹೀ ॥ ೪ ॥ ಜೈಸೀ ವರಿವರೀ ಪಾಲವೀ ಖುಡಿಜೇ । ಆಣಿ ಮುಳೀ ಉದಕ ಘಾಲಿ ಜೇ । ತಯೇ ಕೈಸೇನಿ ನಾಶು ನಿಪಜೇ । ತಯಾ ವೃಕ್ಷಾ ॥ ೫ ॥ ತೋ ಉದಕಾ ಚೇನಿ ಬಳೇ ಅಧಿಕೇ । ಜೈಸೇ ಆಡವೆನಿ ಆಂಗೇ ಘಾಂಕೇ । ತೈಸಾ ಪಾನಸೀ ವಿಷೋ ಪೋಪಿ । ರಸನಾ ದ್ವಾರೇ ॥ ೬ ॥ ಯೇರಾ ಇಂದ್ರಿಯಾ ವಿಷಯು ತುಟೇ । ತೈಸಾ ನಿಯಮೂ ನಯೇ ರಸಹಟೇ । ಜೇ ಜೀವನ ಕೇ ನ ಘಟೇ । ಯೇಣೇ ವಿಣ ॥ ೭ ॥ ಮಗ ಅರ್ಜುನಾ ಸ್ವಭಾವೇ । ಐಸಿಹೀ ನಿಯಮಾ ತೇ ಪಾವೇ । ಜೈ ವರಬ್ರಹ್ಮ ಅನುಭವೇ । ಹೋವೂನಿ ಜಾಇಜೇ ॥ ೮ ॥ ತೈ ಶರೀರ ಭಾವ ನಾಸತೀ । ಇಂದ್ರಿಯೇ ವಿಷಯ ವಿಸರತೀ । ಜೈ ಸೋಹಂಭಾವ ಪ್ರತೀತೀ । ಪ್ರಗಟ ಹೋಯ ॥ ೯ ॥

ಅರ್ಥ— ಅರ್ಜುನಾ ಮತ್ತೂ ಒಂದು ವಿನೋದಪರವಾದ ಸಂಗತಿಯನ್ನು ಹೇಳುತ್ತೇನೆ ಕೇಳು. ಯಾವ ಸಾಧಕರು ಈ ವಿಷಯಗಳನ್ನು ನಿಯಮದಿಂದ ತ್ಯಾಗಮಾಡಿ ॥ ೩ ॥ ಶೋತ್ರಾದಿ ಇಂದ್ರಿಯಗಳನ್ನು ನಿಯಮಿಸಿ ನಾಲಿಗೆಯ ನಿಗ್ರಹವನ್ನು ಮಾತ್ರ ಮಾಡುವದಿಲ್ಲವೋ, ಅವರು ನಾನಾತರದಿಂದ ವಿಷಯದ ಬಲೆಯಲ್ಲಿ ತೊಡಕಿಕೊಳ್ಳುತ್ತಾರೆ. ॥ ೪ ॥ ಒಂದು ವೃಕ್ಷದ ಮೇಲಿನ ಭಾಗದ ಟೊಂಗೆಗಳನ್ನಷ್ಟೇ ಕಡಿದು ಗಿಡದ ಬೊಡ್ಡಿಗೆ ನೀರು ಹಾಕಿದರೆ ಆ ಗಿಡದ ನಾಶವು ಹೇಗೆ ಆದೀತು? ॥ ೫ ॥ ಅದು ನೀರಿನ ಬಲದಿಂದ ಅಡ್ಡ ಬೆಳೆಯುವಂತೆ ರಸನೇಂದ್ರಿಯದ ದ್ವಾರದಿಂದ ಅಂತಃಕರಣದಲ್ಲಿ ವಿಷಯವು ಹೆಚ್ಚು ಹೆಚ್ಚು ಪುಷ್ಟಿಯನ್ನು ಹೊಂದುತ್ತದೆ. ॥ ೬ ॥ ಅನ್ಯವಿಷಯಗಳ ವಿಷಯವನ್ನು ಕಡಿಮೆಮಾಡುವದರಿಂದ ಅವುಗಳು ಕಡಿಮೆಯಾಗುತ್ತವೆ. ಆದರೆ ಅದೇ ಪ್ರಮಾಣದಿಂದ ರಸನೇಂದ್ರಿಯದ ವಿಷಯವನ್ನು ಹಟದಿಂದ ಕಡಿಮೆಮಾಡಲಿಕ್ಕೆ ಬರುವದಿಲ್ಲ. ಕಾರಣವೇನಂದರೆ ನಾಲಿಗೆಯು ಜೀವನದ ಆಧಾರವಾಗಿರುತ್ತದೆ. ಆದಿಲ್ಲದೆ ಈ ಶರೀರವು ನಡೆಯುವದಿಲ್ಲ ॥ ೭ ॥ ಆದರೆ ಅರ್ಜುನಾ ಸಾಧಕರು ಯಾವಾಗ್ಗೆ ಪರಬ್ರಹ್ಮ ಪರಮಾತ್ಮನ ಅನುಭವನನ್ನು ತೆಗೆದುಕೊಳ್ಳುತ್ತಾರೆಯೋ ಆಗ ರಸನೇಂದ್ರಿಯವು ಸಹಜವಾಗಿಯೇ ನಿಯಮಿತವಾಗುತ್ತದೆ. ॥ ೮ ॥ ದೇಹಭಾವವು ಇಲ್ಲದಂತಾಗಲು ಇಂದ್ರಿಯಗಳು ವಿಷಯವನ್ನು ಮರೆಯುತ್ತವೆ. ಆ ಮೇಲೆ ತಾನೇ ಬ್ರಹ್ಮ ಸ್ವರೂಪನಿರುವೆನೆಂಬ ಅನುಭವವು ಉಂಟಾಗುತ್ತದೆ. ॥ ೯ ॥

ಯತತೋ ಹ್ಯಪಿ ಕೌಂತೇಯ ಪುರುಷಸ್ಯ ವಿಪಶ್ಚಿತಃ ।
ಇಂದ್ರಿಯಾಣಿ ಪ್ರಮಾಥೀನಿ ಹರಂತಿ ಪ್ರಸಭಂ ಮನಃ ॥ ೬೦ ॥

[ಯತತ ಇತಿ] ಯೇರ್ಹವೀ ತರೀ ಅರ್ಜುನಾ । ಹೇ ಆಯಾ ನ ಯೇ ಸಾಧನಾ । ಜೇ ರಾಹಾಟತಾತಿ ಜತನಾ । ನಿರಂತರ ॥ ೧೦ ॥ ಜಯಾತೇ ಅಭ್ಯಾಸಾಚೀ ಘರಟೇ । ಯಮನಿಯ ಮಾಂಚೀತಾಟ । ಜೇ ಮನಾತೇ ಸದಾ ಮುಠೀ । ಧರೂನಿ ಆಹಾತೀ ।. ೧೧ ॥ ತೇಹೀ ಕಿಜತೀ ಕಾಸಾವಿಸೀ । ಯಾ ಇಂದ್ರಿಯಾಂಚೀ ೯್ರೌಢೀ ಐಸೀ । ಜೈಸೀ ಮಂತ್ರಜ್ಞಾತೇ ವಿವಸೀ । ಭುಲವೀ ಕಾ ॥ ೧೨ ॥ ದೇಪೀ ವಿಷಯ ಹೇ ತೈಕೇ । ಪಾವತೀ ಋದ್ಧಿ ಸಿದ್ಧಿ ಚೇನಿ ಮಿಷೇ । ಮಗ ಆಕಳತೀ ಸ್ಪರ್ಶೇ । ಇಂದ್ರಿಯಾಂಚೇನೀ ॥ ೧೩ ॥ ತಿಯೇ ಸಂಧೀಮನ ಜಾಯೇ । ಮಗ ಅಭ್ಯಾಸೀ ಥೋಟಾವಲೇ ಠಾಯೇ । ಐಸೇ ಬಳಕಟಪಣ ಆಹೆ । ಇಂದ್ರಿಯಾಂಚೆ ॥ ೧೪ ॥

ಅರ್ಥ— ಅರ್ಜುನಾ, ಇಂದ್ರಿಯಗಳನ್ನು ಜಯಿಸುವದರ ದೆಸೆಯಿಂದ ಯಾರು ನಿರಂತರ ಪ್ರಯತ್ನಪಡುವರೋ, ಅವರಿಗೆ ಸಹ ಇಂದ್ರಿಯಗಳು ಸ್ವಾಧೀನವಾಗುವದಿಲ್ಲ. ॥ ೩೧೦ ॥ ಯಾರು ತಮ್ಮ ಸುತ್ತಲೂ ಅಭ್ಯಾಸದ ಕಾವಲನ್ನಿಟ್ಟು ಯಮನಿಯಮದ ಮುಳ್ಳುಬೇಲಿಯನ್ನು ಹಚ್ಚುತ್ತಾರೆಯೋ ಯಾರು ತಮ್ಮ ಮನಸನ್ನು ತಮ್ಮ ಮುಷ್ಟಿಯಲ್ಲಿ ಹಿಡಿದಿರುತ್ತಾರೆಯೋ ॥ ೧೧ ॥ ಅವರನ್ನು ಸಹ ಇಂದ್ರಿಯಗಳು ವ್ಯಾಕುಲಪಡಿಸುತ್ತವೆ. ಅಷ್ಟೊಂದು ಈ ಇಂದ್ರಿಯಗಳ ಸಾಮರ್ಥ್ಯವಿದೆ. ಮಂತ್ರಜ್ಞನಿಗೆ ಭೂತವು ಭ್ರುನೆಯನ್ನುಂಟುಮಾಡುವಂತೆ, ॥ ೧೨ ॥ ಈ ವಿಷಯಗಳು ಋದ್ಧಿ ಸಿದ್ಧಿ ರೂಪದಿಂದ ಯೋಗಿಗಳಿಗೆ ಗಂಟುಬಿದ್ದು ಇಂದ್ರಿಯದ್ವಾರದಿಂದ ಅವರ ಮನಸ್ಸನ್ನು ಭ್ರಷ್ಟಮಾಡುತ್ತವೆ. ॥ ೧೩ ॥ ಇಂಥ ತೊಡಕಿನಲ್ಲಿ ಮನಸು ಸಿಲುಕಿದರೆ ಸಾಧಕರ ಅಭ್ಯಾಸವು ಅಲ್ಲಿಂದಲ್ಲೇ ನಿಂತುಬಿಡುತ್ತದೆ. ಅಹಾ! ಇಂದ್ರಿಯಗಳ ಸಾಮರ್ಥ್ಯವೆಷ್ಟಿದೆಂಬುದನ್ನು ನೋಡು. ॥ ೧೪ ॥

ತಾನಿ ಸರ್ವಾಣಿ ಸಂಯಮ್ಯ ಯುಕ್ತ ಆಸೀತ ಮತ್ಪರಃ ।
ವಶೇಹಿ ಯಸ್ಯೇಂದ್ರಿಯಾಣಿ ತಸ್ಯ ಪ್ರಜ್ಞಾ ಪ್ರತಿಷ್ಠಿತಾ ॥ ೬೧ ॥

[ತಾನಿ ಸರ್ವಾಣೀತಿ] ಪ್ಹುಣೋನಿ ಆ ಇತೇ ಪಾರ್ಥಾ । ಯಾತೇ ನಿರ್ದಳೀ ಜೋ ಸರ್ವಥಾ। ಸರ್ವವಿಷಯೀ ಆಸ್ಥಾ । ಸಾಂಡೂನಿಯಾ ॥ ೧೫ ॥ ತೋಚಿ ತೂ ಜಾಣ । ಯೋಗನಿಷ್ಠೇಸಿ ಕಾರಣ। ಜಯಾಚೆ ವಿಷಯ ಸುಖೇ ಂತಃಕರಣ । ಝುಕವೇನಾ ॥ ೧೬ ॥ ಜೋ ಆತ್ಮಬೋಧಯುಕ್ತ । ಹೋವ್ನಿ ಅಸೇ ಸತತ । ಜೋ ಮಾತೇ ಹೃದಯಾ ಆಂತ । ವಿಸಂಬೇನಾ ॥ ೧೭ ॥ ಯೇರ್ಹವೀ ಬಾಹ್ಯ ವಿಷಯ ತರೀ ನಾಹೀ । ಪರೀ ಮಾನಸೀ ಹೋಈಲ ಜರೀ ಕಾಹೀ । ತರೀ ಸಾದ್ಯಂತಚಿ ಪಾಹೀ । ಸಂಸಾರ ಅಸೇ ॥ ೧೮ ॥ ಜೈಸಾ ಕಾ ವಿಷಾಚಾ ಲೇಶ । ಘೇತಲಿಯಾ ಹೋಯ ಬಹುವಸ । ಮಗ ನಿಭ್ರಾಂತ ಕರೀ ನಾಶ । ಜೀವಿತಾಸೀ ॥ ೧೯ ॥ ತೈಸೀ ವಿಷಯಾಚೀ ಶಂಕಾ । ಮನೀ ವಸತೀ ದೇಖಾ । ಘಾತ ಕರೀ ಅಶೇಖಾ । ವಿವೇಕ ಜಾತಾ ॥ ೬೨೦ ॥

ಅರ್ಥ— ಅದುದರಿಂದ ಪಾರ್ಥಾ, ಸರ್ವ ವಿಷಯಗಳ ಅಪೇಕ್ಷೆಯನ್ನು ಬಿಟ್ಟು ಇಂದ್ರಿಯಗಳನ್ನು ಯಾರು ಜಯಿಸುತ್ತಾರೆಯೋ, ॥ ೧೫ ॥ ಇಲ್ಲವೇ ಯಾರ ಅಂತಃಕರಣವು ವಿಷಯಸುಖದಿಂದ ಭ್ರಮಿಷ್ಟವಾಗುವದಿಲ್ಲವೋ, ಅವರೇ ಯೋಗನಿಷ್ಠೆಯನ್ನು ಪಡೆಯಲು ಯೋಗ್ಯರೆಂದು ತಿಳಿ. ॥ ೧೬ ॥ ಕಾರಣವೇನಂದರೆ ಅವರು ಯಾವಾಗಲೂ ಆತ್ಮಬೋಧದಿಂದ ಯುಕ್ತರಾಗಿರುತ್ತಾರೆ. ಮತ್ತು ಅವರು ಅಂತಃಕರಣದಲ್ಲಿ ನನ್ನನ್ನು ಎಂದಿಗೂ ಮರೆಯುವದಿಲ್ಲ. ॥ ೧೭ ॥ ಯಾರಾದರೂ ಹೊರಗಿನ ವಿಷಯಗಳನ್ನು ಬಿಟ್ಟು ಕರ್ಮೇಂದ್ರಿಯಗಳನ್ನು ನಿರ್ಬಂಧಿಸಿ ಸ್ವಸ್ಥ ಚಿತ್ತರಾಗಿ ಕುಳಿತರೂ, ಅವರ ಮನಸಿನಲ್ಲಿ ವಿಷಯದ ಅಪೇಕ್ಷೆಯು ಉಂಟಾದಲ್ಲಿ ಅವರು, ಜನನ ಮರಣಗಳಿಂದ ಬಿಡುಗಡೆ ಹೊಂದಿದವರೆಂದು ಅನ್ನಲು ಬರುವದಿಲ್ಲ. ॥ ೧೮ ॥ ವಿಷವನ್ನು ಸೇವನ ಮಾಡುವ ಸಮಯದಲ್ಲಿ ಅದು

ಅತಿ ಸ್ವಲ್ಪವಿದ್ದರೂ ಮುಂದೆ ಶರೀರದಲ್ಲಿ ವ್ಯಾಪಿಸಿ ನಿಃಸಂಶಯವಾಗಿ ಪ್ರಾಣಹರಣ ಮಾಡುತ್ತದೆ. ॥ ೧೯ ॥ ಅದರಂತೆಯೇ ಮನಸಿನಲ್ಲಿ ವಿಷಯ ಸುಖದ ಅಪೇಕ್ಷೆಯು ಸ್ವಲ್ಪೇ ಉಳಿದಾಗ್ಯಾದರೂ ಅದು ಎಲ್ಲ ಶುದ್ಧ ವಿಚಾರಗಳನ್ನೂ ನಾಶಮಾಡಿ ಬಿಡುತ್ತದೆ. ॥ ೬೦ ॥

ಧ್ಯಾಯತೋ ವಿಷಯಾನ್ಪುಂಸಃ ಸಂಗಸ್ತೇಷೂಪಜಾಯತೇ ।
ಸಂಗಾತ್ಸಂಜಾಯತೇ ಕಾಮಃ ಕಾಮಾತ್ಕ್ರೋಧೋಽಭಿಜಾಯತೇ ॥ ೬೨ ॥
ಕ್ರೋಧಾದ್ಭವತಿ ಸಂಮೋಹಃ ಸಂಮೋಹಾತ್ಸ್ಮೃತಿ ವಿಭ್ರಮಃ ।
ಸ್ಮೃತಿಭ್ರಂಶಾದ್ಬುದ್ಧಿನಾಶೋ ಬುದ್ಧಿನಾಶಾತ್ಪ್ರಣಶ್ಯತಿ ॥ ೬೩ ॥

[ಧ್ಯಾಯತ ಇತಿ] ಜರೀ ಹೃದಯೀ ವಿಷಯ ಸ್ಮೃತಿ । ತರೀ ನಿಃಸಂಗಾಹೀ ಆಪಜೇ ಸಂಗತೀ । ಸಂಗೇ ಪ್ರಗಟೇ ಮೂರ್ತಿ । ಅಭಿಲಾಷಾಚೀ ॥ ೬೨ ॥ ಜೇಥ ಕಾಮು ಉಪಜಲಾ । ತೇಥ ಕ್ರೋಧ ಆಧೀಂಚಿ ಆಲಾ । ಕ್ರೋಧೀ ಅಸೇ ಠೇವಿಲಾ । ಸಂಮೋಹ ಜಾಣೇ ॥ ೬೨ ॥ ಸಂಮೋಹಾ ಜಾಲಿಯಾ ವ್ಯಕ್ತೀ । ತರೀ ನಾಶ ಪಾವೇ ಸ್ಮೃತೀ । ಚಂಡವಾತೇ ಜ್ಯೋತೀ । ಹತ ಜೈಸೀ ॥ ೬೩ ॥ ಕಾ ಅಸ್ತನುಸಾನೀ ನಿಶೀ । ಜೈಸೀ ಸೂರ್ಯತೇಜಾತೇ ಗ್ರಾಸಿ । ತೈಸೀ ದಶಾಸ್ಮೃತಿ ಭ್ರಂಶೀ । ಪ್ರಾಣಿಯಾಸೀ ॥ ೬೪ ॥ ಮಗ ಅಜ್ಞಾನಾಂಧ ಕೇವಳ । ತೇಣೇ ಆಪ್ಲ ವಿಜೇ ಸಕಳ । ತೇಥ ಬುದ್ಧಿ ಹೋಯ ವ್ಯಾಕುಳ । ಹೃದಯಾ ಮಾಜೀ ॥ ೬೫ ॥ ಜೈಸೇ ಜಾತ್ಯಂಧಾ ಪಳಣೀ ಪಾವೇ । ಮಗ ತೇ ಕಾಕಾಳತೀ ಸೈರಾ ಧಾವೇ । ತೈಸೀ ಬುದ್ಧೀಸೀ ಹೋತೀ ಭ್ರಾವೇ । ಧನುರ್ಧರಾ ॥ ೬೬ ॥ ಐಸಾ ಸ್ಮೃತಿಭ್ರಂಶ ಘಡೇ । ಮಗ ಸರ್ವಥಾ ಬುದ್ಧಿ ಅವಘಡೇ । ತೇಥ ಸಮೂಳ ಹೇ ಉಪಡೇ । ಜ್ಞಾನಜಾತ ॥ ೬೭ ॥ ಚೈತನ್ಯಾಚ್ಯಾ ಭ್ರಂಶೀ । ಶರೀರಾದಶಾ ಜೈಸೀ । ತೈಸೇ ಪುರುಷಾ ಬುದ್ಧಿ ನಾಶೀ । ಹೋಯ ದೇಖೇ ॥ ೬೮ ॥ ಮ್ಹಣೋನಿ ಆತಕೇ ಅರ್ಜುನಾ । ಜೈಸಾ ವಿಸ್ಫುಲಿಂಗ ಲಾಗೇ ಇಂಧನಾ । ಮಗ ತೋ ಪ್ರೌಢ ಜಾಲಿಯಾ ತ್ರಿಭುವನಾ । ಪುರೋಶಕೇ ॥ ೬೯ ॥ ತೈಸೇ ವಿಷಯಾಂಚೆ ಧ್ಯಾನ । ಜಾಂ ವಿಸಾಯೇ ವಾಹೇ ಮನ । ತರೀ ಯೇಸಣೇ ಹೇ ಪತನ । ನಿವಸೀತ ಪಾವೇ ॥ ೭೦ ॥

ಅರ್ಥ— ಅಂತಃಕರಣದಲ್ಲಿ ವಿಷಯ ಸುಖದ ಸ್ಮರಣವಾವ ಕೂಡಲೇ ವಿರಕ್ತನಿಗೆ ಕೂಡಾ ಆ ವಿಷಯ ಸುಖದ ಅಪೇಕ್ಷೆಯು ಅಂದರೆ ಕಾಮು ಉಂಟಾಗುತ್ತದೆ. ॥ ೬೧ ॥ ಕಾಮು ಉಂಟಾದ ಕೂಡಲೇ ಮೊದಲು ಕ್ರೋಧವು ಉದ್ಭವಿಸುತ್ತದೆ. ಆ ಕ್ರೋಧದಿಂದ ಅವಿಚಾರವು ಬರುತ್ತದೆ. ॥ ೬೨ ॥ ಅವಿಚಾರದ ಜೊತೆಯಲ್ಲಿ ಸಮ್ಮೋಹವುಂಟಾಗುತ್ತದೆ. ದೀಪದ ಪ್ರಕಾಶವು ಬಿರುಗಾಳಿಯಿಂದ ನಾಶಹೊಂದುವಂತೆ, ॥ ೬೩ ॥ ಸಾಯಂಕಾಲವಾದ ಕೂಡಲೇ ರಾತ್ರಿಯು ಸೂರ್ಯತೇಜವನ್ನು ನುಂಗಿಬಿಡುವಂತೆ, ಸ್ಮೃತಿ ಭ್ರಂಶವು ಮನುಷ್ಯನ ಬುದ್ಧಿಯನ್ನು ನುಂಗಿಬಿಡುತ್ತದೆ. ॥ ೬೪ ॥ ಆಮೇಲೆ ಅಜ್ಞಾನವುಂಟಾಗಿ ಅವನ ಬುದ್ಧಿಯು ಕೇವಲ ಅಂಧತ್ವವನ್ನು ಹೊಂದುತ್ತದೆ. ಅವನು ಎಲ್ಲದರಿಂದಲೂ ಕೇಡಿಗೀಡಾಗುತ್ತಾನೆ. ಮತ್ತು ಅವನಿಗೆ ಏನೂ ತಿಳಿಯದಾಗುತ್ತದೆ. ॥ ೬೫ ॥ ಹುಟ್ಟುಗುರುಡನಿಗೆ ಓಡಿ ಹೋಗುವ ಪ್ರಸಂಗ ಬಂದರೆ ಅವನು ದೈನ್ಯಉಳ್ಳವನಾಗಿ ದಿಕ್ಕುದಪ್ಪಿ (ಎಡಹುತ್ತ, ಮುಗ್ಗುತ್ತ) ಪೆಡುತ್ತಿರುತ್ತಾನೆ. ಅದರಂತೆಯೇ ಅರ್ಜುನಾ, ಬುದ್ಧಿಗೆ ಭ್ರಮೆಯು ಉಂಟಾಗುತ್ತದೆ. ॥ ೬೬ ॥ ಈ ರೀತಿಯಿಂದ ಬುದ್ಧಿಯು ಕೆಟ್ಟ ಮೇಲೆ ಬುದ್ಧಿಯು ಗೊಂದಲದಲ್ಲಿ ಬೀಳುತ್ತದೆ. ಆ ಮೇಲೆ ಸರ್ವಜ್ಞಾನವೂ ನಷ್ಟವಾಗುತ್ತವೆ. ॥ ೬೭ ॥ ಶರೀರದೊಳಗಿನ ಪ್ರಾಣವು ಹೊರಟುಹೋದ ಮೇಲೆ ದೇಹವು ಪ್ರೇತರೂಪವಾಗುವಂತೆ, ಬುದ್ಧಿಯು ನಾಶಹೊಂದಿದ ಜೀವದ ಸ್ಥಿತಿಯೂ ಆಗುತ್ತದೆ. ॥ ೬೮ ॥ ಆದ್ದರಿಂದ ಅರ್ಜುನಾ, ಒಂದೇ

ಬೆಂಕಿಯ ಕಿಡಿಯು ಹುಲ್ಲಿನಲ್ಲಿ ಬೀಳುವದರಿಂದ ಅದು ಪ್ರಜ್ವಲಿತವಾಗಿ ಮೂರು ಲೋಕಗಳನ್ನೂ ಸುಟ್ಟು ಬಿಡುವಂತೆ, ॥ ೨೯ ॥ ಅಂತಃಕರಣದಲ್ಲಿ ಲೇಶಮಾತ್ರ ವಿಷಯದ ಸ್ಮರಣೆಯಾದರೆ ಅದು ಸರ್ವತಃ ಅನರ್ಥವನ್ನುಂಟುಮಾಡುತ್ತದೆ. ॥ ೩೦ ॥

ರಾಗದ್ವೇಷವಿಯುಕ್ತೈಸ್ತು ವಿಷಯಾನಿಂದ್ರಿಯೈಶ್ಚರನ್ ।
ಆತ್ಮವಶ್ಯೈರ್ವಿಧೇಯಾತ್ಮಾ ಪ್ರಸಾದಮಧಿಗಚ್ಛತಿ ॥ ೬೪ ॥

[ರಾಗದ್ವೇಷೇತಿ] ಮ್ಹಣೋನಿ ವಿಷಯ ಹೇ ಅಳುವೇ । ಸರ್ವಥಾ ಮನೌನಿ ಸಾಂಡಾವೆ । ಮಗ ರಾಗ ದ್ವೇಷ ಸ್ವಭಾವೇ । ನಾಶತೀಲ ॥ ೩೧ ॥ ಪಾರ್ಥಾ ಆಣಿಕಹೀ ಏಕ । ಜರೀ ನಾಶಲೇ ಹೇ ರಾಗ ದ್ವೇಷ । ತರೀ ಇಂದ್ರಿಯಾ ವಿಷಯೀ ಬಾಧಕ । ರಹಾತಾ ನಾಹೀ ॥ ೩೨ ॥ ಜೈಸಾ ಸೂರ್ಯ ಆಕಾಶಗತ ರಶ್ಮಿಕರೀ ಜಗತಾತೇ ಸ್ಪರ್ಶತ । ತರೀ ಸಂಗದೋಷೇ ಕಾಯಲಿಂಪತ । ತೇಥಿಚೇನಿ ೩೩ ॥ ತೈಸಾ ಇಂದ್ರಿಯಾರ್ಥಿ ಉದಾಸೀನ । ಆತ್ಮರಸೇಚಿ ನಿರ್ಭಿನ್ನ । ಜೋ ಕಾಮ ಕ್ರೋಧ ವಿಹೀನ । ಹೋವೂನಿ ಅಸೇ ॥ ೩೪ ॥ ತರೀ ವಿಷಯಾಂತಹೀ ಕಾಹೀ । ಆಪಣಪೇ ವಾಂಚೂನಿ ನಾಹೀ । ಮಗ ವಿಷಯ ಕವಣಕಾಯೀ । ಬಾಧಿತೀಲ ಕವಣ ॥ ೩೫ ॥ ಜರೀ ಉದಕೀ ಉದಕೇ ಬುಡಿಜೇ । ಕಾ ಅಗ್ನಿ ಆಗೀ ಪೋಳಿಜೇ । ತರೀ ವಿಷಯ ಸಂಗೇ ಆವ್ಹಪಿಜೇ । ಪರಿಪೂರ್ಣ ತೋ ॥ ೩೬ ॥ ಐಸಾ ಆಪಣಚಿ ಕೇವಳ । ಹೋವ್ಹನಿ ಅಸೇ ನಿಜೀಳ । ತಯಾಂತೇ ಪ್ರಜ್ಞಾ ಅಚಳ । ನಿಭ್ರಾಂತ ಪಾನೀ ॥ ೩೭ ॥

ಅರ್ಥ— ಆದುದರಿಂದ ಮನಸ್ಸಿನಲ್ಲಿಯ ಸರ್ವ ವಿಷಯಗಳನ್ನು ಬಿಟ್ಟುಬಿಡಬೇಕು. ಅಂದರೆ ರಾಗ (ಪ್ರೀತಿ) ದ್ವೇಷ (ಅಪ್ರೀತಿ) ಇವುಗಳು ತಮ್ಮಿಂದ ತಾನೇ ಇಲ್ಲದಂತಾಗುತ್ತವೆ. ॥ ೩೧ ॥ ಪಾರ್ಥಾ, ಮತ್ತೂ ಒಂದು ಮಾತನ್ನು ನಿನಗೆ ಹೇಳುತ್ತೇನೆ. — ರಾಗದ್ವೇಷಗಳು ಇಲ್ಲದಂತಾದ ಮೇಲೆ ಇಂದ್ರಿಯಗಳು ವಿಷಯದಲ್ಲಿ ರಮಿಸಿದಾಗ್ಯೂ ಆ ವಿಷಯಗಳು ಬಾಧಕಗಳಾಗುವದಿಲ್ಲ ॥ ೩೨ ॥ ಆಕಾಶದೊಳಗಿಂದ ಸೂರ್ಯನು ತನ್ನ ಕಿರಣರೂಪೀ ಕೈಗಳಿಂದ ಜಗತ್ತಿನೊಳಗಿನ ಪದಾರ್ಥಗಳನ್ನು ಸ್ಪರ್ಶಮಾಡುತ್ತಾನೆ. ಆದರೆ ಅವುಗಳ ಸಂಸರ್ಗದೋಷದಿಂದ ಲಿಪ್ತನಾಗುವನೇನು? ಇಲ್ಲ. ॥ ೩೩ ॥ ಅದೇ ಪ್ರಕಾರ ಅವನು ವಿಷಯದ ಸ್ಥಳದಲ್ಲಿ ಉದಾಸೀನನೂ, ಆತ್ಮಸ್ವರೂಪದಲ್ಲಿ ಮಗ್ನನೂ ಕಾಮ ಕ್ರೋಧಗಳಿಂದ ಅಲಿಪ್ತನೂ ಆಗಿರುವನು ॥ ೩೪ ॥ ಮತ್ತು ಅರ್ಜುನಾ, ಯಾವನು ವಿಷಯದಲ್ಲಿ ತನ್ನ ಸ್ವರೂಪದ ಹೊರ್ತು ಅನ್ಯವನ್ನುಗಳನ್ನು ನೋಡುವದೇ ಇಲ್ಲವೋ ಅವನಿಗೆ ವಿಷಯನೆಂದರೇನು? ಎಂಬುದು ಕೂಡಾ ಗೊತ್ತಿರುವದಿಲ್ಲ. ಅಂದಬಳಿಕ ಆ ವಿಷಯವು ಇವನನ್ನು ಬಾಧಿಸುವ ಬಗೆ ಹೇಗೆ? ॥ ೩೫ ॥ ಒಂದು ವೇಳೆ ನೀರಿನಲ್ಲಿ ನೀರು ಮುಳಿಗಿದರೆ, ಅಗ್ನಿಯಿಂದ ಅಗ್ನಿಯು ಸುಟ್ಟರೆ ಪೂರ್ತ್ರ ಆ ಪರಿಪೂರ್ಣನಾದ ಪುರುಷನು ವಿಷಯದಲ್ಲಿ ಮುಳುಗ ಬಹುದು. ॥ ೩೬ ॥ ಹೀಗೆ ಯಾವನು ಸರ್ವಭೂತಪೂತ್ರಗಳು ತನ್ನ ಸ್ವರೂಪವೇ (ತನ್ನಂತೇ) ಎಂದು ತಿಳಿಯುತ್ತಾನೋ ಅವನೇ ಅಚಲ ಪ್ರಜ್ಞ (ಸ್ಥಿರಬುದ್ಧಿ) ನೆಂದು ನಿಃಸಂಶಯವಾಗಿ ತಿಳಿದುಕೊಳ್ಳು. ॥ ೩೭ ॥

ಪ್ರಸಾದೇ ಸರ್ವದುಃಖಾನಾಂ ಹಾನಿರಸ್ಯೋಪಜಾಯತೆ ।
ಪ್ರಸನ್ನಚೇತಸೋ ಹ್ಯಾಶು ಬುದ್ಧಿಃ ಪರ್ಯವತಿಷ್ಠತೇ ॥ ೬೫ ॥

[ಪ್ರಸಾದೇ ಇತಿ] ದೇಹೀ ಅಖಂಡಿತ ಪ್ರಸನ್ನತಾ । ಅಥೀ ಜೇಥ ಚಿತ್ತಾ । ತೇಥ ರಿಗಣೇ ನಾಹೀಸನುಸ್ತಾ । ಸಂಸಾರ ದುಃಖಾ ॥ ೩೮ ॥ ಜೈಸಾ ಅಮೃತಾಚಾ ನಿರ್ಝರ । ಪ್ರಸವೇ ಜಯಾಚಾ ಜಠರ । ತಯಾ ಕ್ಷುಧೇ ತೃಷೇಚಾ ಅಡವರ । ಕಾಪೀಂಚಿ ನಾಹೀ ॥ ೩೯ ॥ ತೈಸೇ ಹೃದಯ ಪ್ರಸನ್ನ ಹೋಯೆ । ತರೀ ದುಃಖ ಕೈಂಚೇಕೇ ಆಯೆ । ತೇಥ ಆಪೈಸೀ ಬುದ್ಧಿರಾಹೇ । ಪರಮಾತ್ಮ ರೂಪೀ ॥ ೪೦ ॥ ಜೈಸಾ ನಿರ್ವಾತೀಂಚಾ ದೀಪ । ಸರ್ವಥಾ ನೇಣೇ ಕಂಪ । ತೈಸಾ ಸ್ಥಿರಬುದ್ಧಿ ಸ್ವಸ್ವರೂಪ । ಯೋಗಯುಕ್ತ ॥ ೪೧ ॥

ಅರ್ಥ - ಹೀಗೆ ನೋಡು, ಮನಸಿನ ಪೂರ್ಣ ಶಾಂತತೆಯು ಇರುವಲ್ಲಿ ಈ ಸರ್ವಸಂಸಾರದ ದುಃಖವು ಪ್ರವೇಶಿಸಲಾರದು. ॥ ೩೮ ॥ ಯಾವನ ಉದರದಲ್ಲಿಯೇ ಅಮೃತದ ಸೆಲೆಯು ಹೊರಟಿರುವದೋ ಅವನಿಗೆ ಹಸಿವೆ ನೀರಡಿಕೆಯ ಬಾಧೆಯು ಎಂದಿಗೂ ಉಂಟಾಗುವದಿಲ್ಲ. ॥ ೩೯ ॥ ಅದರಂತೆಯೇ ಪ್ರಸನ್ನವಾದ ಹೃದಯವುಳ್ಳ ಮನುಷ್ಯನಿಗೆ ದುಃಖವೆಲ್ಲಿಂದ ಬರಬೇಕು? ಅವನ ಬುದ್ಧಿಯು ತನ್ನಿಂದ ತಾನೇ ಪರಮಾತ್ಮಸ್ವರೂಪದಲ್ಲಿ ಕೂಡಿ ಹೋಗಿರುತ್ತದೆ. ॥ ೪೦ ॥ ಗಾಳಿಯಿಲ್ಲದ ಸ್ಥಳದಲ್ಲಿಟ್ಟ ದೀಪವು ಅಲ್ಲಾಡದೆ ಸ್ಥಿರವಿರುವಂತೆ ಸ್ಥಿರಬುದ್ಧಿಯುಳ್ಳವನಾದರೂ ಆತ್ಮಸ್ವರೂಪದ ಸಮಾಧಿಯಲ್ಲಿ ಲೀನನಾಗಿ ನಿಶ್ಚಲನಾಗಿರುತ್ತಾನೆ. ॥ ೪೧ ॥

ನಾಸ್ತಿ ಬುದ್ಧಿರಯುಕ್ತಸ್ಯ ನ ಚಾಯುಕ್ತಸ್ಯ ಭಾವನಾ ।
ನ ಚಾಭಾವಯತಃ ಶಾಂತಿರಶಾಂತಸ್ಯ ಕುತಃ ಸುಖಂ ॥ ೬೬ ॥

[ನಾಸ್ತಿ ಬುದ್ಧಿರಿತಿ] ಯೇ ಯುಕ್ತೇಚಿ ಕಡಸಣೇ । ನಾಹೀ ಜಯಾಚ್ಯಾ ಅಂತಃಕರಣೀ । ತೋ ಅಕಳಿಲಾ ಜಾಣ ಗುಣೇ । ವಿಷಯಾದಿಕೇ ॥ ೪೨ ॥ ತಯಾ ಸ್ಥಿರಬುದ್ಧಿ ಪಾರ್ಥಾ । ಕಹೀ ನಾಹೀ ಸರ್ವಥಾ । ಆಣಿ ಸ್ಥೈರ್ಯಾಚೀ ಆಸ್ಥಾ । ತೇಹೀ ನುಪಜೇ ॥ ೪೩ ॥ ನಿಶ್ಚಳತ್ವಾಚೀ ಭಾವನಾ । ಜರೀ ನವ್ಹೇಚಿ ದೇಖೇ ಸುನಾ । ತರೀ ಶಾಂತಿ ಕೈಸೀ ಅರ್ಜುನಾ । ಆವು ಹೋಯ ॥ ೪೪ ॥ ಜೇಥ ಶಾಂತೀಚಾ ಚಿನ್ಹಾಳಾ ನಾಹೀ । ತೇಥ ಸುಖಸಿಸರೋನಿ ನರಿಫೇ ಕಾಹೀ । ಜೈಸಾ ಪಾಪಿಯಾಚ್ಯಾ ಠಾಯೀ । ಮೋಕ್ಷ ನಸನೇ ॥ ೪೫ ॥ ದೇಖೇ ಅಗ್ನಿ ಮಾಜೀ ಘಾಪತೀ । ತೀಯೇ ಬೀಜೇ ಜರೀ ವಿರೂಢತೀ । ತರೀ ಅಶಾಂತಾ ಸುಖಪ್ರಾಪ್ತಿ । ಘೆಡೋ ಶಕೇ ॥ ೪೬ ॥ ಮ್ಹಣೋನಿ ಅಯುಕ್ತವಣ ಮನಾಚೆ । ತೇಚಿ ಸರ್ವಸ್ವ ದುಃಖಾಚೆ । ಯಾ ಕಾರಣೇ ಇಂದ್ರಿಯಾಂಚೆ ದಮನಕೀಜೇ ॥ ೪೭ ॥

ಅರ್ಥ— ಈ ಯೋಗಯುಕ್ತಿಯ ವಿಚಾರವು ಯಾವನ ಅಂತಃಕರಣದಲ್ಲಿ ಬರುವದಿಲ್ಲವೋ ಅವನನ್ನು ಶಬ್ದಾದಿಕ ವಿಷಯುಗಳು ತಮ್ಮ ಬಲಿಯಲ್ಲಿ ತೊಡಕಿಸಿಕೊಳ್ಳುತ್ತವೆ. ॥ ೪೨ ॥ ಪಾರ್ಥಾ, ಅವನ ಬುದ್ಧಿಗೆ ಎಂದಿಗೂ ಸ್ಥಿರತೆಯಿರುವದಿಲ್ಲ. ಮತ್ತು ಆ ಸ್ಥಿರ ಬುದ್ಧಿ ಪ್ರಾಪ್ತಿಯ ವಿಷಯದಲ್ಲಿ ಅವನ ಅಂತಃಕರಣದಲ್ಲಿ ಇಚ್ಛೆಯಾದರೂ ಉಂಟಾಗುವದಿಲ್ಲ. ॥ ೪೩ ॥ ಅರ್ಜುನಾ, ಸ್ಥಿರವಾದಂಥ ಭಾವನೆಯು ಅವನ ಅಂತಃಕರಣದಲ್ಲಿ ಮೂಲತಃ ಉದ್ಭವಿಸುವದಿಲ್ಲ. ಅಂದಬಳಿಕ ಅವನಿಗೆ ಶಾಂತಿಯು ಹೇಗೆ ಪ್ರಾಪ್ತವಾಗುವದು? ॥ ೪೪ ॥ ಪಾಪಾತ್ಮ ಮನುಷ್ಯನ ಕಡೆಗೆ ಮೋಕ್ಷವು ಹಣಿಕಿಸಹ ನೋಡುವದಿಲ್ಲ. ಹಾಗೆಯೇ ಸ್ವಲ್ಪಾದರೂ ಶಾಂತಿಯಿಲ್ಲದ ಸ್ಥಳದಲ್ಲಿ ಸುಖವು ಮರೆತು ಸಹ ಹೋಗುವದಿಲ್ಲ. ॥ ೪೫ ॥ ಹೀಗೆ ನೋಡು, ಬೆಂಕಿಯಲ್ಲಿ ಹಾಕಿದ ಧಾನ್ಯದ ಬೀಜಗಳು ಮೊಳೆತಂದು ಶಾಂತಿಹೀನ ಮನುಷ್ಯನಿಗೆ ಸುಖಪ್ರಾಪ್ತಿಯಾಗಬಹುದು. ॥ ೪೬ ॥ ಆದ್ದರಿಂದ ಮನಸ್ಸಿನ ಅಸಿಯಮಿತತನವೇ ದುಃಖಕ್ಕೆ ಕಾರಣವಾಗಿರುವದು. ಇವಕ್ಕಾಗಿ ಇಂದ್ರಿಯನಿಗ್ರಹ ಮಾಡುವದೇ ಉತ್ತಮವು. ॥೪೭॥

ಇಂದ್ರಿಯಾಣಾಂ ಹಿ ಚರತಾಂ ಯನ್ಮನೋಽನುವಿಧೀಯತೇ ।
ತದಸ್ಯ ಹರತಿ ಪ್ರಜ್ಞಾಂ ವಾಯುರ್ನಾವಮಿವಾಂಭಸಿ ॥ ೬೭ ॥

[ಇಂದ್ರಿಯಾಣಾಮಿತಿ] ಇಂದ್ರಿಯೇ ಜೇ ಜೇ ಮ್ಹಣತೀ । ತೇ ತೇಚಿ ಜೇ ಪುರುಷ ಕರಿತೀ । ತೇ ತರಲೇಚಿ ನ ತರತೀ । ವಿಷಯ ಸಿಂಧು ॥ ೪೮ ॥ ಜೈಸೀನಾವ ಥಡಿಯೇತಾಕಿತಾ । ಜರೀವರಪಡೀಹೋಯದುರ್ವಾತಾ । ತರೀ ಚುತಲಾಹೀ ಮಾಗೌತಾ । ಅಪಾವೋಪಾವೆ ॥ ೪೯ ॥ ತೈಸೀ ಪ್ರಾಪ್ತೆಹೀ ಪುರುಷೇ । ಇಂದ್ರಿಯೇ ಲಾಳಿಲೀ ಜರೀ ಕೌತುಕೇ । ತರೀ ಆಕ್ರಮಿಲಾ ಜಾಣ ದುಃಖೇ । ಸಂಸಾರಿಕೇ ॥ ೫೦ ॥

ಅರ್ಥ— ಇಂದ್ರಿಯಗಳ ಇಚ್ಛೆಯಂತೆ ನಡೆಯುವ ಮನುಷ್ಯನು ಸಂಸಾರಸಾಗರದಿಂದ ತಾನು ದಾಟಿದೆನೆಂದು ಭಾವಿಸಿದರೂ ಅವನು ನಿಜವಾಗಿ ಮುಕ್ತನಾಗಿರುವದಿಲ್ಲ. ॥ ೪೮ ॥ ನಾವು (ನೌಕೆಯು) ಪಾರಾಗಿ ದಂಡೆಗೆ ಹತ್ತುವಷ್ಟರಲ್ಲಿಯೇ ಬಿರುಗಾಳಿಯು ಉತ್ಪನ್ನವಾದರೆ ಅದು ಗಂಡಾಂತರದಲ್ಲಿ ಬೀಳುವದು. ॥ ೪೯ ॥ ಅದರಂತೆಯೇ ಕೃತಾರ್ಥನಾಗುವ ಸಮಯವು ಬಂದೊದಗಿರಲು ವಿನೋದಾರ್ಥವಾಗಿಯೇ ಆಗಲಿ ಇಂದ್ರಿಯ ಲಾಲನೆಗೆ ಮನುಷ್ಯನು ಸಿಲುಕಿದರೆ ಸಾಕು. ಅವನನ್ನು ಸಂಸಾರದುಃಖವು ಆವರಿಸಿಯೇ ತೀರುವದು. ॥ ೫೦ ॥

ತಸ್ಮಾದ್ಯಸ್ಯ ಮಹಾಬಾಹೋ ನಿಗೃಹೀತಾನಿ ಸರ್ವಶಃ ।
ಇಂದ್ರಿಯಾಣೀಂದ್ರಿಯಾರ್ಥೇಭ್ಯಸ್ತಸ್ಯ ಪ್ರಜ್ಞಾ ಪ್ರತಿಷ್ಠಿತಾ ॥ ೬೮ ॥

[ತಸ್ಮಾದಿತಿ] ಮ್ಹಣೋನಿ ಆಪುಲೀ ಆಪಣಪಯಾ । ಜರೀ ಇಂದ್ರಿಯೇ ಯೇತೀ ಆಯಾ । ತರೀ ಅಧಿಕ ಕಾಂಹೀ ಧನಂಜಯಾ । ಸಾರ್ಥಕ ಅಸೇ ॥ ೫೧ ॥ ದೇಬೇ ಕೂರ್ಮ ಜಿಯಾಪರೀ । ಉವಾ ಇಲಾ ಅವಯವ ಪಸರೀ । ನಾತರೀ ಇಚ್ಛಾವಶೇ ಆವರೀ । ಆಪಣಪೇಚಿ ॥ ೫೨ ॥ ತೈಸೀ ಇಂದ್ರಿಯೇ ಅಸೈತೀ ಹೋತಿ । ಜಯಾಚೇ ಮ್ಹಣೀತಲೇ ಕರಿತೀ । ತಯಾಚೀ ಪ್ರಜ್ಞಾ ಜಾಣ ಸ್ಥಿತೀ । ಪಾತಲೀ ಅಸೇ ॥ ೫೩ ॥ ಆತಾ ಆಣಿಕ ಏಕ ಗಹನ । ಪೂರ್ಣಾಚೆ ಚಿನ್ಹ । ಅರ್ಜುನಾ ತುಜ ಸಾಂಗೇನ-ಪರಿಸಪಾ ॥ ೫೪ ॥

ಅರ್ಥ— ಆದ್ದರಿಂದ ಧನಂಜಯಾ ಇಂದ್ರಿಯಗಳು ಸ್ವಾಧೀನವಾವ ಮೇಲೆ ಅದರಕಿಂತಲೂ ಹೆಚ್ಚಿನ ಸಾರ್ಥಕತೆ ಎಲ್ಲಿರುವದು ? ॥ ೫೧ ॥ ಹೀಗೆ ನೋಡು— ಆಮೆಯು ಹೇಗೆ ಪಿಸ್ತರಿಸಿದ ತನ್ನ ಅವಯವಗಳನ್ನು ಸ್ವೇಚ್ಛೆಯಿಂದ ಅಡಗಿಸಿಕೊಳ್ಳುತ್ತಿರುವದೋ, ॥ ೫೨ ॥ ಹಾಗೆಯೇ ಯಾವನು ಇಂದ್ರಿಯಗಳನ್ನು ತನ್ನ ಸ್ವಾಧೀನದಲ್ಲಿಟ್ಟುಕೊಂಡು ಅವುಗಳ ನಿಯಮನವನ್ನು ಮಾಡುತ್ತಾನೆಯೋ ಅವನೇ ಸ್ಥಿರಬುದ್ಧಿಯುಳ್ಳವನು. ॥ ೫೩ ॥ ಅರ್ಜುನನೇ, ಜ್ಞಾನೀ ಮನುಷ್ಯನ ಸೂಕ್ಷ್ಮವಾದ ಗಹನವಾದ ಇನ್ನೂ ಒಂದು ಲಕ್ಷಣವನ್ನು ಹೇಳುತ್ತೇನೆ ಕೇಳು. ॥ ೫೪ ॥

ಯಾ ನಿಶಾ ಸರ್ವಭೂತಾನಾಂ ತಸ್ಯಾಂ ಜಾಗರ್ತಿ ಸಂಯಮೀ ।
ಯಸ್ಯಾಂ ಜಾಗ್ರತಿ ಭೂತಾನಿ ಸಾ ನಿಶಾ ಪಶ್ಯತೋ ಮುನೇಃ ॥ ೬೯ ॥

[ಯಾ ನಿಶೇತಿ] ಜೇವೇ ಭೂತ ಜಾತ ನಿದೇಲೇ । ತೇಥೇಂಚಿ ಜಯಾ ಪಾಹಲೇ । ಆಣಿ ಜೀವ ಜೇಥ ಚೇಇಲೇ । ತೇಥ ನಿದ್ರಿತ ಜೋ ॥ ೫೫ ॥ ತೋಚಿ ತೋ ನಿರುಪಾಧಿ । ಅರ್ಜುನಾ ತೋ ಸ್ಥಿರಬುದ್ಧಿ । ತೋಚಿ ಜಾಣೇ ನಿರವಧಿ । ಮುನೀಶ್ವರ ॥ ೫೬ ॥

ಅರ್ಥ— ಸರ್ವಪ್ರಾಣಿಗಳಿಗೆ ತಿಳಿಯದ ಆತ್ಮಸ್ವರೂಪದ ವಿಷಯವು ಯಾವನಿಗೆ ಪೂರ್ಣವಾಗಿ ತಿಳಿದಿರುವದೋ ಮತ್ತು ಪ್ರಾಣಿಮಾತ್ರಗಳೆಲ್ಲ ಎಚ್ಚೆತ್ತಿರುವ ವಿಷಯಗಳಲ್ಲಿ ಯಾವನು ನಿದ್ರಿತನಾಗಿರುತ್ತಾನೆಯೋ, ಅವನೇ ನಿಜವಾದ ಸಂಯಮಿಯು. ॥ ೫೫ ॥ ಅರ್ಜುನನೇ, ಅವನೇ ಉಪಾಧಿರಹಿತನು. ಸ್ಥಿರಬುದ್ಧಿಯು. ಗಂಭೀರನು ಮತ್ತು ಮುನಿಗಳಲ್ಲಿ ಅಂದರೆ ಮುನಿಗಳಲ್ಲಿ ಅವನೇ ಶ್ರೇಷ್ಠವಾದ ಜ್ಞಾನಿಯು. ॥ ೫೬ ॥

ಆಪೂರ್ಯಮಾಣಮಚಲಪ್ರತಿಷ್ಠಂ । ಸಮುದ್ರ ಮಾಪಃ ಪ್ರವಿಶಂತಿ ಯದ್ವತ್'– ॥
ತದ್ವತ್ಕಾಮಾಯಂ ಪ್ರವಿಶಂತಿ ಸರ್ವೇ। ಸ ಶಾಂತಿಮಾಪ್ನೋತಿನಕಾಮಕಾಮೀ ॥೭೦॥

[ಆಪೂರ್ಯಮಾಣಾಮಿತಿ] ಪಾರ್ಥಾ ಆಣಿಕ ಹೀ ಪರೀ । ತೋ ಜಾಣೋ ಯೇಈಲ ಅವಧಾರೀ । ಜೈಸೀ ಅಕ್ಷೋಭತಾ ಸಾಗರೀ । ಅಖಂಡಿತ ॥ ೫೭ ॥ ಜ್ಹಿರೀ ಸರಿತಾವೋಘ ಸಮಸ್ತ । ಪರಿಪೂರ್ಣ ಹೋವೂನ ಮಿಳತ । ತ್ಹಿಗೇ ಅಧಿಕ ನೋಹೇ ಈಷತ । ಮುರ್ಯಾದಾ ನ ಸಾಂಡೀ ॥ ೫೮ ॥

ನಾತರೀ ಗ್ರೀಷ್ಮ ಕಾಳೀ ಸರಿತಾ । ಶೋಷೂನಿ ಜಾತೀ ಸಮಸ್ತಾ । ಪರೀ ನ್ಯೂನ ನವ್ಹೇ ಪಾರ್ಥಾ ಸಮುದ್ರ ಜೈಸಾ ॥ ೫೯ ॥ ತೈಸಾ ಪ್ರಾಪ್ತೀ ಋದ್ಧಿ ಸಿದ್ಧಿ । ತಯಾಸಿ ಕ್ಷೋಭ ನಾಹೀ ಬುದ್ಧೀ । ಆನೆ ನ ಪಾವತಾ ನ ಬಾಧೀ । ಅಧೃತಿ ತಯಾತೇ ॥ ೬೦ ॥ ಸಾಂಗೇ ಸೂರ್ಯಾಚ್ಯಾ ಘರೀ । ಪ್ರಕಾಶ ಕಾಯ ವಾತಿವೇರ್ಹೀ । ಕಾ, ನ, ಲಾವಿಜೇ ತರೀ ಅಂಧಕಾರೀ । ಕೋಂಡೇಲತೋ ॥ ೬೧ ॥ ದೇಖೇ ಋದ್ಧಿ ಸಿದ್ಧಿ ತಯಾಪರೀ । ಅಲೀ ಗೇಲ ಸೇನಕರೀ । ತೋಚಿ ಗುಂತಲಾ ಅಸೇ ಅಂತರೀ । ಮಹಾಸುಖೀ ॥ ೬೨ ॥ ಜೋ ಆಪುಲೇನಿ ನಾಗರಪಣೇ । ಇಂದ್ರಭುವನಾತೇ ಪಾಬಳೇ ವ್ಹಾಣೇ । ತೋ ಕೇವೀ ರಂಜೇ ಪಾಲವಣೇ । ಭಿಲ್ಲಾಂಚೇನಿ ॥ ೬೩ ॥ ಜೋ ಅಮೃತಾತೇ ಠೇ ತೇವೀ । ತೋ ಜೈಸಾ ಕಾಂಜೀ ನ ಸೇವೀ । ತೈಸಾ ಸ್ವಸುಖಾನುಭವೀ । ನ ಭೋಗೀ ಋದ್ಧಿ ॥ ೬೪ ॥ ಪಾರ್ಥಾ ನವಲಹೇ ಪಾಹೀ । ಜೇಥ ಸ್ವರ್ಗ, ಸುಖ ಲೇಖಣೇ ನಾಹೀ । ತೇಥ ಋದ್ಧಿ ಸಿದ್ಧಿ ಕಾಯೀ । ಪ್ರಾಕೃತಾ ಹೋತೀ ॥ ೬೫ ॥

ಅರ್ಥ— ಪಾರ್ಥಾ, ಇನ್ನೂ ಒಂದು ಪರ್ಯಾಯದಿಂದ ಆ, ಸ್ಥಿತ ಪ್ರಜ್ಞನಾದ ಮನುಷ್ಯನನ್ನು ಗುರುತಿಸಲು ಬರುತ್ತದೆ. ಸಮುದ್ರವು ನಿರಂತರವಾಗಿ ಪರಿಪೂರ್ಣವಾಗಿರುವಂತೆ ಆ ಪುರುಷನಾದರೂ ಪರಿಪೂರ್ಣನಾಗಿರುತ್ತಾನೆ. ॥ ೫೬ ॥ ಮಳೆಗಾಲದಲ್ಲಿ ನದಿಗಳ ಪ್ರವಾಹವು ಸಂಪೂರ್ಣ ತುಂಬಿ ಹೋಗಿ ಸಮುದ್ರಕ್ಕೆ ಕೂಡಿದರೂ ಅದು ಸ್ವಲ್ಪವಾದರೂ ತನ್ನ ಮರ್ಯಾದೆಯನ್ನು ಉಲ್ಲಂಘಿಸುವದಿಲ್ಲ. ॥ ೫೮ ॥ ಇಲ್ಲವೇ ಬೇಸಿಗೆಯ ಕಾಲದಲ್ಲಿ ಎಲ್ಲ ನೀರು ಆವಿಯಾಗಿ ಒಣಗಿ ಹೋದರೂ, ಆ ಸಮುದ್ರವು ಲೇಶ ಮಾತ್ರವೂ ಕಡಿಮೆಯಾಗುವದಿಲ್ಲ. ॥ ೫೯ ॥ ಹಾಗೆಯೇ ಋದ್ಧಿ ಸಿದ್ಧಿಗಳು ಪ್ರಸನ್ನವಾಗುವದರಿಂದ ಆ ಪುರುಷನಿಗೆ ಸಂತೋಷವಿಲ್ಲ. ಮತ್ತು ಪ್ರಸನ್ನವಾಗದಿದ್ದರೆ ಅಸಂತುಷ್ಟನಾಗಿಯೂ ಇಲ್ಲ. ॥ ೬೦ ॥ ಹೀಗೆ ನೋಡು— ಸೂರ್ಯನ ಮನೆಯಲ್ಲಿ ದೀವಿಗೆಯನ್ನು ಹಚ್ಚಿದರೇ ಪ್ರಕಾಶವುಂಟಾಗುವದೇ ? ಹಚ್ಚದಿದ್ದರೆ ಅವನಿಗೆ ಕತ್ತಲೆಯಲ್ಲಿ ಕುಳ್ಳಿರಬೇಕಾಗುವದೇ ಹೇಗೆ ? ॥ ೬೧ ॥ ಹೀಗೆ ನೋಡಲು ಆ ಪುರುಷನ ಮನೆಯಲ್ಲಿ ಋದ್ಧಿ ಸಿದ್ಧಿಗಳು ಬಂದರೇನು ? ಬಾರದಿದ್ದರೇನು ? ಅವುಗಳ ಸ್ಮರಣೆಸಹ ಅವನಿಗಿರುವದಿಲ್ಲ. ಕಾರಣ ಅವನ ಅಂತಃಕರಣವು ಪರಮಾತ್ಮನಾದ ಶ್ರೀಹರಿಯ ಎಡೆಯಲ್ಲಿ ರಮಿಸುತಲಿರುತ್ತದೆ. ॥ ೬೨ ॥ ಯಾವನು ತನ್ನ ಮನೆಯ ಸೌಂದರ್ಯದ ಮುಂದೆ ಇಂದ್ರಭುವನವೂ ಕೂಡ ತುಚ್ಛನೆಂದು ತಿಳಿಯುವನೋ ಅವನಿಗೆ ಭಿಲ್ಲರ ಗುಡಸಲಿನಿಂದ ಹೇಗೆ ಸಮಾಧಾನವಾಗುವದು ? ॥ ೬೩ ॥ ಯಾವನು ಅಮೃತಕ್ಕೆ ಹೆಸರಿಡುತ್ತಾನೋ ಅವನು ಗಂಜಿಯನ್ನು ಕುಡಿಯುವ ಬಗೆ ಹೇಗೆ ? ಹೀಗೆ ಆತ್ಮಾನಂದದಿಂದ ತೃಪ್ತನಾದ ಪುರುಷನು ಕ್ಷುದ್ರವಾದ ಋದ್ಧಿ ಸಿದ್ಧಿಗಳ ಉಪಭೋಗವನ್ನು ತೆಗೆದುಕೊಳ್ಳುವನೇ ? ॥ ೬೪ ॥ ಅರ್ಜುನಾ, ಇಂತಹ ಆಶ್ಚರ್ಯವೆಂಬುದನ್ನು ಪರೀಕ್ಷಿಸು—ಯಾವ ಪುರುಷನಿಗೆ ಸ್ವರ್ಗಸುಖದಂತಹ ಭೋಗದ ಪರಿವೆ ಇರುವದಿಲ್ಲವೋ ಅವನಿಗೆ ಕ್ಷುದ್ರವಾದ ಋದ್ಧಿ ಸಿದ್ಧಿಗಳ ಪಾಡೇನು? ಹೀಗೆ ಇರಲೂ ಅವರಿಗೆ ಋದ್ಧಿ ಸಿದ್ಧಿಗಳ ಆವಶ್ಯಕತೆ ಯಿರುವದೆಂದು ಅನ್ನುತ್ತಾರೆ. ಇಂತಹ ಆಶ್ಚರ್ಯವು ! ॥ ೬೫ ॥

ವಿಹಾಯ ಕಾಮಾನ್ಯಃ ಸರ್ವಾನ್ ಪುಮಾಂಶ್ಚರತಿ ನಿಃಸ್ಪೃಹಃ ।
ನಿರ್ಮಮೋ ನಿರಹಂಕಾರಃ ಸಶಾಂತಿಮಧಿಗಚ್ಛತಿ ॥ ೭೧ ॥

[ವಿಹಾಯೇತಿ] ಐಸಾ ಆತ್ಮಬೋಧೇ ತೋಷಲಾ । ಜೋ ಪರಮಾನಂದೇ ಫೋಕಲಾ । ತೋಚಿ ಸ್ಥಿರ ಪ್ರಜ್ಞ ಭಲಾ । ವೋಳಖ ತೂ ॥ ೬೬ ॥ ತೋ ಅಹಂಕಾರಾತೇ ದವಡುನೀ । ಸಕಳ ಕಾಮ ಸಾಂಡುನೀ । ವಿಜರೇ ವಿಶ್ವ ಹೋಉನೀ । ವಿಶ್ವಾಮಾಜೀ ॥ ೬೭ ॥

ಅರ್ಥ— ಹೀಗೆ ಆತ್ಮಬೋಧೆಯಿಂದ ಸಂತೋಷಹೊಂದಿ ಪರಮಾನಂದದಲ್ಲಿ ಮಗ್ನನಾದವನೇ ನಿಜವಾದ ಸ್ಥಿರಬುದ್ಧಿಯುಳ್ಳವನು ಅಥವಾ ಸ್ಥಿತಪ್ರಜ್ಞನು. ॥ ೬೬ ॥ ಅವನು ಅಹಂಕಾರವನ್ನು ದಂಡಿಸಿ (ಬಿಟ್ಟುಕೊಟ್ಟು) ಸರ್ವ ವಿಷಯ ಸುಖೋಪಭೋಗವನ್ನು ತ್ಯಜಿಸಿ ಜಗದಾಕಾರವಾಗಿ ಜಗತ್ತಿನಲ್ಲಿ ಸಂಚಾರ ಮಾಡುತ್ತಾನೆ. ॥ ೬೭ ॥

ಏಷಾ ಬ್ರಾಹ್ಮೀ ಸ್ಥಿತಿಃ ಪಾರ್ಥ ನೈನಾಂ ಪ್ರಾಪ್ಯ ವಿಮುಹ್ಯತಿ ।
ಸ್ಥಿತ್ವಾಸ್ಯಾಮಂತಕಾಲೇಽಪಿ ಬ್ರಹ್ಮನಿರ್ವಾಣಮೃಚ್ಛತಿ ॥ ೭೨ ॥

ಇತಿ ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ ಯೋಗಶಾಸ್ತ್ರೇ
ಶ್ರೀಕೃಷ್ಣಾರ್ಜುನಸಂವಾದೇ ಸಾಂಖ್ಯಯೋಗೋ ನಾಮ ದ್ವಿತೀಯೋಽಧ್ಯಾಯಃ ॥೨॥

[ವಿಸ್ತೃತಿ] ಹೇ ಬ್ರಹ್ಮಸ್ಥಿತಿ ನಿಃಸೀಮ । ಜೇ ಅನುಭವಿತೀ ನಿಷ್ಕಾಮ । ತೆ ಪಾವಲೇ ಪರಬ್ರಹ್ಮ । ಅನಾಯಾಸೇ ॥ ೬೮ ॥ ಜೇ ಚಿದ್ರೂಪೀ ಮಿಳತಾಂ । ದೇಹಾಂತೀಚೀ ವ್ಯಾಕುಳತಾ । ಆಡ ಠಾಕೋ ನ ಸಕೇ ಚಿತ್ತಾ । ಪ್ರಾಜ್ಞಾ ಜಯಾ ॥ ೬೯ ॥ ತೇಚಿ ಹೇ ಸ್ಥಿತಿ । ಸ್ವಮುಚಪೆ ಶ್ರೀಪತಿ । ಸಾಂಗತ ಆರ್ಜುನಾಪ್ರತಿ । ಸಂಜಯೋ ಮ್ಹಣೇ ॥ ೭೦ ॥ ಐಸೇ ಕೃಷ್ಣವಾಕ್ಯ ಐಕಿಲೇ । ತೇಥ ಅರ್ಜುನೇ ಮನೀ ಮ್ಹಣಿತಲೇ । ಆತಾ ಆಮುಚಿಯಾ ಕಾಜಾ ಆಲೇ । ಉಪಪತ್ತೀ ಇಯಾ ।೭೧॥ ಜೇ ಕರ್ಮ ಜಾತ ಆಳುವೇ । ಏಥ ನಿರಾಕಾರಿಲೇ ದೇವೇ । ತರೀ ಪಾರುಷಲೇ ಮ್ಯಾ ಜುಂಝುಮವೇ । ಮ್ಹಣೂನಿಯಾ ॥ ೭೨ ॥ ಐಸಾ ಶ್ರೀ ಅಚ್ಯುತಾಚಿಯಾ ಬೋಲಾ । ಚಿತ್ತೀ ಧನುರ್ಧರ ಉವಾಯಿಲಾ । ಆತಾ ಪ್ರಶ್ನ ಕರೀಲ ಭಲಾ । ಆಶಂಕೋನಿ ॥ ೭೩ ॥ ತೋ ಪ್ರಸಂಗ ಅಸೆ ನಾಗರ । ಜೋ ಸಕಳ ಧರ್ಮಾಸಿ ಆಗರ । ಕೀ ವಿವೇಕಾಮೃತ ಸಾಗರ । ವ್ಯಾಂತಹೀನ ॥ ೭೪ ॥ ಜೋ ಆಪಣ ಸರ್ವಜ್ಞ ನಾಥ । ನಿರೂಪಿತಾ ಹೋಈಲ ಶ್ರೀ ಆನಂತ । ಜ್ಞಾನದೇವ ಸಾಂಗೇಲ ಮಾತ । ನಿವೃತ್ತಿದಾಸ ॥೭೫॥

ಇತಿ ಶ್ರೀ ಜ್ಞಾನದೇವ ವಿರಚಿತಾಯಾಂ ಭಾವಾರ್ಥದೀಪಿಕಾಯಾಂ ದ್ವಿತೀಯೋಽಧ್ಯಾಯಃ ॥ ೨ ॥ ಶ್ಲೋಕ ೭೨; ಓವೀ ೭೫ ೫.

ಅರ್ಥ— ಇಂಥ ನಿಸ್ಸೀಮ ಅಂದರೆ ಅಸುರ್ಯಾದಿತವಾದ ಬ್ರಾಹ್ಮ ಸ್ಥಿತಿಯಲ್ಲಿರುವ ನಿಷ್ಕಾಮ ಪುರುಷನು ಅನುಭವ ತೆಗೆದುಕೊಳ್ಳುವುದರಿಂದ ಅವನು ಅನಾಯಾಸವಾಗಿ ಪರಬ್ರಹ್ಮನಲ್ಲಿ ಬೆರೆಯುತ್ತಾನೆ. ॥ ೬೮ ॥ ಜ್ಞಾನ ಸ್ವರೂಪನಾದ ಭಗವಾನ್ ಶ್ರೀ ಹರಿಯನ್ನು ಕೂಡಿಕೊಂಡ ಮೇಲೆ ಬ್ರಹ್ಮಸ್ಥಿತಿಯಿಂದ ದೇಹಾಂತ್ಯದಲ್ಲಿ ಆಗುವ ಕಷ್ಟವು ಅವರ ಮನಸ್ಸಿನಲ್ಲಿ ಕೂಡ ಬರುಸದಿಲ್ಲ ॥ ೬೯ ॥ ಸಂಜಯನು ಧೃತರಾಷ್ಟ್ರ ರಾಜನಿಗೆ ಅನ್ನುತ್ತಾನೆ— ಅದೇ ಈ ಸ್ಥಿತಿಯ ಸ್ವರೂಪವನ್ನು ಶ್ರೀಕೃಷ್ಣನು ಸ್ವತಃ ಅರ್ಜುನನಿಗೆ ಹೇಳಿದನು. ॥ ೭೦ ॥ ಹೀಗೆ ಶ್ರೀ ಕೃಷ್ಣನ ಭಾಷಣವನ್ನು ಕೇಳಿದಮೇಲೆ ಅರ್ಜುನನು ತನ್ನ ಮನಸ್ಸಿನಲ್ಲಿ ಅಂದದ್ದೇನಂದರೆ– ಈ ಯುಕ್ತಿಯು ಇನ್ನುಮೇಲೆ ನಮಗೆ ಒಳ್ಳೇ ಉಪಯೋಗವಾಯಿತು. ॥ ೭೧ ॥ ಸರ್ವ ಕರ್ಮಸಮುದಾಯವನ್ನೂ ಈ ಸ್ಥಳದಲ್ಲಿ ನಿಷೇಧ ಮಾಡಿದನೇನೋ ಸರಿ; ಆದರೆ ನಾನು ಯುದ್ಧ ಮಾಡಬೇಕೆನ್ನುವ ವಿಷಯವೇ ಬೇರೆ ಉಳಿದು ಹೋಯಿತಲ್ಲ! ॥ ೭೨ ॥ ಈ ಪ್ರಕಾರ ಶ್ರೀ ಕೃಷ್ಣನ ಭಾಷಣವನ್ನು ಕೇಳಿ ಅರ್ಜುನನು ತನ್ನ ಮನಸ್ಸಿನಲ್ಲಿ ಬಹಳೇ ಹರ್ಷಿತನಾದನು. ಆ ಮೇಲೆ ಅವನು ಸಂಶಯವನ್ನು ತೆಗೆದು ಮುಂದೆ ಗಹನವಾದ (ಆಶ್ಚರ್ಯಕರವಾದ) ಪ್ರಶ್ನೆಯನ್ನು ಮಾಡುವನು. ॥ ೭೩ ॥ ಆ ಸಂವಾದವು ಬಹಳೇ ಸುರಸವಾಗಿದ್ದು ಸರ್ವಧರ್ಮದ ಉತ್ಪತ್ತಿ ಸ್ಥಾನವೂ ಅರ್ಥಾತ್ ನಿರವಧಿಯಾದ ವಿಚಾರಾಮೃತದ ಸಮುದ್ರವೇ ಆಗಿರುವದು. ॥ ೭೪ ॥ ಆ ಸಂವಾದದ ವ್ಯಾಖ್ಯಾನವನ್ನು ಜಗದೀಶ್ವರನಾದ ಶ್ರೀ ಕೃಷ್ಣ ಪರಮಾತ್ಮನು ಸ್ವತಃ ಮಾಡುವನು. ಎಂಬುದಾಗಿ ಶ್ರೀ ನಿವೃತ್ತಿ ದಾಸನಾದ ಜ್ಞಾನದೇವನು ಹೇಳುವನು. ॥ ೭೫ ॥

ಶ್ರೀಮದ್ಭಗವದ್ಗೀತೆಯ ಮತ್ತು ಜ್ಞಾನೇಶ್ವರಿಯ ಸರಲ, ಸುಲಭ,
ಕನ್ನಡ ಭಾಷಾಂತರದ ಎರಡನೆಯ ಅಧ್ಯಾಯವು

ಸಮಾಪ್ತವು

॥ ಶ್ರೀಕೃಷ್ಣಾರ್ಪಣಮಸ್ತು ॥

ಜ್ಞಾನೇಶ್ವರಿ

ಮೂರನೆಯ ಅಧ್ಯಾಯವು

ಅರ್ಜುನ ಉವಾಚ —

ಜ್ಯಾಯಸೀ ಚೇತ್ಕರ್ಮಣಸ್ತೇ ಮತಾ ಬುದ್ಧಿರ್ಜನಾರ್ದನ ।
ತತ್ಕಿಂ ಕರ್ಮಣಿ ಘೋರೇ ಮಾಂ ನಿಯೋಜಯಸಿ ಕೇಶವ ॥ ೧ ॥

[ಜ್ಯಾಯಸೀತಿ] ಮಗ ಆಇಕಾ ಅರ್ಜುನೇ ಮ್ಹಣಿತಲೇ । ದೇವಾ ತುಮ್ಹಿ ಜೀವಾಕ್ಯ ಬೋಲಿಲೇ । ತೇ ಮ್ಯಾನಿಕೇ ಪರಿಸಿಲೇ । ಕೃಪಾನಿಧಿ ॥ ೧ ॥ ತೇಥ ಕರ್ಮ ಆಣಿಕರ್ತಾ । ಉರೇಚನಾ ಪಾಹತಾ । ಐಸೇ ಮತ ತುಝೇ ಶ್ರೀ ಅನಂತಾ । ನಿಶ್ಚಿತ ಜರೀ ॥ ೨ ॥ ತರೀ ಮಾತೇ ಕೇವೀ ಶ್ರೀಹರೀ । ಮ್ಹಣಸೀ ಪಾರ್ಥಾ ಸಂಗ್ರಾಮ ಕರೀ । ಇಯೇ ಲಾಜಸೀನಾ ಮಹಾಘೋರೀ । ಕರ್ಮೀ ಸುತಾ ॥ ೩ ॥ ಹಾ ಗಾ ಕರ್ಮ ತೂಚಿ ಅಶೇಷ । ನಿರಾಕರಿಸೀ ನಿಃಶೇಷ । ತರೀ ಮಜಕರವೀ ಹೇ ಹಿಂಸಕ । ಕಾ ಕರಿವಿಸೀ ॥ ೪ ॥ ತರೀ ಹೇಚಿ ವಿಚಾರೀ ಶ್ರೀಹೃಷೀ ಕೇಶಾ । ತೂ ಮಾನುನೇದಸಿ ಕರ್ಮಲೇಶಾ । ಆಣಿ ಯೇಸಣೇ ಹೇ ಹಿಂಸಾ । ಕರವೀತ ಆಹಾಸೀ ॥ ೫ ॥

ಅರ್ಥ— ಆ ಮೇಲೆ ಅರ್ಜುನನು ಅನ್ನುತ್ತಾನೆ– ದೇವಾ, ನೀವು ಯಾವ ಮಾತನ್ನು ಆಡಿದಿರೋ ಅದನ್ನು ಲಕ್ಷಪೂರ್ವಕವಾಗಿ ಕೇಳಿದೆನು. ॥ ೧ ॥ ವಿಚಾರಮಾಡಿ ನೋಡಿದರೆ ಆತ್ಮಸ್ವರೂಪದಲ್ಲಿ ಕರ್ಮ ಮತ್ತು ಕರ್ತಾ ಇವು ಉಳಿಯುವದೇ ಇಲ್ಲ. ಶ್ರೀ ಅನಂತಾ, ಇದೇ ನಿನ್ನ ನಿಶ್ಚಯವಾದ ಅಭಿಪ್ರಾಯವು ಇವ್ವರೆ. ॥ ೨ ॥ ಶ್ರೀ ಕೃಷ್ಣ ನೀನು ನನಗೆ "ಪಾರ್ಥಾ, ಯುದ್ಧಮಾಡು" ಎಂದು ಏಕೆ ಹೇಳುತ್ತಿರುವಿ ? ಈ ಭಯಂಕರವಾದ ಕರ್ಮದಲ್ಲಿ ನನ್ನನ್ನು ಏಕೆ ವ್ಯರ್ಥವಾಗಿ ದೂಡುತ್ತಿರುವಿರಿ ? ನಿಮಗೆ ಈ ವಿಷಯವಾಗಿ ಸ್ವಲ್ಪವಾದರೂ ಸಂಕೋಚವು ಹೇಗೆ ಉತ್ಪನ್ನವಾಗುವದಿಲ್ಲ. ॥ ೩ ॥ ಇ ಸರ್ವಕರ್ಮಗಳನ್ನು ನೀವು ನಿಷೇಧಿಸುತ್ತಿರುವಿರಿ. ಅಂದಬಳಿಕ ನನ್ನ ಕಡೆಯಿಂದ ಇಂಥ ಹಿಂಸಾತ್ಮಕವಾದ ಘೋರ ಪಾಪಕರ್ಮವನ್ನೇಕೆ ಮಾಡಿಸುತ್ತಿರುವಿರಿ ? ॥ ೪ ॥ ಆದರೆ ಹೃಷಿಕೇಶಾ, ಇವರ ವಿಚಾರವನ್ನು ನೀವೇ ಮಾಡಿರಿ. ನೀವು ಕರ್ಮಮಾರ್ಗಕ್ಕೆ ಇಷ್ಟು ಮಾನವನ್ನು ಕೊಟ್ಟು ನನ್ನ ಕೈಯಿಂದ ಈ ಹಿಂಸಾರೂಪವಾದ ಪಾತಕವನ್ನೇಕೆ ಮಾಡಿಸುತ್ತಿರುವಿರಿ. ॥ ೫ ॥

ವ್ಯಾಮಿಶ್ರೇಣೇವ ವಾಕ್ಯೇನ ಬುದ್ಧಿಂ ಮೋಹಯಸೀವ ಮೇ ॥
ತದೇಕಂ ವದನಿಶ್ಚಿತ್ಯ ಯೇನ ಶ್ರೇಯೋಽಹಮಾಪ್ನುಯಾಂ ॥ ೨ ॥

[ವ್ಯಾಮಿಶ್ರೇಣೇತಿ] ದೇವಾ ತುವಾಂಚಿ ಐಸೇ ಬೋಲಾವೇ । ತರೀ ಆಮ್ಹೀ ನೇಣತೀ ಕಾಯಕರಾವೇ । ಆತಾ ಸಂಪಲೇ ಮ್ಹಣೋ ಪಾ ಆಘವೇ । ವಿವೇಕಾಜೇ ॥ ೬ ॥ ಹಾ ಗಾ ಉಪದೇಶ ಜರೀ ಐಸಾ । ತರೀ ಅಪಭ್ರಂಶ ತೋ ಕೈಸಾ । ಆತಾಪುರಲಾ ಆಮ್ಹಾ ಧಿಂವಸಾ । ಆತ್ಮಬೋಧಾಚಾ ॥೭॥ ವೈದ್ಯಪಥ್ಯ ವಾರುನಿ ಜಾಯೇ । ಮಗ ಜರೀ ಅಪಣಚಿ ವಿಷಸುಯೇ । ತರೀ ರೋಗಿಯಾ ಕೈಸೇನಿ ಜಿಯೇ । ಸಾಂಗೇ ಮಜ ॥ ೮ ॥ ಜೈಸೇ ಆಂಧಳೇ ಸುಇಜೇ ಅವ್ಹಾಂಟಾ । ಕಾ, ಮಾಜವಣ ದೀಜೇ ಮರ್ಕಟಾ । ತೈಸಾ ಉಪದೇಶ ಹಾ, ಗೋಮಟಾ ವೋಢವಲಾ ಅಮ್ಹಾ ॥ ೯ ॥ ಮೀ ಅಧೀಚಿ ಕಾಹೀ ನೇಣಜೇ । ವರೀ ಕವಳಿಲೋ ಮೋಹೇ ಯೇಣಜೇ । ಶ್ರೀಕೃಷ್ಣಾ ವಿವೇಕ ಯಾ ಕಾರಣೇ । ಪುಸಿಲಾ

ತುಜ ॥ ೧೦ ॥ ತವ ತುಝೀ ಏಕೇಕ ನವಾ ಈ । ಏಥ ಉಪದೇಶಾ ಮಾಜೀ ಗೋವಾ ಈ ।
ತರೀ ಅನುಸರಲಿಯಾ ಕಾಈ । ಐಸೇ ಕೀಜೇ ॥ ೧೧ ॥ ಆಮ್ಹೀ ತನುಮನ ಜೀವೇ ।
ತುಝಿಯಾ ಬೋಲಾವೋಠಂಗಾವೇ । ಆಣಿ ತುವಾಂಚಿ ಐಸೇ ಕರಾವೇ । ತರೀ ಸರಲೇ ಮ್ಹಣೇ ॥ ೧೨ ॥
ಆತಾ ಐಸಿಯಾ ಪರೀ ಬೋಧಿಸೀ । ತರೀ ನಿಕೇ ಆಮ್ಹಾ ಕರಿಸೀ । ಏಥ ಜ್ಞಾನಾಚೀ ಅಸ ಕಾಯಸೀ ।
ಅರ್ಜುನ ಮ್ಹಣೇ ॥ ೧೩ ॥ ತರೀ ಯೇ ಜಾಣಿವೇಚೇ ಕೀರ ಸರಲೇ । ಪರೀ ಆಣೀಕ ಏಕ ಅಸೇ
ಜಾಹಲೇ । ಚೀಥಿತೇ ಡಹುಳಲೇ । ಮಾನಸ ಮಾಝೆ ॥ ೧೪ ॥ ತೇವೀಚಿ ಶ್ರೀಕೃಷ್ಣ ಹೇ ತುಝೇ ।
ಚರಿತ್ರ ಕಾಹೀ ನೇಣಿಜೇ । ಜರೀ ಚಿತ್ತ ಪಾಹಸೀ ಮಾಝೇ । ಯೇಣೇ ಮಿಷೆ ॥ ೧೫ ॥ ನಾತರೀ
ಝುಕವೀತ ಆಹಾಸೀ ಮಾತೇ । ಕೀ ತತ್ಪಚಿ ಕಥಿಸೀ ಧ್ವನಿತೇ । ಹೇ ಅವಗಮಿತಾನಿರುತೇ ।
ಜಾಣವೇನಾ ॥ ೧೬ ॥ ಮ್ಹಣೋನಿ ಆಇಕೇ ದೇವಾ । ಹಾ ಭಾವಾರ್ಥ ಆತಾ ನ ಬೋಲಾವಾ । ಮಜ
ವಿವೇಕ ಸಾಂಗಾವಾ । ಮರ್ಹಟಾ ಜೀ ॥ ೧೭ ॥ ಮೀ ಅತ್ಯಂತ ಜಡ ಅಸೇ । ಪರೀ ಐಸಾಹೀ ನಿಕೇ
ಪರಿಯೇಸೇ । ಶ್ರೀಕೃಷ್ಣ ಬೋಲಾವೇ ತುವಾ ತೈಸೇ । ಏಕನಿಷ್ಠ ॥ ೧೮ ॥ ದೇಖೇ ರೋಗಾತೇ
ಜೀಣಾವೇ । ಔಷಧ ತರೀ ದೇಯಾವೇ । ಪರೀ ತೇ ಆತಿರುಚ್ಯ ವ್ಯಾನೇ । ಮಧುರ ಜೈಸೇ ॥ ೧೯ ॥
ತೈಸೇ ಸಕಳಾರ್ಥ ಭರಿತ । ತತ್ತ್ವ ಸಾಂಗಾವೇ ಉಚಿತ । ವರೀ ಭೋಧ್ದೇ ಮಾಝೇ ಚಿತ್ತ ।
ಜಯಾಪರೀ ॥ ೨೦ ॥ ದೇವಾ ತುಜ ಐಸಾ ನಿಜಗುರೂ । ಆಜಿ ಆರ್ತಿ ಧಣೀಕಾ, ನ, ಕರೂ । ಏಥಭೇದ
ಕವಣಾಚೀ ಧರೂ । ತೂ ಮಾಯ ಆಮುಚೀ ॥ ೨೧ ॥ ಹಾ, ಗಾ ಕಾಮಧೇನೂ ಚೇ ದುಭತೇ ।
ದೈವೇ ಜಾಹಲೇ ಆಪೈತೇ । ತರೀ ಕಾಮನೇಚೀ ಕಾ, ತೇಥೇ । ವಾಣಿ ಕೀಜೇ ॥ ೨೨ ॥ ಜರೀ ಚಿಂತಾ
ಮಣೀ ಹಾತಾಜಪ್ಪೇ । ತರೀ ವಾಂಚ್ಪೆಚೇ ಕವಣ ಸಾಂಕಡೇ । ಕಾ ಆಪುಲೇನಿ ಸುರವಾಡೇ । ಇಚ್ಛಾವೇ
ನಾ ॥ ೨೩ ॥ ದೇಖೇ ಅಮೃತ ಸಿಂಧೂತೇ ಠಾಕಾವೇ । ಮಗ ತಾಹಾನಾಚಿ ಜರೀ ಘುಟಾವೇ । ತರೀ
ಸಾಯಾಸ ಕಾ ಕರಾವೇ । ಮಾಗೀಲತೇ । ೨೪ ॥ ತೈಸಾ ಜನ್ಮಾಂತರೀ ಬಹುತೀ । ಉಪಾಸಿತಾ
ಶ್ರೀ ಕಮಳಾವತೀ । ತೋ ತೂ ದೈವೇ ಆಟೀ ಹಾತೀ । ಜಾಹಲಾಸೀ ಜರೀ ॥ ೨೫ ॥ ತರೀ ಆಪುಲೇಯಾ
ಸವೇಸಾ । ಕಾ, ನ ಮಾಗಾವಾಸಿ ಪರೇಶಾ । ದೇವಾ ಸುಕಾಳಹಾ ಮಾನಸಾ । ಪಾಹಲಾ ಅಸೇ ॥ ೨೬ ॥
ದೇಖೆ ಸಕಳಾರ್ತೀಚೇ ಜಿಯಾಲೇ । ಆಜೀ ಪುಣ್ಯ ಯಶಾಸಿ ಆಲೇ । ಹೇ ಮನೋರಥ ಜಾಹಾಲೇ ।
ವಿಜಯೀ ಮಾಝೇ ॥ ೨೭ ॥ ಜೀಚೀ ಪರಮ ಮಂಗಳ ಧಾಮಾ । ಸಕಳ ದೇವ ದೇವೋತ್ತಮಾ ।
ತೂ ಸ್ವಾಧೀನ ಆಜೀ ಆಮ್ಹಾ । ಮ್ಹಣವುನಿಯಾ ॥ ೨೮ ॥ ಜೈಸೇ ಮಾತೇಚ್ಯಾಠಾಯೀ । ಅಪತ್ಯಾ
ಆನವಸರ ನಾಹೀ । ಸ್ತನ್ಯಾ ಲಾಗೂನಿ ಪಾಹೀ । ಜಿಯಾಪರೀ ॥ ೨೯ ॥ ತೈಸೆದೇವಾ ತೂತೇ । ಪುಸಿ
ಜತಸೇ ಆವಡೇ ತೇ । ಆಪುಲೇನಿ ಆರ್ತೆ । ಕೃಪಾನಿಧಿ ॥ ೩೦ ॥ ತರೀ ಪಾರತ್ರಿಕೀ ಹಿತ । ಆಣಿ ಆಚರಿತಾ
ತರೀ ಉಚಿತ । ತೇ ಸಾಂಗೇ ಏಕ ನಿಶ್ಚಿತ । ಪಾರ್ಥ್ಯಮ್ಹಣೇ ॥ ೩೧ ॥

ಅರ್ಥ— ದೇವಾ, ನೀನೇ ಹೀಗೆ ಮಾತನಾಡಲುದ್ಯುಕ್ತರಾದರೆ ಅಜ್ಞಜನರಾದ ನಾವೇನು ಮಾಡಬೇಕು ? ಈಗ ಎಲ್ಲ ವಿವೇಕವಿಚಾರವೇ ಮುಗಿದುಹೋಗಿದೆಯೆಂದು ತಿಳಿಯಬೇಕು. ॥ ೬ ॥ ಅಜ್ಞಾನವನ್ನು ಹೋಗಲಾಡಿಸುವದರ ದೆಸೆಯಿಂದ ಇಂಥ ಸಂದಿಗ್ಧ ಉಪದೇಶವನ್ನು ಮಾಡಿದರೆ ಅದರಕಿಂತಲೂ ಹೆಚ್ಚಿನ ಭ್ರಮೆಯಾದರೂ ಯಾವುದು ? ಎಂಬುದನ್ನು ನೀನೇ ಹೇಳು ನಿಮ್ಮ ಕಡೆಯಿಂದ ಆತ್ಮಬೋಧೆಯು ಜ್ಞಾನವನ್ನು ಪ್ರಾಪ್ತಮಾಡಿಕೊಳ್ಳಬೇಕೆಂಬ ನಮಗೆ ಮನೋಬಯಕೆಯು ಈ ಉಪದೇಶದಿಂದ ಪೂರ್ಣವಾಯಿತೇ ? ॥ ೭ ॥ ವೈದ್ಯನು ರೋಗಿಯ ಪ್ರಕೃತಿಯನ್ನು ಪರೀಕ್ಷಿಸಿ ಪಥ್ಯವನ್ನು ಹೇಳಿಹೋದ ಮೇಲೆ ತಾನಾಗಿಯೇ ಔಷಧದಲ್ಲಿ ವಿಷವನ್ನು ಹಾಕಿಹೋದರೆ, ರೋಗಿಯು ಬದುಕುವ ಬಗೆ ಹೇಗೆ ? ॥ ೮ ॥ ಕುರುಡನಿಗೆ ಅಡ್ಡಹಾದಿ ಹಿಡಿಸಬೇಕು ಇಲ್ಲವೇ ಮರ್ಕಟಕ್ಕೆ ಸುರಾಪಾನ ಮಾಡಿಸಬೇಕು ಇದ

ರಂತೆಯೇ ನಿಮ್ಮ ಉತ್ತಮವಾದ ಉಪದೇಶವು ನನಗೆ ಚನ್ನಾಗಿ ಫಲದ್ರೂಪವಾಯಿತು !? ॥ ೯ ॥ ಮೊದಲಿಗೇ ನನಗೆ ಏನೂ ತಿಳಿಯುವದಿಲ್ಲ. ಆದರಲ್ಲಿ ಈಗ ನಾನು ಮೋಹದಿಂದ ಭ್ರಮಿಷ್ಟನಾಗಿದ್ದೇನೆ. ಆದ್ದರಿಂದ ಶ್ರೀಕೃಷ್ಣಾ, ನಿನಗೆ ವಿವೇಕದ ಸಲಹೆಯನ್ನು ಕೇಳಿದೆನು. ॥ ೧೦ ॥ ಆದರೆ ನಿಮ್ಮ ಮಾತಿನಲ್ಲಿ ಒಂದೊಂದು ಚಮತ್ಕಾರವೇ ! ನಿಮ್ಮ ಉಪದೇಶದಲ್ಲಿಯೂ ಒಂದುತರಹದ ಗೊಂದಲವೇ (!) ಕಂಡುಬರುತ್ತದೆ. ನಿನ್ನನ್ನೇ ಆಶ್ರಯಿಸಿ ನಿನಗೆ ಶರಣುಬಂದ ಸದ್ಭಕ್ತರಿಗೆ ನೀನು ಹೀಗೆ ಮಾಡುವದು ಸರಿಯೇ ? ॥ ೧೧ ॥ ನಾವು ಕಾಯಾ-ವಾಚಾ-ಮನಸಿಂದ ನಿಮ್ಮ ಮಾತಿನ ಮೇಲೆ ವಿಶ್ವಾಸವನ್ನಿಡಬೇಕು; ನೀವು ಮಾತ್ರ ಹೀಗೆ ವರ್ತಿಸಬೇಕು ! ಹೀಗೆ ಮಾಡಿದರೆ ನಮ್ಮ ಅವಸ್ಥೆಯೇ ಮುಗಿದಂತಾಯಿತು ! ॥ ೧೨ ॥ ಅರ್ಜುನನು ಅನ್ನುತ್ತಾನೆ— ಆದರೆ, ಈಗ ಇಂಥ ಪ್ರಕಾರದ ಬೋಧನನ್ನು ಮಾಡಹತ್ತಿದರೆ ನಾವು ನಿಶ್ಚಯವಾಗಿ ತೊಡಕಿನಲ್ಲಿ ಶಿಲುಕುತ್ತೇವೆ. ಇದರಿಂದ ನಮಗೆ ಜ್ಞಾನಪ್ರಾಪ್ತಿಯ ಆಶೆಯಾದರೂ ಹೇಗೆ ಹುಟ್ಟಬೇಕು ॥ ೧೩ ॥ ಇನ್ನು ಇಲ್ಲಿ ಜ್ಞಾನದ ಆಶೆಯಂತೂ ಇಲ್ಲದಂತಾಯಿತು. ಇಷ್ಟೇ ಅಲ್ಲ ನನ್ನ ಮನಸ್ಸಿನಲ್ಲಿ ಸ್ಥಿರತೆಯೇ ಇಲ್ಲದಂತಾಗಿ ಮತ್ತೆ ಮತ್ತೆ ತೊಡಕಿನಲ್ಲಿಯೇ ಬೀಳುತ್ತಿದ್ದೇನೆ. ॥ ೧೪ ॥ ಅದೇ ಪ್ರಕಾರ ಶ್ರೀಕೃಷ್ಣಾ, ನಿನ್ನ ಲೀಲೆಯು ನಮಗೆ ತಿಳಿಯಲಸಾಧ್ಯವಾಗಿರುವದು. ಈ ಉಪದೇಶದ ನಿಮಿತ್ಯದಿಂದ ನನ್ನ ಮನಸನ್ನು ಪರೀಕ್ಷಿಸ ಬೇಕೆಂದಿರಬಹುದು. ಇದು ಯಾರಿಗೆ ತಿಳಿಯಬೇಕು ? ॥ ೧೫ ॥ ಇಲ್ಲವೇ ನನ್ನನ್ನು ವಂಚಿಸುತ್ತಿರಬಹುದು. ಅಥವಾ ಗೂಢಾರ್ಥದಿಂದ ಬ್ರಹ್ಮಸ್ವರೂಪನನ್ನು ಹೇಳುತ್ತಿರಬಹುದು. ವಿಚಾರಿಸಲು ಇದರಲ್ಲಿ ನಿಜವಾದದ್ದಾವುದೆಂಬುದೇ ನನಗೆ ತಿಳಿಯದಂತಾಗಿದೆ. ॥ ೧೬ ॥ ಆದುದರಿಂದ ದೇವಾ ಕೇಳು,— ಈ ಗೂಢಾರ್ಥವನ್ನು ನನಗೆ ಹೇಳದೇ ನಿಶ್ಚಿತವಾದ ನಿಮ್ಮ ವಿವೇಕದ ಮಾತು ಯಾವುದೆಂಬುದನ್ನು ನನಗೆ ಹೇಳಬೇಕು. ಆ ಮಾತು ಅವಿಚಾರೀ, ಅಜ್ಞಾನೀ, ಮೂರ್ಖನಿಗೂ ಸಹ ತಿಳಿಯುವಂತೆ ಸ್ಪಷ್ಟವಾಗಿ ಹೇಳಬೇಕು. ॥ ೧೭ ॥ ಶ್ರೀಕೃಷ್ಣಾ, ನಾನು ಅತಿ ಮಂದಬುದ್ಧಿಯುಳ್ಳವನಾಗಿದ್ದೇನೆ. ಕಾರಣ ಇಂಥ ಮಂದಮತಿಗೂ ಕೂಡ ತಿಳಿಯುವಂತೆ ಒಂದೇ ನಿಶ್ಚಯಾತ್ಮಕ ಉಪದೇಶವನ್ನು ನನಗೆ ಮಾಡಬೇಕು. ॥ ೧೮ ॥ ಹೀಗೆ ನೋಡಿ, ಔಷಧ ತೆಗೆದುಕೊಂಡು ರೋಗನಿವಾರಣೆಯೂ ಆಗಬೇಕು, ಔಷಧವು ಮಧುರವೂ ರುಚಿಕರವೂ ಆಗಿರಬೇಕು. ॥ ೧೯ ॥ ಅದೇ ಪ್ರಕಾರ ಎಲ್ಲ ಅರ್ಥದಿಂದ ಪರಿಪೂರ್ಣವಾದದ್ದೂ, ಆಚರಣ ಮಾಡಲಿಕ್ಕೆ ಯೋಗ್ಯವಾದದ್ದೂ ಆದ ತತ್ವವನ್ನು ನನಗೆ ಉಪದೇಶಿಸಬೇಕು. ಆದರೆ ಯಾವ ರೀತಿಯಿಂದ ನನ್ನ ಮನಸ್ಸಿನಲ್ಲಿ ಸಂಶಯವು ಹೋಗಿ ಪೂರ್ಣಬೋಧವಾದೀತು, ಆ ರೀತಿಯಿಂದ ಉಪದೇಶಿಸು. ॥ ೨೦ । ದೇವಾ, ನಿಮ್ಮಂಥ ನಿಜವಾದ ಗುರುವು ನನಗೆ ದೊರಕಿರಲು ಇಂದು ನಾನು ನನ್ನ ಮನೋಬಯಕೆಯನ್ನು ಏಕೆ ಪೂರ್ಣಮಾಡಿ ಕೊಳ್ಳದಿರಲಿ ? ನನ್ನ ಮಾತೃಸ್ವರೂಪನಾದ ನೀನು ಇಲ್ಲಿರಲು ನಾನು ನಾಚಿಕೊಳ್ಳುವದಾದರೂ ಯಾರ ಸಲುವಾಗಿ ? ॥ ೨೧ ॥ ದೈವಯೋಗದಿಂದ ಕಾಮಧೇನುವು ಪ್ರಾಪ್ತವಾಗಿರಲು ತನ್ನ ಅಪೇಕ್ಷೆಯಾದದ್ದನ್ನು ಬೇಡಲು ಕಡಿಮೆಯಾಕೆ ಮಾಡಬೇಕು ? ॥ ೨೨ ॥ ಇಲ್ಲವೇ ಚಿಂತಾಮಣಿಯು ಹಸ್ತಗತವಾದ ಮೇಲೆ ಮನೋಬಯಕೆಯ ಪದಾರ್ಥವನ್ನು ತರಲು ಕಷ್ಟವನ್ನೇಕೆ ಪಡಬೇಕು ? ತನಗೆ ಅಪೇಕ್ಷೆಯಾದದ್ದೆಲ್ಲವನ್ನು ಬೇಡಬಾರದೇಕೆ ? ॥ ೨೩ ॥ ನೋಡಿರಿ— ಅಮೃತಸಿಂಧುವಿನ ದಂಡೆಯಲ್ಲಿ ನಿಂತು ಅದನ್ನು ಸೇವಿಸದೇ ನೀರಡಿಕೆಯಿಂದ ಬಳಲಹತ್ತಿದರೆ ಅಲ್ಲಿಯ ವರೆಗೆ ಹೋಗುವ ಶ್ರಮವನ್ನಾದರೂ ಏಕೆ ವಹಿಸಬೇಕು. ॥ ೨೪ ॥ ಅದೇ ಪ್ರಕಾರ ಶ್ರೀಲಕ್ಷ್ಮೀಪತೇ, ಜನ್ಮಜನ್ಮಾಂತರದಲ್ಲಿ ನಿನ್ನ ಉಪಾಸನೆಯನ್ನು ಬಹಳರೀತಿಯಿಂದ ಮಾಡಿದ ಮೇಲೆ ದೈವಯೋಗದಿಂದ ನೀನು ನಮಗೆ ದೊರಕಿರುವಿ. ॥ ೨೫ ॥ ಅಂದ ಮೇಲೆ ಪರಮೇಶ್ವರಾ, ನಮ್ಮ ಇಚ್ಛೆಯಾದಂತೆ ನಮಗೆ ಬೇಕಾದುದೆಲ್ಲವನ್ನೂ ನಿನ್ನನ್ನೇಕೆ ಬೇಡಿಕೊಳ್ಳಬಾರದು ? ದೇವಾ, ಈಹೊತ್ತಿನ ದಿವಸ ಮನಸಿನಲ್ಲಿಯ ಅಪೇಕ್ಷೆಯು ಪೂರ್ಣವಾಗುವ ಭಾಗ್ಯವು ಉದಯವಾಗಿರುತ್ತದೆ. ॥ ೨೬ ॥ ಹೀಗೆ ನೋಡು ಈ ಹೊತ್ತೇ ನನ್ನ ಸಕಲ ಮನೋರಥವು ಪರಿಪೂರ್ಣವಾಗಿ ನನ್ನ ಪೂರ್ವಪುಣ್ಯ ಫಲದ್ರೂಪವಾದುದ ರಿಂದ ಸರ್ವಮನೋರಥಗಳೂ ಕೈಗೂಡಿರುವವು. ॥ ೨೭ ॥ ಕಾರಣ ಪರಮಕಲ್ಯಾಣದ ಜನ್ಮಸ್ಥಾನ, ಸಕಲ ದೇವತೆಗಳಲ್ಲಿ ಶ್ರೇಷ್ಠ, ಸರ್ವೋತ್ತುಮನಾದ ಶ್ರೀಕೃಷ್ಣಾ, ನೀನು ಈ ಹೊತ್ತಿನ ದಿವಸ ನಮ್ಮ ಅಧೀನನಾಗಿರುವಿ ॥ ೨೮ ॥

ತಾಯಿಯ ಸ್ತನಪಾನ ಮಾಡಲಿಕ್ಕೆ ಕೂಸಿಗೆ ಹೇಗೆ ಯೋಗ್ಯ ಮತ್ತು ಅಯೋಗ್ಯಕಾಲವೆಂಬ ತೊಂದರೆಯು ಇರುವದಿಲ್ಲವೋ, ॥ ೨೯ ॥ ಅದೇ ಪ್ರಕಾರ ದೇವಾ, ಕೃಪಾನಿಧೇ, ನನ್ನ ಇಚ್ಛೆಯ ಅನುಗುಣವಾಗಿ ಬೇಕಾದದ್ದನ್ನು ಕೇಳಿಕೊಳ್ಳುತ್ತೇನೆ. ॥ ೩೦ ॥ ದೇವಾ, ಇಹಲೋಕದಲ್ಲಿ ಆಚರಣಮಾಡಲಿಕ್ಕೆ ಯೋಗ್ಯ ಮತ್ತು ಪರಲೋಕದಲ್ಲಿ ಹಿತಕರವಾದ, ನಿಶ್ಚಿತವಾದ ಒಂದು ಮಾತನ್ನು ನನಗೆ ಹೇಳು. ॥ ೩೧ ॥

ಶ್ರೀ ಭಗವಾನುವಾಚ—

ಲೋಕೇಽಸ್ಮಿನ್ದ್ವಿವಿಧಾ ನಿಷ್ಠಾ ಪುರಾ ಪ್ರೋಕ್ತಾ ಮಯಾನಘ ।
ಜ್ಞಾನಯೋಗೇನ ಸಾಂಖ್ಯಾನಾಂ ಕರ್ಮಯೋಗೇನ ಯೋಗಿನಾಂ ॥ ೩ ॥

[ಲೋಕೇಽಸ್ಮಿನ್ನಿತಿ] ಯಾ ಬೋಲಾ ಶ್ರೀ ಅಚ್ಯುತ । ಮ್ಹಣತ ಅಸೇ ವಿಸ್ಮಿತ । ಅರ್ಜುನಾ ಹಾ ಧ್ವನಿತ । ಅಭಿಪ್ರಾವೋ ॥ ೩೨ ॥ ಜೇ ಬುದ್ಧಿಯೋಗ ಸಾಂಗತಾ । ಸಾಂಖ್ಯಮತ ಸಂಸ್ಥಾ । ಪ್ರಕಟಿಲೀ ಸ್ವಭಾವತಾ । ಪ್ರಸಂಗೇ ಆಮ್ಹೀ ॥ ೩೩ ॥ ತೋ ಉದ್ದೇಶ ತೂ ನೇಣಸೀಚಿ । ಮ್ಹಣೋನಿ ಶಿಣಲಾಸಿ ವಾಯಾಂಚಿ । ತರೀ ಆತಾ ಜಾಣೇ ಮೀಚಿ । ಉಕ್ತದೋನ್ಹೀ ॥ ೩೪ ॥ ಅವಧಾರೀ ವೀರಶ್ರೇಷ್ಠಾ । ಯೇ ಲೋಕೀ ಯಾ ದೋನೀ ನಿಷ್ಠಾ । ಮಜಚಿ ಪಾಸೂನಿ ಪ್ರಗಟಾ । ಅನಾದಿ ಸಿದ್ಧ ॥ ೩೫ ॥ ಏಕ ಜ್ಞಾನಯೋಗ ಮ್ಹಣಿಜೆ । ಜೋ ಸಾಂಖ್ಯೀ ಅನುಷ್ಠಿಜೇ । ಜೇಥ ವೋಳ ಖೀಸವೇ ಪಾವಿಜೇ । ತದ್ರೂಪತಾ ॥ ೩೬ ॥ ಏಕ ಕರ್ಮಯೋಗ ಜಾಣ । ಜೇಥ ಸಾಧಕ ಜನ ನಿಪುಣ । ಹೋವುನಿಯಾ ನಿರ್ವಾಣ । ಪಾವತೀ ವೇಳೇ ॥ ೩೭ ॥ ಹೇ ಮಾರ್ಗ ತರೀ ದೋನೀ । ಪರೀ ಏಕನಟತೀ ನಿದಾನೀ । ಜೈಸೇ ಸಿದ್ಧ ಸಾಧ್ಯ ಭೋಜನೀ । ತೃಪ್ತಿ ಏಕ ॥ ೩೮ ॥ ಕಾ ಪೂರ್ವಾಪರ ಸರಿತಾ । ಭಿನ್ನ ದಿಸತೀ ವಾಹತಾ । ಮಗ ಸಿಂಧೂ ಮಿಳಣೀ ಐಕ್ಯ ತಾ । ಪಾವತೀ ಶೇಖೀ ॥ ೩೯ ॥ ತೈಸೇ ದೋನೀಹೀ ಮತೇ । ಸೂಚಿತೀ ಏಕಾ ಕಾರಣಾತೇ । ಪರೀ ಉಪಾಸ್ತಿತೇ ಯೋಗ್ಯತೇ । ಅಧೀನ ಅಸೇ ॥ ೪೦ ॥ ದೇಖೇ ಉತ್ಸ್ಪನವನಾ ಸರಿಸಾ । ಪಕ್ಷೀ ಫಳಾಸೀ ಝೆಪೂಂಬೇ ಜೈಸಾ । ಸಾಂಗೇ ನರ ಕೇವೀ ತೈಸಾ । ಪಾವೇ ವೇಗಾ ॥ ೪೧ ॥ ತೋಹಳೂ ಹಳೂ ಢಾಳೇ ಢಾಳೇ । ಕೇತುಲೇನಿ ಏಕೇ ವೇಳೇ । ಮಾರ್ಗಾಚೇನಿ ಬಳೇ । ನಿಶ್ಚಿತ ಠಾಕೇ ॥ ೪೨ ॥ ತೈಸೇ ದೇಖ ಪಾ ವಿಹಂಗ ಮಮತೇ । ಅಧಿಷ್ಠೂನಿ ಜ್ಞಾನಾತೇ । ಸಾಂಖ್ಯ ಸದ್ಯ ನೋಕ್ತಾತೇ । ಆಕಳಿತೀ ॥ ೪೩ ॥ ಯೇರ ಯೋಗಿಯೇ ಕರ್ಮಾಧಾರೇ । ವಿಹಿತೇಚಿ ನಿಜಾ ಚಾರೇ । ಪೂರ್ಣತಾ ಅವಸರೇ । ಪಾವತೇ ಹೋತೀ ॥ ೪೪ ॥

ಅರ್ಥ-- ಈ ಮಾತನ್ನು ಕೇಳಿ ಶ್ರೀ ಅಚ್ಯುತನು ಆಶ್ಚರ್ಯಚಕಿತನಾಗಿ ಅನ್ನುತ್ತಾನೆ— ಅರ್ಜುನನೇ ನಿನಗೆ ಯಾವ ಮಾತು ಹೇಳಿದೆನು. ಅದು ಸಾಂಕೇತಿಕ ಗೂಢವಾದ ಅರ್ಥವು ಇದೆ. ॥ ೩೨ ॥ ಈಶ್ವರಾರ್ಪಣ ಕರ್ಮಸಮಾರ್ಗವನ್ನು ಹೇಳುವಾಗ ಪ್ರಸಂಗಾನುಸಾರವಾಗಿ ಯಾವ ಆತ್ಮಾನಾತ್ಮ ವಿಚಾರದ ಅರ್ಥಾತ್ ಜ್ಞಾನ ಯೋಗದ ಮಹಿಮೆಯನ್ನು ನಾವು ಹೇಳಿ ಬಿಟ್ಟೆವು. ॥ ೩೩ ॥ ನಮ್ಮ ಆ ಉದ್ದೇಶವು ನಿನಗೆ ತಿಳಯಲಿಲ್ಲ. ಆದ್ದರಿಂದ ವ್ಯರ್ಥವಾಗಿ ನಿನಗೆ ಕ್ಷೋಭೆಯುಂಟಾಯಿತು. ಆದರೆ ಇನ್ನಾದರೂ ಹೇಳುತ್ತೇನೆ ಕೇಳು—ಜ್ಞಾನ ಯೋಗ ಮತ್ತು ಕರ್ಮಯೋಗ ಈ ಎರಡೂ ಮಾರ್ಗಗಳು ಯೋಗ್ಯವಾದವುಗಳೆಂದು ನಾನೇ ಹೇಳಿದ್ದೇನೆ. ॥ ೩೪ ॥ ಎಲೋ ವೀರ ಶ್ರೇಷ್ಠ, ಅರ್ಜುನನೇ ಕೇಳು, ಈ ಪೃಥ್ವಿಯಲ್ಲಿ ನಿಶ್ಚಿತವಾದ ಈ ಎರಡೂ ಮಾರ್ಗಗಳೂ ನನ್ನಿಂದಲೇ ಪೂರ್ವಪರಂಪರೆಯಿಂದ ಪ್ರಸಿದ್ಧ ಹೊಂದಿರುವವು ॥ ೩೫ ॥ ಜ್ಞಾನಯೋಗವೆಂದರೆ ಸಾಂಖ್ಯರು ಆಚರಣ ಮಾಡುತ್ತಾರೆ. ಆ ಜ್ಞಾನಯೋಗದಿಂದ ಬ್ರಹ್ಮಸ್ವರೂಪದ ಪರಿಚಯವಾದ ಕೂಡಲೇ ಅವರು ಮದ್ರೂಪ

ವನ್ನೇ ಹೊಂದುತ್ತಾರೆ ॥ ೩೬ ॥ ಒಂದು ಕರ್ಮಯೋಗವು ಅಲ್ಲಿ ಸಾಧಕರು (ಮುಮುಕ್ಷುಗಳು) ಕುಶಲರಾಗಿ ಕೆಲವು ಕಾಲದ ನಂತರ (ಅವಕಾಶದಿಂದ) ಮೋಕ್ಷವನ್ನು ಹೊಂದುತ್ತಾರೆ. ॥ ೩೭ ॥ ಈ ಮಾರ್ಗಗಳು ಎರಡು ಇದ್ದಾಗ್ಯಾದರೂ ಕಡೆಗೆ ಒಂದನ್ನೇ ಕೂಡುತ್ತವೆ. ಹೇಗೆಂದರೆ, ಸಿದ್ಧಪಡಿಸಿದ ಅನ್ನವನ್ನು ಭುಂಜಿಸಿದರೂ ಅಥವಾ ತಾನೇ ಕಷ್ಟಬಟ್ಟು ತಯಾರ ಮಾಡಿದ ಅನ್ನವನ್ನುಂಡರೂ, ತೃಪ್ತಿಯು ಮಾತ್ರ ಸಮಾನವಾಗಿರುವದು. ಅದರಂತೇ ಜ್ಞಾನ ಮತ್ತು ಕರ್ಮಯೋಗಗಳ ಕಡೆಯ ಪರಿಣಾಮವು ಒಂದೇ ಆಗಿರುವದು. ॥ ೩೮ ॥ ಅಥವಾ ಪೂರ್ವಪಶ್ಚಿಮ ದಿಕ್ಕಿನ ಮಾರ್ಗವಾಗಿ ನದಿಗಳು ಹರಿಯುವಾಗ ಅವು ಬೇರೆಯಾಗಿ ಕಂಡರೂ ಕಡೆಗೆ ಒಂದೇ ಕಡೆಗೆ ಬಂದು ಸಮುದ್ರವನ್ನೇ ಸೇರುತ್ತವೆ. ॥ ೩೯ ॥ ಅದರಂತೆಯೇ ಈ ಎರಡೂ ಮತಗಳೂ ಒಂದೇ ತತ್ವವನ್ನೇ ತೋರಿಸುತ್ತವೆ. ಆದರೆ ಆ ಉಪಾಸನೆಯು ಉಪಾಸನೆಯನ್ನು ಮಾಡುವವನ ಯೋಗ್ಯತೆಯ ಮೇಲೆ ಅವಲಂಬನವಾಗಿರುತ್ತದೆ. ॥ ೪೦ ॥ ಹೀಗೆ ನೋಡು, ಪಕ್ಷಿಯು ಒಂದೇ ಹಾರಿಕೆಯಲ್ಲಿ ವೃಕ್ಷದ ಮೇಲಿನ ಹಣ್ಣನ್ನು ತೆಗೆದುಕೊಳ್ಳುತ್ತದೆ. ಆದರೆ ಅದೇ ವೇಗದಿಂದ ಮನುಷ್ಯನಿಗೆ ಆ ಹಣ್ಣನ್ನು ತೆಗೆದುಕೊಳ್ಳಲು ಹೇಗೆ ಸಾಧ್ಯವಾಗಬೇಕು! ॥ ೪೧ ॥ ಅವನು ಮೆಲ್ಲಮೆಲ್ಲನೆ ಟೊಂಗೆಗಳಿಂದ ಟೊಂಗೆಗಳ ಮೇಲೇರಿ ಮಾರ್ಗಕ್ರಮಿಸುತ್ತ ಕೆಲವು ಕೂತ್ತಿನ ಮೇಲೆ ಆ ಹಣ್ಣಿನ ಹತ್ತಿರ ಹೋಗಿ ಮುಟ್ಟುವನು. ॥ ೪೨ ॥ ಅದೇ ಪ್ರಕಾರ ವಿಹಂಗಮ ಮಾರ್ಗದಿಂದ ಜ್ಞಾನಿಗಳು ತೀವ್ರವೇ ಮೋಕ್ಷಪ್ರಾಪ್ತಿಯನ್ನು ಮಾಡಿಕೊಳ್ಳುತ್ತಾರೆ. ॥ ೪೩ ॥ ಮಿಕ್ಕಾದ ಯೋಗಿಗಳು ಕರ್ಮಮಾರ್ಗವನ್ನಾಶ್ರಯಿಸಿ (ಪಿಪ್ಪಿಲಿಕ ಮಾರ್ಗದಿಂದ) ವಿಹಿತವಾದ ವರ್ಣಾಶ್ರಮ ಧರ್ಮದ ಆಚರಣೆಯನ್ನು ಮಾಡಿ ಪರಂಪರೆಯಿಂದ ಮೋಕ್ಷ ಪ್ರಾಪ್ತಿಯನ್ನು ಮಾಡಿಕೊಳ್ಳುತ್ತಾರೆ. ॥ ೪೪ ॥

ನ ಕರ್ಮಣಾ ಮನಾರಂಭಾನ್ನೈಷ್ಕರ್ಮ್ಯಂ ಪುರುಷೋಽಶ್ನುತೇ ।
ನ ಚ ಸಂನ್ಯಸನಾದೇವ ಸಿದ್ಧಿಂ ಸಮಧಿ ಗಚ್ಛತಿ ॥ ೪ ॥

[**ನ ಕರ್ಮಣಾಮಿತಿ**] ವಾಚೋನಿ ಕರ್ಮಾರಂಭ ಉಚಿತ । ನ ಕರಿತಾ ಸಿದ್ಧವತ । ಕರ್ಮ ಹೀನಾ ನಿಶ್ಚಿತ । ಹೋಇಜೇನಾ ॥ ೪೫ ॥ ಕೀ ಪ್ರಾಪ್ತ ಕರ್ಮ ಸಾಂಡಿ ಜೇ । ಯೇ ತು ಲೇನಿ ನೈಷ್ಕರ್ಮ್ಯ ಹೋಇಜೇ । ಹೇ ಅರ್ಜುನಾ ವಾಯಾ ಬೋಲಿ ಜೇ । ಮೂರ್ಖಪಣೆ ॥ ೪೬ ॥ ಸಾಂಗೇ ಪೈಲ ತೀರಾ ಜಾವೇ । ಐಸೇ ವ್ಯಸನ ಕಾಜೇಥ ಪಾವೇ । ತೇಥ ನಾವೇ ತೇ ತ್ಯಜಾವೇ । ಘಡೇ ಕೇವೀ ॥ ೪೭ ॥ ನಾ ತರೀ ತೃಪ್ತಿ ಇಚ್ಛಿ ಜೇ । ತರೀ ಕೈಸೆ ನೀ ಪಾಕ ನ ಕೀ ಜೇ । ಕೀ ಸಿದ್ಧಹೀ ನ ಸೇವಿಜೇ । ಕೇವೀ ಸಾಂಗೇ ॥ ೪೮ ॥ ಜವ ನಿರಾರ್ತ ತಾ ನಾಹೀ । ತವ ವ್ಯಾಪಾರ ಅಸೇ ಪಾಹೀ । ಮಗ ಸಂತುಷ್ಟೀಚ್ಯಾ ಠಾಯೀ । ಕುಂಠೇ ಸಹ ಜೇ ॥ ೪೯ ॥ ವ್ಹಣೋನಿ ಆಇಕೇ ಪಾರ್ಥಾ । ಜಯಾ ನೈಷ್ಕರ್ಮ್ಯ ಪದೀ ಆಸ್ಥಾ । ತಯಾ ಉಚಿತ ಕರ್ಮ ಸರ್ವಥಾ । ತ್ಯಾಜ್ಯ ನೋಹೇ ॥ ೫೦ ॥ ಆಣಿ ಆಪುಲಾಲಿಯೇ ಚಾಡೆ । ಆಪಾದಿಲೇ ಹೇ ಮಾಂಡೇ । ಕೀ ತ್ಯಜಿಲೇ ಕರ್ಮ ಸಾಂಡೇ । ಐಸೇ ಆಹೇ ॥ ೫೧ ॥ ಹೇ ವಾಯಾ ಚಿ ಸೈರಾ ಬೋಲಿಜೇ । ಉಕಲ ತರೀ ದೇಖೋನಿ ಪಾಹಿಜೇ । ಪರೀ ತ್ಯಜಿತಾ ಕರ್ಮ ನ ತ್ಯಜೇ । ನಿಭ್ರಾಂತ ಮಾನಿಜೇ ॥ ೫೨ ॥

ಅರ್ಥ – ಇದರ ಹೊರ್ತು ಆರಂಭದಿಂದ ಉಚಿತ ಕರ್ಮವನ್ನು ಬಿಟ್ಟುಕೊಟ್ಟು ಜ್ಞಾನೀ ಪುರುಷನಂತೆ ಸಿದ್ಧವತ್ ಆಚರಣೆ ಮಾಡುವ ಕರ್ಮಹೀನನಿಗೆ ನೈಷ್ಕರ್ಮ್ಯ ಸ್ಥಿತಿಯು ಅನಾಯಸೆ ಎಂದಿಗೂ ಬರಲಾರದು. ॥ ೪೫ ॥ ಇಲ್ಲವೇ ತಾನು ಮಾಡಬೇಕಾದ ವಿಹಿತ ಕರ್ಮವನ್ನು ಬಿಡುವದರಿಂದಲೇ ನಾನು ಕೃತಾರ್ಥನಾಗುವೆನೆಂದು ನಂಬುವದು ಕೇವಲ ಮೂರ್ಖತನವೇ ಆಗಿದೆ. ॥ ೪೬ ॥ ಮಹಾಪೂರು ಬಂದಿರುವ ನದಿಯನ್ನು ದಾಟ ಹೋಗುವ ಸಂಕಟ ಬಂದಿರಲು, ನೌಕೆಯನ್ನು ಬಿಟ್ಟು ಬೇರೆಯಾಗಿ ಹೇಗೆ ಹೋಗಲು ಬರುವದು? ಇದನ್ನು ನೀನೇ ಹೇಳು ನೋಡುವಾ. ॥ ೪೭ ॥

ಭೋಜನದಿಂದ ತೃಪ್ತಿಹೊಂದಬೇಕೆಂದು ಇಚ್ಛೆಯೇನೋ ಉಂಟು. ಆದರೆ ಅಡಿಗೆಯನ್ನೂ ಮಾಡದೇ, ಅಥವಾ ಮಾಡಿದ ಅಡಿಗೆಯನ್ನೂ ಉಣ್ಣದೇ ಅವನ ಇಚ್ಛೆಯು ಪೂರ್ತಿಯಾಗಬಹುದೇ ? ॥ ೪೮ ॥ ಎಲ್ಲಿಯವರೆಗೆ ನಿರಿಚ್ಛೆತೆಯು ಪ್ರಾಪ್ತವಾಗುವದಿಲ್ಲವೋ ಅಲ್ಲಿಯವರೆಗೆ ಪ್ರಯತ್ನವನ್ನು ಮಾಡಲಿಕ್ಕೇಬೇಕು. ಅದು ಪ್ರಾಪ್ತವಾದರೆ ಆತ್ಮ ಸಂತೋಷವುಂಟಾಗಿ ಎಲ್ಲ ವ್ಯಾಪಾರಗಳೂ ಸಹಜವೇ ನಿಂತುಬಿಡುತ್ತವೆ. ॥ ೪೯ ॥ ಆದುದರಿಂದ ಪಾರ್ಥಾ, ಯಾವನಿಗೆ ಪರಮಾತ್ಮ ಪ್ರಾಪ್ತಿಯ ಇಚ್ಛೆಯು ಉಂಟಾಗಿರುವದೋ ಅವನು ವಿಹಿತ ಕರ್ಮಾಚರಣೆಯನ್ನು ಎಂದಿಗೂ ಬಿಡಲಿಕ್ಕೆ ಬರುವದಿಲ್ಲ. ॥ ೫೦ ॥ ಮತ್ತೂ ತಮ್ಮ ಇಚ್ಛಾ ಪ್ರಕಾರವೇ ಕರ್ಮದ ಸ್ವೀಕಾರ ಮತ್ತು ತ್ಯಾಗ ಮಾಡಬೇಕೆನ್ನುವದು ಸಾಧ್ಯವೇನು ? ॥ ೫೧ ॥ ಈ ಸ್ವಚ್ಛಂದವಾದ ಭಾಷಣವು ವ್ಯರ್ಥವಾದದ್ದದೆ. ಅನುಭವದಿಂದ ಚೆನ್ನಾಗಿ ವಿಚಾರಮಾಡಿ ನೋಡಿದರೆ ಕರ್ಮಗಳನ್ನು ಬಿಡಬೇಕೆಂದರೆ ಅವುಗಳ ತ್ಯಾಗವು ಎಂದೂ ಆಗಲಾರದೆಂಬದನ್ನು ಧೃಢವಾಗಿ ನಂಬು. ॥ ೫೨ ॥

ನ ಹಿ ಕಶ್ಚಿತ್ಕ್ಷಣ ಮಪಿ ಜಾತು ತಿಷ್ಠತ್ಯ ಕರ್ಮಕೃತ್ ।
ಕಾರ್ಯತೇ ಹ್ಯವಶಃ ಕರ್ಮ ಸರ್ವಃ ಪ್ರಕೃತಿಜೈರ್ಗುಣೈಃ ॥ ೫ ॥

[ನ ಹಿ ಕಶ್ಚಿದಿತಿ] ಜವ ಪ್ರಕೃತೀಚೆ ಅಧಿಷ್ಠಾನ । ತವ ಸಾಂಡೀ ಮಾಂಡೀ ಹೇ ಅಜ್ಞಾನ । ಜೇ ಚೇಷ್ಟಾ ತೇ ಗುಣಾಧೀನ । ಆಪೈಸೀ ಅಸೇ ॥ ೫೩ ॥ ದೇಖೇ ವಿಹಿತ ಕರ್ಮ ಜೇತುಲೇ । ತೇ ಸಗಳೇ ಜರೀ ಮೋಸಂಡಿಲೇ । ತರೀ ಸ್ವಭಾವ ಕಾಯ ನಿ ಮಾಲೇ । ಇಂದ್ರಿಯಾಂಚೆ ॥ ೫೪ ॥ ಸಾಂಗೇ ಶ್ರವಣೇ ಐಕಾವೇ ಠೇಲೇ । ಕೀ ನೇತ್ರೀಚೇ ತೇಜಗೇಲೆ । ಹೇ ನಾಸಾರಂಧ್ರ ಬುಝಾಲೇ । ಪರಿಮಳ ನೇಘೆ ॥ ೫೫ ॥ ನಾ ತರೀ ಪ್ರಾಣಾಪಾನಗತಿ । ಕೀ ನಿರ್ವಿಕಲ್ಪ ಜಾಹಾಲೀ ಮತಿ । ಕೀ ಕ್ಷುದಾ ತೃಷಾದಿ ಆರ್ತಿ । ಖುಂಟಲಿಯಾ ॥ ೫೬ ॥ ಹೇ ಸ್ವಪ್ನಾವ ಬೋಧ ರೇಲೇ । ಕೀ ಚರಣ ಚಾಲೋ ವಿಸರಲೇ । ಹೇ ಅಸೋ ಕಾಯ ನಿಮಾಲೇ । ಜನ್ಮ ಮೃತ್ಯೂ ॥ ೫೭ ॥ ಹೇ ನ ತಕೇಚೀ ಜರೀ ಕಾಹೀ । ತರೀ ಸಾಂಡಿಲೆ ತೇ ಕಾಯೀ । ಮ್ಹಣೋನಿ ಕರ್ಮತ್ಯಾಗ ನಾಹೀ । ಪ್ರಕೃತಿಮಂತಾ ॥ ೫೮ ॥ ಕರ್ಮ ಪರಾಧೀನ ಪಣೇ । ನಿಪಜತ ಅಸೇ ಪ್ರಕೃತಿ ಗುಣೇ । ಯೇಂವೇ ಧರೀ ಮೊಕಳೇ ಅಂತಃಕರಣೇ । ವಾಹಿಜೇ ವಾಯಾ ॥ ೫೯ ॥ ದೇಖೇ ರಥೀ ಆರೂಢಿ ಜೇ । ಮಗ ಜರೀ ನಿಶ್ಚಳ ಬೈಸಿ ಜೇ । ತರೀ ಚಳ ಹೋವೂನಿ ಹಿಂಡಿ ಜೇ । ಪರ ತಂತ್ರಾ ॥ ೬೦ ॥ ಕಾ ಉಚಲಿಲೇ ವಾಯು ವಶೇ । ಚಳೇ ಶುಷ್ಕ ಪತ್ರ ಜೈಸೇ । ನಿಜೇಷ್ಟ ಆಕಾಶೇ ಪರಿಭ್ರಮೇ ॥ ೬೧ ॥ ತೈಸೇ ಪ್ರಕೃತಿ ಆಧಾರೇ । ಕರ್ಮೇಂದ್ರಿಯವಿಕಾರೇ । ನಿಷ್ಕರ್ಮ ಹೀ ವ್ಯಾಪಾರೇ । ನಿರಂತರ ॥ ೬೨ ॥ ಮ್ಹಣವೂನಿ ಸಂಗ ಜಂವ ಪ್ರಕೃತೀಚಾ । ತಂವ ತ್ಯಾಗ ನ ಘಡೇ ಕರ್ಮಾಚಾ । ಐಸಿಯಾಹಿ ಕರೂ ಮ್ಹಣತೀ ತಯಾಂಚಾ । ಆಗ್ರಹಚಿ ಉರೇ ॥೬೩॥

ಅರ್ಥ— ಎಲ್ಲಿಯವರೆಗೆ ಪ್ರಕೃತಿಯ ಆಶ್ರಯವು ಉಂಟಾಗಿರುವದೋ ಅಲ್ಲಿಯವರೆಗೆ ಕರ್ಮವನ್ನು ಸ್ವೀಕರಿಸುವದು ಅಥವಾ ತ್ಯಾಗಮಾಡುವದು ಈ ವಿಷಯವಾಗಿ ಮಾತನಾಡುವದು ಅಜ್ಞಾನವೇ ಸರಿ. ಯಾಕಂದರೆ ಪ್ರಕೃತಿಯ ಚೇಷ್ಟೆಯ (ವರ್ತನವು) ತನ್ನಿಂದ ತಾನೇ ಸತ್ತ್ವಾದಿ ಗುಣದ ಆಧೀನವಾಗಿರುತ್ತದೆ. ॥ ೫೩ ॥ ಅರ್ಜುನಾ ನೋಡು— ವಿಹಿತ ಕರ್ಮಗಳನ್ನಷ್ಟೇ ಬಿಟ್ಟುಬಿಟ್ಟರೆ ಇಂದ್ರಿಯಗಳ ಸ್ವಾಭಾವಿಕವಾದ ಗುಣವು ನಾಶವಾಗುವದೇ ? ॥ ೫೪ ॥ ವಿಹಿತ ಕರ್ಮ ತ್ಯಾಗ ಮಾಡುವದರಿಂದ ಕಿವಿಯಿಂದ ಕೇಳುವದು ನಿಂತು ಹೋಗಿರುವದೇನು ? ಇಲ್ಲಸೇ ಕಣ್ಣು ಕಾಣದಂತೆ ಆಗಿರುವುದೇನು ? ಇಲ್ಲವೇ ಮೂಗಿನ ರಂಧ್ರಗಳು ಮುಚ್ಚಿಹೋಗಿ ಸುಗಂಧ ದುರ್ಗಂಧಗಳ ವಾಸನೆಯು ತಿಳಿಯದಂತಾಗಿರುವುದೇನು ? ॥ ೫೫ ॥ ಇಲ್ಲವೇ ಪ್ರಾಣಾಪಾನ ವಾಯುವಿನ ಗತಿಯು ಬಂದಾಗಿರುವದೇ ? ಅಥವಾ ಸಂಕಲ್ಪ–ವಿಕಲ್ಪಾತ್ಮಕವಾದ ಈ ಮನಸು ಕಲ್ಪನಾರಹಿತವಾಗಿರುವದೇನು ? ಇಲ್ಲವೇ ಹಸಿವೆ ನೀರಡಿಕೆಗಳ ಮೇಲಿನ ಅಪೇಕ್ಷೆಯು ಇಲ್ಲದಂತಾಗಿರುವದೇನು ? ॥ ೫೬ ॥ ಅಥವಾ ಸ್ವಪ್ನ, ಜಾಗ್ರತೆ ಈ ಅವಸ್ಥೆಗಳು ನಾಶಹೊಂದಿರುವವೇನು ? ಮತ್ತು ಕಾಲುಗಳು ನಡೆಯುವದನ್ನು ಮರೆತಿರುವವೇನು? ಇವುಗಳಂತೂ ಹಾಗೇ ಇರಲಿ; ಜನನ–ಮರಣಗಳು ಇಲ್ಲದಂತೆ

ಆಗಿರುವನೇ ಹೇಗೆ ? ॥ ೫೭ ॥ ಆದರೆ ಈ ಇಂದ್ರಿಯಗಳ ವ್ಯಾಪಾರವು ನಿಲ್ಲುವದಿಲ್ಲ. ಅಂದ ಬಳಿಕ ನೀನು ಯಾವುದನ್ನು ಬಿಟ್ಟಿರುವಿ ? ಆದುದರಿಂದ ದೇಹಾಭಿಮಾನಿಗಳ ಕಡೆಯಿಂದ ಕರ್ಮತ್ಯಾಗ ಮಾಡುವದು ಎಂದಿಗೂ ಆಗಲಾರದು. ॥ ೫೮ ॥ ಕರ್ಮವು ಪರಾಧೀನವಾಗಿದ್ದು ಅಂದರೆ ಪ್ರಕೃತಿ ಗುಣಾಧೀನವಾಗಿ ಹುಟ್ಟುವದರಿಂದ ನಾನು ಕರ್ಮ ಮಾಡುವೆನು ಇಲ್ಲವೇ ಬಿಡುವೆನು ಎಂದು ತಿಳಿಯುವದು ವ್ಯರ್ಥವಾದದ್ದೇ ಆಗಿರುವದು. ॥ ೫೯ ॥ ನೋಡು ರಥದಲ್ಲಿ ಕುಳಿತಮೇಲೆ ಸುಮ್ಮನೇ ಕುಳಿತುಕೊಂಡರೂ ಅವನು ರಥದ ಆಧೀನನಾಗಿರುವದರಿಂದ, ರಥವು ಯಾವ ಕಡೆಗೆ ಹೋಗುವದೋ ಅತ್ತಕಡೆಗೇ ಹೋಗಬೇಕಾಗುವದು. ॥ ೬೦ ॥ ಇಲ್ಲವೇ ಒಣಗಿದ ಎಲೆಯು ನಿಶ್ಚೇಷ್ಟವಾಗಿದ್ದರೂ ಸಹ, ಗಾಳಿ ಬೀಸುವದರಿಂದ ಹಾರಿಹೋಗಿ ಆಕಾಶದಲ್ಲಿ ಹೇಗೆ ಭ್ರಮಣಮಾಡುವದೋ, ॥ ೬೧ ॥ ಹಾಗೆಯೇ ಪ್ರಕೃತಿಯ ಆಶ್ರಯದಿಂದ ಕರ್ಮೇಂದ್ರಿಯಗಳ ವಿಕಾರ ಉಂಟಾಗುವದರಿಂದ ನಿಷ್ಕಾಮ ಸ್ಥಿತಿಗೆ ಮುಟ್ಟಿದ ಮನುಷ್ಯನು ಕೂಡ ಯಾವಾಗಲೂ ಶಾರೀರಿಕ ಕರ್ಮಗಳನ್ನು ಮಾಡುತ್ತಾನೆ. ॥ ೬೨ ॥ ಆದ್ದರಿಂದ ಎಲ್ಲಿಯವರೆಗೆ ಪ್ರಕೃತಿಯ ಸಂಬಂಧವಿದೆಯೋ ಅಲ್ಲಿಯವರೆಗೆ ಕರ್ಮತ್ಯಾಗವು ಎಂದಿಗೂ ಸಂಭವಿಸಲಾರದು. ಹೀಗಿದ್ದಾಗ್ಯೂ ಯಾರು ಕರ್ಮವನ್ನು ಬಿಟ್ಟುಬಿಡುತ್ತೇವೆಂದು ಅನ್ನುವರೋ ಅವರದು ವ್ಯರ್ಥವಾದ ಹಟವು ಮಾತ್ರ ಉಳಿದಿರುತ್ತದೆ. ॥ ೬೩ ॥

ಕರ್ಮೇಂದ್ರಿಯಾಣಿಸಂಯಮ್ಯ ಯ ಆಸ್ತೇ ಮನಸಾ ಸ್ಮರನ್ ।
ಇಂದ್ರಿಯಾರ್ಥಾನ್ವಿಮೂಢಾತ್ಮಾ ಮಿಥ್ಯಾಚಾರಃ ಸ ಉಚ್ಯತೇ ॥ ೬ ॥

[ಕರ್ಮೇಂದ್ರಿಯಾಣೀತಿ] ಜೇ ಉಚಿತ ಕರ್ಮ ಸಾಂಡಿತೀ । ಮಗ ನೈಷ್ಕರ್ಮ್ಯ ಹೋ ಪಾಹತೀ । ಪರೀ ಕರ್ಮೇಂದ್ರಿಯ ಪ್ರವೃತ್ತೀ । ನಿರೋ ಧುನೀ ॥ ೬೪ ॥ ತಯಾ ಕರ್ಮತ್ಯಾಗ ನ ಘಡೇ । ಜೇ ಕರ್ತವ್ಯ ಮನೀ ಸಾಂಪಡೆ । ವರೀ ನಟತೀ ತೇ ಘುಡೇ । ದರಿದ್ರ ಜಾಣ ॥ ೬೫ ॥ ಐಸೇ ತೇ ಪಾರ್ಥಾ । ವಿಷಯಾಸಕ್ತ ಸರ್ವಥಾ । ವೋಳಖಾವೇ ತತ್ವ ತಾ । ಭ್ರಾಂತಿ ನಾಹೀ ॥ ೬೬ ॥ ಆತಾ ದೇಈ ಅವಧಾನ । ಪ್ರಸಂಗೇ ತುಜ ಸಾಂಗೇನ । ಯಾ ನೈರಾಶ್ಯಾಚೇ ಚಿನ್ಹ । ಧನುರ್ಧರಾ ॥ ೬೭ ॥

ಅರ್ಥ - ವಿಹಿತ ಕರ್ಮದ (ಶಾಸ್ತ್ರೋಕ್ತ ಕರ್ಮದ) ತ್ಯಾಗ ಮಾಡಿ ಕರ್ಮೇಂದ್ರಿಯಗಳ ನಿಗ್ರಹ ಮಾಡಿ ಇಷ್ಟರಿಂದಲೇ ಕರ್ಮಾತೀತನಾಗಲಿಕ್ಕೆ ಇಚ್ಛಿಸುತ್ತಾನೆ, ॥ ೬೪ ॥ ಅವನಿಗೆ ಕರ್ಮ ತ್ಯಾಗವು ಉಂಟಾಗುವದಿಲ್ಲ. ಕಾರಣ ಅವನ ಮನಸಿನಲ್ಲಿ ಕರ್ತವ್ಯ ಶೇಷವು ಉಳಿದು, ಕರ್ಮಾತೀತನಾದವನಂತೆ ಮೇಲಿಂದಲೇ ನಟಿಸುತ್ತಿರುತ್ತಾನೆ. ಆದರೆ ಮನಸಿನಲ್ಲಿ ಮಾತ್ರ ವಿಷಯಗಳನ್ನು ಸ್ಮರಿಸುತ್ತಿರುವ ಮೂಢನು ನಿಜವಾದ ಮಿಥ್ಯಾಚಾರಿಯೆಂದು ಅನಿಸಿಕೊಳ್ಳುತ್ತಾನೆ. ಇಂಥವನೇ ದರಿದ್ರನು. ॥ ೬೫ ॥ ಪಾರ್ಥಾ, ಹೀಗೆ ಈ ಪ್ರಾಣಿಗಳು ವಿಷಯಾಸಕ್ತರಾಗಿರುತ್ತಾರೆಂಬುದನ್ನು ನಿಃಸಂಶಯವಾಗಿ ನಂಬು. ॥ ೬೬ ॥ ಇನ್ನು ಮೇಲೆ ಅರ್ಜುನಾ, ಪ್ರಸಂಗಾನುಸಾರವಾಗಿ ನಿಜವಾದ ನಿರೀಚ್ಛ ಮನುಷ್ಯರ ಲಕ್ಷಣಗಳನ್ನು ಹೇಳುತ್ತೇನೆ. ಅದನ್ನು ಲಕ್ಷಪೂರ್ವಕವಾಗಿ ಕೇಳು. ॥೬೭॥

ಯಸ್ತ್ವಿಂದ್ರಿಯಾಣಿ ಮನಸಾ ನಿಯಮ್ಯಾರಭತೇऽರ್ಜುನ ।
ಕರ್ಮೇಂದ್ರಿಯೈಃ ಕರ್ಮಯೋಗಮಸಕ್ತಃ ಸ ವಿಶಿಷ್ಯತೇ ॥ ೭ ॥

[ಯಸ್ತ್ವಿತಿ] ಜೋ ಅಂತರೀ ಧೃಢ । ಪರಮಾತ್ಮ ರೂಪೀ ಗೂಢ । ಬಾಹ್ಯ ತರೀ ರೂಢ । ಲೌಕಿಕ ಜೈಸಾ ॥ ೬೮ ॥ ತೋ ಇಂದ್ರಿಯಾ ಆಜ್ಞಾ ನ ಕರೀ । ವಿಷಯಾಚೆ ಭಯನ ಧರೀ । ಪ್ರಾಪ್ತ ಕರ್ಮ ನವ್ಹೇರೀ । ಉಚಿತ ಜೇ ಜೇ ॥ ೬೯ ॥ ತೋ ಕರ್ಮೇಂದ್ರಿಯೆ ಕರ್ಮೀ । ರಾಹಟತಾ ತರೀ ನ ನಿಯಮೀ । ಪರೀ ತೇಥೀ ಚೇನಿ ಊಮರ್ಮೀ । ಝಾಂಕೋಳೇನಾ ॥ ೭೦ ॥ ತೋ ಕಾಮನಾಮಾತ್ರೇ ನ ಘೇಪೇ । ಮೋಹ ಮಳೇ ನಲಿಂಪೇ । ಜೈಸೇ ಜಳೀ ಜಳೇ ನ ಶಿಂಪೇ । ಪದ್ಮಪತ್ರ ॥ ೭೧ ॥ ತೈಸಾ ಸಂಸರ್ಗಾ ಮಾಜೀ ಅಸೇ । ಸಕಳಾ

ಸಾರಿಖಾ ದಿಸೇ । ಜೈಸೇ ತೋಯ ಸಂಗೇ ಆಭಾಸೇ । ಭಾನು ಬಿಂಬ ॥ ೭೨ ॥ ತೈಸೇ ಸಾಮಾನ್ಯತ್ವೇ ಪಾಹುಜೇ । ತರೀ ಸಾಧಾರಣಾಚಿ ದೇಖಿಜೆ । ಯೇರವೀ ನಿರ್ಧಾರಿತಾ ನೇಣಿಜೇ । ಸೋಯ ಜಯಾಚೀ ॥ ೭೩ ॥ ಐಸಾ ಚಿನ್ಹೀ ಚಿನ್ಹಿತ । ದೇಖಸಿ ತೋಚಿ ಮುಕ್ತ । ಆಶಾ ಪಾಶ ರಹಿತ । ವೋಳಖಸಾ ॥ ೭೪ ॥ ಅರ್ಜುನಾ ತೋಚಿ ಯೋಗೀ । ವಿಶೇಷಿಜೇ ಜೋ ಜಗೀ । ಮ್ಹಣೋನಿ ಐಸಾ ಹೋಯ ಯಾಲಾಗೀ । ಮ್ಹಣಿಪೇ ತೂತೇ ॥ ೭೫ ॥ ತೂ ಮಾನಸಾ ನಿಯಮ ಕರೀ । ನಿಶ್ಚಳ ಹೋಯೇ ಅಂತರೀ । ಮಗ ಕರ್ಮೇಂದ್ರಿಯೇ ವ್ಯಾಪಾರೀ । ವರ್ತತು ಸುಖೇ ॥೭೬॥

ಅರ್ಥ— ಯಾವನು ಅಂತರಂಗದಲ್ಲಿ ದೃಢಮನಸ್ಸಿನಿಂದ ಪರಮಾತ್ಮನಲ್ಲಿ ನಿಮಗ್ನನಾಗಿದ್ದೂ, ಬಹಿರಂಗದಲ್ಲಿ ಲೋಕಾಚಾರಕ್ಕೆ ಸರಿಯಾಗಿ ನಡೆಯುವನೋ ॥ ೭೪ ॥ ಅವನು ಇಂದ್ರಿಯಗಳಿಗೆ ಏನೂ ಹೇಳುವದಿಲ್ಲ. ವಿಷಯದ ಭಯವನ್ನೂ ಹಿಡಿಯುವದಿಲ್ಲ. ಕಾಲಾನುಸಾರವಾಗಿ ಮಾಡತಕ್ಕ ಆಯಾಯ ವಿಹಿತಕರ್ಮಗಳನ್ನು ಎಂದಿಗೂ ಬಿಡುವದಿಲ್ಲ. ॥ ೭೯ ॥ ಕರ್ಮೇಂದ್ರಿಯಗಳ ಕಡೆಯಿಂದ ಕರ್ಮಗಳು ಉಂಟಾಗುವ ಕಾಲದಲ್ಲಿ ಅವನು ಅವುಗಳನ್ನು ನಿರ್ಬಂಧಿಸುವದಿಲ್ಲ. ಮತ್ತು ಅವುಗಳ ವಿಕಾರದಲ್ಲಿ ಅಧೀನನಾಗಿರುವದಿಲ್ಲ. ॥ ೭೦ ॥ ಅವನು ಕಾಮವಾಸನೆಯಿಂದ ಲಿಪ್ತನಾಗುವದಿಲ್ಲ. ಮತ್ತು ಅವನ ಮನಸ್ಸಿಗೆ ನೋಹದ ಬಾಧೆಯು ಉಂಟಾಗುವದಿಲ್ಲ. ಕಮಲಪತ್ರಗಳು ಹಗಲು ರಾತ್ರಿ ಸಹ ನೀರಿನಲ್ಲಿದ್ದಾಗ್ಯೂ ಹೇಗೆ ಅವು ನೀರಿನಿಂದ ತೊಯ್ಯಲ್ಪಡುವದಿಲ್ಲವೋ, ॥ ೭೧ ॥ ಹಾಗೆಯೇ ಸಂಸಾರ ದಲ್ಲಿದ್ದು ಅವನು ಎಲ್ಲ ಜನರಂತೇ ಕಾಣಿಸುತ್ತಾನೆ. ಯಾವ ಪ್ರಕಾರ ನೀರಿನ ಸಂಗತಿಯಿಂದ ಸೂರ್ಯಬಿಂಬವು ನೀರಿನಲ್ಲಿ ಕಾಣುವದೋ, ॥ ೭೨ ॥ ಅದೇ ಪ್ರಕಾರ ಬಹಿರಂಗವಾಗಿ ನೋಡಲು ಅವನು ಸಾಮಾನ್ಯನಂತೆ ಕಾಣುತ್ತಾನೆ. ಆದರೆ ನಿಶ್ಚಯದಿಂದ ಅವನ ಆತ್ಮಸ್ಥಿತಿಯನ್ನು ಪರೀಕ್ಷಿಸಿ ನೋಡಲು ಸಾಧ್ಯವಿರುವದಿಲ್ಲ. ॥ ೭೩ ॥ ಇಂಥ ಗುಣದಿಂದ ಯಾವನು ಪರಿಪೂರ್ಣನಾಗಿರುವನೋ, ಯಾವನು ನಿರಿಚ್ಛನಿರುವನೋ ಅವನೇ ಮುಕ್ತನಿರುವನೆಂದು ತಿಳಿ. ॥ ೭೪ ॥ ಅರ್ಜುನಾ, ಅವನೇ ಯೋಗಿ. ಅವನೇ ಜಗತ್ತಿನಲ್ಲಿ ಸ್ತುತಿಮಾಡಿಸಿಕೊಳ್ಳಲಿಕ್ಕೆ ಪಾತ್ರನಿರುತ್ತಾನೆ. ಆದುದರಿಂದ ನೀನು ಯೋಗಿಯಾಗೆಂದು ನಾನು ನಿನಗೆ ಹೇಳುತ್ತೇನೆ. ॥ ೭೫ ॥ ನೀನು ಮನೋನಿಗ್ರಹವನ್ನು ಮಾಡು. ಮತ್ತು ಅಂತರ್ಯಾಮೀ ಸ್ಥಿರಬುದ್ಧಿಯುಳ್ಳವನಾಗು. (ಆ ಮೇಲೆ ಕರ್ಮೇಂದ್ರಿಯಗಳು ಸಂತೋಷದಿಂದ ತಮ್ಮ ತಮ್ಮ ವ್ಯಾಪಾರವನ್ನು ಮಾಡಲಿ.) ॥ ೭೬ ॥

ನಿಯತಂ ಕುರು ಕರ್ಮ ತ್ವಂ ಕರ್ಮ ಜ್ಯಾಯೋ ಹ್ಯ ಕರ್ಮಣಃ ।
ಶರೀರಯಾತ್ರಾಪಿ ಚ ತೇ ನ ಪ್ರಸಿದ್ಧ್ಯೇದ ಕರ್ಮಣಃ ॥ ೮ ॥

[ನಿಯತಮಿತಿ] ಮ್ಹಣೋನಿ ನೈಷ್ಕರ್ಮ್ಯ ಹೋಆವೇ । ತರೀ ಏಥ ತೇನ ಸಂಭವೇ । ಆಣಿ ನಿಷಿದ್ಧಕೇವೀ ರಾಹಾಟಾವೇ । ವಿಚಾರೀ ಪಾ ॥ ೭೭ ॥ ಮ್ಹಣೋನಿ ಜೇ ಜೇ ಉಚಿತ । ಆಣಿ ಅವಸರೇ ಕರೂನಿ ಪ್ರಾಪ್ತ । ತೇ ಕರ್ಮ ಹೇತು ರಹಿತ । ಆಚರೇ ತೂ ॥ ೭೮ ॥ ಪಾರ್ಥಾ ಆಣೀಕಹೀ ಏಕ । ನೇಣಸೀ ತೂ ಹೇಕವತಿಕ । ಜೇ ಐಸೇ ಕರ್ಮವೋಜಕ । ಆಪೈಸೇ ಅಸೇ ॥ ೭೯ ॥ ದೇಖೇ ಅನುಕ್ರಮಾ ಧಾರೇ । ಸ್ವಧರ್ಮ ಜೋ ಆಚರೇ । ತೋ ಮೋಕ್ಷ ತೇಣೇ ವ್ಯಾಪಾರೇ । ನಿಶ್ಚಿತ ಪಾವೇ ॥ ೮೦ ॥

ಅರ್ಥ— ಈ ಸಂಸಾರದಲ್ಲಿ ಕರ್ಮರಹಿತನಾಗುವದು ಅಸಂಭವನೀಯವಾಗಿರುತ್ತದೆ. ಅಂದಬಳಿಕ ಶಾಸ್ತ್ರ ವಿರುದ್ಧವಾದ ಆಚರಣೆಯನ್ನೇಕೆಮಾಡಬೇಕು ? ಈ ವಿಷಯವಾಗಿ ವಿಚಾರಮಾಡು. ॥ ೭೭ ॥ ಆದುದರಿಂದ ಯಾವ ಯಾವದು ವಿಹಿತ ಮತ್ತು ಯೋಗ್ಯ ಸಮಯಾನುಸಾರ ಪ್ರಾಪ್ತವಾದ ಎಲ್ಲ ಕರ್ಮಗಳನ್ನೂ ನೀನು ನಿಷ್ಕಾಮ ಬುದ್ಧಿ ಯಿಂದ ಮಾಡು. ॥ ೭೮ ॥ ಅರ್ಜುನನೇ, ಇನ್ನೂ ಒಂದು ಆಶ್ಚರ್ಯವು ನಿನಗೆ ಗೊತ್ತಿರುವದಿಲ್ಲ. ನಿಷ್ಕಾಮ

ಬುದ್ಧಿಯಿಂದ ಮಾಡಿದ ಕರ್ಮಗಳು ಸಂಸಾರದೊಳಗಿಂದ ಮುಕ್ತಮಾಡಲಿಕ್ಕೆ ಸಮರ್ಥವಾಗಿರುತ್ತವೆ. ॥ ೭೯ ॥ ಅಧಿಕಾರಾನುಸಾರವಾಗಿ ಸ್ವಧರ್ಮದ ಆಚರಣೆಯನ್ನು ಯಾವನು ಮಾಡುವನೋ ಅವನೇ ಆ ಸ್ವಧರ್ಮಾಚರಣೆಯಿಂದಲೇ ನಿಜವಾಗಿ ಮೋಕ್ಷವನ್ನು ಪ್ರಾಪ್ತಮಾಡಿಕೊಳ್ಳುತ್ತಾನೆ. ॥ ೮೦ ॥

ಯಜ್ಞಾರ್ಥಾತ್ಕರ್ಮಣೋಽನ್ಯತ್ರ ಲೋಕೋಽಯಂ ಕರ್ಮ ಬಂಧನಃ ।
ತದರ್ಥಂ ಕರ್ಮ ಕೌಂತೇಯ ಮುಕ್ತಸಂಗಃ ಸಮಾಚರ ॥ ೯ ॥

[ಯಜ್ಞಾರ್ಥಾತ್ಕರ್ಮಣ ಇತಿ] ಸ್ವಧರ್ಮ ಜೋಬಾಪಾ । ತೋಚಿ ನಿತ್ಯಯಜ್ಞ ಜಾಣಪಾ । ಮ್ಹಣೋನಿ ವರ್ತತಾ ತೇಥ ಪಾಪಾ । ಸಂಚಾರ ನಾಹೀ ॥ ೮೧ ॥ ಹಾ ನಿಜಧರ್ಮ ಜೈಸಾಂಡೇ । ಆಣಿ ಕುಕರ್ಮೀ ರತಿಘಡೇ । ತೈಂಚಿಬಂಧ ಪಡೆ । ಸಾಂಸಾರಿಕ ॥ ೮೨ ॥ ಮ್ಹಣೋನಿ ಸ್ವಧರ್ಮಾನುಷ್ಠಾನ । ತೇ ಅಖಂಡ ಯಜ್ಞಯಾಜನ । ಜೋ ಕರೀ ತಯಾ ಬಂಧನ । ಕಹೀಜ ನ ಘಡೇ ॥ ೮೩ ॥ ಹಾ ಲೋಕ ಕರ್ಮೇಂಬಾಂಧಿಲಾ । ಜೋ ಪರತಂತ್ರಾ ಭುಲಲಾ । ತೋ ನಿತ್ಯಯಜ್ಞಾತೇ ಚುಕಲಾ । ಮ್ಹಣೋನಿಯಾ ॥ ೮೪ ॥ ಆತಾ ಯೇಚೀ ವಿಷಯೀ ಪಾರ್ಥಾ । ತುಜ ಸಾಂಗೇನ ಏಕ ಮೀ ಕಥಾ । ಜೈಸೃಷ್ಟ್ಯಾದಿ ಸಂಸ್ಥಾ । ಬ್ರಹ್ಮೇನೇ ಕೇಲಿ ॥ ೮೫ ॥

ಅರ್ಥ— ಅಯ್ಯಾ, ಅರ್ಜುನನೇ ಸ್ವಧರ್ಮದಂತೆ ಆಚರಣೆ ಮಾಡುವದೇ ನಿತ್ಯಯಜ್ಞವಾಗಿರುವದು. ಆದುದರಿಂದ ಆ ಪ್ರಕಾರ ವರ್ತನ ಮಾಡುವದರಿಂದ ಅವರಲ್ಲಿ ಪಾಪದ ಪ್ರವೇಶವಾಗುವದಿಲ್ಲ. ॥ ೮೧ ॥ ಪ್ರಾಣಿಗಳು ಯಾವಾಗ್ಗೆ ತನ್ನ ಧರ್ಮವನ್ನು ಬಿಟ್ಟು ಬಿಡುತ್ತಾರೋ ಮತ್ತು ಕುಕರ್ಮ (ವೇದ ಬಾಹ್ಯವಾದ ಕೆಟ್ಟ ಕರ್ಮ) ಗಳಲ್ಲಿ ಆಸಕ್ತರಾಗುತ್ತಾರೆ. ಆಗ್ಗೇನೇ ಅವರು ಜನನ ಮರಣಗಳ ಬಂಧನದಲ್ಲಿ ಬೀಳುತ್ತಾರೆ. ॥ ೮೨ ॥ ಆದುದರಿಂದಾ, ಸ್ವಧರ್ಮದಂತೆ ಆಚರಿಸುವದೇ ಅಖಂಡ ಯಜ್ಞವೆಂದು ತಿಳಿ. ಮತ್ತು ಯಾವ ಪುರುಷನು ಯಜ್ಞವನ್ನು ಮಾಡುವನೋ, ಅವನಿಗೆ ಸಂಸಾರ ಬಂಧನವು ಎಂದಿಗೂ ಉಂಟಾಗುವದಿಲ್ಲ. ॥ ೮೩ ॥ ಎಲ್ಲರೂ ಸ್ವಧರ್ಮ ಕರ್ಮವನ್ನು ಬಿಟ್ಟಿದ್ದರಿಂದಲೇ ಈ ಸರ್ವ ಜಗತ್ತು ಕರ್ಮ ಬಂಧನದಲ್ಲಿ ಕಟ್ಟಲ್ಪಟ್ಟಿರುವದು. ಅವರು ಪರತಂತ್ರರಾಗಿರುವರು. ॥ ೮೪ ॥ ಪಾರ್ಥಾ, ಇದೇ ವಿಷಯದಲ್ಲಿ ಒಂದು ಕಥೆಯನ್ನು ನಾನು ನಿನಗೆ ಹೇಳುತ್ತೇನೆ. ಬ್ರಹ್ಮದೇವನು ಯಾವಾಗ ಸೃಷ್ಟಿನಿರ್ಮಾಣ ಮಾಡಿದನೋ, ॥ ೮೫ ॥

ಸಹಯಜ್ಞಾಃ ಪ್ರಜಾಃ ಸೃಷ್ಟ್ವಾ ಪುರೋವಾಚ ಪ್ರಜಾಪತಿಃ ।
ಅನೇನ ಪ್ರಸವಿಷ್ಯಧ್ವಮೇಷ ವೋಽಸ್ತ್ವಿಷ್ಟಕಾಮಧುಕ್ ॥ ೧೦ ॥

[ಸಹಯಜ್ಞಾಃ ಪ್ರಜಾಃ ಇತಿ] ತೈ ನಿತ್ಯಯಾಗ ಸಹಿತೇ । ಸೃಜಿಲೀ ಭೂತೇ ಸಮಸ್ತೇ । ಪರೀ ನೇಣತೀಚಿ ತೀಯೇ ಯಜ್ಞಾತೇ । ಸೂಕ್ಷ್ಮ ಮ್ಹಣವುನೀ ॥ ೮೬ ॥ ತೇ ವೇಳೀ ಪ್ರಜೀ ವಿನವಿಲಾ ಬ್ರಹ್ಮಾ । ದೇವಾ ಕಾಯ ಆಶ್ರಯೋ ವಿಥ ಅಮ್ಹಾ । ತವ ಮ್ಹಣೇ ತೋ ಕಮಳ ಜನ್ಮಾ । ಭೂತಾಪ್ರತೀ ॥ ೮೭ ॥ ತುಮ್ಹಾ ವರ್ಣ ವಿಶೇಷವಶೇ । ಆಮ್ಹೀ ಹಾ ಸ್ವಧರ್ಮ ವಿಹಿಲಾ ಅಸೇ । ಯಾತೇ ಉಪಾಸಾ ಮಗ ಆಪೈಸೇ । ಪುರತೀ ಕಾಮು ॥ ೮೮ ॥ ತುಮ್ಹೀ ವೃತ ನಿಯಮು ನ ಕರಾವೇ । ಶರೀರಾತೇ ನ ಪೀಡಾವೇ । ದೂರೀ ಕೇಹೀ ನ ವಚಾವೇ । ತೀರ್ಥಾಸೀಗಾ ॥ ೮೯ ॥ ಯೋಗಾದಿಕೇ ಸಾಧನೇ । ಸಾಕಾಂಕ್ಷ ಆರಾಧನೇ । ಮಂತ್ರಯಂತ್ರ ವಿಧಾನೇ । ಝುಣೇಕರಾ ॥ ೯೦ ॥ ದೇವತಾಂತರಾ ನ ಭಜಾವೇ । ಹೇ ಸರ್ವಥಾ ಕಾಹೀ ನ ಕರಾವೇ । ತುಮ್ಹೀ ಸ್ವಧರ್ಮಯಜ್ಞೀಯ ಜಾವೇ । ಅನಾಯಾಸೇ ॥ ೯೧ ॥ ಅಹೇತುಕೇ ಚಿತ್ತೇ । ಅನುಷ್ಠಾಪಾ ಯಾತೇ । ಪತಿವೃತಾ ಪತೀತೇ । ಜಿಯಾಪರೀ ॥ ೯೨ ॥ ತೈಸಾ ಸ್ವಧರ್ಮರೂಪ ಮಖ । ಹಾಚಿ

ಸೇವ್ಯ ತುಮ್ಹಾ ಏಕ । ಐಸೇ ಸತ್ಯಲೋಕನಾಯಕ । ಬೋಲತಾ ಜಾಹಲಾ ॥ ೯೩ ॥ ದೇವಾ ಸ್ವಧರ್ಮಾತೇ ಭಜಾಲ । ತರೀ ಕಾಮಧೇನು ಹಾ ಹೋಈಲ । ಮಗ ಪ್ರಜಾಹೋ ನ ಸಂಡೀಲ । ತುಮತೇ ಕದಾ ॥ ೯೪ ॥

ಅರ್ಥ— ಆ ಕಾಲದಲ್ಲಿ ಪ್ರಾಣಿಗಳನ್ನೂ ಮತ್ತು ಅವರು ನಿತ್ಯ ಆಚರಣಮಾಡುವ ಧರ್ಮಗಳನ್ನೂ ಒಂದೇ ಕಾಲಕ್ಕೆ ನಿರ್ಮಾಣಮಾಡಿದನು. ಆದರೆ ಅದು ಗಹನವಾದುದರಿಂದ ಪ್ರಾಣಿಗಳಿಗೆ ತಿಳಿಯಲಿಲ್ಲ. ॥ ೮೭ ॥ ಆಗ್ಗೆ ಪ್ರಜಗಳು ಬ್ರಹ್ಮನನ್ನು ಕುರಿತು ಹೀಗೆ ಬೇಡಿಕೊಂಡರು— "ದೇವಾ, ಇಲ್ಲಿ ನಮಗೆ ತರಣೋಪಾಯವಾಗಲಿಕ್ಕೆ ಯಾವ ಆಧಾರವಿರುವದೆಂದು ಕೇಳಲು, ಕಮಲೋದ್ಭವ (ಬ್ರಹ್ಮ ನು ಅನ್ನುತ್ತಾನೆ– ॥ ೮೭ ॥ ನಿಮಗೆ ನಿಮ್ಮ ವರ್ಣಾಶ್ರಮದ ಪ್ರಕಾರ ನಾವು ಮೊದಲಿಗೇನೇ ಧರ್ಮನಿಯಮವನ್ನು ಮಾಡಿಕೊಟ್ಟಿದ್ದೇವೆ. ಆ ಪ್ರಕಾರಾ ನೀವು ವರ್ಣಾಶ್ರಮಕ್ಕೆ ಉಚಿತವಾದ ಆಚರಣೆ ಮಾಡಿದರೆ ನಿಮ್ಮ ಮನೋರಥವು ಸಿದ್ಧಿಗೆ ಹೋಗುವದು. ॥ ೮೮ ॥ ನೀವು ವ್ರತನಿಯಮಗಳನ್ನು ಮಾಡಬಾರದು. ಶರೀರವನ್ನು ಉಪವಾಸ ಮುಂತಾದವುಗಳಿಂದ ಕಷ್ಟಬಡಿಸಬೇಡಿರಿ. ಮತ್ತು ತೀರ್ಥಯಾತ್ರೆಯಸಲುವಾಗಿ ದೂರ ಎಲ್ಲಿಗೂ ಹೋಗುವ ಶ್ರಮವನ್ನು ವಹಿಸಬೇಡಿರಿ. ॥ ೮೯ ॥ ಯೋಗ ಮುಂತಾದ ಸಾಧನಗಳೂ, ಕಾಮನಾಯುಕ್ತವಾದ ಆರಾಧನೆಗಳೂ ಮತ್ತು ಮಂತ್ರ ತಂತ್ರ ಮುಂತಾದ ಅನುಷ್ಠಾನಗಳೂ ಮಾಡುವ ವ್ಯಸನಗಳಲ್ಲಿ ಬೀಳಬೇಡಿರಿ. ೯೦ ॥ ಅದರಂತೆಯೇ ಅನ್ಯದೇವತೆಗಳನ್ನು ಭಜಿಸಬೇಕಾಗಿರುವದಿಲ್ಲ. ಈ ಯಾವದನ್ನೂ ನೀವು ಮಾಡುವ ಕಾರಣವಿಲ್ಲ. ನೀವು ನಿಮ್ಮ ವರ್ಣಾಶ್ರಮದ ಪ್ರಕಾರ ಉಚಿತವಾದ ಕರ್ಮವನ್ನು ಸಂತೋಷದಿಂದ ಆಚರಣೆ ಮಾಡಬೇಕು. ॥ ೯೧ ॥ ಯಾವ ಪ್ರಕಾರ ಪತಿವ್ರತಾ ಸ್ತ್ರೀಯು ತನ್ನ ಪತಿಯ ಸೇವೆಯನ್ನು ನಿಷ್ಕಾಮ ಬುದ್ಧಿಯಿಂದ ಮಾಡುತ್ತಾಳೋ ಅದೇ ಪ್ರಕಾರ ನೀವು ನಿಮ್ಮ ಸ್ವಧರ್ಮವನ್ನು ನಿಷ್ಕಾಮ ಬುದ್ಧಿಯಿಂದಆಚರಿಸಬೇಕು ॥ ೯೨ ॥ ಸ್ವಧರ್ಮ ಆಚರಣವು ಇದೇ ಒಂದು ನಿಮಗೆ ಯಜ್ಞವಾಗಿರುವದು. ಕಾರಣ ಅದರ ಆಚರಣೆಯನ್ನು ಮಾಡಬೇಕೆಂದು ಸತ್ಯಲೋಕನಾಯಕನಾದ ಬ್ರಹ್ಮದೇವನು ಹೇಳುತ್ತಾನೆ. ॥೯೩॥ ಪ್ರಾಣಿಗಳಿರಾ, ಹೀಗೆ ನೋಡಿರಿ ನೀವು ಸ್ವಧರ್ಮದಿಂದ ನಡೆದರೆ ಅದು ಕಾಮಧೇನುವಿನಂತೆ ನಿಶ್ಚಯವಾಗಿ ಫಲವನ್ನು ಕೊಡುವಂಥಾದ್ದಾಗುವದು ಆಮೇಲೆ ಅದು ನಿಮ್ಮನ್ನು ಯಾವಾಗ್ಯೂ ಬಿಡಲಾರದು. ॥ ೯೪ ॥

ದೇವಾನ್ಭಾವಯತಾನೇನ ತೇ ದೇವಾ ಭಾವಯಂತು ವಃ ।
ಪರಸ್ಪರಂ ಭಾವಯಂತಃ ಶ್ರೇಯಃ ಪರಮವಾಪ್ಸ್ಯಥ ॥ ೧೧ ॥

[ದೇವಾನಿತಿ] ಜೈ ಯೇಣೇ ಕರೂನಿ ಸಮಸ್ತಾ । ಪರಿತೋಷ ಹೊಈಲ ದೇವತಾ । ಮಗ ತೇ ತುಮ್ಹಾ ಈಪ್ಸಿತಾ । ಅರ್ಥತೇ ದೇತೀ ॥ ೯೫ ॥ ಯಾ ಸ್ವಧರ್ಮ ಪೂಜಾ ಪೂಜಿತಾ । ದೇವತಾಗಣಾ ಸಮಸ್ತಾ । ಯೋಗಕ್ಷೇಮ ನಿಶ್ಚಿತಾ । ಕರಿತೀ ತುಮಚಾ ॥ ೯೬ ॥ ತುಮ್ಹೀ ದೇವಾತೇ ಭಜಾಲ । ದೇವ ತುಮ್ಹಾ ತುಷ್ಟತೀಲ । ಐಸೀ ಪರಸ್ಪರೇ ಘಡೇಲ । ಪ್ರೀತಿ ಜೇಥ ॥ ೯೭ ॥ ತೇಥ ತುಮ್ಹಿ ಜೇ ಕರೂ ಮ್ಹಣಾಲ । ತೇ ಆಪೈಸೇ ಸಿದ್ಧೀ ಜಾಈಲ । ವಾಂಛಿತ ಹೀ ಪುರೇಲ । ಮಾನಸೀಚೆ ॥ ೯೮ ॥ ವಾಚಾ ಸಿದ್ಧೀ ಪಾವಾಲ । ಆಜ್ಞಾಪಕ ಹೋಆಲ । ಮ್ಹಣೋನಿಯೇ ತುಮತೇ ಮಾಗತೀಲ । ಮಹಾ ಋದ್ಧಿ ॥ ೯೯ ॥ ಜೈಸೇ ಋತು ಪತೀಚೇ ದ್ವಾರ । ವನಶ್ರೀ ನಿರಂತರ । ಪೋಳಗೇ ಫಳಭಾರ । ಲಾವಣ್ಯೇಸೀ ॥ ೧೦೦ ॥

ಅರ್ಥ— ಈ ಸ್ವಧರ್ಮಾಚರಣೆಯಿಂದ ಸರ್ವದೇವತಾಗಣಗಳು ಸಂತೋಷ ಹೊಂದುತ್ತವೆ. ಆ ಮೇಲೆ ಆ ದೇವತೆಗಳು ನಿಮಗೆ ಇಚ್ಛಿಸಿದ ಫಲಗಳನ್ನು ಕೊಡುವವು. ॥ ೯೫ ॥ ಈ ಸ್ವಧರ್ಮಾಚರಣರೂಪೀ ಪೂಜೆಯಿಂದ ಸರ್ವದಾ ಸರ್ವದೇವತಾಗಣಗಳ ಆರಾಧನೆಯಿಂದ ನಿಮಗೆ ಆ ದೇವತೆಗಳು ಅಪ್ರಾಪ್ಯವಸ್ತುವಿನ

ಪ್ರಾಪ್ತಿ ಮಾಡಿಕೊಟ್ಟು ಪ್ರಾಪ್ತವನ್ನುವಿನ ಸಂರಕ್ಷಣೆಯನ್ನು ನಿಶ್ಚಯವಾಗಿ ಮಾಡುವವು. ॥ ೯೬ ॥ ನೀವು ದೇವರನ್ನು ಭಜಿಸಿದರೆ ದೇವರಾದರೂ ನಿಮ್ಮ ಮೇಲೆ ಸಂತುಷ್ಟನಾಗುವನು. ಹೀಗೆ ಒಬ್ಬರೊಬ್ಬರಲ್ಲಿ ಯಾವಾಗ ಪ್ರೇಮ ವುಂಟಾಗುವದೋ, ॥ ೯೭ ॥ ಆವಾಗ ನೀವು ಏನು ಮಾಡಬೇಕೆನ್ನುವಿರೋ ಅದು ಸಹಜವೇ ಸಿದ್ಧಿ ಹೊಂದುವದು. ಮತ್ತು ನಿಮ್ಮ ಮನಸಿನೊಳಗಿನ ಸರ್ವ ವಾಸನೆಗಳೂ ಪೂರ್ಣವಾಗುವವು. ॥ ೯೮ ॥ ನಿಮ್ಮ ಮುಖದಿಂದ ಸೂತನಾಡಿದುದೆಲ್ಲವೂ ಸಿದ್ಧಿ ಹೊಂದುವದು. ಮತ್ತು ನೀವು ಎರಡನೇದವರಿಗೆ ಆಜ್ಞೆಮಾಡುವಷ್ಟು ಯೋಗ್ಯತೆಯುಳ್ಳವರಾಗುವಿರಿ ಮತ್ತು ಅಷ್ಟಮಹಾಸಿದ್ಧಿಗಳು ಯಾವಾಗಲೂ ನಿಮ್ಮ ಆಜ್ಞೆಯಲ್ಲಿದ್ದು "ಸೇವಾ ತೆಗೆದು ಕೊಳ್ಳಿರಿ" ಎಂದು ನಿಮ್ಮ ಮುಂದೆ ನಿಲ್ಲುವವು. ॥ ೯೯ ॥ ವಸಂತಋತುವಿನ ದ್ವಾರದಲ್ಲಿ ಯಾವ ಪ್ರಕಾರ ವನಶೋಭೆಯು ತನ್ನ ಫಲವುಷ್ಪಗಳ ಭಾರದಿಂದ ಸೌಂದರ್ಯುಉಳ್ಳದ್ದಾಗಿ ನಿರಂತರವಾಸಮಾಡುತ್ತದೊ, ॥ ೧೦೦ ॥

ಇಷ್ಟಾನಿಷ್ಟೋಗಾನ್ಹಿ ವೋ ದೇವಾ ದಾಸ್ಯಂತೇ ಯಜ್ಞಭಾವಿತಾಃ ॥
ತೈರ್ದತ್ತಾನಪ್ರದಾಯೈಭ್ಯೋ ಯೋ ಭುಂಕ್ತೇ ಸ್ತೇನ ಏವ ಸಃ ॥ ೧೨ ॥

[ಇಷ್ಟಾನಿತಿ] ತೈಸೇ ಸರ್ವ ಸುಖೇ ಸಹಿತ । ದೈವಚಿ ಮೂರ್ತಿಮಂತ । ಯೇಈಲ ದೇಖಾ ಕಾಢತ । ತುಮ್ಹಾ ಪಾಠೀ ॥ ೧ ॥ ಐಸೇ ಸಮಸ್ತ ಭೋಗ ಭರಿತ । ಹೋಆಲ ತುಮ್ಹೀ ಅನಾರ್ತ । ಜರೀ ಸ್ವಧರ್ಮೈಕನಿರತ । ವರ್ತಾಲ ಬಾಪಾ ॥ ೨ ॥ ಕೀ ಜಾಲಿಯಾ ಸಕಳ ಸಂಪದಾ । ಜೋ ಅನುಸರೇಲ ಇಂದ್ರಿಯಮುದಾ । ಲುಬ್ಧ ಹೋವ್ಹನಿಯಾ ಸ್ವಾದಾ । ವಿಷ ಯಾಚಿಯಾ ॥ ೩ ॥ ತಿಹೀ ಯಜ್ಞ ಭಾವಿತೀ ಸುರೀ । ಜೇಹೇ ಸಂಪತ್ತಿ ದಿಧಲೀ ಪುರೀ । ತಯಾ ಸ್ವಧರ್ಮೀ ಸರ್ವೇಶ್ವರೀ । ನ ಭಜೇಲ ಜೋ ॥ ೪ ॥ ಅಗ್ನಿಮುಖೀ ಹವನ । ನಕರೀಲ ದೇವತಾ ಪೂಜನ । ಪ್ರಾಪ್ತನೇಳೇ ಭೋಜನ । ಬ್ರಾಹ್ಮಣಾಚೇ ॥ ೫ ॥ ವಿಮುಖ ಹೋಈಲ ಗುರುಭಕ್ತೀ । ಆದರ ನ ಕರೀಲ ಅತಿಥೀ । ಸಂತೋಷ ನೇದೀಲ ಜ್ಞಾತೀ । ಆಪುಲಿಯೇ ॥ ೬ ॥ ಐಸಾ ಸ್ವಧರ್ಮ ಕ್ರಿಯಾ ರಹಿತ । ಆಥಿಲೇಪಣೇ ಗರ್ವಿತ । ಕೇವಳ ಭೋಗಾಸಕ್ತ । ಹೋಈಲ ಜೋ ॥ ೭ ॥ ತಯಾ ಮಗ ಅಪಾವೋ ಥೋರ ಆಹೇ । ಜೇಣೇ ತೇ ಹಾತೀಚೇ ಸಕಳ ಹಾಯೇ । ದೇಖಾ ಪ್ರಾಪ್ತಹೀನ ಲಾಹೇ । ಭೋಗ ಭೋಗೂ ॥ ೮ ॥ ಜೈಸೇ ಗತಾಯು ಶರೀರೀ । ಚೈತನ್ಯ ವಾಸ ನ ಕರೀ । ಕಾ ನಿದೈ ವಾಚ್ಯಾ ಘರೀ । ನ ರಾಹೇ ಲಕ್ಷ್ಮೀ ॥ ೯ ॥ ತೈಸಾ ಸ್ವಧರ್ಮ ಜರೀ ಲೋಪಲಾ । ತರೀ ಸರ್ವ ಸುಖಾಚಾ ಥಾರಾ ಮೋಡಲಾ । ಜೈಸಾ ದೀಪಾಸನೇ ಹರಪಲಾ । ಪ್ರಕಾಶ ಜಾಯ ॥ ೧೦ ॥ ತೈಸೀ ನಿಜನೃತ್ತಿ ಜೇಥ ಸಾಂಡೀ । ತೇಥ ಸ್ವತಂತ್ರತೇ ವಸ್ತೀ ನಘಡೇ । ಆಇಕಾ ಪ್ರಜಾ ಹೋಪುಢೇ । ವಿರಂಚಿ ಮ್ಹಣೇ ॥ ೧೧ ॥ ಮ್ಹಣವೂನಿ ಸ್ವಧರ್ಮ ಜೋ ಸಾಂಡೀಲ । ತಯಾತೇ ಕಾಳ ದಂಡೀಲ । ಚೋರ ಮ್ಹಣೂನಿ ಹರೀಲ । ಸರ್ವಸ್ವ ತಯಾಚೇ ॥ ೧೨ ॥ ಮಗ ಸಕಳ ದೋಷ ಭನತೇ । ಗಿತ ಸೋನಿ ಘೇತೀ ತಯಾತೇ । ರಾತ್ರಿ ಸಮಯೀ ಶ್ಮಶಾನಾತೇ । ಭೂತೇ ಜೈಸೇ ॥ ೧೩ ॥ ತೈಸೇ ತ್ರಿಭುವನೀಚೇ ದುಃಖೇ । ಆಣಿ ನಾನಾ ವಿಧೆ ಪಾತಕೇ । ದೈನ್ಯ ಜಾತ ತಿತುಕೇ । ತೇಥೇಚಿ ವಸೇ ॥ ೧೪ ॥ ಐಸೇ ಹೋಯ ತಯಾ ಉನ್ಮತ್ತಾ । ಮಗ ನ ಸುಟೇ ಬಾಪಾ ರುದತಾ । ಕಲ್ಪಾಂತೀಹೀ ಸರ್ವಥಾ । ಪ್ರಾಣಿಗಣ ಹೋ ॥ ೧೫ ॥ ಮ್ಹಣವೂನಿ ನಿಜನೃತ್ತಿ ಹೇನ ಸಾಂಡಾವೀ । ಇಂದ್ರಿಯೇ ಬರಳೋ ನೇದಾವೀ । ಐಸೇ ಪ್ರಜಾತೇ ಶಿಕವೀ । ಚತುರಾನನ ॥ ೧೬ ॥ ಜೈಸೇ ಜಳಚರಾ ಜಳ ಸಾಂಡೇ । ಮಗ ತತ್ಕ್ಷಣೇ ಮರಣ ಮಾಂಡೇ । ಹಾ ಸ್ವಧರ್ಮ ತೇಣೇ ಪಾಡೇ । ವಿಸಂಚೋ ನಯೇ ॥ ೧೭ ॥ ಮ್ಹಣೋನಿ ತುಮ್ಹೀ ಸಮಸ್ತೀ । ಆಪುಲಾಲಿಯಾ ಕರ್ಮೀ ಉಚಿತೀ । ನಿರತ ವ್ಹಾವೇ ಪುಢತ ಪುಢತೀ । ಸ್ಮರಣಿಪತ ಅಸೇ ॥ ೧೪ ॥

ವೆಚ್ಚಮಾಡಿ ಉಳಿಡದ್ದನ್ನು ಸಂತೋಷದಿಂದ ಭೋಗಿಸಬೇಕು. ॥ ೨೫ ॥ ಇದರ ಹೊರ್ತು ಮನುಷ್ಯನು ಅನ್ಯ ಮಾರ್ಗವನ್ನು ಅವಲಂಬನ ಮಾಡಿ ನಡೆಯಬಾರದೆಂಬ ಈ ಪುರಾತನ ಕಥೆಯನ್ನು ಆ ಮುರವೈರಿಯಾದ ಶ್ರೀ ಕೃಷ್ಣಪರಮಾತ್ಮನು ಅರ್ಜುನನ ಮುಂದೆ ಹೇಳಿದನು. ॥ ೨೬ ॥ ಯಾವನು ಈ ಶರೀರವೇ ಆತ್ಮನೆಂದು ಭಾವಿಸುವನೋ ಮತ್ತು ವಿಷಯ ಭೋಗನೇ ಭೋಗ್ಯವೆಂದು ತಿಳಿಯುವನೋ ಮತ್ತು ಇದನ್ನುಳಿದು ಅನ್ಯಯಾವುದನ್ನೂ ಸ್ಮರಣೆಗೆ ತರುವದಿಲ್ಲವೋ, ॥ ೨೭ ॥ ಮತ್ತು ಯಾವನು ಈ ಎಲ್ಲವೂ ಯಜ್ಞ ಸಾಮಗ್ರಿಗಳಿರುವನೆಂದು ತಿಳಿಯದೇ ಅಜ್ಞಾನದಿಂದ ಕೂಡಿದವನಾಗಿ ಭ್ರಾಂತಿಷ್ಟನಾಗಿರುತ್ತಾನೋ ಮತ್ತು ಯಾವನು ಅಹಂಕಾರ ಬುದ್ಧಿಯಿಂದ ಕೇವಲ ವಿಷಯೋಪಭೋಗವನ್ನು ಭೋಗಿಸುವದರ ಕಡೆಗೆಯೇ ದೃಷ್ಟಿಯನ್ನಿಡುತ್ತಾನೋ, ॥ ೨೮ ॥ ಮತ್ತು ಯಾವನು ಇಂದ್ರಿಯಗಳ ರುಚಿಯಂತೆ ತನುಗೆ ಪ್ರೀಯವಾದ ಉತ್ತಮೋತ್ತಮವಾದ ಪಕ್ವಾನ್ನಗಳನ್ನು ಸಿದ್ಧಪಡಿಸಿ ತಾನೇ ಉಣ್ಣುವನೋ, ಇಂತಹ ಪಾಪಿಯು ಪಾಪವನ್ನೇ ಭುಂಜಿಸುತ್ತಾನೆಂದು ತಿಳಿ. ॥ ೨೯ ॥ ಈ ಸರ್ವಸಂಪತ್ತು ಸ್ವಧರ್ಮರೂಪಿ ಯಜ್ಞದ ಹವನದ್ರವ್ಯವಾಗಿರುತ್ತದೆಂದು ತಿಳಿದು ಸ್ವಧರ್ಮ ಯಜ್ಞದಿಂದಲೇ ಆದಿಪುರುಷ ಭಗವಂತನಿಗೆ ಅರ್ಪಣ ಮಾಡಬೇಕು. ॥ ೧೩೦ ॥ ಇದನ್ನೆಲ್ಲವನ್ನು ಬಿಟ್ಟು ಮೂರ್ಖ ಜನರು ತಮ್ಮ ಸ್ವಂತದ ದೆಸೆಯಿಂದಲೇ ತರತರದ ಪದಾರ್ಥಗಳನ್ನು ಅಡಿಗೆ ಮಾಡಿಸುತ್ತಾರೆ. ॥ ೩೧ ॥ ಯಾವ ಅನ್ನದಿಂದ ಯಜ್ಞ ಸಿದ್ಧವಾಗುತ್ತದೋ, ಮತ್ತು ಭಗವಾನ್ ಪರಮೇಶ್ವರನು ಸಂತೋಷಉಳ್ಳವನಾಗುತ್ತಾನೋ, ಆ ಅನ್ನವು ಸಾಮಾನ್ಯವಾದದ್ದಲ್ಲ. ಆದ್ದರಿಂದ ॥ ೩೨ ॥ ಈ ಅನ್ನಕ್ಕೆ ಸಾಮಾನ್ಯವೆಂದು ತಿಳಿಯದೇ ಅದು ಬ್ರಹ್ಮ ಸ್ವರೂಪವಾಗಿರುವದೆಂದು ತಿಳಿ. ಕಾರಣ ಇದು ಸರ್ವ ಜಗತ್ತಿನ ಜೀವನಾಧಾರವೇ ಆಗಿರುತ್ತದೆ. ॥ ೩೩ ॥

ಅನ್ನಾದ್ಭವಂತಿ ಭೂತಾನಿ ಪರ್ಜನ್ಯಾದನ್ನ ಸಂಭವಃ ।
ಯಜ್ಞಾದ್ಭವತಿ ಪರ್ಜನ್ಯೋ ಯಜ್ಞಃ ಕರ್ಮಸಮುದ್ಭವಃ ॥ ೧೪ ॥
ಕರ್ಮ ಬ್ರಹ್ಮೋದ್ಭವಂ ವಿದ್ಧಿ ಬ್ರಹ್ಮಾಕ್ಷರ ಸಮುದ್ಭವಂ ।
ತಸ್ಮಾತ್ಸರ್ವಗತಂ ಬ್ರಹ್ಮ ನಿತ್ಯಂ ಯಜ್ಞೇ ಪ್ರತಿಷ್ಠಿತಂ ॥ ೧೫ ॥

[ಅನ್ನಾದಿತಿ] ಅನ್ನಾಸ್ತವ ಭೂತೇ । ಪ್ರರೋಹ ಪಾವತೀ ಸನುಸ್ತೇ । ಮಗ ಪರ್ಜನ್ಯ ಯ ಅನ್ನಾತೇ । ಸರ್ವತ್ರ ಪ್ರಸವೇ ॥ ೩೪ ॥ ತಯಾ ಪರ್ಜನ್ಯಾ ಯಜ್ಞೇ ಜನ್ಮ । ಯಜ್ಞಾತೇ ಪ್ರಗಟೇ ಕರ್ಮ । ಕರ್ಮಾಸಿ ಆದಿಬ್ರಹ್ಮ । ವೇದರೂಪ ॥ ೩೫ ॥ ಮಗ ವೇದಾಂತೇ ಪರಾತ್ಪರ । ಪ್ರಸವತಸೇ ಅಕ್ಷರ । ಮ್ಹಣವುನಿ ಹೇ ಚರಾಚರ । ಬ್ರಹ್ಮ ಬದ್ಧ ॥ ೩೬ ॥ ಪರೀ ಕರ್ಮಾಚಿ ಯೇ ಮೂರ್ತಿ । ಯಜ್ಞೇ ಅಧಿವಾಸ ಶ್ರುತಿ ! । ಐಕೇ ಸುಭದ್ರಾಪತಿ । ಅಖಂಡ ಗಾ ॥ ೩೭ ॥

ಅರ್ಥ— ಅನ್ನದಿಂದ ಪ್ರಾಣಿಮಾತ್ರಗಳ ಉತ್ಪತ್ತಿಯಾಗುತ್ತದೆ. ಮತ್ತು ಪರ್ಜನ್ಯದಿಂದ ಸರ್ವಸ್ಥಳದಲ್ಲಿ ಅನ್ನವು ಉತ್ಪನ್ನವಾಗುತ್ತದೆ. ॥ ೩೪ ॥ ಆ ಪರ್ಜನ್ಯದ ಉತ್ಪತ್ತಿಯು ಯಜ್ಞದಿಂದ ಉಂಟಾಗಿ ಯಜ್ಞದ ಉತ್ಪತ್ತಿಯು ಕರ್ಮದಿಂದ ಆಗುತ್ತದೆ. ಕರ್ಮದ ಉದ್ಭವವು ವೇದರೂಪ ಬ್ರಹ್ಮನಿಂದ ಆಗುತ್ತದೆ. ॥ ೩೫ ॥ ಮತ್ತು ಆ ವೇದದ ಉತ್ಪತ್ತಿಯು ಪರಮಾತ್ಮನಿಂದ ಆಗುತ್ತದೆ. ಆದುದರಿಂದ ಈ ಸರ್ವ ಜಗತ್ತು ಪರಮಾತ್ಮನಿಂದ ಉತ್ಪನ್ನವಾಗಿರುತ್ತದೆ. ॥ ೩೬ ॥ ಆದರೆ ಹೇ ಸುಭದ್ರಾಪತಿಯಾದ ಅರ್ಜುನನೇ ಕೇಳು. ಕರ್ಮರೂಪೀಯಜ್ಞದಲ್ಲಿ ಮೂರ್ತಿಮಂತ ವೇದಸ್ವರೂಪನಾದ ಬ್ರಹ್ಮನು ನಿರಂತರ ವಾಸಮಾಡುತ್ತಾನೆ. ॥ ೩೭ ॥

ಏವಂ ಪ್ರವರ್ತಿತಂ ಚಕ್ರಂ ನಾನುವರ್ತಯತೀಹ ಯಃ ।
ಅಘಾಯುರಿಂದ್ರಿಯಾರಾಮೋ ಮೋಘಂ ಪಾರ್ಥ ಸ ಜೀವತಿ ॥ ೧೬ ॥

[ಏವಂ ಪ್ರವರ್ತಿತಮಿತಿ] ಐಸೇ ಹೇ ಆದೀ ಪರಂಪರಾ । ಸಂಕ್ಷೇಪೇ ತುಜ ಧನುರ್ಧರಾ । ಸಾಂಗಿತಲೀ ಯಾ ಅಧ್ವರಾ । ಲಾಗೂನಿಯಾ ॥ ೩೮ ॥ ಮ್ಹಣೂನಿ ಸಮೂಳ ಹಾ ಉಚಿತು । ಸ್ವಧರ್ಮ

ರೂಪ ಕೃತು । ನಾನುಷ್ಮೀ ಜೋ ಮತ್ತೂ । ಲೋಕೀ ಇಯೇ ॥ ೩೯ ॥ ತೂಂ ಪಾತಕಾಚೀ ರಾಶೀ । ಜಾಣ ಭಾರ ಭೂಮೀಸೀ । ಜೊ ಕುಕರ್ಮೇ ಇಂದ್ರಿಯಾಸೀ । ಉಸೇಗಾ ಗೇಲಾ ॥ ೧೪೦ ॥ ತೇ ಜನ್ಮ ಕರ್ಮ ಸಕಳ । ಅರ್ಜುನಾ ಅತಿ ನಿಷ್ಫಳ । ಜೈಸೇ ಕೀ ಅಭ್ರಪಟಳ । ಅಕಾಳೀಚೆ ॥ ೪೧ ॥ ಕಾ ಗಳಾ ಸ್ವನ ಅಜೇಚೇ । ತೈಸೇ ಜಿಯಾಲೇ ದೇಬೇ ತಯಾಚೇ । ಜಯಾ ಅನುಷ್ಠಾನ ಸ್ವಧರ್ಮಾಚೇ । ಫಡೇಚಿನಾ ॥ ೪೨ ॥ ವ್ಹಣೋನಿ ಐಕೇ ಪಾಂಡವಾ । ಹಾ ಸ್ವಧರ್ಮ ಕವಣೇ ನ ಸಂಡಾವಾ । ಸರ್ವಭಾವೇ ಭಜಾವಾ । ಹಾಚಿ ಏಕ ॥ ೪೩ ॥ ಹಾ ಗಾ ಶರೀರ ಜರೀ ಜಾಹಲೇ । ತರೀ ಕರ್ತವ್ಯ ವೋಫೆ ಆಲೇ । ಮಗ ಉಚಿತ ಕಾ ಆಪಲೇ । ವೋಸಂಡಾವೇ ॥ ೪೪ ॥ ಪರಿಸಪಾ ಸವ್ಯಸಾಚೀ । ಮೂರ್ತಿ ಲಾಹೋನಿ ದೇಹಾಚೀ । ಖಂತೀಕರಿತೀ ಕರ್ಮಾಚೀ । ತೇ ಗಾವಢೇಗಾ ॥ ೪೫ ॥

ಅರ್ಥ— ಹೀಗೆ ಈ ಪೂರ್ವಪರಂಪರೆಯಿಂದ ನಡೆದುಬಂದ ಸ್ವಧರ್ಮರೂಪೀ ಯಜ್ಞದ ಮೂಲ ಪೀಠಿಕೆಯನ್ನು ಧನುರ್ಧರನೇ ನಿನಗೆ ಸಂಕ್ಷೇಪವಾಗಿ ಹೇಳಿದ್ದೇನೆ. ॥ ೩೮ ॥ ಆದ್ದರಿಂದ ಉಚಿತವಾದೀ ಸ್ವಧರ್ಮರೂಪೀ ಯಜ್ಞವನ್ನು ಈ ಲೋಕದಲ್ಲಿ ಯಾವ ಉನ್ಮತ್ತ ಮನುಷ್ಯನು ಆಚರಣೆಯನ್ನು ಮಾಡುವದಿಲ್ಲವೋ, ॥ ೩೯ ॥ ಯಾವನು ಶಾಸ್ತ್ರವಿರುದ್ಧವಾದ ಕುಕರ್ಮದಲ್ಲಿ ಇಂದ್ರಿಯಗಳನ್ನು ಉಪಯೋಗಮಾಡಿ ಆ ಇಂದ್ರಿಯಗಳಿಗೆ ಮನಬಂದಂತೆ ವಿಷಯಸುಖವನ್ನು ಪೂರೈಸುವದರಲ್ಲಿಯೇ ತನ್ನ ಕಾಲವನ್ನು ಕಳೆಯುತ್ತಾನೋ ಆ ದುರಾಚಾರಿಯು ಪಾತಕದ ರಾಶಿಯೇ ಆಗಿರುವನು. ಮತ್ತು ಭೂಮಿಗೆ ಭಾರವಾಗಿರುವನು. ॥ ೧೪೦ ॥ ಅಕಾಲದಲ್ಲಿ ಆಕಾಶದಲ್ಲಿ ಉತ್ಪನ್ನವಾದ ಮೋಡಗಳು ನಿರರ್ಥಕವಾಗಿರುವವು. ಅದರಂತೆಯೇ ಅರ್ಜುನನೇ, ಆ ಉನ್ಮತ್ತ ಮನುಷ್ಯನು ಜನ್ಮದಾರಭ್ಯ ಮಾಡಿದ ಕರ್ಮಗಳು ನಿಷ್ಫಲಹೊಂದುತ್ತವೆ. ॥ ೧೪೧ ॥ ಯಾವನ ಸ್ವಧರ್ಮದ ಅನುಷ್ಠಾನವು ಲೇಶಮಾತ್ರವೂ ಸಾಧಿಸುವದಿಲ್ಲವೋ ಅವನ ಜೀವಿತವು ಆಡಿನ ಕೊಳಮಲಿಯಂತೆ ವ್ಯರ್ಥವಾಗಿರುವದು. ॥ ೪೨ ॥ ಆದ್ದರಿಂದ ಪಾಂಡುನಂದನನೇ ಕೇಳು ಸ್ವಧರ್ಮವನ್ನು ಯಾರೂ ಬಿಡಬಾರದು. ಮತ್ತು ಇದರಲ್ಲಿಯೇ ಸಂಪೂರ್ಣವಾಗಿ ಪ್ರೀತಿಯನ್ನಿಟ್ಟು ಇದನ್ನೇ ಆಚರಣೆಮಾಡಬೇಕು. ॥ ೪೩ ॥ ಹೀಗೆ ನೋಡು, ನಮಗೆ ಶರೀರವು ಪ್ರಾಪ್ತವಾಗಿರಲು ಪೂರ್ವ ಕರ್ತವ್ಯಕರ್ಮ ಇದು ಓಘದಿಂದ ಬಂದೇ ಅದೆ. ಹೀಗಿದ್ದ ಬಳಿಕ ಶಾಸ್ತ್ರಸಮ್ಮತವಾದ ವಿಹಿತಕರ್ಮವನ್ನು ಯಾಕೆ ಬಿಡಬೇಕು? ॥ ೪೪ ॥ ಎಲೋ ಸವ್ಯಸಾಚಿಯೇ, ಈ ಮನುಷ್ಯದೇಹವು ಪ್ರಾಪ್ತವಾಗಿರಲು ಉಚಿತಕರ್ಮವನ್ನು ಮಾಡಲು ಯಾವನು ಬೇಸರಗೊಳ್ಳುವನೋ ಅವನು ಮೂರ್ಖನೆಂದು ತಿಳಿ ॥ ೪೫ ॥

ಯಸ್ತ್ವಾತ್ಮರತಿರೇವ ಸ್ಯಾದಾತ್ಮತೃಪ್ತಶ್ಚ ಮಾನವಃ ।
ಆತ್ಮನ್ಯೇವ ಚ ಸಂತುಷ್ಟಸ್ತಸ್ಯ ಕಾರ್ಯಂ ನ ವಿದ್ಯತೇ ॥ ೧೭ ॥

[ಯಸ್ತ್ವಿತಿ] ದೇಖೇ ಅಸತೇನಿ ದೇಹಧರ್ಮೇ । ಏಥ ತೋಚಿ ಏಕ ನ ಲಿಂಪೇ ಕರ್ಮೇ । ಜೋ ಅಖಂಡಿತ ರಮೇ । ಆಪಣಪೇ ॥ ೪೬ ॥ ಜೇ ತೋ ಆತ್ಮಬೋಧೇ ತೋಷಲಾ । ತರೀ ಕೃತ ಕಾರ್ಯ ದೇಖ ಜಾಹಲಾ । ವ್ಹಣೋನಿ ಸಹಜೇ ಸಾಂಡವಲಾ । ಕರ್ಮಸಂಗಾ ॥ ೪೭ ॥

ಅರ್ಥ— ಹೀಗೆ ನೋಡು, ಯಾವ ಪುರುಷನು ಆತ್ಮಸ್ವರೂಪದಲ್ಲಿ ನಿಮಗ್ನನಾಗಿರುವನೋ ಅವನ ದೇಹ ವ್ಯಾಪಾರವು ನಡೆಯುತ್ತಿದ್ದಾಗ್ಯೂ ಅವನು ಕರ್ಮದಿಂದ ಲಿಪ್ತನಾಗುವದಿಲ್ಲ. ॥ ೪೬ ॥ ಕಾರಣ ಅವನು ಆತ್ಮಬೋಧೆಯಿಂದ ಆತ್ಮರತನೂ, ಆತ್ಮತೃಪ್ತನೂ, ಆತ್ಮಸಂತುಷ್ಟನೂ ಆಗಿರುವನು. ಆದುದರಿಂದ ಅವನು ಕೃತಕಾರ್ಯನೇ ಆಗಿರುತ್ತಾನೆ. ಆ ಮೇಲೆ ಅವನಿಗೆ ಕರ್ತವ್ಯವೆಂಬುದು ಉಳಿಯುವದೇ ಇಲ್ಲ. ಸಹಜವೇ ಅವನು ಕರ್ಮಸಂಗದಿಂದ ಮುಕ್ತನಾಗುತ್ತಾನೆ. ॥ ೪೭ ॥

ನೈವ ತಸ್ಯ ಕೃತೇನಾರ್ಥೋ ನಾಕೃತೇನೇಹ ಕಶ್ಚನ ।
ನ ಚಾಸ್ಯ ಸರ್ವ ಭೂತೇಷು ಕಶ್ಚಿದರ್ಥ ವ್ಯಪಾಶ್ರಯಃ ॥ ೧೮ ॥

[**ನೈವ ತಸ್ಯೇತಿ**] ತೃಪ್ತಿ ಜಾಲಿಯಾ ಜೈಸೀ । ಸಾಧನೇ ಸರತೀ ಆಪೈಸೀ । ದೇಖೇ ಆತ್ಮತುಷ್ಟೀ ತೈಸೀ । ಕರ್ಮೆ ನಾಹೀ ॥ ೪೪ ॥ ಜಂವವರೀ ಅರ್ಜುನಾ । ತೋ ಬೋಧ ಭೇಟೇನಾ ಮನಾ । ತವಚಿ ಯಾ ಸಾಧನಾ । ಭಜಾವೀ ಲಾಗೇ ॥ ೪೪ ॥

ಅರ್ಥ— ಯಾವ ಪ್ರಕಾರ ಹೊಟ್ಟೆ ತುಂಬಿ ತೃಪ್ತಿಯಾದ ಮೇಲೆ ಅದರ ಸಾಧನಗಳಾದರೂ (ಅಡಿಗೆ ಮುತಾದ್ದು ಮಾಡಿ ಕಷ್ಟಪಡುವದು) ತಮ್ಮಿಂದ ತಾವೇ ನಿಂತುಹೋಗುತ್ತವೆ. ಅದೇ ಪ್ರಕಾರ ಸ್ವಸ್ವರೂಪಾನಂದದಲ್ಲಿ ಮಗ್ನರಾದ ಮೇಲೆ ಕರ್ಮಗಳನ್ನು ಮಾಡುವ ಕಷ್ಟವು (ಸಹಜವೇ) ಮುಗಿಯುತ್ತದೆ. ॥ ೪೪ ॥ ಅರ್ಜುನಾ, ಎಲ್ಲಿಯವರೆಗೆ ಈ ತರಹದ ಆತ್ಮಜ್ಞಾನವು ಉಂಟಾಗಿರುವದಿಲ್ಲವೋ ಅಲ್ಲಿಯ ವರೆಗೆ ಈ ಸಾಧನಗಳ ಆಚರಣೆಯನ್ನು ಮಾಡಲೇ ಬೇಕಾಗುತ್ತದೆ. ॥ ೪೪ ॥

ತಸ್ಮಾದಸಕ್ತಃ ಸತತಂ ಕಾರ್ಯಂ ಕರ್ಮ ಸಮಾಚಾರ ।
ಅಸಕ್ತೋ ಹ್ಯಾಚರನ್ ಕರ್ಮ ಪರಮಾಪ್ನೋತಿ ಪೂರುಷಃ ॥ ೧೯ ॥

[**ತಸ್ಮಾದಿತಿ**] ವ್ಹಣೂನಿ ತೂ ನಿಯತ । ಸಕಳ ಕಾಮನಾರಹಿತ । ಹೋವೂನಿಯಾ ಉಚಿತ । ಸ್ವಧರ್ಮೇ ರಾಹಾಟೇ ॥ ೧೯೦ ॥ ಜೇ ಸ್ವಧರ್ಮೇ ನಿಷ್ಕಾಮತಾ ಅನುಸರಿಲೇ ಪಾರ್ಥಾ । ತೇ ಕೈವಲ್ಯ ಪದ ತತ್ವತಾ । ಪಾವಲೇ ಜಗೀ ॥ ೧೯೧ ॥

ಅರ್ಥ— ಆದುದರಿಂದ (ನಿನ್ನ ಸ್ಥಿತಿಯು ಹಾಗಿಲ್ಲದರಿಂದ) ನೀನು ಯಾವಾಗಲೂ ಫಲಾಪೇಕ್ಷೆಯನ್ನು ಬಿಟ್ಟು ಅನಾಸಕ್ತನಾಗಿ ಉಚಿತವಾದ ನಿನ್ನ ಧರ್ಮದ ಆಚರಣೆಯನ್ನು ಮಾಡು. ॥ ೧೯೦ ॥ ಪಾರ್ಥಾ, ಈ ಜಗತ್ತಿನಲ್ಲಿ ಯಾವನು ನಿಜವಾಗಿ ಸ್ವಧರ್ಮದ ಆಚರಣೆಯನ್ನು ನಿಷ್ಕಾಮಬುದ್ಧಿಯಿಂದ ಮಾಡುವನೋ ಅವನು ಪರಮಪದವನ್ನು (ಮೋಕ್ಷವನ್ನು) ಪಡೆಯುತ್ತಾನೆ. ॥ ೧೯೧ ॥

ಕರ್ಮಣೈವ ಹಿ ಸಂಸಿದ್ಧಿಮಾಸ್ಥಿತಾ ಜನಕಾದಯಃ ।
ಲೋಕಸಂಗ್ರಹಮೇವಾಪಿ ಸಂಪಶ್ಯನ್ ಕರ್ತುಮರ್ಹಸಿ ॥ ೨೦ ॥

[**ಕರ್ಮಣೈವೇತಿ**] ದೇಖಪಾ ಜನಕಾದಿಕ । ಕರ್ಮಜಾತ ಅಶೇಖ । ನ ಸಾಂಡಿತಾ ಮೋಕ್ಷಸುಖ । ಪಾವತೇ ಜಾಹಲೇ ॥ ೨೦ ॥ ಯಾ ಕಾರಣೇ ಪಾರ್ಥಾ । ಹೋಆವೀ ಕರ್ಮೇ ಆಸ್ಥಾ । ಹೇ ಆಣಿ ಕಾಹೀ ಏಕಾ ಅರ್ಥಾ । ಉಪಕಾರೀಲ । ೨೧ ॥ ಜೇ ಆಚರತಾ ಆಪಣಪಯಾ । ದೇಖೀ ಲಾಗೇಲ ಲೋಕಾಯಯಾ । ತರೀ ಚುಕೇಲ ಹಾ ಅಪಾಯಾ । ಪ್ರಸಂಗೇಚಿ ॥ ೨೨ ॥ ದೇಖೇ ಪ್ರಾಪ್ತಾರ್ಥ ಜಾಹಲೀ । ಜೇ ನಿಷ್ಕಾಮತಾ ಪಾವಲೇ । ತಯಾಹೀ ಕರ್ತವ್ಯ ಅಸೇ ಉರಲೇ । ಲೋಕಾಲಾಗೀ ॥ ೨೩ ॥ ಮಾಗೀರ್ ಅಂಧಾ ಸರಿಸಾ । ಪುಢೇ ದೇಖಣಾಹೀ ಚಾಲೇ ಜೈಸಾ । ಅಜ್ಞಾನಾ ಪ್ರಕಟಾವಾ ಧರ್ಮ ತೈಸಾ । ಆಚರೋನೀ ॥ ೨೪ ॥ ಹಾಗಾ ಐಸೇ ಜರೀ ನ ಕೀಜೇ । ತರೀ ಅಜ್ಞಾನಾ ಕಾಯ ಉಮಜೇ । ತಿಹೀ ಕವಣೇ ಪರೀ ಜಾಣೆ ಜೇ । ಮಾರ್ಗಾತೇಯಾ ॥ ೨೬ ॥

ಅರ್ಥ— ಹೀಗೆ ನೋಡು ಜನಕಾದಿ ರಾಜರು ಕರ್ಮವನ್ನು ತ್ಯಾಗಮಾಡದೇ ಮೋಕ್ಷಸುಖವನ್ನು ಪಡೆದರು. ॥ ೨೨ ॥ ಈ ಕಾರಣದ ದೆಸೆಯಿಂದ ಪಾರ್ಥಾ, ಕರ್ಮಮಾಡುವದರಲ್ಲಿ ನೀನು ಆಸಕ್ತಯುಳ್ಳವನಾಗು. ಕಾರಣ ವೇನಂದರೆ ಅದರಿಂದ ಇನ್ನೂ ಒಂದು ಉಪಯೋಗವಾಗತಕ್ಕದ್ದಿದೆ. ॥ ೨೩ ॥ ಅದರಂತೆಯೇ ಆ ಕರ್ಮಾಚರಣೆಯು ನಮ್ಮ ಕಡೆಯಿಂದ ಆಗುವದರಿಂದ ಜನರಿಗೆ ಸ್ವಧರ್ಮಮಾರ್ಗವು ದೊರಕುವದು. ಮತ್ತು ಅದರಿಂದಲೇ ಅವರ ದುಃಖಗಳು ಅನಾಯಾಸವಾಗಿ ಇಲ್ಲದಂತೆ ಆಗುವವು. ॥ ೨೪ ॥ ಹೀಗೆ ನೋಡು— ಯಾರು ಕೃತಾರ್ಥರಾಗಿ

ನಿಷ್ಕಾಮವುಳ್ಳವನಾಗಿರುವನೋ ಅವರು ಸಹ ಜನರ ಹಿತದ ಕಡೆಗೆ ಅನುಲಕ್ಷಿಸಿ ಪರರಿಗೆ ಉಪಕಾರಮಾಡುವ ಕರ್ತವ್ಯವನ್ನು ವಹಿಸಲೇಬೇಕಾಗುತ್ತದೆ. ॥ ೫೫ ॥ ಕುರುಡರ ಸಾಲಿನಲ್ಲಿ ಮುಂದೆ ಹಾದಿತೋರಿಸುವ ಮುಖ್ಯ ಮನುಷ್ಯನ ಕಣ್ಣು ಕಾಣುತ್ತಿದ್ದಾಗ್ಯಾದರೂ ಅವನು ಆ ಕುರುಡರಂತೆ ಹಾದೀನಡೆಯುತ್ತಾನೆ. ಅದೇ ಪ್ರಕಾರ ಜ್ಞಾನಿಗಳು ಸ್ವತಃ ಧರ್ಮಾಚರಣೆಯನ್ನು ಮಾಡಿ ಅಜ್ಞಾನೀ ಜನರನ್ನು ಧರ್ಮದ ಮಾರ್ಗಕ್ಕೆ ಹಚ್ಚಬೇಕಾಗುತ್ತದೆ. ॥ ೫೬ ॥ ಎಲೋ ಅರ್ಜುನನೇ ! ಜ್ಞಾನಿಗಳು ಈ ಪ್ರಕಾರದ ಆಚರಣೆಯನ್ನು ಮಾಡದಿದ್ದರೆ ಅಜ್ಞಾನೀ ಜನರಿಗೆ ಕರ್ಮಾಚರಣದ ಮಾರ್ಗವು ಹೇಗೆ ದೊರಕೀತು ? ಮತ್ತು ಅವರಿಗೆ ಈ ಕರ್ಮಮಾರ್ಗದ ಮಾದರಿಯು ಯಾವ ಉಪಾಯದಿಂದ ತಿಳಿದೀತು. ॥ ೫೭ ॥

ಯದ್ಯದಾಚರತಿ ಶ್ರೇಷ್ಠಸ್ತತ್ತ ದೇವೇತರೋಜನಃ ।
ಸ ಯತ್ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ ॥ ೨೧ ॥

[ಯದ್ಯದಿತಿ] ಏಥ ನಡೀಲ ಜೇ ಜೇ ಕರಿತೀ । ತಯಾ ನಾಮ ಧರ್ಮ ಹೇವಿತೀ । ತೇಚಿ ಯೇರ ಅನುಷ್ಠಿತೀ । ಸಾಮಾನ್ಯ ಸಕಳ ॥ ೫೮ ॥ ಹೇ ಐಸೇ ಅಸೇ ಸ್ವಭಾವೇ । ಮ್ಹಣೋನಿ ಕರ್ಮ ನ ಸಂಡಾವೇ । ವಿಶೇಷೇ ಆಚರಾವೇ । ಲಾಗೇ ಸಂತೀ ॥ ೫೯ ॥

ಅರ್ಥ— ಈ ಜಗತ್ತಿನಲ್ಲಿ ಶ್ರೇಷ್ಠ ಜನರು (ಸಾಧು ಸಂತರು) ಪ್ರಮಾಣವೆಂದು ಮಾಡುವ ಆಚರಣ ಮೇಲು ಪಜ್ಞಿಯನ್ನೇ ಧರ್ಮವೆಂದು ಹೆಸರಿಟ್ಟು ವಿಕ್ಕುಳಿದ ಸರ್ವಜನರು ಅದೇ ಆಚರಣವನ್ನೇ ಅನುಸರಿಸುತ್ತಾರೆ. ॥ ೫೮ ॥ ಈ ಮಾತು ಸ್ವಾಭಾವಿಕವಾಗಿರುವದರಿಂದ ಕರ್ಮಾಚರಣದ ತ್ಯಾಗಮಾಡಲಿಕ್ಕೆ ಬರುವದಿಲ್ಲ. ಮತ್ತು ಸಾಧುಸಂತರಂತೂ ಕರ್ಮಾಚರಣೆಯನ್ನು ಅವಶ್ಯವಾಗಿ ಮಾಡಲೇ ಬೇಕಾಗಿರುತ್ತದೆ. ॥ ೫೯ ॥

ನ ಮೇ ಪಾರ್ಥಾಸ್ತಿ ಕರ್ತವ್ಯಂ ತ್ರಿಷು ಲೋಕೇಷು ಕಿಂಚನ ।
ನಾನವಾಪ್ತಮವಾಪ್ತವ್ಯಂ ವರ್ತ ಏವಚ ಕರ್ಮಣಿ ॥ ೨೨ ॥

[ನ ಮೇ ಪಾರ್ಥೇತಿ] ಆತಾ ಆಣಿಕಾಚಿಯಾ ಗೋಷ್ಟೀ । ಕಾಯಶಾ ಸಾಂಗೋ ಕಿರೀಟ್ಟೀ । ದೇಖೇ ಮೀಚಿ ಇಯೇ ರಾಹಾಟೇ । ವರ್ತತ ಅಸೇ ॥ ೧೬೦ ॥ ಕಾಯ ಸಾಂಕಡೇ ಕಾಹೀ ಮಾತೇ । ಕೀ ಕವಣೇ ಏಕೇ ಆರ್ತೇ । ಆಚರೇ ಮೀ ಧರ್ಮಾತೇ । ಮ್ಹಣಸಿ ಜರೀ ॥ ೬೧ ॥ ತರೀ ಪುರತೇ ಪಣಾಲಾಗೀ । ಆಣಿಕದುಸರಾ ನಾಹೀ ಜಗೀ ! ಐಸೀ ಸಾಮಗ್ರೀ ಮಾಝ್ಯಾ ಆಂಗೀ । ಜಾಣಸೀ ತೂ ॥ ೬೨ ॥ ಮೃತ ಗುರುಪುತ್ರ ಆಣಿಲಾ । ತೋತುವಾ ಪವಾಡಾ ದೇಖಿಲಾ । ತೋಹೀ ಮೀ ಉಗಲಾ । ಕರ್ಮೀ ವರ್ತೇ ॥ ೬೩ ॥

ಅರ್ಥ— ಪಾರ್ಥಾ, ಇನ್ನುಮೇಲೆ ಬಹಳ ದೂರಿನದಾದ ಎರಡನೇದವರ ಮಾತು ಏಕೆ ಹೇಳುತ್ತ ಕುಳಿತು ಕೊಳ್ಳಲಿ ? ನಾನೇ ಧರ್ಮಾಚರಣೆಯಂತೆ ವರ್ತಿಸುತ್ತೇನೆ. ॥ ೧೬೦ ॥ ಆದರೆ ನನಗೆ ಏನಾದರೂ ಒಂದು ಸಂಕಟ ಬಂದಿರಬೇಕು. ಅಥವಾ ಯಾವದಾದರೊಂದು ಅಪೇಕ್ಷೆಯು ನನ್ನಲ್ಲಿ ಉಂಟಾಗಿರಬಹುದು. ಅಂತೆಯೇ ನಾನು ಸ್ವಧರ್ಮಾಚರಣೆಯನ್ನು ಮಾಡುತ್ತಿರಬಹುದೆಂದು ನೀನು ಊಹಿಸಬಹುದು. ॥ ೧೬೧ ॥ ಆದರೆ ಈ ಜಗತ್ತಿನಲ್ಲಿ ನನ್ನಂಥ ಸದ್ಗುಣಿಗಳೂ, ಐಶ್ವರ್ಯವಾನರೂ, ಮತ್ತು ಸಂಪನ್ನರೂ ಎರಡನೇಯವರಾರೂ ಇರುವದಿಲ್ಲ. ಈ ನನ್ನ ಸಾಮರ್ಥ್ಯವನ್ನು ನೀನು ಅರಿತವನೇ ಇರುವಿ. ॥ ೧೬೨ ॥ ಸಂದೀಪನ ಋಷಿಗಳ ಗುರುದಕ್ಷಿಣೆಗಾಗಿ ಅವರ ಮೃತ ಪುತ್ರರನ್ನು ತಂದುಕೊಟ್ಟೆನು. ಆ ಪರಾಕ್ರಮವನ್ನು ನೀನೇ ಪ್ರತ್ಯಕ್ಷವಾಗಿ ನೋಡಿರುವಿ. ಆದರೂ ಇಂಥ ನಿಚ್ಛನಾದ ನಾನು ಕೂಡ ಸುಮ್ಮನೇ ಕರ್ಮಮಾರ್ಗದ ಆಚರಣೆಯನ್ನು ಮಾಡುತ್ತಲೇ ಇರುವೆನು. ॥ ೧೬೩ ॥

ಯದಿ ಹ್ಯಹಂ ನ ವರ್ತೇಯಂ ಜಾತು ಕರ್ಮಣ್ಯತಂದ್ರಿತಃ ।
ಮಮ ವರ್ತ್ಮಾನುವರ್ತಂತೇ ಮನುಷ್ಯಾಃ ಪಾರ್ಥ ಸರ್ವಶಃ ॥ ೨೩ ॥

[ಯದೀತಿ] ಪರೀ ಸ್ವಧರ್ಮೀ ವರ್ತೇ ಕೈಸಾ । ಸಾಕಾಂಕ್ಷ ಕಾಹೋಯ ಜೈಸಾ । ತಯಾಚಿ ಏಕಾ ಉದ್ದೇಶಾ । ಲಾಗೋನಿಯಾ ॥ ೬೪ ॥ ಜೇ ಭೂತ ಜಾತ ಸಕಳ ಅಸೇ ಅನ್ಹಾ ಅಧೀನ · ಚಿ ಕೇವಳ । ತರೀ ನವ್ಹಾವೇ ಬರಳ । ಮ್ಹಣೋನಿಯಾ ॥ ೬೫ ॥

ಅರ್ಥ— ಆದರೆ ಲೋಕ ಕಲ್ಯಾಣದ ಉದ್ದೇಶದಿಂದ ಸಕಾಮಯುಕ್ತ ಪುರುಷನಂತೆ ನಾನು ಸ್ವಧರ್ಮದ ಆಚರಣೆಯನ್ನು ಮಾಡುತ್ತೇನೆ. ॥ ೬೪ ॥ ಕಾರಣವೇನೆಂದರೆ ಸರ್ವ ಪ್ರಾಣಿಗಳು ನಮ್ಮ ಮೇಲೆಯೇ ಅವಲಂಬಿಸಿರುತ್ತವೆ. ಆದುದರಿಂದ ಅವರು ಕರ್ಮಭ್ರಷ್ಟರಾಗಬಾರದೆಂಬ ಸದುದ್ದೇಶದಿಂದಲೇ, ॥ ೬೫ ॥

ಉತ್ಸೀದೇಯುರಿಮೇ ಲೋಕಾ ನ ಕುರ್ಯಾಂ ಕರ್ಮ ಚೇದಹಂ ।
ಸಂಕರಸ್ಯ ಚ ಕರ್ತಾ ಸ್ಯಾಮುಪಹನ್ಯಾಮಿಮಾಃ ಪ್ರಜಾಃ ॥ ೨೪ ॥

[ಉತ್ಸೀದೇ ಯುರಿತಿ] ಆಮ್ಹೀ ಪೂರ್ಣ ಕಾಮ ಹೋವುನೀ । ಜರೀ ಆತ್ಮಸ್ಥಿತೀ ರಾಹುನೀ । ತರೀ ಪ್ರಜಾಹೇ ಕೈಸೇನೀ । ನಿಸ್ತರೇಲ ॥ ೬೬ ॥ ಇಹೀ ಆಮುಚೀ ವಾಸ ಪಾಹಾವೀ । ಮಗ ವರ್ತತೀ ಪರೀ ಜಾಣಾವೀ । ತೇ ಲೋಕ ಸ್ಥಿತೀ ಆಘವೀ । ನಾಸಿಲೀ ಹೋಈಲ ॥ ೬೭ ॥ ಮ್ಹಣೋನಿ ಸಮರ್ಥ ಜೋ ಏಥೆ । ಆಥಿಲಾ ಸರ್ವಜ್ಞತೇ । ತೇಣೇ ವಿಶೇಷೇ ಕರ್ಮಾತೇ । ತ್ಯಜಾವೇನಾ ॥ ೬೮ ॥

ಅರ್ಥ—ನಾವು ನಿಷ್ಕಾಮಿಗಳಾಗಿ ಆತ್ಮಾನಂದದಲ್ಲಿಯೇ ಮಗ್ನರಾಗಿ ಕುಳಿತರೆ ಮತ್ತು ಧರ್ಮಾಚರಣೆಯನ್ನು ಮಾಡದಿದ್ದರೆ ಈ ಪ್ರಜರ ತರಣೋಪಾಯವು ಹೇಗೆ ಆಗುವದು ? ॥ ೬೬ ॥ ಜನರು ನಮ್ಮ ವರ್ತನವನ್ನು ನೋಡಿ ಧರ್ಮಾಚರಣದಿಂದ ನಡೆಯುವ ಮಾರ್ಗವನ್ನು ತಿಳಿದುಕೊಳ್ಳಬೇಕು. ಹೀಗೆ ಈ ಜನರ ನಡತೆ ಇದ್ದು ನಿಜವಾಗಿ ಸಾಂಪ್ರದಾಯವಾದರೂ ಹೀಗೆಯೇ ಇರುತ್ತದೆ. ಅಂದಬಳಿಕ ನಾವು ಕರ್ಮಾಚರಣೆಯನ್ನು ಮಾಡದಿದ್ದರೆ ಜನರು ದುರ್ಮಾರ್ಗಿಗಳಾಗುವರು. ॥ ೬೭ ॥ ಆದುದರಿಂದ ಯಾರು ಸಮರ್ಥರೂ, ಸರ್ವಜ್ಞಾನ ಸಂಪನ್ನರೂ ಇರುವರೊ, ಅವರು ವಿಶೇಷವಾಗಿ ಯಾವಾಗ್ಯೂ ಕರ್ಮತ್ಯಾಗವನ್ನು ಮಾಡಬಾರದು. ॥೬೮॥

ಸಕ್ತಾಃ ಕರ್ಮಣ್ಯವಿದ್ವಾಂಸೋ ಯಥಾ ಕುರ್ವಂತಿ ಭಾರತ ।
ಕುರ್ಯಾದ್ವಿದ್ವಾಂಸ್ತಥಾಽಸಕ್ತಶ್ಚಿಕೀರ್ಷುರ್ಲೋಕಸಂಗ್ರಹಂ ॥ ೨೫ ॥

[ಸಕ್ತಾಃ ಕರ್ಮಣೀತಿ] ದೇಖೇ ಫಳಾಚಿಯಾ ಆಶಾ । ಆಚರೀ ಕಾಮುಕ ಜೈಸಾ । ಕರ್ಮೀ ಭರ ಹೋ ಅವಾ ತೈಸಾ । ನಿರಾಶಾ ಹೀ ॥ ೬೯ ॥ ಜೇ ಪುಢತ ಪುಢತೀ ಪಾರ್ಥಾ । ಹೇ ಸಕಳ ಲೋಕ ಸಂಸ್ಥಾ । ರಕ್ಷಣೀಯ ಸರ್ವಥಾ । ಮ್ಹಣವೂನಿಯಾ ॥ ೧೭೦ ॥ ಮಾರ್ಗಾಧಾರೇ ವರ್ತಾವೇ । ವಿಶ್ವ ಹೇ ಮೋಹರೇ ಲಾವಾವೇ । ಅಲೌಕಿಕ ನೋಹಾವೇ । ಲೋಕಾಪ್ರತಿ ॥೧೭೧॥

ಅರ್ಥ— ಫಲದ ಅಪೇಕ್ಷೆಯನ್ನು ಮಾಡುವ ಪುರುಷನು ಯಾವ ಪ್ರಕಾರ ಕರ್ಮಾಚರಣೆಯನ್ನು ಮಾಡುತ್ತಾನೋ ಅದೇ ಪ್ರಕಾರ ಜ್ಞಾನಸಂಪನ್ನನೂ, ಕೂಡ ಕರ್ಮಾಚರಣದಲ್ಲಿ ಆದರವನ್ನಿಡಬೇಕು. ॥ ೬೯ ॥ ಕಾರಣ ಪಾರ್ಥಾ, ಮುಂದೆ ಆಗತಕ್ಕಂಥ ಲೋಕಸಮುದಾಯದ ಸಂರಕ್ಷಣೆಯನ್ನು ಮಾಡುವದು ಅವಶ್ಯವಾಗಿರುವದು. ಆದ್ದರಿಂದ, ॥ ೧೭೦ ॥ ಮಹಾತ್ಮರು ಸನ್ಮಾರ್ಗದಿಂದ ನಡೆದು ಜನರಿಗೆ ಧರ್ಮಾಚರಣದ ಮಾರ್ಗವನ್ನು ತೋರಿಸಬೇಕು. ಆದರೆ ತಾವು ಸ್ವರ್ಗಾದಿ ಲೋಕಗಳ ಪ್ರಾಪ್ತಿಯ ವಿಷಯದಲ್ಲಿ ಆಸಕ್ತಿಯನ್ನಿಡಬಾರದು. ॥೧೭೧॥

ನ ಬುದ್ಧಿಭೇದಮ್ ಜನಯೇದಜ್ಞಾನಾಂ ಕರ್ಮಸಂಗಿನಾಂ ।
ಜೋಷಯೇತ್ಸರ್ವಕರ್ಮಾಣಿ ವಿದ್ವಾನ್ಯುಕ್ತಃ ಸಮಾಚರನ್ ॥ ೨೬ ॥

[ನ ಬುದ್ಧಿ ಭೇದಮಿತಿ] ಜೇ ಸಾಯಾಸೇ ಸ್ನನ ಸೇವೀ । ತೇ ಪಕ್ವಾನ್ನೇ ಕೇವೀ ಜೇವೀ । ಮ್ಹಣೋನಿ ಬಾಳಕಾ ಜೈಸೀ ನೇದಾವೀ । ಧನುರ್ಧರಾ ॥ ೭೨ ॥ ತೈಸೀ ಕರ್ಮೀ ಜಯಾ ಅಯೋಗ್ಯತಾ । ತಯಾಪ್ರತಿ ನೈಷ್ಕರ್ಮ್ಯತಾ । ನ ಪ್ರಗಟಾವೀ ಬೇಳತಾ । ಆದಿ ಕರುನೀ ॥ ೭೩ ॥ ತೇಥೆ ಸತ್ಕ್ರಿಯಾಚಿ ಲಾವಾವೀ । ತೋಚಿ ಏಕೀ ಪ್ರಶಂಸಾವೀ । ನಿಷ್ಕರ್ಮಿಹೀ ದಾವಾವೀ । ಆಚರೋನೀ ॥ ೭೪ ॥ ತಯಾ ಲೋಕ ಸಂಗ್ರಹಾ ಲಾಗೀ । ವರ್ತತಾ ಕರ್ಮ ಸಂಗೀ । ತೋ ಕರ್ಮಬಂಧ ಆಂಗೀ । ವಾಜೇಲನಾ ॥ ೭೫ ॥ ಜೈಸೀ ಬಹುರೂಪಿಯಾಂಚೀ ರಾವೋ ರಾಣೀ । ಸ್ತ್ರೀ ಪುರುಷ ಭಾವೋ ನಾಹೀ ಮನೀ । ಪರೀ ಲೋಕ ಸಂಪಾದಣೀ । ತೈಸೀಚ ಕರಿತೀ ॥ ೭೬ ॥

ಅರ್ಥ— ಯಾವ ಕೂಸಿಗೆ ಸ್ತನಪಾನವನ್ನು ಮಾಡಲಿಕ್ಕೆ ಸಹ ಬರುವದಿಲ್ಲವೋ, ಆ ಕೂಸು ಪಕ್ವಾನ್ನವನ್ನು ಹೇಗೆ ತಿನ್ನುವದು ಹೇಳು ನೋಡುವಾ ? ಆದುದರಿಂದ ಆ ಕೂಸಿಗೆ ಪಕ್ವಾನ್ನಗಳನ್ನು ತಿನ್ನಲಿಕ್ಕೆ ಕೊಡಬಾರದು. ॥೭೨॥ ಅದೇ ಪ್ರಕಾರ ಕರ್ಮಾಚರಣೆಯನ್ನು ಮಾಡಲಿಕ್ಕೆ ಸಹ ಯಾರು ಅನಧಿಕಾರಿಯಾಗಿರುವರೋ, ಅವರಿಗೆ ಜ್ಞಾನಮಾರ್ಗದ ಮಹತ್ವವಾದ ಉಪದೇಶವನ್ನು ವಿನೋದಾರ್ಥವಾಗಿ ಸಹ ಮಾಡಬಾರದು. ॥ ೭೩ ॥ ಅವರಿಗೆ ಸತ್ಕರ್ಮದ ಆಚರಣೆಯನ್ನೇ ಮಾಡಲಿಕ್ಕೆ ಹಚ್ಚಬೇಕು. ಸತ್ಕರ್ಮದ ಪ್ರಶಂಸೆಯನ್ನೇ ಮಾಡಬೇಕು. ಮತ್ತು ನಿಷ್ಕಾಮನಾದ ಪುರುಷನು ಸಹ ಸತ್ಕರ್ಮದ ಆಚರಣೆಯನ್ನು ಮಾಡಿ ತೋರಿಸಬೇಕು. ॥ ೭೪ ॥ ವರ್ಣಾಶ್ರಮ ಧರ್ಮದ ರಕ್ಷಣೆ ಮಾಡುವದರ ದೆಸೆಯಿಂದ ಕರ್ಮಮಾರ್ಗದ ಆಚರಣೆಯನ್ನು ಮಾಡುತ್ತಿರಲಿಕ್ಕಾಗಿ ಅವನಿಗೆ ಕರ್ಮಬಂಧವನ್ನು ಭೋಗಿಸುವ ಕಾರಣವಿರುವದಿಲ್ಲ. ॥ ೭೫ ॥ ಬಹುರೂಪಿಯು (ಸೋಗುಗಾರನು) ರಾಜಾರಾಣಿಗಳ ಸೋಗು ಹಾಕಿದಾಗ್ಯೂ ಅವನ ಮನಸಿನಲ್ಲಿ ಸ್ತ್ರೀ ಪುರುಷ ಭಾವನೆಯು ಇರುವದೇ ಇಲ್ಲ. ಆದರೆ ಜನರಿಗೆ ತೋರಿಸುವದರ ದೆಸೆಯಿಂದ ಮಾತ್ರ ಅವರಂತೆಯೇ ನಟಿಸುತ್ತಾನೆ. ॥ ೭೬ ॥

ಪ್ರಕೃತೇಃ ಕ್ರಿಯಮಾಣಾನಿ ಗುಣೈಃ ಕರ್ಮಾಣಿ ಸರ್ವಶಃ ।
ಅಹಂಕಾರವಿಮೂಢಾತ್ಮಾ ಕರ್ತಾಽಹಮಿತಿ ಮನ್ಯತೇ ॥ ೨೭ ॥

[ಪ್ರಕೃತೇರಿತಿ] ದೇಖೀ ಪುಢಿಲಾಜೇ ವೋಢಿ । ಜರೀ ಆಪುಲಾ ಮಾಥಾ ಫೇ ಇಜೇ । ತರೀ ಸಾಂಗೇ ಕಾ ನ ದಾಟಜೇ । ಧನುರ್ಧರಾ ॥ ೭೭ ॥ ತೈಸೀ ಶುಭಾಶುಭೇ ಕರ್ಮೀ । ಜಿಯೇ ನಿಪಜತೀ ಪ್ರಕೃತಿಧರ್ಮೇ । ತಿಯೇ ಮೂರ್ಖ ಮತಿಭ್ರಮೇ । ಮೀ ಕರ್ತಾ ಮ್ಹಣೇ ॥ ೭೮ ॥ ಐಸಾ ಅಹಂಕಾರಾರೂಢ । ಏಕದೇಶೀ ಮೂಢ । ತಯಾ ಹಾ ಪರಮಾರ್ಥ ಗೂಢ । ಪ್ರಗಟಾವಾನಾ ॥ ೭೯ ॥ ಹೇ ಅಸೋ ಪ್ರಸ್ತುತ । ಸಾಂಗಿಜೇಲ ತುಜ ಹಿತ । ತೇ ಅರ್ಜುನಾ ದೇವೋನಿ ಚಿತ್ತ । ಅವಧಾರೀಪಾ ॥೮೦॥

ಅರ್ಥ— ಅರ್ಜುನಾ, ಹೀಗೆ ನೋಡು— ಎರಡನೇದವರ ಭಾರವನ್ನು ತನ್ನ ತಲೆಯ ಮೇಲೆಯೇ ಹೊತ್ತು ಕೊಂಡರೆ ತನ್ನ ನಡವು ನೋಯಿಸಲಾರದೋ ? ॥ ೭೭ ॥ ಅದರಂತೆಯೇ ಪ್ರಕೃತಿ ಗುಣದಿಂದ ಶುಭಾಶುಭ ಕರ್ಮಗಳು ಉಂಟಾಗುತ್ತವೆ. ಬುದ್ಧಿಭ್ರಂಶದಿಂದ ಮನುಷ್ಯನು ಮೂರ್ಖನಾಗಿ ಆ ಕರ್ಮಗಳನ್ನು ನಾನೇ (ಕರ್ತಾ) ಮಾಡುತ್ತೇನೆಂದು ಅನ್ನುತ್ತಾನೆ. ॥ ೭೮ ॥ ಇಂಥ ರೀತಿಯಿಂದ ಮೂರೂವರೆ ಮೊಳ ದೇಹದಲ್ಲಿ ಕರ್ತೃತ್ವಾಭಿಮಾನವನ್ನು ಧಾರಣಮಾಡುವ ಪುರುಷನಿಗೆ ಈ ನೈಷ್ಕರ್ಮ್ಯ ಸ್ಥಿತಿಯ ಫಾರಮಾರ್ಥ ರಹಸ್ಯವನ್ನು ಉಪದೇಶ ಮಾಡ

ಬಾರದು. ॥ ೭೯ ॥ ಕಾರಣವೇನೆಂದರೆ, ಅನಧಿಕಾರಿಯಾದ ಆ ಪುರುಷನಿಗೆ ಪಾರಮಾರ್ಥ ತತ್ವವು ತಿಳಿಯಲಿಕ್ಕಿಲ್ಲ. ಮತ್ತು ಸ್ವಧರ್ಮ ಕರ್ಮದಿಂದಲೂ ಭ್ರಷ್ಟನಾಗಿ ಹೋಗುವನು. ಇದಂತೂ ಇರಲಿ, ಪ್ರಸ್ತುತ ಅರ್ಜುನಾ, ನಿನ್ನ ಹಿತವು ಯಾವುದರಲ್ಲಿರುವದೆಂಬುದನ್ನು ನಿನಗೆ ಹೇಳುತ್ತೇನೆ ಲಕ್ಷಪೂರ್ವಕವಾಗಿ ಕೇಳು. ॥ ೧೪೨ ॥

ತತ್ವವಿತ್ತು ಮಹಾಬಾಹೋ ಗುಣಕರ್ಮವಿಭಾಗಯೋಃ ।
ಗುಣಾ ಗುಣೇಷು ವರ್ತಂತ ಇತಿ ಮತ್ವಾ ನ ಸಜ್ಜತೇ ॥ ೨೮ ॥

[**ತತ್ವವಿದಿತಿ**] ಜೇ ತತ್ವಜ್ಞಾನಿಯಾಚ್ಯಾ ರಾಯೀ । ತೋ ಪ್ರಕೃತಿ ಭಾವ ನಾಹೀ । ಜೇಥ ಕರ್ಮಜಾತ ಪಾಹೀ । ನಿಪಜತ ಅಸೇ ॥ ೮೧॥ ತೇ ದೇಹಾಭಿಮಾನ ಸಾಂಡುನೀ । ಗುಣಕರ್ಮೀ ವೋ ಲಾಂಡುನೀ । ಸಾಕ್ಷೀಭೂತ ಹೋವುನಿ । ವರ್ತತೀ ದೇಹೀ ॥ ೮೨ ॥ ಮ್ಹಣೋನಿ ಶರೀರೀ ಜರೀ ಹೋತೀ । ತರೀ ಕರ್ಮಬಂಧಾ ನಾಕಳತೀ । ಜೈಸಾ ಕಾ ಭೂತ ಚೇಷ್ಟಾ ಗಭಸ್ತೀ । ಫೇಪವೇನಾ ॥೮೩॥

ಅರ್ಥ— ಯಾವ ಪ್ರಕೃತಿಯ ಗುಣದಿಂದ ಸರ್ವ ಕರ್ಮಗಳು ಉದ್ಭವಿಸುತ್ತಿವೆಯೋ ಆ ಪ್ರಕೃತಿಯ ವಿಕಾರವು ಜ್ಞಾನಿಗಳಲ್ಲಿ ಮೂಲತಃ ಇರುವದಿಲ್ಲ. ॥ ೮೧ ॥ ಆ ಜ್ಞಾನಿಯು ದೇಹಾಭಿಮಾನವನ್ನು ಬಿಟ್ಟು ಗುಣಕರ್ಮಗಳಿಗೆ ಅತೀತನಾಗಿ ದೇಹದಲ್ಲಿ ಮಾತ್ರ ಸಾಕ್ಷೀಭೂತನಾಗಿರುತ್ತಾನೆ. ॥ ೮೨ ॥ ಸೂರ್ಯನು ಜಗತ್ತಿನಲ್ಲಿ ಪ್ರಕಾಶನಮಾಡುತ್ತಿದ್ದಾಗ್ಯಾದರೂ ಜಗತ್ತಿನ ಕರ್ಮದಿಂದ ಲಿಪ್ತನಾಗುವದಿಲ್ಲ. ಅದೇಪ್ರಕಾರ ಜ್ಞಾನಿಯು ಒಂದುನೇಳೆ ದೇಹಧಾರಣ ಮಾಡಿದಾಗ್ಯಾದರೂ ದೇಹಕರ್ಮದಿಂದ ಬದ್ಧನಾಗಿರುವದಿಲ್ಲ. ॥ ೮೩ ॥

ಪ್ರಕೃತೇರ್ಗುಣಸಂಮೂಢಾಃ ಸಜ್ಜಂತೇ ಗುಣಕರ್ಮಸು ।
ತಾನಕೃತ್ಸ್ನವಿದೋ ಮಂದಾನ್ ಕೃತ್ಸ್ನವಿನ್ನ ವಿಚಾಲಯೇತ್ ॥ ೨೯ ॥

[**ಪ್ರಕೃತೇರಿತಿ**] ಏಥ ಕರ್ಮೀ ತೋಚಿ ಲಿಂಪೇ । ಜೋ ಗುಣಸಂಭ್ರಮೇ ಫೇಪೇ । ಪ್ರಕೃತಿ ಚೇನಿ ಆಟೋಸೇ । ವರ್ತತ ಅಸೇ ॥ ೮೪ ॥ ಇಂದ್ರಿಯೇ ಗುಣಾಧಾರೇ ! ರಾಹಾಟತೀ ನಿಜವ್ಯಾಪಾರೇ । ತೇ ಪರಕರ್ಮ ಬಲಾತ್ಕಾರೇ । ಆಪಾದೀ ಜೋ ॥ ೮೫ ॥

ಅರ್ಥ— ಪ್ರಕೃತಿಯ ಆಧೀನನಾಗಿ ಯಾವನು ನಡೆಯುತ್ತಾನೋ ಅವನು ಗುಣಕರ್ಮದ ಬಂಧನದಲ್ಲಿ ಸಿಲುಕುತ್ತಾನೆ. ಅವನೇ ಕರ್ಮದಿಂದ ಲಿಪ್ತನಾಗಿರುತ್ತಾನೆ. ॥ ೮೪ ॥ ಇಂದ್ರಿಯಗಳು ಗುಣದ ಆಧೀನ ಉಳ್ಳವುಗಳಾಗಿ ತಮ್ಮ ತಮ್ಮ ವ್ಯಾಪಾರದಲ್ಲಿಯೇ ವರ್ತಿಸುತ್ತಿದ್ದು, ಅವು ಎರಡನೇದನರ ಕರ್ಮಗಳನ್ನು ' ಅಹಂಕರ್ತೃತ್ವ ' ಅಭಿಮಾನದಿಂದ ಬುಧ್ಯಾ ತಮ್ಮ ಮೈಮೇಲೆಯೇ ತೆಗೆದುಕೊಳ್ಳುತ್ತವೆ. ॥ ೮೫ ॥

ಮಯಿ ಸರ್ವಾಣಿ ಕರ್ಮಾಣಿ ಸಂನ್ಯಸ್ಯಾಧ್ಯಾತ್ಮಚೇತಸಾ ।
ನಿರಾಶೀರ್ನಿರ್ಮಮೋ ಭೂತ್ವಾ ಯುಧ್ಯಸ್ವ ವಿಗತಜ್ವರಃ ॥ ೩೦ ॥

[**ಮಯೀತಿ**] ತರೀ ಉಚಿತೇ ಕರ್ಮೇ ಆಘವೀ । ತುವಾ ಆಚರೋನಿ ಮಜ ಅರ್ಪಾವೀ । ಪರೀ ಚಿತ್ತವೃತ್ತಿ ನಿನ್ಯಾಸಾವೀ । ಆತ್ಮರೂಪೀ ॥ ೮೬ ॥ ಆಣಿ ಹೇ ಕರ್ಮ ಮೀ ಕರ್ತಾ । ಕಾ ಆಚರೇನಯಾ ಅರ್ಥಾ । ಐಸಾ ಅಭಿಮಾನ ಝುಣೇ ಚಿತ್ತಾ । ರಿಘೋದೇಸೀ ॥ ೮೭ ॥ ತುವಾ ಶರೀರ ಪರಾ ನೋಹಾನೇ । ಕಾಮನಾಜಾತ ಸಾಂಡಾವೇ । ಮಗ ಅವಸರೋಚಿತ ಭೋಗಾವೇ ! ಭೋಗ ಸಕಳ ॥ ೮೮ ॥ ಆತಾಕೋದಂಡ ಫೇವುನಿ ಹಾತೀ । ಆರೂಢ ಪಾಇಯೇ ರಥೀ । ದೇಈ ಆಲಿಂಗನ ವೀರವೃತ್ತೀ । ಸಮಾಧಾನೇ ॥ ೮೯ ॥ ಜಗೀ ಕೀರ್ತಿ ರೂಢವೀ । ಸ್ವಧರ್ಮಾಚಾ ಮಾನ ವಾಢವೀ । ಇಯಾ ಭಾರಾಪಾಸೋನಿ ಸೋಡವಿ । ಮೇದಿನೀಹೇ ॥ ೯೦ ॥ ಅತಾ ಪಾರ್ಥಾ ನಿಃಶಂಕ ಹೋಈ । ಯಾ ಸಂಗ್ರಾಮಾ ಚಿತ್ತ ದೇಈ । ಏಥಹೇ ವಾಂಚೂನಿ ಕಾಂಹೀ । ಬೋಲೋ ನಯೇ ॥ ೯೧ ॥

ಅರ್ಥ— ಆದುದರಿಂದ ಸರ್ವವಿಹಿತ ಕರ್ಮದ ಆಚರಣವಾಡಿ ನೀನು ಆ ಕರ್ಮಗಳನ್ನು ನನಗೆ ಅರ್ಪಣ ಮಾಡು. ಆದರೆ ಚಿತ್ತವೃತ್ತಿಯನ್ನು ಮಾತ್ರ ಯಾವಾಗಲೂ ಆತ್ಮಸ್ವರೂಪದಲ್ಲಿ ನೆಲೆಗೊಳ್ಳಿಸಬೇಕು. ॥ ೮೬ ॥ ಈ ಕರ್ಮದ ಕರ್ತೃವು ನಾನೇ ಇದ್ದೇನೆ. ಮತ್ತು ಯಾವದಾದರೊಂದು ಫಲಾಪೇಕ್ಷೆಯಿಂದ ಈ ಕರ್ಮವನ್ನು ನಾನು ಮಾಡುತ್ತೇನೆ, ಎಂಬ ಈ ತರಹದ ಅಭಿಮಾನವನ್ನು ಅಂಕುರಿಸಗೊಡಬೇಡ. ॥ ೮೭ ॥ ನೀನು ಶರೀರದ ಸ್ವಾಧೀನ ನಾಗದೇ ಎಲ್ಲ ಅಪೇಕ್ಷೆಯನ್ನೂ ಬಿಟ್ಟುಬಿಡು. ಆ ಮೇಲೆ ಸಕಲ ಭೋಗಗಳನ್ನು ಯೋಗ್ಯಕಾಲದಲ್ಲಿಯೇ ಭೋಗಿಸು ವವನಾಗು ॥ ೮೮ ॥ ಅರ್ಜುನಾ ! ಕೈಯಲ್ಲಿ ಕೋದಂಡ (ಧನುಷ್ಯ) ಧಾರಣಮಾಡಿ ಈ ರಥದಲ್ಲಿ ಆರೂಢನಾಗು. ಮತ್ತು ಆನಂದದಿಂದ ವೀರವೃತ್ತಿಯನ್ನು ಸ್ವೀಕಾರಮಾಡು. ॥ ೮೯ ॥ ಜಗತ್ತಿನಲ್ಲಿ ನೀನು ನಿನ್ನ ಕೀರ್ತಿಯನ್ನು ಪಸರಿಸು. ಸ್ವಧರ್ಮದ ಮಹತ್ವವನ್ನು ಬೆಳಿಸು ಮತ್ತು ದುರ್ಯೋಧನಾದಿ ದುಷ್ಟರ ಭಾರದಿಂದ ಈ ಪೃಥ್ವಿಯನ್ನು ಮುಕ್ತಮಾಡು. ॥ ೯೦ ॥ ಪಾರ್ಥಾ, ಈಗ ನೀನು ಸಂಶಯವನ್ನು ಬಿಟ್ಟು ಬಿಡು. ಈ ಯುದ್ಧದಲ್ಲಿಯೇ ಲಕ್ಷ ವನ್ನಿಡು. ಈ ಸ್ಥಳದಲ್ಲಿ ಸಂಗ್ರಾಮವನ್ನುಳಿದು ಇನ್ನೊಂದು ಮಾತನ್ನೂ ಆಡಬೇಡ. ॥ ೯೧ ॥

ಯೇ ಮೇ ಮತಮಿದಂ ನಿತ್ಯಮನುತಿಷ್ಠಂತಿ ಮಾನವಾಃ ।
ಶ್ರದ್ಧಾವಂತೋಽನಸೂಯಂತೋ ಮುಚ್ಯಂತೇ ತೇಽಪಿ ಕರ್ಮಭಿಃ ॥ ೩೧ ॥

[ಯೇ ಮೇ ಇತಿ] ಹೇ ಅನುಪರೋಧ ಮತ ಮಾಝೆ । ಜೀಹೀ ಪರಮಾದರೇ ಸ್ವೀಕಾರಿ ಜೇ । ಶ್ರದ್ಧಾಪೂರ್ವಕ ಅನುಷ್ಠಿಜೇ । ಧನುರ್ಧರಾ ॥ ೯೨ ॥ ತೇಹಿ ಸಕಳ ಕರ್ಮೀ ವರ್ತತ । ಜಾಣ ಪಾ ಕರ್ಮ ರಹಿತ । ಮ್ಹಣೋನಿ ಹೇ ನಿಶ್ಚಿತ । ಕರಣೀಯ ಗಾ ॥ ೯೩ ॥

ಅರ್ಥ— ಅರ್ಜುನಾ, ನನ್ನ ಈ ಅಬಾಧಿತವಾದ ಮತವನ್ನು ಯಾವನು ಬಹು ಆದರದಿಂದ ಸ್ವೀಕಾರ ಮಾಡಿ ಅದನ್ನು ಶ್ರದ್ಧಾಪೂರ್ವಕ ಆಚರಣೆ ಮಾಡುವನೋ, ॥ ೯೨ ॥ ಅವನು ಸಕಲ ಕರ್ಮಗಳ ಆಚರಣೆ ಮಾಡಿಯೂ ಕರ್ಮರಹಿತನಾಗಿರುವನೆಂದು ತಿಳಿ. ಆದುದರಿಂದ ಈ ನನ್ನ ಮತವು ನಿಶ್ಚಯದಿಂದ ಆಚರಣ ಮಾಡಲು ಯೋಗ್ಯವಾದದ್ದಿದೆ. ॥ ೯೩ ॥

ಯೇ ತ್ವೇತದಭ್ಯಸೂಯಂತೋ ನಾನುತಿಷ್ಠಂತಿ ಮೇ ಮತಂ ।
ಸರ್ವಜ್ಞಾನವಿಮೂಢಾಂಸ್ತಾನ್ವಿದ್ಧಿ ನಷ್ಟಾನಚೇತಸಃ ॥ ೩೨ ॥

[ಯೇ ತ್ವಿತಿ] ನಾತರೀ ಪ್ರಕೃತಿ ಮಂತ ಹೋವುನೀ । ಇಂದ್ರಿಯಾ ಲಳಾ ದೇವುನೀ । ಜೇಹೇ ಮಾಝೀ ಮತ ಅವ್ಹೇರುನೀ । ವೋಸಂಡಿತೀ ॥ ೯೪ ॥ ಜೇ ಸಾಮಾನ್ಯತ್ವೇ ಲೇಖಿತೀ । ಅವಜ್ಞಾ ಕರೂನಿ ದೇಖಿತೀ । ಕಾ ಹಾ ಅರ್ಥವಾದ ಮ್ಹಣತೀ । ವಾಚಾಳ ಪಣೇ ॥ ೯೫ ॥ ತೇ ಮೋಹ ಮದಿರಾ ಭುಲಲೇ । ವಿಷಯ ವಿಷೇ ಘೇರಲೇ । ಅಜ್ಞಾನ ಪಂಕೀ ಬುಡಾಲೇ । ನಿಭ್ರಾಂತ ಮಾನೇ ॥ ೯೬ ॥ ದೇಖೇ ಶವಾಚ್ಯಾಹಾತೀ ವಿಧಲೇ । ಜೈಸೇಕಾ ರತ್ನ ವಾಯಾ ಗೇಲೇ । ನಾತರೀ ಜಾತ್ಯಂಧಾ ಪಾಹಲೇ । ಪ್ರಮಾಣ ನೋಹೇ ॥ ೯೭ ॥ ಕಾ ಚಂದ್ರಾಚಾ ಉದಯ ಜೈಸಾ । ಉಪಯೋಗಾ ನವಚೆ ವಾಯಸಾ । ಮೂರ್ಖಾ ವಿನೇಕ ಹಾ ತೈಸಾ । ರುಚೇಲನಾ ॥ ೯೮ ॥ ತೈಸೇ ಜೇ ಪಾರ್ಥಾ । ವಿಮುಖ ಯಾ ಪರಮಾರ್ಥಾ । ತಯಾಸೀ ಭಾಷಣ ಸರ್ವಥಾ । ಕರಾನೇನಾ ॥ ೯೯ ॥ ಮ್ಹಣೋನಿ ತೇ ನ ಮಾನಿತೀ । ಆಣಿ ನಿಂದಾಹೀ ಕರೂ ಲಾಗತೀ । ಸಾಂಗೇ ಪತಂಗ ಕಾಯ ಸಾಹಾತೀ । ಪ್ರಕಾಶಾತೇ ॥ ೧೦೦ ॥ ಪತಂಗಾ ದೀಪೀ ಆಲಿಂಗನ । ತೇಥ ತ್ಯಾಸಿ ಅಚುಕ ಮರಣ । ತೇವೀ ವಿಷಯಾಚರಣ । ಆತ್ಮಘಾತಾ ॥ ೧ ॥

ಅರ್ಥ— ಇಲ್ಲದಿದ್ದರೆ ಪ್ರಕೃತಿಯ ಆಧೀನರಾಗಿ ಇಂದ್ರಿಯಗಳ ಮನೋಭಿಷ್ಟವನ್ನು ಪೂರೈಸಿ ಯಾರು ನನ್ನ ಮತದ ಅನಾದರ ಮಾಡಿ ಅದನ್ನು ಬಿಟ್ಟುಕೊಡುತ್ತಾರೋ. ॥ ೯೪ ॥ ಯಾರು ನನ್ನ ಮತವನ್ನು ಸಾಮಾನ್ಯವೆಂದು ತಿಳಿಯುತ್ತಾರೋ, ಮತ್ತು ಆ ವಿಷಯವನ್ನು ಹಾಸ್ಯಮಾಡಿ ನಿಂದಿಸುತ್ತಾರೋ, ಆ ಬಾಯಬಡುಕರು ಇದು ಅರ್ಥವಾದವೆಂದು ತಿಳಿಯುತ್ತಾರೆ. ॥ ೯೫ ॥ ಅವರು ಮೋಹರೂಪೀ ಮದ್ಯಪಾನವನ್ನು ಮಾಡಿ ಭ್ರಮಿಷ್ಟರಾಗಿರುವರು. ಮತ್ತು ವಿಷಯರೂಪೀ ವಿಷದಿಂದ ವ್ಯಾಪ್ತರಾಗಿರುವರು. ಅಜ್ಞಾನರೂಪೀ ಕೆಸರಿನಲ್ಲಿ ಮುಳುಗಿ ಹೋಗಿರುವರು. ಎಂದು ನಿಶ್ಚಯವಾಗಿ ನಂಬು. ॥ ೯೬ ॥ ಅರ್ಜುನಾ, ಹೀಗೆ ನೋಡು– ಪ್ರೇತದ ಕೈಯಲ್ಲಿ ಪರೀಕ್ಷೆಮಾಡಲೋಸುಗ ಕೊಟ್ಟ ರತ್ನವು ಹೇಗೆ ವ್ಯರ್ಥವೋ, ಇಲ್ಲವೇ ಯಾವನು ಜನ್ಮಾಂಧ (ಹುಟ್ಟುಕುರುಡ) ನಿರುವನೋ, ಅವನಿಗೆ ಸೂರ್ಯೋದಯದಿಂದ ಉಪಯೋಗವೇನು ? (ವ್ಯರ್ಥವೇ ಸರಿ.) ॥ ೯೭ ॥ ಅಥವಾ ಚಂದ್ರಪ್ರಕಾಶವು ಕಾಗೆಗಳಿಗೆ ಹೇಗೆ ಉಪಯೋಗ ಬೀಳುವದಿಲ್ಲವೋ ಅದೇ ಪ್ರಕಾರ ಯಾರು ಮೂರ್ಖರಿರುವರೋ, ಅವರಿಗೆ ಈ ನನ್ನ ವಿಚಾರವು ರುಚಿಸುವದಿಲ್ಲ. ॥ ೯೮ ॥ ಅದರಂತೆಯೇ ಪಾರ್ಥಾ, ಯಾವ ಜನರು ಈ ಪಾರಮಾರ್ಥ ವಿಷಯದಲ್ಲಿ ವಿಮುಖರಾಗಿರುವರೋ, ಅವರ ಸಂಗಡ ಸಂಭಾಷಣೆಯನ್ನು ಸಹ ಮಾಡಕೂಡದು. ॥ ೯೯ ॥ ಕಾರಣ ಯಾವ ಪ್ರಕಾರ ಪತಂಗವು ದೀಪದ ಕೂಡ ಮತ್ಸರ ಮಾಡುವದೋ, ಅದೇ ಪ್ರಕಾರ ಆ ದುಷ್ಟಜನರು ಈ ನನ್ನ ವಿಚಾರದ ಮೇಲೆ ವಿಶ್ವಾಸವನ್ನಿಡುವದಿಲ್ಲ. ಅದರ ವಿರುದ್ಧವಾಗಿ ನಿಂದೆಯನ್ನೇ ಮಾಡುತ್ತಾರೆ. ॥ ೧೦೦ ॥ ಪತಂಗವು ದೀವಿಗೆಗೆ ಆಲಿಂಗನ ಕೊಡುವದರಿಂದ ಅಲ್ಲಿಯೇ ತಪ್ಪದೇ ಅದರ ಮರಣವಾಗುವದು. ಅದರಂತೆಯೇ ವಿಷಯಾಚರಣ ಮಾಡುವದರಲ್ಲಿಯೇ ಪ್ರಾಣಹಾನಿ (ಆತ್ಮಘಾತ) ಇರುವದು. ॥ ೧ ॥

ಸದೃಶಂ ಚೇಷ್ಟತೇ ಸ್ವಸ್ಯಾಃ ಪ್ರಕೃತೇರ್ಜ್ಞಾನವಾನಪಿ ।
ಪ್ರಕೃತಿಂ ಯಾಂತಿ ಭೂತಾನಿ ನಿಗ್ರಹಃ ಕಿಂ ಕರಿಷ್ಯತಿ ॥ ೩೩ ॥

[ಸದೃಶಂ ಚೇಷ್ಟತೇ ಇತಿ] ಮ್ಹಣೋನಿ ಇಂದ್ರಿಯೇ ಏಕೇ । ಜಾಣ ತೇನಿ ಪುರುಷೇ । ಲಾಳಾವೀನಾ ಕೌತುಕೇ । ಆದಿಕರುನೀ ॥ ೨ ॥ ಹಾಗಾ ಸರ್ಪೈಸೀ ಬೀಳೋ ಯೇಈಲ । ಕೀ ವ್ಯಾಘ್ರಾ ಸಂಸರ್ಗ ಸಿದ್ಧಿ ಜಾಈಲ । ಸಾಂಗೇ ಹಾಲಾಹಲ ಚಿರೇಲ । ಸೇವಿಲಿಯಾ ಕಾಯೀ ॥ ೩ ॥ ದೇಖೇ ಬೀಳತಾ ಅಗ್ನಿ ಲಾಗಲಾ । ಮಗತೋ, ನ ಸಾವರೇ ಜೈಸಾ ಉಧವಲಾ । ತೈಸಾ ಇಂದ್ರಿಯಾ ಲಳಾದಿಧಲಾ । ಭಲಾನೋಹೇ ॥ ೪ ॥ ಯೇರವೀ ತರೀ ಅರ್ಜುನಾ । ಯಾ ಶರೀರಾ ಪರಾಧೀನಾ । ಕಾ ನಾನಾ ಭೋಗರಚನಾ । ಮೇಳವಾವೀ ॥ ೫ ॥ ಆಪಣ ಸಾಯಾಸೇ ಕರೂನಿ ಬಹುತೇ । ಸಕಳಹೀ ಸಮೃದ್ಧಿ ಜಾತೇ । ಉಬೋ ಅಸ್ತುಯಾದೇಹಾತೇ । ಪ್ರತಿಪಾಳಾವೇ ಕಾ ॥ ೬ ॥ ಸರ್ವಸ್ವೇ ಶಿಣೋನಿ ಏಥೆ । ಆರ್ಜವಾವೀ ಸಂಪತ್ತಿ ಜಾತೇ । ತೇಣೇ ಸ್ವಧರ್ಮ ಸಾಂಡೂನಿ ದೇಹಾತೇ । ಪೋಖಾವೇ ಕಾ ಈ ॥ ೭ ॥ ಮಗ ಹೇ ತವ ಪಾಂಚವೇಳಾವಾ । ಶೇಖೀ ಅನುಸರೇಲ ಪಂಚತ್ವಾ । ತೇ ವೇಳೀ ಕೇಲಾ ಕೇ ಗಿವಸಾವಾ । ಶೀಣ ಆಪುಲಾ ॥ ೮ ॥ ಮ್ಹಣೂನಿ ಕೇವಳ ದೇಹಭರಣ। ತೇ ಜಾಣೇ ಉಘಡೀ ನಾಗವಣ । ಯಾಲಾಗೀ ಏಥ ಅಂತಃಕರಣ । ದೇಯಾವೇನಾ ॥ ೯ ॥

ಅರ್ಥ— ಆದುದರಿಂದ ವಿಚಾರಶೀಲ ಮನುಷ್ಯನು ಈ ಇಂದ್ರಿಯಗಳ ಇಚ್ಛೆಯನ್ನು ನಿಸ್ಪೃಹಾರ್ಥವಾಗಿ ಯಾದರೂ ಪೂರ್ಣಮಾಡಬಾರದು. ॥ ೩ ॥ ಅರ್ಜುನಾ, ಹೀಗೆ ನೋಡು– ಸರ್ಪಿನ ಸಂಗಡ ಆಡಲಿಕ್ಕೆ ಬರುವದೇ ಹೇಗೆ ? ಇಲ್ಲವೇ ಹುಲಿಯ ಕೂಡ ಸ್ನೇಹವು ಸಾಧಿಸುವದೇನು ? ಅಥವಾ ಹಾಲಾಹಲ ವಿಷವನ್ನು ಕುಡಿಯುವದರಿಂದ ಅದು ಪಚನವಾದೀತೇನು ? ॥ ೩ ॥ ಹೀಗೆ ನೋಡು– ಬುದ್ಧಿಪೂರ್ವಕವಾಗಿಯಿಲ್ಲದಿದ್ದರೂ ಸಹಜ ಆಡುತ್ತಾಡುತ್ತ ನಿನೋದವೆಂದು ಬೆಂಕಿಯನ್ನು ಹಚ್ಚಿದರೆ ಅದು ಪ್ರಜ್ವಲಿತವಾಗಿ ಹೇಗೆ ನನಗೆ ಅಸಾಧ್ಯವಾಗುವದೋ (ಅಸಕೊಳ್ಳುವ

ಲ್ಲವೋ,) ಅದರಂತೆಯೇ ಸಹಜವೇ ಇಂದ್ರಿಯಗಳ ಮನೋರಥವನ್ನು ಪೂರ್ಣಮಾಡುವದು ಸಹ ಒಳ್ಳೆದಲ್ಲ. ॥ ೪ ॥ ಅರ್ಜುನಾ, ನಿಜವಾಗಿ ನೋಡಿದರೆ ಈ ಶರೀರವು ಪರಾಧೀನ (ಗುಣಾಧೀನ) ವಾಗಿರುತ್ತದೆ. ಅಂದಬಳಿಕ ಅವರ ಸೆಯಿಂದ ಪ್ರಯತ್ನಪೂರ್ವಕವಾಗಿ ವಿಷಯೋಪಭೋಗ ಸಾಮಗ್ರಿಗಳನ್ನು ದೊರಕಿಸುವ ಶ್ರಮವನ್ನು ಏಕೆ ತೆಗೆದು ಕೊಳ್ಳಬೇಕು ? ॥ ೫ । ನಾವು ಬಹಳೇ ಸಾಹಸಮಾಡಿ ಯಾವುದಕ್ಕೂ ಕೊರತೆ ಬೀಳದಂತೆ ಎಲ್ಲ ಮಾತಿನಿಂದಲೂ ಸಮೃದ್ಧಿಪಡಿಸಿ ರಾತ್ರಿ-ಹಗಲೂ ಈ ದೇಹವನ್ನು ನಾನಾಪರಿಯಿಂದ ಏಕೆ ಜೋಕೆಮಾಡಬೇಕು ? ॥ ೬ ॥ ಈ ಸ್ಥಳದಲ್ಲಿ ಗರ್ವದಿಂದಲೂ ಶ್ರಮಬಟ್ಟು ಬಹಳೇ ಸಂಪತ್ತಿಯನ್ನು ದೊರಕಿಸಿ ಸ್ವಧರ್ಮತ್ಯಾಗ ಮಾಡಿ ಕೇವಲ ದೇಹದ ಪೋಷಣೆ ಯನ್ನೇ ಏಕೆ ಮಾಡಬೇಕು ? ॥ ೭ । ಆ ಮೇಲೆ ಪಂಚತತ್ವದಿಂದ ಆದ ಈ ಶರೀರವು ಕೊನೆಗೆ ಪಂಚತ್ವವನ್ನು ಕೊಂಡು ಪಂಚತತ್ವದಲ್ಲಿಯೇ ಹೋಗಿ ಕೂಡಿದಮೇಲೆ ಆ ಸಮಯದಲ್ಲಿ ತಾನು ಪಟ್ಟ ಶ್ರಮವನ್ನು ಎಲ್ಲಿ ಹುಡುಕಬೇಕು? ॥ ೮ ॥ ಆದುದರಿಂದ ಕೇವಲ ಶರೀರ ಪೋಷಣಮಾಡುವದು ಅಂದರೆ ಅದು ಪ್ರತ್ಯಕ್ಷ ಘಾತುಕವಾದದ್ದು ಅದೆ. ಹೀಗೆ ತಿಳಿದು ಇದರ ದೆಸೆಯಿಂದಲೇ ನೀನು ಅದೇ ವಿಚಾರದಲ್ಲಿ ನಿನ್ನ ಅಂತಃಕರಣವನ್ನು ಪ್ರವೇಶ ಮಾಡಗೊಡಬೇಡ. ॥ ೯ ॥

ಇಂದ್ರಿಯಸ್ಯೇಂದ್ರಿಯಸ್ಯಾರ್ಥೇ ರಾಗದ್ವೇಷೌ ವ್ಯವಸ್ಥಿತೌ ।
ತಯೋರ್ನ ವಶಮಾಗಚ್ಛೇತ್ತೌ ಹ್ಯಸ್ಯ ಪರಿಪಂಥಿನೌ ॥ ೩೪ ॥

[**ಇಂದ್ರಿಯಸ್ಯೇತಿ**] ಯೇರ್ಜುವೀ ಇಂದ್ರಿಯಾಂಚಿಯಾ ಅರ್ಥಾ । ಸಾರಿಖಾ ವಿಷಯ ಪೋಷಿತಾ । ಸಂತೋಷ ಕೀರಚಿತ್ತಾ । ಆಪಜೇಲ ॥ ೨೧೦ ॥ ಪರೀ ತೋ ಸಂವಜೋರಾಜಾ ಸಾಂಗಾತ । ಜೈಸಾ ನಾವೇಕ ಸ್ವಸ್ಥ । ಜಂವ ನಗರಾಜಾ ಪ್ರಾಂತ । ಸಾಂಡಿಜೇನಾ ॥ ೧೧ ॥ ಬಾಪಾ ವಿಷಾಚೀ ಮಧುರತಾ । ಝುಣೀ ಆವಡೀ ಉಪಜೇ ಚಿತ್ತಾ । ತೋ ಪರಿಣಾಮ ವಿಚಾರಿತಾ । ಪ್ರಾಣಹರೀ ॥೧೨॥ ದೇಖೆ ಇಂದ್ರಿಯೀ ಕಾಮ ಅಶೆ । ತೋ ಲಾವೀ ಸುಖ ದುರಾಶೆ । ಜೈಸಾ ಗಳೀಮೀನ ಆಮಿಷೇ । ಭುಲವಿಜೇಗಾ ॥ ೧೩ ॥ ಪರೀ ತಯಾನಾಜೀಗಳು ಆಹೆ । ಜೋ ಪ್ರಾಣಾತೆ ಘೇವುನಿ ಜಾಯೆ । ತೋ ಜೈಸಾ ಠಾಉವಾ ನೋಹೆ । ಝುಂಕಲೆ ಪಣೆ ॥ ೧೪ ॥ ತೈಸೆ ಅಭಿಲಾಷೆ ಯೇಣೇ ಕೀಜೇಲ । ವಿಷಯಾಚೀ ಆಶಾ ಧರುಜೇಲ । ತರೀ ವರಪಡಾ ಹೋಇಜೇಲ । ಕ್ರೋಧಾನಳಾ ॥ ೧೫ ॥ ಜೈಸಾ ಕವಳೋನಿಯಾ ಪಾರಧೀ । ಘಾತೇಚಿಯೇ ಸಂಧೀ । ಆಣಿ ಮೃಗಾತೆ ಬುದ್ಧೀ । ಸಾಧಾ ವಯಾ ॥ ೧೬ ॥ ಏಥ ತೈಸೀಚಿ ಪರೀ ಆಹೆ । ಮ್ಹಣೂನಿ ಸಂಗ ಹಾ ತುಜ ನೋಹೇ । ಪಾರ್ಥಾ ದೊನ್ಹೀ ಕಾಮ ಕ್ರೋಧ ಹೇ । ಘಾತಕ ಜಾಣೇ ॥ ೧೭ ॥ ಮ್ಹಣವೂನಿ ಹಾ ಆಶ್ರಯೋಚಿ ನ ಕರಾವಾ । ಮನೇ ಹೀ ಆಠವೋ, ನ ಧರಾವಾ । ಏಕ ನಿಜವೃತ್ತೀಚಾ ವೋಲಾವಾ ನಾಸೋನೇದೀ ॥ ೧೮ ॥

ಅರ್ಥ— ವಿಷಯ ಸೇವನೆಯಿಂದ ಪ್ರತ್ಯಕ್ಷ ಸುಖಪ್ರಾಪ್ತಿಯಾಗುತ್ತಿರಲು ಅದರಲ್ಲಿ ಸುಖವಿರುವದಿಲ್ಲ ನೆಂದು ಅನ್ನುವದು ಸರಿಯಾದುದಲ್ಲ. ಹೀಗೆ ನಿನಗೆ ಅನಿಸುತ್ತಿದ್ದರೆ ಇಂದ್ರಿಯಗಳು ಪ್ರೀತ್ಯಾಸ್ಪದವಾದ ವಿಷಯ ನನ್ನೇ ಸೇವನೆ ಮಾಡುವದರಿಂದ ಅಂತಃಕರಣದಲ್ಲಿ ಸಮಾಧಾನವಾಗುವದೇನೋ ನಿಜ. ॥ ೨೧೦ ॥ ಆದರೆ ಕ್ಷಣಿಕ ವಾದ ಆ ಸಮಾಧಾನವು ಅಂದರೆ ತೋರಿಕೆಗೆ ಸಂಭಾವಿತನಂತೆ ನಟಿಸುವ ವಿಶ್ವಾಸಘಾತುಕಿಯಾದ ಕಳ್ಳನ ಸಂಗತಿ ಯಂತೆ ಇರುವದು. ಅವನು ಪಟ್ಟಣದ ಸೀಮೆಯನ್ನು ದಾಟುವ ವರೆಗೆ ಕ್ಷಣ ಹೊತ್ತು ಸುಮ್ಮನೇ ಇದ್ದು ಆ ಮೇಲೆ ಘೋರವಾದ ಅರಣ್ಯದಲ್ಲಿ ಪ್ರವೇಶವಾಗುವದೊಂದೇ ತಡ ಅಲ್ಲಿ ಯಾರೂ ಇಲ್ಲದ ಸಂಧಿಯನ್ನು ಸಾಧಿಸಿ ಹೇಗೆ ಸರ್ವಸ್ವವನ್ನು ಹರಣ ಮಾಡುವನೋ, ಮತ್ತು ಆ ಕಳ್ಳನು ಪ್ರಾಣವನ್ನು ತೆಗೆದುಕೊಳ್ಳಲಿಕ್ಕೆ ಸಹ ಹೇಗೆ ಹಿಂದುಮುಂದು ನೋಡುವದಿಲ್ಲವೋ, ಹಾಗೆಯೇ ಈ ಕ್ಷಣಿಕವಾದ ವಿಷಯ ಸುಖವೂ ಇರುವದು. ॥ ೨೧೧ ॥ ಅಪ್ಪಾ ಅರ್ಜುನಾ, ಬಹಳನಾಗವೆಂಬ ವಿಷದ ಬೇರು ತಿನ್ನುವಾಗ ರುಚಿಯಾಗಿ ತೋರುತ್ತದೆ. ವಿಚಾರ

ಮಾಡಿ ನೋಡಿದರೆ ಅದನ್ನು ಸೇವನೆ ಮಾಡುವದರಿಂದ ಕೊನೆಯ ಪರಿಣಾಮವು ಪ್ರಾಣವಿನಾಶವೇ ಆಗಿರುವದು. ಅದೇ ಪ್ರಕಾರ, ॥ ೧೨ ॥ ಇಂದ್ರಿಯ ಸ್ಥಳದಲ್ಲಿ ಇರುವ ಕಾಮವು ವಿಷಯ ಸುಖದ ದುರಾಶೆಯ ಕಡೆಗೆ ಹತ್ತುತ್ತದೆ. ಗಾಣಕ್ಕೆ ಹಚ್ಚಲ್ಪಟ್ಟ ಅಮಿಷ (ಮಾಂಸ) ದ ರುಚಿಗೆ ಮೀನವು ಭ್ರಮಿಸುತ್ತದೆ. ॥ ೧೩ ॥ ಆದರೆ ಅಮಿಷದೊಳಗೆ ಗಾಣವು ಅಡಗಿರುವದೆಂಬುವೂ, ಮತ್ತು ಅದು ತನ್ನ ಪ್ರಾಣ ತೆಗೆದುಕೊಳ್ಳುತ್ತದೆಂಬುದನ್ನು ಆ ಮೀನವು ತಿಳಿಯುವದಿಲ್ಲ. ॥ ೧೪ ॥ ಅದೇ ಪ್ರಕಾರ ವಿಷಯ ಸುಖದ ಅಭಿಲಾಷೆಯಿಂದ ಯಾವನು ವಿಷಯಾಭಿಲಾಷೆಯನ್ನು ಮಾಡುವನೋ, ಅವನು ಕ್ರೋಧಾಗ್ನಿಯಲ್ಲಿ ಬೀಳುವನು. ॥ ೧೫ ॥ ಯಾವ ಪ್ರಕಾರ ಪಾರಧಿಯು (ಬೇಟೆಗಾರನು) ಮೃಗವನ್ನು ಘಾತ ಮಾಡುವ ಸಂಧಿಯನ್ನು ಸಾಧಿಸಿ ನಾಲ್ಕೂ ದಿಕ್ಕಿನಿಂದಲೂ ಅದನ್ನು ಅಟ್ಟಿಕೊಂಡು ಬರುತ್ತಾನೋ, ॥ ೧೬ ॥ ಅದೇ ಪ್ರಕಾರ ಆ ವಿಷಯ ಸುಖದ ರೀತಿಯೂ ಅದೆ. ಕಾರಣ ಪಾರ್ಥಾ, ಕಾಮಕ್ರೋಧಗಳು ಘಾತುಕವಾದವುಗಳೆಂದು ತಿಳಿದು ಅವುಗಳ ಸಂಗತಿಯನ್ನು ನೀನು ಸರ್ವಥಾ ಮಾಡಬೇಡ. ॥ ೧೭ ॥ ಮತ್ತು ಈ ವಿಷಯಗಳಿಗೆ ಆಸ್ಪದ ಕೊಡದೇ ಮನಸಿನಲ್ಲಿ ಅದರ ಸ್ಮರಣೆಯನ್ನು ಸಹ ಆಗಗೊಡಬೇಡ. ಮತ್ತು, ಆತ್ಮಜ್ಞಾನದ ಹಸಿಯನ್ನು ಆರಗೊಡಬೇಡ ॥ ೧೮ ॥

ಶ್ರೇಯಾನ್ಸ್ವಧರ್ಮೋ ವಿಗುಣಃ ಪರಧರ್ಮಾತ್ಸ್ವನುಷ್ಠಿತಾತ್ ।
ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋಭಯಾವಹಃ ॥ ೩೫ ॥

[ಶ್ರೇಯಾನ್ಸ್ವಧರ್ಮೋ ವಿಗುಣಃ ಇತಿ] ಆಗಾ ಸ್ವಧರ್ಮ ಹಾ ಆಪುಲಾ। ಜರೀ ಕಾ ಕರಿಣ ಜಾಹಲಾ। ತರೀ ಹಾಚಿ ಅನುಷ್ಠಿಲಾ। ಭಲಾಪೇಖೆ ॥ ೧೯ ॥ ಯೆರೂ ಆಚಾರ ಜೋ ಪರವಾ। ತೋ ದೇಖತಾ ಕೀರ ಬರವಾ। ಪರೀ ಅಚರತೇನಿ ಆಚರಾವಾ। ಆಪುಲಾಚಿ ॥ ೨೦ ॥ ಸಾಂಗೇ ಶೂದ್ರಘರೀ ಆಘವೀ। ಪಕ್ವಾನ್ನೇ ಆಹಾತಿ ಬರವೀ। ತೀ ದ್ವಿಜೇ ಕೇವೀಸೇವಾವೀ। ದುರ್ಬಳ ಜರೀ ಜಾಹಲಾ ॥ ೨೧ ॥ ಹೇ ಅನುಚಿತ ಕೈಸೇಂ ಕೀಜೇ। ಅಗ್ರಾಹ್ಯ ಕೇವೀ ಇಚ್ಛಿಜೇ। ಅಥವಾ ಇಚ್ಛಿಲೇಹೀ ಪಾವಿಜೇ। ವಿಚಾರೀ ಪಾ ॥ ೨೨ ॥ ತರೀ ಲೋಕಾಚೀ ಧವಳಾರೇ। ದೇಖೋನಿಯಾ ಮನೋಹರೇ। ಅಸತೀ ಆಪುಲೀ ತಣಾರೇ। ಮೋಡಾವೀ ಕೇವೀ ॥ ೨೩ ॥ ಹೇ ಅಸೋವನಿತಾ ಆಪುಲೇ। ಕುರೂಪ ಜರೀ ಜಾಹಲೇ। ತರ್ಹೀ ಭೋಗಿತಾ ತೇಚಿ ಭಲೇ। ಚಿಯಾಪರೀ। ೨೪ ತೇವೀ ಆವಡೇ ತೈಸಾ ಸಾಂಕಡ। ಆಚರತಾ ಜ್ಯಾಸೀ ದುವಾಡ। ತ್ಯಾಸೀ ಸ್ವಧರ್ಮಚಿ ಸುರವಾಡ। ಪರತ್ರೀಚಾ ॥ ೨೫ ॥ ಹಾಗಾ ಸಾಕರ ಆಣಿ ದೂಧ। ಹೇ ಗೌಳ್ಯೇ ಕೀರ ಪ್ರಸಿದ್ಧ। ಪರೀ ಕೃಮಿದೋಷೀ ವಿರುದ್ಧ। ಘೆಪೇ ಕೇವೀ ॥ ೨೬ ॥ ಐಸೇನಿಹೀ ಜರೀ ನೇವಿಜೇಲ। ತರೀ ತೇ ಆಳುಕೀಚಿ ಉರೇಲ। ಜೇ ತೇ ಪರಿಣಾಮೀ ಪಥ್ಯ ನವ್ಹೇಲ। ಧನುರ್ಧರಾ ॥ ೨೭ ॥ ಮ್ಹಣೋನಿ ಆಣಿಕಾಸೀ ಜೇ ವಿಹಿತ। ಆಣಿ ಆಪಣ ಕೇಯಾ ಅನುಚಿತ। ನಾಚರಾವೇ ಜರೀ ಹಿತ। ವಿಚಾರಿಜೇ ॥ ೨೮ ॥ ಯಾ ಸ್ವಧರ್ಮಾತೇ ಅನುಷ್ಠಿತಾ। ವೇಚು ಹೋಈಲ ಜೀವಿತಾ। ತೋಹಿ ನಿಕಾ ನರ ಉಭಯತಾ। ದಿಸತ ಅಸೇ ॥ ೨೯ ॥ ಐಸೇ ಸಮಸ್ತ ಸುರ ಶಿರೋಮಣೀ। ಬೋಲಿಜೇ ಜೇಥ ಶ್ರೀ ಶಾರ್ಙ್ಗಪಾಣೀ। ತೇಥ ಅರ್ಜುನ ಮ್ಹಣೇ ವಿನವಣೀ। ಅಸೇ ದೇವಾ ॥ ೩೦ ॥ ಹೇ ಜೇ ತುವ್ಹೀ ಸಾಂಗಿತಲೇ। ತೇ ಸಕಳ ಕೀರ ವ್ಯಾಪರಿಸಿಲೇ। ತರೀ ಆತಾ ಪುಸೇನ ಕಾಹೀ ಆಪುಲೇ। ಅಪೇಕ್ಷಿತ ॥ ೩೧ ॥

ಅರ್ಥ— ಎಲೋ, ನಮ್ಮ ಸ್ವಧರ್ಮವು ಆಚರಣ ಮಾಡಲಿಕ್ಕೆ ಕಠಿಣವಿದ್ದಾಗ್ಯೂ ಅದನ್ನೇ ಆಚರಣ ಮಾಡುವದು ಶ್ರೇಷ್ಠವದೆ. ॥ ೧೮ ॥ ಎರಡನೇದವರ ಧರ್ಮವು ನಿಜವಾಗಿ ನೋಡಲಿಕ್ಕೆ ಶ್ರೇಷ್ಠವೆಂದು ತೋರಿದರೂ ಆಚರಣ ಮಾಡುವವನು ತಮ್ಮ ಧರ್ಮವನ್ನೇ ಆಚರಿಸುವದು ಯೋಗ್ಯವದೆ. ॥ ೨೦ ॥ ಬ್ರಾಹ್ಮಣನು ದರಿದ್ರನಾಗಿದ್ದರೂ ಅವನು ಶೂದ್ರನ ಮನೆಯಲ್ಲಿಯ ಉತ್ತಮವಾದ ಪಕ್ವಾನ್ನವನ್ನು ಹೇಗೆ ಸೇವಿಸಬೇಕು ? ॥ ೨೧ ॥

ಇಂಥ ಅನುಚಿತ ಕರ್ಮವನ್ನು ಹೇಗೆ ಮಾಡಬೇಕು ? ಮತ್ತು ಯಾವದು ಅಗ್ರಾಹ್ಯವಾಗಿರುವದೋ ಅದನ್ನು ಹೇಗೆ ಇಚ್ಛಾ ಮಾಡಬೇಕು ? ಒಂದುವೇಳೆ ಇಚ್ಛಾ ಮಾಡಿದುದು ದೊರಕಿದರೂ ಅದನ್ನು ತೆಗೆದುಕೊಳ್ಳಬೇಕೇ ? ಈ ಮಾತಿನ ವಿಚಾರ ಮಾಡಿ ನೋಡು. ॥ ೨೨ ॥ ಜನರ ಮೇಲುಪ್ಪರಿಗೆಯ ದೊಡ್ಡ ದೊಡ್ಡ ಸುಂದರವಾದ ಮನೆಗಳನ್ನು ನೋಡಿ ತಮ್ಮ ಹುಲ್ಲಿನ ಗುಡಿಸಲುಗಳನ್ನು ಕಿತ್ತು ಹಾಕಬಹುದೇ ? ॥ ೨೩ ॥ ಇದಂತೂ ಇರಲಿ ತಮ್ಮ ಹೆಂಡತಿಯು ಕುರೂಪಿ ಇದ್ದಾಗ್ಯಾದರೂ ಅವಳ ಭೋಗವನ್ನೇ ತೆಗೆದುಕೊಳ್ಳುವದು ಹೇಗೆ ಯೋಗ್ಯವಾಗಿರುವದೋ, ॥ ೨೪ ॥ ಅದರಂತೆಯೇ ಬೇಕಾದಷ್ಟು ಕಠಿಣ ಮತ್ತು ಆಚರಣ ಮಾಡಲಿಕ್ಕೆ ದುರ್ಘಟವಾದ ಸ್ವಧರ್ಮವಿದ್ದಾಗ್ಯಾದರೂ ಅದೇ ಪರಲೋಕದಲ್ಲಿ ಗತಿ ಕೊಡುವಂಥಾದ್ದಾಗಿರುವದು. ॥ ೨೫ ॥ ಹೀಗೆ ನೋಡು ಹಾಲು ಮತ್ತು ಸಕ್ಕರಿ ಈ ಎರಡು ಪದಾರ್ಥಗಳು ಆರೋಗ್ಯ ಮತ್ತು ರುಚಿಕರವಾಗಿರುವವೆಂಬುದು ಪ್ರಸಿದ್ಧ ವಿರುವದು ಆದರೆ ಯಾವನಿಗೆ ಕ್ರಿಮಿದೋಷ (ಹೊಟ್ಟೆಯಲ್ಲಿ ಜಂತುಗಳು) ಉಂಟಾಗಿರುವವೊ ಅವನಿಗೆ ಅವು ವಿರುದ್ಧ (ಅಪಥ್ಯ) ವಾಗಿರುವವು. ಅವನು ಅವುಗಳನ್ನು ಹೇಗೆ ಸೇವಿಸಬೇಕು ? ॥ ೨೬ ॥ ಹೀಗಿದ್ದಾಗ್ಯೂ ರೋಗಿಯು ಹಟದಿಂದ ಸೇವನೆ ಮಾಡಿದರೆ, ಧನುರ್ಧರಾ ! ಪರಿಣಾಮದಲ್ಲಿ ಅದು ಅವನಿಗೆ ಹಿತಕರವಾಗಲಾರದು. ॥ ೨೭ ॥ ಅದರಿಂದ ನಿನಗೆ ಹಿತವಾಗಬೇಕೆಂದಿದ್ದರೆ ಅನ್ಯರಿಗೆ ಉಚಿತವಾದದ್ದಿದ್ದಾಗ್ಯಾದರೂ ಅದು ನಮಗೆ ಅನುಚಿತವಾಗಿರುವದರಿಂದ ಪರಧರ್ಮದ ಆಚರಣೆಯನ್ನು ಎಂದಿಗೂ ಮಾಡಬಾರದು. ॥ ೨೮ ॥ ಸ್ವಧರ್ಮದ ಆಚರಣೆಯನ್ನು ಮಾಡುತ್ತಿರಲಿಕ್ಕಾಗಿ ಒಂದು ವೇಳೆ ತಮ್ಮ ಪ್ರಾಣ ಹೋದರೂ ಚಿಂತೆಯಿಲ್ಲ. ಅದು ಇಹಪರ ಲೋಕಗಳಲ್ಲಿ ನಿಜವಾಗಿ ಶ್ರೇಷ್ಠವೆಂದು ತಿಳಿಯುತ್ತಾರೆ. ॥ ೨೯ ॥ ಹೀಗೆ, ಸಕಲ ದೇವದೇವತೆಗಳಲ್ಲಿ ಶಿರೋಮಣಿಯಾದ ಶಾರ್ಙ್ಗಪಾಣಿ ಭಗವಾನ್ ಶ್ರೀಕೃಷ್ಣ ಪರಮಾತ್ಮನ ಈ ಭಾಷಣವನ್ನು ಕೇಳಿ ಅರ್ಜುನನು ಅನ್ನುತ್ತಾನೆ—ದೇವಾ ! ನನ್ನದೊಂದು ವಿನಂತಿ ಅದೆ. ॥ ೩೦ ॥ ನೀವು ಈಗ ನನಗೆ ಯಾವ ಮಾತು ಹೇಳಿದಿರೋ ಅದನ್ನು ನಾನು ಚನ್ನಾಗಿ ಲಕ್ಷಗೊಟ್ಟು ಕೇಳಿದೆನು. ಇನ್ನು ಮೇಲೆ ನನಗೆ ಯಾವದು ಬೇಕಾಗಿರುವದೋ, ಅದನ್ನು ನಾನು ಕೇಳುತ್ತೇನೆ. ॥ ೩೧ ॥

ಅರ್ಜುನ ಉವಾಚ—

ಅಥ ಕೇನ ಪ್ರಯುಕ್ತೋಽಯಂ ಪಾಪಂ ಚರತಿ ಪೂರುಷಃ ।
ಅನಿಚ್ಛನ್ನಪಿ ವಾರ್ಷ್ಣೇಯ ಬಲಾದಿವ ನಿಯೋಜಿತಃ ॥ ೩೬ ॥

[ಅಥೇತಿ] ತರೀ ದೇವಾ ಹೇ ಐಸೇ ಕೈಸೇ । ಜೇ ಜ್ಞಾನಿಯಾಂಚಿ ಹೀ ಸ್ಥಿತೀ ಭ್ರಂಶೇ । ಮಾರ್ಗ ಸಾಂಡೂನಿ ಅನಾರಿಸೇ । ಚಾಲತದೇಹೊ ॥ ೩೨ ॥ ಸರ್ವಜ್ಞಹೀ ಜೇ ಹೋತೀ । ಹೇ ಉಪಾಯಹೀ ಜಾಣತೀ । ತೇಹೀ ಪರಧರ್ಮೇ ವ್ಯಭಿಚರತೀ । ಕವಣೇ ಗುಣೇ ।' ೩೩ ॥ ಬೀಜಾ ಆಣಿ ಭುಸಾ । ಅಂಧ ನಿವಾಡ ನೇಣೇ ಜೈಸಾ । ನಾವೇಕ ದೇಖಣಾಹೀ ತೈಸಾ । ಬರಳೇ ಕಾ ಪಾ ॥ ೩೪ ॥ ಜೇ ಅಸತಾ ಸಂಗ ಸಾಂಡಿತೀ । ತೇಚಿ ಸಂಸರ್ಗ ಕರಿತಾ ನ ಧಾತೀ । ವನವಾಸೀ ಹೀ ಸೇವಿತೀ । ಜನಪದಾತೇ ॥ ೩೫ ॥ ಆಪಣ ತರೀ ಲಪತೀ । ಸರ್ವಸ್ವೇ ಪಾಪ ಚುಕವಿತೀ । ಪರೀ ಬಲಾತ್ಕಾರೇ ಸುಇಜತೀ । ತಯಾಚಿ ಮಾಜೀ ॥ ೩೬ ॥ ಜಯಾಚೀ ಜೀವೇ ಘೇತೀ ವಿವಸೀ । ತೇಚಿ ಜಡೋನಿ ಠಾಕೇ ಜೀವೇಸೀ । ಚುಕವಿತಾ ತೇ ಗಿವಸೀ । ತಯಾತೇಚಿ ॥ ೩೭ ॥ ಐಸಾ ಬಲಾತ್ಕಾರೂ ವಿಕ ದಿಸೇ । ತೋ ಕವಣಾಚಾ ವಿಧ ಆಗ್ರಹೋ ಅಸೇ । ಹೇ ಬೋಲಾವೇ ಹೃಷಿಕೇಶೇ । ಪಾರ್ಥ ವ್ಹಣೇ ॥ ೩೮ ॥

ಅರ್ಥ— ದೇವಾ ! ಜ್ಞಾನಿಗಳ ಸ್ಥಿತಿಸಹಿತ ಭ್ರಷ್ಟನಾಗಿ ಅವರು ಕೆಟ್ಟಮಾರ್ಗವನ್ನು ಆಚರಿಸುತ್ತಾರೆ. ಇದರ ಕಾರಣವೇನು ? ॥ ೩೨ ॥ ಅವರು ಸರ್ವಜ್ಞರಿದ್ದು ತ್ಯಾಜ್ಯ ಯಾವುದು ? ಗ್ರಾಹ್ಯಯಾವುದು ? ಎಂಬುದನ್ನೂ

ಅವರು ಬಲ್ಲರು. ಅವರು ಪರಧರ್ಮದ ಆಚರಣೆಯನ್ನು ಯಾಕೆ ಮಾಡುತ್ತಾರೆ ? ॥ ೩೩ ॥ ಕುರುಡ ಮನುಷ್ಯನಿಗೆ ಹೇಗೆ ಧಾನ್ಯ ಮತ್ತು ಹೊಟ್ಟು ಬೇರೆ ಮಾಡಲಿಕ್ಕೆ ಬರುವದಿಲ್ಲವೋ ಹಾಗೆಯೇ ಕ್ಷಣಹೊತ್ತು ಕಣ್ಣಿದ್ದವನಿಗೂ ಕೂಡ ಹೀಗೇಕೆ ಆಗಬೇಕು ? ॥ ೩೪ ॥ ಯಾರು ಇದ್ದಂಥ ಸಂಗವನ್ನು ಬಿಟ್ಟುಬಿಡುತ್ತಾರೊ ಅವರೇ ಪುನಃ ಆ ಸಂಗತಿಯಲ್ಲಿ ಸೇರಿಯೂ ತೃಪ್ತರಾಗುವದಿಲ್ಲ. ಮತ್ತು ವನವಾಸವಲ್ಲಿದ್ದಂಥವರು ಕೂಡ ವ್ಯವಹಾರಿಕ ಜನರ ಆಚರಣೆಯನ್ನು ಮಾಡುತ್ತಾರೆ. ॥ ೩೫ ॥ ನಿಜವಾಗಿ ಅವರು ಪಾಪದಿಂದ ಅಲಿಪ್ತರಿರುತ್ತಾರೆ. ಮತ್ತು ಪಾಪವು ತನ್ನ ಕಡೆಯಿಂದ ಘಟಸಬಾರದೆಂದು ಇಚ್ಛೆಮಾಡುತ್ತಾರೆ. ಆದರೆ ಅವರಿಗೆ ಯಾರಾದರೂ ಬಲಾತ್ಕಾರ ಮಾಡಿ ಅವರನ್ನು ಪಾಪದಲ್ಲಿ ನೂಕಿದಂತೆ ಪ್ರತೀತಿಗೆ ಬರುತ್ತದೆ. ॥ ೩೬ ॥ ಯಾವ ವಿಷಯದ ದೆಸೆಯಿಂದ ಅವರು ಮನಃಪೂರ್ವಕವಾಗಿ ಭಯ ಪಡುತ್ತಾರೋ ಅದೇ ವಿಷಯವು ಅವರ ಜೀವಕ್ಕೆ ಅಂಟಿಕೊಳ್ಳುತ್ತದೆ. ಅದನ್ನು ತಪ್ಪಿಸುವದರ ದೆಸೆಯಿಂದ ಪ್ರಯತ್ನ ಪಟ್ಟರೂ ಮತ್ತ್ಯೆ ಅದೇ ತೊಡಕಿನಲ್ಲಿಯೇ ಶಿಲುಕಿಬೀಳುತ್ತಾರೆ. ॥ ೩೭ ॥ ಹೀಗೆ ಒಂದು ಬಲತ್ಕಾರವು ಕಂಡು ಬರುತ್ತದೆ ಅದು ಜ್ಞಾನಿಪುರುಷರು ಸಹ ಯಾವ ಬಲಾತ್ಕಾರದಿಂದ ಮತ್ತು ಆಗ್ರಹದಿಂದ ವಿಷಯಸೇವನೆಮಾಡುವದರಲ್ಲಿ ಆಸಕ್ತರಾಗಿರುವರೆಂಬುದನ್ನು ನೀವು ಕೃಪೆಮಾಡಿ ಹೇಳಬೇಕೆಂದು ಅರ್ಜುನನು ಅನ್ನುತ್ತಾನೆ. ॥ ೩೮ ॥

ಶ್ರೀಭಗವಾನುವಾಚ—

ಕಾಮ ಏಷ ಕ್ರೋಧ ಏಷ ರಜೋಗುಣ ಸಮುದ್ಭವಃ ।
ಮಹಾಶನೋ ಮಹಾಪಾಪ್ಮಾ ವಿದ್ಧ್ಯೇನಮಿಹ ವೈರಿಣಂ ॥ ೩೭ ॥

[ಕಾಮ ಇತಿ] ತವ ಹೃದಯಕಮಳ ಆರಾಮ । ಜೋ ಯೋಗಿಯಾಂಚಾ ನಿಷ್ಕಾಮ ಕಾಮ । ತೋ ನ್ಹಾಣತಸೇ ಪುರುಷೋತ್ತಮ । ಸಾಂಗೇನ ಆಇಕ ॥ ೩೯ ॥ ತರೀ ಹೇ ಕಾಮಕ್ರೋಧ ಪಾಹೀ । ಜಯಾತೇ ಕೃಪೇಚೀ ಸಾಂರವಣ ನಾಹೀ । ಹೇ ಕೃತಾಂತಾಚ್ಯಾ ಠಾಯೀ । ಮಾನಿಜತೀ ॥ ೩೪೦ ॥ ಹೇ ಜ್ಞಾನ ನಿಧೀಚೇ ಭುಜಂಗ । ವಿಷಯದರೀಚೇ ವಾಘ । ಭಜನಮಾಗರ್ೀಚೇ ಮಾಂಗ । ಮಾರಕ ಜೇ ॥ ೪೧ ॥ ಹೆ ದೇಹ ದುರ್ಗೀಚೆ ಧೋಂಡ । ಇಂದ್ರಿಯ ಗ್ರಾಮೀಂಚೆ ಕೋಂಡ । ಯಾಂಚೆ ವ್ಯಾಮೋಹಾದಿಕ ಬಂಡ । ಜಗಾವರೀ ॥ ೪೨ ॥ ಹೇ ರಜೋಗುಣ ಮಾನಸಾಚೇ । ಸಮೂಳ ಆಸುರಿಯೇಚೇ । ಧಾಯಪಣ ಯಯಾಂಚೇ । ಅವಿದ್ಯಾಕೇಲೇ ॥ ೪೩ । ಹೇ ರಜಾಚೆಕೇರ ಜಾಹಲೇ । ಪರೀ ತಮಾಸೀ ಪಢಿಯಂತೇ ಭಲೇ । ತೇಣೇ ನಿಜವಪ ಯಾ ದೀಧಲೇ । ಪ್ರಮಾಧ ಮೋಹ ॥ ೪೪ ॥ ಹೇ ಮೃತ್ಯೂಚ್ಯಾ ನಗರೀ । ಮಾನಿಜತೇ ನಿಕಿಯಾಪರೀ । ಜೇ ಜೀವಿತಾಚೇ ವೈರೀ । ನ್ಯೂಣವೂನಿಯಾ ॥ ೪೫ ॥ ಜಯಾಸೀ ಭುಕೇಲಿಯಾ ಆಮಿಷಾ । ಹೇ ವಿಶ್ವ ನ ಪುರೇಚಿ ಘಾಸಾ । ಕುಳವಾಡೀ ಯಾಂಚೇ ಆಶಾ । ಚಾಳೀತ ಅಸೇ ॥ ೪೬ ॥ ಕೌತುಕೇ ಕವಳತಾ ಮುಠೀ । ಬಿಯೇ ಚವದಾ ಭುವನೇ ಥೇಗಕುಟೇ । ತಿಯೇ ಭ್ರಾಂತಿ ಹೀ ಧಾಕುಟೇ । ವಾಲ್ಹೀ ದುಳ್ಹೀ ॥ ೪೭ ॥ ಜೇ ಲೋಕತ್ರಯಾಂಚೇ ಭಾತುಕೇ । ಬೇಳತಾಂಚಿಖಾಯ ಕವತಿಕೇ । ತಿಚ್ಯಾ ದಾಸೀಪಣಾಚೇನಿ ಬಿಕೇ । ತೃಷ್ಣಾ ಬಿಯೇ ॥ ೪೮ ॥ ಹೇ ಅಸೋ ನೋಹೆ ಮಾನಿಜೇ । ಯಾಂತೇ ಅಹಂಕಾರೇ ಘೇವೇ ದೀಜೇ । ಜೇಣೇ ಜಗ ಆಪುಲಿಯಾ ಭೋಜೇ । ನಾಚವೀತ ಅಸೇ ॥ ೪೯ ॥ ಜೇಣೇ ಸತ್ಯಾಚಾ ಭೋಕಸಾ ಕಾಢಿಲಾ । ಮಗ ಅಸತ್ಯ ತೃಣಕುಟಾ ಭರಿಲಾ । ತೋ ದಂಭ ರೂಢವಿಲಾ । ಜಗೀ ಇಂಹೀ ॥ ೪೫೦ ॥ ಸಾಧ್ವಿ ಶಾಂತಿ ನಾಗವಿಲೀ । ಮಗ ಮಾಯಾ ಮಾಂಗೀ ಶೃಂಗಾರಿಲೀ । ತಿಯೇ ಕರವೀ ವಿಟಾಳವಿಲೀ । ಸಾಧುವೃಂದೇ ॥ ೫೧ ॥ ಇಂಹೀ ವಿವೇಕಾಂಚಿ ತ್ರಾಯಫೇಡಿಲೀ । ವೈರಾಗ್ಯಾಚೀ ಸಾಲ ಕಾಢಿಲೀ । ಚಿತಯಾ ಮಾನ ಮೋಡಿಲೀ । ಉಪಶ ಮಾಚೀ ॥ ೫೨ ॥ ಇಂಹೀ ಸಂತೋಷ ವನ ಖಾಂಡಿಲೇ । ಧೈರ್ಯದುರ್ಗ ಪಾಡಿಲೇ । ಆನಂದ ರೋಪ

ಸಾಂಡಿಲೇ । ಉಪಡೂನಿಯಾ ॥ ೫೩ ॥ ಇಂಹೀ ಬೋಧಾಚೀ ರೋಪೇಲುಂಚಿಲೀ । ಸುಖಾಚೀ ಲಿಪಿ ಹೀ ಪುಸಿಲೀ । ಜಿವ್ಹಾರೀ ಆಗಿ ಸೂದಲೀ । ತಾಪತ್ರಯಾಚೀ । ೫೪ ॥ ಹೇ ಆಂಗಾ ತವ ಘಡಲೀ । ಚೀವೀಂಚಿ ಆಥಿ ಜಡಲೀ । ಪರೀ ನಾ ತುಡತೀ ಗಿಂವಸಿಲೀ । ಬ್ರಹ್ಮಾದಿಕಾ ॥ ೫೫ ॥ ಹೇ ಚೈತನ್ಯಾಚೇ ಶೇಜಾರೀ । ಬಸತೀ ಜ್ಞಾನಾಚ್ಯಾ ಏಕಾಹಾರೀ । ಮ್ಹಣೋನೀ ಪ್ರವರ್ತತೀ ಮಹಾಮಾರೀ । ಸಾಂವರತೀನಾ ॥ ೫೬ ॥ ಹೇ ಜಳೇವೀಣ ಬುಡವಿತೀ । ಅಗೀ ವೀಣ ಜಾಳತೀ । ನ ಬೋಲತಾ ಕವಳತೀ । ಪ್ರಾಣಿಯಾಂತೇ ॥೫೭॥ ಹೇ ಶಸ್ತ್ರೇವೀಣ ಸಾಧಿತೀ । ದೋರೇವೀಣ ಬಾಂಧಿತೀ । ಜ್ಞಾನಿಯಾಸೀ ತರೀ ವಧಿತೀ । ಪೈಜ ಘೇವುನೀ । ೫೮ ॥ ಹೇ ಚಿಖಲೇವೀಣ ರೋವಿತೀ । ಪಾಶೇವೀಣ ಗೋವಿತೀ । ಹೇ ಕವಣಾಜೋಗೇ ನ ಹೋತೀ । ಆಂತುವಟಿಪಣೇ ॥ ೫೯ ॥

ಅರ್ಥ— ಆಗ್ಗಿ ಹೃದಯ ಮಂದಿರದಲ್ಲಿ ರವಿಸುವಂಥ ಶ್ರೀರಾಮನು ಮತ್ತು ಯೋಗೀ ಜನರು ನಿಷ್ಠಾವನುದಿಂದ ಯಾವನ ದರ್ಶನಾಪೇಕ್ಷೆಯನ್ನು ಮಾಡುವರೋ ಆ ಪುರುಷೋತ್ತಮನು ಅನ್ನುತ್ತಾನೆ– ಹೇಳುತ್ತೇನೆ ಕೇಳು. ॥ ೫೯ ॥ ಹೃದಯಾರವಿಂದದಲ್ಲಿ ವಾಸಮಾಡುವ ಕಾಮ ಮತ್ತು ಕ್ರೋಧಗಳು ಇವೇ ಮನುಷ್ಯರನ್ನು ಪಾಪದಲ್ಲಿ ಪ್ರವೃತ್ತಿಮಾಡುವಂಥವು ಇರುತ್ತವೆ. ಕಾರಣವೇನೆಂದರೆ, ಈ ಕಾಮಕ್ರೋಧಗಳಲ್ಲಿ ದಯೆಯು ಲೇಶಮಾತ್ರವೂ ಇರುವದಿಲ್ಲ. ಇವುಗಳ ಹೃದಯವು ಕಠೋರವಾದದ್ದು ಎರಡನೇದವರ ಘಾತನಮಾಡುವದರಲ್ಲಿ ಪ್ರತ್ಯಕ್ಷ ಕೃತಾಂತನಂತೆ ಸಾಮರ್ಥ್ಯ ಉಳ್ಳವುಗಳು ಆಗಿರುತ್ತವೆ. ॥ ೫೪೦ ॥ ಏನು ಹೇಳಲಿ ಈ ಕಾಮಕ್ರೋಧಗಳು ಜ್ಞಾನರೂಪನಿಧಿಯ ಮೇಲಿನ ಕ್ರೂರ-ಸರ್ಪವೂ, ವಿಷಯರೂಪೀ ಗವಿಯೊಳಗಿನ ಹುಲಿಯೂ, ಮತ್ತು ಭಜನ ಮಾರ್ಗದೊಳಗಿನ ಕೊಲೆಗಡಕ ಹೊಲೆಯನೂ, ಆಗಿರುವವು. ॥ ೪೧ ॥ ಮತ್ತು ದೇಹರೂಪೀ ಕಿಲ್ಲೆಯ ಮೇಲಿನ ದೊಡ್ಡ ಬಂಡೆಗಲ್ಲೂ, ಇಂದ್ರಿಯ ರೂಪೀ ಗ್ರಾಮದೊಳಗಿನ ದನಗಳನ್ನು ಹಾಕುವ ದೊಡ್ಡಿಯೂ ಇರುತ್ತವೆ. ಭ್ರಾಂತಿ ಮುಂತಾದುದನ್ನು ಹುಟ್ಟಿಸುವ ದಕ್ಕೆ ಈ ಜಗತ್ತಿನಲ್ಲಿ ಈ ಕಾಮಕ್ರೋಧಗಳ ದರ್ಪವು ಭಯಪ್ರದವಾಗಿದೆ. ॥ ೪೨ ॥ ಇವು ಸುನಸಿನ ಸ್ಥಳದಲ್ಲಿ ಭಾಸಮಾನ ಮಾಡುನಂಥವು. ಮೂಲತಃ ಆಸುರೀ ಸಂಪತ್ತಿಯೊಳಗಿನವು ಇದ್ದು ರಜೋಗುಣದ ಕಾರ್ಯ ವಿರುವದು. ಇವುಗಳ ತೃಪ್ತಿಯು ಅವಿದ್ಯವ ಕಡೆಯಿಂದ ಆಗುತ್ತದೆ. ॥ ೪೩ ॥ ಇವು ರಜೋಗುಣದಿಂದ ಆಗಿರುವ ವೇನೋ ನಿಜ. ಆದರೂ ಇವುಗಳ ಮೇಲೆ ತಮೋಗುಣದ ಪ್ರೇಮವು ವಿಶೇಷವಾಗಿರುವದರಿಂದ ಅದು ತನ್ನ ಸರ್ವ ಸಂಪತ್ತನ್ನು ಅಂದರೆ ಅಹಂಕಾರವನ್ನೂ, ಅಜ್ಞಾನವನ್ನೂ ಇದಕ್ಕೆ ಕೊಟ್ಟಿರುತ್ತದೆ. ॥ ೪೪ ॥ ಇವುಗಳು ಜೀವಿತದ ಶತ್ರುಗಳಾಗಿರುತ್ತವೆ. ಅಂತೆಯೇ ಮೃತ್ಯುಲೋಕದಲ್ಲಿ ಇವುಗಳಿಗೆ ಶ್ರೇಷ್ಠವಾದ ಮರ್ಯಾದೆಯು ದೊರಕುತ್ತದೆ. ॥೪೫॥ ಅರ್ಜುನಾ, ಏನು ಚಮತ್ಕಾರ ಹೇಳಲಿ ? ಇವುಗಳಿಗೆ ಸಹಜವಾಗಿ ಹಸಿವೆಯ ಅಪೇಕ್ಷೆಯುಂಟಾದರೆ ಈ ವಿಶ್ವವೆಲ್ಲವೂ ಒಂದು ತುತ್ತಿಗೆ ಸಹ ಸಾಲದೇ ಹೋಗುತ್ತದೆ. ಮತ್ತು ಹೀಗೆ ಇವುಗಳ ವ್ಯಾಸಾರವು ಬೆಳೆಯುತ್ತಾ ಹೋಗುತ್ತದೆ.॥೪೬॥ ಇವುಗಳು ಸಹಜನೇ ತಮ್ಮ ಮುಷ್ಟಿಯನ್ನು ತೆರೆದರೆ ಅವರಲ್ಲಿ ಹದಿನಾಲ್ಕು ಲೋಕಗಳೂ ಹಿಡಿಯುತ್ತವೆ. ಇಂಥ ತರದ ಈ ಭ್ರಾಂತಿ ಎಂಬುವಳು ಆಶಾ ಇವಳಿಗೆ ತಂಗಿಯಾಗಬೇಕು. ॥ ೪೭ ॥ ಯಾವ ಈ ಭ್ರಾಂತಿಯು ಕೇವಲ ಆಡುತ್ತ ಆಡುತ್ತ ಸಹಜವೇ ಮೂರು ಲೋಕಗಳನ್ನು ನುಂಗಿ ಬಿಡುತ್ತಾಳೆ. ಇವಳ ದಾಸ್ಯತ್ವದ ಬಲದಮೇಲೆ ತೃಷ್ಣೆ ಎಂಬುವಳು ಪುಷ್ಟಿ ಹೊಂದುತ್ತಾಳೆ. ॥ ೪೮ ॥ ಇದು ಇರಲಿ; ಆದರೆ ಈ ಕಾಮಕ್ರೋಧಗಳಿಗೆ ಮೋಹವ ಮನೆಯಲ್ಲಿ ಒಳ್ಳೇ ಪ್ರತಿಷ್ಠೆ ಇದೆ. ಮತ್ತು ಯಾವ ಅಹಂಕಾರವು ಸರ್ವ ಜಗತ್ತನ್ನು ಕುಣಿಸುತ್ತಿರುವದೋ ಆ ಅಹಂಕಾರದ ಸಂಗಡ ಈ ಕಾಮಕ್ರೋಧಗಳ ಕೊಡತೊಗೊಂಬುವ ವ್ಯವಹಾರವು ನಡೆಯುತ್ತದೆ. ॥ ೪೯ ॥ ಯಾವ ದಂಭವು ಸತ್ಯದ ಥರವನ್ನು ಬಿಚ್ಚಿ ಅದರಲ್ಲಿ ದುಷ್ಕೃತ್ಯದ ಭರಿಯನ್ನು ತುಂಬಿ ಆ ಅಹಂಕಾರವನ್ನು ಜಗತ್ತಿನಲ್ಲಿ ಇದೇ ವ್ರುಸಿದ್ಧಿಗೆ ತಂದಿರುವದು. ॥ ೫೦ ॥ ಈ ದಂಭವು ಪತಿವೃತಾರೂಪೀ ಶಾಂತಿಯನ್ನು ಠಕ್ಕಿಸಿ ಮಾಯಾ ರೂಪೀ ಹೊಲೆಯಳನ್ನು ಶೃಂಗರಿಸಿ ಅವಳ ಕಷ್ಠೆಯಿಂದ ಸಾಧು ಸಮುದಾಯವನ್ನು ಭ್ರಷ್ಟಮಾಡಿಸಿದಳು. ॥ ೫೧ ॥ ಇವಳು ವಿವೇಕವ ಸ್ಥಳವನ್ನು ಇಲ್ಲ

ದಂತೆ ಮಾಡಿದಳು. ವೈರಾಗ್ಯದ ಸೊಕ್ಕು ಮುರಿದುಬಿಟ್ಟಳು. ಉಪಶಮದ ಕುತ್ತಿಗೆಯನ್ನು ಕೊಯ್ದು ಅವಳ ಪ್ರಾಣಹರಣ ಮಾಡಿದಳು. ॥ ೫೨ ॥ ಇವಳು ಸಂತೋಷರೂಪೀ ವನವನ್ನು ಕಡಿದು ಹಾಳುಮಾಡಿದಳು. ಧೈರ್ಯ ರೂಪೀ ಕಿಲ್ಲೆಯನ್ನು ನೆಲಸಮ ಮಾಡಿದಳು. ಮತ್ತು ಆನಂದ ರೂಪೀ ಅಗಿಗಳನ್ನು ಕಿತ್ತೊಗೆದಳು. ॥ ೫೩ ॥ ಇವಳು ಜ್ಞಾನದ ಅಗಿಗಳನ್ನು ಬೇರು ಸಹಿತ ಅಗಿದು ತೆಗೆದಳು. ಸುಖದ ಹೆಸರು ಸಹ ಇಲ್ಲದಂತೆ ಮಾಡಿದಳು. ಮತ್ತು ಪ್ರಾಣಿ ಮಾತ್ರಗಳ ಹೃದಯದಲ್ಲಿ ತ್ರಿವಿಧ ತಾಪದ ಜ್ವಾಲೆಯನ್ನು ಉತ್ಪನ್ನಮಾಡಿದಳು. ॥ ೫೪ ॥ ಇವಳು ಶರೀರದ ಸಂಗಡ ಕೂಡಿ ಹೋಗಿರುತ್ತಾಳೆ. ಆದರೆ ಶೋಧಮಾಡಲಿಕ್ಕೆ ಹೋದರೆ ದೊರಕುವದಿಲ್ಲ. ॥ ೫೫ ॥ ಇವಳು ಬ್ರಹ್ಮ ಸ್ವರೂಪದ ಸಮೀಪ ಮತ್ತು ಜ್ಞಾನದ ಪಂಜಿನಿಯಲ್ಲಿ ವಾಸಮಾಡುತ್ತಾಳೆ. ಆದುದರಿಂದ ಜಗತ್ತಿನ ಮಹಾಪ್ರಳಯ ಮಾಡಲಿಕ್ಕೆ ಪ್ರವರ್ತಳಾಗಿ ಇವಳು ಯಾರಿಗೂ ಅಸುಕೊಳ್ಳುವದಿಲ್ಲ ॥ ೫೬ ॥ ನೀರಿನ ಹೊರ್ತು ಮುಳುಗಿಸುತ್ತಾಳೆ. ಬೆಂಕಿಯಿಲ್ಲದೇ ಸುಡುತ್ತಾಳೆ. ಮತ್ತು ಪ್ರಾಣಿಗಳಿಗೆ ತಿಳಿಯಗೊಡದೇ ನುಂಗುತ್ತಾಳೆ. ॥ ೫೭ ಇವಳು ಶಸ್ತ್ರದ ವಿನಃ ಕಡಿದು ಕೊಲ್ಲುತ್ತಾಳೆ. ಹಗ್ಗವಿಲ್ಲದೇ ಬಂಧಿಸುತ್ತಾಳೆ. ಮತ್ತು ತತ್ವಜ್ಞಾನಿಗಳಿಗೆ ಜಿದ್ದುಕಟ್ಟಿ, ತನ್ನ ಆಧೀನ ಮಾಡಿಕೊಳ್ಳುತ್ತಾಳೆ. ॥ ೫೮ ॥ ಇವಳು ಕೆಸರಿಲ್ಲದೇ ಹೂಳುತ್ತಾಳೆ. ಮತ್ತು ಬಲಿಯಿಲ್ಲದೇ ಜನರನ್ನು ನಿರ್ಬಂಧಿಸು ತ್ತಾಳೆ. ಇವಳು ಈ ಶರೀರದಲ್ಲಿ ಇಷ್ಟು ಅಂತರ್ಯಾಮೀ ಪ್ರವೇಶಮಾಡಿದ್ದರಿಂದ ಇವಳ ಸಮಾನರಾದ ಶತ್ರುಗಳು ಯಾರೂ ಇರುವದಿಲ್ಲ. ॥ ೫೯ ॥

ಧೂಮೇನಾವ್ರಿಯತೇ ವಹ್ನಿರ್ಯಥಾಽಽದರ್ಶೋ ಮಲೇನ ಚ ।
ಯಥೋಲ್ಬೇನಾವೃತೋಗರ್ಭಸ್ತಥಾ ತೇನೇದಮಾವೃತಂ ॥ ೩೮ ॥

[ಧೂಮೇ ನೇತಿ] ಜೈಸೀ ಚಂದನಾಚೀ ಮುಳೀ । ಗಿವಸೋನಿ ಘೇಪೇ ವ್ಯಾಳೀ । ನಾತರೀ ಉಲ್ಬಾಚೀಟೋಳೀ । ಗರ್ಭಸ್ಥಾಸೀ ॥ ೫೬೦ ॥ ಕಾ ಪ್ರಭಾವೀಣ ಭಾನು । ಧೂಮೇವೀಣ ಹುತಾಶನು । ಜೈಸಾ ದರ್ಪಣ ಮಳಹೀನು । ಕಹೀಚ ನಸೇ ॥ ೬೧ ॥ ತೈಸೇ ಇಂಹೀವೀಣ ಏಕಲೇ । ಆವ್ಹೀ ಜ್ಞಾನ ನಾಹೀಂ ದೇಖಿಲೇ । ಜೈಸೇ ಕೋಂಡೇನಿ ಪಾ ಗುತಲೇ । ಬೀಜ ನಿಪಜೇ ॥ ೬೨ ॥

ಅರ್ಥ— ಹೇಗೆ ಚಂದನ ವೃಕ್ಷದ ಬೇರಿಗೆ ಹಾವುಗಳು ಮುತ್ತಿಕೊಂಡಿರುವದೋ, ಇಲ್ಲವೇ ಗರ್ಭವೇಷ್ಟಣವು ಹೇಗೆ ಗರ್ಭವನ್ನು ಆಚ್ಛಾದಿಸಿರುವದೋ, ॥ ೫೬೦ ॥ ಅಥವಾ ಪ್ರಕಾಶದ ವಿನಃ ಸೂರ್ಯನೂ, ಹೊಗೆಯ ಹೊರ್ತಾಗಿ ಅಗ್ನಿಯೂ ಇಲ್ಲವೇ ಮಲಹೀನ ಕನ್ನಡಿಯು ಹೇಗೆ ದೊರಕಲಾರವೋ, ॥ ೬೧ ॥ ಹಾಗೆಯೇ ಕಾಮ ಕ್ರೋಧದ ಹೊರ್ತು ಶುದ್ಧ ಜ್ಞಾನವು ನಮ್ಮ ದೃಷ್ಟಿಗೆ ಎಂದೂ ಬಿದ್ದಿರುವದೇ ಇಲ್ಲ. ॥ ೬೨ ॥

ಆವೃತಂ ಜ್ಞಾನಮೇತೇನ ಜ್ಞಾನಿನೋ ನಿತ್ಯವೈರಿಣಾ ।
ಕಾಮರೂಪೇಣ ಕೌಂತೇಯ ದುಷ್ಪೂರೇಣಾನಲೇನ ಚ ॥ ೩೯ ॥

[ಆವೃತಂ ಜ್ಞಾನಮಿತಿ] ತೈಸೇ ಜ್ಞಾನ ತರೀ ಶುದ್ಧ । ಪರೀ ಇಂಹೀ ಅಸೇ ಪ್ರರುದ್ಧ । ವ್ಯಾಪೋನಿ ತೇ ಅಗಾಧ । ಹೋವೂನಿ ಠೇಲೇ ॥ ೬೩ ॥ ಆಧೀಯಾಂತೇ ಚಿಣಾವೇ । ಮಗ ತೇ ಜ್ಞಾನ ಪಾವಾವೇ । ತವ ಪರಾಭವೋ ನ ಸಂಭವೇ । ರಾಗದ್ವೇಷಾ ॥ ೬೪ ॥ ಯಾಂತೇ ಸಾಧಾ ವಯಾ ಲಾಗೀ । ಜೇ ಬಳ ಆಣಿಜೇ ಆಂಗೀ । ತೇ ಇಂಧನೇ ಜೈಸೀ ಅಗೀ । ಸಾವಾವೋ ಹೋಯ ॥ ೬೫ ॥

ಅರ್ಥ— ಅದರಂತೆಯೇ ಒಂದುವೇಳೆ ಜ್ಞಾನವು ಸ್ವತಃ ಶುದ್ಧವಿರುತ್ತದಾದರೂ ಕಾಮ ಕ್ರೋಧಗಳಿಂದ ಆಚ್ಛಾದಿತವಾಗಿರುತ್ತದೆ. ಅಂತೆಯೇ ಅದು ಮಹಾ ಬಲಾಢ್ಯವಾಗಿರುತ್ತದೆ. ॥ ೬೩ ॥ ಮೊದಲಿಗೇ ಕಾಮ ಕ್ರೋಧಗಳನ್ನು ಜಯಿಸಬೇಕು. ಆ ಮೇಲೆ ಜ್ಞಾನ ಪ್ರಾಪ್ತಿಯಾಗುವದು. ಆದರೆ ಆ ಕಾಮ ಕ್ರೋಧಗಳನ್ನು ಜಯಿಸುವದು

ಮೊದಲಿಗೇ ಕಾರಣವಾಗಿರುವದು. ॥ ೬೪ ॥ ಕಾರಣ, ಇವುಗಳನ್ನು ಜಯಿಸುವದರ ದೆಸೆಯಿಂದ ಯಾವ ಯಾವ ಸಾಧನಗಳನ್ನು ಯೋಜಿಸಿದರೂ ಆ ಎಲ್ಲ ಸಾಧನಗಳು ವಿರುದ್ಧವಾಗಿ ಕಾಮ ಕ್ರೋಧಾದಿಗಳಿಗೇ ಸಹಾಯವಾಗುತ್ತವೆ. ಯಾವ ಪ್ರಕಾರ ಅಗ್ನಿಯನ್ನು ಆರಿಸುವದರ ದೆಸೆಯಿಂದ ಅದರಲ್ಲಿ ಕಟ್ಟಿಗೆಗಳನ್ನು ಚಲ್ಲುವದರಿಂದ ಅದಕ್ಕೇ ಸಹಾಯವಾಗುವಂತೆ, ॥ ೬೫ ॥

ಇಂದ್ರಿಯಾಣಿ ಮನೋ ಬುದ್ಧಿರಸ್ಯಾಧಿಷ್ಠಾನ ಮುಚ್ಯತೇ ।
ಏತೈರ್ವಿಮೋಹಯತ್ಯೇಷ ಜ್ಞಾನಮಾವೃತ್ಯ ದೇಹಿನಮ್ ॥ ೪೦ ॥

[ಇಂದ್ರಿಯಾಣೀತಿ] ತೈಸೇ ಉಪಾಯ ಕೀಜತೀ ಜೇ ಜೇ । ತೇ ಯಾಂಪೀಚ ಹೋತೀ ವಿರಜೇ । ಮ್ಯಹೋನಿ ಹಟಿಯಾತೇ ಜಿಣಿಜೇ । ಇಂಹೀಚಿ ಜಗಿೀ ॥ ೬೬ ॥ ಐಸಿಯಾಹೀ ಸಾಂಕಡಾ ಬೋಲಾ। ಏಕ ಉಪಾಯ ಆಹೇ ಭಲಾ। ತೋ ಕರಿತಾ ಖರೀ ಆಂಗನಲಾ । ತರೀ ಸಾಂಗೇನ ತುಜ ॥೬೭॥

ಅರ್ಥ— ಯಾವ ಯಾವ ಉಪಾಯಗಳನ್ನು ಮಾಡಬೇಕೋ ಆ ಎಲ್ಲ ಉಪಾಯಗಳೂ ಇವುಗಳಿಗೇ (ಕಾಮ-ಕ್ರೋಧಗಳಿಗೆ) ಸಹಕಾರಿಯಾಗುತ್ತವೆ. ಆದ್ದರಿಂದ ಈ ಜಗತ್ತಿನಲ್ಲಿ ಹಟಿಯೋಗಿಗಳನ್ನು ಸಹ ಇವು ಜಯಿಸುತ್ತವೆ. ॥ ೬೬ ॥ ಅಂದ ಬಳಿಕ ಕಾಮ ಕ್ರೋಧಗಳು ದುರ್ಜಯವಾದವುಗಳೆಂದು ನಿನಗೆ ಕಾಣಬಹುದು. ಆದರೆ ಹಾಗೆ ಮಾತ್ರ ಇರುವದಿಲ್ಲ. ಅರ್ಜುನಾ, ಇಂಥ ಸಂಕಟದೊಳಗಿಂದಲೂ ಪಾರಾಗಲಿಕ್ಕೆ ಒಂದು ಉತ್ತಮವಾದ ಉಪಾಯವಿರುತ್ತದೆ. ಅದು ನಿನಗೆ ಸಾಧಿಸುವಂತಿದ್ದರೆ ಹೇಳುತ್ತೇನೆ. ॥ ೬೭ ॥

ತಸ್ಮಾತ್ತ್ವಮಿಂದ್ರಿಯಾಣ್ಯಾದೌ ನಿಯಮ್ಯ ಭರತರ್ಷಭ ।
ಪಾಪ್ಮಾನಂ ಪ್ರಜಹಿ ಹ್ಯೇನಂ ಜ್ಞಾನವಿಜ್ಞಾನನಾಶನಂ ॥ ೪೧ ॥
ಇಂದ್ರಿಯಾಣಿ ಪರಾಣ್ಯಾಹುರಿಂದ್ರಿಯೇಭ್ಯಃ ಪರಂ ಮನಃ ।
ಮನಸಸ್ತು ಪರಾ ಬುದ್ಧಿರ್ಯೋ ಬುದ್ಧೇಃ ಪರತಸ್ತು ಸಃ ॥ ೪೨ ॥

[ತಸ್ಮಾದಿತಿ] ಇಯಾಂಚಾ ಪಹಿಲಾ ಕುರುತಾ ಇಂದ್ರಿಯೇ । ಏಥೂನಿ ಪ್ರವೃತ್ತಿ ಕರ್ಮಾತೇ ವಿಯೇ । ಆಧೀ ನಿರ್ದಳೂ ಘಾಲೀ ತಿಯೇ । ಸರ್ವಥೈವ ॥ ೬೮ ॥ ಮಗ ಮನಾಚೀ ಧಾಂವಪಾರು ಷೇಲ । ಆಣಿ ಬುದ್ಧೀಚೀ ಸೋಡವಣ ಹೋಕುಲ । ಇತು ಕೇನಿ ಥಾರಾ ಮೋಡೇಲ । ಯಾ ಪಾಟ ಯಾಂಚಾ ॥ ೬೯ ॥

ಅರ್ಥ— ಇವುಗಳ ಮೂಲ ವಾಸ್ತವ್ಯವು ಇಂದ್ರಿಯಗಳಲ್ಲಿಯೇ ಇರುತ್ತದೆ. ಮತ್ತು ಇಂದ್ರಿಯಗಳಿಂದ ಕರ್ಮದ ಪ್ರವೃತ್ತಿಯು ಆಗುತ್ತದೆ. ಆದುದರಿಂದ ಈ ಇಂದ್ರಿಯಗಳನ್ನು ಮೊದಲಿಗೇ ಜಯಿಸುವವನಾಗು. ॥ ೬೮ ॥ ಹೀಗಾಗುವದರಿಂದ ಮನೋಧಾವನೆಯು ಕುಂಠಿತವಾಗಿ ಬಂಧನದಲ್ಲಿ ಶಿಲುಕಿದ ಬುದ್ಧಿಯು ಬಿಡುಗಡೆ ಹೊಂದೀತು. ಮತ್ತು ಆ ಮೇಲೆ ಈ ಪಾಪಿಷ್ಠ ಕಾಮಕ್ರೋಧಗಳ ವಸ್ತಿಯು ನಾಶಹೊಂದುವದು. ॥ ೬೯ ॥

ಏವಂ ಬುದ್ಧೇಃ ಪರಂ ಬುದ್ಧ್ವಾ ಸಂಸ್ತಭ್ಯಾತ್ಮಾನಮಾತ್ಮನಾ ।
ಜಹಿ ಶತ್ರುಂ ಮಹಾಬಾಹೋ ಕಾಮರೂಪಂ ದುರಾಸದಮ್ ॥ ೪೩ ॥

ಇತಿ ಶ್ರೀಮದ್ಭಗವದ್ಗೀತಾ ಸೂಪನಿಷತ್ಸು ಬ್ರಹ್ಮವಿದ್ಯಾಯಾಂ ಯೋಗಶಾಸ್ತ್ರೇ ಶ್ರೀಕೃಷ್ಣಾರ್ಜುನ ಸಂವಾದೇ 'ಕರ್ಮಯೋಗೋ' ನಾಮ ತೃತೀಯೋಧ್ಯಾಯ. ॥೩॥

[ಏವಂ ಬುದ್ಧೇಃ ಪರಮಿತಿ] ಹೇ ಅಂತರೀ ಹೂನಿ ಜರೀಫಿಟಲೇ । ತರೀ ನಿಭ್ರಾಂತ ಜಾಣ ನಿವಟಲೇ । ಜೈಸೇ ರಶ್ಮಿವೀಣ ಉರಲೇ । ಮೃಗಜಳ ನಾಹೀ ॥ ೭೦ ॥ ತೈಸೇ ರಾಗದ್ವೇಷ ಜರೀ

ನಿಮಾಲೇ । ತರೀ ಬ್ರಹ್ಮೀಂಚೇ ಸ್ವರಾಜ್ಯ ಆಲೇ । ಮಗ ತೋಭೋಗಿ ಸುಖ ಆಪುಲೇ । ಆಪಣಾಚಿ ॥೭೧॥
ತೇ ಗುರುಶಿಷ್ಯಾಂಚೀ ಗೋಠೀ । ಪಿಂಡಾಪದಾಚೀ ಗಾಂಠೀ । ತೇಥ ಸ್ಥಿರ ರಾಹೋನಿ ನುಠೀ । ಕವಣೇ
ಕಾಳೀ ॥ ೭೨ ॥ ಐಸೇ ಸಕಳ ಸಿದ್ದಾಚಾ ರಾವೋ । ದೇವೀ ಲಕ್ಷ್ಮೀಯೇಚಾ ನಾಹೋ । ರಾಯಾ
ಐಕೇ ದೇವದೇವೋ । ಬೋಲತಾ ಜಾಹಲಾ ॥ ೭೩ ॥ ಆತಾ ಪುನರಪಿ ತೋ ಅನಂತ । ಆದ್ಯ ಏಕೀ
ಮಾತ । ಸಾಂಗೇಲ ತೇಥ ಪಾಂಡುಸುತ । ಪ್ರಶ್ನಕರೀಲ ॥ ೭೪ ॥ ತಯಾಬೋಲಾಜಾ ಹನಪಾಡ ।
ಕೀ ರಸನೃತ್ತೀಚಾ ನಿವಾಡ । ಯೇಣೇ ಶ್ರೋತಯಾ ಹೋ ಈಲ ಸುರವಾಡ । ಶ್ರವಣ ಸುಖಾಚಾ ॥೭೫॥
ಜ್ಞಾನ ದೇವೋ ಮ್ಹಣೇ ನೀವೃತ್ತೀಚಾ । ಚಾಂಗ ಉಠಾವಾ ಕರೂನಿ ಉನ್ಮೇಷಾಚಾ । ಮಗ ಸಂವಾದ
ಶ್ರೀಹರಿ ಪಾರ್ಥಾಚಾ । ಭೋಗಾವಾ ಬಾಪಾ ॥ ೭೭ ॥

ಇತಿ ಶ್ರೀ ಜ್ಞಾನದೇವ ವಿರಚಿತಾಯಾಂ, ಭಾವಾರ್ಥ ದೀಪಿಕಾಯಾಂ, ತೃತೀಯೋ-ಽಧ್ಯಾಯಃ ॥ ೩ ॥
ಶ್ಲೋಕೇ- ೪೩ ಓವೀ- ೭೭೩

ಅರ್ಥ— ಈ ಪ್ರಕಾರ ಈ ಕಾಮಕ್ರೋಧಗಳ ವಸ್ತುಯು ಮನುಷ್ಯನ ಅಂತಃಕರಣದಲ್ಲಿ ಇಲ್ಲದಂತಾದಮೇಲೆ ಈ ಶತ್ರುಗಳು ನಿರ್ಮೂಲವಾದವೆಂದು ತಿಳಿ. ಯಾವಪ್ರಕಾರ ಸೂರ್ಯಕಿರಣದ ಹೊರ್ತು ಮೃಗಜಲವು ದೃಷ್ಟಿಗೆ ಬೀಳುವದಿಲ್ಲವೋ, ॥ ೭೭೦ ॥ ಅದೇ ಪ್ರಕಾರ ರಾಗ-ದ್ವೇಷಗಳು ನಾಶಹೊಂದಿದರೆ ಬ್ರಹ್ಮರೂಪೀ ಸ್ವರಾಜ್ಯವು ಕೈಸೇರುವದೆಂದು ನಂಬು. ಆ ಮೇಲೆ ಅವನು ತನ್ನಲ್ಲಿರುವ ಆತ್ಮಾನಂದ ಸುಖವನ್ನೇ ತಾನು ಭೋಗಿಸುವನು, ।೭೧॥ ಇದೇ ಗುರುಶಿಷ್ಯನ ಗುಪ್ತ ಸಂಭಾಷಣವು। ಇದೇ ಜೀವ ಬ್ರಹ್ಮದ ಐಕ್ಯವು! ಅಲ್ಲಿ ನೀನು ಸ್ಥಿರ ಸೇವಕನಾಗಿ ಅಲ್ಲಿಂದ ಎಂದಿಗೂ ಬಿಡುಗಡೆ ಹೊಂದಬೇಡ. ॥ ೭೭ ॥ ಸಂಜಯನು ಅನ್ನುತ್ತಾನೆ - ರಾಜನೇ ಕೇಳು, ಸಕಲಸಿದ್ಧ ಮುಕುಟ ಮಣಿಯಾದ ಲಕ್ಷ್ಮೀಪತಿ ಶ್ರೀಕೃಷ್ಣ ಪರಮಾತ್ಮನು ಈ ಪ್ರಕಾರ ಮಾತನಾಡಿದನು. ॥ ೭೩ ॥ ಇನ್ನು ಮುಂದೆ ಶ್ರೀಕೃಷ್ಣ ಪರಮಾತ್ಮನು ಒಂದು ಪುರಾತನ ಕಥೆಯನ್ನು ಹೇಳುವನು ಅದನ್ನು ಕೇಳಿ ವಂದುನಂದನನೂ ಒಂದು ಪ್ರಶ್ನೆಯನ್ನು ಮಾಡುವನು. ॥ ೭೪ ॥ ಆ ಕಥೆಯ ಯೋಗ್ಯತೆಯನ್ನೂ, ಮತ್ತು ರಹಸ್ಯವನ್ನೂ, ಕೇಳಿ ಶ್ರೋತೃಗಳಿಗೆ ಶ್ರವಣಸುಖದ ಸುಕಾಲವಾದೀತು. ॥ ೭೫ ॥ ನಿವೃತ್ತಿದಾಸರಾದ ಜ್ಞಾನದೇವರು ಅನ್ನುತ್ತಾರೆ- ಅಪ್ಪಗಳಿರಾ ! ಆತ್ಮಜ್ಞಾನ ಪ್ರಾಪ್ತಿಯ ಉತ್ಸವ ಸಿದ್ಧತೆಯಂದ ನೀವು ಕೃಷ್ಣಾರ್ಜುನರ ಸಂಪಾದವನ್ನು ಕೇಳಿರಿ. ॥ ೭೬ ॥

ಶ್ರೀ ಮದ್ಭಗವದ್ಗೀತೆಯ ಮತ್ತು ಜ್ಞಾನೇಶ್ವರಿಯ ಸರಲ, ಸುಲಭ ಕನ್ನಡ ಭಾಷಾಂತರದ ಮೂರನೆಯ ಅಧ್ಯಾಯವು

ಸಮಾಪ್ತವು

❁ ಶ್ರೀಕೃಷ್ಣಾರ್ಪಣಮಸ್ತು ❁



ಜ್ಞಾ ನೇ ಶ್ವ ರಿ

ನಾಲ್ಕನೆಯ ಅಧ್ಯಾಯವು

ಆಜಿ ಶ್ರವಣೇಂದ್ರಿಯಾ ಸಾಹಲೇ । ಜೇ ಯೇಣೇ ಗೀತಾಸಿಧಾನ್ತ ದೇಖಿಲೇ । ಆತಾ ಸ್ವಪ್ನಚಿ ಹೇ ತುಕಲೇ । ಸಾಚಾಸರಿಸೇ ॥ ೧ ॥ ಆಧೀಚಿ ವಿವೇಕಾಚೀ ಗೋಠೀ । ವರೀ ಪ್ರತಿಪಾದೀ ಶ್ರೀಕೃಷ್ಣ ಜಗಜೇಠೀ । ಆಣಿ ಭಕ್ತರಾಜ ಕಿರೀಟೀ । ವರಿಸತ ಅಸೇ ॥ ೨ ॥ ಜೈಸಾ ಪಂಚಮಾಲಾಪ ಸುಗಂಧ । ಕೀ ಪರಿಮಳ ಆಣಿ ಸುಸ್ವಾದ । ಭಲಾ ಜಾಹಲಾ ವಿನೋದ । ಕಥೇಚಾ ಇಯೇ ।' ೩ ॥ ಕೈಸೀ ಆಗಳಿಕ ದೈವಾಚೀ । ಜೇ ಗಂಗಾ ಜೋಡಿಲೀ ಅಮೃತಾಚೀ । ಹೋ ಕಾ ಜಪ ತಪೇ ಶ್ರೋತಯಾಂಚೀ । ಫಳಾ ಆಲೀ ॥ ೪ ॥ ಆತಾ ಇಂದ್ರಿಯ ಜಾತಆಘವೇ । ತಿಹೀ ಶ್ರವಣಾಚೇ ಘರ ರಿಘಾವೇ । ಮಗ ಸಂವಾದ ಸುಖ ಭೋಗಾವೇ । ಗೀತಾಖ್ಯ ಹೇ ॥ ೫ ॥ ಹಾ ಅತಿಸೋ ಅತಿ ಪ್ರಸಂಗೇ । ಸಾಂಡೂನಿ ಕಥಾಚಿ ತೇ ಸಾಂಗೇ । ಜೇ ಕೃಷ್ಣಾರ್ಜುನ ದೋಘೇ । ಬೋಲತ ಹೋತೇ ॥ ೬ ॥ ತೇ ನೇಘೇ ಸಂಜಯೋ ರಾಯಾತೇ ಮ್ಹಣೇ । ಅರ್ಜುನ ಅಧಿಷ್ಠಿಲಾ ದೈವ ಗುಣೇ । ಜೇ ಅತಿ ಪ್ರೀತೀ ಶ್ರೀನಾರಾಯಣೇ । ಬೋಲಿ ಜತ ಅಸೇ ॥೭॥ ಜೇ ನ ಸಾಂಗೇಚಿ ಪಿತಯಾ ವಸುದೇವಾಸೀ । ಜೇ ನ, ಸಾಂಗೇಚಿ ಮಾತೇ ದೇವ ಕೇಸಿ । ಜೇ ನ ಸಾಂಗೇಚಿ ಬಂಧು ಬಳ ಭದ್ರಾಸೀ । ತೇ ಗುಹ್ಯ ಅರ್ಜುನೇಸೀ ಬೋಲತ ॥ ೮ ॥ ದೇವೀ ಲಕ್ಷ್ಮೀಯೇ ಏವಢೀ ಜವಳಿಕ । ತೇಹೀ ನ ದೇಖೇ ಯಾ ಪ್ರೇಮಾಚೆ ಸುಖ । ಆಜೀ ಶ್ರೀಕೃಷ್ಣ ಪ್ರೇಮಾಚೆ ಬಿಕ । ಯಾತೇಂಚಿ ಆಥೀ ॥ ೯ ॥ ಸನಕಾದಿಕಾಂಚಿಯಾ ಆಶಾ । ವಾಢೀ ನಲ್ಯಾ ಕೀರ ಬಹುವಸಾ । ಪರೀ ತ್ಯಾಹೀ ಯೇಣೇ ಮಾನೇ ಯಶಾ । ಯೇತೀಚಿನಾ ॥ ೧೦ ॥ ಯಾ ಶ್ರೀಜಗದೀಶ್ವರಾಚೆ ಪ್ರೇಮ । ಏಥ ದಿಸತಸೇ ನಿರುಪಮ । ಕೈಸೇ ಪಾರ್ಥೇ ಯೇಣೇ ಸರ್ವೋತ್ತಮ । ಪುಣ್ಯಕೇಲೇ॥ ೧೧ ॥ ಹೋ ಕಾ ಜಯಾಚಿಯಾ ಪ್ರೀತಿ । ಆಮೂರ್ತ ಹಾ ಆಲಾ ವ್ಯಕ್ತೀ । ಮಜ ಏಕ ವಂಕೀ ಯಾಚೀ ಸ್ಥಿತಿ । ಆವಡತ ಅಸೇ ॥ ೧೨ ॥ ಯೇರ್ಹವೀ ಹಾ ಯೋಗಿಯಾ ನಾಡಳೇ । ವೇದಾರ್ಥಾಸಿ ನಾಕಳೇ । ಜೇಥ ಧ್ಯಾನಾಚೇಹೀ ಡೋಳೇ ಪಾವತೀನಾ ॥ ೧೩ ॥ ತೋ ಹಾ ನಿಜಸ್ವರೂಪ । ಅನಾದಿ ನಿಷ್ಕಂಪ । ಪರೀ ಕವಣೇ ಮಾನೇ ಸ ಕೃಪ । ಜಾಹಲಾ ಆಹೇ ॥ ೧೪ ॥ ಹಾ ತ್ರೈಲೋಕ್ಯಪಟಾಚೀ ಘಡೀ । ಅಕಾ ರಾಚೀ ಪೈಲಥಡೀ । ಕೈಸಾ ಯಾಚಿಯೇ ಆವಡೀ । ಆವರಲಾ ಅಸೇ ॥ ೧೫ ॥

ಇಲ್ಲಿ ಶ್ರೀಜ್ಞಾನೇಶ್ವರ ಮಹಾರಾಜರು ಕ್ರೋತೃಗಳ ಮತ್ತು ಕ್ರೋತ್ರೇಂದ್ರಿಯಗಳ ಭಾಗ್ಯವರ್ಣನೆಯನ್ನು ಪ್ರತಿಪಾದನೆಮಾಡಿರುತ್ತಾರೆ.

ಅರ್ಥ— ಈ ದಿವಸ ಶ್ರವಣೇಂದ್ರಿಯಗಳಿಗೆ (ಶ್ರೀಗುರು ಕೃಪಾರೂಪೀ ಪ್ರಕಾಶದಿಂದ ಕಿವಿಗಳಲ್ಲಿ ಗೀತಾ ತತ್ವವು ಪ್ರತ್ಯಕ್ಷ ದೃಗ್ಗೋಚರವಾಯಿತು.) ಭಾಗ್ಯೋದಯವು ಪ್ರಾಪ್ತವಾಯಿತು. ಕಾರಣವೇನೆಂದರೆ ಯಥಾರ್ಥ ಗೀತೆಯ ಶ್ರವಣವಾಗುವದು ಬಹಳಮಾಡಿ ಸ್ವಪ್ನವತ್ ಅದೆ. ಈಗ ಭಾಗ್ಯೋದಯವು ಪರಿಪಕ್ವವಾದುದರಿಂದ ಇಂತಹ ಗೀತಾರೂಪ ನಿಕ್ಷೇಪವನ್ನು ಈ ದಿವಸ ಕರ್ಣಗಳು ಪ್ರತ್ಯಕ್ಷ ನೋಡಿದವು. ಜಾಗ್ರತವಾದ ಮೇಲೆ ಸ್ವಪ್ನ ದೊಳಗಿನ ಮಾತು ಅಸತ್ಯವೆಂದು ಭಾಸವಾಗುತ್ತದೆ. ಆದರೆ ಅದು ಈ ದಿವಸ ಸತ್ಯವೆಂದು ತೋರಿತು. ॥ ೧ ॥ ಮೊದಲಿಗೇ ಆತ್ಮವಿಚಾರವು! (ವಿವೇಕದ ಸಂಭಾಷಣವು) ಅದರಲ್ಲಿ ಜಗತ್ತಿನಲ್ಲಿ ಶ್ರೇಷ್ಠ ಸರ್ವೋತ್ತುಮನಾದ ಭಗವಾನ್ ಶ್ರೀಕೃಷ್ಣ ಪರಮಾತ್ಮನು ಪ್ರತಿಪಾದನ ಮಾಡುವವನು! ಮತ್ತು ಭಕ್ತರಾಜ ಅರ್ಜುನನು ಕೇಳುವವನು!! ॥೨॥

ಪಂಚಮಸ್ವರವೂ ಮತ್ತು ಅದರಲ್ಲಿಯೇ ಉತ್ಕಟ ಸುಗಂಧ ಸುವಾಸನೆಯೂ ಮತ್ತು ಸ್ವಾದವೂ ಇವುಗಳ ಐಕ್ಯವಾದರೆ ಹೇಗೆ ಆನಂದವಾಗುವದೋ, ಹಾಗೆಯೇ ಈ ಗೀತಾರೂಪೀ ಕಥಾಮೃತದಲ್ಲಿ ಸರ್ವ ಇಂದ್ರಿಯಗಳಿಗೂ ಆನಂದವಾಗುವ ರಸವು ತುಂಬಿದೆ. ॥ ೩ ॥ ದೈವದ ಮಹತ್ವವನ್ನು ದೊಡ್ಡಸ್ತಿಕೆಯನ್ನು) ಎಷ್ಟು ವರ್ಣನೆ ಮಾಡಿದರೂ ತೀರದು. ಯಾವುದರ ಯೋಗದಿಂದ ಶ್ರೋತೃಗಳ ಜಪತಪಗಳು ಫಲದ್ರೂಪವಾಗಿರುವವು. ಅದರಿಂದ ಅವರಿಗೆ ಅಮೃತರೂಪ ಗಂಗೆಯು ದೊರಕಿರುವಳು. ॥ ೪ ॥ ಆದುದರಿಂದ ಸರ್ವ ಇಂದ್ರಿಯಗಳೂ ತಮ್ಮ ತಮ್ಮ ಉದ್ಯೋಗಗಳನ್ನು ಬಿಟ್ಟು ಶ್ರವಣೇಂದ್ರಿಯಗಳಲ್ಲಿ ಪ್ರವೇಶಮಾಡಿ, ಏಕಾಗ್ರದಿಂದ ಕೃಷ್ಣಾರ್ಜುನರ (ಪ್ರಶ್ನೋತ್ತರರೂಪ ಸಂಭಾಷಣದ) ಗೀತೆಯ ಸಂವಾದ ಸುಖವನ್ನು ಭೋಗಿಸಬೇಕು. ॥ ೫ ॥ (ಆವಾಗ ಸಂತ ಸಮುದಾಯವು ಶ್ರೀ ಜ್ಞಾನೇಶ್ವರ ಮಹಾರಾಜರಿಗೆ ಅನ್ನುತ್ತಾರೆ–) ಇನ್ನು ಮೇಲೆ ನಿನ್ನ ವಿಸ್ತಾರವಾದ, ಅತಿಶಯೋಕ್ತ ವರ್ಣನೆಯನ್ನು ಸಾಕುಮಾಡಿ ಶ್ರೀ ಕೃಷ್ಣಾರ್ಜುನರು ಏನು ಮಾತಾಡುತ್ತಿದ್ದರೋ ಆ ಕಥೆಯನ್ನೇ ಹೇಳು. ॥ ೬ ॥ ಜ್ಞಾನೇಶ್ವರ ಮಹಾರಾಜರು ಅನ್ನುತ್ತಾರೆ. ಆ ಸಮಯದಲ್ಲಿ ಸಂಜಯನು ಧೃತರಾಷ್ಟ್ರ ರಾಜನಿಗೆ ಹೇಳುತ್ತಾನೆ. ಸುದೈವದಿಂದ ಯುಕ್ತನಾದ ಮಹಾಭಾಗ್ಯಶಾಲಿ ಅರ್ಜುನನಿಗೆ ಶ್ರೀ ನಾರಾಯಣನು ಅತಿಶಯವಾದ ಪ್ರೇಮದಿಂದ ಹೇಳುತ್ತಾನೆ. ॥ ೭ ॥ ಯಾವ ಗುಪ್ತ ರಹಸ್ಯವನ್ನು ತನ್ನ ತಂದೆ ವಸುದೇವನಿಗೆ ಮತ್ತು ತಾಯಿ ದೇವಕಿಗೆ, ಬಂಧು ಬಲರಾಮನಿಗೆ ಸಹ ಹೇಳಲಿಲ್ಲವೋ, ಆ ಗುಹ್ಯವನ್ನು ಅರ್ಜುನನಿಗೆ ಹೇಳಿದನು. ॥ ೮ ॥ ಶ್ರೀ ಲಕ್ಷ್ಮೀದೇವಿಯು ಯಾವಾಗಲೂ ಪರಮಾತ್ಮನ ಸನ್ನಿಧಿಯಲ್ಲಿದ್ದು ಸೇವಾಮಾಡುತ್ತಿರುವಳು. ಆದರೆ ಅವಳಿಗೆ ಕೂಡ ಈ ಪ್ರೇಮಸುಖದ ಅನುಭವವು ದೊರಕಲಿಲ್ಲ. ಆ ಕೃಷ್ಣಪ್ರೇಮದ ಬಲವು ಈ ದಿವಸ ಆ ಪಾರ್ಥನಲ್ಲಿಯೇ ಉಂಟಾಗಿರುವದು. ॥ ೯ ॥ ಸನಕಾದಿಗಳು ಬಹಳ ದಿವಸದಿಂದ (ಪರಮಾತ್ಮಸುಖದ ವಿಷಯದಲ್ಲಿ) ನಿಶ್ಚಯದಿಂದ ಅತಿಶಯ ಆಶಾಮಾಡುತ್ತಿದ್ದರೂ, ಈ ತರದ ಯೋಗ್ಯತೆಯ ಪ್ರೇಮವು ಅವರಿಗೆ ದೊರಕಲಿಲ್ಲ. ॥ ೧೦ ॥ ಈ ಜಗದೀಶ್ವರ ಶ್ರೀಕೃಷ್ಣನ ಅನುಪಮ ಪ್ರೇಮವು ಅರ್ಜುನನಲ್ಲಿಯೇ ನೆಲೆಸಿರುವದನ್ನು ನೋಡಲು ಎಂತಹ ಮಹತ್ ಪುಣ್ಯವನ್ನು ಮಾಡಿರಬಹುದು ! ॥ ೧೧ ॥ ಯಾವನ ಪ್ರೀತಿಯು ದೆಸೆಯಿಂದ ನಿರಾಕಾರನಾದ ಪರಬ್ರಹ್ಮನು ಸಾಕಾರಕ್ಕೆ ಬಂದನೋ ಅಂತಹ ಅರ್ಜುನನ ವಿಶ್ವನಿಷ್ಠಾವಸ್ಥಾ (ದೇಹವು) ಭಿನ್ನವಾಗಿದ್ದರೂ ಉಭಯತರು ಒಂದೇ ರೂಪವಾಗಿರುವರು. ॥ ೧೨ ॥ ಭಗವಾನ್ ಶ್ರೀಕೃಷ್ಣಪರಮಾತ್ಮನು, ಯೋಗಿಗಳ ದೃಷ್ಟಿಗೆ ಗೋಚರವಾಗದವನು ! ವೇದಗಳಿಗೆ ತಿಳಿಯದವನು ! ಅವನಲ್ಲಿ ಧ್ಯಾನದ ದೃಷ್ಟಿಯು ಪ್ರವೇಶವಾಗುವದಿಲ್ಲ. ॥ ೧೩ ॥ ಅವನು ಆತ್ಮಸ್ವರೂಪನೂ, ಅನಾದಿಯೂ, ಜನ್ಮರಹಿತನೂ, ಅಚಲನೂ ಆದ ಭಗವಾನನು ಆ ಅರ್ಜುನನ ಮೇಲೆ ಕೃಪಾವಂತನಾಗಿರುವನು ! ॥ ೧೪ ॥ ಇವನು ತ್ರೈಲೋಕ್ಯರೂಪವಸ್ತುದ (ಮೂರು ಲೋಕಗಳೂ ಇವನ ರೂಪವಿದ್ದ) ಪುಳಗೆಯು ! ಆಕಾರದ ಆಚೆಗಿರುವವನು ! ಇಂತಹನು ಅರ್ಜುನನಿಗೆ ಇಷ್ಟು ಪ್ರೇಮದಿಂದ ಸ್ವಾಧೀನಾದುದು ಹೇಗೋ ತಿಳಿಯದು ! ॥ ೧೫ ॥

ಶ್ರೀ ಭಗವಾನುವಾಚ—

ಇಮಂ ವಿವಸ್ವತೇ ಯೋಗಂ ಪ್ರೋಕ್ತವಾನಹಮವ್ಯಯಂ ।
ವಿವಸ್ವಾನ್ಮನವೇ ಪ್ರಾಹ ಮನುರಿಕ್ಷ್ವಾಕವೇಬ್ರವೀತ್ ॥ ೧ ॥

[ಶ್ರೀಭಗವಾನುವಾಚ ಇಮಮಿತಿ] ಮಗ ದೇವ ಮ್ಹಣೇ ಪಾಂಡುಸುತಾ । ಹಾಚಿ ಯೋಗ ಆಮ್ಹೀ ವಿವಸ್ವತಾ । ಕಥಿಲಾಪರೀ ತೇ ವಾರ್ತಾ । ಬಹುವಾ ದಿವಸಾಂಚೀ ॥ ೧೬ ॥ ಮಗ ತೇಣೇ ವಿವಸ್ವತೇ ರವೀ । ಹೇ ಯೋಗಸ್ಥಿತೀ ಆಳವೀ । ನಿರೂಪಿಲೀ ಬರವೀ । ಮನೂಪ್ರತಿ ॥ ೧೭ ॥ ಮನೂನೆ ಆಪಣ ಆನುಷ್ಠಿಲೀ । ಮಗ ಇಕ್ಷ್ವಾಕುವಾ ಉಪದೇಶಿಲೀ । ಐಸೀ ಪರಂಪರಾ ವಿಸ್ತಾರಿಲೀ । ಆದ್ಯ ಹೇ ಗಾ ॥ ೧೮ ॥

ಅರ್ಥ— ಆ ಮೇಲೆ ಭಗವಾನ್ ಶ್ರೀಕೃಷ್ಣನು ಪಂಡುಪುತ್ರನಾದ ಅರ್ಜುನನಿಗೆ ಅನ್ನುತ್ತಾನೆ— ನಿಷ್ಕಾಮ ಕರ್ಮಯೋಗವನ್ನು ನಾನು ಮೊದಲು ವಿವಸ್ವತನೆಂಬ ಸೂರ್ಯನಿಗೆ ಹೇಳಿದೆನು. ಆದರೆ ಆ ಮಾತಿಗೆ ಈಗ ಬಹಳ ದಿವಸಗಳಾಗಿ ಹೋದವು. ॥ ೧೬ ॥ ಆ ಮೇಲೆ ಸೂರ್ಯನು ಈ ಸರ್ವ ಯೋಗವನ್ನು ವೈವಸ್ವತ ಮನುವಿಗೆ ಹೇಳಿದನು. ॥ ೧೭ ॥ ಮತ್ತು ಮನುಋಷಿಯು ಆ ಯೋಗದ ಆಚರಣೆಯನ್ನು ಮಾಡಿ ಇಕ್ಷ್ವಾಕು ಎಂಬ ಹೆಸರಿನ ತನ್ನ ಪುತ್ರನಿಗೆ ಅದರ ಉಪದೇಶವನ್ನು ಮಾಡಿದನು. ಹೀಗೆಯೇ ಮೊದಲಿನಿಂದ ಪರಂಪರೆಯಾಗಿ ಈ ಯೋಗೋಪದೇಶವು ನಡೆದುಬಂದಿರುತ್ತದೆ. ।. ೧೮ ॥

ಏವಂ ಪರಂಪರಾಪ್ರಾಪ್ತಮಿಮಂ ರಾಜರ್ಷಯೋ ವಿದುಃ।
ಸ ಕಾಲೇನೇಹ ಮಹತಾ ಯೋಗೋ ನಷ್ಟಃ ಪರಂತಪ ॥ ೨ ॥

[ಏವಂ ಪರಂಪರಾ ಪ್ರಾಪ್ತಮಿತಿ] ಮಗ ಆಣಿಕಹೀ ಯಾ ಯೋಗಾತೇ। ರಾಜರ್ಷಿ ಜಾಹಲೇ ಜಾಣತೇ। ಪರೀ ತೇಥೋನಿ ಆತಾ ಸಾಂಪ್ರತೇ। ನೇಣಿ ಜೇ ಕೋಣ್ಹೇ ॥ ೧೯ ॥ ಜೇ ಪ್ರಾಣಿಯಾ ಕಾಮೀ ಭರ। ದೇಹಾಚಿವರೀ ಆದರ। ನ್ಹುಣೋನಿ ಪಡಿಲಾ ವಿಸರ। ಆತ್ಮಬೋಧಾಚಾ ॥ ೨೦ ॥ ಅವ್ಯಾಟಲಿಯಾ ಆಸ್ಥಾ ಬುದ್ಧಿ। ವಿಷಯಸುಖಾಚೀ ಪರಮಾವಧಿ। ಜೀವ ತೈಸಾ ಉಪಾಧಿ। ಆವಡೇ ಲೋಕಾ ॥ ೨೧ ॥ ಯೇರ್ಹವೀ ತಥ್ಹೀ ಖವಣೇಯಾಂಚ್ಯಾ ಗಾಂವೀ। ಪಾಟಾವೇ ಕಾಯ ಕರಾವೀ। ಸಾಂಗೇ ಜಾತ್ಯಂಧಾರವೀ। ಕಾಯ ಆಥೀ ॥ ೨೨ ॥ ಕಾ ಬಹಿರ ಯಾಂಚ್ಯಾ ಆಸ್ಥಾನೀ। ಕವಣ ಗೀತಾ ತೇ ಮಾನೀ। ಕೀ ಕೋಲ್ಹೇಯಾ ಚಾಂದಣೀ। ಆವಡೀ ಉಪಜೇ ॥ ೨೩ ॥ ಪೈ ಚಂದ್ರೋದಯಾ ಆರೌತೇ। ಜಯಾಂಚೇ ಡೋಳೇ ಫುಟತೀ ಅಸತೇ। ತೇ ಕಾವಳೇ ಕೇವೀ ಚಂದ್ರಾತೇ। ವೋಳಖತೀ ॥ ೨೪ ॥ ತೈಸೀ ವೈರಾಗ್ಯಾಚೀ ಶಿಂಪ ನ ದೇಖತೀ। ಜೇ ವಿವೇಕಾಚೀ ಭಾಷಾನೇಣತೀ। ತೇ ಮೂರ್ಖ ಕೀವೀ ಪಾವತೀ। ಮಜ ಈಶ್ವರಾತೇ ॥ ೨೫ ॥ ಕೈಸಾನೇಣೋ ಮೋಹ ವಾಢಿನಲಾ। ತೇಣೇ ಬಹುತೇಕ ಕಾಳ ವ್ಯರ್ಥ ಗೇಲಾ। ಮ್ಹಣೋನಿ ಯೋಗ ಹಾ ಲೋಪಲಾ। ಲೋಕೀ ಇಯೇ ॥ ೨೬ ॥

ಅರ್ಥ— ಮುಂದೆ ಮತ್ತೆ ಕೆಲವು ರಾಜಋಷಿಗಳಿಗೆ ಈ ಯೋಗವು ಗೊತ್ತಾಯಿತು. ಆದರೆ ಆ ಮೇಲೆ ಈ ಹೊತ್ತಿನವರೆಗೆ ಅದು ಯಾರಿಗೂ ಗೊತ್ತಿರುವದಿಲ್ಲ. ॥ ೧೯ ॥ ಕಾರಣವೇನೆಂದರೆ ಪ್ರಾಣಿಗಳಿಗೆ ವಿಷಯ ಸೇವನೆಯಲ್ಲಿಯೇ ಪ್ರೇಮವೂ ಮತ್ತು ದೇಹದ ಮೇಲೆಯೇ ಆದರವೂ ಇದ್ದುದರಿಂದ ಅವರಿಗೆ ಆತ್ಮಬೋಧದ ವಿಸ್ಮರಣೆಯು ಆಗಿರುವದು. ॥ ೨೦ ॥ ಆಸ್ತಿಕ ಬುದ್ಧಿಯು ತಪ್ಪು ಹಾದಿಯಿಂದ ನಡೆದದ್ದರಿಂದ ವಿಷಯ ಸುಖವೇ ಪರಮಾವಧಿಯಾಗಿ ಅದೇ ಆದ್ಯಕರ್ತವ್ಯವೆಂದು ಜನರಿಗೆ ತಿಳಿದು ಅವರು ಜೀವದಕಿಂತಲೂ ವಿಷಯರೂಪ ಉಪಾಧಿಯಮೇಲೆ ಪ್ರೇಮಮಾಡಹತ್ತಿದರು. ॥ ೨೧॥ ಹೀಗೆ ನೋಡು– ಯಾವಾಗಲೂ ನಗ್ನರಾಗಿ ಇರುವ ದಿಗಂಬರರ (ಜೈನ ಸನ್ಯಾಸಿಗಳ) ಊರಿನಲ್ಲಿ ಉತ್ತ್ಪೋತ್ಪಮವಾದ ವಸ್ತ್ರಗಳ (ಶಾಲು ಶಕಲಾತಿಗಳ)ನ್ನು ಯಾರು ಅಪೇಕ್ಷೆ ಮಾಡುವರು? ಇಲ್ಲವೇ ಜನ್ಮಾಂಧನಿಗೆ ಸೂರ್ಯನ ಉಪಯೋಗವೇನು ? ॥ ೨೨ ॥ ಇಲ್ಲವೇ ಕಿವುಡರ ಸಭೆಯಲ್ಲಿ ಗಾಯನವಾದನಕ್ಕೆ ಯಾರು ಮಾನಕೊಡುವರು ? ಅಥವಾ ತುಡಗುಮಾಡುವ ವ್ಯಸನವಿದ್ದವರಿಯ ಮನಸಿನಲ್ಲಿ ಬೆಳದಿಂಗಳಿನಿಂದ ಆನಂದವು ಹೇಗಾಗಬೇಕು? ॥೨೩॥ ಅದರಂತೆಯೇ ಚಂದ್ರೋದಯ ಪೂರ್ವದಲ್ಲಿ ಯಾವ ಪ್ರಾಣಿಗಳ ಕಣ್ಣುಗಳು ಕಾಣದಂತಾಗುತ್ತವೆಯೊ ಆ ಕಾಗೆಗಳು ಚಂದ್ರನನ್ನು ಹೇಗೆ ನೋಡುವವು ? ಅವುಗಳಿಗೆ ಚಂದ್ರನ ಪರಿಚಯವಾದರೂ ಹೇಗಾಗಬೇಕು ? ।೨೪। ಇದರಂತೆ ಯಾವನು ವೈರಾಗ್ಯದ ಸೀಮೆಯನ್ನು ಸಹ ನೋಡಿರುವದಿಲ್ಲ ಮತ್ತು ಯಾವನಿಗೆ ವಿವೇಕದ ಭಾಷಣವು ಗೊತ್ತೇ ಇರುವದಿಲ್ಲವೋ, ಆ ಮೂರ್ಖನಿಗೆ ನನ್ನ- ಪರಮೇಶ್ವರ, ಪ್ರಾಪ್ತಿಯ ಲಾಭವು ಹೇಗಾಗುವದು ? ॥ ೨೫॥ ಈ ನೋಹವು ಇಷ್ಟು ಹೇಗೆ ಬೆಳೆಯಿತೆಂಬುದನ್ನು ಯಾರು ಬಲ್ಲರು ? ಆದರೆ ಅವರಿಂದಲೇ ಬಹಳೊಂದು ಕಾಲವು ವ್ಯರ್ಥವಾಗಿ ಗತಿಸಿ ಹೋಗಿರುವದು. ಆದುದರಿಂದ ಈ ಜಗತ್ತಿನಲ್ಲಿ ಆ ಯೋಗವು ಮುಳುಗಿಹೋಗಿರುವದು. ॥೨೬॥

ಸ ಏವಾಯಂ ಮಯಾ ತೇಽದ್ಯ ಯೋಗಃ ಪ್ರೋಕ್ತಃ ಪುರಾತನಃ।
ಭಕ್ತೋಽಸಿ ಮೇ ಸಖಾ ಚೇತಿ ರಹಸ್ಯಂ ಹ್ಯೇತದುತ್ತಮಂ ॥ ೩ ॥

[**ಸ ಏವೋತಿ**] ತೋಚೀ ಹಾ ಆಜೀ ಆತಾ । ತುಜಪ್ರತಿ ಕುಂತೀ ಸುತಾ । ಸಾಂಗೀತಲಾ ಆಮ್ಹೀ ತತ್ವತಾ । ಭ್ರಾಂತಿ ನ ಕರೀ ॥ ೨೭ ॥ ಹೇ ಜೀವೀಚೆ ನಿಜ ಗುಜ । ಪರೀ ಕೇವೀ ರಾಖೋ ತುಜ । ಜೇ ಪಢಿಯೇಸೀ ತೂ ಮಜ । ಮ್ಹಣವೂನಿಯಾ ॥ ೨೮ ॥ ತೂ ಪ್ರೇಮಾಚಾ ಪುತಳಾ । ಭಕ್ತೀಚಾ ಜಿವ್ಹಾಳಾ । ಮೈತ್ರಿಯೇಚೀ ಚಿತ್ಕಳಾ । ಧನುರ್ಧರಾ ॥ ೨೯ ॥ ತೂ ಅನುಸಂಗಾಚಾ ಠಾವೋ । ಆತಾ ತುಜ ಕಾಯ ವಂಚೋ ಜಾವೋ । ಜಹ್ನಿ ಸಂಗ್ರಾಮಾರೂಢ ಆಹೋ । ಜಾಹಲೋ ಆಮ್ಹೀ ॥ ೩೦ ॥ ತರೀ ನಾವೇಕ ಹೇ ಸಾಹಾವೇ । ಗಾಜಾಬಜ್ಯಹೀ ನ ಧರಾವೇ । ಪರೀ ತುಝೆ ಅಜ್ಞಾನತ್ವಹರಾವೇ । ಲಾಗೇ ಆಧೀ ॥ ೩೧ ॥

ಅರ್ಥ— ಎಲೋ ಕುಂತಿ ಕುಮಾರನಾದ ಪಾರ್ಥನೇ! ಈ ಪುರಾತನ ಯೋಗವನ್ನು ಇಂದು ನಿನಗೆ ಹೇಳಿದ್ದೇನೆ. ಇದರ ವಿಷಯವಾಗಿ ನೀನು ಏನಾದರೂ ಒಂದು ಸಂಶಯವನ್ನು ತೆಗೆದುಕೊಳ್ಳಬೇಡ. ॥ ೨೭ ॥ ಈ ಯೋಗ ವೆಂದರೆ ನನ್ನ ಜೀವ ಇಲ್ಲವೇ ಪ್ರಾಣವಾಗಿರುವದು. ಆದರೆ ಅದನ್ನು ನಿನಗೆ ಕೊಡದೇ ಗುಪ್ತವಾಗಿ ಹೇಗೆ ಇಡಬೇಕು ? ಏಕೆಂದರೆ ನೀನು ನನ್ನ ಪ್ರೀತಿಯ ಶ್ರೇಷ್ಠ ಭಕ್ತನಾಗಿರುವಿ ॥ ೨೮ ॥ ಧನುರ್ಧರನೇ ! ನೀನು ಪ್ರೇಮದ ಪುಥ್ಥಳಿಯೇ ಇದ್ದು ಭಕ್ತಿಯ ಶೆಲೆಯೂ ಮತ್ತು ನನ್ನ ಜೀವದ ಗೆಳೆಯನೂ ಆಗಿರುವಿ ॥ ೨೯ ॥ ನೀನು ನನ್ನ ಸಖ್ಯತ್ವದ ವಿಶ್ವಾಸದ ಸ್ಥಾನವಾಗಿರುವಿ. ಆದುದರಿಂದ ನಾವು ಯುದ್ಧಕ್ಕೆ ಸಿದ್ಧವಾಗಿರಲು ನಿನಗೆ ಪಂಚಿಸಿ ಈ ಯೋಗವನ್ನು ಹೇಗೆ ಮುಚ್ಚಿಡಬೇಕು ? ॥ ೩೦ ॥ ಕಾರಣ ಯುದ್ಧದ ಗಡಿಬಿಡಿಯಿದ್ದರೂ ಅದನ್ನು ಕ್ಷಣಹೊತ್ತು ಒಂದುಕಡೆಗೆ ಇಟ್ಟು, ಗಣನೆಗೆ ತಾರದೇ ಮೊದಲಿಗೇ ನಿನ್ನ ಅಜ್ಞಾನವನ್ನು ನಾವು ದೂರಮಾಡಬೇಕಾಗಿರುವದು. ॥ ೩೧ ॥

ಅರ್ಜುನ ಉವಾಚ—

ಅಪರಂ ಭವತೋ ಜನ್ಮ ಪರಂ ಜನ್ಮ ವಿವಸ್ವತಃ।
ಕಥಮೇತದ್ವಿಜಾನೀಯಾಂ ತ್ವಮಾದೌ ಪ್ರೋಕ್ತವಾನಿತಿ ॥ ೪ ॥

[**ಅಪರಮಿತಿ**] ತವ ಅರ್ಜುನ ಮ್ಹಣೇಶ್ರೀಹರೀ । ಮಾಯ ಅಪುಲೇ ಯಾಚಾ ಸ್ನೇಹ ಕರೀ । ತೇಥ ವಿಸ್ಮಯ ಕಾಯ ಅವಧಾರೀ । ಕೃಪಾಸಿಧೇ ॥ ೩೨ ॥ ತೂ ಸಂಸಾರ ಶ್ರಾಂತಾಚೀ ಸಾವುಲೀ । ಅನಾಥ ಜೀವಾಂಚೀ ಮಾವುಲೀ । ಆಮುತೇಕೀರ ಪ್ರಸವಲೀ । ತುಝೀಚ ಕೃಪಾ ॥ ೩೩ ॥ ದೇವಾ ಪಾಂಗುಳ ಏಕಾಧೇ ವಿಇಜೇ । ತಾರೀ ಜನ್ಮೊನಿ ಜೋಜಾರ ಸಾಹಿಜೇ । ಬೋಲೋ ಕಾಯತುಝೆ । ತುಜಚಿ ಪುಢಾ ॥ ೩೪ ॥ ಆತಾ ಪುಸೇನ ಜೇ ಮೀ ಕಾಹೀ । ತೇಥೆ ನಿಕೇ ಚಿತ್ತದೇಈ । ತೇವೀಂಚಿ ದೇವೇ ಕೋಪಾವೇ ನಾಹೀ । ಬೋಲಾ ಏಕಾ ॥ ೩೫ ॥ ತರೀ ಮಾಗೀಲ ಜೇ ವಾರ್ತಾ । ತುವಾ ಸಾಂಗಿತಲೀ ಹೋತೀ ಅನಂತಾ । ತೇ ನಾವೇಕ ಮಜಚಿತ್ತಾ । ಮಾನೇಚಿನಾ ॥ ೩೬ ॥ ಜೇ ತೋ ವಿವಸ್ವತ ಮ್ಹಣಜೇ ಕಾಯೀ । ಐಸೇ ಹೇ ವಡಿಲಾ ಠಾಉನೇ ನಾಹೀ । ತರೀ ತುವಾಚಿ ತೇವೀ ಕಹೀ । ಉಪದೇಶಿಲಾ ॥ ೩೭ ॥ ತೋ ಆಇಕಿಜೇ ಬಹುತಾ ಕಾಳಾಚಾ । ಆಣಿ ತೂ ತವ ಶ್ರೀಕೃಷ್ಣ ಸಾಂಪೇಚಾ । ಮ್ಹಣೋನಿಗಾ ಇಯೇ ಮಾತುಚಾ । ವಿಸಂವಾದ ॥ ೩೮ ॥ ತೇವೀಚಿ ದೇವಾ ಚರಿತ್ರ ತುಝೆ । ಆಪಣ ಕಾಂಹೀಚಿ ನೇಣಿಜೇ । ಹೇ ಲಟಿಕೇ ಕೇವೀ ಮ್ಹಣಿಜೇ । ಏಕಿಹಳಾ ॥ ೩೯ ॥ ಪರೀ ಹೇಚಿ ಮಾತು ಆಘವೀ । ಮೀ ಪರಿಯೇಸೇ ಐಸೀ ಸಾಂಗಾವೀ । ಜೇ ಕಾ ತುವಾ ತಯಾರವೀ । ಉಪದೇಶ ಕೇಲಾ ॥ ೪೦ ॥

ಅರ್ಥ — ಆ ಸಮಯದಲ್ಲಿ ಅರ್ಜುನನು ಅನ್ನುತ್ತಾನೆ- ಹೇ ಕೃಷ್ಣಾನಿಧೇ ! ತಾಯಿಯು ತನ್ನ ಕೂಸಿನಮೇಲೆ ಪ್ರೇಮವನ್ನು ಮಾಡಿದರೆ ಅದರಲ್ಲಿ ವಿಸ್ಮಯವೇನು ? ॥ ೩೫ ॥ ನೀನು ಸಂಸಾರತಾಪತ್ರಯದಿಂದ ಸೋತುನಿಂತ ಪ್ರಾಣಿಗಳ ನೆರಳು ಅನಾಥ ಜನರ ಮಾತೃದೇವತೆ !! ನಮ್ಮ ಜನ್ಮವು ನಿಶ್ಚಯವಾಗಿ ನಿನ್ನ ಕೃಪೆಯಿಂದಲೇ ಆಗಿರುತ್ತದೆ. ॥ ೩೬॥ ದೇವಾ! ತಾಯಿಗೆ ಕಾಲಿಲ್ಲದ ಮಗನು ಹುಟ್ಟಿದರೆ ಜನ್ಮದಾರಭ್ಯ ತಾಯಿಗೆ ಕಷ್ಟಸೋಸ ಬೇಕಾಗುವದಿಲ್ಲವೇ ! ಇದನ್ನೆಲ್ಲ ನೀವು ಬಲ್ಲವರೇ. ಆದರೆ ನಿಮ್ಮ ಮುಂದೆ ನಿಮ್ಮ ಮಹಾತ್ಮ್ಯವನ್ನೇನು ಹೇಳುವದು. ॥ ೩೪ ॥ ಇನ್ನುಮೇಲೆ ನಿಮಗೆ ನಾನು ಯಾವದಾದರೂ ಒಂದು ಮಾತು ಕೇಳುವವನಿದ್ದೇನೆ. ಅದರ ಕಡೆಗೆ ನೀವು ಚನ್ನಾಗಿ ಲಕ್ಷ ಕೊಡಬೇಕು. ಮತ್ತು ಆ ಮಾತಿನ ವಿಷಯವಾಗಿ ನಿಮ್ಮ ಮನಸ್ಸಿನಲ್ಲಿ ಕ್ರೋಧವನ್ನು ತರಬಾರದು. ॥ ೩೫ ॥ ಹೇ ಅನಂತನೇ! ನೀವು ಬಹಳದಿನಸದ ಹಿಂದಿನ ಮಾತನ್ನು ಅಂದರೆ "ಸೂರ್ಯನಿಗೆ ಈ ಯೋಗವನ್ನು ಹೇಳಿದೆನು" ಎಂದು ಹೇಳಿದಿರಿ. ಆದರೆ ನನಗೆ ಅದರ ವಿಷಯವಾಗಿ ಸಂಶಯ ಉಂಟಾಗಿರುತ್ತದೆ. ॥ ೩೬ ॥ ವಿವಸ್ವತ ಸೂರ್ಯನೆಂದರೆ ಯಾರು ? ಯಾವ ಕಾಲವನು ? ಎಂಬದು ನಮ್ಮ ಪೂರ್ವಜರಿಗೆ ಸಹ ಗೊತ್ತಿರುವದಿಲ್ಲ. ಅವನಿಗೆ ನೀವು ಯಾವಾಗ್ಗೆ, ಹೇಗೆ ಉಪದೇಶ ಮಾಡಿದಿರಿ ? ॥ ೩೭ ॥ ಆ ಸೂರ್ಯನು ಬಹಳ ದಿನಸಗಳ ಹಿಂದೆಯೇ ಆಗಿ ಹೋಗಿರುವನೆಂದು ಕೇಳಿದ್ದೇನೆ. ಆದರೆ ಶ್ರೀ ಕೃಷ್ಣಾ! ನಿನ್ನುನ್ನು ನೋಡಿದರೆ, ಇತ್ತೀಚಿನವರಾಗಿರುವಿರಿ. ಅಂದಬಳಿಕ ಈ ಮಾತಿನಲ್ಲಿ ನನಗೆ ವಿರೋಧ ಕಂಡುಬರುತ್ತದೆ. ॥ ೩೮ ॥ ಅದರಲ್ಲಿ ದೇವಾ! ನಿನ್ನ ಚರಿತ್ರೆಯು ಅಗಾಧವಾಗಿರುವದು. ನನಗೆ ಏನೂ ತಿಳಿಯುವದಿಲ್ಲ. ಅಂದಬಳಿಕ ನೀವು ಅನ್ನುವದು ಅಸತ್ಯವಾಗಿರುವುದೆಂದಾದರೂ ವಿಚಾರಿಸದೇ ಅನ್ನುವದು ಹೇಗೆ ? ॥ ೩೯ ॥ ಆದರೆ 'ನೀವು ಸೂರ್ಯನಿಗೆ ಉಪದೇಶ ಮಾಡಿದೆನೆಂದು' ಹೇಳುವ ಮಾತು, ನನಗೆ ತಿಳಿಯುವಂತೆ ಸ್ಪಷ್ಟವಾಗಿ ಹೇಳು. ॥ ೪೦ ॥

ಶ್ರೀ ಭಗವಾನುವಾಚ -

ಬಹೂನಿ ಮೇ ವ್ಯತೀತಾನಿ ಜನ್ಮಾನಿ ತವ ಚಾರ್ಜುನ ।
ತಾನ್ಯಹಂ ವೇದ ಸರ್ವಾಣಿ ನ ತ್ವಂ ವೇತ್ಥ ಪರಂತಪ ॥ ೫ ॥

[ಬಹೂನಿ ಮೇ ೫೦] ತವ ಶ್ರೀಕೃಷ್ಣ ವ್ಹಣೇ ಪಾಂಡುಸುತಾ । ತೋ ವಿವಸ್ವತ ಜೈಹೋತಾ ।
ತೈ ಆಮ್ಹೀ ನಸೋ ಐಸೀ ಚಿತ್ತಾ । ಧ್ರಾಂತಿ ಜರೀ ತುಜ ॥೪೧॥ ತರೀ ತೂಗಾ ಹೇ ನೇಣಸೀ। ಪೈ ಜನ್ಮೋ
ಆಮ್ಹಾ ತುಮ್ಹಾಸೀ । ಬಹುತೇ ಗೇಲೀ ಪರೀ ನ ಸ್ಮರಸೀ । ಆಪುಲೀ ತೂ ॥ ೪೨॥ ಮೀ ಜೇಣೇ ಜೇಣೇ
ಅವಸರೇ । ಜೇ ಜೇ ಹೋವುನಿ ಅವತರೇ । ತೇ ತೇ ಸಮಸ್ತಹೀ ಸ್ಮರೇ । ಧನುರ್ಧರಾ ॥ ೪೩ ॥

ಅರ್ಥ— ಆಗ್ಗೆ ಶ್ರೀಕೃಷ್ಣ ಪರಮಾತ್ಮನು ಅನ್ನುತ್ತಾನೆ. ಪಂಡುಪುತ್ರನೇ! ಯಾವಕಾಲಕ್ಕೆ ಸೂರ್ಯನಿದ್ದನೋ ಆ ಕಾಲಕ್ಕೆ ನಾವು ಇದ್ದಿಲ್ಲ, ಎಂಬ ಸಂಶಯವು ನಿನ್ನ ಮನಸಿನಲ್ಲಿ ಹುಟ್ಟಿರಬಹುದು. ॥ ೪೧ ॥ ಆದರೂ ಇದು ನಿನಗೆ ಗೊತ್ತಿರುವದಿಲ್ಲ. ನಿನ್ನ ಮತ್ತು ನನ್ನ ಜನ್ಮಗಳು ಹಿಂದೆ ಬಹಳೇ ಆಗಿ ಹೋಗಿರುವವು. ಆದರೆ ನಿನ್ನ ಜನ್ಮಗಳ ಸ್ಮರಣೆಯು ನಿನಗಿರುವದಿಲ್ಲ. ॥೪೨॥ ಅರ್ಜುನನೇ! ಯಾವ ಯಾವ ಕಾಲಕ್ಕೆ ಯಾವ ಯಾವ ಅವತಾರಗಳನ್ನು ನಾನು ಎತ್ತಿರುವೆನೋ ಆ ಎಲ್ಲ ಅವತಾರಗಳ ಸ್ಮರಣೆಯು ನನಗೆ ಇರುತ್ತದೆ. ॥ ೪೩ ॥

ಅಜೋಽಪಿ ಸನ್ನವ್ಯಯಾತ್ಮಾ ಭೂತಾನಾಮೀಶ್ವರೋಽಪಿ ಸನ್ ।
ಪ್ರಕೃತಿಂ ಸ್ವಾಮಧಿಷ್ಠಾಯ ಸಂಭವಾಮ್ಯಾತ್ಮಮಾಯಯಾ ॥ ೬ ॥

[ಅಜೋಽಪಿ ಸನ್ನಿತಿ] ವ್ಹಣೋನಿ ಹೇ ಆಳವೇ । ಮಾಗೀಲ ಮಜ ಆಠವೇ । ಮೀ ಅಜಹೀ
ಪರೀ ಸಂಭವೇ । ಪ್ರಕೃತಿಯೋಗೇ ॥ ೪೪ ॥ ಮಾಝೀ ಅವ್ಯಯತ್ವ ತರೀ ನ ನಸೇ । ಪರೀ ಹೋಣೇ
ಜಾಣೇ ಏಕದಿಸೇ । ತೇ ಪ್ರತಿಬಿಂಬೀ ಮಾಯಾವಶೇ । ಮಾರ್ಗುನ್ಯಾಚಿ ಠಾಯೀ ॥ ೪೫ ॥ ಮಾಝೀ

ಸ್ವತಂತ್ರತಾ ತರೀ ನ ಮೋಡೇ । ಪರೀ ಕರ್ಮಾಧೀನ ಐಸಾ ಆವಡೇ । ತೇಹೀ ಭ್ರಾಂತಿ ಬುದ್ಧಿ ತರೀ ಘಡೇ । ಯೇರ್ಹವೀ ನಾಹೀ ॥ ೪೬ ॥ ಕೀ ಏಕಚಿ ದಿಸೇ ದುಸರೇ । ತೇ ದರ್ಪಣಾಚೇನಿ ಆಧಾರೇ । ಯೇರ್ಹವೀ ಕಾಯ ವಸ್ತುವಿಚಾರೇ । ದುಜೇ ಆಹೇ ॥ ೪೭ ॥ ತೈಸಾ ಅಮೂರ್ತಚಿ ಮೀ ಕಿರೀಟೀ । ಪರೀ ಪ್ರಕೃತಿ ಜೈ ಅಧಿಷ್ಠೀ । ತೈ ಸಾಕಾರಪಣೇ ನಟ ನಟೀ । ಕಾರ್ಯಾಲಾಗೀ ॥ ೪೮ ॥

ಅರ್ಥ— ಆದುದರಿಂದ ನನಗೆ ಹಿಂದಾದ ಮಾತಿನ ಸ್ಮರಣೆ ಚನ್ನಾಗಿ ಇದೆ. ನಾನು ಜನ್ಮರಹಿತನಿದ್ದಾಗ್ಯಾದರೂ ಭಕ್ತಕಾರ್ಯಾರ್ಥವಾಗಿ ಅನಾದಿ ಆತ್ಮಮಾಯಾ ಅಂಗೀಕಾರಮಾಡಿ, ಆ ಯೋಗದಿಂದ ಅವತರಿಸಿ ಪ್ರಸಿದ್ಧನಾಗಿರುತ್ತೇನೆ. ॥ ೪೪ ॥ ನನ್ನ ಅವಿನಾಶತ್ವವು ನಾಶ ಹೊಂದುವದಿಲ್ಲ. ಆದರೆ ಅವತಾರ ತೆಗೆದುಕೊಂಡು ಬರುವದೂ, ಹೋಗುವದೂ ನನ್ನ ಮಾಯಾಶಕ್ತಿಯ ಒಂದು ಪ್ರಕಾರದ ಪ್ರತಿಬಿಂಬವು ಮಾತ್ರ. ॥ ೪೫ ॥ ಇದರಿಂದ ನನ್ನ ಸ್ವತಂತ್ರತೆಯ ಭಂಗ ವೆಂದಿಗೂ ಆಗುವದಿಲ್ಲ. ಆದರೆ ನಾನು ಕರ್ಮಾಧೀನನಾಗಿರುವೆನೆಂದು ಜನರಿಗೆ ಕಾಣುತ್ತದೆ. ಅದು ಅವರ ಭ್ರಾಂತಿಯ ಮೂಲಕ ಹಾಗೆ ತೋರುತ್ತದೆ. ನಿಜವಾಗಿ ನೋಡಿದರೆ ಹಾಗಿರುವದಿಲ್ಲ. ॥ ೪೬ ॥ ಇಲ್ಲವೇ ಒಂದೇ ವಸ್ತುವು ಕನ್ನಡಿಯ ಯೋಗದಿಂದ ಎರಡು ಸ್ಥಳದಲ್ಲಿ ಕಾಣುತ್ತದೆ. ಆದರೆ ನಿಜವಾದ ಸ್ಥಿತಿಯ ವಿಚಾರ ಮಾಡಿದರೆ ಅವು ಎರಡಿರುವವೇ ? ॥ ೪೭ ॥ ಅದರಂತೆಯೇ ಅರ್ಜುನಾ! ನಾನು ನಿರಾಕಾರನಿರುತ್ತೇನೆ. ಆದರೆ ಜಗತ್ಕಾರ್ಯಾರ್ಥವಾಗಿ ಮಾಯೆಯನ್ನು ಸ್ವೀಕಾರಮಾಡಿ ನಟನೋಪಾದಿಯಲ್ಲಿ ಬಹಿರಂಗವಾಗಿ ಆಕಾರವನ್ನು ಧರಿಸಿ ಸಾಕಾರನಾಗುವೆನು. ॥೪೮॥

ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ ॥ ೭ ॥

[ಯದಾ ಯದಾ ಹಿತಿ] ಜೇ ಧರ್ಮಜಾತ ಆಘವೇ । ಯುಗಾಯುಗೀ ವ್ಯಾ ರಕ್ಷಾವೇ । ಐಸಾ ಓಘ ಹಾ ಸ್ವಭಾವೇ । ಆಮ್ಯ ಆಸೇ ॥ ೪೯ ॥ ಮ್ಹಣೋನಿ ಅಜತ್ವ ಪರತೇ ಠೇವೀ । ಮೀ ಅವ್ಯಕ್ತ ಪಣಹೀ ನಾಶವೀ । ಜೇ ವೇಳೀ ಧರ್ಮಾತೇ ಅಭಿಭವೀ । ಅಧರ್ಮ ಹಾ ॥ ೫೦ ॥

ಆರ್ಥ— ಜಗತ್ತಿನಲ್ಲಿ ಬಾಳುವ ಅಖಿಲಧರ್ಮಗಳನ್ನು ಯುಗಯುಗಗಳಲ್ಲಿಯೂ ರಕ್ಷಿಸುವ ನನ್ನ ಕ್ರಮವು ಪುರಾತನದಿಂದಲೂ ನಡೆದು ಬಂದಿರುತ್ತದೆ. ॥ ೪೯ ॥ ಆದುದರಿಂದ ಯಾವಯಾವ ಕಾಲದಲ್ಲಿ ಅಧರ್ಮದಿಂದ ಧರ್ಮವು ಪರಾಭವ (ನಾಶ) ಹೊಂದುವದೋ ಆ ಕಾಲದಲ್ಲಿ ನನ್ನ ಅಜತ್ವನನ್ನು (ಜನ್ಮರಹಿತತನವನ್ನು) ಬದಿಗಿಟ್ಟು ಬಿಡುತ್ತೇನೆ. ಆವಾಗ ನಿರಾಕಾರನೆಂಬ ಸ್ಮರಣೆಯನ್ನೂ ನಾನು ಮರೆತು ಬಿಡುತ್ತೇನೆ. ॥ ೫೦ ॥

ಪರಿತ್ರಾಣಾಯ ಸಾಧೂನಾಂ ವಿನಾಶಾಯಚ ದುಷ್ಕೃತಾಂ ।
ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ॥ ೮ ॥

[ಪರಿತ್ರಾಣಾಯ ಸಾಧೂನಾಮಿತಿ] ತೇ ವೇಳೆ ಆಪುಲ್ಯಾ ಚೇನಿ ಕೈವಾರೀ । ಮೀ ಸಾಕಾರ ಹೋವೂನಿ ಅವತರೇ । ಮಗ ಅಜ್ಞಾನಾಚೇ ಅಂಧಾರೇ । ಗಿಳೂನಿಘಾಲೀ ॥ ೫೧ ॥ ಅಧರ್ಮಾಚೀ ಅವಧೀ ತೋಡೀ । ದೋಷಾಂಚೀ ಲಿಹಿಲೀಫಾಡೀ । ಸಜ್ಜನಾ ಕರವೀ ಗುಢೀ ! ಸುಖಾಚೀ ಉಭವೀ ॥ ೫೨ ॥ ದೈತ್ಯಾಂಚೀ ಕುಳೇ ನಾಶೀ । ಸಾಧೂಚಾಮಾನ ಗಿಂವಶೀ । ಧರ್ಮಾಸೀ ನೀತಿಶೀ । ಶೇಸ ಭರೀ ॥ ೫೩ ॥ ಮೀ ಅವಿವೇಕಾಚೀ ಕಾಜಳೀ । ಫೇಡುನಿ ವಿವೇಕದೀಪ ಉಜಳೀ । ತೈ ಯೋಗಿಯಾ ಪಾಹೇ ದಿವಾಳೀ । ನಿರಂತರ ॥೫೪॥ ಸ್ವ ಸುಖೇ ವಿಶ್ವ ಕೊಂದೇ । ಧರ್ಮಾಚೀ ಜಗೀ ನಾಂದೇ । ಭಕ್ತಾ ನಿಘತೀ ದೊಂದೇ । ಸಾತ್ವಿಕಾಂಚೀ ॥೫೫॥ ತೈ ಪಾಪಾಚಾ ಅಚಳಳಿಪೆ । ಪುಣ್ಯಾಚೀ ಪಹಾಟ ಫುಟೇ । ಜೈ ಮೂರ್ತಿ ಮಾಝೀ ಪ್ರಗಟೇ । ಪಾಂಡು ಕುಮರಾ ॥ ೫೬ ॥ ಐಸೇಯಾ ಕಾಜಾ ಲಾಗೀ । ಅವತರೇ ಮೀ ಯುಗಾ ಯುಗೀ । ಪರೀ ಹೇಚಿ ವೋಳಖೇ ಜೋ ಜಗೀ ತೋ ವಿವೇಕಿಯಾ ॥ ೫೭ ॥

ಅರ್ಥ— ಆಗ ನಾನು ಭಕ್ತಕೈವಾರಿಯಾಗಿ ದೇಹಧಾರಣಮಾಡಿ ಅವತಾರತೆಗೆದುಕೊಳ್ಳುತ್ತೇನೆ. ಮತ್ತು ಆ ಮೇಲೆ ಅಜ್ಞಾನರೂಪೀ ಅಂಧಕಾರವನ್ನು ನುಂಗಿಬಿಡುತ್ತೇನೆ. ॥ ೫೧ ॥ ಅಧರ್ಮದ ಆಯುಷ್ಯವುರ್ಯಾದೆಯನ್ನು ಮುರಿದುಬಿಡುತ್ತೇನೆ. ದೋಷಗಳನ್ನು ಬರೆದ (ಜನಾಖರ್ಚಿನ) ಖಾತೆವಹಿಗಳನ್ನು ಹರಿದುಹಾಕುತ್ತೇನೆ. ಮತ್ತು ಸತ್ಪುರುಷರಿಂದಲೂ, ಸಾಧುಗಳಿಂದಲೂ ಸುಖದ ಧ್ವಜವನ್ನು ನಿಲ್ಲಿಸುತ್ತೇನೆ. ॥ ೫೨ ॥ ದೈತ್ಯ (ದುಷ್ಟ)ಕುಲದ ನಾಶ ಮಾಡುತ್ತೇನೆ. ಸಾಧುಗಳಿಗೆ ಯೋಗ್ಯವಾದ ಸನ್ಮಾನ ದೊರೆಯುವಂತೆ ಮಾಡುತ್ತೇನೆ. ಧರ್ಮ ಮತ್ತು ನೀತಿಗಳ ವಿವಾಹಮಾಡಿ ಅಕ್ಷತೆಹಾಕುತ್ತೇನೆ ॥ ೫೩ ॥ ಅವಿಚಾರರೂಪವಾದ ಕಾಡಿಗೆಯನ್ನು ತೆಗೆದು ವಿಚಾರರೂಪೀ ದೀವಿಗೆಯನ್ನು ಪ್ರಜ್ವಲಿತಮಾಡುತ್ತೇನೆ ಆಗ ಯೋಗಿಗಳಿಗೆ ಅದೊಂದು ನಿರಂತರವಾದ, ಆನಂದದ ದೀಪಾವಳಿಯ ಹಬ್ಬವು, ಎಂದು ಭಾಸವಾಗುತ್ತದೆ. ॥ ೫೪ ॥ ಆಮೇಲೆ ಸತ್-ಸುಖದಿಂದ ಸರ್ವವಿಶ್ವವೂ ತುಂಬಿಹೋಗುತ್ತದೆ. ಎಲ್ಲಿ ನೋಡಿದಲ್ಲಿ ಜನರು ಧರ್ಮಾಚರಣೆಯಲ್ಲಿಯೇ ಮಗ್ನರಾಗುತ್ತಾರೆ. ಮತ್ತು ಭಕ್ತಜನರು ಸತ್ವಗುಣದಿಂದ ಪರಿಪೂರ್ಣರಾಗುತ್ತಾರೆ. ॥ ೫೫ ॥ ಅರ್ಜುನಾ ! ಯಾವ ಕಾಲದಲ್ಲಿ ನನ್ನ ಅವತಾರ ಪ್ರಕಟವಾಗುತ್ತದೋ ಆವಾಗ ಪಾಪದ ಪರ್ವತಗಳು ನಾಶಹೊಂದುತ್ತವೆ. ಮತ್ತು ಪುಣ್ಯದ ಉದಯವಾಗುತ್ತದೆ. ॥ ೫೬ ॥ ಇಂತಹ ಕಾರ್ಯದ ಸಲುವಾಗಿಯೇ ನಾನು ಯುಗಯುಗಗಳಲ್ಲಿ ಅವತಾರವನ್ನೆತ್ತುವೆನೆಂದು ಯಾರು ನಂಬುವರೋ ಅವರೇ ಜಗತ್ತಿನಲ್ಲಿ ವಿಚಾರವಂತರಾಗಿರುವರೆಂದು ತಿಳಿ. ॥ ೫೭ ॥

ಜನ್ಮ ಕರ್ಮ ಚ ಮೇ ದಿವ್ಯಮೇವಂ ಯೋ ವೇತ್ತಿ ತತ್ವತಃ।
ತ್ಯಕ್ತ್ವಾ ದೇಹಂ ಪುನರ್ಜನ್ಮ ನೈತಿ ಮಾಮೇತಿ ಸೋಽರ್ಜುನ ॥ ೯ ॥

[ಜನ್ಮೇತಿ] ಮಾಝಿ ಅಜತ್ವೇ ಜನ್ಮಣೇ। ಅಕಾರಯತಾಚಿ ಕರ್ಮ ಕರಣೇ । ಹೇ ಅವಿಕಾರ ಜೋ ಜಾಣೇ । ತೋ ಪರಮಮುಕ್ತ ॥ ೫೮ ॥ ತೋ ಚಾಲಿಲಾ ಸಂಗೇ ನ ಚಳೇ । ದೇಹೀಂಚಾ ದೇಹೀ ನಾಕಳೇ । ಮಗ ಪಂಚತ್ವೀ ತವ ಮಿಳೇ । ಮಾಝ್ಯಾಂಚೀ ರೂಪೀ ॥ ೫೯ ॥

ಅರ್ಥ— ನಾನು ಅಜ (ಜನ್ಮರಹಿತ)ನಾಗಿದ್ದೂ, ಜನ್ಮಧಾರಣೆ ಮಾಡಿರುವೆನೆಂದೂ ಮತ್ತು ನನ್ನ ಅಕ್ರಿಯತ್ವವು ಸ್ಥಿರವಿದ್ದೂ ಕರ್ಮ ಮಾಡುತ್ತೇನೆಂಬುವದೂ, ಈ ಪರಸ್ಪರ ವಿರುದ್ಧ ಸ್ಥಿತಿಯ ಅಬಾಧಿತ ನಿಸಃಶಯ ಬೋಧವು ಯಾವನಿಗೆ ಆಗಿರುವದೋ ಅವನು ಪರಮಮುಕ್ತನಾಗಿರುವನು. ॥ ೫೮ ॥ ಹೀಗೆ ತಿಳಿಯುವವನು ದೇಹದ ಸಂಬಂಧದಿಂದ ಅವನು ನಡೆದಂತೆ ಕಂಡರೂ ಅವನು ನಡೆಯುವದಿಲ್ಲ. ಅವನು ದೇಹಧಾರಣ ಮಾಡಿದಾಗ್ಯೂ ದೇಹಸಂಬಂಧದ ಮಮತ್ವದಲ್ಲಿ ಸಿಕ್ಕುಬೀಳುವದಿಲ್ಲ. ಆ ಮೇಲೆ ಅವನು ಮರಣಕಾಲದಲ್ಲಿ ನನ್ನ ಸ್ವರೂಪದಲ್ಲಿ ಬಂದು ಸೇರುತ್ತಾನೆ. (ಸಾಯುಜ್ಯ ಮುಕ್ತಿಯನ್ನು ಹೊಂದುತ್ತಾನೆ.) ॥ ೫೯ ॥

ವೀತರಾಗಭಯಕ್ರೋಧಾ ಮನ್ಮಯಾ ಮಾಮುಪಾಶ್ರಿತಾಃ।
ಬಹವೋ ಜ್ಞಾನತಪಸಾ ಪೂತಾ ಮದ್ಭಾವಮಾಗತಾಃ ॥ ೧೦ ॥

[ವೀತರಾಗ ಭಯೇತಿ] ಯೇರ್ಝವೀ ಪರಾಪರ ನ ಶೋಚಿತೀ । ಜೇ ಕಾಮನಾ ಶೂನ್ಯಹೋತೀ । ವಾಟಾ ಕೋಣೇ ವೇಳೀ ನ ಪಹತಿ । ಕ್ರೋಧಾಚಿಯಾ ॥ ೬೦ ॥ ಸದಾ ಮಿ ಯಾಂಚಿ ಆಥಿಲೇ । ಮಾಝ್ಯಿಯಾ ಸೇವಾ ಚಿಯಾಲೇ । ಕೀ ಆತ್ಮಬೋಧೇ ತೋಷಲೇ । ವೀತರಾಗ ಜೇ ॥ ೬೧ ॥ ಜೇ ತಪೋ ತೇಜಾಚಿಯಾ ರಾಶೀ । ಕೀ ಏಕಾಯತನ ಜ್ಞಾನಾಸೀ । ಜೇ ಪವಿತ್ರತಾ ತೀರ್ಥಾಂಸೀ । ತೀರ್ಥ ರೂಪ ॥ ೬೨ ॥ ತೇ ಮದ್ಭಾವಾ ಸಹಜೇ ಮೀ ಆಲೇ । ತೇಚಿ ತೇ ಹೋವುನಿ ಠೇಲೇ । ಜೇ ಮಜ ತಯಾ ಉರಲೇ । ಪದರ ನಾಹೀ ॥ ೬೩ ॥ ಸಾಂಗೇ ಪಿತಳೇಚೀ ಗಾಂಧಿಕಾಳಿಕ । ಜೈ ಫಿಟಲೀ ಹೋಯ ನಿಃಶೇಖ। ತೈ ಸುವರ್ಣ ಕಾಈ ಆಣಿಕ । ಜೋಡೂ ಜಾಇಜೇ ॥ ೬೪ ॥ ತೈಸೇಯ ಮನಿಯಮೀ ಕಡಸಲೇ । ಜೇ ತಪೋ ಜ್ಞಾನೇ ಚೋಖಾಳಲೇ । ಮೀ ತೇಚಿ ತೇ ಜಾಹಲೇ । ಏಥ ಸಂಶಯೋ ಕಾಯಸಾ ॥೬೫॥

ಅರ್ಥ— ಆದರೆ ಹಿಂದಿನ ಮತ್ತು ಮುಂದಿನ ಮಾತಿನ ಬಗ್ಗೆ ಯಾವನು ದುಃಖಿಸುವದಿಲ್ಲವೊ, ಮತ್ತು ವಾಸನಾ ರಹಿತನಾಗಿರುತ್ತಾನೋ, ಅವನು ಯಾವಾಗಲೂ ಕ್ರೋಧವಶನಾಗುವದಿಲ್ಲ. ॥ ೬೦ ॥ ಯಾವನು ವಿಷಯದಲ್ಲಿ ಅಪ್ರೀತಿಯುಳ್ಳವನಾಗಿರುತ್ತಾನೋ, ಮತ್ತು ಯಾವನು ಸದಾ ನನ್ನ ಯೋಗದಿಂದ ಸಂಪನ್ನನಾಗಿ ನನ್ನ ಪ್ರಾಪ್ತಿಯಿಂದ ತನ್ನನ್ನು ಧನ್ಯನೆಂದು ತಿಳಿದಿರುತ್ತಾನೋ, ಮತ್ತು ನನ್ನ ಸೇವೆಯ ಸಲುವಾಗಿಯೇ ಅವನು ಬದುಕಿರುತ್ತಾನೋ, ಯಾವನು ಜ್ಞಾನಬೋಧದಿಂದ ಸಂತೋಷಹೊಂದುತ್ತಾನೋ, ॥ ೬೧ ॥ ಯಾವನು ತಪಃಶ್ಚರ್ಯದ ತೇಜೋ ರಾಶಿಯೂ ಇಲ್ಲನೇ ಜ್ಞಾನದ ಮನೆಯೂ ಅಥವಾ ತೀರ್ಥಗಳಿಗೆ ಸಹ ಪವಿತ್ರನುಮಾಡುವ ತೀರ್ಥರೂಪನೇ ಇರುತ್ತಾನೋ, ॥ ೬೨ ॥ ಅವನು ನನ್ನ ಸ್ವರೂಪವನ್ನು ಸಹಜನೇ ಬಂದು ಸೇರುತ್ತಾನೆ. ನನ್ನಂತೆಯೇ ರೂಪ ವುಳ್ಳವನಾಗಿ, ಅವನ ಮತ್ತು ನನ್ನ ಪರಸ್ಪರ ಅಂತರವು ಇಲ್ಲದಂತಾಗುವದು. ॥ ೬೩ ॥ ಹತ್ತಾಳೆಯ ಕೆಲಬುಹೊಂದುವ ಗುಣವು ಇಲ್ಲದಂತಾದರೆ, ಬಂಗಾರವನ್ನು ಹುಡುಕುವ ಪರಿಶ್ರಮವನ್ನೇಕೆ ವಹಿಸಬೇಕು ? ಆ ಮೇಲೆ ಅದೇ ಬಂಗಾರ ವಾಗುವದು. (ಕಿಲುಬಿನಿಂದಲೇ ಹಿತ್ತಾಳೆಯು ಬೇರೆಯಾಗಿಯೂ, ಬಂಗಾರವಲ್ಲವೆಂದೂ ಗೊತ್ತಾಗುವದು) ॥ ೬೪ ॥ ಅದೇ ಪ್ರಕಾರ ಯಾವನು ಯಮನಿಯಮಾದಿ ಅಷ್ಟಾಂಗ ಯೋಗದಿಂದ ಶುದ್ಧನಾಗಿರುತ್ತಾನೋ ಮತ್ತು ತಪೋಜ್ಞಾನ ದಿಂದ ನಿರ್ಮಲನಾಗಿರುವನೋ ಅವನು ನನ್ನಂತೆಯೇ ಮದ್ರೂಪ ಆಗಿರುವನು. ಇದರಲ್ಲಿ ಸಂಶಯವಿಲ್ಲ. ॥ ೬೫ ॥

ಯೇ ಯಥಾ ಮಾಂ ಪ್ರಪದ್ಯಂತೇ ತಾಂಸ್ತಥೈವ ಭಜಾಮ್ಯಹಂ ।
ಮಮ ವರ್ತ್ಮಾನುವರ್ತಂತೇ ಮನುಷ್ಯಾಃ ಪಾರ್ಥಸರ್ವಶಃ ॥ ೧೧ ॥

[ಯೇ ಯಥಾ ಮಾಂ ಪ್ರಪದ್ಯಂತೇ ಇತಿ] ಯೇರ್ಪ್ರವೀ ತರೀ ಪಾಹೀ । ಜೇ ಜೈಸೇ ಮಾಝಾ ರಾಯೀ । ಭಜತೀ ತಯಾ ಮೀ ಹೀ । ತೈಸಾಚೀ ಭಜೇ ॥ ೬೬ ॥ ದೇಖೇ ಮನುಷ್ಯ ಜಾತ ಸಕಳ । ಹೇ ಸ್ವಭಾವತಾ ಭಜನಶೀಳ । ಜಾಹಾಲೇ ಅಸೇ ಕೇವಳ । ಮಾಝ್ಯಾ ಠಾಯೀ ॥ ೬೭ ॥ ಪರೀ ಜ್ಞಾನೇ ವೀಣ ನಾಶಿಲೇ । ಜೇ ಬುದ್ಧಿ ಭೇದಾಸಿ ಆಲೇ । ತೇಣೇಂ ತ್ಯಾ ಕಲ್ಪಿಲೇ । ಅನೇಕತ್ವೇ ॥ ೬೮ ॥ ಮ್ಹಣವೂನಿ ಅಭೇದೀ ಭೇದ ದೇಖತೀ । ಯಯಾ ಅನಾಮ ಯಾ ನಾಮೇ ಠೇವಿತೀ । ದೇವೀ ದೇವೋ ಮ್ಹಣತೀ । ಅಚರ್ಚಾತೇ ॥ ೬೯ ॥ ಜೇ ಸರ್ವತ್ರ ಸದಾ ಸಮ। ತೇಥ ವಿಭಾಗ ಅಧಮೋತ್ತಮ । ಘಡತಿ ವಶೇ ಸಂಭ್ರಮ । ವಿವಂಚಿತೀ ॥ ೭೦ ॥

ಅರ್ಥ— ಸಹಜವಾಗಿ ವಿಚಾರ ಮಾಡಿ ನೋಡಿದರೆ ನನ್ನನ್ನು ಯಾರು ಯಾವ ಭಾವದಿಂದ ಭಜಿಸುವರೋ, ಅವರಿಗೆ ನಾನು ಅದೇ ಭಾವನೆಯಿಂದ ಫಲ ಕೊಡುವೆನು. ॥ ೬೬ ॥ ಹೀಗೆ ನೋಡು ಮನುಷ್ಯಮಾತ್ರರೆಲ್ಲರೂ ಸ್ವಭಾವತಃ ನನ್ನ ಭಜನೆಮಾಡುವದರ ಕಡೆಗೇ ಕೇವಲ ಅವರ ಪ್ರವೃತ್ತಿ ಇರುವದು. ॥ ೬೭ ॥ ಆದರೆ ಜ್ಞಾನದ ಅಭಾವದಿಂದ 'ಒಬ್ಬನೇ ಆತ್ಮನು (ಸರ್ವಾಂತರಾತ್ಮನಾದ ಈಶ್ವರನು) ಸಕಲ ಭೂತ ಮಾತ್ರಗಳಲ್ಲಿ ಅವಿರ್ಭವಿಸಿ ಪ್ರಕಟನಾಗಿರುವ ನೆಂಬ ಜ್ಞಾನವು' ನಾಶವಾಗಿರುವದು. ಆದರಿಂದ ಬುದ್ಧಿಯ ಸ್ಥಳದಲ್ಲಿ ಭೇದ ವೃತ್ಪನ್ನವಾಗಿ, ನಾನೊಬ್ಬನೇ ಇದ್ದು ಆ ನನ್ನಲ್ಲಿ ಅನೇಕತ್ವವನ್ನು ಕಲ್ಪಿಸಿರುವರು ॥ ೬೮ ॥ ಅಂತಾ ಸರ್ವ ಭೂತ ಮಾತ್ರಗಳಲ್ಲಿ ನನ್ನ ವ್ಯಾಪ್ತಿ ಇದ್ದು ಅಭಿನ್ನನಾದ ನನ್ನಲ್ಲಿ ಭೇದವನ್ನು ಕಲ್ಪಿಸುತ್ತಾರೆ. ನಾನು ನಾಮರಹಿತನಿದ್ದು ನನಗೆ ಅನೇಕ ಹೆಸರಿಡುತ್ತಾರೆ. ಚರ್ಚೆ ಯನ್ನು ಮಾಡಲಿಕ್ಕೆ ಅಶಕ್ಯ ಅನಿರ್ವಾಚ್ಯನಿದ್ದೂ ನನಗೆ ಕೆಲವರು ದೇವ, ಹಲವರು ದೇವಿ, ಹೀಗೆ ಅನ್ನುತ್ತಾರೆ. ॥೬೯॥ ನಾನು ಸರ್ವತ್ರದಲ್ಲಿ ಯಾವಾಗಲೂ ಸಮದೃಷ್ಟಿಯುಳ್ಳವನಾಗಿದ್ದು ಆ ನನ್ನ ಸ್ಥಳದಲ್ಲಿ ಅವರು ಭ್ರಾಂತಚಿತ್ತದಿಂದ ನಾನು ಅಧಮನೂ, ಉತ್ತಮನೂ ಎಂದು ಭೇದ ಮಾಡುತ್ತಾರೆ. ॥ ೭೦ ॥

ಕಾಂಕ್ಷಂತಃ ಕರ್ಮಣಾಂ ಸಿದ್ಧಿಂ ಯಜಂತ ಇಹ ದೇವತಾಃ ।
ಕ್ಷಿಪ್ರಂ ಹಿ ಮಾನುಷೇ ಲೋಕೇ ಸಿದ್ಧಿರ್ಭವತಿ ಕರ್ಮಜಾ ॥ ೧೨ ॥

[ಕಾಂಕ್ಷಂತಃ ಕರ್ಮಣಾಮಿತಿ] ಮಗ ನಾನಾಹೇತು ಪ್ರಕಾರೇ । ಯಥೋಚಿತೇ ಉಪಚಾರೇ । ಸಾನಿಲೇ ದೇವತಾಂತರೇ । ಉಪಾಸತೀ ॥ ೭೧ ॥ ಏಥ ಜೇ ಜೇ ಅಪೇಕ್ಷಿತ । ತೇ ತೈಸೇಂಚಿ ಪಾವತೀ ಸಮಸ್ತ । ಪರೀ ತೇ ಕರ್ಮಫಳ ನಿಶ್ಚಿತ । ವೋಳಖತೂ ॥ ೭೨ ॥ ವಾಂಛೂನಿ ದೇತೇ ಫೇತೇ ಆಣಿಕ । ನಿಭ್ರಾಂತ ನಾಹೀ ಸಮ್ಯಕ । ಏಥ ಕರ್ಮಚಿ ಫಲಸೂಚಕ । ಮನುಷ್ಯಲೋಕೀ ॥ ೭೩ ॥ ಜೈಸೇ ಕ್ಷೇತ್ರೀ ಜೇ ಪೇರಿಜೇ । ತೇ ವಾಂಛೂನಿ ಆನ ನ ನಿವಜೇ । ಕಾ ಪಾಹಿಜೇ ತೇಚಿ ದೇಖಿಜೇ । ದರ್ಪ ಣಾಧಾರೇ ॥ ೭೪ ॥ ನಾತರೀ ಡೇಯಾತಳವಟೀ । ಜೈಸಾ ಆಪಲಾಚಿ ಬೋಲ ಕಿರೀಟೀ । ವಡಿಸಾದ ಹೋವುನಿ ಉರೀ । ನಿಮಿತ್ತಯೋಗೇ ॥ ೭೫ ॥ ತೈಸಾ ಸಮಸಾ ಯಾ ಭಜನಾ । ಮೀ ಸಾಕ್ಷೀಭೂತ ಪೈ ಅರ್ಜುನಾ । ಏಥ ಪ್ರತಿಫಳೇ ಭಾವನಾ । ಆಪುಲಾಲೀ ॥ ೭೬ ॥

ಅರ್ಥ— ಆ ಮೇಲೆ ಮನಸಿನಲ್ಲಿ ನಾನಾತರದ ಕಲ್ಪನೆಗಳನ್ನು ಮಾಡಿ ಯಾವದು ಯಾರಿಗೆ ಪ್ರೀಯವಾಗಿರುವದೋ, ಆ ಉಪಚಾರದಿಂದ ಅನೇಕ ದೇವರನ್ನು ಕಲ್ಪಿಸಿ ಆ ದೈವತಗಳ ಉಪಾಸನೆಯನ್ನು ಮಾಡುತ್ತಾರೆ. ॥ ೭೧ ॥ ಈ ಪ್ರಕಾರ ಯಾವನಿಗೆ ಯಾವ ಇಚ್ಛೆಯಿರುವದೋ, ಅವನಿಗೆ ಅದೇ ಪ್ರಾಪ್ತವಾಗುತ್ತದೆ. ಆದರೆ ಇದು ಅವರ ಕರ್ಮದ ಫಲವಿರುವದೆಂದು ನೀನು ನಿಶ್ಚಯದಿಂದ ನಂಬು. ॥ ೭೨ ॥ ನಿಜವಾಗಿ ನೋಡಿದರೆ ಕೊಡುವವನೂ, ಇಲ್ಲವೇ ತೆಗೆದುಕೊಳ್ಳುವವನೂ, ಕರ್ಮದ ಹೊರತು ಇನ್ನಾವದೂ ಅಲ್ಲ. ಈ ನರಲೋಕದಲ್ಲಿ ಕರ್ಮದಿಂದಲೇ ಫಲ ಪ್ರಾಪ್ತಿಯಾಗುತ್ತದೆ. । ೭೩ ॥ ಭೂಮಿಯಲ್ಲಿ ಯಾವ ಧಾನ್ಯವನ್ನು ಬಿತ್ತುವನೋ ಅದೇ ಧಾನ್ಯವು ಅಂಕುರಿಸುವದೇ ಹೊರ್ತು ಮತ್ತೊಂದು ಹುಟ್ಟುವದಿಲ್ಲ. ಇಲ್ಲವೇ ಕನ್ನಡಿಯಲ್ಲಿ ಯಾವದು ನೋಡುತ್ತಿರುವದೋ ಅದೇ ದೃಷ್ಟಿಗೆ ಬೀಳುವದು. ॥೭೪॥ ಇಲ್ಲವೇ ಅರ್ಜುನಾ! ಗಿರಿಕಂದರಗಳಲ್ಲಿ ಯಾವ ಪ್ರಕಾರ ತಮ್ಮ ಶಬ್ದವು ತಾವು ಮಾತಾಡಿದಂತೆಯೇ ಪ್ರತಿಧ್ವನಿಯಾಗಿ ಕೇಳಬರುತ್ತದೋ, ॥ ೭೫ ॥ ಅದೇ ಪ್ರಕಾರ ಅರ್ಜುನಾ, ಪ್ರತಿಒಂದು ಉಪಾಸನೆಗೆ ನಾನೇ ಆಧಾರ (ಸಾಕ್ಷಿ) ಭೂತ ನಾಗಿರುತ್ತೇನೆ. ಆದುದರಿಂದ ಪ್ರತಿಯೊಬ್ಬರಿಗೆ ಅವರವರ ಭಾವನೆಯಂತೆ ಫಲಪ್ರಾಪ್ತಿಯಾಗುತ್ತದೆ. ॥ ೭೬ ॥

ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮವಿಭಾಗಶಃ ।
ತಸ್ಯ ಕರ್ತಾರಮಪಿ ಮಾಂ ವಿದ್ಧ್ಯಕರ್ತಾರಮವ್ಯಯಂ ॥ ೧೩ ॥

[ಚಾತುರ್ವರ್ಣ್ಯ ಮಿತಿ] ಆತಾ ಯಾಚಿ ನರೀ ಜಾಣ । ಚಾರ್ಹೀ ಹೇ ವರ್ಣ । ಸೃಜಿಲೇ ಮ್ಯಾ ಗುಣ । ಕರ್ಮವಿಭಾಗೇ ॥ ೭೭ ॥ ಜೇ ಪ್ರಕೃತೀ ಚೇನಿ ಆಧಾರೇ । ಗುಣಾಚೇನಿ ವ್ಯಭಿಚಾರೇ । ಕರ್ಮೇ ತದನುಸಾರೇ । ವಿವಂಚಿಲೀ ॥ ೭೮ ॥ ಏಥ ಏಕಚಿ ಹೇ ಧನುಷ್ಯ ಪಾಣೀ । ಪರೀ ಜಾಪಾಲೇ ಗಾಚಹೂ ವರ್ಣೀ । ಐಸೀ ಗುಣ ಕರ್ಮ ಕಡಸಣೀ । ಕೇಲೀ ಸಹಜೇ ॥ ೭೯ ॥ ಮ್ಹಣೋನಿ ಆ ಇಕೇ ಪಾರ್ಥಾ । ಹೇ ವರ್ಣಭೇದ ಸಂಸ್ಥಾ । ಮೀ ಕರ್ತಾ ನವ್ಹೇ ಸರ್ವಥಾ । ಯಾಚಿಲಾಗೀ ॥ ೮೦ ॥

ಅರ್ಥ— ಇದೇ ಪ್ರಕಾರ (ಸತ್ವ, ರಜ, ತಮ ಈ ಮೂರು ಗುಣಗಳು ಶಮ, ದಮ, ಶೌರ್ಯ, ತೇಜ, ಕೃಷಿ, ವಣಿಜ್ಯ, ಸೇವಾ ಮುಂತಾದ ಕರ್ಮಗಳಿಂದ) ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಮುಂತಾದ ಗುಣ ಕರ್ಮ ಗಳ ವಿಭಾಗ ಮಾಡಿ ಈ ನಾಲ್ಕು ವರ್ಣಗಳನ್ನು ನಾನೇ ಉತ್ಪನ್ನ ಮಾಡಿರುವೆನು. ॥ ೭೭ ॥ ಮತ್ತು ಆ ನಾಲ್ಕು ವರ್ಣಗಳ ಕರ್ಮಗಳನ್ನು ತಮ್ಮ ತಮ್ಮ ಪ್ರಕೃತಿ ಧರ್ಮದಿಂದ ಮತ್ತು ಗುಣತಾರತಮ್ಯದಿಂದ ವ್ಯವಸ್ಥೆಮಾಡಿದ್ದೇನೆ. ॥ ೭೮ ॥ ಧನುರ್ಧರಾ! ಈ ಸರ್ವ ಜನರೂ ಒಂದೇ ಇದ್ದು ಗುಣ ಕರ್ಮಗಳ ಯೋಗದಿಂದ ಅವರ ನಾಲ್ಕು ವರ್ಣಗಳು ಸಹಜವಾಗಿಯೇ ಉಂಟಾದವು. । ೭೯ ॥ ಗುಣ ಕರ್ಮಾನುರೂಪ ವಿವೇಕ-ವಿಚಾರದಿಂದಲೇ ವರ್ಣಭೇದದ ವ್ಯವಸ್ಥೆ ಯಾಗಿರುತ್ತದೆ. ಆದುದರಿಂದ ಅರ್ಜುನಾ, ಈ ಬ್ರಾಹ್ಮಣ ಕ್ಷತ್ರಿಯಾದಿ ವರ್ಣಭೇದದ ಸ್ಥಾಪನೆಯ ಕರ್ತೃ ಮೂಲತಃ ನಾನಿರುವದಿಲ್ಲ. ॥ ೮೦ ॥

ನ ಮಾಂ ಕರ್ಮಾಣಿ ಲಿಂಪಂತಿ ನ ಮೇ ಕರ್ಮಫಲೇಸ್ಪೃಹಾ ।
ಇತಿ ಮಾಂ ಯೋಽಭಿಜಾನಾತಿ ಕರ್ಮಭಿರ್ನ ಸ ಬದ್ಧ್ಯತೇ ॥ ೧೪ ॥

[ನ ಮಾಮಿತಿ] ಹೇ ಮಜಚಿಸ್ತವ ಜಾಹಾಲೇ । ಪರೀ ಮ್ಯಾ ನಾಹೀ ಕೇಲೇ । ಐಸೇ ಜೇಣೇ ಜಾಣಿತಲೇ । ತೋ ಸುಟಲಾ ಗಾ ॥ ೮೧ ॥

ಅರ್ಥ— ಈ ವರ್ಣಭೇದವು ಒಂದು ವೇಳೆ ನನ್ನಿಂದಲೇ ಆಗಿರುತ್ತದೆ, ಅಂದರೆ ನನ್ನ ಸೃಷ್ಟಿಯಿಂದಲೇ ಆಗಿರುತ್ತದೆ. ಆದರೂ ಅದನ್ನು ನಾನು ಮಾಡಿರುವದಿಲ್ಲ. ಹೀಗೆ ಯಾವನು ತಿಳಿಯುವನೋ ಅವನೇ ಕರ್ಮಾತೀತನಾಗಿರುವನು. ॥ ೮೧ ॥

ಏವಂ ಜ್ಞಾತ್ವಾ ಕೃತಂ ಕರ್ಮ ಪೂರ್ವೈರಪಿ ಮುಮುಕ್ಷುಭಿಃ ।
ಕುರು ಕರ್ಮೈವ ತಸ್ಮಾತ್ತ್ವಂ ಪೂರ್ವೈಃ ಪೂರ್ವತರಂ ಕೃತಂ ॥ ೧೫ ॥

[ಏವಂ ಜ್ಞಾತ್ವೇತಿ] ಮಾಗೀಲ ಮುಮುಕ್ಷು ಜೇ ಹೋತೇ । ತಿಹೀ ಐಸಿಯಾ ಜಾಣೋನಿಯಾಂತೇ ಕರ್ಮಕೇಲೇ ಸಮಸ್ತೀ ಧನುರ್ಧರಾ ॥ ೮೨ ॥ ಪೇರಿತಾ ಬೀಜೇ ಜೈಸೀ ದಗ್ಧಲೀ । ಸುಗವತೀಚಿ ಪೇರಿಲೀ । ತೈಸೀ ಕರ್ಮೇಚಿ ಪರೀ ತಯಾ ಜಾಹಾಲೀ । ಮೋಕ್ಷಹೇತು ॥ ೮೩ ॥ ಏಥ ಆಣಿಕಹೀ ಏಕ ಅರ್ಜುನಾ । ಕರ್ಮಾ ಕರ್ಮ ವಿವಂಚನಾ । ಆಪುಲಿಯೇ ಚಾಡೇಸಜ್ಞಾನಾ । ಯೋಗ್ಯನೋಹೇ ॥ ೮೪ ॥

ಅರ್ಥ— ಅರ್ಜುನಾ! ಪೂರ್ವಕಾಲದಲ್ಲಿ ಆಗಿಹೋದ ಮುಮುಕ್ಷಗಳು ಕೂಡ ಇದೇ ಪ್ರಕಾರದಿಂದಲೇ ನನ್ನನ್ನು ತಿಳಿದು ಸರ್ವಕರ್ಮಗಳನ್ನು ಮಾಡಿದರು. ॥ ೮೨ ॥ ಆದರೆ ಯಾವ ಪ್ರಕಾರ ಹುರಿದ ಬೀಜಗಳನ್ನು ಬಿತ್ತಿದರೆ ಮೂಲತಃ ನಾಟುವದೇ ಇಲ್ಲವೋ, ಅದೇ ಪ್ರಕಾರ ಅವರ ನಿಷ್ಕಾಮಕರ್ಮಗಳೇ ಅವರ ಮೋಕ್ಷಪ್ರಾಪ್ತಿಗೆ ಕಾರಣ ಗಳಾಗುತ್ತವೆ. ॥ ೮೩ ॥ ಮತ್ತು ಅರ್ಜುನಾ! ಅದರಲ್ಲಿ ಇನ್ನೂ ಒಂದು ಮಾತು ಹೀಗೆ ಇರುವದು. ಅದು ಹೇಗೆಂದರೆ, ಇದು ಕರ್ಮವಿರುವದೋ ಅಥವಾ ಅಕರ್ಮವಿರುವದೋ ಇದರ ವಿಚಾರವು ತಮ್ಮ ಮತದಿಂದಲೇ ನಿಶ್ಚಯಿಸುವದು ಬುದ್ಧಿವಂತರಿಗೆ ಕೂಡಾ ಕಠಿಣವಾಗಿರುವದು. ॥ ೮೪ ॥

ಕಿಂ ಕರ್ಮ ಕಿಮಕರ್ಮೇತಿ ಕವಯೋಽಪ್ಯತ್ರ ಮೋಹಿತಾಃ ।
ತತ್ತೇ ಕರ್ಮ ಪ್ರವಕ್ಷ್ಯಾಮಿ ಯಜ್ಜ್ಞಾತ್ವಾ ಮೋಕ್ಷ್ಯಸೇಽಶುಭಾತ್ ॥ ೧೬ ॥

[ಕಿಂ ಕರ್ಮ ಕಿಮು ಕರ್ಮೇತಿ] ಕರ್ಮ ವ್ಯುತ್ಪತ್ತಿ ತೇ ಕವಣ । ಅಥವಾ ಅಕರ್ಮೀ ಕಾಯ ಲಕ್ಷಣ । ಐಸೇ ವಿಚಾರತಾ ವಿಚಕ್ಷಣ । ಗುಂಫೋನಿ ರೀಲೆ ॥ ೮೫ ॥ ಜೈಸೇ ಕಾ ಕುಡೇ ನಾಣೇ । ಖರ್ಯಾಚೇನಿ ಸಾರಖೇಪಣೇ । ಡೋಳ್ಯಾಚೇಹೀ ದೇಖಣೇ । ಸಂಶಯೀ ಘಾಲೀ ॥ ೮೬ ॥ ತೈಸೇ ನೈಷ್ಕರ್ಮ್ಯ ತೇಚೇನಿ ಭ್ರಮೇ । ಗಿವಸಿಜತ ಆಹಾತೀ ಕರ್ಮೇ । ಜೇ ದುಜೀ ಸೃಷ್ಟಿ ಮನೋ ಧರ್ಮೇ । ಕರೂ ಸಕತೀ ॥ ೮೭ ॥ ವಾಚೂನಿ ಮೂರ್ಖಾಚೀ ಗೋಠೀ ಕಾಯಸೀ । ಏಥ ಮೋಹಲೇ ಗಾ ದೀರ್ಘದರ್ಶಿ । ವ್ಯುತ್ಪನೋನಿ ಆತಾ ತೇಚಿ ಪರಿಯೇಸೀ । ಸಾಂಗೇನ ತುಜ ॥ ೮೮ ॥

ಅರ್ಥ— ಕರ್ಮವೆಂದು ಯಾವದಕ್ಕೆ ಅನ್ನುತ್ತಾರೆ? ಅಕರ್ಮದ ಲಕ್ಷಣವೇನು? ಈ ಮಾತಿನ ವಿಚಾರ ಮಾಡುತ್ತ ಮಾಡುತ್ತ ಜ್ಞಾನಿಗಳು ಕೂಡಾ ಗೊಂದಲದಲ್ಲಿ ಬಿದ್ದಿರುವರು. ॥ ೮೫ ॥ ಹೇಗೆ ಹೊಟ್ಟು ನಾಣ್ಯಗಳು ನಿಜವಾದ ನಾಣ್ಯದಂತೆ ಪ್ರತ್ಯಕ್ಷ ತೋರುವದರಿಂದ ಚಿನಿವಾಲನ ಕಣ್ಣಿಗೆ ಸಹ ಸಂಶಯವುಂಟಾಗುತ್ತದೊ, ॥ ೮೬ ॥ ಹಾಗೆಯೇ, ಮನಸಿನಲ್ಲಿ ತಂದರೆ ಸಂಕಲ್ಪ ಮಾತ್ರದಿಂದ ಪ್ರತಿ ಸೃಷ್ಟಿಯನ್ನೇ ನಿರ್ಮಾಣಮಾಡುವ ಸಾಮರ್ಥ್ಯವು

ಯಾರಿಗೆ ಇರುತ್ತದೋ ಅವರಿಗೆ ಸಹ ನೈಷ್ಕರ್ಮ್ಯದ ಸ್ಥಿತಿಯು ತಿಳಿಯುವದಿಲ್ಲ. ಅದರಿಂದ ಅವರು ಭ್ರಮೆಯಿಂದ ಕರ್ಮದ ಪಾಶದಲ್ಲಿ ಶಿಲುಕಿ ಬಿದ್ದಿರುತ್ತಾರೆ. ॥ ೬೭ ॥ ಕರ್ಮವಾವುದು, ಅಕರ್ಮವಾವುದು ಎಂಬ ವಿಷಯದ ವಿಚಾರದಲ್ಲಿ ದೊಡ್ಡ ದೊಡ್ಡ ವಿದ್ವಾಂಸರು ಸಹ ಭ್ರಮೆಪಡುವರು. ಅಂದಬಳಿಕ ಅಜ್ಞಾನಿಗಳ (ಮೂರ್ಖರ) ಮಾತನ್ನೇನು ಹೇಳಬೇಕು? ಆದುದರಿಂದ ಆ ಕರ್ಮಜ್ಞಾನವನ್ನು ನಿನಗೆ ಹೇಳುತ್ತೇನೆ ಕೇಳು. ॥ ೬೮ ॥

ಕರ್ಮಣ್ಯೋಹ್ಯಪಿ ಬೋದ್ಧವ್ಯಂ ಬೋದ್ಧವ್ಯಂ ಚ ವಿಕರ್ಮಣಃ ।
ಅಕರ್ಮಣಶ್ಚ ಬೋದ್ಧವ್ಯಂ ಗಹನಾ ಕರ್ಮಣೋ ಗತಿಃ ॥ ೧೭ ॥

[ಕರ್ಮಣ್ಯೋಹ್ಯಪೀತಿ] ತರೀ ಕರ್ಮ ವ್ಹ್ಹಣಿಜೇ ಸ್ವಭಾವೇ । ಜೇಣೇ ವಿಶ್ವಾಕಾರ ಸಂಭವೇ । ತೇ ಸಮ್ಯಕ ಆಧೀ ಜಾಣಾವೇ । ಲಾಗೇ ಏಥ ॥ ೬೯ ॥ ಮಗ ವರ್ಣಾಶ್ರಮಾಸಿ ಉಚಿತ । ಜೇ ವಿಶೇಷ ಕರ್ಮ ವಿಹಿತ । ತೇಹೀ ವೋಳಖಾವೇ ನಿಶ್ಚಿತ । ಉಪಯೋಗೇಸೀ ॥ ೭೦ ॥ ಪಾಠೀ ಜೇ ನಿಷಿದ್ಧ ವ್ಹ್ಹಣಿಪೇ । ತೇಹೀ ಬುಝೂವೇ ಸ್ವರೂಪೆ । ಯೇತುಲೇನಿ ಕಾಹೀ ನ ಗುಂಫೇ । ಆಪೈಸೇಚೀ ॥೭೧॥ ಯೇರ್ಯವೀ ಜಗ ಹೇ ಕರ್ಮಾಧೀನ । ಐಸಿಯಾಚೀ ವ್ಯಾಪ್ತೀಗಹನ । ಪರೀ ತೇ ಅಸೋ ಆತಕೇ ಚಿನ್ಹ । ಪ್ರಾಪ್ತಾಚೇಗಾ ॥ ೭೨ ॥

ಅರ್ಥ— ಈಶ್ವರನ ಸ್ಥಳದಲ್ಲಿ ಜೀವಗಳ ಕರ್ಮಾನುಸಾರವಾಗಿ ಈ ವಿಶ್ವರಚನೆಯನ್ನು (ಉತ್ಪನ್ನ)ಮಾಡುವ ಸಂಕಲ್ಪವು, ಕರ್ಮವೆಂದು ಕರೆಯಲ್ಪಡುವದು. ಅದರ ಯಥಾರ್ಥ ಸ್ವರೂಪವನ್ನು ತಿಳಿದುಕೊಳ್ಳಲೇಬೇಕು. ।೬೯॥ ಆ ಮೇಲೆ ಯಾವ ಕರ್ಮವು ವರ್ಣಾಶ್ರಮಕ್ಕೆ ವಿಹಿತವಾದೀತು, (ಬ್ರಾಹ್ಮಣಾದಿ ನಾಲ್ಕುವರ್ಣದವರಿಗೆ, ಮತ್ತು ಬ್ರಹ್ಮಚರ್ಯಾದಿ ನಾಲ್ಕು ಆಶ್ರಮಗಳಿಗೆ ಯೋಗ್ಯವಾದೀತು) ಮತ್ತು ವೇದದಲ್ಲಿ ಹೇಳಿದ ಅನುಷ್ಠಾನವನ್ನು ಹೇಗೆ ಮಾಡಬೇಕು, ಮತ್ತು ಅದರ ಫಲವೇನು ಎಂಬುದಿದನ್ನು ಗೊತ್ತು ಮಾಡಿಕೊಳ್ಳಬೇಕು. ।। ೭೦ ॥ ಯಾವನು ಫಲದಿಂದ ಯುಕ್ತವಾದ ಸರ್ವ ಕರ್ಮಗಳನ್ನು ನಿಷಿದ್ಧವೆಂದು ತಿಳಿಯುವನೋ ಅವನು ಪರಮಾತ್ಮ ಸ್ವರೂಪವೇ ಆಗಿರುತ್ತಾನೆ. ಈ ಯಥಾರ್ಥ ಜ್ಞಾನದಿಂದ ಪುರುಷನು ಸಹಜವೇ ಕರ್ಮದ ಬಂಧನದಲ್ಲಿ ಶಿಲುಕುವದಿಲ್ಲ. ॥ ೭೧ ॥ ನೋಡಿದರೆ ಜಗತ್ತು ಕರ್ಮಾಧೀನವಾಗಿರುವದು. ಕರ್ಮದ ವ್ಯಾಪ್ತಿಯು ದುಸ್ತರವಾಗಿರುವದು. ಅದಂತೂ ಇರಲಿ, ಮೇಲೆ ಹೇಳಿದಂತೆ ಕರ್ಮವೆಂದರೇನು? ವಿಕರ್ಮವೆಂದರೇನು! ಇದರ ಯಥಾರ್ಥ ಜ್ಞಾನವನ್ನು ಪ್ರಾಪ್ತಿಮಾಡಿಕೊಂಡ ಪುರುಷರ ಲಕ್ಷಣವನ್ನು ಹೇಳುತ್ತೇನೆ ಕೇಳು. ॥ ೭೨ ॥

ಕರ್ಮಣ್ಯಕರ್ಮ ಯಃ ಪಶ್ಯೇದಕರ್ಮಣಿ ಚ ಕರ್ಮ ಯಃ ।
ಸ ಬುದ್ಧಿಮಾನ್ಮನುಷ್ಯೇಷು ಸ ಯುಕ್ತಃ ಕೃತ್ಸ್ನ ಕರ್ಮಕೃತ್ ॥ ೧೮ ॥

[ಕರ್ಮಣ್ಯ ಕರ್ಮಯಃ ಪಶ್ಯೇದಿತಿ] ಜೋ ಸಕಳಕರ್ಮೀ ವರ್ತತಾ । ದೇಖೇ ಆಪುಲೀ ನೈಷ್ಕರ್ಮ್ಯತಾ । ಕರ್ಮಸಂಗೇ ನಿರಾಶತಾ । ಫಳಾಚಿಯಾ ॥ ೭೩ ॥ ಆಣಿ ಕರ್ತವ್ಯತೇಲಾಗೀ । ಜಯಾ ದುಸರೇ ನಾಹೀ ಜಗೀ । ಐಸಿಯಾ ನೈಷ್ಕರ್ಮ್ಯತಾ ತರೀ । ಚಾಂಗೀ । ಬೋಧಲಾ ಅಸೇ ॥ ೭೪ ॥ ತರೀ ಕ್ರಿಯಾ ಕಲಾಪ ಆಥವಾ । ಆಚರತ ದಿಸೇ ಬರವಾ । ತೋಚಿ ತೋ ಯೇ ಚಿನ್ಹೀ ಜಾಣಾವಾ । ಜ್ಞಾನಿಯಾಗಾ ॥ ೭೫ ॥ ಜೈಸಾ ಕಾ ಜಳಾ ಪಾಶೀ ಉಭಾಠಾಕೇ । ತೋ ಜರೀ ಆಪಣ ಪೆ ಜಳಾಮಾಜೀ ದೇಖೇ । ತರೀ ತೋ ನಿಭ್ರಾಂತ ವೋಳಖೇ । ವ್ಹ್ಹಣೇ ಮೀ ವೇಗಳಾ ಆಹೇ ॥ ೭೬ ॥ ಅಥವಾ ನಾವೇ ಹನ ಜೋ ರಿಗೇ । ತೋ ಥಡಿಯೇಚಿ ರುಖ ಜಾತಾ ದೇಖೇ ನೇಗೇ । ತೇಚಿ ಸಾಚೋಕಾರೇ ಪಾಹೋ ಜೋ ಲಾಗೇ । ತನ ರುಖ ವ್ಹ್ಹಣೇ ಅಚಳ ॥ ೭೭ ॥ ತೈಸೇ ಸರ್ವ ಕರ್ಮೀ ಅಸಣೇ । ತೇ ಫುಡೇ ಮಾನೂನಿ ವಾಯಾಣೇ । ಮಗ ಆಪಣ ಜೋ ಜಾಣೇ । ನೈಷ್ಕರ್ಮ್ಯ ಐಸಾ ॥ ೭೮ ॥ ಆಣಿ ಉದೋ

ಅಸ್ಸಾ ಚೇನಿ ಪ್ರಮಾಣೇ । ಜೈಸೇ ನ ಚಲತಾ ಸೂರ್ಯಾಚೇ ಚಾಲಣೇ । ತೈಸೇ ನೈಷ್ಕರ್ಮ್ಯ ತತ್ವ
ಜಾಣೇ । ಕರ್ಮಿಂಚಿ ಅಸತಾ ॥ ೯೪ ॥ ತೋ ಮನುಷ್ಯಾ ಸಾರಿಖಾ ತರೀ ಆವಡೇ । ಪರೀ ಮನುಷ್ಯತ್ವ
ತಯಾ ನ ಘಡೇ । ಜೈಸೇ ಜಳಾಮಾಜೀ ನ ಬುಡೇ । ಭಾನುಬಿಂಬ ॥ ೧೦೦ ॥ ತೇಣೇ ನ ಪಾಹತಾ
ವಿಶ್ವ ದೇಖಿಲೇ । ನ ಕರಿತಾ ಸರ್ವಕೇಲೇ । ನ ಭೋಗಿತಾ ಭೋಗಿಲೇ । ಭೋಗ್ಯಜಾತ ॥ ೧ ॥
ಏಕೇಚಿ ಠಾಯೀ ಬೈಸಲಾ । ಪರೀ ಸರ್ವತ್ರ ತೋಚಿ ಗೇಲಾ । ಹೇ ಅಸೋ ವಿಶ್ವಜಾಹಾಲಾ ।
ಆಂಗೇಚಿತೋ ॥ ೨ ॥

ಅರ್ಥ— ಯಾವನು ಫಲಾಪೇಕ್ಷೆಯನ್ನು ಬಿಟ್ಟು ಸಕಲಕರ್ಮಗಳ ಆಚರಣ ಮಾಡುತ್ತಾನೋ ಅವನು ಅಕರ್ಮ ವನ್ನು ತಾನು ಮಾಡುತ್ತೇನೆಂದು ತಿಳಿಯುವದಿಲ್ಲ. ॥ ೯೩ ॥ ಮತ್ತು ಅವನು ನಿಷ್ಕಾಮ ಕರ್ಮದ ವಿಷಯದಲ್ಲಿ ಮಾತ್ರ ಚನ್ನಾಗಿ ತಿಳಿದವನಾಗಿರುತ್ತಾನೆ. ಅವನಿಗೆ ಆತ್ಮಸ್ವರೂಪದ ಹೊರ್ತು ಅನ್ಯವಾವದೂ ತೋರುವದಿಲ್ಲ. ಆದುದರಿಂದ ಅವನ ಕರ್ತವ್ಯವು ಇಲ್ಲದಂತೆ ಆಗಿರುತ್ತದೆ. ॥ ೯೪ ॥ ಲೋಕದೃಷ್ಟಿಯಿಂದ ಅವನು ಸರ್ವ ಕರ್ಮಗಳನ್ನು ಒಳ್ಳೇ ಪ್ರೀತಿಯಿಂದ ಆಚರಿಸುತ್ತಾನೆಂದು ಕಂಡುಬಂದರೂ ಅವನು ನಿಜವಾದ ಜ್ಞಾನಿಯೇ ಇರುತ್ತಾನೆ. ॥ ೯೫ ॥ ಒಬ್ಬಾ ನೊಬ್ಬ ಮನುಷ್ಯನು ಜಲಾಶಯದ ದಂಡೆಯಲ್ಲಿ ನಿಂತರೆ ತನ್ನ ಪ್ರತಿಬಿಂಬವನ್ನು ನೀರಿನಲ್ಲಿ ಕಾಣುತ್ತಿದ್ದರೂ ಅವನು ನೀರಿನಿಂದ ಬೇರೆಯಾಗಿರುವೆನೆಂದು ಚನ್ನಾಗಿ ಅರಿತಿರುತ್ತಾನೆ. ॥ ೯೬ ॥ ಅಥವಾ ನಾವಿನಲ್ಲಿ ಕುಳಿತು ಹೋಗುವ ಮನುಷ್ಯನಿಗೆ ನದಿಯ ದಂಡೆಯ ಮೇಲಿನ ಗಿಡಗಳು ಓಡುತ್ತಿರುವಂತೆ ಕಂಡು ಬರುತ್ತವೆ. ಆದರೆ ನಿಜವಾಗಿ ವಿಚಾರ ಮಾಡಿ ನೋಡಿದರೆ ಆ ಗಿಡಗಳು ಅಚಲವಾಗಿರುತ್ತವೆಂಬುದು ಕಂಡು ಬರುತ್ತದೆ. ॥ ೯೭ ॥ ಅದೇ ಪ್ರಕಾರ ಸರ್ವ ಕರ್ಮಗಳನ್ನು ಮಾಡುತ್ತಿರಲಾಗಿ ಆ ಕರ್ಮಗಳು ತನ್ನಲ್ಲಿ ಪ್ರತೀತಿಗೆ ಬರುತ್ತವೆ. ಅವು ನಿಜವಾಗಿ ತಾನು ಮಾಡುವ ದಿಲ್ಲೆಂಬುದು ಸ್ಪಷ್ಟವಾಗಿ ಕಂಡುಬರುತ್ತದೆ. ಕರ್ಮರಹಿತ ಸರ್ವಸ್ವತಂತ್ರನಾದ ಪರಮಾತ್ಮನೇ ನಮ್ಮಲ್ಲಿ ನಿಂತು ಮಾಡಿಸುತ್ತಾನೆಂದು ಅವನು ತಿಳಿದಿರುತ್ತಾನೆ. ॥ ೯೮ ॥ ಮತ್ತು ಸೂರ್ಯನ ಉದಯಾಸ್ತಗಳನ್ನು ನೋಡಿ, ಇಷ್ಟೇ ಪ್ರಮಾಣದಿಂದಲೇ ಅನನು ನಡೆಯುತ್ತಾನೆಂದು ತಿಳಿಯುವದು ಅಸತ್ಯವು; ಅದರಂತೆ ಕರ್ಮಾಚರಣ ಮಾಡುದಾಗ್ಯೂ ಅವುಗಳನ್ನು ತಾನು ಮಾಡುತ್ತಿರುವದಿಲ್ಲನೆಂದು ಅವನು ತಿಳಿದಿರುತ್ತಾನೆ, (ಕರ್ತೃ ಈಶ್ವರನೆಂದು ನಂಬಿರುತ್ತಾನೆ) ॥೯೯॥ ಸೂರ್ಯನ ಪ್ರತಿಬಿಂಬವು ನೀರಿನಲ್ಲಿದ್ದರೂ ಸೂರ್ಯನು ಕಡೆಗೆಯೇ ಹೇಗೆ ಇರುವನೋ ಹಾಗೆಯೇ ಅವನು, ಮಾನವ ನಂತೆ ತೋರಿದರೂ ಪ್ರತ್ಯಕ್ಷ ಪರಬ್ರಹ್ಮನ ಪ್ರತಿಬಿಂಬವೇ ಆಗಿರುವನು. ॥ ೧೦೦ ॥ ಅವನು ನೋಡದೇ ವಿಶ್ವವನ್ನು ಕಂಡಿರುವನು. ಏನೂಮಾಡದೇ ಸರ್ವವನ್ನೂ ಪೂರ್ತಿಗೊಳಿಸಿರುವನು. ಏನನ್ನೂ ಭೋಗಿಸದೇ ಸರ್ವಭೋಗ್ಯ ವಸ್ತುಗಳನ್ನೂ ಸುಖಿಸಿರುವನು. ॥ ೧೦೧ ॥ ಅವನು ಒಂದೇ ಸ್ಥಳದಲ್ಲಿ ಕುಳಿತರೂ ಸರ್ವತ್ರದಲ್ಲಿಯೂ ಅಲೆದಾಡಿರು ವನು. ಇದಂತೂ ಇರಲಿ, ಬಹಳ ಹೇಳುವದೇನು, ಸರ್ವ ವಿಶ್ವವೇ ತಾನಾಗಿರುವನು. ॥ ೧೦೨ ॥

ಯಸ್ಯ ಸರ್ವೇ ಸಮಾರಂಭಾಃ ಕಾಮಸಂಕಲ್ಪ ವರ್ಜಿತಾಃ ।
ಜ್ಞಾನಾಗ್ನಿದಗ್ಧ ಕರ್ಮಾಣಂ ತಮಾಹುಃ ಪಂಡಿತಂ ಬುಧಾಃ ॥ ೧೯ ॥

[ಯಸ್ಯ ಸರ್ವ ಇತಿ] ಜಯಾ ಪುರುಷಾಚ್ಯಾ ಠಾಯೀ । ಕರ್ಮಾಚಾ ತರೀ ಖೇದ ನಾಹೀ ।
ಪರೀ ಫಳಾಪೇಕ್ಷಾ ಕಾಂಹೀ । ಸಂಚರೇನಾ ॥ ೩ ॥ ಆಣಿ ಹೇಕರ್ಮ ಮೀ ಕರೀನ । ಅಥವಾ ಆದರಿಲೇ
ಸಿದ್ಧಿ ನೇಉನ । ಯೇಣೇ ಸಂಕಲ್ಪೇಹೀ ಜಯಾಚೇ ಮನ । ವಿಟಾಳೀನಾ ॥೪॥ ಜ್ಞಾನಾಗ್ನೀಚೇನಿ ಮುಖೇ ।
ಜೇಣೇ ಜಾಳಿಲೇ ಕರ್ಮೇ ಅಶೇಖೇ । ತೋ ಪರಬ್ರಹ್ಮಚಿ ಮನುಷ್ಯ ವೇಖೇ । ವೋಳಖು ತೂ ॥೫॥

ಅರ್ಥ— ಯಾವ ಪುರುಷನಿಗೆ ಕರ್ಮಾಚರಣದ ವಿಷಯದಲ್ಲಿ ಖೇದವಾಗುವದಿಲ್ಲವೋ, ಮತ್ತು ಕರ್ಮಫಲದ ಇಚ್ಛೆಯು ಯಾವನ ಮನಸ್ಸಿನಲ್ಲಿ ಉದ್ಭವಿಸಿರುವದಿಲ್ಲವೋ, ॥ ೩ ॥ ಮತ್ತು ಯಾವದಾದರೊಂದು ಕರ್ಮವನ್ನು

ಮಾಡೇನು ಅಥವಾ ಪ್ರಾರಂಭನಮಾಡಿದ ಒಂದಾನೊಂದು ಕರ್ಮವನ್ನು ಪೂರ್ಣಮಾಡೇನು ಇಂತಹ ಸಂಕಲ್ಪವನ್ನು ಕೂಡಾ ಯಾವನ ಮನಸ್ಸು ಸ್ಪರ್ಶಮಾಡುವದಿಲ್ಲವೋ, ॥ ೪ ॥ ಮತ್ತು ಜ್ಞಾನರೂಪ ಅಗ್ನಿಯ ಮುಖದಲ್ಲಿ ಯಾವನು ತನ್ನ ಸರ್ವಕರ್ಮಗಳನ್ನು ಸುಟ್ಟು ಬಿಟ್ಟಿರುವನೋ, ಅಂಥ ಆ ಪುರುಷನು ಮನುಷ್ಯರೂಪದಿಂದ ಪರಬ್ರಹ್ಮನೇ ಅವತರಿಸಿರುವನೆಂದು ತಿಳಿ. ॥ ೫ ॥

ತ್ಯಕ್ತ್ವಾ ಕರ್ಮಫಲಾಸಂಗಂ ನಿತ್ಯತೃಪ್ತೋ ನಿರಾಶ್ರಯಃ ।
ಕರ್ಮಣ್ಯಭಿ ಪ್ರವೃತ್ತೋಽಪಿ ನೈವ ಕಿಂಚಿತ್ಕರೋತಿ ಸಃ ॥ ೨೦ ॥

[ತ್ಯಕ್ತ್ವೇತಿ] ಜೋ ಶರೀರೀ ಉದಾಸ ! ಫಳಭೋಗೀ ನಿರಾಸ । ನಿತ್ಯತೃ ಋಶ್ರಾಸ । ಹೋವುನಿ ಅಸೇ ॥ ೬ ॥ ಜೋ ಸಂತೋಷಾಚಾ ಗಾಭಾರಾ । ಆತ್ಮಬೋಧಾಚಿಯಾ ವೋಗರಾ । ಪುರೇ ನ ವ್ಹಣೇಚಿ ಧನುರ್ಧರಾ । ಆರೋಗಿತಾ ॥ ೬ ॥

ಅರ್ಥ— ಯಾವನು ಶರೀರದ ವಿಷಯದಲ್ಲಿ ಉದಾಸೀನನಾಗಿರುವನೋ ಮತ್ತು ಕರ್ಮದಿಂದ ಆಗತಕ್ಕ ಫಲ ಪ್ರಾಪ್ತಿಯ ವಿಷಯದಲ್ಲಿ ನಿರಿಚ್ಛನಾಗಿರುವನೋ ಅವನು ಯಾವಾಗಲೂ ಆನಂದ ಸ್ವರೂಪದಲ್ಲಿ ಮಗ್ನನಾಗಿರುವನು ॥೬॥ ಪಾರ್ಥ ! ಇವನು ಸಂತೋಷವೆಂಬ ನಡುಮನೆಯಲ್ಲಿ ಕುಳಿತು ಆತ್ಮಬೋಧ ರೂಪ ಪಕ್ವಾನ್ನವನ್ನು ಭೋಜನಮಾಡ ಪತ್ತಿದರೆ ಸಾಕು, ತೃಪ್ತಿ ಆಗಿರುವದು ಎಂದು ಅನ್ನುವದೇ ಇಲ್ಲ. ॥ ೭ ॥

ನಿರಾಶೀರ್ಯತಚಿತ್ತಾತ್ಮಾ ತ್ಯಕ್ತ ಸರ್ವ ಪರಿಗ್ರಹಃ ।
ಶಾರೀರಂ ಕೇವಲಂ ಕರ್ಮ ಕುರ್ವನ್ನಾಪ್ನೋತಿ ಕಿಲ್ಬಿಷಂ ॥ ೨೧ ॥
ಯದೃಚ್ಛಾಲಾಭ ಸಂತುಷ್ಟೋ ದ್ವಂದ್ವಾತೀತೋ ವಿಮತ್ಸರಃ ।
ಸಮಃ ಸಿದ್ಧಾವ ಸಿದ್ಧೌ ಚ ಕೃತ್ವಾಪಿ ನ ನಿಬಧ್ಯತೇ ॥ ೨೨ ॥

[ನಿರಾಶೀರ್ಯತ ಚಿತ್ತಾತ್ಮೇತಿ] ಕೈಸೇ ಅಧಿಕಾಧಿಕ ಆವಡೀ । ಘೇತ ಮಹಾ ಸುಖಾಚೀ ಗೋಡೀ । ಸಾಂಡೋನಿಯಾ ಆಶಾಕುರೋಂಡೀ । ಅಹಂಭಾವೇಸೀ ॥ ೮ ॥ ವ್ಹಣೋನಿ ಅವಸರೇ ಜೇ ಜೇ ಪಾನೇ । ತೇಣೇಚಿ ತೋ ಸುಖಾವೇ । ಜಯಾ ಆಪುಲೇ ಆಣಿ ಪರಾವೇ । ದೋನ್ಹೀ ನಾಹೀ ॥ ೯ ॥ ತೋ ದಿಠೀ ಜೇ ಪಾಹೇ ! ತೇ ಆಪಣಾಚಿ ಹೋವುನಿ ಜಾಯೇ । ಆಇಕೇ ತೇ ಆಹೇ । ತೋಚಿ ಜಾಹಲಾ ॥ ೧೦ ॥ ಚರಣೇ ಹನ ಚಾಲೇ । ಮುಖೇ ಜೇ ಜೇ ಬೊಲೇ । ಐಸೇ ಚೇಷ್ಟಾಜಾತ ತೇ ತುಲೇ । ಆಪಣಚಿ ಜೋ ॥ ೧೧ ॥ ಹೇ ಅಸೋ ವಿಶ್ವ ಪಾಹೀ । ಜಯಾಸಿ ಆಪಣಪೇ ವಾಚೂನಿ ನಾಹೀ । ಆತಾ ಕವಣ ತೇ ಕರ್ಮಕಾಹೀ । ಬಾಧೀತಯಾತೆ ॥ ೧೨ ॥ ಹಾಮತ್ಸರ ಜೇಥ ಉಪಜೇ । ತೇ ತುಲೇ ನುರೇಚಿ ಜಯಾಮಜೇ । ತೋ ನಿರ್ಮತ್ಸರ ಕಾಈ ವ್ಹಣಿಜೇ । ಬೋಲನರೀ ॥೧೩॥ ವ್ಹಣೋನಿ ಸರ್ವಾಪರೀ ಮುಕ್ತ । ತೋ ಸಕರ್ಮಚಿ ಕರ್ಮರಹಿತ । ಸಗುಣಪರೀ ಗುಣಾತೀತ । ಏಥ ಭ್ರಾಂತಿ ನಾಹೀ ॥ ೧೪ ॥

ಅರ್ಥ— ಯಾವನು ಅಹಂಕಾರವನ್ನೂ ಆಶೆಯನ್ನೂ ಬಿಟ್ಟಿರುವನೋ ಅವನು ಅತ್ಯಧಿಕವಾದ ನಿಸ್ಸೀಮ ಪ್ರೇಮದಿಂದ ಬ್ರಹ್ಮಸುಖದ ಸ್ವಾದನ್ನು ತೆಗೆದುಕೊಳ್ಳುತ್ತಾನೆ. ॥ ೮ ॥ ಆದುದರಿಂದ ಯಾವ ಯಾವ ಸಮಯಕ್ಕೆ ಯಾವ ಯಾವದು ದೊರಕುವದು ಅದರಲ್ಲಿಯೇ ಅವನು ಸುಖವಿರುವನೆಂದು ತಿಳಿಯುತ್ತಾನೆ. ಮತ್ತು ಇದು ತನ್ನದು, ಇದು ಅನ್ಯರದು ಎಂಬ ಭೇದವೇ ಅವನಲ್ಲಿರುವದಿಲ್ಲ. ॥ ೯ ॥ ಅವನು ತನ್ನ ದೃಷ್ಟಿಯಿಂದಲೇ ಯಾವ ಯಾವದನ್ನು ನೋಡುತ್ತಾನೋ ಮತ್ತು ಕೇಳುತ್ತಾನೋ ಆ ಎಲ್ಲ ವ್ಯಾಪಾರಗಳ ಕರ್ತನು ಆತ್ಮನೇ ಆಗಿರುತ್ತಾನೆ. ॥ ೧೧೦ ॥

ಕಾಲುಗಳಿಂದ ನಡೆಯುತ್ತಾನೆ. ಬಾಯಿಯಿಂದ ಮಾತನಾಡುತ್ತಾನೆ. ಅದೇಪ್ರಕಾರ ಶರೀರದಿಂದ ಎಷ್ಟು ವ್ಯಾಪಾರ ಮಾಡುತ್ತಾನೋ ಆ ಸರ್ವನೂ ಆತ್ಮನೇ ಆಗಿರುತ್ತಾನೆ. ॥ ೧೧ ॥ ಇದಂತೂ ಇರಲಿ ಬಹಳ ಹೇಳುವದೇನು, ಜಗತ್ತಿನಲ್ಲಿ ನೋಡುತ್ತಿರಲಿಕ್ಕಾಗಿ ಆತ್ಮಸ್ವರೂಪದ ವಿನಃ ಎರಡನೇದು ಅವನಿಗೆ ಯಾವದೂ ಕಾಣುವದಿಲ್ಲ. ಅವನಿಗೆ ಯಾವ ಕಾರಣದಿಂದಲೂ, ಯಾವ ಬಾಧೆಯೂ ಉಂಟಾಗಲರಿಯದು. ॥ ೧೨ ॥ ಈ ಮತ್ಸರವು ಯಾವ ದ್ವೈತದಲ್ಲಿ ಉತ್ಪನ್ನವಾಗುತ್ತದೋ ಆ ದ್ವೈತವೇ ಅವನ ದೃಷ್ಟಿಗೆ ಬೀಳುವದಿಲ್ಲ. ಅಂದಬಳಿಕ ಅವನು ನಿರ್ಮತ್ಸರನಾಗಿರುವ ನೆಂದು ಶಬ್ದದಿಂದ ಹೇಳಬೇಕೇನು ? ॥ ೧೩ ॥ ಅವನು ಸರ್ವಪ್ರಕಾರದಿಂದಲೂ ಮುಕ್ತನಾಗಿರುತ್ತಾನೆ. ಅವನು ಸರ್ವ ಕರ್ಮಗಳನ್ನು ಮಾಡುತ್ತಿದ್ದಾಗ್ಯೂ ಕರ್ಮರಹಿತನಾಗಿರುತ್ತಾನೆ. ಅವನು ಸಗುಣನಂತೆ ಕಾಣುತ್ತಿದ್ದಾಗ್ಯೂ ಗುಣಾತೀತನಾಗಿರುತ್ತಾನೆ. ಇದರಲ್ಲಿ ಸಂಶಯವಿಲ್ಲ. ॥ ೧೪ ॥

ಗತಸಂಗಸ್ಯ ಮುಕ್ತಸ್ಯ ಜ್ಞಾನಾವಸ್ಥಿತಚೇತಸಃ ।
ಯಜ್ಞಾಯಾಚರತಃ ಕರ್ಮ ಸಮಗ್ರಂ ಪ್ರವಿಲೀಯತೇ ॥ ೨೩ ॥

[ಗತ ಸಂಗಸ್ಯೇತಿ] ತೋ ದೇಹಸಂಗೇ ತರೀ ಅಸೇ । ಪರೀ ಚೈತನ್ಯಾ ಸಾರಿಖಾ ದಿಸೆ । ಪಾಹತಾ ಪರಬ್ರಹ್ಮಾ ಚೇನಿ ಕಸೇ । ಚೋಖಾಳ ಭಲಾ ॥ ೧೫ ॥ ಐಸಾಹೀ ಪರೀ ಕೌತುಕೇ । ಜರೀ ಕರ್ಮ ಕರೀ ಯಜ್ಞಾದಿಕೇ । ತರೀ ತಿಯೇ ಲಯಾಜಾತೀ ನಿಃಶೇಖೇ । ತಯಾಚ್ಯಾಚಿ ಠಾಯಿ ॥ ೧೬ ॥ ಅಕಾಳೀಚೀ ಅಭ್ರೇ ಜೈಸೀ । ಉರ್ಮೀವೀಣ ಆಕಾಶೀ । ಹರಪತೀ ಆಪೈಸೀ । ಉದಯಲೀ ಸಾತೀ । ॥ ೧೭ ॥ ತೈಸೀ ವಿಧಿನಿಧಾನೇ ವಿಹಿತೇ । ಜರೀ ಆಚರೇ ತೋ ಸಮಸ್ತೇ । ತರೀ ತಿಯೇ ಐಕ್ಯಭಾವೇ ಐಕ್ಯತೇ । ಸಾವತೀಚಿಗಾ ॥ ೧೮ ॥

ಅರ್ಥ— ಮತ್ತು ಅವನು ದೇಹಧಾರಿಯಾಗಿದ್ದಾನೆ. ಆತನೂ ನಿರ್ಗುಣನೋಪಾದಿಯಲ್ಲಿ ಕಾಣುತ್ತಾನೆ. ಮತ್ತು ಅವನನ್ನು ವರಿಗೆಹಚ್ಚಿ ನೋಡಿದರೆ ಬ್ರಹ್ಮಸ್ವರೂಪದಂತೆ ತೋರುತ್ತಾನೆ. ॥ ೧೫ ॥ ಹೀಗೆ ಅವನು ಕೇವಲ ಮುಕ್ತನಿದ್ದಾನೆ. ಆದರೆ ಒಂದು ವೇಳೆ ಕೌತುಕದಿಂದ ಯಥಾವಿಧಿ ಯಜ್ಞಾದಿಕ ಕರ್ಮದ ಆಚರಣೆಯನ್ನೂ ಮಾಡುತ್ತಾನೆ. ಆದರೂ ಆ ಸಂಪೂರ್ಣ ಕರ್ಮವು ಅವನಲ್ಲಿಯೇ (ಆತ್ಮನಲ್ಲಿಯೇ) ಲಯಹೊಂದುತ್ತದೆ. ॥ ೧೬ ॥ ಆಕಾಶದಲ್ಲಿ ಉದ್ಭವಿಸಿದ ಅಕಾಲ ಮೋಡಗಳು ಮಳೆಯಾಗದೇ ತನ್ನಿಂದ ತಾನೇ ನಾಶಹೊಂದುತ್ತವೋ, ॥ ೧೭ ॥ ಅದೇ ಪ್ರಕಾರ ಅವನು ವೇದವಿಹಿತವಾದ ಕರ್ಮವನ್ನು ಈಶ್ವರಾರ್ಪಣ ಬುದ್ಧಿಯಿಂದ ಯಥಾವಿಧಿ ಆಚರಿಸುತ್ತಿರುವದರಿಂದ ಆ ಕರ್ಮದ ಸ್ಥಳದಲ್ಲಿ ಅವನ ದ್ವೈತಭಾವವು ಉಳಿಯದೇ ಅದೇ ಸ್ಥಳದಲ್ಲಿ ಲಯಹೊಂದುತ್ತದೆ ॥ ೧೮ ॥

ಬ್ರಹ್ಮಾರ್ಪಣಂ ಬ್ರಹ್ಮಹವಿರ್ಬ್ರಹ್ಮಾಗ್ನೌ ಬ್ರಹ್ಮಣಾಹುತಂ ।
ಬ್ರಹ್ಮೈವ ತೇನ ಗಂತವ್ಯಂ ಬ್ರಹ್ಮಕರ್ಮಸಮಾಧಿನಾ ॥ ೨೪ ॥

[ಬ್ರಹ್ಮಾರ್ಪಣ ಮಿತಿ] ಹೇ ಹವನ ಮೀ ಹೋತಾ । ಕಾ ಇಯೇ ಯಜ್ಞೀ ಹಾ ಭೋಕ್ತಾ । ಐಸಿಯಾ ಬುದ್ಧೀಸಿ ನಾಹೀ ಭಿನ್ನತಾ । ವ್ಯಾಪಿಯಲಿಯಾ ॥ ೧೯ ॥ ಜೇ ಇಷ್ಟಯಜ್ಞ ಯಜಾನೇ । ತೇ ಹವಿ ಮಂತ್ರಾದಿ ಆಘವೇ । ತೋ ದೇಖತಸೇ ಅವಿನಾಶ ಭಾವೇ । ಆತ್ಮಬುದ್ಧಿ ॥ ೨೦ ॥ ವ್ಯಾಪಿಯಲಿ ಬ್ರಹ್ಮತೇಚಿ ಕರ್ಮ । ಐಸೇ ಬೋಧಾ ಆಲೇ ಜಯಾಸಮ । ತಯಾ ಕರ್ತವ್ಯತೇ ನೈಷ್ಕರ್ಮ್ಯ । ಧನುರ್ಧರಾ ॥ ೨೧ ॥ ಆತಾ ಅವಿವೇಕ ಕುಮಾರತ್ವಾ ಮುಕಲೇ । ಜಯಾ ವಿರಕ್ತೀಚೆ ಪಾಣಿಗ್ರಹಣ ಜಾಹಾಲೇ । ಮಗ ಉಪಾಸನಜಿಹೀ ಆಣಿಲೇ । ಯೋಗಾಗ್ನೀಚೇ ॥ ೨೨ ॥

ಅರ್ಥ— 'ಇದು ಒಂದು ಹವನವು. ಅದರ ಕರ್ತನು ನಾನು. ಮತ್ತು ಯಜ್ಞದ ಭೋಕ್ತಾ ಇಂಥವನೇ,' ಎಂಬ ಕಲ್ಪನೆಯ ಭಿನ್ನಭಾವನೆಯು ಅವನಲ್ಲಿರುವದಿಲ್ಲ. ಆದುದರಿಂದ, ॥ ೧೯ ॥ ಯಾವ ಯಾವ ಇಷ್ಟಯಜ್ಞವನ್ನು

ಮಾಡುತ್ತಾನೋ ಅವುಗಳನ್ನು ಅವನು ಅವಿನಾಶಭಾವನೆಯ ದೃಷ್ಟಿಯಿಂದ ಮಾಡಿ ಅದರಲ್ಲಿಯ ಹೋಮ, ದ್ರವ್ಯ, ಮಂತ್ರ ಈ ಎಲ್ಲವೂ ಆತ್ಮರೂಪಪರಮೇಶ್ವರನೇ ಎಂದು ತಿಳಿಯುತ್ತಾನೆ. ॥ ೧೩೦ ॥ ಅರ್ಜುನಾ, ಬ್ರಹ್ಮವೇ ಕರ್ಮ ವೆಂಬ ಸಮಬುದ್ಧಿಯು ಯಾವನ ಅಂತಃಕರಣದಲ್ಲಿ ಉಂಟಾಗಿರುವದೋ ಅವನು ಕರ್ಮಮಾಡಿದಾಗ್ಯಾದರೂ ನಿಷ್ಕಾಮು ಕರ್ಮಿಯಾಗಿದ್ದಾನೆ. ॥ ೨೧ ॥ ಅವನ ಅವಿಚಾರರೂಪ ಬಾಲ್ಯಾವಸ್ಥೆಯು ಹೋದ ಮೇಲೆ ವಿರಕ್ತಿಯ ಸಂಗಡ ಲಗ್ನವಾಗುತ್ತದೆ. (ಕಾರಣವೇನೆಂದರೆ, ಲಗ್ನವಾಗದಹೊರ್ತು ಅಗ್ನಿಸೇವೆ ಮಾಡಲು ಬರುವದೇ ಇಲ್ಲ.) ಆ ಮೇಲೆ ಜೀವಬ್ರಹ್ಮೈಕ್ಯರೂಪವಾದ ಯೋಗಾಗ್ನಿಯ ಉಪಾಸನೆಯನ್ನು ಅವನು ಪ್ರಾರಂಭಮಾಡುವನು. ॥ ೨೨ ॥

ದೈವಮೇವಾಪರೇ ಯಜ್ಞಂ ಯೋಗಿನಃ ಪರ್ಯುಪಾಸತೇ ।
ಬ್ರಹ್ಮಾಗ್ನಾವಪರೇ ಯಜ್ಞಂ ಯಜ್ಞೇನೈವೋಪಜುಹ್ವತಿ ॥ ೨೫ ॥

[ದೈವಮಿತಿ] ಜೇ ಯಜನಶೀಲ ಅಹರ್ನಿಶೀ । ಜಿಹೀ ಅವಿದ್ಯಾ ಹವಿಲೇ ಮನೇಽಗೀ । ಗುರುವಾಕ್ಯ ಹುತಾಶೀ । ಹವನ ಕೇಲೇ ॥ ೨೩ ॥ ತಿಹೀ ಯೋಗಾಗ್ನಿ ಕೀ ಯಜಿಜೇ । ತೋ ದೈವಯಜ್ಞ ಮ್ಹಣಿ ಜೇ । ಜೇಣೇ ಆತ್ಮಸುಖ ಕಾಮಿಜೇ । ಪಾಂಡುಕುಮರಾ ॥ ೨೪ ॥ ದೈವಾಸ್ತವ ದೇಹಾಚೇ ಪಾಳಣ । ಜೋ ಚಿಂತೀನಾ ದೇಹಭರಣ ! ತೋ ಮಹಾ ಯೋಗೀ ಜಾಣ । ದೈವಯೋಗೇ ॥ ೨೫ ॥ ಆತಾ ಅವಧಾರೀ ಸಾಂಗೇನ ಆಣಿಕ । ಜೇ ಬ್ರಹ್ಮಾಗ್ನಿ ಸಾಗ್ನಿಕ । ತಯಾತೇ ಯಜ್ಞೇಚಿ ಯಜ್ಞದೇಖ । ಉಪಾಸಿಜೇ ॥ ೨೬ ॥

ಅರ್ಥ— ಇವನು ಅಹೋರಾತ್ರಿಯಲ್ಲಿಯೂ ಯಜ್ಞಮಾಡುವವನಾಗಿರುತ್ತಾನೆ. ಅವನು ಗುರುವಾಕ್ಯರೂಪ ಅಗ್ನಿಯಲ್ಲಿ ಮನಸಹಿತವಾಗಿ ಅಜ್ಞಾನದ ಹವನ ಮಾಡಿರುವನು. ॥ ೨೩ ॥ ಅರ್ಜುನಾ ! ಯಾವನಿಗೆ ಆತ್ಮಸುಖದ ಇಚ್ಛೆಯಿರುವದೋ ಅವನೇ ಈ ಯೋಗಾಗ್ನಿಯ ಯಜನವನ್ನು ಮಾಡಬೇಕು. ಮತ್ತು ಇದಕ್ಕೇ ದೈವಯಜ್ಞವೆಂದು ಕರೆಯುತ್ತಾರೆ. ॥ ೨೪ ॥ ದೇಹವು ದೈವಾಧೀನವಾದದ್ದೆಂದು ತಿಳಿದು ಅದರ ಪೋಷಣೆಯ ವಿಷಯದಲ್ಲಿ ಅವನು ಚಿಂತಿಸುವದಿಲ್ಲ. ಇವನೇ ದೈವಯೋಗದಿಂದ ಮಹಾಯೋಗಿಯೆಂದು ತಿಳಿ. ॥ ೨೫ ॥ ಈಗ ಯಾರು ಬ್ರಹ್ಮಾಗ್ನಿಯ ಅಗ್ನಿಹೋತ್ರಿಗಳು ಸ್ವಕರ್ಮದಿಂದ ಈಶ್ವರಾರಾಧನೆಯನ್ನು ಮಾಡುತ್ತಾರೋ, ಅವರ ವಿಷಯಕವಾಗಿ ವರ್ಣನೆಯನ್ನು ಮಾಡುತ್ತೇನೆ ಕೇಳು. ॥ ೨೬ ॥

ಶ್ರೋತ್ರಾದೀನೀಂದ್ರಿಯಾಣ್ಯನ್ಯೇ ಸಂಯಮಾಗ್ನಿಷು ಜುಹ್ವತಿ ।
ಶಬ್ದಾದೀನ್ವಿಷಯಾನನ್ಯ ಇಂದ್ರಿಯಾಗ್ನಿಷು ಜುಹ್ವತಿ ॥ ೨೭ ॥

[ಶ್ರೋತ್ರಾದೀ ನೀತಿ] ಏಕ ಸಂಯಮಾಗ್ನಿ ಹೋತ್ರೀ । ತೇ ಯುಕ್ತಿತ್ರಯಾಚ್ಯಾ ಮಂತ್ರೀ । ಯಜನ ಕರಿತೀ ಪವಿತ್ರೀ । ಇಂದ್ರಿಯದ್ರವ್ಯೀ ॥ ೨೭ ॥ ಏಕಾ ವೈರಾಗ್ಯರವಿ ವಿವಳೇ । ತವ ಸಂಯತೀ ವಿಹಾರ ಕೇಲೇ । ತೇಥ ಅಪಾಘ್ರುತ ಜಾಹಾಲೇ । ಇಂದ್ರಿಯಾನಳ ॥ ೨೮ ॥ ತಿಹೀ ವಿರಕ್ತೀಚೀ ಜ್ವಾಳಾ ಘೇತಲೀ । ತವ ವಿಕರಾಚೀ ಇಂಧನೇ ಪಳಪಲೀ । ತೇಥ ಆಶಾಧೂಮೀ ಸಾಂಡಿಲೀ । ಪಾಂಚಹೀ ಕುಂಡೇ ।' ೨೯ ॥ ಮಗ ವಾಕ್ಯವಿಧೀಚಿಯಾ ನಿರವಡೀ । ವಿಷಯ ಆಹುತೀ ಉದಂಡೀ । ಹವನ ಕೇಲೇ ಕುಂಡೀ । ಇಂದ್ರಿಯಾಗ್ನೀಚ್ಯಾ ॥ ೩೦ ॥

ಅರ್ಥ— ಯಾರು ಆತ್ಮಸ್ವಯಂರೂಪವಾದ ಅಗ್ನಿಯಲ್ಲಿ ಹೋಮ ಮಾಡುವರೋ ಅವರು 'ಕಾಯಾ, ವಾಚಾ, ಮಾನಸಿಕ,' ಈ ಮೂರು ಯುಕ್ತಿ ಮಂತ್ರಗಳಿಂದ ಪವಿತ್ರವಾದ ಇಂದ್ರಿಯ ರೂಪದ್ರವ್ಯದಿಂದ ಹವನಮಾಡುತ್ತಾರೆ. ॥ ೨೭ ॥ ಕೆಲವರು ವೈರಾಗ್ಯರೂಪೀ ಸೂರ್ಯೋದಯವಾದ ಮೇಲೆ ಸಂಯಮಾಗ್ನಿಯ ಉದ್ಧರಣ ಮಾಡಿ ಅದು ಪ್ರಜ್ವಲಿತವಾದಮೇಲೆ, ಇಂದ್ರಿಯರೂಪ ಅಗ್ನಿಯನ್ನು ಜ್ಞಾನದಿಂದ ಪ್ರಜ್ವಲಿತಮಾಡುತ್ತಾರೆ. ॥ ೨೮ ॥ ಅದರಿಂದ

ವೈರಾಗ್ಯರೂಪೀ ಜ್ವಾಲೆಯು ಹೊತ್ತಿದ ಕೂಡಲೇ ತೀವ್ರವೇ ವಿಷಯವಿಕಾರರೂಪ ಕಟ್ಟಿಗೆಗಳು ಸುಡುತ್ತವೆ. ಆವಾಗ ಜ್ಞಾನೇಂದ್ರಿಯ ಮೊದಲಾದ ಪಂಚವಿಷಯಗಳ ಕುಂಡವಲ್ಲಿಯ ಆಶಾರೂಪವಾದ ಹೊಗೆಯನ್ನು ಅವರು ತ್ಯಾಗ ಮಾಡಿದರು. ॥ ೨೯ ॥ ಆ ಮೇಲೆ ವೇದಾಂತಪಲ್ಲಿ ಹೇಳಿದ ವಿಧಿಯ ಯೋಗದಿಂದ ಇಂದ್ರಿಯರೂಪ ಅಗ್ನಿಯು ಉರಿಯುವ ಕುಂಡದಲ್ಲಿ ವಿಷಯಗಳ ದೊಡ್ಡ ಆಹುತಿಯನ್ನು ಕೊಟ್ಟರು. । ೩೦ ॥

ಸರ್ವಾಣೀಂದ್ರಿಯಕರ್ಮಾಣಿ ಪ್ರಾಣಕರ್ಮಾಣಿ ಚಾಪರೇ ।
ಆತ್ಮಸಂಯಮಯೋಗಾಗ್ನೌ ಜುಹ್ವತಿ ಜ್ಞಾನದೀಪಿತೇ ॥ ೩೭ ॥

[ಸರ್ವಾಣೀತಿ] ಏಕೀಯಯಾಪರೀ ಪಾರ್ಥಾ । ದೋಷ ಕ್ಷಾಳಿಲೇ ಸರ್ವಥಾ । ಏಕೀ ಹೃದಯಾರಣೀ ಮಂಥಾ । ವಿನೇಕ ಕೇಲಾ ॥ ೩೧ ॥ ತೋ ಉಪಶಮೇ ನಿಹಟಲಾ । ಧೈರ್ಯಭಾರೇ ದಾಟಲಾ । ಗುರುವಾಕ್ಯೇ ಕಾಢಿಲಾ । ಒಳಕಟಪಣೇ ॥ ೩೨ ॥ ಐಸೇ ಸಮರಸೇ ಮಂಥನ ಕೇಲೇ । ತೇಥ ಝುಡಕರೀ ಕಾಜಾ ಆಲೇ । ಜೇ ಉಜ್ಜೀವನ ಜಾಹಲೇ । ಜ್ಞಾನಾಗ್ನೀಚೇ ॥ ೩೩ ॥ ಪಹಲಾ ಋದ್ಧಿ ಸಿದ್ಧೀಚಾ ಸಂಭ್ರಮ । ತೋ ನಿವತೋರ್ನಿ ಗೇಲಾ ಧೂಮು । ಮಗ ವ್ರಗಟಲಾ ಸೂಕ್ಷ್ಮ । ವಿಸ್ಫುಲಿಂಗ ॥ ೩೪ ॥ ತಯಾ ಮನಾಚೇ ವೋಕಳೇ । ತೇಚಿ ಪೇಟವಣ ಘಾತಲೇ । ಜೇ ಯಮ ನಿಯಮೀ ಹಳವಾರಲೇ । ಆಯಿತೇ ಹೋತೇ ॥ ೩೫ ॥ ತೇಣೇ ಸಾದುಕಪಣೇ ಜ್ವಾಳಾ ಸಮ್ಯದ್ಧಾ । ಮಗ ವಾಸನಾಂತರಾಂಚಿಯಾ ಸಮಿಧಾ । ಸ್ನೇಹೇಸೀ ನಾನಾವಿಧಾ । ಜಾಳಿಲಿಯಾ ॥ ೩೬ ॥ ತೇಥ ಸೋಹಂಮಂತ್ರೇ ದೀಕ್ಷಿತೀ । ಇಂದ್ರಿಯ ಕರ್ಮಾಚಿಯಾ ಆಹುತೀ । ತಿಯೇ ಜ್ಞಾನಾನಳೀ ಪ್ರದೀಪ್ತೀ । ದಿಧಲಿಯಾ ॥ ೩೭ ॥ ಪಾಠೀ ಪ್ರಾಣ ಕರ್ಮಾಚಿಯೇ ಸ್ರುವೇನಿಶೀ । ಪೂರ್ಣಾಹುತೀ ಪಡಲಿಯಾ ಹುತಾಶೀ । ತೇಥ ಅವಭೃತ ಸಮರಸೀ । ಸಹಜೇ ಜಾಹಲೇ ॥ ೩೮ ॥ ಸುಗ ಆತ್ಮಬೋಧೀಚೆ ಸುಖ । ಜೇ ಸಂಯಮಾಗ್ನೀಚೇಹುತ ಶೇಷ । ತೋಚಿ ಪುರೋಡಾಶ ದೇಖ । ಘೇತಲಾತಿಹೀ ॥ ೩೯ ॥ ಏಕ ಐಶಿಯಾ ಇಂಹೀ ಯಜನೀ । ಮುಕ್ತತೇ ಜಾಹಲೇ ತ್ರಿಭುವನೀ । ಯಾ ಯಜ್ಞಕ್ರಿಯಾ ತರಿ ಆನಾನೀ । ಪರೀ ಪ್ರಾಪ್ಯ ತೇ ಏಕ ॥ ೪೦ ॥

ಅರ್ಥ— ಪಾರ್ಥಾ! ಈ ಪ್ರಕಾರ ಯಾರು ತಮ್ಮ ಸರ್ವ ದೋಷಗಳನ್ನು ಕ್ಷಾಲನ ಮಾಡಿದರೊ, ಅವರು ಹೃದಯರೂಪೀ ಅರಣಿಯಮೇಲೆ ವಿಚಾರರೂಪ ಮಂಥನವನ್ನು ಮಾಡಿ, ॥ ೩೧ ॥ ಅದನ್ನು ಧೈರ್ಯರೂಪ ಭಾರದಿಂದ ಒತ್ತಿ, ಶಾಂತಿರೂಪ ಕಡುಗೋಲಿನಿಂದ ಕಡೆದರು. ॥ ೩೨ ॥ ಈ ಪ್ರಕಾರ ಸರ್ವವೃತ್ತಿಯ ಐಕ್ಯಮಾಡಿ ಮಂಥನ ಮಾಡುವದರಿಂದ ಅಲ್ಲಿ ಆಗಿಂದಾಗ್ಗೆ ಕಾರ್ಯವು ಸಿದ್ಧಿಗೆ ಹೋಯಿತು. (ಅದಾವುದೆಂದರೆ) ಜ್ಞಾನಾಗ್ನಿಯು ಪ್ರಜ್ವಲಿತವಾಯಿತು. ॥ ೩೩ ॥ ಆವಾಗ ಪ್ರಥಮದಲ್ಲಿ ಋದ್ಧಿಸಿದ್ಧಿಯ ಮೋಹದಿಂದ ಉದ್ಭವಿಸಿದ ಹೊಗೆಯು ಇಲ್ಲದಂತಾಗಿ ಅಲ್ಲಿ ಸೂಕ್ಷ್ಮವಾದ ಬೆಂಕಿಯ ಕಿಡಿಗಳು ಉಬ್ಬವಿಸಿದವು. ॥ ೩೪ ॥ ಯಮದಮಗಳ ಶುಷ್ಕ (ಒಣಗಿದ) ನಿರ್ದೋಷ ಮನಸನ್ನು ಅಗ್ನಿಗೆ ಆಹುತಿ ಹಾಕಿದರು. ॥ ೩೫ ॥ ಅವುಗಳ ಸಹಾಯದಿಂದ ದೊಡ್ಡ ಜ್ವಾಲೆಯು ಉತ್ಪನ್ನವಾಯಿತು. ಆ ಮೇಲೆ ವಾಸನಾರೂಪ ಸಮಿಧೆಗಳಿಗೆ ಅನೇಕ ಪ್ರಕಾರದ ವ್ಯೋಹವೆಂಬ ತುಪ್ಪವನ್ನು ಹಾಕಿ ಅದನ್ನು ಸುಟ್ಟುಬಿಟ್ಟರು. ॥ ೩೬ ॥ ಆ ಮೇಲೆ ಜೀವರೂಪ ದೀಕ್ಷಿತನು ಜ್ಞಾನರೂಪೀ ಪ್ರದೀಪ್ತಾಗ್ನಿಯಲ್ಲಿ ಇಂದ್ರಿಯ ಕರ್ಮಗಳ ಆಹುತಿಯನ್ನು ಕೊಟ್ಟನು. ॥ ೩೭ ॥ ಕೊನೆಗೆ ಪ್ರಾಣಕರ್ಮವೆಂಬ 'ಸ್ರುವಾ' ಈ ಹೆಸರಿನ ಯುಜ್ಞಪಾತ್ರೆಯನ್ನು ಸಹ ಅಗ್ನಿಯಲ್ಲಿ ಪೂರ್ಣಾಹುತಿ ಕೊಟ್ಟಮೇಲೆ ಐಕ್ಯಬೋಧದ (ಯಜ್ಞದ ಕಡೆಯ) ಅನುಭವ ಅವಭೃತ ಸ್ನಾನವು ಸಹಜವೇ ಲಭಿಸಿತು. ॥ ೩೮ ॥ ಮತ್ತು ಸಂಯಮಾಗ್ನಿಯಲ್ಲಿ ಇಂದ್ರಿಯ ಮುಂತಾದ ಹೋಮ ದ್ರವ್ಯದ ಹವನ ಮಾಡಿ, ಉಳಿದ ಆತ್ಮ ಸುಖವನ್ನೇ 'ಪುರೋಡಶ' (ಪಾಯಸ) ವೆಂದು ತೆಗೆದುಕೊಂಡರು. ॥ ೩೯ ॥

ಕೆಲವರು ಈ ರೀತಿಯಿಂದ ಯಜ್ಞವಾಡಿ ಮೂರು ಲೋಕಗಳಲ್ಲಿ ಮುಕ್ತರಾಗಿ ಹೋದರು. ಆದುದರಿಂದ ಈ ಯಜ್ಞ ಕ್ರಿಯೆಯು ಒಂದು ವೇಳೆ ನಾನಾ ಪ್ರಕಾರ ವಿದ್ದಾಗ್ಯಾದರೂ ಅದರ ಕಡೆಯ ಫಲಪ್ರಾಪ್ತಿಯು ಒಂದೇ ಆಗಿರುವದು ॥೧೪೦॥

ದ್ರವ್ಯಯಜ್ಞಾಸ್ತಪೋಯಜ್ಞಾ ಯೋಗಯಜ್ಞಾಸ್ತಥಾಽಪರೇ ।
ಸ್ವಾಧ್ಯಾಯಜ್ಞಾನಯಜ್ಞಾಶ್ಚ ಯತಯಃ ಸಂಶಿತವ್ರತಾಃ ॥ ೨೮ ॥

[ದ್ರವ್ಯ ಯಜ್ಞಾ ಇತಿ] ಏಕ ದ್ರವ್ಯಯಜ್ಞ ಮ್ಹಣಿಪತೀ । ಏಕ ತಪ ಸಾಮಗ್ರಿಯಾ ನಿಪ ಜವಿತೀ । ಏಕ ಯೋಗಯಾಗ ಹೀ ಆಹಾತೀ । ಜೇ ಸಾಂಗಿತಲೇ ॥ ೪೧ ॥ ಏಕೀ ಶಬ್ದೀ ಶಬ್ದಯಜಿ ಜೇ ! ತೋ ವಾಗ್ಯಜ್ಞ ಮ್ಹಣಿಜೇ । ಜ್ಞಾನೇ ಜ್ಞೇಯ ಗಮಿಜೇ । ತೋ ಜ್ಞಾನಯಜ್ಞ ॥ ೪೨ ॥ ಹೇ ಅರ್ಜುನಾ ಸಕಳ ಕುವಾಡೇ । ಜೇ ಆನುಷ್ಠಿತಾ ಅತಿ ಸಾಂಕಡೇ । ಪರೀ ಜಿತೇಂದ್ರಿಯಾಸೀಂಚಿಳಡೇ । ಯೋಗ್ಯತಾವಲೇ ॥ ೪೩ ॥ ತೇ ಪ್ರವೀಣ ತೇಧ ಭಲೇ । ಆಣಿ ಯೋಗ ಸಮೃದ್ಧಿ ಆಥಿಲೇ । ಮ್ಹಣೋನಿ ಆಪಣಪಾತಿಹೀ ಕೇಲೇ । ಆತ್ಮಹವನ ॥ ೪೪ ॥

ಅರ್ಥ— ಈ ಯಾವ ಯೋಗವನ್ನು ಹೇಳಿದೆನೋ ಅದರಲ್ಲಿ ಒಂದಕ್ಕೆ ದ್ರವ್ಯಯಜ್ಞವೆಂದು ಕರೆಯುತ್ತಾರೆ. ಇನ್ನೊಂದಕ್ಕೆ (ತಪಸ್ಸಾಮರ್ಥ್ಯದಿಂದ ಮಾಡಿದ್ದರಿಂದ) ತಪೋಯಜ್ಞವೆಂದು ಕರೆಯುತ್ತಾರೆ. ಒಂದಕ್ಕೆ (ಅಷ್ಟಾಂಗ ಸಾಧನದಿಂದ ಸಾಧಿಸಿದ್ದರಿಂದ) ಯೋಗಯಜ್ಞವೆಂದು ಕರೆಯುತ್ತಾರೆ. ॥ ೪೧ ॥ ಯಾವದರಲ್ಲಿ ಶಬ್ದದಿಂದ ಶಬ್ದದ ಹೋಮ ಮಾಡುತ್ತಾರೋ ಅವಕ್ಕೆ ವಾಗ್ಯಜ್ಞವೆಂದೆನ್ನುತ್ತಾರೆ. ಮತ್ತು ಯಾವ ಯಜ್ಞದಲ್ಲಿ ಜ್ಞಾನದಿಂದ ಬ್ರಹ್ಮ ವ್ಯಾಪ್ತಿಯಾಗುತ್ತದೋ ಅದಕ್ಕೆ ಜ್ಞಾನಯಜ್ಞವೆಂದೆನ್ನುತ್ತಾರೆ. ' ೪೨ ॥ ಅರ್ಜುನಾ ! ಈ ಸರ್ವಯಜ್ಞಗಳು ಬಹಳೇ ಕಠಿಣ ಕಷ್ಟಪ್ರದವಾಗಿದ್ದು ಇವುಗಳ ಆಚರಣೆಯನ್ನು ಮಾಡುವದು ದುರ್ಘಟವಾಗಿರುವದು. ಆದರೆ ಯಾವನು ಇಂದ್ರಿಯಗಳನ್ನು ಜಯಿಸಿರುವನೋ ಅವನಿಗೆ ಮಾತ್ರ ಅನ್ವಗಳನ್ನು (ಯಜ್ಞಗಳನ್ನು) ಅಧಿಕಾರ ಪರತ್ವ ದಿಂದ ಮಾಡಲಿಕ್ಕೆ ಬರುವದು. ॥ ೪೩ ॥ ಯೋಗ ಸಮೃದ್ಧಿಯಿಂದ ಸುಸಂಪನ್ನನಾದಂಥ ಪುರುಷನೇ ಈ ಯಜ್ಞವನ್ನು ಮಾಡಲಿಕ್ಕೆ ಸಮರ್ಥನಿರುವನು. ಕಾರಣವೇನೆಂದರೆ– ಅವನು ತನ್ನ ಜೀವವನ್ನು ಆತ್ಮನಲ್ಲಿ ಹವನ ಮಾಡಿರುವನು. ॥೪೪॥

ಅಪಾನೇ ಜುಹ್ವತಿ ಪ್ರಾಣಂ ಪ್ರಾಣೇಽಪಾನಂ ತಥಾಽಪರೇ ।
ಪ್ರಾಣಾಪಾನಗತೀ ರುದ್ಧ್ವಾ ಪ್ರಾಣಾಯಾಮಪರಾಯಣಾಃ ॥ ೨೯ ॥

[ಅಪಾನೇ ಜುಹ್ವತೀತಿ] ಮಗ ಅಪಾನಾಗ್ನೀಜೇ ಮುಖೀ । ಪ್ರಾಣದ್ರವ್ಯ ದೇಖೀ । ಹವನ ಕೇಲೇ ಏಕೀ । ಅಭ್ಯಾಸಯೋಗೇ ॥ ೪೫ ॥ ಏಕ ಅಪಾನ ಪ್ರಾಣೀ ಅರ್ಪಿತಿ । ಏಕ ದೋಹೀತೇಹೀ ನಿರುಂಧಿತೀ । ತೇ ಪ್ರಾಣಾಯಾಮೀ ಮ್ಹಣಪತೀ । ಪಾಂಡುಕುಮರಾ ॥ ೪೬ ॥

ಅರ್ಥ— ಕೆಲವರು ಅಭ್ಯಾಸಯೋಗದಿಂದ ಅಪಾನವಾಯು ರೂಪವಾದ ಅಗ್ನಿಯಲ್ಲಿ ಪ್ರಾಣವಾಯುರೂಪ ದ್ರವ್ಯದ ಹವನ ಮಾಡುತ್ತಾರೆ. ॥ ೪೫ ॥ ಎಲೋ ಪಾಂಡುನಂದನನೇ ! ಕೆಲವರು ಅಪಾನವಾಯುವನ್ನು ಪ್ರಾಣ ವಾಯುವಿನಲ್ಲಿ ಕೂಡಿಸಿರುತ್ತಾರೆ. ಮತ್ತು ಕೆಲವರು ಎರಡೂ ವಾಯುಗಳನ್ನು ನಿರೋಧಿಸುತ್ತಾರೆ. ಅವರಿಗೆ 'ಪ್ರಾಣಾ ಯಾಮ' ಯಜ್ಞವಾಡುವವರೆಂದು ಕರೆಯುತ್ತಾರೆ. ॥ ೪೬ ॥

ಅಪರೇ ನಿಯತಾಹಾರಾಃ ಪ್ರಾಣಾನ್ಪ್ರಾಣೇಷು ಜುಹ್ವತಿ ।
ಸರ್ವೇಽಪ್ಯೇತೇ ಯಜ್ಞವಿದೋ ಯಜ್ಞಕ್ಷಪಿತಕಲ್ಮಷಾಃ ॥ ೩೦ ॥

[ಅಪರ ಇತಿ] ಏಕ ವಜ್ರಯೋಗಕ್ರಮೇ । ಸರ್ವಾಹಾರ ಸಂಯಮೇ । ಪ್ರಾಣೀ ಪ್ರಾಣ ಸಂಭ್ರಮೇ । ಹವನ ಕರಿತೀ ॥ ೪೭ ॥ ಐಸೇ ಮೋಕ್ಷಕಾಮ ಸಕಳ । ಸಮಸ್ತ ಹೇ ಯಜನಶೀಳ ।

ಬಿಹೀ ಯಜ್ಞದ್ವಾರಾ ಮನೋಮಳ । ಕ್ಷಾಳಣಕೇಲೆ ॥ ೪೪ ॥ ಜಯಾ ಅವಿದ್ಯಾಜಾತ ಜಾಳಿತಾ । ಜೇ ಉರಲೇ ನಿಜ ಸ್ವಭಾವತಾ । ಜೇಥ ಅಗ್ನಿ ಆಣಿ ಹೋತಾ । ಉರೇಚಿನಾ ॥ ೪೯ ॥ ಜೇಥ ಯಜಿತ ಯಾಚಾ ಕಾಮಪುರೇ । ಯಜ್ಞೀಚೆ ವಿಧಾನ ಸರೇ । ಮಾಗುತೇ ಜೇ ಥೋನಿ ಪೋಸರೇ । ಕ್ರಿಯಾ ಜಾತ ॥ ೧೫೦ ॥ ವಿಚಾರ ಜೇಥ ನ ರಿಗೇ । ಹೇತು ಜಯಾತೇ ನೇಘೇ । ಜೇ ದ್ವೈತದೋಷ ಸಂಗೇ । ಲಿಂಪೇಚಿನಾ ॥ ೫೧ ॥

ಅರ್ಥ— ಕೆಲವರು ಹಟಯೋಗದ ಕ್ರಮದಿಂದ ಸರ್ವ ಆಹಾರವನ್ನು ಜಯಿಸಿ ಪ್ರಾಣವಾಯುರೂಪೀ ಅಗ್ನಿಯಲ್ಲಿ ತ್ವರೆಯಿಂದ ಪ್ರಾಣದ ಹವನ ಮಾಡುತ್ತಾರೆ. ॥ ೪೬ ॥ ಇಂಥ ಪ್ರಕಾರದ ಮೋಕ್ಷ ಪ್ರಾಪ್ತಿಯನ್ನೇ ಅಪೇಕ್ಷೆ ಮಾಡುವವರೆಲ್ಲರೂ ಯಜ್ಞಕರ್ತರಿರುತ್ತಾರೆ. ಅವರು ಆ ಯಜ್ಞದ್ವಾರದಿಂದ ತಮ್ಮ ಕಾಮಕ್ರೋಧ ಮುಂತಾದ ವಿಕಾರಗಳನ್ನು ಇಲ್ಲದಂತೆ ಮಾಡುತ್ತಾರೆ. ॥ ೪೪ ॥ ಈ ಪ್ರಕಾರ ಸರ್ವ ಅಜ್ಞಾನಗಳನ್ನು ಸುಟ್ಟುಬಿಟ್ಟದ್ದರಿಂದ ಅವರಿಗೆ ಸ್ವಭಾವಿಕವಾಗಿ ಶುದ್ಧ ಸ್ವರೂಪವೇ ಉಳಿಯುತ್ತದೆ. ಮತ್ತು ಇದು ಅಗ್ನಿ ನಾನು ಯಜ್ಞಮಾಡುವವನು ಎಂಬ ದ್ವೈತಭಾವನೆಯು ಅವನಲ್ಲಿ ಉಳಿಯುವದಿಲ್ಲ. ॥ ೪೯ ॥ ಆ ಸ್ಥಳದಲ್ಲಿ ಯಜ್ಞಮಾಡುವವರ ಇಚ್ಛೆಯು ಪೂರ್ಣವಾಗಿ ಯಜ್ಞಕ್ರಿಯೆಗಳು ಮುಗಿಯುತ್ತವೆ. ಅರ್ಥಾತ್ ಕಡೆಗೆ ಸರ್ವ ಕರ್ಮಗಳು ಇಲ್ಲದಂತಾಗುತ್ತವೆ. ॥ ೫೦ ॥ ಆ ಸ್ಥಳದಲ್ಲಿ ವಿಚಾರದ ಪ್ರವೇಶವಾಗುವದಿಲ್ಲ; ಕಾಮನೆಯ ಸ್ಪರ್ಶವಾಗುವದಿಲ್ಲ; ಮತ್ತು ದ್ವೈತ ದೋಷದ ಸಂಬಂಧವೇ ಉಳಿಯುವದಿಲ್ಲ; ॥ ೫೧ ॥

ಯಜ್ಞಶಿಷ್ಟಾಮೃತಭುಜೋ ಯಾಂತಿ ಬ್ರಹ್ಮಸನಾತನಂ ।
ನಾಯಂ ಲೋಕೋಽಸ್ತ್ಯಯಜ್ಞಸ್ಯ ಕುತೋಽನ್ಯಃ ಕುರುಸತ್ತಮ ॥ ೩೧ ॥

[ಯಜ್ಞ ಶಿಷ್ಟಾಮೃತ ಭುಜ ಇತಿ] ಐಸೇ ಅನಾದಿಸಿದ್ಧ ಚೋಖಟ । ಜೇ ಜ್ಞಾನ ಯಜ್ಞಾವಶಿಷ್ಟ । ತೇ ಸೇವಿತೀ ಬ್ರಹ್ಮನಿಷ್ಠ । ಬ್ರಹ್ಮಾಹಂಮಂತ್ರೇ ॥ ೫೨ ॥ ಐಸೇ ಶೇಷಾಮೃತೇ ಧಾಲೇ। ಕೀ ಅಮರ್ತ್ಯ ಭಾವಾ ಆಲೇ । ಮ್ಹಣೋನಿ ಬ್ರಹ್ಮತೇ ಜಾಹಾಲೇ । ಅನಾಯಾಸೇ ॥ ೫೩ ॥ ಯೇರಾ ವಿರಕ್ತಿ ಮಾಳ ನ ಘಾಲಿಚೀ । ಜಯಾ ಸಂಯಮಾಗ್ನೀಚೀ ಸೇವಾ ನ ಘಡೇಚೀ । ಜೇ ಯೋಗಾಯಾಗ ನ ಕರಿತೀಚೀ । ಜನ್ಮಲೇ ಸಾತೇ ॥ ೫೪ ॥ ಜಯಾ ಐಹಿಕ ಧಡ ನಾಹೀ । ತಯಾಂಚೇ ಪರತ್ರ ಪುಸಸೀ ಕಾಈ । ಮ್ಹಣೋನಿ ಅಸೋ ಹೇ ಗೋಷ್ಟೀ ಪಾಹಾ । ಪಾಂಡುಕುಮರಾ ॥ ೫೫ ॥

ಅರ್ಥ— ಹೀಗೆ ಅನಾದಿ ಸಿದ್ಧ ಶುದ್ಧ ಯಜ್ಞಾವಶಿಷ್ಟ ಬ್ರಹ್ಮನನ್ನು ಬ್ರಹ್ಮನಿಷ್ಠ ಜನರು ಅಹಂಬ್ರಹ್ಮಾಸ್ಮಿ ಮಂತ್ರಸೇವನ ಮಾಡಿ ಬ್ರಹ್ಮರೂಪವಾಗುತ್ತಾರೆ. ॥ ೫೨ ॥ ಈ ಪ್ರಕಾರ ಯಜ್ಞದಲ್ಲಿ ಉಳಿದ ಜ್ಞಾನರೂಪ ಅಮೃತವನ್ನು ಕುಡಿದು ಅವರು ತೃಪ್ತರಾಗಿ ಅಮರರಾಗುತ್ತಾರೆ. ಅವರು ಸಹಜವೇ ಬ್ರಹ್ಮತ್ವವನ್ನು ಹೊಂದುತ್ತಾರೆ. ॥ ೫೩ ॥ ಯಾರ ಕೈಯಿಂದ ಈ ಯಜ್ಞದ ಆಚರಣೆಯು ಸಂಭವಿಸುವದಿಲ್ಲವೋ, ಅವರಲ್ಲಿ ವೈರಾಗ್ಯಪು ಉಂಟಾಗುವದಿಲ್ಲ. ಯಾವನಿಗೆ ಆತ್ಮಸಂಯಮನ ಮಾಡಲಿಕ್ಕೆ ಬರುವದಿಲ್ಲವೋ, ಮತ್ತು ಯಾರು ಜನ್ಮಕ್ಕೆ ಬಂದಿರಲಿಕ್ಕಾಗಿಯೇ ಯೋಗ ಯಾಗಗಳನ್ನು ಮಾಡುವದಿಲ್ಲವೋ, ॥ ೫೪ ॥ ಅರ್ಜುನಾ! ಯಾರದು ಇಹಲೋಕದಲ್ಲಿ ಗತಿಯಿಲ್ಲವೋ, ಅವರ ಪರಲೋಕದಲ್ಲಿಯ ಕ್ಷೇಮಸಮಾಚಾರವನ್ನು ಏಕೆ ಕೇಳುವೆ ? ಅವರ ವಿಷಯವಾಗಿ ಮಾತನಾಡಲೇಬೇಡ. ॥೫೫॥

ಏವಂ ಬಹುವಿಧಾ ಯಜ್ಞಾ ವಿತತಾ ಬ್ರಹ್ಮಣೋ ಮುಖೇ ।
ಕರ್ಮಜಾನ್ವಿದ್ಧಿ ತಾನ್ಸರ್ವಾನೇವಂ ಜ್ಞಾತ್ವಾ ವಿಮೋಕ್ಷ್ಯಸೇ ॥ ೩೨ ॥

[ಏವಮಿತಿ] ಐಸೇ ಬಹುತೀ ಪರೀ ಅನೇಗ । ಜೇ ಸಾಂಗಿತಲೇ ತುಜ. ಕಾಯಾಗ । ತೇ ಏಸ್ಯಾರೂನಿ ವೇದೇಚಾಂಗ । ಮ್ಹಣಿತಲೇ ಆಹಾತೀ ॥೫೬॥ ಪರೀ ತೇಣೇ ವಿಸ್ತಾರೇ ಕಾಯ ಕರಾವೇ । ಹೇಚಿ ಕರ್ಮ ಸಿದ್ಧ ಜಾಣಾವೇ । ಯೇತುಲೇನಿ ಕರ್ಮಬಂಧ ಸ್ವಭಾವೇ । ಪಾವೇಲನಾ ॥೫೭॥

ಅರ್ಥ— ಹೀಗೆ ನಾನಾಪ್ರಕಾರದ ಹನ್ನೆರಡು ಯಜ್ಞಗಳನ್ನು ನಿನಗೆ ಹೇಳಿದೆನು. ಅವುಗಳ ವಿಷಯವಾಗಿ ವೇದಗಳಲ್ಲಿ ಬಹಳೇ ವಿಸ್ತೃತವಾಗಿ ಉತ್ತಮ ವರ್ಣನೆಯನ್ನು ಮಾಡಿರುತ್ತದೆ. ॥ ೫೬ ॥ ಆದರೆ ವೇದದೊಳಗಿನ ವಿಸ್ತೃತವಾದ ವರ್ಣನೆಯನ್ನು ಕೇಳಿ ಮಾಡುವದೇನು? ಈ ಸರ್ವಯಜ್ಞಗಳು ಕರ್ಮದಿಂದ ಉತ್ಪನ್ನವಾಗಿರುವ ದೆಂಬದೇ ಅದರಲ್ಲಿಯ ಸಾರವು. ಇಷ್ಟು ತಿಳಿಯುವದರಿಂದ ಕರ್ಮದ ಬಾಧೆಯು ಉಂಟಾಗುವದಿಲ್ಲ. ॥ ೫೭ ॥

ಶ್ರೇಯಾನ್ದ್ರವ್ಯಮುಯಾದ್ಯಜ್ಞಾಜ್ಜ್ಞಾನಯಜ್ಞಃ ಪರಂತಪ ।
ಸರ್ವಂ ಕರ್ಮಾಖಿಲಂ ಪಾರ್ಥ ಜ್ಞಾನೇ ಪರಿಸಮಾಪ್ಯತೇ ॥ ೩೩ ॥

[ಶ್ರೇಯಾನಿತಿ] ಅರ್ಜುನಾ, ವೇದ ಜಯಾಂಚೆ ಮೂಳ । ಜೇ ಕ್ರಿಯಾವಿಶೇಷ ಸ್ಫೂಳ । ಜಯಾ ನವ್ಹಾಳಿಯೇಜೇ ಫಳ । ಸ್ವರ್ಗಸುಖ ॥ ೫೮ ॥ ತೇ ದ್ರವ್ಯಾದಿಯಾಗ ಕೀರಹೋತೀ । ಪರೀ ಜ್ಞಾನ ಯಜ್ಞಾಚೀ ಸರೀ ನ ಪವತಿ । ಜೈಸೀ ತಾರಾ ತೇಜ ಸಂಪತ್ತೀ । ದಿನಕರಾಪಾಶೀ ॥ ೫೯ ॥ ದೇಖೇ ವರಪಾತ್ಮ ಸುಖನಿಧಾನ । ಸಾಧಾವಯಾ ಯೋಗಿಜನ । ಜೇ ನ ವಿಸಂಬಿತೀ ಅಂಜನ । ಉನ್ಮೇಷನೇತ್ರೀ ॥ ೧೬೦ ॥ ಜೇ ಧಾಂವತಯಾ ಕರ್ಮಾಚೀ ಲಾಣೀ । ನೈಷ್ಕರ್ಮ್ಯ ಬೋಧಾಚೀ ಖಾಣೀ । ಜೇ ಭುಕೇಲಿಯಾ ಧಣೀ । ಸಾಧನಾಚೀ ॥ ೬೧ ॥ ಜೇಥ ಪ್ರವೃತ್ತಿ ಪಾಂಗುಳ ಜಾಹಾಲೀ । ತರ್ಕಾಚೀ ದೃಷ್ಟೀಗೇಲೀ । ಜೇಣೇ ಇಂದ್ರಿಯೇ ವಿಸರಲೀ । ವಿಷಯಸಂಗ ॥ ೬೨ ॥ ಮನಾಚೇ ಮನ ಪಣ ಗೇಲೇ । ಜೇಥ ಬೋಲಾಚೇ ಬೋಲಕೇ ಪಣ ರೇಲೇ । ಜಯಾಮಾಜೀ ಸಾಂಪಡಲೇ । ಜ್ಞೇಯ ದಿಸೇ ॥ ೬೩ ॥ ಜೇಥ ವೈರಾಗ್ಯಾಚಾ ಪಾಂಗ ಫಿಟೇ । ವಿವೇಕಾಚಾಹೀ ಸೋಸತುಟೇ । ಜೇಥ ನ ಪಾಹತಾ ಸಹಜ ಭೆಟೇ । ಆಪಣಪೇ ॥ ೬೪ ॥

ಅರ್ಥ— ಅರ್ಜುನಾ! ಆ ಯಜ್ಞದ ಮೂಲವು ವೇದ ಮತ್ತು ಅದರಲ್ಲಿಯ ಕರ್ಮದ ಗೊಂದಲವು ಬಹಳೇ ಇರುತ್ತದೆ. ಮತ್ತು ಆದರ ಪ್ರಥಮ ಫಲವು ಸ್ವರ್ಗವಾಗಿರುತ್ತದೆ. । ೫೮ ॥ ಅದು ಕರ್ಮಯಜ್ಞವಿರುವದೇನೋ ನಿಜ. ಆದರೆ ಸೂರ್ಯನ ಮುಂದೆ ನಕ್ಷತ್ರಗಳ ತೇಜವು ಅಡಗುತ್ತದೆ. ಆ ಕರ್ಮಯೋಗವು ಜ್ಞಾನಯಜ್ಞದ ಸಮಾನ ವಾಗಲಾರದು. ॥ ೫೯ ॥ ಯಾರು ಜ್ಞಾನಾಂಜನವನ್ನು ಕಣ್ಣಿನಲ್ಲಿ ಹಾಕಿ ಆತ್ಮಸುಖರೂಪದ ಧನವನ್ನು ದೊರಕಿಸುವ ದರಿಂದ ಯೋಗೀ ಜನರು ಅಹೋರಾತ್ರಿ ಜಾಗ್ರತರಾಗಿರುತ್ತಾರೆ. ॥ ೬೦ ॥ ಯಾವ ಜ್ಞಾನವು ಆರಂಭಮಾಡಿದ ಕರ್ಮದ ಪ್ರಾಪ್ತಿಯ ಸ್ಥಾನವಾಗಿರುವದೋ, ಅದು ಬ್ರಹ್ಮಾವಜೋಧದ ಖಣಿಯಾಗಿರುತ್ತದೆ. ಮತ್ತು ಆತ್ಮಪ್ರಾಪ್ತಿಯ ಹಸಿವೆ ಯಿಂದ ಬಳಲುವ ಸಾಧಕರಿಗೆ ತೃಪ್ತಿಯ ಸ್ಥಾನವಾಗಿರುತ್ತದೆ. ॥ ೬೧ ॥ ಯಾವ ಸ್ಥಳದಲ್ಲಿ ಕರ್ಮಾಪೇಕ್ಷೆಯು ಇಲ್ಲ ದಂತಾಗಿರುವದೋ ಆ ಸ್ಥಳದಲ್ಲಿ ತರ್ಕವು ನಿಂತು ಹೋಗಿರುವದು. ಮತ್ತು ಯಾವದರ ಯೋಗದಿಂದ ಇಂದ್ರಿಯಗಳು ವಿಷಯಸೇವನೆ ಮಾಡುವದನ್ನು ಮರೆತುಬಿಟ್ಟಿರುವವೋ, ॥ ೬೨ ॥ ಯಾವ ಸ್ಥಳದಲ್ಲಿ ಮನಸಿನ ಮನನೇ ಇಲ್ಲದಂತಾ ಗಿರುವದೋ, ಎಲ್ಲಿ ಶಬ್ದದ ಗತಿಯು ನಿಂತುಹೋಗಿರುವದೋ, ಆ ಸ್ಥಳದಲ್ಲಿ ಅಂತರ್ಗತ ಬ್ರಹ್ಮವು ಪ್ರಾಪ್ತವಾಗುತ್ತದೆ. ॥ ೬೩ ॥ ಯಾವ ಸ್ಥಳದಲ್ಲಿ ವೈರಾಗ್ಯದ ಕಷ್ಟದಾಯಕವಾದ ಸ್ಥಿತಿಯು ಇಲ್ಲದಂತಾಗುವದೋ, ವಿಚಾರದ ಧಾವನೆಯು ನಷ್ಟವಾಹೊಂದುವದೋ, ಅಲ್ಲಿ ಶ್ರಮವಿಲ್ಲದೇ ಆತ್ಮಜ್ಞಾನವು ಪ್ರಾಪ್ತವಾಗುತ್ತದೆ. ॥ ೬೪ ॥

ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ ।
ಉಪದೇಕ್ಷ್ಯಂತಿ ತೇ ಜ್ಞಾನಂ ಜ್ಞಾನಿನಸ್ತತ್ವದರ್ಶಿನಃ ॥ ೩೪ ॥

[ತದ್ವಿದ್ಧಿ ಪ್ರಣಿಪಾತೇನೇತಿ] ತೇ ಗಾ ಜ್ಞಾನ ಪೈ ಬರವೇ । ಜರೀ ಮನೀ ಆಥೀ ಜಾಣಾವೇ । ತರೀ ಸಂತಾಕೇ ಭಜಾವೇ । ಸರ್ವಸ್ವೇಸೀ ॥ ೬೫ ॥ ಜೇ ಜ್ಞಾನಾಚಾ ಕುರುತಾ । ತೇಥ ಸೇವಾ ಹಾ

ದಾರಿವಂಶಾ । ತೋ ಸ್ವಾಧೀನ ಕರೀ ಸುಭಟಾ ! ವೋಳಗೋನೀ ॥ ೬೬ ॥ ತರೀ ತನುಮನ ಜೀವೇ ।
ಚರಣಾಸೀ ಲಾಗಾವೇ । ಆಣಿ ಅಗರ್ವತಾ ಕರಾವೇ । ದಾಸ್ಯ ಸಕಳ ॥ ೬೭ ॥ ಮಗ ಅಪೇಕ್ಷಿತ ಜೇ
ಅಪ್ರುಲೇ । ತೇಹೀ ಸಾಂಗತೀಲ ಪುಢೀಲೇ । ಜೇಣೇ ಅಂತಃಕರುಣ ಬೋಧಲೇ । ಸಂಕಲ್ಪಾನಯೇ ॥೬೮॥

ಅರ್ಥ— ಹೀಗೆ ಸರ್ವೋತ್ಕೃಷ್ಟ ಜ್ಞಾನವನ್ನು ದೊರಕಿಸಬೇಕೆಂಬ ಇಚ್ಛೆಯು ಇದ್ದರೆ ನೀನು ಬ್ರಹ್ಮಜ್ಞಾನ ಸಂಪನ್ನರಾದ ಸಂತರ ಸೇವೆಯನ್ನು ಮಾಡು. ॥ ೬೫ ॥ ಆ ಸಂತರು ಜ್ಞಾನದ ಗೃಹವೇ ಆಗಿರುವರು. ಸೇವಾಧರ್ಮವು ಆ ಗೃಹದ ದ್ವಾರವಾಗಿರುವದು. ಆದರೆ ಅರ್ಜುನಾ ! ನೀನು ಅತ್ಯಕಡೆಗೆ ತಿರುಗಿ ಸೇವಾಧರ್ಮರೂಪವಾದ ಬಾಗಿಲನ್ನು ನಿನ್ನ ಸ್ವಾಧೀನಪಡಿಸಿಕೊಳ್ಳು. ॥ ೬೬ ॥ ಅಂದರೆ ಸಂತರ ಸೇವೆಯನ್ನು ಮಾಡು. ಅದು ಹೇಗೆ ಮಾಡಬೇಕೆಂದು ನೀನು ಕೇಳಬಹದು. ಆದಸೆ ಕಾಯಾ-ವಾಚಾ-ಮನ ಮತ್ತು ಪ್ರಾಣದಿಂದ, ಅಹಂಕಾರರಹಿತನಾಗಿ ಸಂತರ ಚರಣ ಸೇವೆಯನ್ನು ಮಾಡುವವನಾಗು. ॥ ೬೭ ॥ ಈ ಪ್ರಕಾರದ ಸೇವೆಮಾಡುವದರಿಂದ ಪ್ರಸನ್ನರಾದ ಸಂತರ ಪ್ರಸನ್ನ ಸ್ಥಿತಿಯಲ್ಲಿ, ಜನನ-ಮರಣರೂಪೀ ಸಂಸಾರದ ದುಃಖಬಂಧನದಿಂದ ಮುಕ್ತನಾಗುವ ಉಪಾಯವನ್ನು ಕೇಳಿದರೆ ಅದನ್ನೂ ಬೋಧಿಸುವರು. ಆ ಯೋಗದಿಂದ ಶಿಷ್ಯನ ಅಂತಃಕರುಣದಲ್ಲಿ ಸಂಸಾರದ ಕಲ್ಪನೆಯು ಸಹ ಬರುವದಿಲ್ಲ. ॥ ೬೮ ॥

ಯಜ್ಜ್ಞಾತ್ವಾ ನ ಪುನರ್ಮೋಹಮೇವಂ ಯಾಸ್ಯಸಿ ಪಾಂಡವ ।
ಯೇನ ಭೂತಾನ್ಯಶೇಷೇಣ ದ್ರಕ್ಷ್ಯಸ್ಯಾತ್ಮನ್ಯಥೋ ಮಯಿ ॥ ೬೫ ॥

[ಯಜ್ಜ್ಞಾತ್ವೇತಿ] ಜಯಾಚೇನಿ ವಾಕ್ಯ ಉಜಿವಡೇ । ಜಾಹಾಲೇ ಚಿತ್ತ ನಿಘಡೇ । ಬ್ರಹ್ಮಾಚೇನಿ ಪಾಡೇ । ನಿಃಶಂಕ ಹೋಯ ॥ ೬೯ ॥ ತೇ ವೇಳಿ ಆಪಣ ಪೇಯಾ ಸಹಿತೇ । ಇಯೀ ಅಶೇಷಹಿ ಭೂತೇ ।
ಮಾಝ್ಯಾ ಸ್ವರೂಪೀ ಅಖಂಡಿತೇ । ದೇಖಸೀ ತೂ ॥ ೭೦ ॥ ಐಸೇ ಜ್ಞಾನಪ್ರಕಾಶೀ ಪಾಹೇಲ । ತೈ
ಮೋಹಾಂಧಕಾರ ಜಾಈಲ । ಜೈ ಶ್ರೀ ಗುರುಕೃಪಾ ಹೋಈಲ ಪಾರ್ಥಾ ಗಾ ॥ ೭೧ ॥

ಅರ್ಥ— ಯಾವ ಉಪದೇಶದಿಂದ ಬ್ರಹ್ಮನಂತೆ ನಿಃಸಂಶಯ, ನಿರ್ಭಯ ಅಂತಃಕರುಣನು ಯಾವಾಗ ಆಗುವದೋ ॥ ೬೯ ॥ ಆವಾಗ ತನ್ನ ಸಹ ಸರ್ವಭೂತಗಳೂ ನನ್ನ ಅಖಂಡರೂಪದ ಸ್ಥಳದಲ್ಲಿದ್ದದ್ದನ್ನು ನೀನು ನೋಡುವಿ. ॥ ೭೦ ॥ ಪಾರ್ಥಾ, ಈ ರೀತಿಯಿಂದ ಯಾವಾಗ ಸತ್ಪುರುಷರ ಕೃಪಾಕಟಾಕ್ಷಕ್ಕೆ ಪಾತ್ರನಾಗುವಿಯೋ, ಆವಾಗ ನಿನ್ನ ಅಂತಃಕರುಣದಲ್ಲಿ ಜ್ಞಾನಸೂರ್ಯನು ಉದಯನಾಗಿ ಮೋಹಾಂಧಕಾರವು ಇಲ್ಲದಂತಾಗುವದು. ॥ ೭೧ ॥

ಅಪಿ ಚೇದಸಿ ಪಾಪೇಭ್ಯಃ ಸರ್ವೇಭ್ಯಃ ಪಾಪಕೃತ್ತಮಃ ।
ಸರ್ವಂ ಜ್ಞಾನಪ್ಲವೇನೈವ ವೃಜಿನಂ ಸಂತರಿಷ್ಯಸಿ ॥ ೩೬ ॥

[ಅಪೀತಿ] ಜರೀ ಕಲ್ಮಷಾಚಾ ಆಗರ । ತೂ ಭ್ರಾಂತೀಚಾ ಸಾಗರ । ವ್ಯಾಮೋಹಾಚಾ
ಡೋಂಗರ । ಹೋವುನಿ ಅಸಸೀ ॥ ೭೨ ತರ್ಹೀ ಜ್ಞಾನ ಶಕ್ತೀಚೇನಿ ಪಾಡೇ । ಹೇ ಆಘವೇಚಿ ಗಾಥೋ-
ಕಡೇ । ಐಸೇ ಸಾಮರ್ಥ್ಯ ಅಸೇ ಚೋ ಖಡೇ । ಜ್ಞಾನೀಇಯೇ ॥ ೭೩ ॥ ದೇಖೇ ವಿಶ್ವಸಂಭ್ರಮಾ
ಐಸಾ । ಬೋ ಅಸೂತರ್ಜಾ ಕಡನಸಾ । ತೋ ಜಯಾಚಿಯಾ ಪ್ರಕಾಶಾ । ಪುರೇಚಿನಾ ॥ ೭೪ ॥
ತಯಾ ಕಾಯಸೆ ಹೇ ಮನೋವಮಳ । ಹೇ ಬೋಲತಾಚಿ ಅತಿ ಕಿಡಾಳ । ನಾಹೀ ಯೇಣೇ ಪಾಡೇ
ಧಿಸಾಳ ದುಜೇ ಜಗೀ ॥ ೭೫ ॥

ಅರ್ಥ— ನೀನು ಪಾತಕದ ಆಗರವು, ಭ್ರಾಂತಿಯ ಸಮುದ್ರವು, ಅಥವಾ ಭ್ರಮದ ಪರ್ವತವು. ಇದ್ದಾ ಗ್ಯಾದರೂ, ॥ ೭೨ ॥ ಜ್ಞಾನದ ಶಕ್ತಿಯ ಮುಂದೆ ಈ ಸರ್ವವೂ ತುಚ್ಛವಾಗಿರುವವು. ಹೀಗೆ ಈ ಜ್ಞಾನದಲ್ಲಿ ಶ್ರೇಷ್ಠ ನಾದ ಸಾಮರ್ಥ್ಯವು ಇರುತ್ತದೆ. ॥ ೭೩ ॥ ಪರಮಾತ್ಮ ಜ್ಞಾನದ ಉದಯವಾದ ಕೂಡಲೇ ಈ ವಿಶ್ವವು ಸತ್ಯವಾಗಿ

ರುವದೆಂಬ ಭ್ರಮೆಯು ನಷ್ಟವಾಗುತ್ತದೆ. ॥ ೭೪ ॥ ಆ ಜ್ಞಾನದ ಮುಂದೆ ಮನಸಿನೊಳಗಿನ ಅಜ್ಞಾನವ ಪಾಡೇನು ? ಆದುದರಿಂದ ನಿನ್ನ ಮನಸಿನಲ್ಲಿ ಈ ಸಂಶಯವನ್ನು ತರುವದು ಯೋಗ್ಯವಾಗಿರುವದಿಲ್ಲ. ಕಾರಣವೇನೆಂದರೆ ಈ ಜಗತ್ತಿನಲ್ಲಿ ಜ್ಞಾನದ ಸಮಾನವಾದ ಅನ್ಯವಸ್ತುವೇ ಇರುವದಿಲ್ಲ. ॥ ೭೫ ॥

ಯಥೈಧಾಂಸಿ ಸಮಿದ್ಧೋಽಗ್ನಿರ್ಭಸ್ಮಸಾತ್ಕುರುತೇಽರ್ಜುನ ।
ಜ್ಞಾನಾಗ್ನಿಃ ಸರ್ವಕರ್ಮಾಣಿ ಭಸ್ಮಸಾತ್ಕುರುತೇ ತಥಾ ॥ ೩೭ ॥

[ಯಥೈಧಾಂಸೀತಿ] ಸಾಂಗೇ ಭುವನ ತ್ರಯಾಚೀ ಕಾಜಳೀ । ಜೇ ಗಗನಾ ಮಾಜೀ ಉಧವಲೀ । ತಿಯೇ ಪ್ರಳಯೀಂಜೇ ವಾವಟುಳೀ । ಕಾಯ ಅಭ್ರಪುರೆ ॥ ೭೬ ॥ ಕೀ ಪವನಾಜೇನಿ ಕೋಪೇ ವಾಣಿಯೆಂಚಿ ಜೋ ಪಳಿಪೆ । ತೋ ಪ್ರಳಯಾನಳ ದಡಪೆ | ತೃಣಕಾಷ್ಠೇಕಾಯೀ ॥ ೭೭ ॥

ಅರ್ಥ— ಮೂರು ಲೋಕಗಳೂ ಪ್ರಜ್ವಲಿತವಾದಮೇಲೆ ಅದರ ಹೊಗೆಯು ಆಕಾಶದಲ್ಲಿ ಹಬ್ಬಿದರೆ ಆ ಹೊಗೆಯನ್ನು ಹಾರಿಸಿ ಬಿಡುವಂಥ ಪ್ರಳಯಕಾಲದ ಬಿರುಗಾಳಿಗೆ, ಮೋಡವನ್ನು ಚದುರಿಸಿ ಇಲ್ಲವಂತೆ ಮಾಡುವುದೇನು ಅಸಾಧ್ಯವಾಗಿರುವದೇ ? ॥ ೭೬ ॥ ಇಲ್ಲವೇ ಆ ಬಿರುಗಾಳಿಯ ಸಹಾಯದಿಂದ ಅಗ್ನಿಯು ಪ್ರಜ್ವಲಿತವಾಗಿರಲು ಅದು ನೀರನ್ನು ಸಹ ಸುಟ್ಟುಬಿಡುವದು. ಅಂಥ ಪ್ರಳಯ ಕಾಲಾಗ್ನಿಯು ಹುಲ್ಲು, ಕಟ್ಟಿಗೆಗಳಿಂದ ಆರುವದು (ಅಡಗುವದು) ಸಾಧ್ಯವಿರುವದೇನು ? ॥ ೭೭ ॥

ನಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ ।
ತತ್ಸ್ವಯಂ ಯೋಗಸಂಸಿದ್ಧಃ ಕಾಲೇ ನಾತ್ಮನಿ ವಿಂದತಿ ॥ ೩೮ ॥

[ನ ಹಿ ಜ್ಞಾನೇನ ಸದೃಶಮಿತಿ] ವ್ಯೞೋನಿ ಅಸೋ ಹೇ ನಘಡೇ ತೇ ವಿಚಾರಿತಾಂಚಿ ಅಸಂಗಡೇ । ವ್ರುಢತೀ ಜ್ಞಾನಾಚೇನಿ ವಾಡೇ । ಪವಿತ್ರ ನದಿಸೇ ॥ ೭೮ ॥ ಏಥ ಜ್ಞಾನ ಹೇ ಉತ್ತಮ ಹೋಯೇ । ಆಣಿಕಹೀ ಏಕ ತೈಸೇ ಕೇ ಆಹೇ । ಜೈಸೇ ಚೈತನ್ಯಕಾನೋಹೇ । ದುಸರೇ ಗಾ ॥ ೭೯ ॥ ಯಾ ಮಹಾ ತೇಜಾಚೇನಿ ಕಸೇ । ಜರೀ ಚೋಖಾಳ ಪ್ರತಿಬಿಂಬ ದಿಸೇ । ಕಾ ಗಿಂವ ಸಿಲೇ ಗಿಂವಸೇ । ಆಕಾಶ ಹೇ ॥ ೧೮೦ ॥ ನಾತರೀ ಪೃಥ್ವೀಚೇ ನಿ ಪಾಡೇ । ಕಾಂಟಾಳೇ ಜರೀ ಚೋಡೇ । ತರೀ ಉಪಮಾ ಜ್ಞಾನಿಸೇ ಘಡೇ । ಪಾಂಡು ಕುಮರಾ ॥ ೮೧ ॥ ವ್ಯೞೋನಿ ಬಹುತೀ ಪರೀ ಪಾಹತಾ । ವ್ರುಢತ ವ್ರುಢತೀ ನಿರ್ಧಾರಿತಾ । ಹೇ ಜ್ಞಾನಾಚೀ ಪವಿತ್ರತಾ । ಜ್ಞಾನೀಂಚಿ ಆಥಿ ॥ ೮೨ ॥ ಜೈಸೀ ಅಮೃತಾಚೀ ಚವೀ ನಿವಡಿಜೇ । ತರೀ ಅಮೃತಾಚಿ ಸಾರವೀ ವ್ಯೞೆಜೇ । ತೈಸೇ ಜ್ಞಾನ ಹೇ ಉಪಮಿಜೇ । ಜ್ಞಾನೇಸೀಚಿ ॥ ೮೩ ॥ ಆತಾ ಯಾನವೀ ಜೇ ಬೋಲಣೇ । ತೇ ವಾಯಾಂಚಿ ವೇಳ ಫೇಡಣೇ । ತನ ಸಾಚಚಿ ಹೇ ಪಾರ್ಥನ್ಯೂಣೇ । ಜೇ ಬೋಲತ ಅಸಾ ॥ ೮೪ ॥ ಪರೀ ತೇಚಿ ಜ್ಞಾನ ಕೇವೀ ಜಾಣಾವೆ । ಐಸೇ ಅರ್ಜುನೇ ಜವ ಪುಸಾವೇ । ತವ ತೇ ಮನೋಗ್ಗತದೇವೇ ಜಾಣೇತಲೇ ॥೮೫॥ ಮಗ ವ್ಯೞಿತಸೇ ಕಿರೀಟೀ । ಆತಾಚಿತ್ತ ದೇಈ ಇಯೇ ಗೋಠೀ ಸಾಂಗೇ ನ ಜ್ಞಾನಾಚಿಯೇ ಭೇಟೀ । ಉಪಾಪೋ ತುಜ ॥ ೮೬ ॥

ಅರ್ಥ— ಇದಂತೂ ಇರಲಿ; ಈ ಮಾತು ಯಾವಾಗ್ಯೂ ಸಂಭವಿಸಲಾರದು. ಮತ್ತು ಅದರ ವಿಚಾರ ಮಾಡುವದು ಅಸಂಗತವಾಗಿ ಕಾಣುತ್ತದೆ ವಿಚಾರಿಸಲು, ಜ್ಞಾನದ ಸಮಾನವಾದ, ಪವಿತ್ರ ಎರಡನೆಯ ಪದಾರ್ಥವು ಇಲ್ಲಿ ಇನ್ನಾವುದೂ ಇರುವದಿಲ್ಲ. ॥ ೭೮ ॥ ಯಾವ ಪ್ರಕಾರ ಚೈತನ್ಯಕ್ಕೆ ಸಮಾನವಾದ ಮತ್ತೊಂದು ವಸ್ತುವು ದೊರಕಲಾರದೋ, ಅದೇ ಪ್ರಕಾರ ಈ ಲೋಕದಲ್ಲಿ ಶ್ರೇಷ್ಠಜ್ಞಾನವನ್ನು ಸರಿಗಟ್ಟುವ ಅನ್ಯವಸ್ತುವು ಎಲ್ಲಿಯೂ ದೊರಕುವದಿಲ್ಲ. ॥ ೭೯ ॥ ಬಂದು ನೇಳೆ ಸೂರ್ಯನ ತೇಜದಂತೆ ಅವನ ಪ್ರತಿಬಿಂಬದ ತೇಜವು ಸಮಾನವಾಗುವದೇ ?

ಇಲ್ಲವೇ ಆಕಾಶವನ್ನು ತನ್ನ ಕಂಕುಳಲ್ಲಿ ಹಿಡಿಯಲು ಬರುವದೇ ? ॥ ೮೦ ॥ ಇಲ್ಲವೇ ಪೃಥ್ವಿಗೆ ಸಮಾನವಾದ ಭಾರವುಳ್ಳ ಎರಡನೇದೊಂದು ವಸ್ತುವು ದೊರಕಿದರೆ ಮಾತ್ರ ಜ್ಞಾನದ ಬೆಲೆಯ (ಸಮಾನವಾದ) ಇನ್ನೊಂದು ವಸ್ತುವು ದೊರಕಬಹುದು. ॥ ೮೧ ॥ ಆದುದರಿಂದ ಬಹಳೊಂದು ಪ್ರಕಾರದಿಂದ ಮೇಲಿಂದಮೇಲೆ ವಿಚಾರಮಾಡಿ ನೋಡಲು ಈ ಜ್ಞಾನದ ಪವಿತ್ರ ತನವು ಜ್ಞಾನವಲ್ಲಿಯೇ ಇರುವದು ॥ ೮೨ ॥ ಅಮೃತದ ರುಚಿಯನ್ನು ಯಾರಾದರೂ ಹೇಗಿರುವದೆಂದು ಕೇಳಿದರೆ ಅದು ಅಮೃತದಂತೆಯೇ ಎಂದು ಹೇಳಬೇಕು. ಅದರಂತೆ ಜ್ಞಾನಕ್ಕೆ ಜ್ಞಾನದ ಉಪಮೆಯೇ ಯೋಗ್ಯವಾಗಿರುವದು. ॥ ೮೩ ॥ ಇನ್ನುಮೇಲೆ ಹೆಚ್ಚಿಗೆ ವಿಚಾರಿಸುವದೆಂದರೆ ವ್ಯರ್ಥವಾಗಿ ಕಾಲಹರಣಮಾಡಿದಂತಾಗುವದು. ಆವಾಗ ಅರ್ಜುನನು ಅನ್ನುತ್ತಾನೆ– ನಿಮ್ಮ ಭಾಷಣೆಯು ನಿಜವಮೆ. ॥ ೮೪ ॥ ಆದರೆ ಆ ಜ್ಞಾನವನ್ನು ಯಾವ ಉಪಾಯದಿಂದ ಪ್ರಾಪ್ತಮಾಡಿಕೊಳ್ಳಬೇಕು ? ಹೀಗೆ ಅರ್ಜುನನು ಕೇಳುವಷ್ಟರಲ್ಲಿಯೇ ಅವನ ಮನೋಭಿಪ್ರಾಯವನ್ನು ಭಗವಂತನು ತಿಳಿದಿದ್ದನು. ॥ ೮೫ ॥ ಆ ಮೇಲೆ ಅರ್ಜುನನಿಗೆ ಅನ್ನುತ್ತಾನೆ- ಎಲೋ ಕಿರೀಟೀ, ಜ್ಞಾನ ಪ್ರಾಪ್ತಿಯ ಉಪಾಯವನ್ನು ನಾನು ನಿನಗೆ ಹೇಳುತ್ತೇನೆ. ಆ ಮಾತಿನಕಡೆಗೆ ಅವಧಾನವನ್ನು ಕೊಡು. ॥ ೮೬ ॥

ಶ್ರದ್ಧಾವಾಂಲ್ಲಭತೇ ಜ್ಞಾನಂ ತತ್ಪರಃ ಸಂಯತೇಂದ್ರಿಯಃ ।
ಜ್ಞಾನಂ ಲಬ್ಧ್ವಾ ಪರಾಂ ಶಾಂತಿಮಚಿರೇಣಾಧಿಗಚ್ಛತಿ ॥ ೩೯ ॥

[ಶ್ರದ್ಧಾ ವಾಂಲ್ಲಭತೇ ಜ್ಞಾನಮಿತಿ] ಆತ್ಮಸುಖಾಚಿಯಾ ಗೋಡಿ ಯಾ ವಿಟೇ ಜೋ ಕಾಸಕಳ ವಿಷಯಾ । ಜಯಾತ್ಯಾ ರಾಯೀ ಇಂದ್ರಿಯಾ । ಮನ ನಾಹೀ ॥ ೮೭ ॥ ಜೋ ಮನಾಸೀ ಚಾಡ ನ ಸಾಂಗೇ । ಜೋ ಪ್ರಕೃತೀಚೆ ಕೇಲೇ ನೇಘೇ । ಜೋ ಶ್ರದ್ಧೇಚೇನಿ ಸಂಘೋಗೇ । ಸುಖಿಯಾ ಜಾಹಲಾ ॥ ೮೮ ॥ ತಯಾತೇಂಚಿ ಗಿಂವಸಿತ । ತೇ ಜ್ಞಾನಪಾನೇ ನಿಶ್ಚಿತ । ಜಯಾನಾಂಚೀ ಅಚುಂಬಿತ ಶಾಂತಿ ಅಸೇ ॥ ೮೯ ॥ ತೇ ಜ್ಞಾನ ಹೃದಯೀ ಪ್ರತಿಷ್ಠೇ । ಆಣಿ ಶಾಂತೀಚಾ ಅಂಕುರ ಫುಟೇ । ಮಗ ವಿಸ್ತಾರ ಬಹು ಪ್ರಕಟೇ । ಆತ್ಮಬೋಧಾಚಾ ॥ ೯೦ ॥ ಮಗ ಜೇವ್ಹತೀ ವಾಸ ಪಾಹಿಜೇ । ತೇವ್ಹತೀ ಶಾಂತೀಚಿ ದೇಖಿಜೇ । ತೇಥ ಆಪ ಪರ ನೇಣಿಜೇ । ನಿರ್ಧಾರಿತಾ ॥ ೯೧ ॥ ಐಸಾ ಹಾ ಉತ್ತರೋತ್ತರ । ಜ್ಞಾನ ಬೀಜಾಚಾ ವಿಸ್ತಾರ । ಸಾಂಗತಾ ಅಸೇ ಅಪಾರ । ಪರೀ ಅಸೋ ಆತಾ ॥೯೨॥

ಅರ್ಥ— ಆತ್ಮಸುಖದ ಅಭಿರುಚಿಯಿಂದ ಯಾವನ ಮನಸ್ಸು ಸರ್ವ ವಿಷಯಸುಖಗಳ ವಿಷಯದಲ್ಲಿ ಬೇಸರವಾಗಿ ಹೋಗಿರುವದೋ, ಮತ್ತು ಯಾವನಲ್ಲಿ ಮೂಲತಃ ಇಂದ್ರಿಯಗಳ ಪ್ರತಿಷ್ಠೆಯು ಇರುವದಿಲ್ಲವೋ, ॥ ೮೭ ॥ ಯಾವನು ತನ್ನ ಅಪೇಕ್ಷೆಯನ್ನು ತನ್ನ ಮನಸಿಗೆ ತಿಳಿಯಗೊಡುವದಿಲ್ಲವೋ, ಅವನು ಪೂರ್ವ ಕರ್ಮ ಸಂಸ್ಕಾರದಿಂದ ಉತ್ಪನ್ನವಾದಂಥ ವಾಸನೆಯನ್ನು ವಿಚಾರದಲ್ಲಿ ತರುವದೇ ಇಲ್ಲ. ಪ್ರಕೃತಿ ಕಡೆಯಿಂದಾಗುವ ಕರ್ಮ (ಆ ಕರ್ಮದ ಕರ್ತೃತ್ವ) ವನ್ನು ತನ್ನ ಕಡೆಗೆ ತೆಗೆದುಕೊಳ್ಳುವದಿಲ್ಲ. ಶ್ರದ್ಧೆಯ ಉಪಭೋಗದಿಂದ ಅವನು ಸಂತೋಷ ಉಳ್ಳವನಾಗಿರುತ್ತಾನೆ. ॥ ೮೮ ॥ ಯಾವ ಜ್ಞಾನದಲ್ಲಿ ಹಿತಪ್ರೋತ ಶಾಂತಿ ತುಂಬಿರುವದೋ ಆ ಜ್ಞಾನವು ಅವನನ್ನು ಹುಡುಕುತ್ತ ಹುಡಕುತ್ತ (ತನ್ನಿಂದ ತಾನೆ) ಬಂದು ಅವನ ವಶವಾಗುತ್ತದೆ. ಇದು ನಿಶ್ಚಯವು ! ॥ ೮೯ ॥ ಆ ಜ್ಞಾನವು ಅಂತಃಕರಣದಲ್ಲಿ ಸ್ಥಿರವಾಯಿತೆಂದರೆ ಶಾಂತಿಯ ಅಂಕುರವು ಹುಟ್ಟಿ ಮುಂದೆ ಆತ್ಮಬೋಧದ ವಿಸ್ತಾರವಾಗುತ್ತದೆ. ॥ ೯೦ ॥ ಆ ಮೇಲೆ ಅವನು ಎಲ್ಲಿ ಯಾವಕಡೆಗೆ ನೋಡುವನೋ ಅಲ್ಲಿ ಅವನಿಗೆ ಶಾಂತಿಯೇ ಕಣ್ಣಿಗೆ ಕಾಣುತ್ತದೆ. ಮತ್ತು ಆ ಶಾಂತಿಯ ಸ್ಥಳದಲ್ಲಿ ಆಪ–ಪರ ಭಾವನೆಯು ಇರುವದಿಲ್ಲ. ॥೯೧॥ ಈ ರೀತಿಯಿಂದ ಜ್ಞಾನದ ವಿಷಯದಲ್ಲಿ ಎಷ್ಟು ವರ್ಣನೆ ಮಾಡಿದರೂ ತೀರದು. ಅದು ಅಲ್ಪವೇ ಆಗಿರುವದು. ಆದರೆ ಆ ಮಾತು ಈಗ ಇಷ್ಟಕ್ಕೇ ಸಾಕು. ॥೯೨॥

ಅಜ್ಞಶ್ಚಾಶ್ರದ್ಧಧಾನಶ್ಚ ಸಂಶಯಾತ್ಮಾ ವಿನಶ್ಯತಿ ।
ನಾಯಂ ಲೋಕೋಽಸ್ತಿ ನ ಪರೋ ನ ಸುಖಂ ಸಂಶಯಾತ್ಮನಃ ॥ ೪೦ ॥

[ಅಜ್ಞಶ್ಚೇತ] ಏಕೇ ಜಯಾ ಪ್ರಾಣಿ ಯಾಜ್ಞಾ ಕಾಯೀ । ಇಯಾ ಜ್ಞಾನಾಚೀ ಆವಡೀ ನಾಹೀ । ತಯಾಚೇ ಜಿಯಾಲೇ ವ್ಯರ್ಥೋ ಕಾಈ । ವರೀ ಮರಣ ಚಾಂಗ ॥ ೯೩ ॥ ಶೂನ್ಯ ಜೈಸೇ ಗ್ರಹ । ಕಾ ಚೈತನ್ಯೇ ವೀಣ ದೇಹ । ತೈಸೇ ಜೀವಿತ ತೇ ಸಂಮೋಹ । ಜ್ಞಾನಹೀನ ॥ ೯೪ ॥ ಅಥವಾ ಜ್ಞಾನಕೀರ ಅಪುನೋಹೇ । ಪರೀ ತೇ ಚಾಡ ಏಕೀ ಜರೀ ವಾಹೇ । ತರೀ ತೇಥ ಜೀವ್ಹಾಳಾ ಕಾಂಹೀ ಆಹೇ । ಪ್ರಾಪ್ತೀಚಾಸೈ ! ೯೫ ॥ ವಾಂಚೂನಿ ಜ್ಞಾನಾಚೀ ಗೋಠೀ ಕಾಯಸೀ । ಪುರೀ ತೇ ಆಸ್ಥಾಹೀ ನಥೀ ಮಾನಸೀ । ತರೀ ತೇ ಸಂಶಯರೂಪ ಹುತಾಶೀ । ಪಡಿಲಾ ಜಾಣ ॥ ೯೬ ॥ ಜೇ ಅಮೃತಹೀ ಪರೀ ನಾವಡೇ । ಐಸೇ ಸಾವಿ ಯಾಚಿ ಅರೋಚಕ ಚೈಪಡೇ । ತೈಸಾ ಮರಣ ಆಲೀ ಅಸೇ ಘಡೇ । ಜಾಣೋಯೇಕೇ ॥ ೯೭ ॥ ತೈಸಾ ವಿಷಯಸುಖೇ ರಂಜೇ । ಜೋ ಜ್ಞಾನೇ ಸೀಂಚಿ ಮಾಜೇ । ತೋ ಸಂಶಯೇ ಅಂಗೀ ಕಾರಿಜೇ । ಏಥ ಭ್ರಾಂತಿನಾಹೀ ॥ ೯೮ ॥ ಮಗ ಸಂಶಯೀ ಜರೀ ಪಡಿಲಾ । ತರೀ ನಿಭ್ರಾಂತ ಜಾಣೇ ನಾಸಲಾ । ತೋ ಐಸಿಕ ಪರತಾ ಮುಕಲಾ । ಸುಖಾಸಿಗಾ ॥೯೯॥ ಜಯಾ ಕಾಳಜ್ವರ ಆಂಗೀ ಬಾಣೇ । ತೋ ಶೀತೋಷ್ಣ ಜೈಶೀ ನೇಣೇ । ಆಗೀ ಆಣೀ ಚಾಂದಿಣೇ । ಸರಿಸೇಂಚಿ ಮಾನೇ ॥ ೨೦೦ ॥ ತೈಸೇ ಸಾಜ ಆಣಿ ಲಟಕೇ । ವಿರುದ್ಧ ಆಣಿ ನಿಕೇ ಸಂಶಯೀ ತೋ ನೋಳಖೇ । ಹಿತಾಹಿತ ॥ ೧॥ ಹಾ ರಾತ್ರೀ ದಿವಸ ಪಾಹೀ । ಜೈಸಾ ಜಾತ್ಯಂಧಾ ಠಾವುವಾ ನಾಹೀ । ತೈಸೇ ಸಂಶಯೀ ಅಸತಾ ಕಾಂಹೀ । ಮನಾ ನಯೇ ॥ ೨ ॥ ಮ್ಹಣವೂನಿ ಸಂಶಯಾಹೂನಿ ಥೋರ । ಆನೀಕ ನಾಹೀ ವಾಪ ಘೋರ । ಹಾ ವಿನಾಶಾಚೀ ವಾಗುರ । ಪ್ರಾಣಿ ಯಾಂಸೀ ॥ ೩ ॥ ಯೇಣೇ ಕಾರಣೇ ತುವಾತ್ಯಜಾವಾ । ಆಧೀ ಹಾಚಿ ಏಕ ಜೀಣಾವಾ । ಜೋ ಜ್ಞಾನಾಚಿ ಯಾ ಅಭಾವಾ । ಮಾಜೀ ಅಸೇ ॥ ೪ ॥ ಜೈ ಅಜ್ಞಾನಾಚೇ ಗಡದ ಪಡೇ । ತೈಹಾ ಬಹುವಸ ಮನೀ ವಾಢೇ । ಮ್ಹಣೋನಿ ಸರ್ವಥಾ ಮಾರ್ಗ ನೋಡೇ । ವಿಶ್ವಾಸಾಚಾ ॥ ೫ ॥ ಹೃದಯೀ ಹಾಚಿ ನ ಸವಾಯೇ ಬುದ್ಧಿತೇ ಗಿವ ಸೂನಿ ರಾಯೇ । ತೇಥೆ ಸಂಶಯಾತ್ಮಕ ಹೋಯೇ ಲೋಕತ್ರಯ ॥ ೬ ॥

ಅರ್ಥ— ಯಾವ ಮನುಷ್ಯನಲ್ಲಿ ಇಂಥ ಪ್ರಕಾರದ ಜ್ಞಾನಪ್ರಾಪ್ತಿಯ ವಿಷಯವಾಗಿ ಶ್ರದ್ಧೆಯು ಉಂಟಾಗುವ ದಿಲ್ಲವೋ ಅವನ ಜೀವಿತವು ವ್ಯರ್ಥವಾಗಿರುವದು. ಅವನು ಬದುಕಿರುವದರಕಿಂತಲೂ ಸಾಯುವದೇ ಲೇಸು. ॥ ೯೩ ॥ ಒಂದಾನೊಂದು ನಿರ್ಜನವಾದ ಹಾಳುಭುವನವೂ, ಇಲ್ಲವೇ ಪ್ರಾಣವಿಲ್ಲದ ಶರೀರವೂ ಹೇಗೋ ! ಹಾಗೆಯೇ ಜ್ಞಾನಹೀನ ಮನುಷ್ಯನ ಜೀವಿತವು ಮೋಹಯುಕ್ತ (ಶೂನ್ಯ) ವಾಗಿರುವದು. ॥ ೯೪ ॥ ನಿಜವಾದ ಜ್ಞಾನವು ಪ್ರಾಪ್ತವಾಗದಿದ್ದರೆ ಬಿಡಲಿ. ಆದರೆ ಆಜ್ಞಾನಕ್ಕೊಸುಗ ಪ್ರಯತ್ನವನ್ನಾದರೂ ಅವನು ಮಾಡಿದರೆ ತುಸುವಾದರೂ ಫಲಪ್ರಾಪ್ತಿಯಾಗದೇ ಇರದು. ॥ ೯೫ ॥ ಜ್ಞಾನದೊರಕಿಸುವ ವಿಷಯವಂತೂ ಒತ್ತಟ್ಟಿಗೆ ಉಳಿಯಲಿ. ಆದರೆ ಜ್ಞಾನವು ಪ್ರಾಪ್ತಿಯಾಗ ಬೇಕೆಂಬ ಅಪೇಕ್ಷೆಯು ಕೂಡ ಯಾರಲ್ಲಿ ಇರುವದಿಲ್ಲವೋ ಅವರು ಸಂಶಯರೂಪ ಅಗ್ನಿಯಲ್ಲಿ ಬಿದ್ದಿರುವರೆಂದು ತಿಳಿ. ॥ ೯೬ ॥ ಯಾಕಂದರೆ ಮನುಷ್ಯನಿಗೆ ಅಮೃತವು ಸಹ ರುಚಿಯಾಗದೇ ಅರುಚಿಯುತ್ಪನ್ನವಾದರೆ, ಅವನಿಗೆ ಮರಣವು ಸಮೀಪಿಸಿರುವುದೆಂದು ನಿಶ್ಚಯವಾಗಿ ತಿಳಿ. ॥ ೯೭ ॥ ಅದರಂತೆಯೇ ವಿಷಯಸುಖವಲ್ಲಿಯೇ ಯಾವನು ಆನಂದ ಹೊಂದುತ್ತಾನೋ, ಮತ್ತು ಜ್ಞಾನಪ್ರಾಪ್ತಿಯ ವಿಷಯದಲ್ಲಿ ಅಲಕ್ಷ್ಯನಾಗಿರುವನೋ, ಅವನನ್ನು ಸಂಶಯವು ನುಂಗಿ ಬಿಟ್ಟಿರುವದೆಂಬುದರಲ್ಲಿ ಸಂಶಯವಿಲ್ಲ. ॥ ೯೮ ॥ ಈ ರೀತಿಯಿಂದ ಯಾವನು ಸಂಶಯದಲ್ಲಿ ಬೀಳುತ್ತಾನೋ, ಅವನು ನಾಶಹೊಂದಿದನೆಂದು ನಿಃಸಂಶಯವಾಗಿ ತಿಳಿ. ಆದುದರಿಂದ ಅವನು ಇಹಲೋಕದ, ಮತ್ತು ಪರಲೋಕದ ಸುಖದಿಂದ ದೂರಾಗಿರುವನು. ॥ ೯೯ ॥ ಯಾವನಿಗೆ ಸನ್ನಿಪಾತ ಜ್ವರವು ಬಂದಿರುವದೋ ಅವನಿಗೆ ಶೀತೋಷ್ಣದ ಅನುಭವವಾಗ ಲಾರದು. ಅವನು ಬಿಸಿಲು ಬೆಳದಿಂಗಳು ಸಹ ಸಮಾನವೆಂದೇ ತಿಳಿಯುತ್ತಾನೆ. ॥ ೨೦೦ ॥ ಅದೇ ಪ್ರಕಾರ ಸತ್ಯ–ಅಸತ್ಯ, ಅನುಕೂಲ-ಪ್ರತಿಕೂಲ, ಹಿತ–ಅಹಿತ ಇವುಗಳು ಸಂಶಯಾತ್ಮನಿಗೆ ತಿಳಿಯುವದಿಲ್ಲ. ॥ ೧ ॥ ಯಾವ

ಪ್ರಕಾರ ಜನ್ಮಾಂಧನಿಗೆ ರಾತ್ರಿ-ಹಗಲು ಗೊತ್ತಿರುವದಿಲ್ಲವೋ, ಅದೇ ಪ್ರಕಾರದ ಸಂಶಯಾತ್ಮನಿಗೆ ಯಾವದೂ ತಿಳಿಯುವದಿಲ್ಲ. ॥ ೨ ॥ ಆದುದರಿಂದ ಸಂಶಯದಕಿಂತಲೂ ಎರಡನೇ ಭಯಂಕರ ಪಾಪವು ಯಾವದೂ ಇರುವದಿಲ್ಲ. ಪ್ರಾಣಗಳನ್ನು ನಾಶಪಡಿಸುವ ಒಂದು ಪಾಶವೇ ಅದು ಆಗಿರುವದು. ॥೩॥ ಈ ಕಾರಣದ ದೆಶೆಯಿಂದಲಾದರೂ, ನೀನು ಅದರ ಸಂಗತಿಯನ್ನು ಬಿಟ್ಟು. ಮೊದಲು ಇದನ್ನು ಜಯಿಸು. ಈ ಸಂಶಯದ ವ್ಯಾಪ್ತಿಯು ಜ್ಞಾನದ ಅಭಾವದಲ್ಲಿ ಮಾತ್ರ ಇರುತ್ತದೆ. ॥ ೪ ॥ ಯಾವಾಗ ಅಜ್ಞಾನವ ದಟ್ಟತವಾದ ಕತ್ತಲೆಯು ಇರುತ್ತದೋ, ಆವಾಗ ಈ ಸಂಶಯವು ಮನಸಿನಲ್ಲಿ ಬೆಳೆಯಹತ್ತುತ್ತದೆ. ಆದುದರಿಂದ ಅದು ಮನುಷ್ಯನಲ್ಲಿ ವಿಶ್ವಾಸದ ಹೆಸರನ್ನೂ ಸಹ ಅಂಕುರಿಸ ಗೊಡುವದಿಲ್ಲ. ॥ ೫ ॥ ಇದು ಅಂತಃಕರುಣದಲ್ಲಿಯೇ ತುಂಬಿಕೊಂಡಿರುವದಲ್ಲದೇ, ಬುದ್ಧಿಯನ್ನು ಸಹ ಅಚ್ಛಾದಿಸಿ ಬಿಡುತ್ತದೆ. ಆ ಮೇಲೆ, ಆ ಮನುಷ್ಯನಿಗೆ ಮೂರು ಲೋಕಗಳೂ ಸಂಶಯಾತ್ಮಕವೇ ಆಗಿ ಕಾಣುತ್ತವೆ. ॥ ೬ ॥

ಯೋಗಸಂನ್ಯಸ್ತಕರ್ಮಾಣಂ ಜ್ಞಾನಸಂಛಿನ್ನಸಂಶಯಂ ।
ಆತ್ಮವಂತಂ ನ ಕರ್ಮಾಣಿ ನಿಬಧ್ನಂತಿ ಧನಂಜಯ ॥ ೪೧ ॥

[ಯೋಗ ಸಂನ್ಯಸ್ತೇತಿ] ಐಸಾ ಜರೀ ಥೋರಾವೇ । ತರೀ ಉಪಾಯೇ ಏಕೇ ಆಂಗವೇ । ಜರೀ ಹಾತೀ ಹೋಯಬರನೇ । ಜ್ಞಾನಖಡ್ಗ ॥ ೭ ॥ ತರೀ ತೇಣೇ ಜ್ಞಾನಶಸ್ತ್ರೇ ತಿಖಟೇ । ನಿಖಳ ಹಾ ನಿವಟೇ । ಮಗ ನಿಃಶೇಷ ಖತಾಫಿಟೇ । ಮಾನಸೀಚಾ ॥ ೮ ॥

ಅರ್ಥ— ಆದರೆ ಇಷ್ಟು ಅದು ಬೆಳೆದಾಗ್ಯೂ ಅದನ್ನು ಸ್ವಾಧೀನವಾಡಿಕೊಳ್ಳಲಿಕ್ಕೆ ಒಂದು ಉಪಾಯವು ಇರುವದು. ಹದನವಾದ ಜ್ಞಾನಖಡ್ಗವು ಕೈಯಲ್ಲಿದ್ದರೆ, ॥ ೭ ॥ ಆ ತೀಕ್ಷ್ಣವಾದ ಶಸ್ತ್ರವ ಯೋಗದಿಂದ ಈ ಸರ್ವವೂ ಇಲ್ಲದಂತಾಗುತ್ತದೆ. ಆ ಮೇಲೆ ಅವನ ಮನಸಿನೊಳಗಿನ ಸಂಶಯವು ಸಮೂಲವಾಗಿ ನಾಶಹೊಂದುತ್ತದೆ. ॥ ೮ ॥

ತಸ್ಮಾದಜ್ಞಾನಸಂಭೂತಂ ಹೃತ್ಸ್ಥಂ ಜ್ಞಾನಾಸಿನಾತ್ಮನಃ ।
ಛಿತ್ತ್ವೈನಂ ಸಂಶಯಂ ಯೋಗಮಾತಿಷ್ಠೋತ್ತಿಷ್ಠ ಭಾರತ ॥ ೪೨ ॥

ಇತಿ ಶ್ರೀಮದ್ಭಗವದ್ಗೀತಾ ಸೂಪನಿಷತ್ಸು ಬ್ರಹ್ಮವಿದ್ಯಾಯಾಂ ಯೋಗಶಾಸ್ತ್ರೇ ಶ್ರೀಕೃಷ್ಣಾರ್ಜುನಸಂವಾದೇ ' ಬ್ರಹ್ಮಾರ್ಪಣಯೋಗೋ ' ನಾಮ ಚತುರ್ಥೋಽಧ್ಯಾಯಃ ॥ ೪ ॥

[ತಸ್ಮಾದಿತಿ] ಯಾಕಾರಣೇ ಪಾರ್ಥಾ । ಉಠೀ ವೇಗೀ ವರೌತಾ । ನಾಶ ಕರೋನಿ ಹೃದಯಸ್ಥಾ । ಸಂಶಯಾಸೀ ॥ ೯ ॥ ಐಸೇ ಸರ್ವಜ್ಞಾಚಾ ಬಾಪ । ಜೋ ಶ್ರೀಕೃಷ್ಣ ಜ್ಞಾನದೀಪ । ತೋಮ್ಹಣತಪೇ ಸ ಕೃಪ । ಐಕೇರಾಯಾ ॥ ೨೧೦ ॥ ತವ ಯಾ ಪೂರ್ವಾಪರ ಬೋಲಾಚಾ । ವಿಚಾರೂನಿ ಕುಮರುಪಾಂಡೂಚಾ । ಕೈಸಾ ಪ್ರಶ್ನ ಅವಸರೀಂಚಾ । ಕರೀತ ಹೋಈಲ ॥ ೧೧ ॥ ತೇಕಥೇಚೀ ಸಂಗತೀ । ಭಾವಾಚೀ ಸಂಪತ್ತೀ । ರಸಾಚೀ ಉನ್ನತೀ । ವ್ಯುಣಿಪೇಲಪುಢಾ ॥ ೧೨ ॥ ಜಯಾಚಿಯಾ ಬರವೇಪಣೇ । ಕೀಜೇ ಆಠಾ ರಸಾಂಚೀ ವೋವಳಾಣೇ । ಜೋ ಸಜ್ಜನಾಚಿಯೇ ಆಯಣೇ । ವಿಸಾವಾ ಜಗೀ ॥ ೧೩ ॥ ಜೋ ಶಾಂತಚ ಅಭಿನವೇಲ । ತೇ ಪರಿಯಸಾ ಮರ್ಮಾಜೇ ಬೋಲ । ಜೇ ಸಮುದ್ರಾ ಹೂನಿ ಸಖೋಲ । ಅರ್ಥಭರಿತ ॥ ೧೪ ॥ ಜೈಸೇ ಬಿಂಬ ತರೀ ಬಹಕೇಚಿ ಎವಢೇ । ಪರೀ ಪ್ರಕಾಶಾಸಿ ತ್ರಿಭುವನ ಥೋಕಡೇ । ಶಬ್ದಾಚೀ ವ್ಯಾಪ್ತಿ ತೇಣೇ ಪಾಡೇ । ಅನುಭವಾವೀ ॥ ೧೫ ॥ ನಾತರೀ ಕಾಮಿತಯಾಚಿಯಾ ಇಚ್ಛಾ । ಫಳೇ ಕಲ್ಪವೃಕ್ಷ ಜೈಸಾ । ಬೋಲ ವ್ಯಾಪಕ ಹೋಯ ತೈಸಾ । ತರೀ ಅವಧಾನ ದ್ಯಾವೇ ॥ ೧೬ ॥ ಹೇ ಅಸೋಕಾಯ ಮ್ಹಣಾವೇ । ಸರ್ವಜ್ಞ ಜ್ಞಾನತೀ ಸ್ವಭಾವೇ । ತರೀ ನಿಕೇ ಚಿತ್ತ ದ್ಯಾವೇ । ಹೇ ವಿನಂತಿ ಮಾಝೀ ॥ ೧೭ ॥ ಜೇಥ ಸಾಹಿತ್ಯ ಆಣಿ ಶಾಂತಿ ಹೇ ರೇಖೌ

ದಿಸೇ ಬೋಲತೀ । ಜೈಸೀ ಲಾವಣ್ಯ ಗುಣ ಕುಳವತೀ । ಆಣಿ ಪತಿವ್ರತಾ ॥ ೧೪ ॥ ಆಧೀಂಚಿ ಸಾಖರ ಆವಡೇ । ತೇಚೀ ಜರೀ ಓಖದೀ ಚೋಡೇ । ತರೀ ಸೇವಾವೀ ನಾಕಾ ಕೋಡೇ । ನಾವಾ ನಾವಾ ॥ ೧೯ ॥ ಸಹಜೇ ಮಲಯಾನಿಲ ಮಂದ ಸುಗಂಧ । ತಯಾ ಅಮೃತಾಚಾ ಹೋಯಸ್ವಾದ ॥ ಆಣಿ ತೇಥೇಂಚಿ ಜೋಡೇನಾದ । ಜರೀ ದೈವಗತ್ಯಾ ॥ ೨೦ ॥ ತರೀ ಸ್ಪರ್ಶೀ ಸರ್ವಾಂಗೇ ನಿವವೀ ! ಸ್ವಾದೇ ಜಿವ್ಹೇತೇ ನಾಚವೀ । ತೇವೀಂಚಿ ಕಾನಾಕರವೀ । ಮ್ಹಣೇ । ಬಾಪ ಮಾಝಾ ॥ ೨೧ ॥ ತೈಸೇ ಕಥೇಚೇ ಇಯೇ ಏಕಣೇ । ಏಕ ಶ್ರವಣಾಂಸಿ ಹೋಯಪಾರಣೇ । ಆಣಿ ಸಂಸಾರ ದುಃಖ ಮೂಳವಣೇ । ವಿಕೃತೀ ವಿಣೇ ॥ ೨೨ ॥ ಜರೀ ಮಂತ್ರೀಚಿ ವೈರೀ ಮರೇ । ತರೀ ವಾಯಾ ಕಾ ಬಾಂಧಾವೇ ಕಟಾರೇ (ರೋಗಜಾಯ ದೂಧ ಸಾಖರೇ । ತರೀ ನಿಂಬಕಾ ಪಿಯಾವಾ ॥ ೨೩ ॥ ತೈಸಾ ಮನಾಚಾ ಮಾರ ನ ಕರಿತಾ । ಆಣಿ ಇಂದ್ರಿಯಾ ದುಃಖ ನ ದೇತಾ । ಏಥ ಮೋಕ್ಷ ಅಸೇ ಽಯತಾ । ಶ್ರವಣಾಚೀ ಮಾಜೀ ॥ ೨೪ ॥ ಮ್ಹಣೋನಿ ಆಥಿಲಿಯಾ ಆರಾಣುಕಾ । ಗೀತಾರ್ಥ ಹಾನಿಕಾ । ಜ್ಞಾನದೇವ ಮ್ಹಣೇ ಆಇಕಾ । ನಿವೃತ್ತಿದಾಸ ॥ ೨೫ ॥

ಇತಿ ಶ್ರೀ ಜ್ಞಾನದೇವ ವಿರಚಿತಾಯಾಂ ಭಾವಾರ್ಥದೀಪಿಕಾಯಾಂ ಚತುರ್ಥೋಽಧ್ಯಾಯಃ ॥ ೪ ॥ ಶ್ಲೋಕ ೪೨; ಓವಿ ೨೨೫

ಅರ್ಥ— ಆದುದರಿಂದ ಪಾರ್ಥಾ! ನಿನ್ನ ಮನಸಿನಲ್ಲಿಯ ಸಂಶಯವನ್ನು ಹೊರದೂಡಿ (ಯುದ್ಧಕ್ಕೆ) ಎದ್ದೇಳು. ।। ೯ ।। ಸಂಜಯನು ಧೃತರಾಷ್ಟ್ರರಾಜನಿಗೆ ಅನ್ನುತ್ತಾನೆ— ರಾಜನೇ ! ಕೇಳು, ಜ್ಞಾನಿಜನರ ಜನಕನಾದ ಜ್ಞಾನದೀಪ ಭಗವಾನ್ ಶ್ರೀಕೃಷ್ಣ ಪರಮಾತ್ಮನು ಬಹಳೇ ಕೃಪೆಯಿಂದ ಅರ್ಜುನನಿಗೆ ಅನ್ನುತ್ತಾನೆ. ।। ೧೦ ।। ಆಗ್ಗೆ ಈ ಸರ್ವ ಪೂರ್ವಾಪರ ಕಥೆಯ ವಿಚಾರವನ್ನು ಮಾಡಿ ಆ ಅರ್ಜುನನು ಸಮಯೋಚಿತವಾದ ಪ್ರಶ್ನೆಯನ್ನು ಮಾಡಿದನು. ।। ೧೧ ।। ಆ ಕಥೆಯ ಹೊಂದಿಕೆಯೂ, ಅಭಿಪ್ರಾಯದ ಶೋಭೆಯೂ, ಮತ್ತು ಕಥಾಮೃತ ರಸದ ರುಚಿಯೂ, ಮುಂದೆ ಹೇಳುವದರಲ್ಲಿ ಬರುವದು. ।। ೧೨ ।। ಯಾವನ ಸಂಭಾಷಣದ ಶ್ರೇಷ್ಠತನದ ಮುಂದೆ ಎಂಟೂ ರಸಗಳನ್ನೂ ನಿವಾಳಿಸ ಬೇಕೋ, ಮತ್ತು ಯಾವ ಸಜ್ಜನರ ಬುದ್ಧಿಗೆ ಈ ಜಗತ್ತಿನಲ್ಲಿ ವಿಶ್ರಾಂತಿ ಸ್ಥಾನವಾಗಿರುವನೋ, ।। ೧೩ ।। ಯಾವ ಮಹಾರಾಷ್ಟ್ರ ಭಾಷಾದಲ್ಲಿಯ ಸಂಭಾಷಣದಿಂದ ಶಾಂತಿರಸವು ಪ್ರಗಟವಾದೀತು, ಮತ್ತು ಯಾವದು ಸಮುದ್ರದ ಕಿಂತಲೂ ಗಂಭೀರವಾಗಿದ್ದು, ಅರ್ಥದಿಂದ ಪೂರ್ಣವಾಗಿ ತುಂಬಿರುತ್ತದೋ, ಅಂತಹ ಆ ಸಂಭಾಷಣವನ್ನು ಶ್ರವಣ ಮಾಡಬೇಕು. ।। ೧೪ ।। ಹೇಗೆ ಸೂರ್ಯಬಿಂಬವು ಕೈಯೊಳಗೆ ಹಿಡಿಯುವಷ್ಟು ಸಣ್ಣದಾಗಿ ಕಂಡರೂ, ಅದರ ಪ್ರಕಾಶವು ಮಾತ್ರ ಮೂರಲೋಕವನ್ನೂ ವ್ಯಾಪಿಸಿ ಹೊರಬಿದ್ದಿದೆಯೋ, ಹಾಗೆಯೇ ಈ ಶಬ್ದಾರ್ಥ ವ್ಯಾಪ್ತಿಯೂ ಇರುವುದೆಂಬುದರ ಅನುಭವವನ್ನು ಮಾಡಿಕೊಳ್ಳಬೇಕು. ।। ೧೫ ।। ಇಲ್ಲವೇ ಕಲ್ಪವೃಕ್ಷವು ಹೇಗೆ ಕಾಮುಕಜನರ ಇಚ್ಛೆಯನ್ನು ಪೂರ್ತಿಗೊಳಿಸುತ್ತದೋ, ಅದರಂತೆಯೇ ಈ ಸಂಭಾಷಣವು ಸರ್ವ ಇಚ್ಛಾಪೂರ್ಣ ಮಾಡುವಂತಹ ದಿರುವದು. ಆದುದರಿಂದ ಇದರ ಕಡೆಗೆ ಪೂರ್ಣ ಲಕ್ಷಕೊಡಬೇಕು. ।।೧೬।। ಶ್ರೋತೃಗಳಿರಾ! ನಿಮಗೆ ಹೆಚ್ಚಿಗೆ ಹೇಳುವ ದೇನು ? ನೀವು ಎಲ್ಲವನ್ನು ತಿಳಿದವರೇ ಆಗಿರುವಿರಿ. ಅಂದ ಬಳಿಕ ಚನ್ನಾಗಿ ಲಕ್ಷ ಪೂರೈಸಬೇಕೆಂಬಿಷ್ಟೇ ನನ್ನ ವಿನಂತಿ ಯಿದೆ. ।। ೧೭ ।। ಯಾವ ಪ್ರಕಾರ ಓರ್ವ ಸ್ತ್ರೀಯು ಸುಂದರಳೂ, ಗುಣವಂತಿಯೂ, ಕುಲಶೀಲಳೂ, ಇದ್ದು ಪತಿವ್ರತೆಯೂ, ಆಗಿರುವಳೋ ಅದೇ ಪ್ರಕಾರ ಈ ಸಂಭಾಷಣದ ಪದ್ಧತಿಯ ಮೇಲಿಂದ ಇದರಲ್ಲಿ ಸರ್ವ ಅಲಂಕಾರವೂ, ಮತ್ತು ಶಾಂತಿಯೂ, ನಿಶ್ಚಳವಾಗಿ ಕಾಣುತ್ತದೆ. ।।೧೮।। ಮೊದಲಿಗೆ ಸಕ್ಕರೆಯ ಮೇಲೆ ಪ್ರೇಮವಿದ್ದು ಅದು ಒಂದು ನೇಳೆ ಔಷಧದ ಅನುಪಾನದಲ್ಲಿ ಕೊಟ್ಟರೆ ಅದನ್ನು ಆನಂದದಿಂದ ಮೇಲಿಂದ ಮೇಲೆ ಏಕೆ ಸೇವಿಸಕೂಡದು! ।।೧೯।। ಸಹಜವೇ ಮಲಯ ಗಿರಿಯ ಮೇಲಿನ ಸುಗಂಧ ಮತ್ತು ಮಂದ, ಮಂದವಾದ ಸುಳಿಗಾಳಿಯು ಬೀಸುತ್ತಿರಲು ಅದರಲ್ಲಿ ಅಮೃತದ ರುಚಿಯು ಉತ್ಪನ್ನವಾದರೆ ಮತ್ತು ಅಲ್ಲಿಯೇ ದೈವಯೋಗದಿಂದ ಪಂಚಮ ಸ್ವರದಂಥ ನಾದವು ಕಿವಿಗೆ ಇಂಪಾಗಿ ಕೇಳಹತ್ತಿತು. ।। ೨೦ ।। ಅಂದರೆ ಆ ಸುಗಂಧಮಯವಾದ ಗಾಳಿಯ ಸ್ಪರ್ಶದಿಂದ ಸರ್ವಾಂಗವೂ ತಣ್ಣಗೇ ಆಗುವದು. ಮತ್ತು

ಸ್ವಾದದಿಂದ ನಾಲಿಗೆಗೆ ಸಮಾಧಾನವಾಗುವದು. ಅದರಂತೆಯೇ ಮಧುರ ಸ್ವರವನ್ನು ಕೇಳಿದ ಕೂಡಲೇ ಕರ್ಣಗಳು ಆನಂದದಿಂದ ಕೊಂಡಾಡುವವು. ॥ ೨೧ ॥ ಅದೇ ಪ್ರಕಾರ ಈ ಕಥೆಯನ್ನು ಕೇಳುವದರಿಂದ ಕವಿಗಳಿಗೆ ಪಾರಣೆ ಯಾದೀತು. (ಬಹು ದಿನಸಗಳಿಂದ ಸತ್ಕಥೆಯ ಶ್ರವಣವಿಲ್ಲದೇ ಉಪೋಷಣಮಾಡಿದ ಕರ್ಣಗಳು ಈ ದಿವಸ ಗೀತಾಮೃತ ಶ್ರವಣರೂಪೀ ಭೋಜನದಿಂದ ತೃಪ್ತಿಹೊಂದಿದವು.) ಮತ್ತು ಸಂಸಾರ ಸುಖದಿಂದ ಯಾವದೊಂದು ವಿಕಾರವಾಗದೇ ಅದು ತನ್ನಿಂದತಾನೇ ಇಲ್ಲದಂತೆ ಆಗುವದು. ॥ ೨೨ ॥ ಆದರೆ ಮಂತ್ರಗಳಿಂದಲೇ ಶತ್ರುಗಳನ್ನು ನಾಶಪಡಿಸುವ ಸಾಮರ್ಥ್ಯವಿದ್ದರೆ ವ್ಯರ್ಥವಾಗಿ ಶಸ್ತ್ರಾಸ್ತ್ರಗಳನ್ನೇಕೆ ಧರಿಸಬೇಕು ? ಅದರಂತೆಯೇ ಹಾಲು ಸಕ್ಕರೆ ಕುಡಿಯುವದರಿಂದಲೇ ರೋಗನಿವಾರಣೆಯಾಗುವಂತಿದ್ದರೆ, ವಿಷಮಯವಾದ ಬೇವಿನರಸವನ್ನೇಕೆ ಕುಡಿಯಬೇಕು ? ॥ ೨೩ ॥ ಅದೇ ಪ್ರಕಾರ ಮನೋನಿಗ್ರಹವನ್ನು ಮಾಡದೇ, ಇಂದ್ರಿಯಗಳಿಗೆ ದುಃಖಕೊಡದೇ, ಈ ಗೀತಾಮೃತ ಶ್ರವಣದಲ್ಲಿಯೇ ಪ್ರತ್ಯಕ್ಷ ಮೋಕ್ಷಸುಖ ಇರುತ್ತದೆ ॥ ೨೪ ॥ ಆದುದರಿಂದ ನಿವೃತ್ತಿದಾಸರಾದ ಶ್ರೀ ಜ್ಞಾನೇಶ್ವರ ಮಹಾರಾಜರು ಅನ್ನುತ್ತಾರೆ— ನಿಮ್ಮ ಮನಸಿನಲ್ಲಿ ಎಷ್ಟು ಉತ್ಕಟವಾದ ಇಚ್ಛೆಯುಂಟೋ ? ಅಷ್ಟು ಇಚ್ಛೆಯಿಂದ ಈ ಗೀತಾರ್ಥವನ್ನು ಕೇಳಬೇಕು. ॥ ೨೫ ॥

ಶ್ರೀಮದ್ಭಗವದ್ಗೀತೆಯ ಮತ್ತು ಜ್ಞಾನೇಶ್ವರಿಯ ಸರಲ, ಸುಲಭ
ಕನ್ನಡ ಭಾಷಾಂತರದ ನಾಲ್ಕನೆಯ ಅಧ್ಯಾಯವು

ಸಮಾಪ್ತವು

ಶ್ರೀಕೃಷ್ಣಾರ್ಪಣಮಸ್ತು



ಜ್ಞಾನೇಶ್ವರಿ

ಐದನೆಯ ಅಧ್ಯಾಯವು

ಅರ್ಜುನ ಉವಾಚ—

ಸನ್ಯಾಸಂ ಕರ್ಮಣಾಂಕೃಷ್ಣ ಪುನರ್ಯೋಗಂ ಚ ಶಂಸಸಿ ।
ಯಚ್ಛ್ರೇಯ ಏತಯೋರೇಕಂ ತನ್ಮೇಬ್ರೂಹಿ ಸುನಿಶ್ಚಿತಮ್ ॥ ೧ ॥

[**ಸನ್ಯಾಸಂಕರ್ಮಣಾಂ ಕೃಷ್ಣೇತಿ**] ಮಗ ಪಾರ್ಥ ಶ್ರೀಕೃಷ್ಣಾತೇ ಮ್ಹಣೇ । ಹಾ ಹೋ ಹೇ ಕೈಸೇ ತುಮಚೇ ಬೋಲಣೇ । ಏಕ ಹೋಯ ತರೀ ಅಂತಃಕರಣೀ । ವಿಚಾರೂ ಯೇ ॥ ೧ ॥ ಮಾಗಾ ಸಕಳ ಕರ್ಮಾಚಾ ಸನ್ಯಾಸ । ತುಮ್ಹೀಚ ನಿರೋಪಿಲಾ ಹೋತಾ ಬಹುವಸ । ತರೀ ಕರ್ಮಯೋಗೀ ಕೇವೀ ಅತಿರಸ । ಪೋಖೀತಸಾ ಪುಢತೀ ॥ ೨ ॥ ಐಸೇ ವ್ಯರ್ಥ ಹೇ ಬೋಲತಾ । ಆಮ್ಹಾ ನೇಣ ತಯಾಚ್ಯಾ ಚಿತ್ತಾ । ಆಪುಲಿಯೇ ಚಾಡೇ ಶ್ರೀಅನಂತಾ । ಉಮಜ ನೋಹೇ ॥ ೩ ॥ ಐಕೇ ಏಕಸಾರಾತೇ ಬೋಧಿಜೇ । ತರೀ ಏಕನಿಷ್ಠಚೀ ಬೋಲಿಜೇ । ಹೇ ಆಣಿಕೀ ಕಾಯ ಸಾಂಗಿಜೇ । ತುಮ್ಹಾಪ್ರತಿ ॥ ೪ ॥ ತರೀ ಯಾಚಿಲಾಗೀ ತುಮತೇ । ಮ್ಯಾರಾವುಳಾಸಿ ವಿನವಿಲೀ ಹೋತೇ । ಜೇ ಹಾ ಪರಮಾರ್ಥ ಧ್ವನಿತೇ । ನ ಬೋಲಾವಾ ॥ ೫ ॥ ಪರೀ ಮಾಗೀಲ ಅಸೋ ದೇವಾ । ಆತಾ ಪ್ರಸ್ತುತೀ ಉಕಲ ದೇಖಾವಾ । ಸಾಂಗೇ ದೋಹೀಮಾಜೀ ಬರವಾ । ಮಾರ್ಗ ಕವಣ ॥ ೬ ॥ ಜೋ ಪರಿಣಾಮೀಚಾ ನಿರ್ವಾಳಾ । ಅಚುಂಬಿತ ಯೇ ಫಳಾ । ಆಣಿ ಅನುಷ್ಠಿತಾ ಪ್ರಾಂಜಳಾ । ಸಾವಿಯಾಚಿ ॥ ೭ ॥ ಜೈಸೇ ನಿದ್ರೇಚೆ ಸುಖ ನ ಮೋಡೇ । ಆಣಿ ಮಾರ್ಗ ತರೀ ಬಹುಸಾಲ ಸಾಂಡೇ । ತೈಸೆ ಸುಖಾಸನಾ ಸಾಂಗಡೇ । ಸೋಹಪೇ ಹೋಯ ॥ ೮ ॥ ಯೇಣೇ ಅರ್ಜುನಾಚೇನಿ ಬೋಲೇ । ದೇವೋಮನೀ ರಿಝುಲೇ । ಮಗ ಹೋಯಿಲ ಐಕೇ ಮ್ಹಣಿತಲೇ । ಸಂತೋಷೋನಿಯಾ ॥ ೯ ॥ ದೇಖಾ ಕಾಮಧೇನು ಐಸೀ ಮಾಯೇ । ಸದೈವಾ ಜಯಾ ಹೋಯೇ । ತೋಚಂದ್ರಮಹೀ ಪರೀಲಾಹೇ । ಬೇಳಾವಯಾ ॥ ೧೦ ॥ ಪಾಹೇಪಾ ಶ್ರೀ ಶಂಭೂಚೀ ಪ್ರಸನ್ನತಾ । ತಯಾ ಉಪಮನ್ಯೂಚಿಯಾ ಆರ್ತಾ । ಕಾಯ ಕ್ಷೀರಾಬ್ಧಿ ದೂಧಭಾತಾ । ದೇಇಜೇಚಿನಾ ॥ ೧೧ ॥ ತೈಸಾ ಔದಾರ್ಯಾಚಾ ಕುರುಡಾ । ಶ್ರೀಕೃಷ್ಣ ಆಪು ಜಾಹಾಲಿಯಾ ಸುಭಟಾ । ಕಾ ಸರ್ವ ಸುಖಾಚಾ ವಸಾಟಾ । ತೋಚಿ ನೋಹಾವಾ ॥ ೧೨ ॥ ಏಥ ಚಮತ್ಕಾರ ಕಾಯಸಾ । ಗೋಸಾವೀ ಶ್ರೀ ಲಕ್ಷ್ಮೀಕಾಂತಾ ಐಸಾ । ಆತಾ ಆಪುಲಿಯಾ ಸವೇಸಾ । ಮಾಗಾವಾ ಕೀ ॥ ೧೩ ॥ ಮ್ಹಣೋನಿ ಅರ್ಜುನೇ ಮ್ಹಣಿತಲೇ । ತೇ ಹಾಂಸೋನಿ ಯೇರೇ ದಿಧಲೇ । ತೇಚಿ ಸಾಂಗೇನ ಬೋಲಿಲೇ । ಕಾಯ ಕೃಷ್ಣೇ ॥ ೧೪ ॥

ಅರ್ಥ— ಆ ಮೇಲೆ ಅರ್ಜುನನು ಶ್ರೀಕೃಷ್ಣನಿಗೆ ಅನ್ನುತ್ತಾನೆ— ಹೇ ದೇವಾ ! ಶ್ರೀಕೃಷ್ಣಾ, ನಿಮ್ಮ ಮಾತು ದ್ವಿವಿಧವಾಗಿರುವದು. ನೀವು ಏನಾದರೂ ಒಂದೇ ನಿಶ್ಚಯಾತ್ಮಕ ಮಾತು ಹೇಳಿದರೆ, ಅದನ್ನು ಅಂತಃಕರಣಪೂರ್ವಕವಾಗಿ ವಿಚಾರಿಸುತ್ತೇನೆ. ॥ ೧ ॥ ಸರ್ವಕರ್ಮದ ತ್ಯಾಗಮಾಡಬೇಕೆಂದು ಹಲವು ಪರಿಯಿಂದ ನೀವೇ ಮೊದಲಿಗೆ ನಿರೂಪಣ ಮಾಡಿದಿರಿ. ಈಗ ಕರ್ಮಮಾಡುವದರ ದೆಸೆಯಿಂದ ಮತ್ತೇಕೆ ಆಗ್ರಹಮಾಡುತ್ತಿರುವಿರಿ ? ॥ ೨ ॥ ಅನಂತಾ ! ಹೀಗೆ ನಿನ್ನ ಎರಡು ತರದ ಭಾಷಣವು ನನ್ನಂಥ ಅಜ್ಞಾನಿಯ ಚಿತ್ತದಲ್ಲಿ ಹೊಳೆಯುವ ಬಗೆ ಹೇಗೆ ?

॥ ೩ ॥ ದೇವಾ ಕೇಳು ! ಒಂದೇ ತತ್ತ್ವವ ಬೋಧಮಾಡುವದಿದ್ದರೆ ಒಂದೇ ಮಾರ್ಗವನ್ನು ಹೇಳಬೇಕು. ಇದನ್ನು ಅನ್ಯರು ನಿಮಗೆ ತಿಳಿಸಬೇಕಾಗಿರುವುದೇ ? ॥ ೪ ॥ ಇದರ ದೆಸೆಯಿಂದಲೇ ನಾನು ಮೊದಲಿಗೆ ವಿನಂತಿ ಮಾಡಿ, ಈ ಪಾರಮಾರ್ಥವನ್ನು ಗೂಢವಾದ ಅರ್ಥದಿಂದ ಹೇಳಬಾರದೆಂದು ನಿಮಗೆ ಕೇಳಿಕೊಂಡಿದ್ದೆನು. ॥ ೫ ॥ ಆದರೆ ದೇವಾ ! ಆ ಹಿಂದಿನ ಮಾತು ಹಾಗೇ ಇರಲಿ, ಪ್ರಸ್ತುತ. ಎರಡೂ ಮಾರ್ಗಗಳಲ್ಲಿ ಉತ್ತಮವಾದ ಮಾರ್ಗವಾವುದೆಂಬುದನ್ನು ನನಗೆ ಸ್ಪಷ್ಟಮಾಡಿ ಹೇಳಬೇಕು. ॥ ೬ ॥ ಆ ಮಾರ್ಗವು ಕೊನೆಯ ವರೆಗೆ ಮುಟ್ಟುವಂತಹದೂ, ತಪ್ಪದೇ ಫಲ ಕೊಡುವಂತಹದೂ, ಮತ್ತು ಆಚರಿಸಲು ಸುಲಭವಾದುದೂ, ಇರಬೇಕು. ॥ ೭ ॥ ಯಾವ ಪ್ರಕಾರ ಸುಲಭ ಮತ್ತು ಸುಖಾನಹ ವಾಹನವು ಇರುವದರಿಂದ ನಿದ್ದೆಯನ್ನು ಕೆಡಿಸದೇ ಬಹುದೂರವಾದ ಮಾರ್ಗವನ್ನು ಕ್ರಮಿಸಲು ಬರುತ್ತದೋ, ಅದೇ ಪ್ರಕಾರ ನೀವು ನನಗೆ ಸುಲಭಸಾಧನವನ್ನು ಹೇಳಬೇಕು. ॥ ೮ ॥ ಈ ಪ್ರಕಾರ ಅರ್ಜುನನ ಸಂಭಾಷಣವನ್ನು ಕೇಳಿದ ಮೇಲೆ ಭಗವಾನ್ ಶ್ರೀಹರಿಯು ಮನಸಿನಲ್ಲಿ ಬಹಳೇ ಅಂತಃಕರಣಯುಕ್ತನಾಗಿ ಪ್ರಸನ್ನನಾದನು. ಮತ್ತು ಪರಮ ಉಲ್ಲಾಸದಿಂದ ಅರ್ಜುನನಿಗೆ ಅನ್ನುತ್ತಾನೆ— ನೀನು ಅನ್ನುವಂತೆಯೇ ಆಗುವದು. ಕೇಳು. ॥ ೯ ॥ ಪ್ರಾರಬ್ಧವಾನ್ ಪುರುಷನಿಗೆ ಕಾಮಧೇನುವಿನಂತಹ ತಾಯಿಯು ದೊರಕಿದರೆ ಅವನು ಆಡಲಿಕ್ಕೆ ಚಂದ್ರನನ್ನು ಬೇಡಿದರೆ ದೊರಕಬಹುದು. ಹೀಗೆ ನೋಡು. ಉಪಮನ್ಯುವಿಗೆ ಶ್ರೀಶಂಕರನು ಪ್ರಸನ್ನನಾದ ಮೇಲೆ ಅವನ ಅಪೇಕ್ಷೆಯಂತೆಯೇ ಹಾಲು-ಅನ್ನದ ಬದಲು ಅವನಿಗೆ ಕ್ಷೀರಸಾಗರವನ್ನು ಕೊಡಲಿಲ್ಲವೇ ! ॥ ೧೧ ॥ ಅದರಂತೆಯೇ ಔದಾರ್ಯದ ಭಾಂಡಾರವೇ ಆದ ಶ್ರೀಕೃಷ್ಣ ಪರಮಾತ್ಮನು ತ ಅರ್ಜುನನಿಗೆ ದೊರಕಿರಲು ಸುಖದ ವಾಸಸ್ಥಾನವೇ ಅವನೇಕೆ ಆಗಕೂಡದು ? ಅರ್ಥಾತ್ ಆಗೇ ಆಗುವನು. ॥ ೧೨ ॥ ಇಲ್ಲವೇ ಅರ್ಜುನನಿಗೆ ಶ್ರೀಲಕ್ಷ್ಮೀಕಾಂತನಂತಹ ಯಜಮಾನನು (ಧಣಿಯು) ದೊರಕಿರಲು ಅವನು ಸ್ವೇಚ್ಛೆಯಿಂದ ತನ್ನ ಅಪೇಕ್ಷೆಯ ಪ್ರಕಾರ ಬೇಡಕೂಡದೇಕೆ ? ಇದರಲ್ಲಿ ಆಶ್ಚರ್ಯವೇನು ? ॥ ೧೩ ॥ ಆದರೆ ಅರ್ಜುನನು ಯಾವ ಯಾವದನ್ನು ಬೇಡಿದನೋ ಆ ಎಲ್ಲ ಪದಾರ್ಥಗಳನ್ನು ಅವನಿಗೆ ಸುಪ್ರಸನ್ನಮುಖದಿಂದ ಭಗವಾನ್ ಶ್ರೀಕೃಷ್ಣ ಪರಮಾತ್ಮನು ಪೂರೈಸಿಕೊಟ್ಟನು. ಅದು ಯಾವುದೆಂಬುದನ್ನು ಈಗ ಹೇಳುತ್ತೇನೆ. ॥ ೧೪ ॥

ಶ್ರೀ ಭಗವಾನು ವಾಚ—

ಸನ್ಯಾಸಃ ಕರ್ಮಯೋಗಶ್ಚ ನಿಃಶ್ರೇಯಸಕರಾವುಭೌ ।
ತಯೋಸ್ತು ಕರ್ಮಸಂನ್ಯಾಸಾತ್ಕರ್ಮಯೋಗೋ ವಿಶಿಷ್ಯತೇ ॥ ೨ ॥

[ಸನ್ಯಾಸಃ ಇತಿ] ತೋ ಮ್ಹಣೇ ಗಾ ಕುಂತೀ ಸುತಾ । ಹೇ ಸನ್ಯಾಸ ಯೋಗ ವಿಚಾರಿತಾ । ಮೋಕ್ಷಕರ ತತ್ತ್ವತಾ । ದೋನೀಹೀ ಹೋತೀ ॥ ೧೫ ॥ ತರೀ ಜಾಣಾನೇಂತಾ ಸಕಳಾ । ಹಾ ಕರ್ಮಯೋಗೂಕೀರ ಪ್ರಾಂಜಳಾ । ಜೈಸೀ ನಾವ ಸ್ತ್ರಿಯಾ ಬಾಳಾ । ತೋಯ ತರಣೇ ॥ ೧೬ ॥ ತೈಸೇ ಸಾರಾಸಾರ ಪಾಹಿಜೇ । ತರೀ ಸೋಹಪಾ ಹಾಚಿ ದೇ ಖಿಜೇ । ಯೇಣೇ ಸನ್ಯಾಸಫಳ ಲಾಹಿಜೇ । ಅನಾಯಾಸೇ ॥ ೧೭ ॥ ಆತಾ ಯಾಚಿಲಾಗೀ ಸಾಂಗೇನ । ತುಜ ಸಂನ್ಯಾಸಯಾಚೇ ಚಿನ್ಹ । ಮಗ ಸಹಜೇ ಹೇ ಅಭಿನ್ನ । ಜಾಣಸೀತೂ ॥ ೧೮ ॥

ಅರ್ಥ— ಭಗವಾನ್ ಶ್ರೀ ಕೃಷ್ಣನು ಅನ್ನುತ್ತಾನೆ- ಕುಂತೀ ಕುಮಾರನೇ ! ನಿಜವಾಗಿ ವಿಚಾರಮಾಡಿ ನೋಡಿದರೆ ಕರ್ಮಯೋಗ ಮತ್ತು ಕರ್ಮತ್ಯಾಗ, ಇವೆರಡೂ ಮೋಕ್ಷದಾಯಕಗಳಾಗಿರುತ್ತವೆ. ॥ ೧೫ ॥ ಆದರೆ ಸಣ್ಣ ಹುಡುಗರಿಗೂ, ಸ್ತ್ರೀಯರಿಗೂ ನದಿಯನ್ನು ದಾಟ ಹೋಗಲು ನಾವೆಯು ಹೇಗೆ ಸುಲಭವಾಗಿರುವದೋ ಹಾಗೆಯೇ ಜ್ಞಾನಿಗಳೂ, ಅಜ್ಞಾನಿಗಳಿಗೂ ಕೂಡ ಜನನ-ಮರಣ ರೂಪೀ ಸಂಸಾರ ಸಾಗರವನ್ನು ದಾಟಲು ಕರ್ಮಯೋಗವು ನಿಜವಾಗಿ ಸುಲಭ ಸಾಧನವಾಗಿರುತ್ತದೆ. ॥ ೧೬ ॥ ಅದರಂತೆಯೇ ಸಾರಾಸಾರ ವಿಚಾರಮಾಡಿ ನೋಡಿದರೆ ಇದೇ

ಯೋಗವು ಸುಲಭವಾಗಿರುವದು. ಆದರೆ ಈ ಕರ್ಮಯೋಗದ ಆಚರಣೆ ಮಾಡುವದರಿಂದ ಅನಾಯಾಸವಾಗಿ ಕರ್ಮತ್ಯಾಗದ ಫಲವಾದರೂ ದೊರಕುತ್ತದೆ. ॥ ೧೭ ॥ ಇದೇ ಕಾರಣದ ದೆಸೆಯಿಂದ ನಿನಗೆ ಕರ್ಮಸನ್ಯಾಸ ಮಾಡುವವರ ಗುರ್ತನ್ನು ಹೇಳುವೆನು. ಅಂದರೆ ಕರ್ಮಯೋಗ ಮತ್ತು ಸನ್ಯಾಸಯೋಗ ಈ ಎರಡೂ ಒಂದೇ ಆಗಿರುತ್ತವೆಂಬದು ನಿನಗೆ ಸಹಜವಾಗಿ ನಿಜವೆಂದು ತೋರುವದು. ॥ ೧೮ ॥

ಜ್ಞೇಯಃ ಸ ನಿತ್ಯಸನ್ಯಾಸೀ ಯೋ ನ ದ್ವೇಷ್ಟಿ ನ ಕಾಂಕ್ಷತಿ ।
ನಿರ್ದ್ವಂದ್ವೋ ಹಿ ಮಹಾಬಾಹೋ ಸುಖಂ ಬಂಧಾತ್ಪ್ರಮುಚ್ಯತೇ ॥ ೩ ॥

[ಜ್ಞೇಯಃ ಸ ನಿತ್ಯಸನ್ಯಾಸೀತಿ] ತರೀ ಗೇಲಿಯಾಚೀಸೇ ನ ಕರೀ । ನ ಪವತಾ ಚಾಡ ನ ಧರೀ । ಜೋ ಸುನಿಶ್ಚಳ ಅಂತರೀ । ಮೇರೂ ಜೈಸಾ ॥ ೧೯ ॥ ಆಣಿ ಮೀ ಮಾಝೀ ಐಸೀ ಆತವಣ । ವಿಸರಲೇ ಜಯಾಚೇ ಅಂತಃಕರಣ । ಪಾರ್ಥಾ ತೋ ಸನ್ಯಾಸೀ ಜಾಣ । ನಿರಂತರ ॥೨೦॥ ಜೋ ಮನೇ ಐಸಾ ಜಾಹಲಾ । ಸಂಗೀ ತೋಚಿ ಸಾಂಡಿಲಾ । ಪ್ಪ್ಹಣೋನಿ ಸುಖೇ ಸುಖ ಪಾವಲಾ । ಅಖಂಡಿತ ॥ ೨೧ ॥ ಆತಾ ಗ್ರಹಾದಿಕ ಆಘವೇ । ತೇ ಕಾಹೀ ನಲಗೇ ತ್ಯಜಾವೇ । ಜೇ ಘೇತೇ ಜಾಹಾಲೇ ಸ್ವಭಾವೇ । ನಿಃಸಂಗ ಮ್ಹಣವೂನಿ ॥ ೨೨ ॥ ದೇಪೆ ಅಗ್ನಿ ವಿಝೋನಿ ಜಾಯೇ । ಮಗ ಜೇ ರಾಖೊಂಡೀ ಕೇವಳಹೋಯೇ । ತೈ ತೇ ಕಾಪ್ಪಸೇ ಗಿಂವಸೂಯೇ । ಬಿಯಾಪರೀ ॥ ೨೩ ॥ ತೈಸಾ ಅಸತೇನಿ ಉಪಾಧೀ । ನಾಕಳಿಜೇ ತೋ ಕರ್ಮಬಂಧೀ । ಜಯಾಚಿಯೇ ಬುದ್ಧಿ । ಸಂಕಲ್ಪನಾಹೀ ॥೨೪॥ ಪ್ಪ್ಹಣೋನಿ ಕಲ್ಪನಾ ಜೈಸಾಂಡೇ । ತೈಚಿ ಗಾ ಸನ್ಯಾಸು ಘಡೇ । ಯಾ ಕಾರಣೇ ದೋನಿ ಸಾಂಗಡೇ । ಸನ್ಯಾಸ ಯೋಗ ॥ ೨೫ ॥

ಅರ್ಥ— ಯಾವನು ಕಳೆದು ಹೋದ ವಸ್ತುವಿನ ಸ್ಮರಣೆ ಮಾಡುವದಿಲ್ಲವೋ, ಮತ್ತು ಯಾವದಾದರೊಂದು ವಸ್ತುವು ದೊರಕದಿದ್ದರೆ ಅದರ ಇಚ್ಛೆಯನ್ನು ಮಾಡುವದಿಲ್ಲವೋ, ಯಾವನು ಮೇರುಪರ್ವತದೋಪಾದಿಯಲ್ಲಿ ಅಂತರಂಗದಲ್ಲಿ ಸ್ಥಿರನಾಗಿರುತ್ತಾನೋ, ॥ ೧೯ ॥ ಪಾರ್ಥಾ ಯಾವನ ಅಂತಃಕರಣದಲ್ಲಿ ನಾನು, ನನ್ನದೆಂಬ ಸ್ಮರಣೆ ಸಹ ಉಂಟಾಗುವದಿಲ್ಲವೋ, ಅವನು ನಿತ್ಯ ಸನ್ಯಾಸಿಯೆಂದು ತಿಳಿ. ॥ ೨೦ ॥ ಯಾವನ ಮನಸಿನಲ್ಲಿ ಇಂತಹ ಸ್ಥಿತಿಯು ಉಂಟಾಗಿರುತ್ತದೋ, ಅವನಲ್ಲಿ ವಿಷಯ ಸುಖವು ಇಲ್ಲದಂತೆ ಆದುದರಿಂದ ಅವನು ನಿಸ್ಸಂಗವಾಗಿರುವನು. ಅವನಿಗೇನೇ ಯಾವಾಗಲೂ ಸುಖದ ಪ್ರಾಪ್ತಿಯಾಗುತ್ತದೆ. ॥ ೨೧ ॥ ಅವನು ಮನೆಮಾರುತ್ಯಾಗವಾಡಲು ಅವಶ್ಯವಿಲ್ಲ. ಯಾಕಂದರೆ ಅವುಗಳಲ್ಲಿ ತನ್ನ ಸಂಬಂಧವೇ ಇಲ್ಲವೆಂಬುದನ್ನು ಆತನು ಅರಿತಿರುವನು. ॥ ೨೨ ॥ ಅಗ್ನಿಯು ಆರಿ ಹೋದಮೇಲೆ ಉಳಿದ ಕರುಕು ಬೂದಿಯನ್ನು ಹೇಗೆ ಅರಳಿಯಲ್ಲಿ ಸುತ್ತಿ ಇಡಲಿಕ್ಕೆ ಬರುವಂತೆ ॥ ೨೩ ॥ ಯಾವನ ಬುದ್ಧಿಯು 'ಅಹಂ ಕರ್ತೃತ್ವಾಭಿಮಾನ'ದ ವಿಕಾರದಿಂದ ಮುಕ್ತವಾಗಿರುವದೋ, ಅವನು ಸಂಸಾರದ ಉಪಾಧಿಯಲ್ಲಿದ್ದರೂ ಕರ್ಮಬಂಧನದಿಂದ ಕಟ್ಟಲ್ಪಡುವದಿಲ್ಲ. ॥ ೨೪ ॥ ಆದುದರಿಂದ ಯಾವಾಗ ಮನಸಿನೊಳಗಿನ ಕಲ್ಪನೆಗಳು ಇಲ್ಲದಂತಾಗುತ್ತವೆಯೋ ಆವಾಗ್ಗೇ ಸನ್ಯಾಸವು ಪ್ರಾಪ್ತವಾಗುತ್ತದೆ, ಮತ್ತು ಇದೇ ಕಾರಣದ ದೆಸೆಯಿಂದ ಕರ್ಮತ್ಯಾಗ ಮತ್ತು ಕರ್ಮಯೋಗ ಇವೆರಡೂ ಸಮಾನವಾಗಿಯೇ ಇರುತ್ತವೆ. ॥ ೨೫ ॥

ಸಾಂಖ್ಯಯೋಗೌ ಪೃಥಗ್ಬಾಲಾಃ ಪ್ರವದಂತಿ ನ ಪಂಡಿತಾಃ ।
ಏಕಮಪ್ಯಾಸ್ಥಿತಃ ಸಮ್ಯಗುಭಯೋರ್ವಿಂದತೇ ಫಲಮ್ ॥ ೪ ॥

[ಸಾಂಖ್ಯಯೋಗೌ ಪೃಥಗ್ಬಾಲಾಃ ಇತಿ] ಯೇರ್ಹವೀ ತರೀ ಪಾರ್ಥಾ । ಜೇ ಮೂರ್ಖ ಹೋತೀ ಸರ್ವಥಾ । ತೇ ಸಾಂಖ್ಯಯೋಗ ಸಂಸ್ಥಾ । ಜಾಣತೀ ಕೇವೀ ॥ ೨೬ ॥ ಸಹಜೇ ತೇ

ಅಜ್ಞಾನ। ಮ್ಹಣೋನಿ ಮ್ಹಣತೀ ತೇ ಭಿನ್ನ। ಯೇರ್ಹವೀ ದೀಪಾಪ್ರತಿ ಕಾ ಈ ಆನಾನ। ಪ್ರಕಾಶ ಅಹಾತೀ ॥ ೨೭ ॥ ಪೈ ಸಮ್ಯಕ ಏಕೇ ಅನುಭವೇ। ಜೆಹೀ ದೀಪಿಲೇ ತತ್ವ ಆಥವೇ। ದೋಹೀ ತೇಹೀ ಐಕ್ಯಭಾವೇ। ಮಾನಿತೀ ಗಾ ॥ ೨೮ ॥

ಅರ್ಥ— ಇದರ ಹೊರ್ತು ಪಾರ್ಥಾ! ಯಾರು ಸಂಪೂರ್ಣವಾಗಿ ಅಜ್ಞಾನಿಗಳಿರುವರೋ ಅವರಿಗೆ ಜ್ಞಾನ ಯೋಗ ಮತ್ತು ಕರ್ಮಯೋಗ ಇವುಗಳ ರೀತಿಯು ಹೇಗೆ ತಿಳಿಯುವದು? ॥ ೨೬ ॥ ಸ್ವಾಭಾವಿಕವಾದ ಅಜ್ಞಾನದ ದೆಸೆಯಿಂದ ಈ ಎರಡೂ ಯೋಗಗಳು ಭಿನ್ನವಾಗಿರುವವೆಂದು ಅವರು ಅನ್ನುತ್ತಾರೆ. ಆದರೆ ಒಂದೇ ದೀವಿಗೆಯ ಹತ್ತರ ಬೇರೆ ಬೇರೆ ಪ್ರಕಾಶಗಳು ಉಂಟಾಗುವವೇನು? ॥ ೨೭ ॥ ಆದಾಗ್ಯೂ ಅವರು ಸಮವೃಷ್ಟಿಯ ಜ್ಞಾನಾನುಭವದಿಂದ ಪರಬ್ರಹ್ಮರೂಪದ ತತ್ವವನ್ನು ತಿಳಿದವರಾಗಿರುತ್ತಾರೆ. ಅವರು ಈ ಎರಡೂ ಯೋಗಗಳು ಒಂದೇ ಆಗಿರುವ ವೆಂದು ಅರಿತಿರುತ್ತಾರೆ. ॥ ೨೮ ॥

ಯತ್ಸಾಂಖ್ಯೈಃ ಪ್ರಾಪ್ಯತೇಸ್ಥಾನಂ ತದ್ಯೋಗೈರಪಿ ಗಮ್ಯತೇ।
ಏಕಂ ಸಾಂಖ್ಯಂ ಚ ಯೋಗಂ ಚ ಯಃ ಪಶ್ಯತಿ ಸ ಪಶ್ಯತಿ ॥ ೫ ॥

[ಯತ್ಸಾಂಖ್ಯೈರಿತಿ] ಆಣಿ ಸಾಂಖ್ಯೀ ಜೇ ಪಾವಿಜೇ। ತೇಚೀ ಯೋಗೀ ಗಮಿಜೇ। ಮ್ಹಣೋನಿ ಐಕ್ಯತಾದೋಹೀತೇ ಸಹಜೇ। ಇಯಾ ಪರೀ ॥ ೨೯ ॥ ದೇಖೆ ಆಕಾಶಾ ಆಣಿ ಅವಕಾಶಾ। ಭೇದ ನಾಹೀ ಜೈಸಾ। ತೈಸೇ ಐಕ್ಯ ಯೋಗಸನ್ಯಾಸಾ। ಓಳಖೇ ಜೋ ॥ ೩೦ ॥ ತಯಾಸೀಚಿ ಜಗೀ ಪಾಹಲೇ। ಆಪಣಪೆಂ ತೇಣೇಂಚಿ ದೇಖಿಲೇ। ಜಯಾ ಸಾಂಖ್ಯಯೋಗ ಜಾಣವಲೇ। ಭೇದೇವಿಣ ॥ ೩೧ ॥

ಅರ್ಥ— ಮತ್ತು ಜ್ಞಾನಯೋಗದಿಂದ ಯಾವ ಫಲ ಪ್ರಾಪ್ತಿಯಾಗುವದೋ ಅದೇ ಫಲಪ್ರಾಪ್ತಿಯು ಕರ್ಮ ಯೋಗದಿಂದಲಾದರೂ ಆಗುತ್ತದೆ. ಈ ರೀತಿಯಾಗಿ ಎರಡದರಲ್ಲಿಯೂ ಸಹಜನೇ ಐಕ್ಯತೆಯು ಕಂಡುಬರುತ್ತದೆ. ॥ ೨೯ ॥ ಆಕಾಶ ಮತ್ತು ಬೈಲು ಇದರಲ್ಲಿ ಹೇಗೆ ಭೇದವಿಲ್ಲವೋ, ಹಾಗೆಯೇ ಜ್ಞಾನಯೋಗ ಮತ್ತು ಕರ್ಮಯೋಗ ಇವುಗಳಲ್ಲಿ ಭೇದವಿಲ್ಲವೆಂದು ಯಾರು ತಿಳಿಯುತ್ತಾರೋ, ॥ ೩೦ ॥ ಅವರು ಜ್ಞಾನಯೋಗ ಮತ್ತು ಕರ್ಮಯೋಗ ದಲ್ಲಿ ಭಿನ್ನಭಾವನೆಯನ್ನು ಕಾಣುವದಿಲ್ಲ. ಅವರಿಗೇ ಮಾತ್ರ ಈ ಜಗತ್ತಿನಲ್ಲಿ ಸೂರ್ಯೋದಯವಾಗಿರುವದು. (ಜ್ಞಾನಪ್ರಾಪ್ತಿ ಆಗಿರುವದು) ಅವರೇ ಆತ್ಮಸ್ವರೂಪವನ್ನು ಅರಿತವರು. ॥ ೩೧ ॥

ಸಂನ್ಯಾಸಸ್ತು ಮಹಾಬಾಹೋ ದುಃಖಮಾಪ್ತುಮಯೋಗತಃ।
ಯೋಗಯುಕ್ತೋ ಮುನಿರ್ಬ್ರಹ್ಮ ನಚಿರೇಣಾಧಿಗಚ್ಛತಿ ॥ ೬ ॥

[ಸಂನ್ಯಾಸಸ್ತ್ವಿತಿ] ಜೋ ಯುಕ್ತಿ ಪಂಥೇ ಪಾರ್ಥಾ। ಚಢೇ ಮೋಕ್ಷ ಪರ್ವತಾ। ತೋ ಮಹಾ ಸುಖಾಚಾ ನಿಮಥಾ। ವಹಿಲಾ ಪಾವೇ ॥ ೩೨ ॥ ಯೇರಾ ಯೋಗಚ್ಯುತೀ ಜಯಾ ಸಾಂಡೇ। ತೋ ವಟಯಾಂಚಿ ಗಾ ಹವ್ಯಾಸೀ ಪಡೇ। ಪರೀ ಪ್ರಾಪ್ತಿ ಕಹೀ ನ ಘಡೇ। ಸನ್ಯಾಸಾಚೀ ॥ ೩೩ ॥

ಅರ್ಥ— ಪಾರ್ಥಾ! ಯಾವನು ಕರ್ಮಮಾರ್ಗದಿಂದ ಮೋಕ್ಷರೂಪವಾದ ಪರ್ವತವನ್ನು ಹತ್ತುತ್ತಾನೋ ಅವನು ಆ ಪರ್ವತದ ಬ್ರಹ್ಮರೂಪಿ ಶಿಖರದ ಮೇಲೆ ತೀವ್ರವೇ ಮುಟ್ಟುತ್ತಾನೆ. ॥ ೩೨ ॥ ಯಾರು ಕರ್ಮಮಾರ್ಗದ ಆಚರಣೆ ಮಾಡುವದಿಲ್ಲವೋ, (ಕರ್ಮಯೋಗದ ಸಹಾಯನಿಲ್ಲದೇ ಕರ್ಮಸನ್ಯಾಸಿಯಾಗುವದು ಕಠಿಣವು.) ಅವರು ಜ್ಞಾನಪ್ರಾಪ್ತಿಯ ವಿಷಯದಲ್ಲಿ ವ್ಯರ್ಥವಾಗಿ ಕಷ್ಟಬಡುತ್ತಾರೆ. ಅವರಿಗೆ ಅದು ಎಂದೂ ಪ್ರಾಪ್ತವಾಗುವದಿಲ್ಲ. ॥೩೩॥

ಯೋಗಯುಕ್ತೋ ವಿಶುದ್ಧಾತ್ಮಾ ವಿಜಿತಾತ್ಮಾ ಜಿತೇಂದ್ರಿಯಃ ।
ಸರ್ವ ಭೂತಾತ್ಮ ಭೂತಾತ್ಮಾ ಕುರ್ವನ್ನಪಿ ನಲಿಪ್ಯತೇ ॥ ೭ ॥

[ಯೋಗ ಯುಕ್ತೋ ವಿಶುದ್ಧಾತ್ಮೇತಿ] ಜೇಣೇ ಭ್ರಾಂತೀ ಪಾಸೂನಿ ಹಿರತಲೇ । ಗುರು ವಾಕ್ಯೇ ಮನ ಧುತಲೇ । ಮಗ ಆತ್ಮಸ್ವರೂಪೀ ಘಾತಲೇ । ರೋವೂನಿಯಾ ॥ ೩೪ ॥ ಜೈಸೇ ಸಮುದ್ರೀ ಲವಣ ನ ಪಡೇ । ತವ ವೇಗಳೇ ಅಲ್ಪ ಆವಡೇ । ಮಗ ಹೋಯ ಸಿಂಧೂಚಿ ವಿವಢೀ । ಮಿಳೇ ತೆಂವ್ಹಾ ॥ ೩೫ ॥ ತೈಸೇ ಸಂಕಲ್ಪೋನಿ ಕಾಢಿಲೇ । ಜಯಾಚೇ ಮನಚಿ ಚೈತನ್ಯ ಜಾಹಾಲೇ । ತೇಣೇ ಏಕದೇಶಿಯೇ ಪರೀ ವ್ಯಾಪಿಲೇ । ಲೋಕತ್ರಯ ॥ ೩೬ ॥ ಆತಾ ಕರ್ತಾ ಕರ್ಮ ಕಂವಾವೇ ! ಹೇ ಖುಂಟಲೇ ತಯಾ ಸ್ವಭಾವೇ । ಆಣಿ ಕರೀ ಜ್ಯಾ ಆಘವೇ । ತ್ಯಾ ಆಕರ್ತಾ ತೋ ॥ ೩೭ ॥

ಅರ್ಥ— ಯಾವನು ತನ್ನ ಮನಸ್ಸನ್ನು ಭ್ರಮೆಯಿಂದ ಮುಕ್ತಮಾಡಿ ಅದನ್ನು ಗುರುವಾಕ್ಯದಿಂದ ಶುದ್ಧಪಡಿಸಿ ಆತ್ಮಸ್ವರೂಪದಲ್ಲಿ ಲೀನನಾಗಿರುತ್ತಾನೆ. ॥ ೩೪ ॥ ಎಲ್ಲಿಯ ವರೆಗೆ ಸಮುದ್ರದಲ್ಲಿ ಉಪ್ಪು ಕಾಕಿರುವದಿಲ್ಲವೋ ಅಲ್ಲಿಯ ವರೆಗೆ ಅದು ಸಮುದ್ರದಿಂದ ಬೇರೆಯಾಗಿ ಚಿಕ್ಕದಾಗಿ ಕಂಡು; ಸಮುದ್ರದಲ್ಲಿ ಬೆರೆತೊಡನೆಯೇ ಸಮುದ್ರವೆಲ್ಲವನ್ನೂ ಹೇಗೆ ವ್ಯಾಪಿಸುವದೋ, ॥ ೩೫ ॥ ಹಾಗೆಯೇ ಅವನ ಮನಸ್ಸು ಸಂಕಲ್ಪದಿಂದ ಬಿಡುಗಡೆ ಹೊಂದಿದ ಮೇಲೆ ಬ್ರಹ್ಮ ರೂಪದಲ್ಲಿ ಕೂಡಿ ಹೋಗಿರುತ್ತದೆ. ವಿಚಾರಿಸಿದರೆ ಅವನ ಮನಸ್ಸು 'ಏಕದೇಶೀ' ಎಂಬುವದೇನೋ ನಿಜ. ಆದರೂ ಅವನು ತ್ರಿಭುವನ ವ್ಯಾಪ್ತನಾಗಿರುವನು. ॥ ೩೬ ॥ ಆ ಮೇಲೆ ಅವನಿಗೆ ನಾನು ಒಬ್ಬ ಕರ್ತಾ, ಇದು ಒಂದು ಕರ್ಮ ಮತ್ತು ನಾನು ಇಂಥದ್ದೇ ಒಂದು ಕ್ರಿಯಾ (ಕಾರ್ಯ) ಮಾಡತಕ್ಕದ್ದೆಂಬ ಮಾತು ಸ್ವಭಾವಗತ್ಯವಾಗಿ ಇಲ್ಲದಂತೆ ಆಗುತ್ತದೆ. ಅವನು ಜನರ ದೃಷ್ಟಿಗೆ ಸರ್ವ ಕರ್ಮಗಳನ್ನು ಮಾಡಿದವನಂತೆ ಕಂಡರೂ ನಿಜವಾಗಿ ಅವನು (ಕರ್ಮ ದಿಂದ) ಅಲಿಪ್ತನಿರುವನು. ॥ ೩೭ ॥

ನೈವ ಕಿಂಚಿತ್ಕರೋಮೀತಿ ಯುಕ್ತೋ ಮನ್ಯೇತ ತತ್ತ್ವವಿತ್ ।
ಪಶ್ಯನ್ಶೃಣ್ವನ್ಸ್ಪೃಶಂಜಿಘ್ರನ್ನಶ್ನನ್ಗಚ್ಛನ್ಸ್ವಪನ್ಶ್ವಸನ್ ॥ ೮ ॥
ಪ್ರಲಪನ್ವಿಸೃಜನ್ಗೃಹ್ಣನ್ನುನ್ಮಿಷನ್ನಿಮಿಷನ್ನಪಿ ।
ಇಂದ್ರಿಯಾಣೀಂದ್ರಿಯಾರ್ಥೇಷು ವರ್ತಂತ ಇತಿ ಧಾರಯನ್ ॥ ೯ ॥

[ನೈವ ಕಿಂಚಿದಿತಿ] ಜೇ ಪಾರ್ಥಾ ತಯಾ ದೇಹೀ । ಮೀ ಐಸಾ ಆತವೂ ನಾಹೀ । ತದೀ ಕರ್ತೃತ್ವ ಕೈಚೇ ಕಾಈ । ಉರೇ ಸಾಂಗೇ ॥ ೩೮ ॥ ಐಸೇ ತನುತ್ಯಾಗೇವಿಣ । ಅಮೂರ್ತಾಚೇ ಗುಣ । ದೀಸತೀ ಸಂಪೂರ್ಣ । ಯೋಗಯುಕ್ತಾ ॥ ೩೯ ॥ ಯೇರ್ಹವೀ ಆಣಿ ಕಾಂಚಿಯೇ ವರೀ । ತೋಹೀ ಏಕ ಶರೀರೀ । ಅಶೇಷಾಹೀ ವ್ಯಾಪಾರೀ । ವರ್ತತ ದಿಸೇ ॥ ೪೦ ॥ ತೋಹೀ ನೇತ್ರೀ ಪಾಹೇ । ಶ್ರವಣೀ ಐಕತ ಆಹೇ । ಪರೀ ತೇಥೀಂಚಾ ಸರ್ವಥಾ ನೋಹೇ । ನವಲ ದೇಖೇ ॥ ೪೧ ॥ ಸ್ಪರ್ಶಾಸಿ ತರೀ ಜಾಣೇ । ಪರಿಮಳ ಸೇವೀ ಘ್ರಾಣೇ । ಅವಸರೋಚಿತ ಬೋಲಣೇ । ತಯಾಹಿ ಆಥಿ ॥ ೪೨ ॥ ಆಹಾರಾತೇ ಸ್ವೀಕಾರೀ । ತ್ಯಜಾವೇ ತೇ ಪರಿಹರೀ । ನಿದ್ರೇಚಿಯಾ ಅವಸರೀ । ನಿದಿಜೇ ಸುಖೇ ॥ ೪೩ ॥ ಆಪುಲೇನಿ ಇಚ್ಛಾವಶೇ । ತೋಹೀ ಗಾ ಚಾಲತ ದಿಸೇ । ಸೈ ಸಕಲ ಕರ್ಮ ಐಸೇ । ರಾಹಾಟೇ ಕೀರ ॥ ೪೪ ॥ ಹೇ ಸಾಂಗೋ ಕಾಈ ಏಕೈಕ । ದೇಖೇ ಶ್ವಾಸೋಚ್ಛ್ವಾಸಾದಿಕ । ಆಣಿ ನಿಮಿಷೋನ್ಮಿಷ । ಆದಿಕರೂನಿ ॥ ೪೫ ॥ ಪಾರ್ಥಾ ತಯಾಚೇ ಠಾಯೀ । ಹೇ ಆಘವೇಚಿ ಆಥಿ ಪಾಹೀ । ಪರೀ ತೋ ಕರ್ತಾ ನಸ್ಹೇ ಕಾಹೀ । ಪ್ರತೀತಿಬಳೇ ॥ ೪೬ ॥ ಜ್ಯೆ ಭ್ರಾಂತಿಸೇಜೇ ಸುತಲಾ । ತೈ ಸ್ವಪ್ನಸುಖೇ ಭುತಲಾ । ಮಗ ತೋ ಜ್ಞಾನೋದಯೀ ಜೇತಲಾ । ಮ್ಹಣೋನಿಯಾ ॥ ೪೭ ॥

ಅರ್ಥ— ಕಾರಣ ಪಾರ್ಥಾ! ಅವನಿಗೆ ದೇಹದ ಸ್ಥಳದಲ್ಲಿ ಆತ್ಮಬುದ್ಧಿಯ ಸ್ಮರಣೆಯೇ ಉಳಿದಿರುವದಿಲ್ಲ. ಅಂದಬಳಿಕ ಅವನಲ್ಲಿ ನಾನು ಕರ್ತೃ ಎಂಬ ಅಭಿಮಾನವು ಹೇಗೆ ಉಳಿಯುವದು ಹೇಳು? ॥ ೩೮ ॥ ಈ ಪ್ರಕಾರ ಶರೀರ ತ್ಯಾಗಮಾಡದೇ ಆ ಯೋಗಯುಕ್ತ ಪುರುಷನಲ್ಲಿ ನಿರಾಕಾರ ಪರಬ್ರಹ್ಮನ ಸಂಪೂರ್ಣ ಗುಣಗಳು ದೃಷ್ಟಿಗೋಚರ ವಾಗುತ್ತವೆ. ॥ ೩೯ ॥ ಮಿಕ್ಕುಳಿದ ಜನರಂತೆ ಅವನು ಶರೀರಧಾರಿಯಾಗಿದ್ದು ಸರ್ವವ್ಯಾಪಾರ ಮಾಡುತ್ತಾನೆಂದು ಕಾಣುತ್ತದೆ. ॥ ೪೦ ॥ ಅವನು ನೇತ್ರದಿಂದ ನೋಡುತ್ತಾನೆ. ಕರ್ಣದಿಂದ ಕೇಳುತ್ತಾನೆ. ಆದರೂ ಶರೀರದ ಭಾವನೆಯಿಂದ ಲಿಪ್ತನಾಗಿರುವದಿಲ್ಲ. ಈ ಆಶ್ಚರ್ಯವನ್ನು ನೋಡು ॥ ೪೧ ॥ ಅವನಿಗೆ ಸ್ಪರ್ಶವಾದದ್ದು ತಿಳಿಯುತ್ತದೆ. ಅವನು ಮೂಗಿನಿಂದ ವಾಸನೆಯನ್ನು ತೆಗೆದುಕೊಳ್ಳುತ್ತಾನೆ. ಮತ್ತು ಅವನಿಗೆ ಸಮಯೋಚಿತವಾದ ಭೂಷಣವನ್ನು ಮಾಡಲಿಕ್ಕೆ ಬರುತ್ತದೆ. ॥ ೪೨ ॥ ಅವನು ಭೋಜನವನ್ನು ಮಾಡುತ್ತಾನೆ. ಚಲ್ಲುವಂಥ ಪದಾರ್ಥ ಗಳನ್ನು ಚಲ್ಲಿಕೊಡುತ್ತಾನೆ. ನಿದ್ದೆಮಾಡುವಾಗ ಸುಖದಿಂದ ನಿದ್ರಿಸುತ್ತಾನೆ ॥ ೪೩ ॥ ತನ್ನ ಅಪೇಕ್ಷೆಯಂತೆ ಅವನು ನಡೆಯುತ್ತಾನೆ. ಅದೇ ಪ್ರಕಾರ ಯಾವ ಯಾವ ಕಾಲಕ್ಕೆ ಯಾವ ಯಾವ ಕರ್ಮಗಳನ್ನು ಮಾಡತಕ್ಕವೋ ಅವುಗಳನ್ನೆಲ್ಲ ಮಾಡುತ್ತಾನೆ. ॥ ೪೪ ॥ ಇವುಗಳನ್ನು ಒಂದೊಂದು ಎಷ್ಟೆಂದು ಹೇಳುತ್ತಕೂಡಲಿ? ಹೀಗೆ ನೋಡು— ಉಸುರಾಡಿಸೋಣ, ಅದರಂತೆಯೇ ಕಣ್ಣುತೆರೆಯೋಣ ಮತ್ತು ಮುಚ್ಚೋಣ ಮುಂತಾದ, ॥ ೪೫ ॥ ಎಷ್ಟೋ ಕ್ರಿಯೆಗಳು ಅವನಲ್ಲಿ ದೃಷ್ಟಿಗೆ ಬೀಳುತ್ತವೆ. ಆದರೆ ಪಾರ್ಥಾ, ಆತ್ಮಾನುಭವ ಬಲದಿಂದ ಅವನು ಆ ಕ್ರಿಯೆಗಳ ಕರ್ತೃವಾಗಿರಲಾರನು. ॥ ೪೬ ॥ ಯಾವಾಗ ಅವನು ಭ್ರಾಂತಿರೂಪ ಹಾಸುಗೆಯ ಮೇಲೆ ಮಲಗಿದ್ದನೋ, ಆವಾಗ ಅವನು ಸ್ವಪ್ನಸುಖದಿಂದ ಭ್ರಮಿಷ್ಟನಾಗಿದ್ದನು. ಅದರಿಂದ (ತನ್ನ ನಿಜ ಸ್ವರೂಪವನ್ನು ಮರೆತು ದುಃಖಭಾಗಿಯಾಗಿ ದ್ದನು.) ಈಗ ಜ್ಞಾನೋದಯವಾಗಿ ಜಾಗ್ರತನಾಗಿರುವದರಿಂದ (ತಾನು ಸರ್ವಕರ್ತನಾದ ಪರಮಾತ್ಮ ಶ್ರೀಹರಿಯ ಅಂಶಭೂತನು ಸರ್ವ ಕರ್ಮಗಳಿಗೆ "ನಾಹಂ ಕರ್ತಾ ಹರಿಃ ಕರ್ತಾ" ಎಂಬ ಅರಿವು ಅವನಿಗೆ ಉಂಟಾದುದರಿಂದ ಅವನು ಕರ್ಮಗಳ ಕರ್ತೃನಾಗಲಾರನು. ॥ ೪೭ ॥

ಬ್ರಹ್ಮಣ್ಯಾಧಾಯ ಕರ್ಮಾಣಿ ಸಂಗಂ ತ್ಯಕ್ತ್ವಾ ಕರೋತಿಯಃ।
ಲಿಪ್ಯತೇ ನ ಸ ಪಾಪೇನ ಪದ್ಮಪತ್ರಮಿವಾಂಭಸಾ ॥ ೧೦ ॥

[ಬ್ರಹ್ಮಣ್ಯಾಧಾಯ ಕರ್ಮಾಣೀತಿ] ಆತಾ ಅಧಿಷ್ಠಾನ ಸಂಗತೀ। ಅಶೇಷಾಹೀ ಇಂದ್ರಿಯ ವೃತ್ತೀ। ಆಪುಲಾಲಿಯಾ ಅರ್ಥಿ। ವರ್ತತ ಆಹಾತಿ ॥ ೪೮ ॥ ದೀಪಾಚೇನಿ ಪ್ರಕಾಶೇ। ಗ್ರಹೀಚೇ ವ್ಯಾಪಾರ ಜೈಸೇ। ದೇಹೋ ಕರ್ಮಜಾತ ತೈಸೇ। ಯೋಗಯುಕ್ತಾ ॥ ೪೯ ॥ ತೋ ಕರ್ಮೀ ಕರೀ ಸಕಳೇ। ಪರೀ ಕರ್ಮಬಂಧಾ ನಾಕಳೇ। ಜೈಸೇ ನ ಸಿಂಪೇ ಜಳೀ ಜಳೇ। ಪದ್ಮಪತ್ರ ॥ ೫೦ ॥

ಅರ್ಥ— ಈಗ ಬ್ರಹ್ಮಸಾನ್ನಿಧ್ಯದಿಂದ ಅರ್ಥಾತ್ ಆತ್ಮನ ಆಶ್ರಯದಿಂದ ಸರ್ವ ಇಂದ್ರಿಯಗಳ ವೃತ್ತಿಯು ತಮ್ಮ ತಮ್ಮ ವಿಷಯದಲ್ಲಿ ವ್ಯವಸಾಯ ಮಾಡುತ್ತಿರುತ್ತವೆ. ॥ ೪೮ ॥ ದೀಪದ ಪ್ರಕಾಶದಿಂದ ಹೇಗೆ ಮನೆಯೊಳಗಿನ ಸರ್ವ ವ್ಯವಹಾರಗಳು ನಡೆಯುತ್ತವೆಯೋ, (ಆದರೆ ಸ್ವತಃ ದೀಪವು ಮಾತ್ರ ಅವುಗಳಿಂದ ಅಲಿಪ್ತವಾಗಿರುವಂತೆ) ಜ್ಞಾನಿಗಳ ಕಡೆಯಿಂದ ಕರ್ಮಗಳು ಆಗುತ್ತಿರುತ್ತವೆ. ॥ ೪೯ ॥ ಆದರೆ ಕಮಲದ ಎಲೆಗಳು ನೀರಿನಲ್ಲಿ ಇದ್ದಾಗ್ಯಾದರೂ ಅವು ಹೇಗೆ ನೀರಿನಿಂದ ತೊಯ್ಯುವದಿಲ್ಲವೋ, ಅದರಂತೆ (ಬ್ರಹ್ಮಾರ್ಪಣ ಬುದ್ಧಿಯಿಂದ ಅನಾಸಕ್ತನಾಗಿ) ಆ ಜ್ಞಾನಿಯು ಸರ್ವ ಕರ್ಮಗಳನ್ನು ಮಾಡುವದರಿಂದ ಕರ್ಮಬಂಧನದ ತೊಡಕಿನಲ್ಲಿ ಸಿಕ್ಕುವದಿಲ್ಲ. ॥ ೫೦ ॥

ಕಾಯೇನ ಮನಸಾ ಬುದ್ಧ್ಯಾ ಕೇವಲೈರಿಂದ್ರಿಯೈರಪಿ।
ಯೋಗಿನಃ ಕರ್ಮ ಕುರ್ವಂತಿ ಸಂಗಂ ತ್ಯಕ್ತ್ವಾತ್ಮಶುದ್ಧಯೇ ॥ ೧೧ ॥

[ಕಾಯೇನೇತಿ] ದೇಖೀ ಬುದ್ಧೀಚೀ ಭಾಷನೇಂಜೀ। ಮನಾಚಾ ಅಂಕುರ ನುದೈಜೀ ಐಸಾ ವ್ಯಾಪಾರ ತೋ ಬೋಲಿಜೇ। ಶಾರೀರಗಾ ॥ ೫೧ ॥ ಹೇಚ ಮರಾಠೇ ಪರಿಯೇಸೀ। ತರೀ

ಬಾಳಕಾಚೀ ಚೇಷ್ಟಾ ಜೈಸೀ । ಯೋಗಿಯೇ ಕರ್ಮೇ ಕರಿತೀ ತೈಸೀ । ಕೇವಳಾ ತನು ॥ ೫೨ ॥ ಮಗ ಪಾಂಚ ಭೌತಿಕ ಸಂಚಲೇ । ಜೆಂವ್ಹಾ ಶರೀರ ಅಸೇ ನಿದೇಲೇ । ತೆಥೆ ಮನಚಿ ರಾಹಾಟೇ ಏಕಲೇ । ಸ್ವಪ್ನೀ ಜೇವೀ ॥ ೫೩ ॥ ನವಲ ಐಕೇ ಧನುರ್ಧರಾ । ಕೈಸಾ ವಾಸನೇಚಾ ಸಂಸಾರಾ । ದೇಹಾಹೋನೇದೀ ಉಜಗರಾ । ಪರೀ ಸುಖದುಃಖೇ ಭೋಗೀ ॥ ೫೪ ॥ ಇಂದ್ರಿಯಾಂಚ್ಯಾ ಗಾಂವೀ ನೇಣಿಜೇ । ಐಸಾ ವ್ಯಾಪಾರ ಜೋ ನಿಪಜೇ । ತೋ ಕೇವಳ ಗಾ ಮ್ಹಣಿಜೇ । ಮಾನಸಾಚಾ ॥ ೫೫ ॥ ಯೋಗಿಯೇ ತೋಹೀ ಕರಿತೀ । ಪರೀ ಕರ್ಮೇಂತೇ ನ ಬಂಧಿಜತೀ । ಜೇ ಸಾಂಡಿಲೀ ಆಹೇ ಸಂಗತೀ । ಅಹಂಭಾವಾಚೀ ॥ ೫೬ ॥ ಆತಾ ಜಾಹಾಲಿಯಾ ಭ್ರಮು ಹತ । ಜೈಸೇ ಪಿಶಾಚಾಚೇ ಚಿತ್ತ । ಮಗ ಇಂದ್ರಿಯಾಚೇ ಚೇಷ್ಟಿತ । ವಿಕಳದಿಸೇ ॥ ೫೭ ॥ ಸ್ವರೂಪತರೀ ದೇಟೇ । ಆಳವಿಲೇ ಆಇಕೇ । ಶಬ್ದಬೋಲೇ ಮುಖೇ । ಪರಿ ಜ್ಞಾನ ನಾಹೀ ॥ ೫೮ ॥ ಹೇ ಅಸೋ ಕಾ ಜೇವಿಜೆ । ಜೇ ಜೇ ಕಾಹೀ ಕರಣೇ । ತೇ ಕೇವಳ ಕರ್ಮ ಜಾಣೇ । ಇಂದ್ರಿಯಾಂಚೇ ॥ ೫೯ ॥ ಮಗ ಸರ್ವತ್ರ ಜೇ ಜಾಣತೇ । ತೇ ಬುದ್ಧೀಚೇ ಕರ್ಮ ನಿರುತೇ । ವ್ಹೋಳಖೇ ಅರ್ಜುನಾತೇ । ಮ್ಹಣೇ ಶ್ರೀಹರೀ ॥ ೬೦ ॥ ತೇ ಬುದ್ಧಿ ಧುರೇ ಕರುನೀ । ಕರ್ಮ ಕರಿತೀ ಚಿತ್ತ ದೇವುನೀ । ಪರೀತೇ ಕರ್ಮಾಪಾಸುನಿ । ಮುಕ್ತ ದಿಸತೀ ॥ ೬೧ ॥ ಜೇ ಬುದ್ಧೀಚಿಯೇ ಠಾವೂನಿ ದೇಹೀ । ತಯಾ ಅಹಂಕಾರಾಚೀ ಸೇಚಿ ನಾಹೀ । ಮ್ಹಣೋನಿ ಕರ್ಮ ಕರಿತಾ ಪಾಹೀ । ಚೋಖಾಳಲೇ ॥ ೬೨ ॥ ಅಗಾ ಕರಿತೇ ನ ವೀಣ ಕರ್ಮ । ತೇಚಿ ತೇ ನಿಷ್ಕರ್ಮ । ಹೇ ಜಾಣತೀ ಸುವರ್ಮ । ಗುರುಗಮ್ಯ ಜೇ ॥ ೬೩ ॥ ಆತಾ ಶಾಂತರಸಾಚೇ ಭರಿತೇ । ಸಾಂಡಿತ ಆಹೇ ಪಾತ್ರಾತೇ । ಜೇ ಬೋಲಣೇ ಬೋಲಾ ಪರೌತೇ । ಬೋಲವಲೇ ॥ ೬೪ ॥ ಏಥ ಇಂದ್ರಿಯಾಚಾ ಪಾಂಗ । ಜಯಾ ಫಿಟಲಾ ಆಹೇ ಚಾಂಗ । ತಯಾಸೀಚಿ ಆಥಿಲಾಗ । ಪರಿಸಾವಯಾ ॥ ೬೫ ॥ ಹಾ ಅಸೋ ಅತಿ ಪ್ರಸಂಗ। ನ ಸಂಡೀ ಪಾ ಕಥಾಲಾಗ । ಹೋ ಈಲ ಶ್ಲೋಕ ಸಂಗತೀಭಂಗ । ಮ್ಹಣವೂನಿಯಾ ॥ ೬೬ ॥ ಜೇ ಮನಾ ಆಕಳಿತಾ ಕುವಾಡೇ । ಫಾಫುಸಿತಾ ಬುದ್ಧೀಸೀ ನಾತುಡೇ । ತೇ ದೈವಾಚೇನಿ ಸುರವಾಡೇ । ಸಾಂಗವಲೇ ತುಜ ॥ ೬೭ ॥ ಜೇ ಶಬ್ದಾತೀತ ಸ್ವಭಾವೇ । ತೇ ಬೋಲೀಂಚಿ ಜರೀ ಫಾವೇ । ತರೀ ಆಣಿಕೇ ಕಾಯ ಕರಾವೇ । ಕಥಾಸಾಂಗೇ ॥ ೬೮ ॥ ಹಾ ಆರ್ತಿ ವಿಶೇಷ ಶ್ರೋತಯಾಂಚಾ । ಜಾಣೋನಿ ದಾಸ ನಿವೃತ್ತೀಚಾ । ಮ್ಹಣೇ ಸಂವಾದ ದೋಘಾಂಚಾ । ಪರಿಸೋನಿ ಪರಿಸಾ ॥ ೬೯ ॥ ಮಗ ಶ್ರೀಕೃಷ್ಣ ಮ್ಹಣೇ ಪಾರ್ಥಾತೇ । ಆತಾ ಪ್ರಾಪ್ತಾಚೇ ಚಿನ್ಹ ಪುರತೇ । ಸಾಂಗೇನ ತುಜ ನಿರುತೇ । ಚಿತ್ತದೇಈ ॥೭೦॥

ಅರ್ಥ— ಯಾವದರಲ್ಲಿ ಬುದ್ಧಿಯ ಗುರುತು ಕಾಣುನದಿಲ್ಲವೋ, ಮತ್ತು ಮನಸಿನ ಅಂಕುರವು ಉದ್ಭವಿಸುವದಿಲ್ಲವೋ, ಆ ವ್ಯಾಪಾರಕ್ಕೆ ದೇಹವ್ಯಾಪಾರವೆಂದೆನ್ನಬೇಕು. ॥ ೫೧ ॥ ಇದನ್ನೇ ಪ್ರಾಕೃತ ಭಾಷೆಯಲ್ಲಿ (ಸ್ಪಷ್ಟವಾಗಿ) ಸುಲಭರೀತಿಯಿಂದ ಹೇಳುತ್ತೇನೆ ಕೇಳು– ಹೇಗೆ ಚಿಕ್ಕಮಕ್ಕಳ ಕೆಲಸಗಳು ಮನಸು ಮತ್ತು ಬುದ್ಧಿ ಇವುಗಳನ್ನು ಬಿಟ್ಟು ಆಗುತ್ತಿರುತ್ತವೋ, ಅದೇಪ್ರಕಾರ ಯೋಗೀ ಜನರು ಕೇವಲ ಶರೀರಮಾತ್ರದಿಂದಲೇ ಕರ್ಮವನ್ನು ಮಾಡುತ್ತಾರೆ. ॥ ೫೨ ॥ ಪಂಚತತ್ವದಿಂದ ಸಿದ್ಧಪಡಿಸಿದ ಈ ಶರೀರವು ಮಲುಗಿದಾಗ ಮನಸ್ಸೊಂದೇ ತನ್ನ ವ್ಯಾಪಾರವನ್ನು ಹೇಗೆ ಸಾಗಿಸುವದೋ ॥ ೫೩ ॥ ಅದರಂತೇ ಈ ದೇಹಕ್ಕೆ ತಿಳಿಯಗೊಡದೇ ವಾಸನೆಯು ಆ ದೇಹದ ಕಡೆಯಿಂದ ಸುಖದುಃಖಗಳನ್ನು ಭೋಗಿಸಲಿಕ್ಕೆ ಹಚ್ಚುತ್ತದೆ. ಅರ್ಜುನಾ, ಇದೆಂತಹ ಆಶ್ಚರ್ಯವಾಗಿರುವದು ನೋಡು ! ॥ ೫೪ ॥ ಇಂದ್ರಿಯಗಳಿಗೆ ಗೊತ್ತಾಗದೇ ಯಾವ ವ್ಯಾಪಾರವು ಆಗುತ್ತದೋ ಅದಕ್ಕೆ ಕೇವಲ ಮನೋವ್ಯಾಪಾರವೆನ್ನುತ್ತಾರೆ. ॥ ೫೫ ॥ ಯೋಗಿಗಳು ಸಹ ಮನೋವ್ಯಾಪಾರದ ಆಚರಣೆಯನ್ನು ಮಾಡುತ್ತಾರೆ. ಆದರೆ ಅವರು ಕರ್ಮದಿಂದ ಬಂಧಿಸಲ್ಪಟ್ಟಿರುವದಿಲ್ಲ. ಯಾಕಂದರೆ ಅವರು ಅಹಂಕಾರವನ್ನು ತ್ಯಾಗಮಾಡಿರುತ್ತಾರೆ. ॥ ೫೬ ॥ ಯಾವಕಾಲಕ್ಕೆ ಒಬ್ಬ ಮನುಷ್ಯನ ಮನಸ್ಸು ಭ್ರಮಿಷ್ಟವಾಗಿರುತ್ತದೋ, ಇಲ್ಲವೇ ಭೂತಬಾಧೆಯಾಗಿ ಚಿತ್ತವು ಅಸ್ಥಿರ

ವಾಗಿರುತ್ತದೋ, ಆ ಕಾಲಕ್ಕೆ ಅವನ ಇಂದ್ರಿಯಗಳ ಸರ್ವ ವ್ಯಾಪಾರಗಳು ಅವ್ಯವಸ್ಥಿತವಾಗಿ ಕಾಣುತ್ತವೆ. ॥ ೫೬ ॥ ಎದುರಿಗೆ ಮನುಷ್ಯ ಬಂದದ್ದು ಅವನಿಗೆ ಕಾಣುತ್ತದೆ. ಯಾರಾದರೂ ಕರೆದರೆ ಕೇಳಿಸುತ್ತದೆ. ಮತ್ತು ಅವನು ಸ್ವತಃ ಮಾತನಾಡುತ್ತಾನೆ. ಆದರೆ ಅವನಲ್ಲಿ ಜ್ಞಾನದ ಅಭಾವವಿರುತ್ತದೆ. ॥ ೫೮ ॥ ಇರಲಿ; ತತ್ಪಾರ್ಥವೇನೆಂದರೆ ನಿಷ್ಕಾರಣವಾಗಿ ಏನಾದರೂ ಒಂದು ಮಾಡುವದು ಬರೇ ಇಂದ್ರಿಯಗಳ ಕರ್ಮವೇ ಆಗಿರುವದೆಂದು ತಿಳಿ. ॥ ೫೯ ॥ ಇದಲ್ಲದೇ, ಎಲ್ಲವನ್ನೂ ತಿಳಿದು ಮಾಡುತ್ತಿರುವ ಕಾರ್ಯವು ಬುದ್ಧಿಯಿಂದಾದ ಕರ್ಮವೆಂದು ತಿಳಿ. ॥ ೬೦ ॥ ಆ ಯೋಗಿಯು ಬುದ್ಧಿಯನ್ನು ಮುಂದೆನುಮಾಡಿಕೊಂಡು ಮನಃಪೂರ್ವಕವಾಗಿ ಆಚರಣೆ ಮಾಡುತ್ತಾನೆ ಆದರೆ ಅವನು ಕರ್ಮಾತೀತನೂ ಮತ್ತು ಬ್ರಹ್ಮಭಾವನೆಯ ಆಚೆಯ ಕಡೆಗಿದ್ದು ಮುಕ್ತನಾಗಿದ್ದಾನೆ. ॥ ೬೧ ॥ ಕಾರಣ, ಬುದ್ಧಿಯಿಂದ ದೇಹದವರೆಗೆ ಅವನಿಗೆ ಅಹಂಕಾರದ ನೆನಪು ಸಹ ಇರುವದಿಲ್ಲ. ಆದುದರಿಂದ ಅವನು ಕರ್ಮಮಾಡುತ್ತಿದ್ದಾಗ್ಯಾದರೂ ಶುದ್ಧ ಪವಿತ್ರನೇ ಆಗಿರುವನು. ॥ ೬೨ ॥ ಕರ್ಮಮಾಡುವವನು ನಾನು ಇದ್ದೇನೆಂಬ ಭಾವನೆಯುಸ್ಪಿಡದೇ ಯಾವ ಕರ್ಮವು ಮಾಡಲ್ಪಡುವದೋ, ಅದೇ ನೈಷ್ಕರ್ಮ್ಯವಾಗಿರುವದು. ಇದು ಗುರುಗಳಿಂದ ತಿಳಿಯತಕ್ಕ ತತ್ವ ವಿದ್ದರೂ, ಇದನ್ನು ಅವನು ತಿಳಿದಿರುತ್ತಾನೆ. ॥ ೬೩ ॥ ನಾವು ಈಗ ಶಬ್ದದಿಂದ ಪ್ರತಿಪಾದನಮಾಡಲಿಕ್ಕೆ ಯಾವದು ಬರುವದಿಲ್ಲವೋ ಅದನ್ನೇ ಹೇಳಿದೆವು. ಆದುದರಿಂದಲೇ ಶಾಂತಿರಸವು ಅತಿ ಹೆಚ್ಚಾಗಿ ತುಂಬಿದ ಪಾತ್ರೆಯ ಮೇರೆಯನ್ನು ದಾಟಿ ಹೊರಸೂಸಿ ಹರಿಯಿತು. ॥ ೬೪ ॥ ಇದನ್ನು ಕೇಳುವ ಅಧಿಕಾರಿಗಳು ಯಾರು ? ಎಂದು ನೀನು ಅನ್ನುತ್ತಿದ್ದರೆ, ಇಂದ್ರಿಯ ದ್ವಾರಾ ಪ್ರಾಪ್ತವಾಗುವ ನಾಶಪರ್ಯಂತ ಸುಖದಿಂದಲೇ ತೃಪ್ತಿಹೊಂದುವ ದರಿದ್ರ ಭಾವನೆಯು ಯಾರಲ್ಲಿ ವಾಸವಾಗಿರುವದಿಲ್ಲವೋ; ಅವರೇ ಆ ವೈರಾಗ್ಯಸಂಪನ್ನರೇ ಇದನ್ನು ಕೇಳುವ ಅಧಿಕಾರಿಗಳು. ॥ ೬೫ ॥ ಆ ಮೇಲೆ ಶ್ರೋತ್ರಗಳು ಶ್ರೀ ಜ್ಞಾನೇಶ್ವರ ಮಹಾರಾಜರಿಗೆ ಅನ್ನುತ್ತಾರೆ. ಈ ವಿಷಯಾಂತರವನ್ನು ಪೂರ್ಣಮಾಡಿರಿ. ಕಥೆಯ ಅನುಸಂಧಾನವನ್ನು ಬಿಡಬೇಡಿರಿ. ಏಕೆಂದರೆ ಶ್ಲೋಕದ ಸಂಗತಿಯು ಅಸಂಗತವಾಗಿ ಕೆಟ್ಟು ಹೋದೀತು ! ॥ ೬೬ ॥ ಯಾವದು ಮನಸಿನಿಂದ ತಿಳಿದುಕೊಳ್ಳಲು ದುಸ್ತರವಾಗಿರುವದೋ ಮತ್ತು ವಿಚಾರ ಮಾಡಿದಾಗ್ಯೂ ಬುದ್ಧಿಗೆ ನಿಲುಕದಂತಹದಿರುವದೋ, ಅಂತಹದನ್ನು ನೀವು ನಮಗೆ ಹೇಳಿದ್ದು ನಮ್ಮ ಸುದೈವವೆಂದೇ ತಿಳಿಯಬೇಕು. ॥ ೬೭ ॥ ಯಾವದು ಮೂಲತಃ ಶಬ್ದದಿಂದ ಬಣ್ಣಿಸಲು ಬರುವದಿಲ್ಲವೋ, ಅದು ಒಂದು ವೇಳೆ ಶಬ್ದದಿಂದಲೇ ಹೇಳುವಂತಾದರೆ ಬೇರೆ ಉಪಾಯಗಳನ್ನೇಕೆ ಮಾಡಬೇಕು ? ಇರಲಿ; ಇನ್ನು ಕಥೆಯನ್ನು ಪ್ರಾರಂಭಿಸಿರಿ. ॥ ೬೮ ॥ ಕೇಳುವವರ ಈ ಉತ್ಕಟ ಅಪೇಕ್ಷೆಯನ್ನು ತಿಳಿದು ನಿವೃತ್ತಿದಾಸ ಜ್ಞಾನದೇವರು ಅನ್ನುತ್ತಾರೆ. ಇದು ವರೆಗೆ ಕೇಳಿದ ಉಭಯತರ ಸಂವಾದವನ್ನು ಮನನಮಾಡಿ ಮತ್ತೆ ಅದನ್ನೇ ಕೇಳಲು ಸಿದ್ಧರಾಗಿರಿ. ॥ ೬೯ ॥ ಆ ಮೇಲೆಶ್ರೀಕೃಷ್ಣನು ಪಾರ್ಥನಿಗೆ ಅನ್ನುತ್ತಾನೆ - ಪೂರ್ಣ ಬ್ರಹ್ಮನಿಷ್ಠನಿಗೆ ಗುರುತುಹಿಡಿಯುವದರದೆಸೆಯಿಂದ ನಿಜವಾದ ಚಿಹ್ನವು ಯಾವುದೆಂಬುದನ್ನು ನಾನು ಹೇಳುತ್ತೇನೆ. ಅದಕ್ಕಾಗಿ ಚನ್ನಾಗಿ ಲಕ್ಷಗೊಡು. ॥ ೭೦ ॥

ಯುಕ್ತಃ ಕರ್ಮಫಲಂ ತ್ಯಕ್ತ್ವಾ ಶಾಂತಿಮಾಪ್ನೋತಿ ನೈಷ್ಠಿಕೀಮ್ ।
ಅಯುಕ್ತಃ ಕಾಮಕಾರೇಣ ಫಲೇಸಕ್ತೋ ನಿಬದ್ಧ್ಯತೇ ॥ ೧೨ ॥

[ಯುಕ್ತಃ ಇತಿ] ತರೀ ಆತ್ಮಯೋಗೇ ಅಥಿಲಾ । ಜೋ ಕರ್ಮ ಫಳಾತೀ ವಿಟಲಾ । ತೋ ಘರಿಘೇಊನಿ ವರಿಲಾ । ಶಾಂತೀ ಜಗೀ ॥ ೭೧ ॥ ಯೇರ ಕರ್ಮಬಂಧೇ ಕಿರೀಟೇ । ಅಭಿಲಾಷಾಚಿಯಾ ಗಾಂಠೀ । ಕಳಾಸಲಾ ಖುಂಟೇ । ಫಳಭೋಗಾಚ್ಯಾ ॥ ೭೨ ॥

ಅರ್ಥ— ಆದರೆ ಆತ್ಮಜ್ಞಾನದಿಂದ ಯಾವನು ಪೂರ್ಣ ಸಂಪನ್ನನಾಗಿರುವನೋ ಮತ್ತು ಯಾವನಿಗೆ ಸರ್ವಕರ್ಮ ಫಲದ ಬೇಸರು ಉಂಟಾಗಿರುತ್ತದೋ ಅವನಿಗೆ ಈ ಜಗತ್ತಿನಲ್ಲಿ ತನ್ನ ಮನೆಯಲ್ಲಿ ಕುಳಿತಲ್ಲಿಯೇ ಶಾಂತಿಯು ಪ್ರಾಪ್ತವಾಗುತ್ತದೆ. ॥ ೭೧ ॥ ಅರ್ಜುನಾ ಎರಡನೇ ಸಂಸಾರಿಯು (ಯೋಗ ಹೀನನು) ಕರ್ಮಬಂಧನದಿಂದ ಕಟ್ಟಲ್ಪಟ್ಟದ್ದು ಅಭಿಲಾಷೆಯೆಂಬ ಗಂಟಿನಿಂದ, ಭೋಗರೂಪೀ ಗೂಟಕ್ಕೆ ಗಟ್ಟಿಯಾಗಿ ಬಂಧಿಸಲ್ಪಟ್ಟಿರುವನು. ॥೭೨॥

ಸರ್ವಕರ್ಮಾಣಿ ಮನಸಾ ಸಂನ್ಯಸ್ಯಾಸ್ತೇ ಸುಖಂ ವಶೀ ।
ನವದ್ವಾರೇ ಪುರೇ ದೇಹೀ ನೈವ ಕುರ್ವನ್ನ ಕಾರಯನ್ ॥ ೧೩ ॥

[ಸರ್ವ ಕರ್ಮಾಣೀತಿ] ಜೈಸಾ ಫಳಾಚಿಯೇ ಹಾವೇ । ತೈಸೇ ಕರ್ಮಕರೀ ಆಫವೇ । ಮಗ ನ ಕೀಜೇಚಿ ಯೇಣೇ ಭಾವೇ । ಉಪೇಕ್ಷಿಜೋ ॥ ೭೩ ॥ ತೋ ಜಯಾಕಡೆ ವಾಸಪಾಹೇ । ತೇಉತೀ ಸುಖಾಚೀ ಸೃಷ್ಟೀ ಹೋಯೇ । ತೋಮ್ಹಣೇ ತೇಥರಾಹೇ । ಮಹಾಬೋಧ ॥ ೭೪ ॥ ನವದ್ವಾರ ದೇಹೀ । ತೋ ಅಸತಚಿ ಪರೀ ನಾಹೀ । ಕರೀತಚಿ ನ ಕರೀ ಕಾಹೀ । ಫಳತ್ಯಾಗೀ ॥ ೭೫ ॥

ಅರ್ಥ— ಫಲಾಭಿಲಾಷೆಯಿಂದ ಕರ್ಮಾಚರಣೆ ಮಾಡುವವರಂತೆ ಯಾವನು ಸರ್ವಕರ್ಮಗಳನ್ನು ಯಥಾ ಸಾಂಗವಾಗಿ ಮಾಡಿಯೂ, ಆ ಕರ್ಮಗಳ ಕರ್ತೃ ತಾನಾಗಿಲ್ಲವೆಂದು ತಿಳಿತು ಕರ್ಮತ್ಯಾಗಿಯೆನ್ನಿಸಿ ಕೊಂಡಿರುವನೋ ಆ ಪುರುಷನ ಯೋಗ್ಯತೆಯನ್ನೇನು ಹೇಳುವದು ? ॥ ೭೩ ॥ ಆ ಪುರುಷನು ಯಾವ ಯಾವ ಕಡೆಗೆ ನೋಡುತ್ತಾನೋ, ಅಲ್ಲಲ್ಲಿ ಸುಖಮಯವಾದ ಸೃಷ್ಟಿಯು ಆಗುತ್ತದೆ. ಮತ್ತು ಅವನು ಹೇಳಿದ ಸ್ಥಳದಲ್ಲಿ ಬ್ರಹ್ಮಜ್ಞಾನವು ಎದುರಿಗೇ ಬಂದು ನಿಲ್ಲುತ್ತದೆ. ॥ ೭೪ ॥ ಒಂದು ಫಲಾಪೇಕ್ಷೆಯನ್ನು ಬಿಟ್ಟುಕೊಡುವದರಿಂದ ಅವನು ನವದ್ವಾರದ ದೇಹದಲ್ಲಿದ್ದಾ ಗ್ಯಾದರೂ ಇಲ್ಲದಂತೆ ಇರುತ್ತಾನೆ. ಮತ್ತು ಸರ್ವ ಕರ್ಮಗಳನ್ನು ಮಾಡಿಯೂ ಮಾಡಿದವನಂತೆಯೇ ಇರುತ್ತಾನೆ. ॥ ೭೫ ।

ನ ಕರ್ತೃತ್ವಂ ನ ಕರ್ಮಾಣಿ ಲೋಕಸ್ಯ ಸೃಜತಿ ಪ್ರಭುಃ ।
ನ ಕರ್ಮಫಲಸಂಯೋಗಂ ಸ್ವಭಾವಸ್ತು ಪ್ರವರ್ತತೇ ॥ ೧೪ ॥

[ನ ಕರ್ತೃತ್ವಮಿತಿ] ಜೈಸಾ ಕಾ ಸರ್ವೇಶ್ವರ । ಪಾಹಿಜೇ ತವ ನಿರ್ವ್ಯಾಪಾರ । ಪರೀ ತೋಚಿ ರಚೀ ವಿಸ್ತಾರ । ತ್ರಿಭುವನಾಚಾ ॥ ೭೬ ॥ ಆನೆ ಕರ್ತಾ ಮ್ಹಣೆಪೇ । ತರೀ ಕವಣೇ ಕರ್ಮೀ ನ ಶಿಂಪೇ । ಜೇ ಹಾತಪಾವೋ ನ ಲಿಂಪೇ । ಉದಾಸ ವೃತ್ತೀಚಾ ॥ ೭೭ ॥ ಯೋಗನಿದ್ರಾ ತರೀ ನ ಮೋಡೇ । ಅಕರ್ತೇಪಣಾ ಸಳು ನ ಘಡೇ । ಪರೀ ಮಹಾಭೂತಾಚೇ ದಳವಾಡೇ । ಉಧಾರೀ ಭರೇ ॥ ೭೮ ॥ ಜಗಾಚ್ಯಾ ಜೀವೀ ಆಹೇ । ಪರೀ ಕವಣಾಚಾ ಕಹೀ ನೋಹೇ । ಜಗಚಿ ಹೇ ಹೋಯ ಜಾಯೇ ತೋ ಶುದ್ಧೀಹೀ ನೇಣೇ ॥ ೭೯ ॥

ಅರ್ಥ— ನೋಡಿದರೆ ಪರಮೇಶ್ವರನು ಅಕರ್ತಾ ಇದ್ದಾನೆ. ಆದರೆ ಈ ತ್ರಿಭುವನದ ವಿಸ್ತಾರವನ್ನು ಅವನೇ ಮಾಡುತ್ತಾನೆ. ॥ ೭೬ ॥ ಮತ್ತು ಅವನು ಕರ್ತಾ ಇರುವನೆಂದು ತಿಳಿದರೆ ಅವನು ಯಾವುದಾದರೂ ಕರ್ಮದಿಂದ ಲಿಪ್ತನಾಗುವದಿಲ್ಲ. ಕಾರಣನೇನೆಂದರೆ ಅವನಲ್ಲಿರುವ ಉದಾಸೀನ ವೃತ್ತಿಯು ಯಾವ ಕರ್ಮವನ್ನೂ ಅವನ ಸ್ಪರ್ಶ ಮಾಡಲನುವು ಗೊಡುವದಿಲ್ಲ. ॥ ೭೭ ॥ ಅವನ ಯೋಗ ನಿದ್ರೆಯ ಭಂಗವು ಸ್ವಲ್ಪವೂ ಆಗುವದಿಲ್ಲ. ಮತ್ತು ಅವನ ಅಕರ್ತೃತ್ವಕ್ಕಾದರೂ ಕುಂದು ತಗಲುವದಿಲ್ಲ. ಆದರೆ ಅವನು ಮಹಾಭೂತಗಳ ಸಮುದಾಯವನ್ನು ಉತ್ತಮ ರೀತಿಯಿಂದ ನಿರ್ಮಾಣಮಾಡಿ ನಿಲ್ಲಿಸುತ್ತಾನೆ. ॥ ೭೮ ॥ ಈ ಜಗತ್ತಿನಲ್ಲಿ ಪ್ರಾಣಿಮಾತ್ರಗಳ ಅಂತಃಕರಣದಲ್ಲಿ ಪರಮೇಶ್ವರನು ಇದ್ದಾನೆ. ಆದರೆ ಅವನು ಯಾವಾಗ್ಯೂ ಯಾರವನೂ ಇರುವದಿಲ್ಲ. ಮತ್ತು ಈ ಜಗತ್ತಿನ ಉತ್ಪತ್ತಿ ಮತ್ತು ನಾಶ ಇವುಗಳ ವಾರ್ತೆಯೇ ಆತನರಿಯನು. ॥ ೭೯ ॥

ನಾದತ್ತೇ ಕಸ್ಯಚಿತ್ಪಾಪಂ ನ ಚೈವ ಸುಕೃತಂ ವಿಭುಃ ।
ಅಜ್ಞಾನೇನಾವೃತಂ ಜ್ಞಾನಂ ತೇನ ಮುಹ್ಯಂತಿ ಜಂತವಃ ॥ ೧೫ ॥

[ನಾದತ್ತ ಇತಿ] ಪಾಪ ಪುಣ್ಯೇ ಅಶೇಷೇ । ಪಾಹೀಂಚಿ ಅಸತು ನ ದೇಖೇ । ಅಣಿ ಸಾಕ್ಷೀಹೀ ಹೋವೂ ನ ಶಾಕೇ । ಯೇರೀ ಗೋಷ್ಮೀ ಕಾಯಸೀ ॥ ೮೦ ॥ ಪೈ ಮೂರ್ತೀಚೇನಿ ಮೇಳೇ । ತೋ ಮೂರ್ತಚಿ ಹೋವೂನಿ ಖೇಳೇ । ಪರೀ ಅಮೂರ್ತ ಪಣ ನ ಮೈಳೀ । ದಾದುಲಯಾಚೇ ॥ ೮೧ ॥ ತೋ ಸೃಜೇ ಪಾಳೀ ಸಂಹಾರೀ । ಐಸೇ ಬೋಲತೀ ಜೇ ಚರಾಚರೀ । ತೇ ಅಜ್ಞಾನ ಗಾ ಅವಧಾರೀ । ಪಂಡುಕುಮರಾ ॥ ೮೨ ॥

ಅರ್ಥ— ಪಾಪ ಪುಣ್ಯ ಸರ್ವವೂ ಅವನ ಹತ್ತಿರವಿದ್ದಾಗ್ಯೂ ಅವನು ಅವುಗಳನ್ನು ನೋಡುವದಿಲ್ಲ. ಅಲ್ಲದೇ ಅವುಗಳಿಗೆ ಸಾಕ್ಷೀಭೂತನಾಗಿ ಸಹ ಇರುವದಿಲ್ಲ. ಅಂದಬಳಿಕ ಎರಡನೇ ಮಾತಿನ ಸಲುವಾಗಿ ವಿಚಾರಿಸುವದೇಕೆ! ॥೮೦॥ ಒಂದುವೇಳೆ ಸಗುಣಮೂರ್ತಿ ಧಾರಣ ಮಾಡಿಕೊಂಡು ಅವನು ದೇಹಧಾರಿಯಾಗಿ ಲೀಲೆ ಮಾಡುತ್ತಾನೆ; (ಮಚ್ಛ, ಕೂರ್ಮ ಮೊದಲಾದ ಅನಂತ ಅವತಾರಗಳನ್ನೆತ್ತಿ ಭಕ್ತಕಾರ್ಯಾರ್ಥವಾಗಿ ಈ ಜಗತ್ತಿನಲ್ಲಿ ಪ್ರಕಟವಾಗುತ್ತಾನೆ.) ಆದರೆ ಆ ಪರಮಾತ್ಮನ ನಿರಾಕಾರತ್ವವು ನಾಶ ಹೊಂದುವದಿಲ್ಲ. ॥ ೮೧॥ ಹೀಗೆ ಇದ್ದರೂ ಅರ್ಜುನನೇ ಅವನು ಹುಟ್ಟಿಸುತ್ತಾನೆ, ಪಾಲಿಸುತ್ತಾನೆ ಮತ್ತು ಸಂಹರಿಸುತ್ತಾನೆ ; ಎಂದು ತಿಳಿಯುವ ಜನರು ಅಜ್ಞಾನಿಗಳೆಂದು ತಿಳಿ. ॥೮೨॥

ಜ್ಞಾನೇನ ತು ತದಜ್ಞಾನಂ ಯೇಷಾಂ ನಾಶಿತ ಮಾತ್ಮನಃ ।
ತೇಷಾಮಾದಿತ್ಯವಜ್ಜ್ಞಾನಂ ಪ್ರಕಾಶಯತಿ ತತ್ಪರಂ ॥ ೧೬ ॥

[ಜ್ಞಾನೇನೇತಿ] ತೇ ಅಜ್ಞಾನ ಜೈ ಸಮೂಳ ತುಟೇ । ತೈ ಭ್ರಾಂತೀಚೇ ಮುಸೈರೇ ಫಿಟೇ । ಮಗ ಅಕರ್ತೃತ್ವ ಪ್ರಕಟೇ । ಮಜ ಈಶ್ವರಾಚೇ ॥ ೮೩ ॥ ಏಥ ಈಶ್ವರ ಏಕ ಅಕರ್ತಾ । ಐಸೇ ಮಾನಲೇ ಜರೀ ಚಿತ್ತಾ । ಆಣಿ ತೋಚಿ ಮೀ ಹೇ ಸ್ವಭಾವತಾ । ಆದೀಚಿ ಅಹೇ ॥ ೮೪ ॥ ಐಸೇನಿ ವಿವೇಕೇ ಉದೋ ಚಿತ್ತೀ । ತಯಾಸಿಭೇದ ಕೈಂಚಾ ತ್ರಿಜಗತೀ । ದೇಖೇ ಆಪುಲಿಯಾ ಪ್ರತೀತೀ । ಜಗಚಿ ಮುಕ್ತ ॥ ೮೫ ॥ ಜೈಸೀ ಪೂರ್ವ ದಿಸೇಚ್ಯಾ ರಾವುಳೀ । ಉದಯಾ ಯೇತಾಂಚಿ ಸೂರ್ಯ ದಿವಾಳೀ । ಕೀ ಯೇರೀಹೀ ದಿಶಾತಿಯೇಚಿ ಕಾಳೀ । ಕಾಳಿಮಾ ನಾಹೀ ॥ ೮೬ ॥

ಅರ್ಥ— ಈ ಅಜ್ಞಾನವು ಯಾವಾಗ ಸಮೂಲವಾಗಿ ನಾಶ ಹೊಂದುತ್ತದೋ ಅವಾಗ್ಗೆನೇ ಭ್ರಾಂತಿರೂಪ ಕರ್ತೃತ್ವವು ನಾಶ ಹೊಂದುತ್ತದೆ. ಆ ಮೇಲೆ ಪರಮೇಶ್ವರನ ಅಕರ್ತೃತ್ವ ಸ್ಪಷ್ಟವಾಗಿ ಅವನಿಗೆ ತಿಳಿಯಹತ್ತುತ್ತದೆ. ॥೮೩॥ ಈ ಪ್ರಕಾರ ಭಗವಾನನು ಅಕರ್ತೃವು ಇರುತ್ತಾನೆಂಬದು ಮನಸಿನಲ್ಲಿ ನಿಶ್ಚಯವಾದರೆ ಬ್ರಹ್ಮಸ್ವರೂಪವೇ ನಾನು ಇದ್ದೇನೆ (ಅವನ ಅಧಿಷ್ಠಾನವೇ ನನ್ನಲ್ಲಿ ಇದೆ.) ಎಂಬದು ಮೊದಲಿನಿಂದಲೇ ಸಿದ್ಧವದೆ. (ಅರ್ಥಾತ್ ನಾನಾದರೂ ಅಕರ್ತೃವೇ ಎಂಬ ಮಾತೂ ಅವನು ಚನ್ನಾಗಿ ತಿಳಿದಿರುತ್ತಾನೆ.) ॥ ೮೪ ॥ ಈ ಪ್ರಕಾರ ವಿವೇಕದಿಂದ ಯಾವನ ಚಿತ್ತದಲ್ಲಿ ಪ್ರಕಾಶವು ಬೀಳುತ್ತದೋ, ಅವನಿಗೆ ಮೂರು ಲೋಕಗಳಲ್ಲಿ ಭೇದವು ಉಳಿಯುವದಿಲ್ಲ. (ಒಬ್ಬನೇ ದೇವನು ಸರ್ವಭೂತ ಮಾತ್ರಗಳಲ್ಲಿ ಅಂತರಾತ್ಮನಾಗಿರುವನೆಂದು) ಅನುಭವದಮೇಲಿಂದ ಸರ್ವ ಜಗತ್ತು ಮುಕ್ತವಿರುವದೆಂದು ಅವನು ತಿಳಿಯುತ್ತಾನೆ. ॥ ೮೫ ॥ ಹೇಗೆ ಪೂರ್ವಕ್ಕೆ ಸುರ್ಯೋದಯವಾದ ಕೂಡಲೇ ಸ್ರಕಾಶವು ಹಬ್ಬಿ, ಎರಡನೇ ಕಡೆಗಿರುವ ಕತ್ತಲೆಯನ್ನೂ ಇಲ್ಲದಂತೆ ಮಾಡುವದೋ, ಅದೇ ಪ್ರಕಾರ, ॥ ೮೬ ॥

ತದ್ಬುದ್ಧಯಸ್ತದಾತ್ಮಾನಸ್ತನ್ನಿಷ್ಠಾಸ್ತತ್ಪರಾಯಣಾಃ ।
ಗಚ್ಛಂತ್ಯ ಪುನರಾವೃತ್ತಿಂ ಜ್ಞಾನನಿರ್ಧೂತಕಲ್ಮಷಾಃ ॥ ೧೭ ॥

[ತದ್ಬುದ್ಧಯ ಇತಿ] ಬುದ್ಧಿ ನಿಶ್ಚಯೇ ಆತ್ಮಜ್ಞಾನ । ಬ್ರಹ್ಮರೂಪ ಭಾವೀ ಆಪಣಾ ಆಪಣ ಬ್ರಹ್ಮನಿಷ್ಠಾ ರಾಖೇಪೂರ್ಣ । ತತ್ಪರಾಯಣ ಅಹರ್ನಿಶೀ ॥೮೭॥ ಐಸೇ ವ್ಯಾಪಕ ಜ್ಞಾನ ಭಲೇ । ಜಯಾಂ

ಚಿಯಾ ಹೃದಯಾ ಗಿಂವಸಿತ ಆಲೇ । ತಯಾಂಚೀ ಸಮತಾದೃಷ್ಟಿ ಬೋಲೇ । ವಿಶೇಷೂಕಾಇ ॥ ೮೮ ॥ ಏಕ ಆಪಣಪೆಂಚಿ ಜೈಸೇ । ತೇ ದೇಖಿತೀ ವಿಶ್ವ ತೈಸೇ । ಹೇ ಬೋಲಣೇ ಕಾಯಸೇ । ನವಲ ಏಥ ॥೮೯॥ ಪರೀ ದೈವ ಜೈಸೇ ಕವತಿಕೇ । ಕ ಹೀಚ ದೈನ್ಯ ನ ದೇಖೇ । ಕಾವಿವೇಕ ಹಾ ನೋಳಖೇ । ಭ್ರಾಂತೀ ತೇ ಜೇವೀ ॥ ೯೦ ॥ ನಾತರೀ ಅಂಧ ಕಾರಾಚೀ ವಾಸೀ । ಜೈಸಾ ಸೂರ್ಯ ನೇಘೇ ಸ್ವಪ್ನೀ । ಅಮೃತ ನಾಯಕೇ ಕಾನೀ । ಮೃತ್ಯುಕಥಾ ॥ ೯೧ ॥ ಹೇ ಅಸೋ ಸಂತಾಪ ಕೈಸಾ । ಚಂದ್ರು ನ ಸ್ಮರೇ ಜೈಸಾ । ಭೂತೀ ಭೇದ ನೇಣತೀ ತೈಸಾ । ಜ್ಞಾನಿಯೇ ತೇ ॥ ೯೨ ॥

ಅರ್ಥ— ಯಾವನಿಗೆ ಆತ್ಮಜ್ಞಾನದ ವಿಷಯದಲ್ಲಿ ನಿಶ್ಚಯವಾದ ಬುದ್ಧಿಯಿರುವದೋ ಮತ್ತು ತಾನು ತನಗೆ ಬ್ರಹ್ಮಸ್ವರೂಪವೆಂದು ತಿಳಿಯುತ್ತಾನೋ, ರಾತ್ರಿ-ಹಗಲು ಬ್ರಹ್ಮಪರಾಯಣನಾಗಿ ತನ್ನ ಬ್ರಹ್ಮಸ್ಥಿತಿಯನ್ನು ಪೂರ್ಣವಾಗಿಟ್ಟುಕೊಂಡಿರುವನೋ, ॥ ೮೭ ॥ ಹೀಗೆ ಸರ್ವವ್ಯಾಪಕ ಜ್ಞಾನವು ಯಾವನನ್ನು ಅರಸುತ್ತ ಬರುತ್ತಿದೆಯೋ ಅವನಿಗೆ ಸಮದೃಷ್ಟಿಯುಂಟಾಗುತ್ತದೆ. ಇದನ್ನು ಹೆಚ್ಚಿಗೆ ವಿಸ್ತರಿಸಿ ಹೇಳುವದೇನಿದೆ ? ॥ ೮೮ ॥ ಅವನು ತನ್ನಂತೆಯೇ ಸರ್ವ ವಿಶ್ವವೂ ಬ್ರಹ್ಮಸ್ವರೂಪವೆಂದು ತಿಳಿಯುತ್ತಾನೆ. ಇದರಲ್ಲಿ ಆಶ್ಚರ್ಯವೇನು ? ॥ ೮೯ ॥ ಯಾವ ಪ್ರಕಾರ ಭಾಗ್ಯವು ವಿನೋದಕ್ಕಾಗಿ ಸಹ ದಾರಿದ್ರ್ಯದ ಅನಭವವನ್ನು ಮಾಡಿಕೊಳ್ಳಲಾರದೋ, ಮತ್ತು ವಿವೇಕಕ್ಕೆ ಭ್ರಾಂತಿಯ ಪರಿಚಯವೂ ಸಹ ಹೇಗೆ ಇರುವದಿಲ್ಲವೋ, ॥ ೯೦ ॥ ಅಥವಾ, **ಸೂರ್ಯನು ಸ್ವಪ್ನದಲ್ಲಿ** ಸಹ ಕತ್ತಲೆಯನ್ನು ಹೇಗೆ ಕಾಣನೋ, **ಇಲ್ಲವೇ ಅಮೃತವು ಕವಿಯಿಂದ** ಸಹ ಹೇಗೆ ಮರಣದ ವಾರ್ತೆಯನ್ನು ಕೇಳಿರಲಾರದೋ, ॥ ೯೧ ॥ ಇದಿರಲಿ, **ಚಂದ್ರನಿಗೆ ಉಷ್ಣತೆಯೆಂದರೇನೆಂಬುದು ಕೂಡಾ ಹೇಗೆ ಅರಿಯನೋ** ಅದೇ ಪ್ರಕಾರ (ಪರತತ್ವದಲ್ಲಿಯೇ ಬುದ್ಧಿಯನ್ನಿಟ್ಟು ಅದರಲ್ಲಿಯೇ ಮಗ್ನರಾಗಿ ನಿಷ್ಠೆಯಿಂದ ಪರಮಾತ್ಮನೇ ಪರ ಮಾಶ್ರಯವೆಂದರಿತ ಜ್ಞಾನಿಗಳು ಪಾಪರಹಿತರಾಗಿರುವದರಿಂದ) ಅವರಿಗೆ ಪ್ರಾಣಿಮಾತ್ರಗಳಲ್ಲಿ ಭೇದವು ಕಂಡು ಬರುವದಿಲ್ಲ. ॥ ೯೨ ॥

ವಿದ್ಯಾವಿನಯಸಂಪನ್ನೇ ಬ್ರಾಹ್ಮಣೇ ಗವಿ ಹಸ್ತಿನಿ ।
ಶುನಿ ಚೈವ ಶ್ವಪಾಕೇ ಚ ಪಂಡಿತಾಃ ಸಮದರ್ಶಿನಃ ॥ ೧೮ ॥

[ವಿದ್ಯಾ ವಿನಯ ಸಂಪನ್ನ ಇತಿ] ಮಗ ಹಾ ಮಶಕು ಹಾ ಗಜು । ಕೀ ಶ್ವಪಚು ಹಾ ದ್ವಿಜು । ಪೈಲ ಇತರ ಹಾ ಆತ್ಮಜು । ಹೇ ಉರಲೇ ಕೇ ॥ ೯೩ ॥ ನಾತರೀ ಹೇ ಧೇನು ಹೇ ಶ್ವಾನ । ಏಕ ಗುರೂ ಏಕ ಹೀನ । ಹೇ ಅಸೋ ಕೈಚೇ ಸ್ವಪ್ನ । ಜಾಗತಯಾ ॥ ೯೪ ॥ ಏಥ ಭೇದ ತರೀ ಕೀ ದೇಖಾವಾ । ಜಠೀ ಅಹಂಭಾವ ಉರಲಾ ಹೋ ಆವಾ । ತೋ ಆಧೀಂಚಿ ನಾಹೀ ಆಥೆವಾ । ಆತಾ ವಿಷಮ ಕಾ ಈ ॥ ೯೫ ॥

ಅರ್ಥ— ಆಮೇಲೆ, ಇದು ನೊಣವು-ಇದು ಆನೆ, ಇವ ಹೊಲೆಯ-ಇವ ಹಾರುವ, ಅದರಂತೆಯೆ ಇನನು ನನ್ನ ಮಗನು-ಇವನು ಅನ್ಯನು ಎಂಬ ಭೇದವು ಅವನಲ್ಲಿ ಉಳಿಯಲಾರದು. ॥ ೯೩ ॥ ಇಲ್ಲವೇ ಇದು ಧೇನುವು-ಇದು ಶ್ವಾನವು, ಒಂದು ದೊಡ್ಡದು-ಒಂದು ಸಣ್ಣದು, ಈ ತರಹದ ಸ್ವಪ್ನವು (ಸರ್ವ ಭೂತಾಂತರಾತ್ಮಾ ಶ್ರೀಹರಿಯೇ ನೆಲೆಸಿರುವನೆಂಬ ಧೃಢಭಾವನೆಯಿಂದ) ಜಾಗ್ರತರಾದ ಪುರುಷನಿಗೆ ಬೀಳಬಹುದೇ ? ॥ ೯೪ ॥ ಎಲ್ಲಿ ನಾನು-ನನ್ನದು ಎಂಬ ಅಹಂಕಾರವು ಉಳಿದಿರುವದೋ, ಅಲ್ಲಿಯೇ ಭೇದವು ದೃಷ್ಟಿಗೆ ಬೀಳುವದು. ಆದರೆ ಮೊದಲಿಗೇ ಆ, ಭೇದಭಾವವು ಸ್ವಲ್ಪಾದರೂ ಇಲ್ಲದಂತಾದ ಮೇಲೆ ಭಿನ್ನತ್ವವು ಉಳಿಯುವದಾದರೂ ಹೇಗೆ? ॥ ೯೫ ॥

ಇಹೈವ ತೈರ್ಜಿತಃ ಸರ್ಗೋ ಯೇಷಾಂ ಸಾಮ್ಯೇಸ್ಥಿತಂ ಮನಃ ।
ನಿರ್ದೋಷಂ ಹಿ ಸಮಂ ಬ್ರಹ್ಮ ತಸ್ಮಾದ್ಬ್ರಹ್ಮಣಿ ತೇ ಸ್ಥಿತಾಃ ॥ ೧೯ ॥

[ಇಹೈವ ತೈರ್ಜಿತಃ ಇತಿ] ಮ್ಹಣೋನಿ ಸರ್ವತ್ರ ಸದಾಸಮ । ತೇ ಆಪಣಚಿ ಅದ್ವಯ ಬ್ರಹ್ಮ । ಹೇ ಸಂಪೂರ್ಣ ಜಾಣೇ ಪರ್ಮ। ಸಮದೃಷ್ಟಿಚೇ ॥ ೯೬ ॥ ಜೇ ಹೀ ವಿಷಯಸಂಗ ನ ಸಾಂಡಿತಾ। ಇಂದ್ರಿಯಾತೇ ನ ದಂಡಿತಾ । ಪರೀ ಭೋಗಿಲೀ ನಿಃಸಂಗತಾ । ಕಾಮನೇವಿಣ ॥ ೯೭ ॥ ಜೇ ಹೀ ಲೋಕಾಂ ಜೇನಿ ಆಧಾರೀ । ಲೌಕಿಕೇಂಚೀ ವ್ಯಾಪಾರೀ । ಪರೀ ಸಾಂಡಿಲೇ ನಿದಸುರೇ । ಲೌಕಿಕ ಹೇ ॥ ೯೮ ॥ ಜೈಸಾ ಜನಾಮಾಜಿ ಜೀವಚರ । ಅಸತೂಚಿ ಜನಾ ನವ್ಹೆ ಗೋಚರ । ತೈಸಾ ಶರೀರೀ ಪರೀ ಸಂಸಾರ । ನೋಳಖೇ ತಯಾ ತೇ ॥ ೯೯ ॥ ಹೇ ಅಸೋ ಪವನಾಚೇನಿ ಮೇಳೇ । ಚೈಸೇ ಜಳೀಂಚಿ ಜಳ ಲೋಳೇ। ತೇ ಆಣಿಕೇ ಮ್ಹಣತೀ ವೇಗಳೇ । ಕಲ್ಲೋಳ ಹೇ ॥ ೧೦೦ ॥ ತೈಸೇ ನಾಮರೂಪ ತಯಾಚೇ । ಯೇರ್ಹವೀ ಬ್ರಹ್ಮಚೀ ತೋ ಸಾಚೇ । ಮನ ಸಾಮ್ಯ ಆಲೇ ಜಯಾಚೇ । ಸರ್ವತ್ರ ಗಾ ॥ ೧ ॥ ಐಸೇನಿ ಸಮದೃಷ್ಟಿ ಜೋ ಹೋಯೇ । ತಯಾ ಪುರುಷಾ ಲಕ್ಷಣ ಹೀ ಆಹೇ । ಅರ್ಜುನಾ ಸಂಕ್ಷೇಪೇ ಸಾಂಗೇನ ಪಾಹೇ । ಅಚ್ಯುತ ಮ್ಹಣೇ ॥ ೨ ॥

ಅರ್ಥ— ಆದುದರಿಂದ ಯಾವನದು ಯಾವಾಗಲೂ ಸಮದೃಷ್ಟಿಯಿರುವದೋ ಅವನು ಸ್ವತಃ ಅದ್ವಿತೀಯ ಬ್ರಹ್ಮಸ್ವರೂಪನಿರುವನು. ಇದೇ ಸಮದೃಷ್ಟಿಯ ಸಂಪೂರ್ಣ ಗುರುತಾಗಿರುವದೆಂದು ತಿಳಿ. ॥ ೯೬ ॥ ಅವನು ವಿಷಯ ಸಂಗತಿಯನ್ನು ಬಿಡದೇ ಇಂದ್ರಿಯಗಳನ್ನು ನಿರ್ಬಂಧಿಸಿರದಿದ್ದರೂ ನಿರಿಚ್ಛೆಯಿಂದ ಸರ್ವ ಭೋಗಗಳನ್ನು ಭೋಗಿಸುತ್ತಾನೆ. ಅಂತಹನು ಅಕರ್ತೃತ್ವದ ಅನುಭವವನ್ನು ಜನ್ಮಾಗಿ ತೆಗೆದುಕೊಂಡವನಿರುವನು. ॥ ೯೭ ॥ ಯಾವನು ಜನರ ಆಶ್ರಯದಿಂದ ನಡೆದು ಮತ್ತು ಸರ್ವ ವ್ಯವಹಾರವನ್ನೂ ಮಾಡಿ ಲೌಕಿಕದೊಳಗಿನ ಅಜ್ಞಾನವನ್ನು ಬಿಟ್ಟುಕೊಟ್ಟಿರುತ್ತಾನೋ, ॥ ೯೮ ॥ ಆ ಪುರುಷನು—ಭೂತವು ಯಾವ ಪ್ರಕಾರ ಸರ್ವ ಜನರಲ್ಲಿದ್ದಾಗ್ಯಾದರೂ ಅಗೋಚರವಾಗಿರುವದೋ ಅದೇ ಪ್ರಕಾರ ಶರೀರ ಧಾರಿಯಿದ್ದಾಗ್ಯಾದರೂ ಸಂಸಾರದವನ್ನು ಅರಿಯವನಾಗಿರುವನು. ॥ ೯೯ ॥ ಇದು ಇರಲಿ; ಗಾಳಿಯಿಂದ ನೀರಿನಲ್ಲಿ ತರಂಗಗಳುಂಟಾಗುತ್ತವೆ. ಆದರೆ ಅಜ್ಞಾನದವರು ನೀರಿನಿಂದ ತರಂಗಗಳು ಬೇರೆಯಾಗಿರುವವೆಂದೇ ಭಾವಿಸುತ್ತಾರೆ. ॥ ೧೦೦ ॥ ಅದೇ ಪ್ರಕಾರ ಯಾರ ಮನಸ್ಸು ಸರ್ವ ಸ್ಥಳದಲ್ಲಿಯೂ ಸಮಾನವಾಗಿರುವದೋ ಅವರ ಶರೀರ ಮತ್ತು ಹೆಸರು ಇವುಗಳು ಜಗರೂಢಿಯಂತಿದ್ದಾಗ್ಯೂ ಅವನು ಸಾಕ್ಷಾತ್ ಬ್ರಹ್ಮಸ್ವರೂಪನೇ ಇರುವನು. ॥ ೧ ॥ ಭಗವಾನ್ ಶ್ರೀಕೃಷ್ಣ ಪರಮಾತ್ಮನು ಅನ್ನುತ್ತಾನೆ— ಅರ್ಜುನಾ! ಹೀಗೆ ಯಾವನಲ್ಲಿ ಸಮದೃಷ್ಟಿಯು ಉಂಟಾಗಿರುತ್ತದೋ, ಆ ಪುರುಷನ ಲಕ್ಷಣವನ್ನು ಸಂಕ್ಷೇಪವಾಗಿ ಹೇಳುತ್ತೇನೆ ಕೇಳು— ॥ ೧೦೨ ॥

ನ ಪ್ರಹೃಷ್ಯೇತ್ಪ್ರಿಯಂ ಪ್ರಾಪ್ಯ ನೋದ್ವಿಜೇತ್ ಪ್ರಾಪ್ಯ ಚಾಪ್ರಿಯಂ ।
ಸ್ಥಿರಬುದ್ಧಿರಸಂಮೂಢೋ ಬ್ರಹ್ಮವಿದ್ಬ್ರಹ್ಮಣಿ ಸ್ಥಿತಃ ॥ ೨೦ ॥

[ನ ಪ್ರಹೃಷ್ಯೇದಿತಿ] ತರೀ ಮೃಗ ಜಳಾಚೇನಿ ಪೂರೇ । ಚೈಸೇ ನ ಲೋಟಿಜೇ ಕಾ ಗಿರಿವರೇ ತೈಸಾ ಶುಭಾ ಶುಭೀ ನ ವಿಕರೇ । ಪಾತಲಿಯಾ ಜೋ ॥ ೩ ॥ ತೋಚಿ ತೋ ನಿರುತಾ । ಸಮದೃಷ್ಟಿ ತತ್ವತಾ । ಹರಿ ಮ್ಹಣೇ ಪಾಂಡುಸುತಾ । ತೋಚಿ ಬ್ರಹ್ಮ ॥ ೪ ॥

ಅರ್ಥ:— ಆದರೆ ಮೃಗಜಲದ ಮಹಾಪೂರದಿಂದ ಪರ್ವತಗಳು ತೇಲಿ ಹೋಗುವದಿಲ್ಲವೋ, ಅದೇ ಪ್ರಕಾರ ಯಾವನು (ಪ್ರಿಯವಸ್ತುವು ದೊರಕಿದರೆ ಆನಂದಿಸುವದಿಲ್ಲ. ಮತ್ತು ಅಪ್ರಿಯವಸ್ತು ದೊರಕಿದರೆ ದುಃಖಿಸುವದಿಲ್ಲ) ಶುಭಾ ಶುಭ ಕರ್ಮಗಳಿಂದ ವಿಕಾರ ಹೊಂದುವದಿಲ್ಲವೋ, ॥ ೩ ॥ ಅವನೇ ನಿಜವಾವ ಸಮದೃಷ್ಟಿಯ ತತ್ವವನ್ನು ತಿಳಿದವನು ಮತ್ತು ಅವನೇ ಸ್ವಯಂ ಬ್ರಹ್ಮಸ್ವರೂಪನಿರುವಳಂದು ಶ್ರೀಹರಿಯು ಅರ್ಜುನನ ಮುಂದೆ ಹೇಳಿದನು ॥ ೪ ॥

ಬಾಹ್ಯ ಸ್ಪರ್ಶೇಷ್ವಸಕ್ತಾತ್ಮಾ ವಿಂದತ್ಯಾತ್ಮನಿಯತ್ಸುಖಂ ।
ಸಬ್ರಹ್ಮಯೋಗಯುಕ್ತಾತ್ಮಾ ಸುಖಮಕ್ಷಯ್ಯಮಶ್ನುತೇ ॥ ೨೧ ॥

[ಬಾಹ್ಯ ಸ್ಪರ್ಶೇಷ್ವಸಕ್ತಾತ್ಮೇತಿ] ಜಯಾ ಆಪಣಪೇ ಸಾಂಡೂನಿ ಕಹೀ । ಇಂದ್ರಿಯ ಗ್ರಾಮಾವರೀ ಯೇಣೇ ನಾಹೀ । ತೋ ವಿಷಯ ನ ಸೇವೀ ಹೇ ಕಾಯೀ । ವಿಚಿತ್ರ ಎಥ ॥ ೪ ॥ ಸಹಜೇ ಸ್ವಸುಖಾಚೇನಿ ಅಪಾರೇ । ಸುರವಾಡ ಲೇನಿ ಅಂತರೇ ರಚಿಲಾ ಮ್ಹಣಿವೂನಿ ಬಾಹಿರೇ । ಪಾವುಲ ನ ಘಳೀ ॥ ೬ ॥ ಸಾಂಗೇ ಕುಮುದ ದಳಾಚೇನಿ ತಾಟೇ । ಜೋ ಜೇವಿಲಾ ಚಂದ್ರಕಿರಣೇ ಚೊಖಟೆ । ತೋ ಚಕೋರ ಕಾಯೀ ವಾಳುವಂಟೇ । ಚುಂಬಿತ ಅಸೇ ॥ ೭ ॥ ತೈಸೇ ಆತ್ಮ ಸುಖ ಉಪಾಇಲೇ । ಜಯಾಸಿ ಆಪಣ ಪೇಂಚಿ ಫಾವಲೇ । ತಯಾ ವಿಷಯ ಸಹಜ ಸಾಂಡವಲೇ । ಮ್ಹಣೋ ಕಾಯೀ ॥ ೮ ॥ ಯೇರ್ಹವೀ ತರೀ ಕೌತುಕೇ । ವಿಚಾರೂನಿ ಪಾಹೇ ಪಾನಿಕೇ । ಯಾ ವಿಷಯಾಂಚೇನಿ ಸುಖೇ । ಝುಕ ವಿಜತೀ ಕವಣ ॥ ೯ ॥

ಅರ್ಥ: – ಯಾವನು ಆತ್ಮಸ್ವರೂಪದಲ್ಲಿಯೇ ಮಗ್ನನಾಗಿ ಎಂದಿಗೂ ಇಂದ್ರಿಯಗಳಿಗೆ ಅಧಿನನಾಗಿರನೋ, ಅವನು ವಿಷಯ ಸೇವನೆಯನ್ನು ಮಾಡದಿರುವದರಲ್ಲಿ ಆಶ್ಚರ್ಯವೇನು ? ॥ ೫ ॥ ಆತ್ಮ ಸುಖದ ಪೂರ್ಣತೆಯಿಂದ ಅವನ ಅಂತಃಕರಣವು ಸ್ವಭಾವಿಕವಾಗಿ ಸಂತುಷ್ಟವಾಗಿರುತ್ತದೆ. ಆದುದರಿಂದ ಇಂದ್ರಿಯಗಳ ಪ್ರವೃತ್ತಿಯ ಕಡೆಗೆ ಅವನ ಮನಸ್ಸು ಒಲೆಯುವದಿಲ್ಲ. ॥ ೬ ॥ ಚಕೋರಪಕ್ಷಿಯು ಚಂದ್ರವಿಕಾಸನಿಕಮಲಪತ್ರದಲ್ಲಿ ಕಿರಣಾಮೃತವನ್ನು ಸೇವಿಸಿರುವದೋ, ಅದು ನದಿದಂಡೆಯ ಮೇಲಿನ ಉಸುಬಿನ ಕಣಗಳನ್ನು ತಿನ್ನಲಿಷ್ಟ ಪಡಬಹುದೇ ? ॥ ೭ ॥ ಯಾವನಿಗೆ ತನ್ನ ಹೃದಯದಲ್ಲಿಯೇ ಆತ್ಮಾನಂದವು ಪ್ರಾಪ್ತವಾಗಿರುತ್ತದೋ, ಅವನಿಗೆ ವಿಷಯತ್ಯಾಗ ಉಂಟಾಗಿರುವದು ಸಹಜವೇ! ಇದನ್ನೇನು ನಾನು ಬೇರೆ ಹೇಳಬೇಕಾಗಿರುವುದೇ ? ॥ ೮ ॥ ಯಾರು ವಿಷಯುವೆ ಸುಖದಿಂದ ಮೋಸಹೊಂದುವರೊ, ಅಂತಹರವಿಷಯವನ್ನು ನಿನ್ನೊಳಗೇ ನೀನು ಕುತೂಹಲದಿಂದ ವಿಚಾರಮಾಡು. ॥ ೯ ॥

ಯೇಹಿ ಸಂಸ್ಪರ್ಶಜಾ ಭೋಗಾ ದುಃಖಯೋನಯ ಏವತೇ ।
ಆದ್ಯಂತವಂತಃ ಕೌಂತೇಯ ನತೇಷು ರಮತೇ ಬುಧಃ ॥ ೨೨ ॥

[ಯೇ ಹಿ ಸಂಸ್ಪರ್ಶಜಾ ಭೋಗಾಇತಿ] ಜೇಹೀ ಆಪಣಪೇ ನಾಹೀ ದೇಖಿಲೇ । ತೇಚಿ ಇಹೀ ಇಂದ್ರಿಯಾರ್ಥಿ ರಂಜಲೇ । ಜೈಸೇ ರಂಕ ಕಾ ಆಳುಕೈಲೇ । ತುಷಾತೇ ಸೇವಿ ॥ ೧೧೦ ॥ ನಾತರೀ ಮೃಗೇ ತೃಷಾಪೀಡಿತೆ । ಸಂಘ್ರಮೇ ವಿಸರೋನಿ ಜಳಾತೇ । ಮಗ ತೋಯ ಬುದ್ಧೀ ಬರಡಿತೇ। ಠಾಕೂನಿ ಯೇತೀ ॥ ೧೧ ॥ ತೈಸೇ ಆಪಣಪೇ ನಾಹೀ ದಿಠೇ । ಜಯಾತೇ ಸ್ವಸುಖಾಚೇ ಸದಾ ಖರಾಟೇ । ತಯಾಂಸೀಚಿ ವಿಷಯ ಹೇ ಗೋಮಟೇ । ಆವಡತೀ ॥ ೧೨ ॥ ಯೇರ್ಹವೀ ವಿಷಯೀ ಸುಖ ಆಹೆ । ಹೇ ಬೋಲಣೇಚಿ ಸಾರಿಖೇ ನೋಹೇ । ತರೀ ವಿದ್ಯುತ್‌ಸ್ಫುರಣೇ ಕಾನ ಪಾಹೇ । ಜಗಾಮಾಜೇ ॥ ೧೩ ॥ ಸಾಂಗೇ ವಾತವರ್ಷ ಆತಪಧರೇ । ಐಸೇ ಅಭ್ರಚ್ಛಾಯಾಚಿ ಜರಿ ಸರೇ । ತರೀ ತ್ರಿಮಾಳಿಕೇ ಧವಳಾರೇ । ಕರಾವೀ ಕಾ ॥ ೧೪ ॥ ಮ್ಹಣೋನಿ ವಿಷಯಸುಖ ಜೇ ಬೋಲಿಜೇ । ತೇ ನೇಣತಾ ಗಾ ವಾಯಾ ಜಲ್ಪಜೇ । ಜೈಸೇ ಮಹುರ ಕಾಮ್ಹಣೆಜೇ । ವಿಷಕಂದಾತೇ ॥ ೧೫ ॥ ನಾ ತರೀ ಭೌಮಾ ನಾಮ ಮಂಗಳ । ರೋಹಿಣೀತೇ ಮ್ಹಣತೀ ಜಳ । ತೈಸಾ ಸುಖಪ್ರವಾದ ಬರಳ । ವಿಷಯಿಕ ಹಾ ॥ ೧೬ ॥ ಹೇ ಅಸೋ ಆಘವೀ ಬೋಲೀ । ಸಾಂಗ ಪಾ ಸರ್ಪಫಣೇ ಚೀ ಸಾವುಲೀ । ತೇ ಶೀತಲ ಹೋ ಈಲ ಕೇತುಲೀ । ಮೂಷಕಾಸೀ ॥ ೧೭ ॥ ಜೈಸಾ ಆಮಿಷ ಕವಲ ಪಾಂಡವಾ । ಮೀನ ನ ಸೇವೀ ತವಚಿ ಬರವಾ । ತೈಸಾ ವಿಷಯಸಂಗ ಆಘವಾ । ನಿಧ್ರಾಂತ ಜಾಣೇ ॥ ೧೮ ॥ ಹೇ ವಿರಕ್ತಾಂಚಿಯೇ ದೃಷ್ಟೀ । ಜೈ ನ್ಯಾಹಾಳಿಜೇ ಕಿರೀಟೀ। ತೈ ಪಾಂಡುರೋಗವಾಚಿಯೇ ಪುಷ್ಟೀ। ಸಾರಿಖೇ ದಿಸೇ ॥೧೯॥ ಮ್ಹಣೋನಿ ವಿಷಯಭೋಗೀ ಜೇ ಸುಖ। ತೇ ಸಾದ್ಯಂತಚಿ ಜಾಣ ದುಃಖ। ಪರೀ ಕಾಯಕರಿತೀ ಮೂರ್ಖ । ನ ಸೇವೀತಾ ನ ಸರೇ ॥೨೦॥

ತೇ ಅಂತರ ನೇಣತೀ ಬಾವುಡೇ । ಮ್ಹಣೋನಿ ಅಗತ್ಯ ಸೇವಣೇ ಘಡೇ । ಸಾಂಗೇ ಪೊಯು ಪಂಕೀಚೇ ಕಿಡೇ । ಕಾಯಚಿಳಸೀ ಘೇತೀ ॥ ೨೧ ॥ ತಯಾ ದುಃಖಿಯಾ ದುಃಖಚಿ ಜಿವ್ಹಾರ । ತೇ ವಿಷಯ ಕರ್ದಮೀಚೇ ದರ್ದುರ । ತೇ ಭೋಗ ಜಳೀಚೇ ಜಳಚರ । ಸಾಂಡಿತೀ ಕೇವೀ ॥ ೨೨ ॥ ಆಣಿ ದುಃಖಯೋನಿ ಚಿಯಾ ಆಹಾತೀ । ತಿಯಾ ನಿರರ್ಥಕಾ ತರೀ ನವ್ಹತೀ । ಜರೀ ವಿಷಯಾವರೀ ವಿರಕ್ತೀ । ಧರಿತೀ ಜೀವ ॥ ೨೩ ॥ ನಾತರೀ ಗರ್ಭವಾಸಾದಿ ಸಂಕಟ । ಕಾ ಜನ್ಮಮರಣೀಚೇ ಕಷ್ಟ । ಹೇ ವಿಸಾವೇವೀಣ ವಾಟ । ವಾಹವೀ ಕವಣೇ ॥ ೨೪ ॥ ಜರೀ ವಿಷಯೀ ವಿಷಯೋ ಸಾಂಡಿಜೇಲ । ತರೀ ಮಹಾದೋಷ ಕೇ ವಸಜೇಲ । ಆಣಿ ಸಂಸಾರ ಹಾ ಶಬ್ದ ನನ್ಹೇಲ । ಲಟಿಕಾ ಜಗೀ ॥ ೨೫ ॥ ಮ್ಹಣೋನಿ ಅವಿದ್ಯಾ ಜಾತ ನಾಥಿಲೀ । ತೇ ತಿಹೀಚಿ ಸಾಚ ದಾವಿಲೀ । ಜೀಹೀ ಸುಖಬುದ್ಧೀ ಸ್ಪೇತಲೇ । ವಿಷಯದುಃಖ ॥ ೨೬ ॥ ಯಾಕಾರಣೇ ಗಾಸುಭಟಾ । ಹಾ ವಿಚಾರಿತಾ ವಿಷಯ ವೋಖಟಾ । ತೂ ಝುಣೇ ಕಹೀ ಯಾವಾಟಾ । ವಿಸರೋನಿಜಾಸೀ ॥ ೨೭ ॥ ಪೈಯಾತೀ ವಿರಕ್ತ ಪುರುಷ ತ್ಯಜಿತೀ ಕಾ ಜೈಸೇ ವಿಷ । ನಿರಾಶಾತಯಾ ದುಃಖ ದಾವಿಲೇ ನಾವಡೇ ॥ ೨೮ ॥

ಅರ್ಥ— ಯಾವ ಪ್ರಕಾರ ಹಸಿವೆಯಿಂದ ಪೀಡಿತನಾದ ದರಿದ್ರನು ತವಡು ಸಹ ತಿನ್ನಲು ಹೇಸುವದಿಲ್ಲವೋ, ಅದರಂತೆ ಯಾವನು ಆತ್ಮಸ್ವರೂಪದ ಅನುಭವವನ್ನು ತೆಗೆದುಕೊಂಡಿರುವದಿಲ್ಲವೋ, ಅವನೇ ಇಂದ್ರಿಯಜನ್ಯ ವಿಷಯ ಸುಖದಲ್ಲಿ ಮಗ್ನನಾಗುತ್ತಾನೆ. ॥ ೧೧೦ ॥ ಇಲ್ಲವೇ ತೃಷೆಯಿಂದ ವ್ಯಾಕುಲವಾದ ಚಿಗುರೆಯು ಭ್ರಮದಿಂದ ನಿಜವಾದ ನೀರನ್ನು ಬಿಟ್ಟು ಮರಡಿಯ ಬೈಲು ಭೂಮಿಯಲ್ಲಿ ಉತ್ಪನ್ನವಾಗುವ ಬಿಸಲುಗುದುರೆಗೇ ನೀರು ಹರಿಯುತ್ತದೆಂಬ ಭ್ರಮೆಯಿಂದ ಓಡುತ್ತ ಬರುತ್ತದೆ. ॥ ೧೧ ॥ ಅದೇ ಪ್ರಕಾರ ಯಾವನು ಆತ್ಮಸುಖದ ಅನುಭವ ತೆಗೆದುಕೊಂಡಿರುವದಿಲ್ಲವೋ, ಯಾವನಿಗೆ ಸ್ವಾತ್ಮಸುಖದ ಅನುಭವವು ಯಾವಾಗಲೂ ಕಡಿಮೆ ಇರುತ್ತದೋ, ಅವನಿಗೇನೇ ! ಈ ವಿಷಯ ಸುಖವು ರುಚಿಕರವೂ, ಶ್ರೇಷ್ಠತಮವೂ ಆಗಿರುವುದೆಂದು ತೋರುತ್ತದೆ. ॥ ೧೨ ॥ ಸಹಜವಾಗಿ ನೋಡಿದರೆ ವಿಷಯದಲ್ಲಿ ಸುಖವಿರುವದೆಂದು ಅನ್ನುವದೇ ಯೋಗ್ಯವಾಗಿರುವದಿಲ್ಲ. ಆದರೂ ಸುಖವಿರುವದೆಂದು ಹೀಗೆ ತಿಳಿದು ನಡೆದರೆ ಆಕಾಶದಲ್ಲಿ ಮಿಂಚುವದರಿಂದ ಬೀಳುವ ಬೆಳಕಿನಲ್ಲಿ ಹಗಲಿನಂತೆ ಜಗತ್ತಿನಲ್ಲಿಯ ವ್ಯವಹಾರಗಳು ಏಕೆ ನಡೆಯು ಕೂಡದು ? ॥ ೧೩ ॥ ಅಭ್ರಚ್ಛಾಯೆ (ಮೋಡದ ನೆರಳು) ಇದರಿಂದಲೇ ಗಾಳಿ, ಮಳೆ, ಬಿಸಿಲುಗಳ ನಿವಾರಣೆ ಯಾಗುವಂತಿದ್ದರೆ ಈ ಮೂರು ಮೂಲು ಅಂತಸ್ತಿನ ಮನೆಗಳನ್ನು ಕಟ್ಟಲು ಕಾರಣವೇನು ? ॥ ೧೪ ॥ ಆದುದರಿಂದ ವಿಷದ ಗಡ್ಡೆಗೆ (ಬಚನಾಗದ ಬೇರು) ಅಜ್ಞ ಜನರು ಸ್ವಾದವಿರುವದೆಂದು ತಿಳಿಯುತ್ತಾರೆ. ಅದೇ ಪ್ರಕಾರ ವಿಷಯ ವ್ಯವಹಾರದಲ್ಲಿ ಸುಖವಿರುವದೆಂದು ಅನ್ನುವದು ವ್ಯರ್ಥವಾದ ಬಡಬಡಿಕೆಯೇ ಆಗಿರುವದು. ॥ ೧೫ ॥ ಇಲ್ಲವೇ ಭೌಮ ಈ ನಕ್ಷತ್ರಕ್ಕೆ ಹೇಗೆ ಮಂಗಲವೆಂಬ ಹೆಸರಿದ್ದರೂ ಅದರ ಪರಿಣಾಮವು ಅಮಂಗಲ (ಕಷ್ಟದಾಯಕ) ವಾಗಿ ನಮ್ಮ ಅನುಭವಕ್ಕೆ ಬರುತ್ತದೋ, ಇಲ್ಲವೇ ಮೃಗಜಲಕ್ಕೆ ಹೇಗೆ ಜಲವೆಂದು ಭ್ರಮೆ ಪಡುತ್ತಾರೋ ಹಾಗೆಯೇ ವಿಷಯಸೇವನೆಯಲ್ಲಿ ಸುಖವಿರುವದೆಂಬ ಮಾತೂ ಅಸತ್ಯವಾದುದು. ॥ ೧೬ ॥ ಈ ಎಲ್ಲ ಮಾತುಗಳೂ ಒತ್ತಟ್ಟಿಗಿರಲಿ; ಆದರೆ ನಾಗರಹಾವಿನ ಹೆಡೆಯ ನೆರಳು ಇಲಿಗೆ ಎಷ್ಟರ ಮಟ್ಟಿಗೆ ಸುಖಾವಹವಾಗಿರುವುದೆಂಬುದನ್ನು ನಿನೇ ಹೇಳು ? ॥ ೧೭ ॥ ಆರ್ಜುನನೇ, ಗಾಣಕ್ಕೆ ಹಚ್ಚಿದ ಅಮಿಷ (ಮಾಂಸ) ದ ತುತ್ತನ್ನು ಮೀನಗಳು ಎಲ್ಲಿಯವರೆಗೆ ತಮ್ಮ ನಾಲಿಗೆಯಿಂದ ಸ್ಪರ್ಶ ಮಾಡಿರುವದಿಲ್ಲವೋ, ಅಲ್ಲಿಯವರೆಗೇನೇ ! ಅವುಗಳಿಗೆ ಕ್ಷೇಮ ಉಂಟಾಗಿರುವದು. ಇದೇ ಪ್ರಕಾರ ಪುರುಷನು ವಿಷಯ ಸಂಗತಿಯ ಅನುಭವವನ್ನು ಎಲ್ಲಿಯವರೆಗೆ ತೆಗೆದುಕೊಂಡಿರುವದಿಲ್ಲವೋ ಅಲ್ಲಿಯವರೆಗೆ ಮಾತ್ರ ಸುರಕ್ಷಿತನಾಗಿರುವನು. ॥ ೧೮ ॥ ಎಲೋ ಕಿರೀಟಿ ! ವೈರಾಗ್ಯಶೀಲನ ದೃಷ್ಟಿಯಿಂದ ಈ ವಿಷಯಗಳನ್ನು ನೋಡಿದ್ದಾದರೆ, ಪಂಡುರೋಗದಿಂದ ಯುಕ್ತನಾದ ಮನುಷ್ಯನ ಪುಷ್ಟಿಯಂತೆ ತೋರುತ್ತದೆ. (ಆದರೆ ಅವನು ಮಾತ್ರ ಶಕ್ತಿಹೀನನಾಗಿರುತ್ತಾನೆ. ॥ ೧೯ ॥ ಆದುದರಿಂದ ವಿಷಯೋಪಭೋಗದಲ್ಲಿ ಯಾವನಿಗೆ ಸುಖವಿರುವದೆಂದು ಅನ್ನ

ಬೇಕಾಗಿರುವದೋ ಅದು ಮೊದಲಿನಿಂದ ತುದಿಯವರೆಗೆ ಸಂಪೂರ್ಣವಾಗಿ ದುಃಖಮಯವೇ ಎಂದು ತಿಳಿ. ಆದರೂ ಮಾಡುವುದೇನು? ಮೂರ್ಖರಿಗೆ ವಿಷಯಸೇವನೆ ಮಾಡದ ಹೊರ್ತು **ಅನ್ಯಮಾರ್ಗವೇ** ಇರುವದಿಲ್ಲ. ॥ ೧೨೦ ॥ ಅವರಿಗೆ ಅದರ ಮರ್ಮವು ತಿಳಿಯದೇ ಇದ್ದುದರಿಂದ ವಿಷಯ ಸೇವನೆಯನ್ನು **ಅವಶ್ಯ**ವಾಗಿ ಮಾಡಲೇ ಬೇಕಾಗುತ್ತದೆ. (ಅದರಿಂದ ಅವರು ತೃಪ್ತಿ ಹೊಂದುವದೇ ಇಲ್ಲ.) ಕೀವು ರಕ್ತದ ಹೇಸಿಕೆಯಲ್ಲಿಯೇ ಉಬ್ಬಾಡಿ ಜೀವಿಸುವ ಕ್ರಿಮಿಗಳಿಗೆ ಎಂದಾದರೂ ಹೇಸಿಕೆ ಉಂಟಾಗುವದೇ ನೀನೇ ಹೇಳು! ॥ ೨೧ ॥ ಆ ದುಃಖಿತರಿಗೆ ದುಃಖವೇ ಪ್ರೀಯವಾಗಿರುತ್ತದೆ. ಕಾರಣವೇನೆಂದರೆ ಅವರು ವಿಷಯರೂಪ ಕೆಸರಿನೊಳಗಿನ ಕಪ್ಪೆಗಳೂ; ವಿಷಯೋಪಭೋಗರೂಪ ನೀರಿನಲ್ಲಿಯ ಮೀನುಗಳೂ, ಆಗಿರುವದರಿಂದ ವಿಷಯಸೇವನೆಯನ್ನು ಮಾಡಬೇಡವೆಂದರೆ ಹೇಗೆ ಬಿಡುವರು? ॥ ೨೨ ॥ ಆದರೆ ವಿಷಯ ಸುಖದ ದೆಸೆಯಿಂದ ಜೀವ ಮಾತ್ರರೂ ವಿರಕ್ತರಾದರೆ ದುಃಖದಾಯಕವಾದ ಯೋನಿಗಳೆಲ್ಲವೂ ವ್ಯರ್ಥವಾಗಿ ಹೋಗುವದಿಲ್ಲವೇ? ॥ ೨೩ ॥ ಇಲ್ಲವೇ ಗರ್ಭವಾಸದಲ್ಲಿ ಆಗತಕ್ಕ ದುಃಖ ಅಥವಾ ಜನನ-ಮರಣದಲ್ಲಿಯ ಕಷ್ಟ ಇವುಗಳು ವಿಶ್ರಾಂತಿಯಿಲ್ಲದೇ ಭೋಗಿಸಬೇಕಾದ ಮಾರ್ಗವನ್ನು ಯಾರು ಭೋಗಿಸುವರು? ॥ ೨೪ ॥ ಆದರೆ ವಿಷಯಾಸಕ್ತ ಜನರು ವಿಷಯದ ಉಪಭೋಗ ತೆಗೆದುಕೊಳ್ಳುವದನ್ನು ಬಿಟ್ಟುದ್ದಾದರೆ ಮಹಾದೋಷಗಳು ಎಲ್ಲಿ ವಾಸ ಮಾಡಬೇಕು? ಮತ್ತು ಸಂಸಾರವೆಂಬ ಶಬ್ದವು ಜಗತ್ತಿನಲ್ಲಿ ಅಸತ್ಯವಾಗುವದಿಲ್ಲವೇ? ॥ ೨೫ ॥ ಆದುದರಿಂದ ಅವರು ವಿಷಯದಿಂದ ಆಗತಕ್ಕ ದುಃಖವೇ ಸುಖವೆಂದು ತಿಳಿಯುವದರಿಂದ ಇವರು ಅಸತ್ಯವಾದ ಸರ್ವ ಅಜ್ಞಾನ ವಿಷಯಗಳನ್ನು ನಿಜವಿರುವನೆಂದು ಜನರಿಗೆ ಸಿದ್ಧಮಾಡಿ ತೋರಿಸಿದರು. ॥ ೨೬ ॥ ಈ ಕಾರಣದ ದೆಸೆಯಿಂದ ಅರ್ಜುನಾ! ವಿಚಾರಮಾಡಿ ನೋಡುತ್ತಿರಲಿಕ್ಕಾಗಿ ಈ ವಿಷಯಗಳು ಬಹಳೇ ಅನಿಷ್ಟವಾದವುಗಳು. ಆದುದರಿಂದ ನೀನು ಅಕಸ್ಮಾತ್ ಮರೆತು ಸಹ ಈ ಹಾದಿಗೆ ಹೋಗಬೇಡ ಕಂಡೆಯಾ? ॥ ೨೭ ॥ ಕಾರಣ ಯಾರು ವಿರಕ್ತ ಪುರುಷರಿರುವರೋ, ಅವರು ಈ ವಿಷಯಸುಖವನ್ನೇ ವಿಷವೆಂದು ತಿಳಿದು ಅದನ್ನು ತ್ಯಾಗಮಾಡುತ್ತಾರೆ. ಮತ್ತು ಅವರು ನಿರಿಚ್ಛೆಯಿರುವದರಿಂದ ವಿಷಯುಗಳಿಂದಾದ ಸುಖಸ್ವರೂಪವಾದ ದುಃಖವು ಅವರಿಗೆ ಸೇರುವದಿಲ್ಲ. ॥ ೨೮ ॥

ಶಕ್ನೋತೀಹೈವ ಯಃ ಸೋಢುಂ ಪ್ರಾಕ್ಶರೀರವಿಮೋಕ್ಷಣಾತ್ ।
ಕಾಮ ಕ್ರೋಧೋದ್ಭವಂ ವೇಗಂ ಸ ಯುಕ್ತಃ ಸ ಸುಖೀ ನರಃ ॥ ೨೩ ॥

[ಶಕ್ನೋತೀ ಹೈವೇತೀ] ಜ್ಞಾನಿಯಾಂಚ್ಯಾ ಹನಶಾಯೀ । ಯಾಚೀ ಮಾತೆಹೀ ಕೀರ ನಾಹೀ । ದೇಹೀ ದೇಹಭಾವ ಜೆಹೀ । ಸ್ವವಶ ಕೇಲೇ ॥ ೨೯ ॥ ಜಯಾತೇ ಬಾಹ್ಯಾಚೀ ಭಾಖ ನೇಣಿ ಜೇಚಿ ನಃಶೇಖ । ಅಂತರೀ ಸುಖ । ಏಕ ಆಧಿ ॥ ೩೦ ॥ ಪರೀ ತೇ ವೇಗಳೇಪಣೇ ಭೋಗಿಜೇ । ಜೈಸೇ ಪಕ್ಷಿಯೇ ಫಳ ಚುಂಬಿಜೇ । ತೈಸೇ ನವ್ಹೇ ತೇಥ ವಿಸರಿಜೇ । ಭೋಗಿತೇ ಪಣಹೀ ॥ ೩೧ ॥ ಭೋಗೀಗೀ ಅವಸ್ಥಾ ಏಕೀ ಉರೀ । ತೇ ಅಹಂಕಾರಾಜಾ ಅಂಚಳ ಲೋಟೀ । ಮಗ ಸುಖೇಸೀ ಘೇ ಆಂತೀ । ಗಾಢೇ ಪಣೇ ॥ ೩೨ ॥ ತಿಯೇ ಆಲಿಂಗನ ಮೇಳೀ । ಹೋಯ ಆಪೇ ಆವ ಕವಳೀ । ತೇಥ ಜಳ ಜೈಸೇ ಜಳೀ । ವೇಗಳೇ ನ ದಿಸೇ ॥ ೩೩ ॥ ಕಾ ಆಕಾಶೀ ವಾಯೋ ಹರಪೇ । ತೇಥ ದೋನ್ಹೀ ಹೇ ಭಾಷ ಲೋಪೇ । **ತೈಸೇ ಸುಖಚಿ** ಉರೇ ಸ್ವರೂಪೇ । ಸುರತೀತಿಯೇ ॥ ೩೪ ॥ ಐಸೀ ದೈನ್ನತಾಚೀ ಭಾಷಾ ಜಾಯೇ । ಮಗ ಮ್ಯಹೋ ಜರೀ ಏಕಚೀ ಹೋಯೇ । ತರೀ ತೇಥ ಸಾಕ್ಷೀ ಕವಣ ಆಹೇ । ಜ್ಞಾನತೇ ಜೀ ॥ ೩೫ ॥

ಅರ್ಥ:— ಜ್ಞಾನಿಗಳ ಸ್ಥಳದಲ್ಲಿಯಾದರೂ ನಿಶ್ಚಯದಿಂದ ಈ ವಿಷಯದ ವಾರ್ತೆಯು ಸಹ ಹೊರಡುವದಿಲ್ಲ. ಕಾರಣವೇನೆಂದರೆ ಅವರು ದೇಹಧಾರಿಯಿದ್ದಾಗ್ಯೂ ದೇಹಧರ್ಮವನ್ನು ತಮ್ಮ ಸ್ವಾಧೀನದಲ್ಲಿಟ್ಟುಕೊಂಡಿರುತ್ತಾರೆ. ॥೨೯॥ ಯಾವನಿಗೆ ಆಂತರ್ಯಾಮಿ ಆತ್ಮಸುಖದ ಲಾಭವಾಗಿರುತ್ತದೋ, ಅವನಿಗೆ ವಿಷಯದ ಮಾತು ಸಹಸ್ಮರಣೆಯಲ್ಲಿ ಬರುವ

ದಿಲ್ಲ. ॥ ೧೩೦ ॥ ಆದರೆ ಆ ಆತ್ಮಸುಖದ ಉಪಭೋಗವನ್ನು ತೆಗೆದುಕೊಳ್ಳುವ ರೀತಿಯು ಬೇರೆಯಾಗಿರುತ್ತದೆ. ಅದು ಹೇಗೆಂದರೆ–ಪಕ್ಷಿಯು ಹಣ್ಣಿನ ಚುಂಬನ ಮಾಡುತ್ತಿರುವಾಗ ಆ ಸ್ಥಳದಲ್ಲಿ ಭೋಕ್ತಾ, ಭೋಗ್ಯ ವಸ್ತು ಮತ್ತು ಭೋಗ ಈ ಮೂರು ಮಿಲನವಾಗಿರುತ್ತವೆ. ಆದರೆ ಅಲ್ಲಿ (ಆತ್ಮಸುಖೋಪಭೋಗ ಮಾಡುವಾಗ ಮಾತ್ರ ಈ ಮೂರೂ ಇರುವದಿಲ್ಲ. ಆಗ ಜ್ಞಾನಿಗಳು (ಆತ್ಮಸುಖರತನು) ತಾವು ಭೋಕ್ತೃಗಳೆಂಬ ಅರಿವನ್ನೂ ಮರೆತಿರುತ್ತಾರೆ ॥ ೩೧ ॥ ಆತ್ಮಸುಖದ ಭೋಗವನ್ನು ತೆಗೆದುಕೊಳ್ಳುವದರ ದೆಸೆಯಿಂದ ಯಾವ ಒಂದು ವೃತ್ತಿಯುದ್ಭವಿಸುತ್ತದೋ, ಅದು ಅಹಂಕಾರದ ನಾಶಮಾಡುತ್ತದೆ. ಆ ಮೇಲೆ ಧೃಢವಾಗಿ ಸುಖದ ಆಲಿಂಗನವನ್ನು ಮಾಡುತ್ತದೆ. ಅಲ್ಲದೇ ತಾನೂ ಸುಖರೂಪವನ್ನು ಹೊಂದುತ್ತದೆ. ॥ ೩೨ ॥ ಮತ್ತು ಆ ಆಲಿಂಗನದ ಭರದಲ್ಲಿ ತನ್ನಿಂದತಾನೇ ಐಕ್ಯವಾಗಿ ಹೋಗುತ್ತದೆ. ಯಾವ ಪ್ರಕಾರ ನೀರು ನೀರಿನಲ್ಲಿ ಮಿಶ್ರವಾದಕೂಡಲೇ ಅದು ಬೇರೆಯಾಗಿ ಕಂಡು ಬರುವದಿಲ್ಲವೋ, ॥ ೩೩ ॥ ಇಲ್ಲವೇ ಯಾವ ಪ್ರಕಾರ ಆಕಾಶದಲ್ಲಿಯು ಗಾಳಿಯು ಇಲ್ಲದಂತಾದ ಮೇಲೆ ಆಕಾಶ ಮತ್ತು ವಾಯು ಇವುಗಳಲ್ಲಿಯು ಭೇದವೇ ಇಲ್ಲದು ತಾಗುತ್ತದೋ ? ಅದೇ ಅದೇಪ್ರಕಾರ ವೃತ್ತಿ ಮತ್ತು ಆತ್ಮಾ ಇವುಗಳು ಐಕ್ಯವಾಗುವದರಿಂದ ಉಳಿಯುವದು ಒಂದೇ ಒಂದಾದ ಸುಖವು ॥ ೩೪ ॥ ಇದೇ ಪ್ರಕಾರ ಯಾವಾಗ ದ್ವೈತಭಾವನೆಯು ಇಲ್ಲದಂತಾಗುತ್ತದೋ ಆವಾಗ ಐಕ್ಯತ್ವವು ಪ್ರಾಪ್ತವಾದದ್ದನ್ನು ತಿಳಿಯಲಿಕ್ಕೆ ಸಾಕ್ಷಿಯಾದರೂ ಎಲ್ಲಿಂದ ಬರಬೇಕು ? ॥ ೩೫ ॥

ಯೋಽಂತಃ ಸುಖೋಽಂತರಾರಾಮಸ್ತಥಾಂತರ್ಜ್ಯೋತಿರೇವ ಯಃ ।
ಸ ಯೋಗೀ ಬ್ರಹ್ಮನಿರ್ವಾಣಂ ಬ್ರಹ್ಮ ಭೂತೋಽಧಿ ಗಚ್ಛತಿ ॥ ೨೪ ॥

ಲಭಂತೇ ಬ್ರಹ್ಮನಿರ್ವಾಣಮೃಷಯಃ ಕ್ಷೀಣಕಲ್ಮಷಾಃ ।
ಛಿನ್ನದ್ವೈಧಾಯತಾತ್ಮಾನಃ ಸರ್ವಭೂತಹಿತೇರತಃ ॥ ೨೫ ॥

[ಯೋಽಂತಃಸುಖೋಽಂತ ರಾರಾಮು ಇತಿ] ಮ್ಹಣೋನಿ ಅಸೋಹೇ ಆಘವೇ । ಏಥ ನ ಬೋಲಣೇ ಕಾಯ ಬೋಲಾವೇ । ತೇಂಖುಣಾಚಿ ಪಾಮೇಲ ಸ್ವಭಾವೇ । ಆತ್ಮಾರಾಮ ॥ ೩೬ ॥ ಜೇ ಐಸೇನಿ ಸುಖೇ ಮಾತಲೇ । ಆಪಣಪಾಂಚಿ ಆಪಣ ರಾಹಿಲೇ । ತೇ ಮೀ ಜಾಣೇ ನಿಖಿಳ ವೋತಲೇ । ಸಾಮರಸ್ಯಾಚೇ ॥ ೩೭ ॥ ತೇ ಆನಂದಾಚೇ ಅನುಕಾರ । ಸುಖಾಚೇ ಅಂಕುರ । ಕೀ ಮಹಾಬೋಧೇ ವಿಹಾರ । ಕೇಲೇ ಜೈಸೇ ॥ ೩೮ ॥ ತೇ ವಿವೇಕಾಚೇ ಗಾವಂ । ಕೀ ಪರಬ್ರಹ್ಮೀಚೇ ಸ್ವಭಾವ । ನಾ ತರೀ ಅಳಂಕಾರಲೇ ಅವಯವ । ಬ್ರಹ್ಮವಿದ್ಯೇಚೆ ॥ ೩೯ ॥ ತೇ ಸತ್ವಾಚೇ ಸಾತ್ವಿಕ । ಕೀ ಚೈತನ್ಯಾಚೇ ಆಂಗಿಕ । ಹೇ ಬಹು ಅಸೋ ಐಕೈಕ । ವಾಸಿಲೀ ಕಾಯೀ ॥ ೧೪೦ ॥ ತೂ ಸಂತಸ್ತವನೀ ರತಸೀ । ತರೀ ಕಥೇಚೀ ಸೇನ ಕರಿಸೀ । ಕೀ ನಿವಾಳೀ ಬೋಲ ದೇಖಸೀ ಸನ್ನಾಗರ ॥ ೪೧ ॥ ಪರೀತೋ ರಸಾತಿಶಯೋ ಮುಕುಳೀ । ಮಗ ಗ್ರಂಥಾರ್ಥದೀಪ ಉಜಳೀ । ಕರೀ ಸಾಧು ಹೃದಯು ರಾವುಳೀ । ಮುಂಗಳವುಖಾ ॥ ೪೨ ॥ ಐಸಾ ಗುರೂಚಾ ಉವಾಯಿಲಾ । ನಿವೃತ್ತಿ ದಾಸಾಸೀ ಪಾತಲಾ । ಮಗ ತೋ ಮ್ಹಣೇ ಕೃಷ್ಣ ಬೋಲಿಲಾ । ತೇಚಿ ಆಇಕಾ ॥ ೪೩ ॥ ಅರ್ಜುನಾ ಅನಂತ ಸುಖಾಚ್ಯಾ ಡೋಹೀ । ಏಕ ಸರಾತಳಚಿ ಫೇತಲಾ ಜೆಹೀ । ಮಗ ಸ್ಫುರಾವೂನಿ ತೇಹೀ । ತೇಚಿ ಜಾಹಾಲೇ ॥ ೪೪ ॥ ಅಥವಾ ಆತ್ಮಪ್ರಕಾಶೆ ಚೋಪೆ । ಜೋ ಆಪಣ ಪೇಂಚಿ ವಿಶ್ವ ದೇಪೆ । ತೋ ದೇಹೇಂಚೀ ಪರಬ್ರಹ್ಮ ಸುಪೇ । ಮಾನೂ ಯೇ ಈಲ ॥ ೪೫ ॥ ಜೇ ಸಾಚೋ ಕಾರೇ ಪರಮ । ನಾತೇ ಅಕ್ಷರ ನಿಃಸೀಮ । ಚಿಯೇ ಗಾಂವಿಚೇ ನಿಷ್ಕಾಮು । ಅಧಿಕಾರಿಯೇ ॥೪೬॥ ಜೇ ಮಹರ್ಷೀ ವಾಢಿಲೇ । ವಿರಕ್ತಾ ಭಃಗಾಫುಟಲೇ । ಜೇನಿಃಸಂಶ ಯಾ ಓಕಲೇ । ನಿರಂತರು॥ ೪೭॥

ಅರ್ಥ—ಅನುಭವದ ಹೊರತು ಆಡಲು ಬರಲಾರದ ಮಾತನ್ನೀಗ ಆಡಿದರೆ ಉಪಯೋಗವೇನು ? ಯಾವನು ಸ್ವತಃ ಆತ್ಮಸ್ವರೂಪವನ್ನು ಹೊಂದಿರುವನೋ ಅವನಿಗೇ ಅದರ ಗುರುತು ಸಹಜವಾಗಿ ಹತ್ತುವದು. ॥ ೩೬ ॥ ಇಂಥ ಸುಖದಿಂದ ಯಾರು ಪರಿಪೂರ್ಣರಾಗಿರುವರೋ, ಮತ್ತು ಯಾರು ಸ್ವ-ಸ್ವರೂಪದಲ್ಲಿ ಮಗ್ನರಾಗಿರುವರೋ, ಅವರು ಮದ್ರೂಪವುಳ್ಳವರಾಗಿ ಬ್ರಹ್ಮಾನಂದದ ನಿರ್ಮಲವಾದ ಮೂರ್ತಿಯೇ ಆಗಿರುವರೆಂದು ನಾನು ತಿಳಿಯುತ್ತೇನೆ. ॥ ೩೭ ॥ ಅವನು ಆನಂದದ ಸ್ವರೂಪದ ಅಂಕುರ ಅಥವಾ ಆತ್ಮಬೋಧದ ಕ್ರೀಡಾಂಗಣವೇ ಆಗಿರುತ್ತಾನೆ. ॥ ೩೮ ॥ ಅವನು ವಿಚಾರ (ವಿವೇಕ)ದ ಗ್ರಾಮವು ! ಪರಬ್ರಹ್ಮದ ಸ್ವಭಾವವು ! ಇಷ್ಟೇ ಅಲ್ಲ; ಆದರೆ ಅವನ ಅವಯವಗಳು ಬ್ರಹ್ಮವಿದ್ಯಾಲಂಕಾರಗಳಿಂದ ಸುಶೋಭಿತವಾಗಿರುತ್ತವೆ. ॥ ೩೯ ॥ ಅದು ಸತ್ವದ ಸಾತ್ವಿಕ ಮತ್ತು ಚೈತನ್ಯದ ರೂಪವಾಗಿರುವದು. ಹೀಗೆ ಮಹಾರಾಜರು ಅದರ ವರ್ಣನೆ ಮಾಡುವ ಭರದಲ್ಲಿರುವಾಗ್ಗೆ ಶ್ರೀಗುರು ನಿವೃತ್ತಿದಾಸರು ಅನ್ನುತ್ತಾರೆ.—ಇದಂತೂ ಇರಲಿ, ಆ ಪುರುಷನ ವರ್ಣನೆಯನ್ನೆಷ್ಟು ಮಾಡುವೆ ! ॥ ೧೪೦ ॥ ನೀನು ಸಾಧು ಜನರ ಸ್ತೋತ್ರದಲ್ಲಿ ಮಗ್ನನಾದೆಯೆಂದರೆ ನಿನಗೆ ಕಥೆಯ ಸ್ಮರಣೆಯೇ ಉಳಿಯುವದಿಲ್ಲ. ಅವನ್ನು ಬಿಟ್ಟು ಇನ್ನೊಂದರ ವರ್ಣನೆಯನ್ನು ಚನ್ನಾಗಿ ಮಾಡಲುಪಕ್ರಮಿಸುವಿ. ॥ ೪೧ ॥ ಆದುದರಿಂದ ಆ ಸಾಧು ಜನರ ಸ್ತುತಿಯನ್ನು ಈಗ ಪೂರ್ಣ ಮಾಡು. ನುತ್ತು ಗೀತಾರ್ಥರೂಪವಾದ ದೀಪವನ್ನು ಬೆಳಗಿ ಸಾಧು ಜನರ ಹೃದಯ-ಮಂದಿರದಲ್ಲಿ ಜ್ಞಾನೋದಯವನ್ನುಂಟು ಮಾಡು. ॥ ೪೨ ॥ ಈ ಪ್ರಕಾರ ನಿವೃತ್ತಿ ದಾಸರಿಗೆ ಗುರುಗಳು ಎಚ್ಚರ ಹೇಳಿದ್ದರಿಂದ ಅವರು ಆಮೇಲೆ ಅನ್ನುತ್ತಾರೆ— ಶ್ರೀಕೃಷ್ಣ ಪರಮಾತ್ಮನು ಹೇಳಿದುದನ್ನೇ ನಾನಿನ್ನು ಹೇಳುವೆನು. ಲಕ್ಷವಸ್ತುವಿಟ್ಟು ಕೇಳಿರಿ. ॥ ೪೩ ॥ ಅರ್ಜುನಾ ! ಆತ್ಮಸುಖದ ಮಡುವಿನಲ್ಲಿ ಯಾವನು ಒಂದೇ ಕಾಲಕ್ಕೆ ತಳಕ್ಕೆ ಮುಟ್ಟುವಂತೆ ಮುಳುಗಿದ್ದಾನೆಯೋ, ಅವನು ಅಲ್ಲಿಯೇ ಸ್ಥಿರವಾಗಿ ಆತ್ಮಸ್ವರೂಪವೇ ಆಗಿರುವನು. ॥ ೪೪ ॥ ಇಲ್ಲವೇ ಆತ್ಮನ ನಿರ್ಮಲವಾದ ಪ್ರಕಾಶದಿಂದ ಯಾವನು ತನ್ನಲ್ಲಿಯೇ ವಿಶ್ವವನ್ನು ನೋಡುತ್ತಾನೋ, ಅವನು ದೇಹದಲ್ಲಿದ್ದಾಗ್ಯೂ ಪರಬ್ರಹ್ಮಸ್ವರೂಪನಾಗಿರುವನೆಂದು ಸಹಜವೇ ತಿಳಿಯಲಿಕ್ಕೆ ಬರುವದು. ॥೪೫॥ ಅವನು ನಿಜವಾಗಿ ಅತ್ಯುತ್ತಮ, ಅವಿನಾಶ, ಅಮರ್ಯಾದವಾದಂಥ ಬ್ರಹ್ಮಸುಖದ ಅಧಿಕಾರಿಯೂ, ನಿರಿಚ್ಛನೂ ಆಗಿರುತ್ತಾನೆ. ॥ ೪೬ ॥ ಆ ಸುಖವು ಮಹರ್ಷಿಗಳ ದೆಸೆಯಿಂದಲೆಂದೇ ಕಾಯ್ದಿಟ್ಟಿರುತ್ತದೆ. ಅದು ವೈರಾಗ್ಯ ಶೀಲರ ಪಾಲಿಗೆ ಬಂದಿರುತ್ತದೆ. ಮತ್ತು ನಿಃಸಂದೇಹವುಳ್ಳ ಜೀವರುಗಳ ದೆಸೆಯಿಂದಲೇ ಪರಿಪಕ್ವವಾಗಿರುತ್ತದೆ. ॥ ೪೭ ॥

ಕಾಮಕ್ರೋಧವಿಯುಕ್ತಾನಾಂ ಯತೀನಾಂ ಯತಚೇತಸಾಮ್ ।
ಅಭಿತೋ ಬ್ರಹ್ಮನಿರ್ವಾಣಂ ವರ್ತತೇ ವಿದಿತಾತ್ಮನಾಮ್ ॥ ೨೬ ॥

[ಕಾಮ ಕ್ರೋಧೇತಿ] ಜಿಹೀ ವಿಷಯಾ ಪಾಸೋನಿ ಹಿರತಲೇ । ಚಿತ್ತ ಆಪುಲೇ ಆಪಣ ಚಿಂತಿಲೇ । ತೇ ನಿಶ್ಚಿತ ಜೇಥ ಸುತಲೇ । ಚೇತೀಚಿನಾ ॥ ೪೮ ॥ ತೇ ಪರಬ್ರಹ್ಮ ನಿರ್ವಾಣ । ಜೇ ಆತ್ಮ ವಿದಾಂಚೇ ಕಾರಣ । ತೇಂಚಿ ತೇ ಪುರುಷ ಜಾಣ । ಪಂಡು ಕುಮರಾ ॥ ೪೯ ॥ ತೇ ಐಸೇ ಕೈಸೇನಿ ಜಾಪಾಲೆ । ಜೇ ದೇಹೀಚಿ ಬ್ರಹ್ಮತ್ವಾ ಆಲೇ । ಹೇ ಪುಸಸೀ ತರೀ ಭಲೇ । ಸಂಕ್ಷೆಪೇ ಸಾಂಗೋ ॥೧೫೦॥

ಅರ್ಥ:— ಯಾವನು ತನ್ನ ಮನಸ್ಸನ್ನು ವಿಷಯದಿಂದ ಹಿಂತಿರುಗಿಸಿ ಜಯಶಾಲಿಯಾಗಿರುವನೋ ಅವನು ಎಲ್ಲಿ ಮಲಗಿರುವನೋ, ಅಲ್ಲಿಂದ ನಿಶ್ಚಯವಾಗಿ ಎಚ್ಚರವಾಗುವದಿಲ್ಲ. ಅವನು ಬ್ರಹ್ಮಸ್ವರೂಪದಲ್ಲಿ ಮಗ್ನನಾಗಿರುವದರಿಂದ ದೇಹಭಾನವು ಅವನಿಗುಂಟಾಗುವದಿಲ್ಲ. ॥ ೪೮ ॥ ಎಲೋ ಪಂಡುಪುತ್ರನೇ, ಆ ಪುರುಷನು ಆತ್ಮಜ್ಞಾನಿಯಾಗಿರುವದರಿಂದ ಅವನು ಕೈವಲ್ಯ ಪರಬ್ರಹ್ಮಸ್ವರೂಪನೇ ಆಗಿರುವನು. ॥ ೪೯ ॥ ಅವನು ಹೀಗೆ ಹೇಗಾದನು ? ದೇಹದಲ್ಲಿದ್ದಾಗ್ಯಾದರೂ ಬ್ರಹ್ಮತ್ವವನ್ನು ಹೇಗೆ ಹೊಂದಿದನೆಂಬುದನ್ನು ನೀನು ಕೇಳಬಹುದು. ಆದರೆ ನಿನಗೆ ಅದನ್ನು ಸಂಕ್ಷೇಪವಾಗಿಯೇ ಹೇಳುತ್ತೇನೆ ಕೇಳು. ॥ ೧೫೦ ॥

ಸ್ಪರ್ಶಾನ್ಕೃತ್ವಾ ಬಹಿರ್ಬಾಹ್ಯಾಂಶ್ಚಕ್ಷುಶ್ಚೈವಾಂತರೇ ಭ್ರುವೋಃ ।
ಪ್ರಾಣಾಪಾನೌ ಸಮೌ ಕೃತ್ವಾ ನಾಸಾಭ್ಯಂತರಚಾರಿಣೌ ॥ ೨೭ ॥

[ಸ್ಪರ್ಶಾನ್ಕೃತ್ವೇತಿ] ತರೀ ವೈರಾಗ್ಯಾಚೇನಿ ಆಧಾರೇ । ಜೀಹೀ ವಿಷಯ ದವಡೂನಿ ಬಾಹಿರೇ । ಶರೀರೀ ಏಕಂದರೇ । ಕೇಲೇ ಮನ ॥ ೫೧ ॥ ಸಹಜೇ ತಿಹೀ ಸಂಧೀ ಭೇಟೀ । ಜೇಥ ಭ್ರೂಪಲ್ಲವಾಪಡೇ ಗಾಂಠೀ । ತೇಥ ಪಾಠಿ ಮೋರೀ ದಿಠೀ । ಪಾರುಖೋನಿಯಾ ॥೫೨॥ ಸಾಂಡೂನಿ ದಕ್ಷಿಣ ವಾಮ । ಪ್ರಾಣಾಪಾನ ಸಮ । ಚಿತ್ತೇಸೀ ವ್ಯೋಮಗಾಮಿಯೇ ಕರಿತೀ ॥೫೩॥

ಅರ್ಥ— ಆದರೆ ವೈರಾಗ್ಯದ ಆಧಾರದಿಂದ ವಿಷಯಗಳನ್ನು ಹೊರಗೆ ದೂಡಿ ಯಾವ ಶರೀರದಲ್ಲಿ ತಮ್ಮ ಮನಸ್ಸನ್ನು ಏಕನಿಷ್ಠವಾಗಿಡುತ್ತಾರೆ. ॥ ೫೧ ॥ ಇಡ, ಪಿಂಗಲಗಳಲ್ಲಿಯ ಪ್ರಾಣವಾಯುವನ್ನು ಸುಷುಮ್ನೆಯಲ್ಲಿ ಒಯ್ದು ಲಲಾಟ ಚಕ್ರದಲ್ಲಿ ಸ್ವರೂಪದ ಕಡೆಗೆ ದೃಷ್ಟಿಯನ್ನು ಹಿಂದಕ್ಕೆ ತಿರುಗಿಸಿ ಸ್ಥಿರಪಡಿಸುತ್ತಾರೆ. ॥ ೫೨ ॥ ಎಡಕಿನ ಮತ್ತು ಬಲಕಿನ ಮೂಗಿನ ಹೊರಳೆಗಳನ್ನುಳಿದು ಪ್ರಾಣ ಮತ್ತು ಅಪಾನ ಈ ವಾಯುವನ್ನು ಒಂದೇ ಮಾಡಿ ಚಿತ್ತವನ್ನು ಚಿದಾಕಾಶದಲ್ಲಿ ಒಯ್ಯುತ್ತಾರೆ. ॥ ೫೩ ॥

ಯತೇಂದ್ರಿಯಮನೋಬುದ್ಧಿರ್ಮುನಿರ್ಮೋಕ್ಷಪರಾಯಣಃ ।
ವಿಗತೇಚ್ಛಾಭಯಕ್ರೋಧೋ ಯಃ ಸದಾ ಮುಕ್ತ ಏವ ಸಃ ॥ ೨೮ ॥

[ಯತೇಂದ್ರಿಯೇತಿ] ತೇಥ ಜೈಸೇ ರಥ್ಯೋದಕೇ ಸಕಳೇ । ಘೇವೂನಿ ಗಂಗಾ ಸಮುದ್ರೀ ಮಿಳೇ । ಮಗ ಏಕೇಕ ವೇಗಳೇ । ನಿವಡೂ ನಯೇ ॥ ೫೪ ॥ ತೈಸೇ ವಾಸನಾಂತ ರಾಚೇ ವಿವಂಚನಾ । ಮಗ ಆಪೈಸೇ ಪಾರುಖೇ ಅರ್ಜುನಾ । ಜೇ ವೇಳೇ ಗಗನೀ ಲಯೋ ಮನಾ । ಪವನೇ ಕೀಜೇ ॥ ೫೫ ॥ ಜೇಥ ಹೇ ಸಂಸಾರ ಚಿತ್ರ ಉನುಟೇ । ತೋ ಮನೋರೂಪ ಪಟಫಾಟೇ । ತೈಸೇ ಸರೋವರ ಆಟೇ । ಮಗ ಪ್ರತಿಭಾ ನಾಹೀ ॥ ೫೬ ॥ ತೈಸೇ ಮನ ಏಥ ಮುದಲ ಜಾಯೇ । ಮಗ ಅಹಂ ಭಾವಾದಿಕ ಕೇ ಆಹೇ । ಮ್ಹಣೋನಿ ಶರೀರೇಂಚಿ ಬ್ರಹ್ಮ ಹೋಯೇ । ಅನುಭವೀತೋ ॥ ೫೭ ॥

ಅರ್ಥ— ಗಂಗಾ ಪ್ರವಾಹವು ಮಾರ್ಗದಲ್ಲಿ ಸಿಕ್ಕ ಹೊಲಸು, ಮತ್ತು ಸ್ವಚ್ಛ ನೀರಿನ ಎಷ್ಟೋ ಪ್ರವಾಹಗಳನ್ನು ಕೂಡಿಕೊಂಡು ಸಮುದ್ರಕ್ಕೆ ಕೂಡುವದು. ಆಮೇಲೆ ಗಂಗಾ ಪ್ರವಾಹವಾಗಲೀ, ಹೊಲಸು ನೀರಾಗಲಿ ಬೇರೆಯಾಗಿ ಕಾಣುವದಿಲ್ಲ. ॥ ೫೪ ॥ ಅದೇ ಪ್ರಕಾರ ಅರ್ಜುನನೇ ! ಯಾವಾಗ ಚಿದಾಕಾಶದಲ್ಲಿ ಮನಸ್ಸು ಮತ್ತು ಪ್ರಾಣಗಳು ವಿತೋಧವಾಗಿ ಲಯ ಹೊಂದುತ್ತದೆ ಆವಾಗ ವಾಸನಾರೂಪವಾದ ವಿಚಾರವು ತನ್ನಿಂದ ತಾನೇ ಇಲ್ಲದಂತಾಗುತ್ತದೆ. ॥ ೫೫ ॥ ಯಾವ ಮನೋರೂಪವಾದ ಪಟದ ಮೇಲೆ ಈ ಸಂಸಾರರೂಪ ಚಿತ್ರವು ಮೂಡಿರುತ್ತದೋ, ಆ ಚಿತ್ರವು ತನ್ನಿಂದ ತಾನೇ—ಇಲ್ಲದಂತಾಗುತ್ತದೆ. ಸರೋವರದ ನೀರು ಆಟ್ಟಿಸಿದಾಗ ಅದರಲ್ಲಿಯ ಪ್ರತಿಬಿಂಬವು ಯಾವ ಪ್ರಕಾರ ಮಾಯವಾಗುವದೋ, ॥ ೫೬ ॥ ಅದೇ ಪ್ರಕಾರ ಮುಖ್ಯವಾದ ಮನಸೇ ಇಲ್ಲದಂತಾದ ಮೇಲೆ ಅದನ್ನನಲಂಬಿಸಿದ ಅಹಂಕಾರ ಮುಂತಾದವುಗಳು ಎಲ್ಲಿಂದ ಉಳಿಯುವವು ? ಅಂತೇ ಬ್ರಹ್ಮಸ್ವರೂಪದ ಅನುಭವ ತೆಗೆದುಕೊಳ್ಳುವನರು ದೇಹಧಾರಿಗಳಿರುವಾಗಲೇ ಬ್ರಹ್ಮರೂಪರಾಗುತ್ತಾರೆ. ॥ ೫೭ ॥

ಭೋಕ್ತಾರಂ ಯಜ್ಞತಪಸಾಂ ಸರ್ವಲೋಕಮಹೇಶ್ವರಮ್ ।
ಸುಹೃದಂ ಸರ್ವಭೂತಾನಾಂ ಜ್ಞಾತ್ವಾ ಮಾಂ ಶಾಂತಿ ಮೃಚ್ಛತಿ ॥ ೨೯ ॥

ಇತಿ ಶ್ರೀ ಮದ್ಭಗವದ್ಗೀತಾ ಸೂಪನಿಷತ್ಸು ಬ್ರಹ್ಮವಿದ್ಯಾಯಾಂ ಯೋಗಶಾಸ್ತ್ರೇ ಶ್ರೀಕೃಷ್ಣಾರ್ಜುನ
ಸಂವಾದೇ ಸಚ್ಚಾಸಯೋಗೋ ನಾಮ ಪಂಚಮೋಽಧ್ಯಾಯಃ ॥ ೫ ॥

[ಭೋಕ್ತಾರಂ ಯಜ್ಞತಪಸಾಮಿತಿ] ಆಮ್ಹೀ ಮಾಗಾ ಹನ ಸಾಂಗಿತಲೇ । ಜೇ ದೇಹೀಂಚಿ ಬ್ರಹ್ಮತ್ವ ಪಾವಲೇ । ತೇ ಯೇಣೇ ಮಾರ್ಗೇ ಆಲೇ । ಮ್ಹಣವೂನಿಯಾ ॥ ೫೪ ॥ ಆಣಿ ಯಮು ನಿಯಮಾಂಚೇ ಡೊಂಗರ । ಅಭ್ಯಾಸಾಚೇ ಸಾಗರ । ಕ್ರಮೋನಿ ಹೇಪಾರ । ಪಾತಲೇ ತೇ ॥ ೫೫ ॥ ತಿಹೀ ಆಪಣಪೇ ಕರೂನಿ ನಿರ್ಲೇಪ । ಪ್ರಪಂಚಾಚೇ ಫೇತಲೇ ಮಾಪ । ಮಗ ಸಾಚ ಶಾಂತೀಚೇಂಚಿ ರೂಪ । ಹೋವುನಿ ಠೇಲೆ ॥ ೧೬೦ ॥ ಐಸಾ ಯೋಗ ಯುಕ್ತೀಚಾ ಉದ್ದೇಶ । ಜೇಥ ಬೋಲಿಲಾ ಹೃಷೀಕೇಶ । ತೇಥ ಅರ್ಜುನ ಸುದಂಶ । ಮ್ಹಣೋನಿ ಚಮತ್ಕಾರಿಲಾ ॥ ೬೧ ॥ ತೇ ದೇಖಿಲಿಯಾ ಕೃಷ್ಣೇ ಜಾಣಿತಲೇ । ಮಗ ಹಾಂಸೋನಿ ಪಾರ್ಥಾತೇ ಮ್ಹಣಿತಲೇ । ಕಾಯೀ ಪಾ ಚಿತ್ತ ಉವಾಇಲೇ । ಇಯೇ ಬೋಲೋ ತುಝಿ ॥ ೬೨ ॥ ತವ ಅರ್ಜುನ ಮ್ಹಣೇ ದೇವೋ । ಪರಚಿತ್ತ ಲಕ್ಷಣಾಚಾ ರಾವೋ । ಭಲಾ ಜಾಣಿತಲಾ ಜೀಧಾವೋ । ಮಾನಸ ಮಾರ್ಪಾ ॥ ೬೩ ॥ ಮ್ಯಾ ಜೇ ಕಾಂಹೀ ವಿವರೂನಿ ಪುಸಾವೇ । ತೇ ಆಧೀಂಚಿ ಜಾಣಿತಲೇ ದೇವೇ । ತರೀ ಬೋಲಿಲೀ ತೇಚಿ ಸಾಂಗಾವೇ । ವಿವಳ ಕರೂನಿ ॥ ೬೪ ॥ ಯೇರ್ಹವೀ ತರೀ ಅವಧಾರಾ । ಜೋದಾವಿಲಾ ತುಮ್ಹೀ ಅನುಸಾರಾ । ತೋಪನ್ಯಾಹೂನಿ ಪಾಯಳುತಾರಾ । ಸೋಹಪಾ ಜೈಸಾ ॥ ೬೫ ॥ ತೈಸಾ ಸಾಂಖ್ಯಾಹೂನಿ ಪ್ರಾಂಜಳಾ । ಆಮ್ಹಾ ಸಾರಿಖಿಯಾ ಅಬಳಾ । ಏಥ ಆಥಿ ಪರಿ ಕಾಂಹೀ ಕಾಳಾ । ತೋ ಸಾಹೋಯೇವಢ ॥ ೬೬ ॥ ಮ್ಹಣೋನಿ ಏಕವೇಳ ದೇವಾ । ತೋಚಿ ಪಡತಾಳಾ ಘೇಯಾವಾ । ವಿಸ್ತಾರೇಲ ತರೀ ಸಾಂಗಾವಾ । ಸಾದ್ಯಂತಚಿ ॥ ೬೭ ॥ ತವ ಶ್ರೀಕೃಷ್ಣ ಮ್ಹಣತೀ ಹೋ ಕಾ । ತುಜ ಹಾ ಮಾರ್ಗ ಗಮಲಾನಿಕಾ । ತರೀ ಕಾಯ ಜಾಹಾಲೇ ಆಇಕೀ ಬೋ ಕಾ । ಸುಖೇ ಬೋಲೋ ॥ ೬೮ ॥ ಅರ್ಜುನಾ ತೂಪಸಸೀ । ಪುಸೋನಿ ಅನುಷ್ಮಿಸೀ । ತರೀ ಆಮ್ಹಾಪೀಚಿ ವಾಣಿ ಕಾಯಸಿ । ಸಾಂಗಾವನಯಾಚೀ ॥ ೬೯ ॥ ಆಧೀಂಚ ಚಿತ್ತ ಮಾಯೆಚೇ । ಮೀ ಮಿಷ ಜಾಹಾಲೇ ಪಢಿಯಂತಯಾಚೇ । ಅತಾ ತೇ ಅದ್ಭುತಪಣ ಸ್ನೇಹಾಚೇ । ಕವಣ ಜಾಣೇ ॥ ೧೬೦ ॥ ತೇಮ್ಹಣೋ ಕಾರುಣ್ಯರಸಾಚೀವೃಷ್ಟೀ । ಕೀ ನವಯಾ ಸ್ನೇಹಾಚೀ ಸೃಷ್ಟೀ । ಹೇ ಅಸೋ ನೇಣಿಜೇ ದೃಷ್ಟೀ । ಹರೀಚೀ ವಾನೂ ॥ ೬೧ ॥ ಜೇ ಅಮೃತಾಚೀ ವೊತಲೀ । ಕೀ ಪ್ರೇಮಾಚೀ ಪೀವೂನ ಮಾತಲೀ । ಮ್ಹಣೂನಿ ಅರ್ಜುನ ಮೋಹೇ ಗುಂತಲೀ । ನಿಘೋ ನೆಣೇ ॥ ೬೨ ॥ ಹೇ ಬಹು ಜೇಜೇ ಜಲ್ಪಿಜೇಲ । ತೇಥೆ ಕಥೆಚಿ ಫಾಂಕ ಹೋಈಲ । ಪರೀ ತೇ ಸ್ನೇಹ ರೂಪಾ ನ ಯೇಲ । ಬೋಲನವರೀ ॥ ೬೩ ॥ ಮ್ಹಣೋನಿ ಏಸುರಾ ಕಾಯಯೇಣೇ । ತೋ ಈಶ್ವರ ಕವಳಾವಾ ಕವಣೇ । ಜೋ ಆಪುಲೇ ಮಾನನೇಣೇ ॥ ಆಪಣಚಿ ॥ ೬೪ ॥ ತರೀ ಮಾಗೀಲ ಧ್ವನೀ ಆಂತ । ಮಜ ಗಮಲಾ ಸಾವಿಯಾಚೀ ಮೋಹಿತ । ಜೇ ಬಳಾತ್ಕಾರೇ ಅಸೇ ಮ್ಹಣತ । ಪರಿಸ ಬಾಪಾ ॥ ೬೫ ॥ ಅರ್ಜುನಾ ಜೇಣೇ ಜೇಣೇ ಭೇದೇ । ತುಝಿ ಕಾ ಚಿತ್ತ ಬೋಧೇ । ತೈಸೇ ತೈಸೇ ವಿನೋದೇ । ನಿರೂಪಿಜೇಲ ॥ ೬೬ ॥ ತೋ ಕಾಇಸಯಾ ನಾವಯೋಗ । ತಯಾಚಾ ಕವಣ ಉಪೇಗ । ಅಥವಾ ಅಧಿಕಾರ ಪ್ರಸಂಗ । ಕವಣಾ ಏಥ ॥ ೬೭ ॥ ಐಸೇ ಜೇ ಜೇ ಕಾಹೀ । ಉಕ್ತ ಅಸೇ ಇಯೇ ಠಾಯೀ । ತೇ ಆಳುವೇಚಿ ಪಾಹೀ । ಸಾಂಗೇನ ಆತಾ ॥ ೬೮ ॥ ತೂಚಿತ್ತ ದೇವೂನಿ ಅವಧಾರೀ । ಐಸೇ ಮ್ಹಣೋನಿ ಶ್ರೀಹರೀ । ಬೋಲಿಜೇಲ ತೇ ಪುಢಾರೀ । ಕಥಾ ಆಹೇ ॥ ೬೯ ॥ ಶ್ರೀಕೃಷ್ಣ ಅರ್ಜುನಾಸೀ ಸಂಗ । ನ ಸಾಂಡೋನಿ ಸಾಂಗೇಲ ಯೋಗ । ತೋ ವ್ಯಕ್ತಕರೂ ಪ್ರಸಂಗ । ಮ್ಹಣೇ ನಿವೃತ್ತಿದಾಸ ॥ ೧೬೦ ॥

ಅರ್ಥ— ಈ ಯೋಗಮಾರ್ಗದಿಂದಲೇ ಕೆಲವು ಜನರು ಜೀವಂತರಿರುವಾಗಲೇ ಬ್ರಹ್ಮಸ್ವರೂಪರಿರುವರೆಂದು ನಾವು ಮೊದಲೇ ಹೇಳಿದ್ದೇನೆ. ॥ ೫೮ ॥ ಅಂತೆಯೇ ಅವರು ಯಮ-ನಿಯಮ-ಯೋಗ ಮಾರ್ಗದ ಪರ್ವತವನ್ನು ಮತ್ತು ಯೋಗಾಭ್ಯಾಸರೂಪ ಸಮುದ್ರವನ್ನೂ ದಾಟಿ ಪಾರಾಗಿರುವರು. (ಬ್ರಹ್ಮಸ್ವರೂಪವನ್ನು ಪ್ರಾಪ್ತಮಾಡಿಕೊಂಡಿರುವರು.) ॥ ೫೯ ॥ ಮತ್ತು ಅವರೇ ಸ್ವತಃ ತಾವು ಉಪಾಧಿರಹಿತರಾಗಿ ಪ್ರಪಂಚವನ್ನು ಜಯಿಸಿ ಆದರಿಂದ ಮುಕ್ತರಾಗಿರುವರು, ಆದ್ದರಿಂದ ಅವರು ನಿಜವಾಗಿ ಬ್ರಹ್ಮಸ್ವರೂಪರೇ ಆಗಿರುವರು. ॥ ೧೬೦ ॥ ಈ ಪ್ರಕಾರ ಯಾವಾಗ ಶ್ರೀ ಕೃಷ್ಣನು ಯೋಗ ಯುಕ್ತಿಯ ಉಪಾಯವನ್ನು ಪ್ರಕಟಮಾಡಿದನೋ, ಆವಾಗ ಅರ್ಜುನನು ಅದರ ಮರ್ಮವನ್ನು ಬಲ್ಲವನಾದ್ದರಿಂದ ಬಹಳೇ ಆಶ್ಚರ್ಯಹೊಂದಿದನು. ॥ ೬೧ ॥ ಇದನ್ನು ನೋಡಿ ಕೃಷ್ಣನು ಅವನ ಮನಸಿನೊಳಗಿನ ಅಭಿಪ್ರಾಯವನ್ನು ತಿಳಿದು ನಗೆನುಗದಿಂದ ಪಾರ್ಥನಿಗೆ ಅನ್ನುತ್ತಾನೆ.— ನನ್ನ ಸಂಭಾಷಣದಿಂದ ನಿನ್ನ ಮನಸು ಇಷ್ಟು ಪ್ರಸನ್ನವಾದುದೇಕ ? ಎನ್ನಲು ॥ ೬೨ ॥ ಅರ್ಜುನನು ಅನ್ನುತ್ತಾನೆ— ದೇವಾ ! ಎರಡನೆಯವರ ಅಂತಃಕರಣದಲ್ಲಿ ಉದ್ಭವಿಸಿದ ಮನೋಗತವನ್ನು ತಿಳಿಯುವವರಲ್ಲಿ ಶ್ರೇಷ್ಠ ಅರಸನಾಗಿರುವಿ. ಆದುದರಿಂದ ನನ್ನ ಮನಸಿನೊಳಗಿನ ಭಾವವನ್ನು ನೀನು ಚನ್ನಾಗಿ ಅರಿತುಕೊಂಡಿರುವಿ. ॥ ೬೩ ॥ ನಾನು ಯಾವದನ್ನು ವಿನರಿಸಿ ಕೇಳಬೇಕೆಂದು ನೂಡಿದ್ದೆನೋ ಅದರ ಲಕ್ಷಣವನ್ನು ನೀನು ಮೊದಲಿಗೇ ತಿಳಿದಿರುವೆ. ಅಂದಬಳಿಕ ಈಗ ನನಗೆ ಹೇಳುವ ವಿಷಯವನ್ನು ಹೆಚ್ಚಿಗೆ ಸ್ಪಷ್ಟವಾಗಿ ಹೇಳಬೇಕು. ॥ ೬೪ ॥ ಯೋಗಶಾಸ್ತ್ರದ ಯಾವ ಮಾರ್ಗವನ್ನು ನೀವು ನನಗೆ ಹೇಳಿದಿರಿ ಅದು ಹೇಗಿರುವ ದೆಂದರೆ, ಆಳವಾದ ನೀರಿನೊಳಗಿಂದ ಈಸಿ ಹೋಗುವದರಕಿಂತಲೂ ಕಾಲುನಡಿಗೆಯಿಂದ ಹೋಗುವದು ಹೇಗೆ ಸುಲಭವಾಗಿರುವದೋ, ಹಾಗೆ ಆದೆ. ॥ ೬೫ ॥ ಅದೇ ಪ್ರಕಾರ ಜ್ಞಾನಯೋಗದಕಿಂತಲೂ ಅಷ್ಟಾಂಗಯೋಗವು ನಮ್ಮಂತಹ ಸಿರ್ಬಲರಿಗೆ ಸುಗಮವಾಗಿರುವದು ಆದರೆ ಅದು ಕೆಲವು ಕಾಲಾಂತರದಿಂದ ತಡೆದು ಸಾಧ್ಯವಾಗುವಂತಹದಿದ್ದರೂ ನಡೆಯಬಹುದು. ॥ ೬೬ ॥ ಆದರೆ ದೇವಾ ! ಆ ಯೋಗವನ್ನು ಪರೀಕ್ಷಿಸಿ ನೋಡುವದರ ದೆಸೆಯಿಂದ ಇನ್ನೊಂದು ಸಲ ಹೇಳಬೇಕು. ಅದರಿಂದ ಹೆಚ್ಚಿಗೆ ವಿಸ್ತಾರವಾಗುವದೇನೋ ನಿಜ ! ಆದರೂ ಅದನ್ನು ಸಾದ್ಯಂತವಾಗಿ ಹೇಳಲೇ ಬೇಕು. ॥ ೬೭ ॥ ಆವಾಗ ಶ್ರೀಕೃಷ್ಣನು ಅನ್ನುತ್ತಾನೆ.— ಹೀಗೋ, ನಿನಗೆ ಈ ಯೋಗಮಾರ್ಗದ ವಿಷಯದಲ್ಲಿ ವಿಶೇಷವಾಗಿ ಪ್ರೀತಿಯುಂಟಾಗಿದ್ದರೆ, ನಾವೂ ಉತ್ಸಾಹದಿಂದ ಹೇಳುತ್ತೇನೆ. ಸಂತೋಷಚಿತ್ತನಾಗಿ ಆಲಿಸು. ॥ ೬೮ ॥ ಅರ್ಜುನನೇ ! ನೀನು ಕೇಳುತ್ತಿ, ಮತ್ತು ಕೇಳಿದಂತೆ ಆಚರಣೆಯನ್ನು ಮಾಡುವೆ. ಹೀಗಿರಲು ನಾವೇಕೆ ಹೇಳುವದನ್ನು ಕಡಿಮೆ ಮಾಡಬೇಕು ? ॥ ೬೯ ॥ ಈ ಶ್ರೀಕೃಷ್ಣಾರ್ಜುನ ಸಂವಾದದ ಮೇಲೆ ಜ್ಞಾನೇಶ್ವರರು ಟೀಕೆಯನ್ನು ಮಾಡುತ್ತಾರೆ. ಮೊದಲಿಗೇ ತಾಯಿಯ ಅಂತಃಕರಣವು ! ಆದರಲ್ಲಿ ಪ್ರೀತಿಯ ಮಗುವಿನ ನಿಮಿತ್ತವಿದ್ದಮೇಲೆ ಆ ಸ್ಥಳದಲ್ಲಿ ತೋರುವ ನಿಸ್ಸೀಮ ಪ್ರೇಮದ ಮಹಾತ್ಮೆಯು ಉಳಿದವರಿಗೆ ಹೇಗೆ ತಿಳಿಯುವದು ? ॥ ೧೭೦ ॥ ಆ ಸ್ನೇಹಕ್ಕೆ ಕರುಣಾರಸದ ಮೊಳೆಗರೆಯಿತು. ಇಲ್ಲವೇ ನಿಸ್ಸೀಮ ಪ್ರೇಮದ ಹೊಸ ಸೃಷ್ಟಿಯೇ ನಿರ್ಮಾಣವಾಗಿರುವದೆಂದರೂ ನಡೆದೀತು. ಇದಂತೂ ಇರಲಿ ! ಭಗವಂತನ ಕೃಪಾದೃಷ್ಟಿಯ ವರ್ಣನೆಯನ್ನು ಯಾರು ಮಾಡಬೇಕು ? ॥ ೭೧ ॥ ಆ ಪ್ರೇಮದ ದೃಷ್ಟಿಯು ಅಮೃತದ ಮುಶಿಯಲ್ಲಿ ಸುರಿವಿರುವದು. ಇಲ್ಲವೇ ಪ್ರೇಮರಸವನ್ನು ಕುಡಿದು ಉನ್ಮತ್ತವಾಗಿರುವದರಿಂದ ಅರ್ಜುನನ ಮೋಹದಲ್ಲಿ ಸಿಲುಕಿ ಬಿದ್ದು ಹೊರಗೆ ಬರದಂತೆ ಆಗಿರುವದು. ॥ ೭೨ ॥ ಈ ವಿಷಯವಾಗಿ ಯಾವ ಯಾವದು ಹೆಚ್ಚಿಗೆ ಮಾತಾಡಬೇಕೋ ಆ ಆ ಮಾತಿನಿಂದ ಕಥೆಯ ವಿಷಯಾಂತರವಾದೀತು. ಆದರೆ ಶ್ರೀಕೃಷ್ಣ ಮತ್ತು ಅರ್ಜುನ ಇವರಲ್ಲಿಯ ಸ್ನೇಹದ ವರ್ಣನೆಯನ್ನು ಶಬ್ದದಿಂದ ಮಾಡಲಿಕ್ಕೆ ಬರಲಾರದು. ॥ ೭೩ ॥ ಯಾವ ಪರಮೇಶ್ವರನಿಗೆ ಕೂಡ ತಮ್ಮ ಪ್ರೇಮದ ಆಳತೆಯನ್ನು ಮಾಡಲಿಕ್ಕೆ ಬರುವದಿಲ್ಲವೋ, ಆ ಪರಮೇಶ್ವರನ ಪ್ರೇಮವನ್ನು ತಿಳಿಯುವವರಾರು ? ಆದ್ದರಿಂದ ಈ ವಿಚಾರ ಮಾಡುತ್ತ ಕೂಡುವದರಲ್ಲಿ ಪ್ರಯೋಜನವೇನೂ ಇಲ್ಲ. ॥ ೭೪ ॥ ಆದರೆ ಹಿಂದೆ ಹೇಳಿದ ಅಭಿಪ್ರಾಯದ ಮೇಲಿಂದ ನೋಡಲು " ಅರ್ಜುನನ ವಿಷಯಕವಾಗಿ ಶ್ರೀಕೃಷ್ಣನು ಬಹಳೇ ಮೋಹಿತನಾಗಿರುವನೆಂದು " ನನಗೆ ಕಂಡುಬರುತ್ತದೆ. ಏಕೆಂದರೆ ಶ್ರೀಕೃಷ್ಣನು ಬಲತ್ಕಾರ ಮಾಡಿ ಅಪ್ಪಾ ಅರ್ಜುನನೇ ನನ್ನ ಭಾಷಣವನ್ನು ಕೇಳು ಎಂದು ಆಗ್ರಹಪಡುತ್ತಾನೆ. ॥೭೫॥ ಅರ್ಜುನಾ ! ಯಾವ ಯಾವ ಪ್ರಕಾರ ನಿನ್ನ ಮನಸಿಗೆ ಬೋಧವಾದೀತೋ ಅದೇ ಪ್ರಕಾರ

ನಿನಗೆ ನಾವು ಔತ್ಸುಕ್ಯದಿಂದ ಈ ಮಾರ್ಗವನ್ನು ಹೇಳುವೆವು. ॥ ೭೬ ॥ ಆ ಯೋಗಕ್ಕೆ ಏನು ಅನ್ನುತ್ತಾರೆ? ಅದರ ಉಪಯೋಗವೇನು? ಅದನ್ನು ಆಚರಿಸುವ ಅಧಿಕಾರಿಗಳಾರು? ॥ ೭೭ ॥ ಹೀಗೆ ಇದರ ಸಂಬಂಧವಾದ ಎಲ್ಲವನ್ನೂ ನಿನ್ನ ಮುಂದೆ ನಾವೀಗ ಹೇಳುತ್ತೇವೆ. ॥ ೭೮ ॥ ಆದ್ದರಿಂದ ನೀನು ಚಿತ್ತಗೊಟ್ಟು ಕೇಳು. ಹೀಗೆ ಸಂಭಾಷಣಮಾಡಿ ಶ್ರೀಹರಿಯು ಯಾವದನ್ನು ಹೇಳಿದನೋ ಆ ಕಥೆಯು ಮುಂದು ಬರುತ್ತದೆ. ॥ ೭೯ ॥ ಶ್ರೀ ನಿವೃತ್ತಿದಾಸ ಜ್ಞಾನೇಶ್ವರ ಮಹಾರಾಜರು ಅನ್ನುತ್ತಾರೆ. ಆದರೆ ದ್ವೈತಸಿದ್ಧಾಂತವನ್ನು (ಸೇವ್ಯ ಸೇವಕತ್ವವನ್ನು) ಸ್ಥಿರವಾಗಿಟ್ಟು ಶ್ರೀಕೃಷ್ಣನು ಅರ್ಜುನನಿಗೆ ಯಾವ ಯೋಗವನ್ನು ಹೇಳಿದನೋ ಅದನ್ನು ನಾವು ಸ್ಪಷ್ಟಮಾಡಿ ಹೇಳುತ್ತೇವೆ. ॥ ೧೪೦ ॥

ಶ್ರೀಮದ್ಭಗವದ್ಗೀತೆಯ ಮತ್ತು ಶ್ರೀ ಜ್ಞಾನೇಶ್ವರಿಯ ಸುಲಭ, ಸರಲ ಕನ್ನಡ ಅನುವಾದದ ಐದನೆಯ ಅಧ್ಯಾಯವು ಮುಗಿದುದು.

ಸಮಾಪ್ತವು

ಶ್ರೀಕೃಷ್ಣಾರ್ಪಣಮಸ್ತು



ಜ್ಞಾನೇಶ್ವರೀ

ಆರನೆಯ ಅಧ್ಯಾಯವು

ಮಗ ರಾಯಾತೇ ಮ್ಹಣೇ ಸಂಜಯೋ । ತೋಚಿ ಅಭಿಪ್ರಾಯ ಅವಧಾರಿಜೋ । ಶ್ರೀಕೃಷ್ಣ ಸಾಂಗತೀ ಆತಾ ಜೋ । ಯೋಗರೂಪ ॥ ೧ ॥ ಸಹಜೇ ಬ್ರಹ್ಮರಸಾಚೇ ಪರಗಣೇ । ಕೇಲೇ ಅರ್ಜುನಾಲಾಗೀ ನಾರಾಯಣೇ । ಕೀ ತೇಚಿ ಅವಸರೀಪಾಹುಣೇ । ಪಾತಲೋ ಆಮ್ಹೀ ॥ ೨ ॥ ಕೈಸೀ ದೈವಾಚೀ ಥೋರೀ ನೇಣಿಜೇ । ಜೈಸೇ ತಾನ್ಹೇಲಿಯಾ ತೋಯಾ ಸೇವಿಜೇ । ಕೀ ತೇಚಿ ಜವೀ ಕರೂನಿ ಪಾಹಿಜೇ । ತವ ಅಮೃತ ಆಹೇ ॥ ೩ ॥ ತೈಸೇ ಆನ್ಹಾ ತುಮ್ಹಾ ಜಾಹಾಲೇ । ಜೇ ಆಡಮುಠೀ ತತ್ವಫಾವಲೇ । ತವ ಧೃತರಾಷ್ಟ್ರೇ ಮ್ಹಣಿತಲೇ । ಹೇ ನ ಪುಸೋ ತೂ ತೇ ॥ ೪ ॥ ತಯಾ ಸಂಜಯಾ ಯೇಣೇಬೋಲೆ । ರಾಯಾಚೇ ಹೃದಯ ಚೋಜವಲೇ । ಜೇ ಅವಸರೀ ಆಹೇ ಘೇತಲೇ । ಕುಮರಾಚಿಯಾ ॥ ೫ ॥ ಹೇ ಜಾಣೋನಿ ಮನೀ ಹಾಸಿಲಾ । ಮ್ಹಣೇ ಮ್ಹಾತಾರಾ ಮೋಹೇ ನಾತಿಲಾ । ಯೇರ್ಹವೀ ಬೋಲ ತರೀ ಭಲಾ ಜಾಹಾಲಾ । ಅವಸರೀಇಯೇ ॥ ೬ ॥ ಪರೀ ತೇ ತೈಸೇ ಕೈಸೇನಿ ಹೋಇಲ । ಜಾತ್ಯಂಧಾ ಕೈಸೇ ಪಾಹೇಲ । ತೇವಿಚಿ ಯೇರೂ ರೋಷ ಘೇಈಲ । ಮ್ಹಣೋನಿ ಬಿಹೇ ॥ ೭ ॥ ಪರೀ ಆಪಣ ಚಿತ್ತೀ ಆಪುಲಾ । ನಿಕಿಯಾ ಪರೀ ಸಂತೋಷಲಾ । ಜೇ ತೋ ಸಂವಾದ ಫಾವಲಾ । ಶ್ರೀಕೃಷ್ಣಾರ್ಜುನಾಚಾ ॥ ೮ ॥ ತೇಣೇ ಆನಂದಾಚೇನಿ ಧಾಲೇಪಣೇ । ಸಾಭಿಪ್ರಾಯ ಅಂತಃಕರಣೇ । ಆತಾ ಆದರೇಸೀ ಬೋಲಣೇ । ಘಡೇಲ ತಯಾ ॥ ೯ ॥ ತೋ ಗೀತೇಮಾಜೀ ಷಷ್ಠೀಚಾ । ಪ್ರಸಂಗ ಅಸೇ ಆಯಣೀಚಾ । ಜೈಸಾ ಕ್ಷೀರಾರ್ಣವೀ ಅಮೃತಾಚಾ । ನಿವಾಡ ಜಾಹಲಾ ॥ ೧೦ ॥ ತೈಸೇ ಗೀತಾರ್ಥಾಚೇ ಸಾರ । ಜೇ ವಿವೇಕಸಿಂಧೂಚೇ ಪಾರ । ನಾನಾ ಯೋಗವಿಭವ ಭಾಂಡಾರ । ಉಘಡಲೇ ಕಾ ॥ ೧೧ ॥ ಜೇ ಆದಿ ಪ್ರಕೃತೀಚೇ ವಿಸರಣೇ । ಜೇ ಶಬ್ದ ಬ್ರಹ್ಮಾಸಿ ನ ಬೋಲಣೇ । ಜೇಥೂನಿ ಗೀತಾವಲ್ಲೀಚೇ ಠಾಣೇ । ಪ್ರರೋಹಪಾವೇ ॥ ೧೨ ॥ ತೋ ಅಧ್ಯಾಯ ಸಾಹಾವಾ । ವರೀ ಸಾಹಿತ್ಯಾಚಿಯಾ ಬರವಾ । ಸಾಂಗಿಜೇಲ ಮ್ಹಣೋನಿ ಪರಿಸಾವಾ । ಚಿತ್ತ ದೇವುನೀ ॥ ೧೩ ॥ ಮಾಝಿಯಾ ಮ್ಹರಾಟಾಚೀ ಬೋಲ ಕೌತುಕೇ । ಪರೀ ಅಮೃತಾತೇಹೀ ಪೈಜ ಜಿಂಕೇ । ಐಸೀ ಅಕ್ಷರೇ ರಸೀಕೇ । ಮೇಳವೀನ ॥ ೧೪ ॥ ಜಿಯೇ ಕೋವಳಿಕೇಚೇನಿ ಪಾಡೇ । ದಿಸತೀ ನಾದೀಚೆ ರಂಗ ಥೋಡೇ । ವೇಧೇ ಪರಿಮಳಾಚೇ ಬೀಕಮೋಡೇ । ಜಯಾಚೇನಿ ॥ ೧೫ ॥ ಐಕಾ ರಸಾಳಪಣಾಚಿಯಾ ಲೋಭಾ । ಕೀ ಶ್ರವಣೇಚಿ ಹೋತೀ ಜಿಭಾ । ಬೋಲೇ ಇಂದ್ರಿಯಾ ಲಾಗೇ ಕಳಂಭಾ । ಏಕಮೇಕಾ ॥ ೧೬ ॥ ಸಹಜೇ ಶಬ್ದ ತರೀ ವಿಷೋಶ್ರವಣಾಚಾ । ಪರೀ ರಸನಾ ಮ್ಹಣೇ ರಸ ಹಾ ಆಮುಚಾ । ಘ್ರಾಣಾಸಿಭಾವ ಜಾಯ ಪರಿಮಳಾಚಾ । ಹಾ ತೋಚಿ ಹೋಈಲ ॥ ೧೭ ॥ ನವಲ ಬೋಲತೀಯೇ ರೀಪೆಚೀ ವಾಹಾಣೇ । ದೇಖತಾ ಡೋಳಾ ಪುರೋ ಲಾಗೇ ಧಣೇ । ತೇ ಮ್ಹಣತೀ ಉಘಡಲೀ ಖಾಣೇ । ರೂಪಾಚೀ ಹೇ ॥ ೧೮ ॥ ಜೇಥ ಸಂಪೂರ್ಣ ಪದ ಉಭಾರೇ । ತೇಥ ಮನಚಿ ಧಾವೇ ಬಾಹಿರೇ । ಬೋಲ ಭುಜಾಹೀ ಆವಿಸ್ಕರೇ । ಆಲಿಂಗಾವಯಾ ॥ ೧೯ ॥ ಐಸೀ ಇಂದ್ರಿಯೇ ಆಪುಲಾಲಿಯಾ ಭಾವೀ । ಝೋಂಬತೀ ಪರೀ ತೋ ಸರಿಸೇಸಣೇಂಚಿ ಬುಝಾವೀ । ಜೈಸಾ ಏಕಲಾ ಜಗ ಚೇವವೀ । ಸಹಸ್ರಕರ ॥ ೨೦ ॥ ತೈಸೇ ಶಬ್ದಾಚೇ ವ್ಯಾಪಕಪಣ । ದೇಖಿಜೇ ಅಸಾಧಾರಣ।

ಪಾಹಾತಯಾ ಭಾವಜ್ಞಾಫಾವತೀ ಗುಣ । ಚಿಂತಾಮಣೀಚೇ ॥ ೨೧ ॥ ಹೇ ಅಸೋ ತಯಾ ಬೋಲಾಚೀ ತಾಟೇ ಧಲೀ । ವರೀ ಕೈವಲ್ಯರಸೇ ವೋಗರಲೀ । ಹೀಪ್ರತಿಪತ್ತಿ ಮಿಯಾ ಕೇಲೀ । ನಿಷ್ಕಾಮಾಸೀ ॥೨೨॥ ಆತಾ ಆತ್ಮಪ್ರಭಾ ನಿತ್ಯನವೀ । ತೇಚಿಕರೂನಿ ಜಾಣದಿವೀ । ಜೋ ಇಂದ್ರಿಯಾತೇ ಚೋರೂನಿ ಜೇವೀ । ತಯಾಸೀಚಿ ಫಾವೇ ॥ ೨೩ ॥ ತೇಥ ಶ್ರವಣಾಚೆನಿ ಪಾಂಗೇ–। ವೀಣ ಶ್ರೋತಯಾ ವ್ಹಾವೇಲಾಗೇ । ಹೇ ಮನಾಚೇನಿ ನಿಜಾಂಗೇ । ಭೋಗಿಜೇ ಗಾ ॥ ೨೪ ॥ ಅಹಾಚ ಬೋಲಾಚೀ ವಾಲೀಫ ಫೇಡಿಜೇ । ಆಣಿ ಬ್ರಹ್ಮಾಚಿಯಾತಿ ಆಂಗಾ ಫುಡಿಜೇ । ಮಗ ಸುಖೇಸೀ ಸುರವಾಡಿಜೇ । ಸುಖಾಚಿಮಾಜೀ ॥ ೨೫ ॥ ಐಸೇ ಹಳುವಾರಪಣ ಜರೀ ಯೇ ಈಲ । ತರೀಚ ಹೇ ಉಪೇಗಾ ಜಾಈಲ । ಯೇರ್ಹವೀ ಆಫವೀ ಗೋಸ್ಮೀ ಹೋಈಲ । ಮುಕಯಾ ಬಹಿರಯಾಚಿ ॥ ೨೬ ॥ ಪರೀ ತೇ ಅಸೋ ಆತಾ ಆಫವೇ । ನ ಲಗೇ ಶ್ರೋತಯಾಂತೇ ಕಡಸಾವೇ । ಜೇ ಅಧಿಕಾರಿಯೇ ಏಥ ಸ್ವಭಾವೇ । ನಿಷ್ಕಾಮು ಕಾಮ ॥ ೨೭ ॥ ಜಿಹೆ ಆತ್ಮಬೋಧಾಚಿಯಾ ಆವಡೀ । ಕೇಲೀ ಸ್ವರ್ಗ ಸಂಸಾರಾಚೀ ಕುರೋಂಡೀ । ತೇ ವಾಹೂನಿ ಏಥೀಂಚೀ ಗೋಡೀ । ನೇಣತೀ ಆಣಿಕ ॥ ೨೮ ॥ ಜೈಸಾ ವಾಯಸೀ ಚಂದ ನೋಳಖಿಜೇ । ತೈಸಾ ಪ್ರಾಕೃತೀ ಗ್ರಂಥ ಹಾ ನೇಣಿಜೇ । ಆಣಿ ತೋ ಹಿಮಾಂಶುಚಿ ಜೇವಿ ಖಾಜೇ । ಚಕೋರಾಚೇ ॥ ೨೯ ॥ ತೈಸಾ ಸಜ್ಞಾನಾಸೀ ತರೀ ಹಾ ರಾವೋ। ಆಣಿ ಅಜ್ಞಾನಾಸೀ ಆನ ಗಾವೋ। ಮ್ಹಣೋನಿ ಬೋಲಾವಯಾ ವಿಷಯ ಪಹಾಹೋ । ವಿಶೇಷ ನಾಹೀ ॥ ೩೦ ॥ ಪರೀ ಅನುವಾದಲೋ ಮೀ ಪ್ರಸಂಗೇ । ತೇ ಸಜ್ಜನಿ ಉಪಸಾಹಾವೇಲಾಗೇ । ಆತಾ ಸಾಂಗೇನ ಕಾಯ ಶ್ರೀರಂಗೇ । ನಿರೋಪಿಲೇಜೇ ॥ ೩೧ ॥ ತೇ ಬುದ್ಧೀಹಿ ಆಕಳಿತಾ ಸಾಂಕಡೇ । ಮ್ಹಣವೂನಿ ಬೋಲೇ ವಿಪಾಯೇ ಸಾಂಪಡೇ । ಪರೀ ಶ್ರೀನಿವೃತ್ತಿಕೃಪಾದೀಪ ಉಜಿಯೇಂಡೇ । ದೇಖೇನ ಮೀ ॥ ೩೨ ॥ ಜೇದಿಠೀಹೀ ನ ಪವಿಜೇ । ತೇ ದಿಠೀವೀಣ ದೇಖಿಜೇ । ಜರೀ ಅತೀಂದ್ರಿಯ ಲಾಹಿಜೇ । ಜ್ಞಾನಬಳ ॥೩೩॥ ನಾತರೀ ಜೇ ಧಾತುವಾದಾಹೀ ನ ಜೋಡೇ । ತೇ ಲೋಹೀಂಚಿ ಪಂಧರೇ ಸಾಂಪಡೇ।ಜರೀ ದೈವಯೋಗೆ ಚಡೇ । ಪರಿಸ ಹಾತಾ ॥೩೪॥ ತೈಸೀ ಸದ್ಗುರೂಕೃಪಾ ಹೋಯೇ। ತರೀ ಕರಿತಾ ಕಾಯ ಆವು ನೋಹೆ । ಮ್ಹಣವೂನಿ ತೇ ಅಪಾರ ಮಾತೇ ಆಹೇ । ಜ್ಞಾನದೇವ ಮ್ಹಣೇ ॥೩೫॥ ತೇಣೇ ಕಾರಣೇ ಮೀ ಬೋಲೇನ । ಬೋಲೀ ಅರೂಪಾಚೇ ರೂಪ ದಾವೀನ । ಅತೀಂದ್ರಿಯ ಪರೀ ಭೋಗವೀನ । ಇಂದ್ರಿಯಾಕರವೀ ॥ ೩೬ ॥ ಆಇಕಾ ಯಶ ಶ್ರೀ ಟೌದಾರ್ಯ । ಜ್ಞಾನವೈರಾಗ್ಯ ಐಶ್ವರ್ಯ । ಹೇ ಸಾಹೀ ಗುಣವರ್ಯ । ವಸತೀ ಜೇಥ ॥ ೩೭ ॥ ಮ್ಹಣೋನಿ ತೋ ಭಗವಂತ । ಜೋ ನಿಃಸಂಗಾಚಾ ಸಾಂಗಾತ । ತೋ ವ್ಹಣೇ ಪಾರ್ಥಾ ದತ್ತಚಿತ್ತ । ಹೋಯೀ ಆತಾ ॥ ೩೮ ॥

ಅರ್ಥ— ಏಮೇಲೆ ಸಂಜಯನು ಧೃತರಾಷ್ಟ್ರನಿಗೆ ಅನ್ನುತ್ತಾನೆ. ರಾಜಾ, ಇನ್ನುಮೇಲೆ ಭಗವಾನ್ ಶ್ರೀಕೃಷ್ಣನು ಯೋಗಸಾಧನವ ವಿಷಯವಾಗಿ ಅರ್ಜುನನಿಗೆ ಹೇಳಿದ ಆತನ ಅಭಿಪ್ರಾಯವನ್ನು ಕೇಳು. ॥ ೧ ॥ ಶ್ರೀಕೃಷ್ಣ ಪರಮಾತ್ಮನು ಅರ್ಜುನನಿಗೆ ಬ್ರಹ್ಮಜ್ಞಾನದ ಪಾರಣೆ (ಈ ಹೊತ್ತಿನ ವರೆಗೆ ಅಜ್ಞಾನರೂಪೀ ಉಪವಾಸವನ್ನು ಮಾಡಿದ ಮೇಲೆ) ಜ್ಞಾನಾಮೃತದ (ಭೋಜನ) ವನ್ನು ಮಾಡಿಸಿದನು. ಅದೇ ಸಮಯಕ್ಕೆ ನಾವು ಸಹಜವಾಗಿ ಆ ಸ್ಥಳದಲ್ಲಿ ಜೀಗರಾಗಿ ಹೋಗಿದ್ದೆವು. ॥ ೨ ॥ ನಮ್ಮ ಭಾಗ್ಯದ ಮುಖಾತ್ಮಯನ್ನು ಏನೆಂದು ಬಣ್ಣಿಸಲಿ ? ತಿಳಿಯದಾಗಿದೆ. ತೃಷೆಯಿಂದ ಪೀಡಿತನಾದ ಮನುಷ್ಯನು ನೀರುಕುಡಿಯಬೇಕೆಂದು ನೀರಿನ ಪಾತ್ರೆಯನ್ನು ಬಾಯಿಗೆ ಹಚ್ಚಿ ರುಚಿ ನೋಡುವಷ್ಟರಲ್ಲಿ ಅವನಿಗೆ ನೀರಿನ ಬದಲು ಅಮೃತವಿರುವದೆಂದು ತೋರಿದಂತೆ, ॥ ೩ ॥ ಆಗಂತುಕ ಗಿರಾಕಿಗೆ ಮೌಲ್ಯವಾನ ವಸ್ತುವು ತಾನಾಗಿಯೇ ಕಡಿಮೆ ಕ್ರಯಕ್ಕೆ ದೊರೆತಂತೆ, ಈಗ ನನಗೆ ಮತ್ತು ನಿನಗೆ ಪರಮಾತ್ಮತತ್ವದ ಲಾಭವು ಪ್ರಾಪ್ತವಾಗಿದೆ. ಆವಾಗ ಧೃತರಾಷ್ಟ್ರರಾಜನು ಅನ್ನುತ್ತಾನೆ—" ನಾನು ನಿನಗೆ ಈ ಬ್ರಹ್ಮಜ್ಞಾನದ ವಿಷಯವನ್ನು ವಿಚಾರಿಸಿಲ್ಲ." ॥ ೪ ॥ ಹೀಗೆ ಧೃತರಾಷ್ಟ್ರನ ಸಂಭಾಷಣವನ್ನು ಕೇಳಿ, ಸಂಜಯನು ಧೃತರಾಷ್ಟ್ರನ ಹೃದಯವನ್ನು

ಪುತ್ರಸ್ನೇಹದ ಮೋಹವು ಮುಸುಕಿಕೊಂಡಿರುವುದೆಂದು ತಿಳಿದುಕೊಂಡನು. ॥ ೫ ॥ ಇದನ್ನು ಲಕ್ಷದಲ್ಲಿ ತಂದು ಸಂಜಯನು ಮನದಲ್ಲಿಯೇ ವಿಸ್ಮಯಗೊಂಡು ತನ್ನೊಳಗೆ ತಾನೇ ಅನ್ನುತ್ತಾನೆ. ಅಯ್ಯೋ, ಈ ವೃದ್ಧ ಧೃತರಾಷ್ಟ್ರನು ಪುತ್ರವಾತ್ಸಲ್ಯದಿಂದ ತೀರ ಹುಚ್ಚನಾಗಿರುವನು. ವಿಚಾರಮಾಡಿ ನೋಡಿದರೆ, ಇಲ್ಲಿಯವರೆಗೆ ನಡೆದ ಕೃಷ್ಣಾರ್ಜುನರ ಸಂವಾದವು ಅತಿ ಉತ್ತಮವಾಗಿರುವದು. ॥ ೬ ॥ ಆದರೆ ಈ ಸಂವಾದದ ರುಚಿಯು ಇವನಿಗೆಲ್ಲಿಂದ ಬರಬೇಕು ? ಏಕೆಂದರೆ ಜನ್ಮಾಂಧನಾದವನಿಗೆ ಏನಾದರೂ ಕಾಣಬಹುದೇ ? ಆದರೆ ಇದನ್ನು ಸ್ಪಷ್ಟವಾಗಿ ಮಾತನಾಡಿದರೆ ಅವನು ಕೋಪಿಸಿಕೊಳ್ಳುವನೆಂಬ ಭಯದಿಂದ ಸಂಜಯನು ಏನನ್ನೂ ಹೇಳಲಿಲ್ಲ. ॥ ೭ ॥ ಆದರೂ ಶ್ರೀ ಕೃಷ್ಣಾರ್ಜುನರ ಪರಸ್ಪರ ಸಂವಾದದಿಂದ ಅವನು ತನ್ನ ಮನಸ್ಸಿನಲ್ಲಿ ಮಾತ್ರ ಹೆಚ್ಚಾದ ಸಂತೋಷವನ್ನು ಹೊಂದಿದನು. ॥ ೮ ॥ ಈ ಆನಂದದ ತೃಪ್ತಿಯಿಂದ ಪ್ರಫುಲ್ಲಿತನಾದ ಅವನು ಇನ್ನುನೋಲೆ ಧೃತರಾಷ್ಟ್ರನಿಗೆ ಬಹಳ ಮಾರ್ಮಿಕದೆಯಿಂದ ಅಭಿಪ್ರಾಯವನ್ನು ಹೇಳುವನು. ॥ ೯ ॥ ಕ್ಷೀರಸಾಗರದ ಮಂಥನ ಮಾಡುವಕಾಲಕ್ಕೆ ಹೇಗೆ ಅಮೃತದ ಪ್ರಾಪ್ತಿಯಾಗಿರುವದೋ ಹಾಗೆಯೇ ಗೀತೆಯಲ್ಲಿ ಆರನೆಯ ಅಧ್ಯಾಯದ ಪ್ರಸಂಗವು (ಅನುವಾದವು) ಬಹು ಶ್ರೇಷ್ಠವಾದದ್ದಿರುವದು. ಇದನ್ನು ಬುದ್ಧಿಯಿಂದಲೇ ತಿಳಿದುಕೊಳ್ಳಬೇಕಾದುದು. ॥ ೧೦ ॥ ಈ ಅಧ್ಯಾಯವು ಗೀತಾರ್ಥದ ಸಾರವಾಗಿರುತ್ತದೆ. ಮತ್ತು ಆತ್ಮಾನಾತ್ಮ ವಿಚಾರರೂಪೀ ಸಮುದ್ರದ ಆಚೆಯ ದಂಡೆಯಾಗಿರುವದು. ಅಥವಾ ಯೋಗ ಸಂಪತ್ತಿಯ ತೆರೆದ ಭಾಂಡಾರವೇ ಆಗಿರುವದು. ॥ ೧೧ ॥ ಯಾವದು ಆದಿ ಮಾಯೆಯು ವಿಶ್ರಾಂತಿ ಸ್ಥಾನವೋ, ಯಾವ ಸ್ಥಳದಲ್ಲಿ ವೇದಗಳು ಸಹ ಮೌನಧಾರಣ ಮಾಡಬೇಕಾಗುವದೋ, ಮತ್ತು ಯಾವದರಿಂದ ಗೀತಾರೂಪೀ ಬಳ್ಳಿಗೆ ಅಂಕುರವು ಉದ್ಭವಿಸಿರುವದೋ ॥ ೧೨ ॥ ಅದು ಇದೇ ಆರನೆಯ ಅಧ್ಯಾಯವು. ಸರ್ವಾಲಂಕಾರ ಮುಂತಾದ ಸಾಹಿತ್ಯಗಳಿಂದ ಪರಿಪೂರ್ಣಹೊಂದಿದಂಥದನ್ನೀಗ ಹೇಳುವೆನು. ಅದನ್ನು ಚಿತ್ತಗೊಟ್ಟು ಕೇಳಬೇಕೆಂದು ಮಹಾರಾಜರು ಸಂತರಿಗೆ ವಿನಂತಿ ಮಾಡುತ್ತಾರೆ.॥ ೧೩ ॥ ನನ್ನ ಭಾಷಣವು ಶುದ್ಧ ಪಾಕೃತವಾದದ್ದೇನೋ ನಿಜ. ಆದರೆ ಆ ಶಬ್ದಗಳು ಪ್ರತಿಜ್ಞೆಯಿಂದ ಸಹಜವೇ ಅಮೃತವನ್ನಾದರೂ ಜಿದ್ದುಕಟ್ಟಿ ಜಯಿಸಬಹುದು. ಇಂತಹ ರುಚಿಕರವಾದ ಶಬ್ದಗಳಿಂದ ನಾನು ಹೇಳುವೆನು. ॥ ೧೪ ॥ ಆ ಮಾತಿನ ಮೃದುತನದ ಆನಂದದ ಮುಂದೆ ಸಪ್ತ ಸ್ವರದಿಂದ ತೋರುವ ಗಾಯನದ ಆನಂದವೂ ಸಹ ಸರಿಗಟ್ಟಲಾರದು. ಇಲ್ಲವೇ ಅದರ ಛಂದದಿಂದ ಉತ್ತಮವಾದ ಸುಗಂಧವು ಸಹ ಕಡಿಮೆಯಾಗುವದು. ॥ ೧೫ ॥ ಹೀಗೆ ನೋಡು, ಸ್ವಾರ್ಥದ ಆಶೆಯಿಂದ ಕವಿಗಳಿಗೆ ನಾಲಿಗೆಯು ಹುಟ್ಟುವದು. ಇಂದ್ರಿಯಗಳು ತಮ್ಮತಮ್ಮೊಳಗೇ ಜಗಳಾಡಹತ್ತುವವು. ಜಗಳಾಡಲು ಕಾರಣನೇನೆಂದರೆ— ॥ ೧೬ ॥ ಶಬ್ದ ವಿಷಯವು ಕವಿಗಳದು ಆದೆ. ಆದರೆ ನಾಲಿಗೆಯು ಈ ರಸವು ನನ್ನದೇ ಇರುವದೆಂದು ಅನ್ನುವದು. ಮತ್ತು ಘ್ರಾಣೇಂದ್ರಿಯಗಳಿಗೆ ಈ ಶಬ್ದ ವಿಷಯವೇ ನಮ್ಮ ಗಂಧ ವಿಷಯವಾಗಿರುತ್ತದೆಂದು ಭಾಸವಾಗುವದು. ॥ ೧೭ ॥ ಇದರಕಿಂತಲೂ ಇನ್ನೊಂದು ಹೆಚ್ಚಿನ ಆಶ್ಚರ್ಯದ ವಿಷಯವು ಯಾವದೆಂದರೆ, ಶಬ್ದಗಳ ಸುಂದರ ರಚನೆಯನ್ನು ನೋಡಿ ಕಣ್ಣುಗಳು ತೃಪ್ತಿಹೊಂದಿ, ಅವುಗಳಿಗೆ ಇದು ಸಂಭಾಷಣವಿರದೇ ಪ್ರತ್ಯಕ್ಷರೂಪ ವಿಷಯವೇ ನಿರ್ಮಾಣವಾಗಿರುತ್ತದೆಂದು ಭಾಸವಾಗುತ್ತದೆ. ॥೧೮॥ ಯಾವಾಗ್ಗೆ ಶಬ್ದವು ಸಂಪೂರ್ಣವಾಕ್ಯರೂಪದಿಂದ ಹೊರಬೀಳುತ್ತದೋ ಆಗ್ಗೆ ಇಂದ್ರಿಯಗಳನ್ನು ಹಿಂದಕ್ಕೆ ಸರಿಸಿ ಮನಸ್ಸು ಮುಂದೆ ಬರುವದು. ಮತ್ತು ತನ್ನ ಬಾಹುಗಳನ್ನೆತ್ತಿ, ಆ ವಾಕ್ಯಗಳನ್ನು ಆಲಂಗಿಸಬೇಕೆಂದು ಓಡುವದು. ॥೧೯॥ ಈ ಪ್ರಕಾರ ಸರ್ವ ಇಂದ್ರಿಯಗಳು ತಮ್ಮತಮ್ಮ ಧರ್ಮದಂತೆ (ಶಬ್ದರೂಪೀ) ಸಂಭಾಷಣಕ್ಕೆ ಜಗ್ಗಾಡುವವು. ಆವತೆ ಆ ಶಬ್ದಗಳಾದರೂ ಸರ್ವ ಇಂದ್ರಿಯಗಳನ್ನು ಸಮಾನವಾಗಿ ಶಾಂತಮಾಡುವವು. ಯಾವ ಪ್ರಕಾರ ಒಬ್ಬನೇ ಸೂರ್ಯನು ಸರ್ವ ಜಗತ್ತಿನ ವ್ಯವಹಾರಕ್ಕೇ ಪ್ರವರ್ತಕನಾಗಿರುವನೋ, ॥ ೨೦ ॥ ಅದೇ ಪ್ರಕಾರ ಆ ಶಬ್ದದ ವ್ಯಾಪಕತ್ವವು ಅಲೌಕಿಕವಾಗಿರುತ್ತದೆಂದು ತಿಳಿಯಬೇಕು. ಮತ್ತು ನೋಡಲಿಕ್ಕೆ ಹೋದರೆ ಯಾವನು ಅದರ ಅರ್ಥವನ್ನು ತಿಳಿಯುವವನಿರುವನೋ, ಅವನಿಗೆ ಆ ಸ್ಥಳದಲ್ಲಿ ಚಿಂತಾಮಣಿ ಸದೃಶವಾದ ಗುಣವು ಕಂಡುಬರುತ್ತದೆ. ॥ ೨೧ ॥ ಇದಂತೂ ಇರಲಿ, ಆ ಮಾತಿನ ಸುಂದರವಾದ ಉತ್ತಮ ತಳಿಗೆಯಲ್ಲಿ ಮೋಕ್ಷರೂಪೀ ಪಕ್ವಾನ್ನವನ್ನು ಬಡಿಸಿರುತ್ತದೆ. ಇಂಥ ಗ್ರಂಥರಚನಾರೂಪೀ ಮೇಜವಾನಿಯನ್ನು ನಾನು ನಿಷ್ಕಾಮ ಸಂತರ ದೆಸೆಯಿಂದ ಮಾಡಿರುನೆನು. ॥ ೨೨ ॥ ಈ

ಮೇಜವಾನಿಯಲ್ಲಿ ಈಗ ನಿತ್ಯನೂತನವಾಗಿರುವ ಆತ್ಮ ಪ್ರಕಾಶವನ್ನೇ ಒಂದು ಸಮೆಯಲ್ಲಿಯ ದೀವಿಗೆಯನ್ನುಮಾಡಿ ಆ ದೀವಿಗೆಯ ಪ್ರಕಾಶದೊಳಗೆ ಯಾವನು ಇಂದ್ರಿಯಗಳಿಗೆ ತಿಳಿಯಗೊಡದೇ ಉಪಭೋಗ ತೆಗೆದುಕೊಳ್ಳುವನೋ, ಅವನಿಗೆ ಮಾತ್ರ (ಕೈವಲ್ಯರೂಪೀ) ಪಕ್ವಾನ್ನದ ಲಾಭವಾಗುತ್ತದೆ. ॥ ೨೩ ॥ ಈ ಮೇಜವಾನಿಯ ದೆಸೆಯಿಂದ ಶ್ರೋತೃಗಳು ಈ ಸ್ಥಳದಲ್ಲಿ ಶ್ರವಣದ ಮುಖ್ಯಸಾಧನವಾದ ಕರ್ಣಗಳ ಸಂಗತಿಯನ್ನೇ ಬಿಟ್ಟುಕೊಟ್ಟು, ಈ ಮೇಜವಾನಿಯನ್ನು ಅಂತರ್ಮುಖ ಮನಸಿನಿಂದಲೇ ಭೋಗಿಸತಕ್ಕದ್ದಿದೆ. ॥ ೨೪ ॥ ಮೇಲೆ ಮೇಲಿರುವ ಶಬ್ದರೂಪೀ ಗೌಸಣಿಕೆಯನ್ನು ತೆಗೆದು ನೋಡಲು ಒಳಗೆ ಅರ್ಥರೂಪೀ ಬ್ರಹ್ಮವು ಇರುವದೆಂದು ತಿಳಿಯುತ್ತದೆ. ಅದರ ಸಂಗಡ ತದ್ರೂಪವನ್ನು ಹೊಂದಬೇಕು. ಆ ಮೇಲೆ ಸುಖದಲ್ಲಿಯೇ ಸುಖದ ಸ್ವಾದವನ್ನು ತೆಗೆದುಕೊಂಡು ಅದರಲ್ಲಿಯೇ ಬೆರೆತು ಹೋಗ ಬೇಕು. ॥ ೨೫ ॥ ಈ ಮೇರೆಗೆ ಅಂತಃಕರಣದಲ್ಲಿ ಸೂಕ್ಷ್ಮತನವು ಉಂಟಾದರೆ ಮಾತ್ರ ನನ್ನ ನಿರೂಪಣೆಯ ಉಪಯೋಗ ವಾಗುವದು. ಇಲ್ಲದೇ ಹೋದರೆ ಈ ಎಲ್ಲ ಸಂಭಾಷಣವು ಮೂಕನ ಮಾತನ್ನು ಕಿವುಡನು ಕೇಳಿದಂತೆಯಾಗುವದು. ॥ ೨೬ ॥ ಆದರೆ ಅದೆಲ್ಲವೂ ಹಾಗೆಯೇ ಇರಲಿ. ಶ್ರೋತೃಗಳನ್ನು ಆರಿಸಿ ತೆಗೆಯುವ ಅವಶ್ಯವಿಲ್ಲ. ಯಾಕೆಂದರೆ ಈ ವಿಷಯ ಸುಖದಲ್ಲಿ ಸಹಜವೇ ಕಾಮನಾಶೂನ್ಯ ಅಂತಃಕರಣವುಳ್ಳ ಜನರೇ ಅಧಿಕಾರಿಗಳಾಗಿರುವರು. ॥ ೨೭ ॥ ಯಾವನು ಆತ್ಮಜ್ಞಾನ ಪ್ರೇಮದಿಂದ ಸಂಸಾರಸ್ವರ್ಗ ಇವುಗಳನ್ನು ದಾಟರುವನೋ ಅವನ ಹೊರ್ತು ಅನ್ಯರಿಗೆ ಈ ಮಾತಿನ ಮಾಧುರ್ಯವು ತಿಳಿಯುವದಿಲ್ಲ. ॥ ೨೮ ॥ ಯಾವ ಪ್ರಕಾರ ಕಾಗೆಗಳಿಗೆ ಚಂದ್ರನ ಪರಿಚಯವಿರುವದಿಲ್ಲವ್ದೋ ಅದೇ ಪ್ರಕಾರ ವಿಷಯಾಸಕ್ತ ಜನರಿಗೆ ಈ ಪ್ರತಿಪಾದನವು ತಿಳಿಯಲಾರದು. ಆದರೆ (ಶೀತಲ ಕಿರಣದ) ಅದೇ ಚಂದ್ರನೇ ಚಕೋರಪಕ್ಷಿಯ ಖಾದ್ಯವಾಗಿರುವನೋ, ಅವೇ ಪ್ರಕಾರ ಕರ್ಮಫಲವ ಆಕೆಯಿಲ್ಲದವರಿಗೇ ಈ ಪ್ರತಿಪಾದನದ ಅರ್ಥವು ತಿಳಿಯುವದು. ॥ ೨೯ ॥ ಅದರಂತೆಯೇ ಜ್ಞಾನೀ ಪುರುಷನಿಗೆ ಈ ಗ್ರಂಥವು ವಿಶ್ರಾಂತಿಸ್ಥಾನವಾಗಿರುವದು. ಮತ್ತು ಅಜ್ಞಾನಿಗಳಿಗೆ ಅಪರಿಚಿತ ಸ್ಥಾನವಾಗಿರುವದು. ಈ ವಿಷಯವಾಗಿ ಹೆಚ್ಚು ಹೇಳುವದೇನೂ ಇರುವದಿಲ್ಲ. ॥೩೦॥ ಆದರೆ ಪ್ರಸಂಗಾನುಸಾರವಾಗಿ ನಾನು ಮಾತನಾಡಿ ಬಿಟ್ಟೆನು. ಅದನ್ನು ಸಜ್ಜನರು ಕ್ಷಮಿಸುವದು ಉಚಿತವೇ ಆಗಿರು ವದು. ಇನ್ನು ಶ್ರೀಕೃಷ್ಣನು ಯಾವುದನ್ನು ಹೇಳದನೋ ಅದನ್ನೇ ಹೇಳುವೆನು. ॥ ೩೧ ॥ ಆ ಸಂಭಾಷಣವು ಬುದ್ಧಿಗೆ ಸಹ ತಿಳಿಯಲಿಕ್ಕೆ ಕಠಿಣವಾಗಿರುವದು. ಅದನ್ನು ಶಬ್ದದಿಂದ ಹೇಳಲು ಅಕಸ್ಮಾತ್ ಬಂದರೆ ಬರಬಹುದು. ಆದರೆ ಶ್ರೀಗುರು ನಿವೃತ್ತಿ ಮಹಾರಾಜರ ಕೃಪಾರೂಪ ದೀವಿಗೆಯ ಬೆಳಕಿನಿಂದ ಅದನ್ನು ನೋಡುವೆನು. ಮತ್ತು (ನೋಡಿ ದ್ದನ್ನು) ಹೇಳುವೆನು. ॥ ೩೨ ॥ ಅತೀಂದ್ರಿಯ (ಇಂದ್ರಿಯಗಳಿಗೆ ಅಗಮ್ಯ) ವಾದ ಜ್ಞಾನವು ಪ್ರಾಪ್ತವಾದರೆ, ಯಾರ ದೃಷ್ಟಿಗೆ ಕಾಣುವದಿಲ್ಲ? ಅದು ಕಣ್ಣಿನ ಹೊರ್ತು ನೋಡಲಿಕ್ಕೆ ಬರುತ್ತದೆ. ॥ ೩೩ ॥ ದೈನಯೋಗದಿಂದ ಪರಿಸಮಣಿಯು ಹಸ್ತಗತವಾದರೆ ಧಾತುವರೀಕ್ಷಕರಿಗೆ, ಬಹು ಆಯಾಸದಿಂದ ದೊರಕಬಹುದಾದ ಸುವರ್ಣವು, ಕಬ್ಬಿಣದಿಂದ ದೊರಕುತ್ತಿದೆ. ॥ ೩೪ ॥ ಅದರಂತೆಯೇ ಸದ್ಗುರುಗಳ ಕೃಪೆಯಾದರೆ, ಪ್ರಯತ್ನವಾಡಿದ ಯಾವ ಕಾರ್ಯವು ಸಾಧ್ಯವಾಗದಿರಬಹುದು? ಎಂದು **ಜ್ಞಾನೇಶ್ವರ ಮಹಾರಾಜರು** ಅನ್ನುತ್ತಾರೆ. ಇಂಥ ಯಾವ ಸದ್ಗುರು ಗಳ ಅನುಗ್ರಹವು ನನ್ನ ಮೇಲೆ ಪೂರ್ಣವಾಗಿರುವದೋ, ॥೩೫॥ ಆ ಸದ್ಗುರುಗಳ ಅನುಗ್ರಹದ ಯೋಗದಿಂದ ನಾನು **ಈ ವ್ಯಾಖ್ಯಾನವನ್ನು** ಮಾಡುವೆನು. ಮತ್ತು ನನ್ನ **ವ್ಯಾಖ್ಯಾನ**ದಲ್ಲಿ ಅರೂಪನಾದ ಬ್ರಹ್ಮನ ಸ್ಪಷ್ಟರೂಪವನ್ನು ತೋರಿಸು ವೆನು. ಮತ್ತು ಅದು (ಬ್ರಹ್ಮವು) ಒಂದುವೇಳೆ ಇಂದ್ರಿಯಗಳಿಗೆ ಗೋಚರವಾಗದಂತಹದೂ, ಅವುಗಳ (ಇಂದ್ರಿಯ ಗಳ) **ಆಚೆಯ** ಕಡೆಗೆ ಇದ್ದರೂ ಅದರ ಅನುಭವವು ಇಂದ್ರಿಯಗಳಿಗೆ ತಿಳಿಯುವಂತೆ ನಾನು ಮಾಡುವೆನು. ॥ ೩೬ ॥ ಶ್ರವಣಮಾಡಿರಿ. 'ಕೀರ್ತಿ, ಲಕ್ಷ್ಮೀ, ಉದಾರತನ, ಜ್ಞಾನ, ವೈರಾಗ್ಯ, ಮತ್ತು ಐಶ್ವರ್ಯ, ಈ ಆರು ಶ್ರೇಷ್ಠತನವಾದ ಗುಣಗಳಿಂದ ಮಂಡಿತನಾಗಿ ಷಡ್ಗುಣೈಶ್ವರ್ಯಸಂಪನ್ನ ಭಗವಾನನೆಂದು ಯಾವನು ಕರೆಯಲ್ಪಡುವನೋ, ಮತ್ತು ಯಾವನು ಸರ್ವಸಂಗ ಪರಿತ್ಯಾಗಿಯ ವರಮ ಮಿತ್ರನಾಗಿರುವನೋ, ಅಂತಹ ಆ ಶ್ರೀಕೃಷ್ಣನವಾತ್ಮನು ಅನ್ನುತ್ತಾನೆ. ಅರ್ಜುನನೇ ಇನ್ನು ಮೇಲೆ ನೀನು ಪೂರ್ಣ ಲಕ್ಷವನ್ನು ಕೊಡು. ॥ ೩೮ ॥

ಶ್ರೀಭಗವಾನುವಾಚ—

ಅನಾಶ್ರಿತಃ ಕರ್ಮಫಲಂ ಕಾರ್ಯಂಕರ್ಮ ಕರೋತಿ ಯಃ।
ಸ ಸಂನ್ಯಾಸೀ ಚ ಯೋಗೀ ಚ ನ ನಿರಗ್ನಿರ್ನಚಾಕ್ರಿಯಃ ॥ ೧ ॥

[ಅನಾಶ್ರಿತಃ ಕರ್ಮಫಲಮಿತಿ] ಆಯಿಕೇ ಯೋಗೀ ಆನಿ ಸನ್ಯಾಸೀ ಜನೀ । ಹೇ ಏಕಚಿ ಸಿನಾನೇ ಝುಣೀ ಮಾಸೀ । ಯೇರ್ಹವೀ ವಿಚಾರಿಜತೀ ಜವ ದೋನ್ಹೀ । ತವ ಏಕಚೀ ತೇ ॥ ೩೯ ॥ ಸಾಂಡಿಜೇ ದುಜಿಯಾ ನಾಮಾಚಾ ಆಭಾಸ । ತರೀ ಯೋಗ ತೋಚಿ ಸನ್ಯಾಸ । ಪಾಹತಾ ಬ್ರಹ್ಮಿ ನಾಹೀ ಅವಕಾಶ । ದೋಹೀವಾಜೀ ॥ ೪೦ ॥ ಜೈಸೇ ನಾಮಾಚೇನಿ ಅನಾರಿಸೇಪಣೇ । ಏಕಾ ಪುರುಷಾಕೇ ಬೋಲವಾವಣೇ । ಕಾ ದೋಸ್ತೀ ಮಾಗೀ ಜಾಣೇ । ಏಕಚಿ ತಾಯಾ ॥ ೪೧ ॥ ನಾತರೀ ಏಕಚಿ ಉದಕ ಸಹಜೇ । ಪರೀ ಸಿನಾನಾ ಫುಟೀ ಭರಿಜೇ । ತೈಸೇ ಭಿನ್ನತ್ವ ಜಾಣಿಜೇ । ಯೋಗ ಸನ್ಯಾಸಾಜೀ ॥ ೪೨ ॥ ಆಇಕೇ ಸಕಳ ಸಮತೇ ಜಗೀ । ಅರ್ಜುನಾಪಾಹೇ ತೋಚೀ ಯೋಗಿ । ಜೋ ಕರ್ಮೇಕರೂನಿರಾಗೀ । ನೋಹೇಚೀ ಫಳೇ ॥೪೩॥ ಜೈಸೀ ಮಟೀ ಹೇ ಉಗ್ಪಿಜೇ । ಜನೀ ಅಹಂಬುದ್ಧೀವೀಣ ಸಹಜೇ । ಆನಿ ತೇಥೀಂಚೀ ತಿಯೇ ಬೀಜೇ । ಅಪೇಕ್ಷೇನಾ ॥೪೪॥ ತೈಸಾ ಅನ್ವಯಾಚೇನಿ ಆಧಾರೇ । ಜಾತೀಚೇನಿ ಅನುಕಾರೆ । ಚೇ ಜೇಣೇ ಅವಸರೇ । ಕರಣೇ ಪಾವೇ ॥೪೫॥ ತೇ ತೈಸೇಂಚಿ ಉಚಿತಕರೀ । ಪರೀ ಸಾಟೋಪ ನೋಹೇ ಶರೀರೀ । ಆನಿ ಬುದ್ಧೀಹೀ ಕರೋನಿ ಫಳವೇರೀ । ಜಾಯೇಚಿನಾ ॥ ೪೬ ॥ ಇಸಾ ತೋಚಿ ಸನ್ಯಾಸೀ । ಪಾರ್ಥಾ ಗಾ ಪರಿಯೇಸೀ । ತೋಚಿ ಭರನಸೇನಿಸೀ । ಯೋಗೀಶ್ವರ ॥ ೪೭ ॥ ವಾಚೂನಿ ಉಚಿತ ಕರ್ಮ ಪ್ರಾಸಂಗಿಕ । ತಯಾತೇ ಮ್ಹಣೇ ಹೇ ಸಾಂಡಾವೇ ಬದ್ಧಕ । ತರೀ ಟಾಂಕೋ ಟಾಕೀ ಆನಿಕ ಏಕ । ಮಾಂಡೀಚಿ ತೋ ॥ ೪೮ ॥ ಜೈಸಾ ಕ್ವಾಳೂನಿಯಾ ಲೇಪ ಏಕ । ಸನೇಂಚಿ ಲಾವಿಜೇ ಆನಿಕ । ತೈಸೇ ನಿ ಆಗ್ರಹಾಚಾ ವಾಇಕ । ವಿಚಂಬೇ ವಾಯಾ ॥ ೪೯ ॥ ಗ್ರಹಸ್ಯಾಶ್ರಮಾಚೇ ವೋಸ್ಕೀ । ಕಪಾಳೀ ಆಧೀ ಚಿ ಆಹೆ ಸಹಜೇ । ಕೀ ತೇಚಿ ಸಂನ್ಯಾಸೇ ವಾಢವಿಜೇ । ಸರಿಸೇ ಪುಢತೀ ॥ ೫೦ ॥ ಮ್ಹಣೂನಿ ಅಗ್ನಿಸೇವಾ ನ ಸಾಂಡಿತಾ । ಕರ್ಮಾಚೀರೇಖಾನೋಲಾಂಡಿತಾ । ಆಹೇ ಯೋಗ ಸುಖ ಸ್ವಭಾವತಾ । ಆಪಣಪಾಂಚಿ ॥ ೫೧ ॥

ಅರ್ಥ:— ಅರ್ಜುನಾ ಕೇಳು, ಈ ಜಗತ್ತಿನಲ್ಲಿ 'ನಿಷ್ಕಾಮಕರ್ಮಯೋಗೀ ಮತ್ತು ಸಾಂಖ್ಯಯೋಗಿ' ಈ ಎರಡೂ ಒಂದೇ ಇರುತ್ತವೆ. ಇವರಿಗೆ ಒಂದು ನೇಳೆ ನೀನು ಬೇರೆ ಎಂದು ಕರೆಯಬಹುದು. ಆದರೆ ಹಾಗೆ ಮಾತ್ರ ತಿಳಿಯಬೇಡ. ಸಹಜ ವಿಚಾರಮಾಡಿ ನೋಡಿದರೆ ಈ ಎರಡೂ ಒಂದೇ ಆಗಿರುವವು. ॥ ೩೯ ॥ ಭಿನ್ನ ಭಿನ್ನವಾದ ಎರಡು ಹೆಸರಿನಿಂದ ಭಾಸವಾನವಾದ ಭೇದವನ್ನು ಬಿಟ್ಟು ಬಿಟ್ಟರೆ, ಯೋಗವೇ ಸನ್ಯಾಸವಾಗಿರುವದು, ತತ್ವತಃ ನೋಡಿದರೆ ಬ್ರಹ್ಮಸ್ವರೂಪದ ಸ್ಥಳದಲ್ಲಿ ಈ ಎರಡರಲ್ಲಿಯೂ ಅಂತರ (ಭಿನ್ನ) ವಿರುವದಿಲ್ಲ. ॥ ೪೦ ॥ ಯಾವ ಪ್ರಕಾರ ಬೇರೆ ಬೇರೆ ಹೆಸರಿನಿಂದ ಒಬ್ಬನೇ ಮನುಷ್ಯನನ್ನು ಕರೆಯುವರೋ, ಅದೇ ಪ್ರಕಾರ ಎರಡು ಬೇರೆ ಬೇರೆ ಹಾಗಿಗಳಿಂದಲೂ ಒಂದೇ (ನಿರ್ದಿಷ್ಟ) ಸ್ಥಾನಕ್ಕೆ ಮುಟ್ಟುತ್ತಾರೆ. ॥ ೪೧ ॥ ಸ್ವಭಾವತಃ ನೀರು ಒಂದೇ ಆದರೂ ಅವುಗಳನ್ನು ಬೇರೆ ಬೇರೆ ಕೊಡಗಳಲ್ಲಿ ತುಂಬುವದರಿಂದ. ಅವು ಬೇರೆ ಬೇರೆಯಾಗಿ ಹೇಗೆ ಕಾಣುವದೋ. ಹಾಗೆಯೇ ಯೋಗ ಮತ್ತು ಸನ್ಯಾಸ ಇವುಗಳಲ್ಲಿಯ ಭೇದವು ತೋರಿಕೆಗೆ ಮಾತ್ರ ಬೇರೆಯಾಗಿ ಕಾಣುವದು. ॥ ೪೨ ॥ ಅರ್ಜುನಾ ಕೇಳು, ಯಾವನು ಕರ್ಮಾಚರಣೆಯನ್ನು ಮಾಡಿ, ಅದರ ಫಲದ ವಿಷಯದಲ್ಲಿ ಆಸಕ್ತನಾಗುವದಿಲ್ಲವೋ. ಅವನೇ ಜಗನ್ಮಾನ್ಯ ಯೋಗಿಯಾಗಿರುವನು. ॥ ೪೩ ॥ ಯಾವ ಪ್ರಕಾರ ಪೃಥ್ವಿಯು ಅಹಂಕಾರವಿಲ್ಲದೇ ಸಹಜವೇ ವೃಕ್ಷ ಮುಂತಾದವುಗಳಿಗೆ ಜನ್ಮವನ್ನೀಯುತ್ತಿರುವದೋ ಮತ್ತು ಆ ವೃಕ್ಷಗಳಿಗೆ ಬರುವ ಬೀಜದ (ಫಲದ) ಅಪೇಕ್ಷೆಯನ್ನು ಮಾಡಲಾರದೋ, ॥ ೪೪ ॥ ಅದೇ ಪ್ರಕಾರ ಆತ್ಮಬೋಧದ ಆಧಾರದಿಂದ ಜಾತಿಗೆ ಅನುರೂಪವಾದಂಥ ಯಾವ ಕರ್ಮವನ್ನು

ಯಾವ ಕಾಲದಲ್ಲಿ ಮಾಡುವ ಪ್ರಸಂಗಬರುವದೋ,॥ ೪೫ ॥ ಅದನ್ನೆಲ್ಲ ಸರ್ವ ಯಥಾವಿಧಿಯಿಂದ ಮಾಡಿ, ಅವನು ತನ್ನ ಶರೀರದಲ್ಲಿ ಅಹಂಕಾರವನ್ನು ಉತ್ಪನ್ನ ಮಾಡಿಗೊಳ್ಳುವದಿಲ್ಲ. ಮತ್ತು ಬುದ್ಧಿಗೆ ಫಲವ ಆಶೆಯ ಕಡೆಗೆ ನೋಡ ಗೊಡುವದಿಲ್ಲ. ॥ ೪೬ ॥ ಪಾರ್ಥಾ ಕೇಳು. ಇಂಥ ಪುರುಷನೇ ಸನ್ಯಾಸಿಯು ಮತ್ತು ಅವನೇ ನಿಃಸಂಶಯವಾಗಿ ಯೋಗೀಶ್ವರನಾಗಿರುವನು. ॥೪೭॥ ಇದರ ಹೊರ್ತು ಯಾವನು ನಿತ್ಯ–ನೈಮಿತ್ತಿಕ ಕರ್ಮವನ್ನು ಮಾಡುವದು ಪ್ರಾಪ್ತ ವಾದರೆ ಆ ಕರ್ಮಗಳಿಗೆ ಅವನು "ಈ ಕರ್ಮಗಳು ಬಂಧನಮಾಡತಕ್ಕವು" ಎಂದು ತಿಳಿಯುವನು. ಮತ್ತು ಅವುಗಳನ್ನು ತ್ಯಾಗಮಾಡಿ ತೀವ್ರವೇ ಯಾವದಾದರೊಂದು ಎರಡನೇ ಕರ್ಮವನ್ನು ಮಾಡಲು ಪ್ರಾರಂಭಿಸುವನು. ॥ ೪೮ ॥ ಯಾವ ದಾದರೊಂದು ಲೇಪವನ್ನು ತೊಳೆದು ಬಿಟ್ಟು ಅದಕ್ಕೆ ಆಗಿಂದಾಗಲೇ ಎರಡನೇ ಲೇಪವನ್ನು ಹಚ್ಚಲು ಪ್ರಯತ್ನಮಾಡು ವಂತೆ, ಉಚಿತ ಕರ್ಮವನ್ನು ತ್ಯಾಗಮಾಡಿ ಅನ್ಯಕರ್ಮವನ್ನು ಮಾಡುವ ಆಗ್ರಹದಲ್ಲಿ ವ್ಯರ್ಥವಾಗಿ ಶ್ರಮಪಡು ತ್ತಾನೆ. ॥ ೪೯ ॥ ಗೃಹಸ್ಥಾಶ್ರಮದ ಭಾರವನ್ನು ಎಲ್ಲರ ತಲೆಯಮೇಲೆ, ಮೊದಲಿಗೇ, ಸಹಜವಾಗಿಯೇ ಹೊರಿಸಿರು ವದು. ಆದರೆ ಆ ಗೃಹಸ್ಥಾಶ್ರಮದ ಆಚರಣವು ಯಥಾರ್ಥವಾದ ವಿಧಿಯಿಂದ ಮಾಡದೇ ಸನ್ಯಾಸ ಗ್ರಹಣಮಾಡಿ ಮೊದಲಿನ ಭಾರವನ್ನು ಚಲ್ಲಿಕೊಟ್ಟು ತೀವ್ರವೇ ಎರಡನೇ ಭಾರವನ್ನು ತಲೆಯಮೇಲೆ ಹೊತ್ತುಕೊಳ್ಳುತ್ತಾನೆ. ॥ ೫೦ ॥ ಆದುದರಿಂದ ಶ್ರೌತಸ್ಮಾರ್ತ ಹೋಮ ಮುಂತಾದ ಕರ್ಮಗಳ ಯಥಾವಿಧಿಯಾದ ಆಚರಣವನ್ನು ಬಿಟ್ಟುಕೊಡದೇ, ಕರ್ಮದ ಮರ್ಯಾದೆಯನ್ನು ಉಲ್ಲಂಘನ ಮಾಡದೇ, ಜ್ಞಾನ ಯೋಗದ ಸುಖವು ತನ್ನ ಸ್ವಭದಲ್ಲಿ ಸಹಜವೇ ದೊರಕು ವದು. ॥ ೫೧ ॥

ಯಂ ಸನ್ಯಾಸಮಿತಿ ಪ್ರಾಹುರ್ಯೋಗಂ ತಂ ವಿದ್ಧಿ ಪಾಂಡವ ।
ನ ಹ್ಯಸನ್ಯಸ್ತಸಂಕಲ್ಪೋ ಯೋಗೀ ಭವತಿ ಕಶ್ಚನ ॥ ೨ ॥

[ಯಂ ಸಂನ್ಯಾಸಮಿತಿ] ಐಕೇ ಸನ್ಯಾಸೀ ತೋಚಿ ಯೋಗೀ । ಐಸೇ ಏಕವಾಕ್ಯ ತೇಚೀ ಜಗೀ । ಗುಢೀ ಉಭವಿಲೀ ಅನೇಗೀ । ಶಾಸ್ತ್ರಾಂತರೀ ॥ ೫೨ ॥ ಜೇಧ ಸಂನ್ಯಾಸಿಲಾ ಸಂಕಲ್ಪತುಟೇ । ತೇಥಚಿ ಯೋಗಾಚೇ ಸಾರಭೋಟೇ । ಐಸೇ ಹೇ ಅನುಭವಾಚೇನಿ ಧಟೇ । ಸಾಚೇಜಯಾ ॥ ೫೩ ॥

ಅರ್ಥ – ಕೇಳು, 'ಯಾವನು ಸನ್ಯಾಸಿಯೋ ಅವನೇ ಯೋಗಿಯು'. ಎಂಬುನ ಏಕವಾಕ್ಯದ ಧ್ವನಿಯು **ಅನೇಕ** ಶಾಸ್ತ್ರಗಳಿಂದ ಈ ಜಗತ್ತಿನಲ್ಲಿ ನಿಲ್ಲಿಸಲ್ಪಟ್ಟಿದೆ. ॥ ೫೨ ॥ ಯಾವ ಸ್ಥಳದಲ್ಲಿ ಬಿಟ್ಟುಕೊಟ್ಟಂಥ ಸಂಕಲ್ಪವು ಎಂಶತಃ ಇಲ್ಲದಂತಾಗಿರುತ್ತದೋ, ಅದೇ ಸ್ಥಳದಲ್ಲಿ ಯೋಗದ ಸರ್ವಸ್ವವು (ಬ್ರಹ್ಮವು) ಪ್ರಾಪ್ತವಾಗುತ್ತದೆ. ಹೀಗೆ ಅವನಿಗೆ ಅನುಭವದ ತಕ್ಕಡಿಯಿಂದ ನಿಜವೆಂದು ನಂಬುಗೆಯಾಗಿರುವದು. (ಅವನೇ ಸನ್ಯಾಸಿ, ಅವನೇ ಯೋಗಿ ಯಾಗಿರುವನು.) ॥ ೫೩ ॥

ಆರುರುಕ್ಷೋರ್ಮುನೇರ್ಯೋಗಂ ಕರ್ಮ ಕಾರಣಮುಚ್ಯತೇ ।
ಯೋಗಾರೂಢಸ್ಯ ತಸ್ಯೈವ ಶಮಃ ಕಾರಣಮುಚ್ಯತೇ ॥ ೩ ॥

[ಆರುರುಕ್ಷೋರ್ಮುನೇರ್ಯೋಗಮಿತಿ] ಆತಾ ಯೋಗಾಚಳಾಚಾ ನಿಮಥಾ । ಜರೀ ಠಾಕಾವಾ ಆಥಿ ಪಾರ್ಥಾ । ತರೀ ಸೋಪಾನಾ ಯಾ ಕರ್ಮ ಪಥಾ । ಚುಕಸೀ ಝುಣೀ ॥ ೫೪ ॥ ಯೇಣೇ ಯಮ ನಿಯಮಾಚೇನಿ ತಳವಟೇ । ರಿಗೇ ಆಸನಾಚಿಯೇ ಪಾವುಲವಾಟೇ । ಯೇ ಈ ಪ್ರಾಣಾಯಾಮಾಚೇನಿ ಆಡಕಾಠೇ । ವರೌತಾ ಗಾ ॥ ೫೫ ॥ ಮಗ ಪ್ರತ್ಯಾಹಾರಾಚಾ ಅಧಾಡಾ । ಜೋಬುದ್ಧೀಚಿಯಾಹಿಪಾಯಾ ನಿಸರಡಾ । ಜೇಥ ಹಟಯೇ ಸಾಂಡಿತೀ ಹೋಡಾ । ಕಡೇಲಗ ॥೫೬॥ ತರೀ ಅಭ್ಯಾಸಾಚೇನಿ ಬಳೇ । ಪ್ರತ್ಯಾಹಾರೀ ನಿರಾಳೇ । ನಖೀ ಲಾಗೇಲ ಧಾಳೇ ಧಾಳೇ । ವೈರಾಗ್ಯಾಚೀ ॥೫೭॥ ಐಸಾ ಪವನಾಚೇನಿ ಪಾಠಾರೇ । ಯೇತಾ ಧಾರಣೇಚೇನಿ ಪೈಸಾರೇ । ಕ್ರಮೀ ಧ್ಯಾನಾಚೀ

ಚವರೇ । ಸಾಂಪಡೇ ತವ ॥ ೫೮ ॥ ಮಗ ತಯಾ ಮಾರ್ಗಾಚೀ ಧಾವ । ಪುರೇಲ ಪ್ರವೃತ್ತೀಚೀ ಹಾವ । ಜೇಥ ಸಾಧ್ಯಸಾಧನಾ ಖೇವ । ಸಮರಸೇ ಹೋಯ ॥ ೫೯ ॥ ಜೇಥ ಪುಢೀಲ ಪೈಸ ಪಾರುಖೇ । ಮಾಗೀಲ ಸ್ಮರಾವೇ ತೇ ಠಾಕೇ । ಐಸಿಯೇ ಸರಿಸೀಯೇ ಭೂಮಿಕೇ । ಸಮಾಧಿರಾಹೋ ॥ ೬೦ ॥ ಯೇಣೇ ಉಪಾಯೇ ಯೋಗಾರೂಢ । ಜೋ ನಿರವಧಿ ಜಾಹಾಲಾ ಪ್ರೌಢ । ತಯಾಚಿಯಾ ಚಿನ್ಹಾಚಾ ನಿವಾಡ । ಸಾಂಗೇನ ಆ ಇಕೇ ॥ ೬೧ ॥

ಅರ್ಥ— ಪಾರ್ಥ, ಈಗ ಯೋಗರೂಪೀ ಪರ್ವತದ ಶಿಖರವನ್ನು ಯಾವನಿಗೆ ಹೋಗಿ ಮುಟ್ಟಬೇಕಾಗಿರುವದೋ, ಅವನು ಈ ಕರ್ಮಮಾರ್ಗರೂಪೀ ಸುಲಭ ಮೆಟ್ಟಿಲುಗಳಿಂದ ಹತ್ತಲಿಕ್ಕೆ ಮುರಿಯಬಾರದು. (ಕರ್ಮ ಮಾರ್ಗವನ್ನು ಆಚರಿಸದೇ ಇರಕೂಡದು.) ॥ ೫೪ ॥ ಈ ಕರ್ಮಮಾರ್ಗದಿಂದ ಹೋಗಲಿಕ್ಕೆ ಹತ್ತಿದರೆ ಮೊದಲಿಗೆ ಈ ಪರ್ವತದ ಯಮ-ನಿಯನುರೂಪೀ ತಳವು ಹತ್ತುತ್ತದೆ. ಆ ಮೇಲೆ ಯೋಗದಲ್ಲಿಯ ಅನೇಕವಿಧ ಆಸನದ ಕಾಲುದಾರಿಯಿಂದ ಪ್ರಾಣಾಯಾಮರೂಪವಾದಂಥ (ಅಷ್ಟಾಂಗಯೋಗದೊಳಗಿನ ನಾಲ್ಕನೇ ಅಂಗದಿಂದ) ಅಡ್ಡಹಾದಿಯಿಂದ ಮೇಲೆ ಹೋಗಬೇಕಾಗುತ್ತದೆ. ॥ ೫೫ ॥ ಆ ಮೇಲೆ ಪ್ರತ್ಯಾಹಾರ (ವಿಷಯದಿಂದ ಇಂದ್ರಿಯಗಳನ್ನು ಹಿಂದಕ್ಕೆ ತಿರುಗಿಸೋಣ) ವೆಂಬ ಅರ್ಧ ಕತ್ತರಿಸಿಹೋದಂಥ ದಂಡೆಯು ಹತ್ತುತ್ತದೆ. ಅದರ ಮೇಲಿಂದ ನಡೆಯಲಿಕ್ಕೆ ಬುದ್ಧಿಯ ಕಾಲುಗಳು ಸಹ ಜಾರುತ್ತವೆ. ಆ ಮಾರ್ಗವನ್ನು ದಾಟಿಹೋಗುವಾಗ ಹಟಯೋಗಿಗಳ ಪ್ರತಿಜ್ಞೆಯು ಸಹ ಕೊನೆಗಾಣುವದಿಲ್ಲ. ॥ ೫೬ ॥ ಆದರೂ ಅಭ್ಯಾಸದ ಬಲದಿಂದ ಪ್ರತ್ಯಾಹಾರ ರೂಪವಾದ ಶೂನ್ಯದಂಥ ಕಠಿಣ ಮಾರ್ಗದಲ್ಲಿ ಏರಿ ಹೋಗಲು ವೈರಾಗ್ಯವೊಂದೇ ಸಮರ್ಥವುಳ್ಳದ್ದಾಗಿರುವದು. ॥ ೫೭ ॥ ಈ ನೋಟಿಗೆ 'ಪ್ರಾಣ ನುತ್ತು ಅಪಾನ' ವಾಯುರೂಪ ಕುದುರೆಯ ಮೇಲೆ ಕುಳಿತು ಮಾರ್ಗಕ್ರಮಣ ಮಾಡುತ್ತಿರಲಿಕ್ಕಾಗಿ ಚಿತ್ತಸ್ಥಿರ ಮಾಡುವಂಥ ಪ್ರಶಸ್ತವಾದ ಮಾರ್ಗವೊಂದು ಹತ್ತುವದು. ಅಲ್ಲಿಂದ ಮುಂದಿರುವ ಧ್ಯಾನರೂಪೀ ಶಿಖರವನ್ನು ಕೂಡಾ ದಾಟಲು ಬರುವದು. ॥ ೫೮ ॥ ಆನೇಲೆ ಯಾವ ಸ್ಥಳದಲ್ಲಿ ಸಾಧ್ಯ ಮತ್ತು ಸಾಧನಗಳು ಒಂದೇ ಆಗುತ್ತವೆಯೋ, ಆ ಸ್ಥಳದಲ್ಲಿ ಮಾರ್ಗದ ಧಾವನೆಯೂ ಪ್ರಕೃತಿಯ ಹವ್ಯಾಸವೂ ಮುಗಿಯುತ್ತದೆ. ॥ ೫೯ ॥ ಯಾವ ಸ್ಥಳದಲ್ಲಿ ಮುಂದಡಿಯನ್ನು ಇಡಲು ಸಾಧ್ಯವಾಗುವದಿಲ್ಲವೋ, ಮತ್ತು ಹಿಂದಿನ ಸ್ಮರಣೆಯೂ ಉಳಿಯುವದಿಲ್ಲವೋ ಇಂಥ ಆ ಐಕ್ಯರೂಪೀ ಸಮಾನ ಭೂಮಿಕೆಯ ಸಮಾಧಿಯ ಮೇಲೆ ಅವನು ಇರುತ್ತಾನೆ. ॥೬೦॥ ಈ ಉಪಾಯದಿಂದ ಯಾವ ಯೋಗಿಯು ನಿಷ್ಣಾತನೂ, ಅಖಂಡ ಪರಿಪೂರ್ಣನಾಗಿರುವನೋ ಅವನ ಚಿನ್ಹಗಳನ್ನು ನಿನಗೆ ಸ್ಪಷ್ಟರೀತಿಯಿಂದ ಹೇಳುತ್ತೇನೆ ಕೇಳು. ॥೬೧॥

ಯದಾ ಹಿ ನೇಂದ್ರಿಯಾರ್ಥೇಷು ನ ಕರ್ಮ ಸ್ವನುಷಜ್ಜತೇ ।
ಸರ್ವಸಂಕಲ್ಪಸನ್ಯಾಸೀ ಯೋಗಾರೂಢಸ್ತದೋಚ್ಯತೇ ॥ ೪ ॥

[ಯಾದಾಹೀತಿ] ತರೀ ಜಯಾಚಿಯಾ ಇಂದ್ರಿಯಾಂಚಿಯಾ ಘಟಾ । ನಾಹೀ ವಿಷಯಾಂಚಿಯಾ ಯೇರ ಝಾರಾ । ಜೋ ಆತ್ಮಬೋಧಾಚ್ಯಾ ವೋನವಾ । ಪಹುಡಲಾ ಅನೇ ॥ ೬೨ ॥ ಜಯಾಚೇ ಸುಖದುಃಖಾಚೇನಿ ಆಂಗೇ । ಝುಗಟಲೇ ಮಾನಸ ಚೇಪೋ ನೇಘೇ. । ವಿಷಯ ಪಾಸೀಹೀ ಆಲಿಯಾ ಸೇ ನ ರಿಘೇ । ಹೇ ಕಾಯ ಪ್ಯಾಣವೂನಿ ॥ ೬೩ ॥ ಇಂದ್ರಿಯೇ ಕರ್ಮಾಚ್ಯಾ ಠಾಯೀ । ವಾಢೀನಲೀ ಪರೀ ಕಹೀ । ಫಳ ಹೇತೂಚೀ ಚಾಡ ನಾಹೀ । ಐಂತಃಕರಣೀ ॥೬೪॥ ಅಸತೇನಿ ದೇಹೇ ವಿತುಲಾ । ಜೋ ಚೇತುಚಿ ದಿಸೇ ನಿದೇಲಾ । ತೋಚಿ ಯೋಗಾರೂಢ ಭಲಾ । ಪೋಳಖೇ ತೂ ॥೬೫॥ ತೇಥ ಅರ್ಜುನ ಪ್ಯಹಣೇ ಅನಂತಾ! ಹೇ ಮಜ ವಿಸ್ಮೂ ಬಹು ಆಇಕತಾ । ಸಾಂಗೇ ತಯಾ ಐಸೀ ಯೋಗ್ಯತಾ । ಕವಣೇ ದೀಜೇ ॥೬೬॥

ಅರ್ಥ— ಯಾವನ ಇಂದ್ರಿಯರೂಪೀ ಮಂದಿರದಲ್ಲಿ ವಿಷಯದ ಬರು-ಹೋಗುವ ವ್ಯವಹಾರವು ನಿಂತು ಹೋಗಿರುವದೋ, ಮತ್ತು ಯಾವನು ಆತ್ಮಜ್ಞಾನ ರೂಪೀ ವಿಶ್ರಾಂತಿ ಗೃಹದಲ್ಲಿ ಸ್ವಸ್ಥವಾಗಿ ಮಲಗಿರುವನೋ, ॥ ೬೨ ॥

ಯಾವನ ಮನಸ್ಸು ಸುಖ-ದುಃಖಗಳ ಹೊಡೆತದಿಂದ ಎಚ್ಚರಗೊಳ್ಳುವುದಿಲ್ಲವೋ, ವಿಷಯವು ಅತಿ ನಿಕಟವಾಗಿದ್ದರೂ ಅವೇನೆಂಬುವುದರ ಅರಿವೂ ಯಾವನಿಗೆ ಆಗುವುದಿಲ್ಲವೋ, ॥ ೬೩ ॥ ಇಂದ್ರಿಯಗಳು ಕರ್ಮಗಳನ್ನು ಮಾಡುತ್ತಿದ್ದರೂ ಯಾವನ ಹೃದಯದಲ್ಲಿ ಫಲಾಪೇಕ್ಷೆಯು ಎಂದಿಗೂ ಉತ್ಪನ್ನವಾಗುವುದಿಲ್ಲವೋ, ॥ ೬೪ ॥ ಮತ್ತು ಹೀಗೆ ದೇಹ ವ್ಯಾಪಾರವು ನಡೆದಿದ್ದರೂ ಯಾವನು ನಿದ್ರೆಯಲ್ಲಿಯ ಸ್ಥಿತಿಯಂತೆ ಉದಾಸೀನನಾಗಿ ತೋರುವನೋ ಅವನಿಗೇನೇ ನಿಜವಾದ ಯೋಗವು ಸಾಧ್ಯವಾಗಿರುವುದೆಂದು ತಿಳಿ. ॥ ೬೫ ॥ ಈ ಮೇರೆಗೆ, ಯೋಗಿಗಳ ಸ್ಥಿತಿಯನ್ನು ಕೇಳಿ, ಭಗವಾನ್ ಶ್ರೀ ಕೃಷ್ಣನನ್ನು ಕುರಿತು ಅರ್ಜುನನು ಅನ್ನುತ್ತಾನೆ- ಹೇ ಅನಂತಾ ! ನೀವು ಏನು ಹೇಳುತ್ತೀರಿ, ಅದನ್ನು ಕೇಳಿ ಆಶ್ಚರ್ಯವೆನಿಸುತ್ತದೆ. ಆದರೆ ಆ ಯೋಗಿಗೆ ಇಂತಹ ಯೋಗ್ಯತೆಯನ್ನು ಯಾರು ಕೊಡುವರು ಎಂಬುದನ್ನು ನನಗೆ ಹೇಳಬೇಕು. ॥ ೬೬ ॥

ಉದ್ಧರೇದಾತ್ಮನಾತ್ಮಾನಂ ನಾತ್ಮಾನಮವಸಾದಯೇತ್ ।
ಆತ್ಮೈವ ಹ್ಯಾತ್ಮನೋ ಬಂಧುರಾತ್ಮೈವ ರಿಪುರಾತ್ಮನಃ ॥ ೫ ॥

[ಉದ್ಧರೇದಿತಿ] ತವ ಹಾಸೋನಿ ಕೃಷ್ಣ ವ್ಹಣೇ। ತುಪ್ಪು ನವಲ ನಾಹೇ ಬೋಲಣೇ । ಕವಣಾಸಿ ಕಾಯದಿಜೇಲ ಕವಣೇ । ಅವ್ಹೈತೀ ಏಥ ॥ ೬೭ ॥ ಪೈ ವ್ಯಾಮೋಹಾಚಿಯೇ ತೇಜೀ । ಬಳಿಯಾ ಅವಿದ್ಯಾ ನಿದ್ರಿತ ಹೋ ಇಜೇ । ತೇ ವೇಳೀ ದುಃಸ್ವಪ್ನಹಾ ಭೋಗಿಜೇ। ಜನ್ಮ-ಮೃತ್ಯೂಂಚಾ॥೬೮॥ ಪಾಠೀ ಅವಸಾಂತ ಯೇ ಚೇವ್ಹೋ। ತೈತೇ ಅವಘೇಚಿ ಹೋಯವಾವ್ಹೋ। ಐಸಾ ಉಪಜೇ ನಿತ್ಯ ಸದ್ಭಾವ್ಹೋ । ತೋಹೀ ಆಪಣಪಾಂಚಿ ॥ ೬೯ ॥ ವ್ಹಣೂನಿ ಆಪಣಾಚಿ ಆಪಣಯಾ । ಘಾತ ಕಿಜತ ಅಸೇ ಧನಂ ಜಯಾ । ಚಿತ್ತ ದೇವೂನಿ ನಾಥಿಲಯಾ । ದೇಹಾಭಿಮಾನಾ ॥ ೭೦ ॥

ಅರ್ಥ— ಆಗ್ಗೆ ಶ್ರೀಕೃಷ್ಣನು ನಗುಮೊಗದಿಂದ ನುಡಿಯುತ್ತಾನೆ- ನಿನ್ನ ಮಾತುಗಳು ನನಗೆ ಆಶ್ಚರ್ಯವನ್ನುಂಟು ಮಾಡುತ್ತವೆ. ಈ ಅದ್ವೈತ ಸ್ಥಿತಿಯಲ್ಲಿ ಯಾರಿಗೆ ಯಾರು ಏನನ್ನು ಕೊಡಬೇಕಾಗಿದೆ ? ॥ ೬೭ ॥ ಮನುಷ್ಯನು ಅವಿನೇಕರೂಪೀ ಹಾಸಿಗೆಯಮೇಲೆ ಪ್ರಬಲವಾದ ಅವಿದ್ಯೆಯ ಯೋಗದಿಂದ ಯಾವಾಗ (ಜೀವವು) ಮಲಗಿರುತ್ತಾನೋ, ಆವಾಗ ಜನನ-ಮರಣ ರೂಪೀ ದುಃಸ್ವಪ್ನವನ್ನು ಅವನು ಭೋಗಿಸುತ್ತಾನೆ. ॥ ೬೮ ॥ ಅಕಸ್ಮಾತ್ ಜಾಗ್ರತವಾಗುತ್ತಾನೆ. ಆವಾಗ ಆ ಸ್ವಪ್ನ ಮುಂತಾದವೆಲ್ಲವೂ ವ್ಯರ್ಥವಾಗುತ್ತವೆ. ಈ ಪ್ರಕಾರ ತಮ್ಮ ಅಸ್ತಿತ್ವದ ಯಾವ ಪ್ರತೀತಿಯು ಬರುತ್ತದೆ, ಅದಾದರೂ ತನ್ನ ಸ್ವಗಳದಲ್ಲಿಯೇ ತನ್ನಲ್ಲಿಯೇ ಬರುತ್ತದೆ. ॥ ೬೯ ॥ ಆದುದರಿಂದ ಅರ್ಜುನಾ ! ನಾಶವಂತ ದೇಹಾಭಿಮಾನವನ್ನು ಹಿಡಿದು (ದೇಹವೇ ನಾನೆಂಬ ಅಭಿಮಾನದಿಂದ) ಮನುಷ್ಯನು ತಾನೇ ತನ್ನ ಘಾತವನ್ನು ಮಾಡಿಕೊಳ್ಳಲು ಪ್ರವೃತ್ತನಾಗುತ್ತಾನೆ. ॥ ೭೦ ॥

ಬಂಧುರಾತ್ಮಾತ್ಮನಸ್ತಸ್ಯ ಯೇನಾತ್ಮೈವಾತ್ಮನಾಜಿತಃ ।
ಅನಾತ್ಮನಸ್ತು ಶತ್ರುತ್ವೇ ವರ್ತೇತಾತ್ಮೈವ ಶತ್ರುವತ್ ॥ ೬ ॥

[ಬಂಧುರಾತ್ಮೆತಿ] ಹಾ ವಿಚಾರೂನಿ ಅಹಂಕಾರ ಸಾಂಡಿಜೇ । ಮಗ ಅಸತೀಚ ವಸ್ತು ಹೋ ಇಜೇ । ತರೀ ಆಪಲೀ ಸ್ವಪ್ನಿ ಸಹಜೇ । ಆಪಣ ಕೇಲೀ ॥೭೧॥ ಯೇರ್ಹವೀ ಕೋಶ ಕೀಟಕಾ ಚಿಯಾಪರೀ । ತೋ ಆಪಣಯಾ ಆಪಣ ವೈರೀ । ಜೋ ಆತ್ಮ ಬುದ್ಧಿ ಶರೀರೀ । ಚಾರುಸ್ಥಳೀ ॥೭೨॥ ಕೈಸೇ ಪ್ರಾಪ್ತೀಚಿಯೇ ವೇಳೇ। ನಿದ್ರೆವಾ ಆಂಧಳೇ ವಣಾಚೇ ಡೋಹಳೇ । ಕೇ ಅಸತೇ ಆಪುಲೇ ಡೋಳೇ। ಆಪಣ ಝಾಂಕೀ ॥೭೩ ॥ ಕಾ ಕವಣ ಏಕ ಭ್ರಮಲೇ ಪಣೇ । ಮೀ ತೋ ನವ್ಹೇ ಗಾ ಚೋರಲೋ ವ್ಹಣೇ । ಐಸಾ ನಾಥಿಲಾಭಂದ ಅಂತಃಕರಣೇ । ಘೇವೂನ ಠಾಕೇ ॥೭೪॥ ಯೇರವೀ ಹೋಯತೇ ತೋಚಿ ಆಹೇ । ವರೀ ಕಾಯೀ ಕೀಜೇ ಬುದ್ಧೀ ತೈಸೀ ನೋಹೇ । ದೆಖಾ ಸ್ವಪ್ನೀಂಚೇನೀ ಘಾಯೇ ।

ಕೀಮುರೇ ಸಾಚೇ ॥೭೫॥ ಜೈಸೀ ತೇ ಶುಕಾಚೇನಿ ಆಂಗ ಭಾರೇ । ನಳಿಕಾ ಭೋವಿನ್ನಲೀ ಏರಿ ಮೋಹರೇ । ತರೀ ತೇಣೇ ಉಡಾವೇ ಪರೀ ನ ಪುರೇ । ಮನ ಶಂಕಾ ॥ ೭೬ ॥ ವಾಯಾಂಚಿ ಮಾನ ಪಿಳೇ । ಆಟುವೇ ಹಿಯೇ ಆವಳೇ । ಓಟಾಂತು ನಳೀ । ಧರೂನಿ ಠಾಕೇ ॥ ೭೭ ॥ ಮ್ಹಣೇ ಬಾಂಧಲಾ ಮೀ ಪುಡಾ । ಐಸಿಯಾ ಭಾವನೇಚಿಯಾ ಪಡೇ ಖೋಡಾ । ಕೀ ಮೋಕಳಿಯಾ ಪಾಯಾಂಚಾ ಚವಡಾ । ಗೋವೀ ಅಧಿಕೇ ॥ ೭೮ ॥ ಐಸಾ ಕಾಜೇಪೀಣ ಆ ತುಡಲಾ । ತೋ ಸಾಂಗ ಪಾ ಕಾಯ ಆಣಿಕೇ ಬಾಂಧಲಾ । ಮಗ ನ ಸೋಡೀಚ ಜಡ್ಡೀ ನೇಲಾ । ತೋಡೂನಿ ಅರ್ಧಾ ॥ ೭೯ ॥ ಮ್ಹಣವೂನಿ ಆಪಣಯಾ ಆಪಣಚಿ ರಿವು । ಜೇಣೇ ವಾಢವಿಲಾ ಪಾ ಸಂಕಲ್ಪು । ಯೇರ ಸ್ವಯಂಬುದ್ಧೀ ಮ್ಹಣೇ ಬಾಪು । ಜೋ ನಾಧಿಲೀ ನೇಫೇ ॥ಲಂ॥

ಅರ್ಥ— ವಿಚಾರಮಾಡಿ ಈ ಅಹಂಕಾರವನ್ನು ಬಿಡಬೇಕು. ಮತ್ತು ಆಮೇಲೆ ಇದ್ದಂಥ ತನ್ನ ಸ್ವರೂಪವನ್ನು ಗುರ್ತಿಸಿ ಬ್ರಹ್ಮರೂಪವಾಗಬೇಕು ಅಂದರೆ ಸಹಜವೇ ತಮ್ಮ ಕಲ್ಯಾಣವನ್ನು ಮಾಡಿಕೊಂಡಂತಾಗುತ್ತದೆ ॥ ೭೧ ॥ ಇಲ್ಲದೇ ಇದ್ದರೆ ಯಾವನು ಸುಶೋಭಿತವಾದ ಶರೀರವೇ ನಾನು ಇದ್ದೇನೆಂಬುವನ್ನು ತನ್ನ ಬುದ್ಧಿಯಿಂದ ತಿಳಿದು (ಶರೀರದ ಸ್ಥಳದಲ್ಲಿ ಲುಬ್ಧನಾಗಿ) ಆತ್ಮ ಸ್ವರೂಪವನ್ನು ಮರೆತು ಬಿಡುತ್ತಾನೆ, ಅವನು **ಕೋಶಕಾರ** ಎಂಬ ಹುಳದಂತೆ ತಾನೇ ತನ್ನ ವೈರಿಯಾಗುತ್ತಾನೆ. ॥ ೭೨ ॥ ಅನಾಯಾಸವಾಗಿ ಭಾಗ್ಯ (ಲಾಭ) ಪ್ರಾಪ್ತ ವಾಗುವ ಸುಸಂಧಿಯು ದೊರೆತರೂ, ದೈವಹೀನ ಮನುಷ್ಯನಿಗೆ ಕುರುಡನಾಗಬೇಕೆಂಬ ಬಯಕೆಯು ಹುಟ್ಟಿ, ಸಹಜವಾಗಿಯೇ ಪ್ರಾಪ್ತವಾಗತಕ್ಕ ವಸ್ತುಲಾಭನನ್ನು ಕಳೆದುಕೊಳ್ಳುತ್ತಾನೆ. ॥ ೭೩ ॥ ಇಲ್ಲವೇ ಯಾವನಾದರೂ ಒಬ್ಬ ಮನುಷ್ಯನು ಭ್ರಮಿಷ್ಟನಾದುದರಿಂದ ತನ್ನನ್ನೇ ಮರೆತು ತಾನೇ ಕವಿಯಲ್ಪಟ್ಟಿರುವೆನೆಂಬ ಅಸತ್ಯ ಭಾವದಿಂದ ಅಂತಃಕರಣದಲ್ಲಿ ಕಳವಳಗೊಳ್ಳುತ್ತಿರುತ್ತಾನೆ. ॥ ೭೪ ॥ ಈ ಭ್ರಮದ ಭ್ರಾಂತಿಯನ್ನು ಬಿಟ್ಟು ನಿಜವಾಗಿ ವಿಚಾರಮಾಡಿ ನೋಡಲು, ತಾನೇ ಬ್ರಹ್ಮಸ್ವರೂಪನಾಗಿರುವೆನೆಂದು ಅರಿವಾಗುತ್ತದೆ. ಆದರೆ ಏನು ಮಾಡಿದರೂ ಅವನ ಬುದ್ಧಿಗೆ ನಾನು ಬ್ರಹ್ಮಸ್ವರೂಪನಾಗಿರುವೆನೆಂಬ ಅರಿವು ಉಂಟಾಗುವುದೇ ಇಲ್ಲ. ಆದುದರಿಂದ ತಾನು ದುಃಖಿಯೆಂಬ ಭ್ರಮೆಯಿಂದ ದುಃಖಿಸುತ್ತಾನೆ. ಆವಾಗಲಾದರೂ ಅವನ ಬ್ರಹ್ಮಸ್ವರೂಪವು ನಾಶಹೊಂದಿರುವದಿಲ್ಲ. ನೋಡು, ಕನಸಿನಲ್ಲಿಯ ಕತ್ತಿಯ ಹೊಡೆತದಿಂದ ಯಾವನಾದರೂ ನಿಜವಾಗಿ ಸಾಯಬಲ್ಲನೇ ? ॥೭೫॥ ಗಿಳಿಯನ್ನು ಹಿಡಿಯು ವದರ ದೆಸೆಯಿಂದ ಮಾಡಿದ "ನಳಿಕಾಯಂತ್ರದ ಮೇಲೆ" ಅದು ಕುಳಿತರೆ, ಆ ಗಿಳಿಯ ಭಾರದಿಂದ ಆ ಯಂತ್ರವು ವಿರುದ್ಧದೆಸೆಗೆ ತಿರುಗುತ್ತದೆ. ಆವಾಗ ಆ ಪಕ್ಷಿಯು ಹಾರಿಹೋಗಲು ಶಕ್ತಿಯುಳ್ಳದ್ದಾಗಿದ್ದರೂ, ನಳಿಯನ್ನು ಬಿಟ್ಟರೆ ತಾನೆಲ್ಲಿ ಕೆಳಗೆ ಬಿದ್ದು ಸಾಯುವೆನೋ ಎಂಬ ಭ್ರಮೆಯ ಭಯದಿಂದ ಗಟ್ಟಿಯಾಗಿ ಆ ನಳಿಯನ್ನು ಹಿಡಿದು ಮನದಲ್ಲಿ ಕಳವಳಗುಟ್ಟುತ್ತಿರುತ್ತದೆ. ॥ ೭೬ ॥ ವ್ಯರ್ಥವಾಗಿ ಅದು ತನ್ನ ತಲೆಯನ್ನು ಅಲುಗಾಡಿಸುತ್ತಿರುತ್ತದೆ. ಮತ್ತು ಆ ನಳಿಯನ್ನು ತನ್ನ ಚುಂಚಿನಿಂದ, ಗಟ್ಟಿಯಾಗಿ ಹಿಡಿದು ಎದೆಯಿಂದ ಅವಚಿಕೊಂಡು ಕಿರಿಚುತ್ತಿದೆ. ಮತ್ತು ಅನ್ನುವದೇನೆಂದರೆ, ॥ ೭೭ ॥ ನಾನು ನಿಜವಾಗಿ ಬಂಧನದಲ್ಲಿ ಶಿಲುಕಿ ಬಿದ್ದಿರುತ್ತೇನೆ. ಎಂಬ ಇದೇ ಭಾವನೆಯಿಂದ ಅದು ಪಾಶದಲ್ಲಿ ಶಿಕ್ಕುಬೀಳುತ್ತದೆ. ಮತ್ತು ತೆರುವಿದ್ದ ತನ್ನ ಕಾಲುಗಳಿಂದ ಗಟ್ಟಿಯಾಗಿ ಮತ್ತೆ ಮತ್ತೆ ಹಿಡಿಯುತ್ತದೆ. ॥ ೭೮ ॥ ಇಂಥ ಸ್ಥಿತಿಯಲ್ಲಿ ಅದನ್ನು ಅರ್ಥ ಕತ್ತರಿಸಿ ತೆಗೆದುಕೊಂಡು ಹೋದರೂ ಆ ಗಿಳಿಯು ಆ ನಳಿಯನ್ನು ಬಿಡುವದಿಲ್ಲ. ಹೀಗೆ ಅದು ನಿರರ್ಥಕವಾಗಿ ಬಂಧನದಲ್ಲಿ ಶಿಗುವದು. ಆದಕ್ಕೆ ಯಾರಾದರೂ ಕಟ್ಟಿರುವರೋ ಹೇಗೆ ಹೇಳು ನೋಡುವಾ ? ॥ ೭೯ ॥ ಆದುದರಿಂದ ಯಾವನು ಮನಸಿನಲ್ಲಿ ಸಂಕಲ್ಪವನ್ನು ವಿಶೇಷವಾಗಿ ಬೆಳಿಸಿರುತ್ತಾನೋ ಅವನು ತಾನೇ ತನ್ನ ಶತ್ರುವಾಗುತ್ತಾನೆ. ಅಂದರೆ ಯಾವ ಪುರುಷನು ವ್ಯರ್ಥವಾದ ಅಭಿಮಾನವನ್ನು ಧರಿಸಿರುವದಿಲ್ಲವೋ ಅವನು ಆತ್ಮಜ್ಞಾನಿಯಾಗಿರುತ್ತಾನೆ. ॥ ಲಂ ॥

ಜಿತಾತ್ಮನಃ ಪ್ರಶಾಂತಸ್ಯ ಪರಮಾತ್ಮಾ ಸಮಾಹಿತಃ ।
ಶೀತೋಷ್ಣಸುಖದುಃಖೇಷು ತಥಾ ಮಾನಾಪಮಾನಯೋಃ ॥ ೭ ॥

[ಜಿತಾತ್ಮನ ಇತಿ] ತಯಾ ಸ್ವಾಂತಃಕರಣಜಿತಾ । ಸಕಳಕಾನೋಪಶಾಂತಾ । ಪರಮಾತ್ಮಾ ಪರಂತಾ । ದೂರ ನಾಹೀ ॥ ೪೧ ॥ ಜೈಸಾ ಕಿಡಾಳಾಚಾ ದೋಷ ಜಾಯೀ । ತರೀ ಪಂಧರೀ ತೇಂಚಿ ಹೋಯೇ । ತೈಸೇ ಜೀವಾ ಬ್ರಹ್ಮತ್ವ ಆಹೇ । ಸಂಕಲ್ಪಲೋಪೀ ॥ ೪೨ ॥ ಹಾ ಘಟಾಕಾರ ಜೈಸಾ । ನಿಮಾಲಿಯಾ ತಯಾ ಅವಕಾಶಾ । ನ ಲಗೇ ಮಿಳೋ ಜಾಣೇ ಆಕಾಶಾ । ಅನಾರಾಯಾ ॥ ೪೩ ॥ ತೈಸಾ ದೇಹಾಹಂಕಾರ ನಾಥಿಲಾ । ಹಾ ಸಮೂಳ ಜಯಾಚಾ ನಾಶಿಲಾ । ತೋಚಿ ಪರಮಾತ್ಮಾ ಸಂಚಲಾ । ಆಧೀಚಿ ಆಹೇ ॥ ೪೪ ॥ ಆತಾ ಶೀತೋಷ್ಣಾಂಚಿಯಾ ವಾಹಣೇ । ತೇಥ ಸುಖದುಃಖಾಚೀ ಕಡಸಣೇ । ಇಯೇ ನ ಸಮಾತೀ ಕಾಂಹೀ ಬೋಲಣೀ । ಮಾನಾಪಮಾನಾಚೀ ॥ ೪೫ ॥ ಜೇ ಜಿಯೇ ವಾಟಾ ಸೂರ್ಯ ಜಾಯೇ । ತೇವುತೇ ತೇಜಾಚೇ ವಿಶ್ವ ಹೋಯೇ । ತೈಸೇ ತಯಾ ಪಾವೇ ತೇ ಆಹೇ । ತೋಚಿ ಮ್ಹಣವ್ಹಾನಿ ॥ ೪೬ ॥ ದೇಖೇ ಮೆಘಾನಿ ಸುಟತೀ ಧಾರಾ ತಿಯಾ । ನ ರೂಪತೀ ಜೈಸಿಯಾ ಸಾಗರಾ । ತೈಸೀ ಶುಭಾ ಶುಭೇ ಯೋಗೀಶ್ವರಾ । ನವ್ಹತೀ ಆನೇ ॥ ೪೭ ॥

ಅರ್ಥ— ಯಾವನು ತನ್ನ ಮನಸ್ಸನ್ನು ಜಯಿಸಿರುವನೋ ಮತ್ತು ಯಾವನ ಸರ್ವವಾಸನೆಯು ಶಾಂತವಾಗಿರುವದೋ, ಅವನಿಗೆ ಅನ್ಯರ ಹಾಗೆ ಪರಮೇಶ್ವರನು ದೂರವಾಗಿರುವದಿಲ್ಲ. ॥ ೪೧ ॥ ಯಾವ ಪ್ರಕಾರ ಹೀನ ಬಂಗಾರದಲ್ಲಿ ಕೂಡಿದ ನೀಚ ಧಾತುವಿನ ದೋಷವು ಹೊರಟುಹೋದ ಮೇಲೆ ಅದೇ ಬಂಗಾರವು (ನೂರು ನಂಬರಿನ) ಶುದ್ಧ ಸುವರ್ಣವಾಗಿ ಪರಿಣಮಿಸುತ್ತದೋ ಅದೇ ಪ್ರಕಾರ ಅಹಂಕಾರವು ನಿರ್ಮೂಲವಾದನಂತರ, ಜೀವಕ್ಕೆ ಬ್ರಹ್ಮತ್ವವು ಪ್ರಾಪ್ತವಾಗುತ್ತದೆ. ॥ ೪೨ ॥ ಕೊಡವು ನಾಶವಾಗಿ ಹೋದರೂ, ಕೊಡದಲ್ಲಿಯ ಆಕಾಶವು ಅವಕಾಶವಿಲ್ಲದೇ ಸಹಜವೇ ಮಹದಾಕಾಶವನ್ನು ಸೇರುತ್ತದೆ. ಅದಕ್ಕೆ ಅನ್ಯಸ್ಥಳದಲ್ಲಿ ಹೋಗುವ ಕಾರಣವೇಳುವದಿಲ್ಲ. ॥ ೪೩ ॥ ಯಾವನ ದೇಹದಲ್ಲಿ ಅಸತ್ಯವಾದ ಅಹಂಕಾರದ ಸಮೂಲ ನಾಶವಾಗಿರುವದೋ, ಆ ಪುರುಷನು ಮೂಲತಃ ಪರಮಾತ್ಮ ಸ್ವರೂಪ ನಿದ್ದಾನೆ. ॥ ೪೪ ॥ ಇಂಥ ಸ್ಥಿತಿಯಲ್ಲಿ ಶೀತ–ಉಷ್ಣ, ಸುಖ–ದುಃಖ, ಮಾನ–ಅಪಮಾನದ ಮಾತುಗಳು ಅವನಲ್ಲಿ ಮೂಲತಃ ಸಂಭವಿಸುವದೇ ಇಲ್ಲ. ॥ ೪೫ ॥ ಯಾವ ಯಾವ ಹಾದಿಯಿಂದ ಸೂರ್ಯನು ಹೋಗುತ್ತಾನೋ, ಆ ಎಲ್ಲ ಹಾದಿಯಿಂದಲೂ ಅವನಿಗೆ ಸರ್ವ ವಿಶ್ವವೂ ಪ್ರಕಾಶಮಾನವಾಗಿ ಕಾಣುತ್ತದೆ. ಅದರಂತೆಯೇ ಆ ಪುರುಷನಿಗೆ ಕಾಣುವ ಎಲ್ಲ ವಸ್ತುಗಳೂ ಬ್ರಹ್ಮಸ್ವರೂಪವೇ ಆಗಿ ತೋರುವವು. ॥ ೪೬ ॥ ನೋಡು, ಮೇಘದಿಂದ ಬೀಳುವ ಮಳೆಯ ಹನಿಗಳು ಯಾವ ಪ್ರಕಾರ ಸಮುದ್ರದಲ್ಲಿಯೇ ಬೆರೆತು ಹೋಗುತ್ತವೆಯೋ, ಅದೇ ಪ್ರಕಾರ ಶುಭಾಶುಭಗಳು ಯೋಗೇಶ್ವರರ ಆತ್ಮಸ್ವರೂಪದಿಂದ ಭಿನ್ನವಾಗಿರುವದಿಲ್ಲವಾದುದರಿಂದ, ಆ ಎರಡೂ ಅವರ ಪ್ರತೀತಿಗೆ ಬರುವದಿಲ್ಲ. ॥ ೪೭ ॥

ಜ್ಞಾನವಿಜ್ಞಾನತೃಪ್ತಾತ್ಮಾ ಕೂಟಸ್ಥೋ ವಿಜಿತೇಂದ್ರಿಯಃ ।
ಯುಕ್ತ ಇತ್ಯುಚ್ಯತೇ ಯೋಗೀ ಸಮಲೋಷ್ಟಾಶ್ಮಕಾಂಚನಃ ॥ ೮ ॥

[ಜ್ಞಾನ ವಿಜ್ಞಾನೇತಿ] ಜೋ ಹಾ ವಿಜ್ಞಾನಾತ್ಮಕ ಭಾವೋ । ತಯಾ ವಿವರಿತಾ ಜಾಹಲಾ ವಾವೋ । ಮಗ ಲಾಗಲಾ ಜವ ಪಾಹೋ । ತವ ಜ್ಞಾನ ತೇ ತೋಚಿ ॥ ೪೮ ॥ ಆತಾ ವ್ಯಾಪಕ ಕೀ ಏಕದೇಶೀ । ಊಹಾಪೋಹೀ ಜೇ ಐಸೇ । ತೇ ಕರಾವೀ ತೇಲೀ ಆಪೈಸೀ । ದುಜೇ ನ ವೀಣ ॥ ೪೯ ॥ ಐಸಾ ಶರೀರೀಚಿ ಪರೀ ಕೌತುಕೇ । ಪರಬ್ರಹ್ಮಚೇನಿ ಪಾಡೇ ತುಕೇ । ಜೇಣೇ ಜೆಂತಲೀ ಏಕೇ । ಇಂದ್ರಿಯೇಗಾ ॥ ೫೦ ॥ ತೋ ಜಿತೇಂದ್ರಿಯ ಸಹಜೇ । ತೋಚಿ ಯೋಗಯುಕ್ತ ಮ್ಹಣಿಜೇ । ಜೇಣೇ ಸಾನೇ ಥೋರ ನೇಣಿಜೇ । ಕವಣೇ ಕಾಳೀ ॥ ೫೧ ॥ ದೇಖೇ ಸೋನಯಾಚೇ ನಿಖಳ । ಮೇರು ಯೇಸಣೇ ಢಿಸಾಳ । ಆಣಿ ಮಾತಿಯೇಚೇ ಡಿಖಳ । ಕೀ ಸರೀಸೇಂಚಿ ಮಾನೇ ॥ ೫೨ ॥ ಪಾಷಾತಾ ಪೃಥ್ವೀಚೇ ಮೋಲ ಥೋಡೇ । ಐಸೇ ಅನರ್ಘ್ಯ ರತ್ನ ಚೋಖಡೇ । ದೇಖೇ ದಗಡಾಚೇನಿ ಪಾಡೇ । ನಿಚಾಡ ಐಸಾ ॥ ೫೩ ॥

ಅರ್ಥ— ಅನುಭವಕ್ಕೆ ಬರುವಂತಹ ಈ ದೃಶ್ಯವಾದ ಜಗತ್ತಿನ ವಿಷಯವಾಗಿ ವಿಚಾರಮಾಡಿ, ಅವರು ಅದನ್ನು ಆತ್ಮದೃಷ್ಟಿಯಿಂದ ಅಸತ್ಯವೆಂದು ಸಿದ್ಧಮಾಡಿರುವರು. ಆ ಮೇಲೆ, ನಾನು ಯಾರು ಇದ್ದೇನೆಂಬುದನ್ನು **ಯಾವಾಗ್ಗೆ** ಅವರು ನೋಡಲಿಕ್ಕೆಹತ್ತಿದರೋ, ಆಗ್ಗೆ ಜ್ಞಾನವಾದರೂ ತಮ್ಮ ಸ್ವರೂಪವೇ ಇರುವುದೆಂದು ಅವರಿಗೆ ತಿಳಿಯಿತು. ॥ ೮೮ ॥ ಹೀಗೆ ನಿಶ್ಚಯವಾದ ನಂತರ ನಾನು ವ್ಯಾಪಕನಿದ್ದೇನೊ,ಇಲ್ಲವೇ ಏಕದೇಶೀ ಇರುವೆನೊ,ಎಂಬ ವಿಷಯವಾಗಿ ತರ್ಕವಿತರ್ಕ ಮಾಡಿದರೆ, ಅದು ಅಲ್ಲಿಗೇ ಕುಂಠಿತವಾಗುತ್ತದೆ. ಏಕೆಂದರೆ ಅಲ್ಲಿ ದ್ವೈತಭಾವವೇ ಇರುವದಿಲ್ಲ. ॥ ೮೯ ॥ ಈ ಮೇರೆಗೆ ಶರೀರದಲ್ಲಿದ್ದು ಯಾವನು ತನ್ನ ಇಂದ್ರಿಯಗಳನ್ನು ಜಯಿಸಿರುವನೋ, ಅವನಿಗೆ ಸಹಜವೇ ಬ್ರಹ್ಮಸದೃಶವಾದ ಯೋಗ್ಯತೆಯು ಬಂದಿರುತ್ತದೆ. ॥ ೯೦ ॥ ಅವನೇ ಸಹಜವಾಗಿ ಜಿತೇಂದ್ರಿಯನು. ಅವನೇ ಯೋಗಿಯಾಗಿರುವನು. ಕಾರಣವೇನೆಂದರೆ ಅವನಿಗೆ ಹಿರಿದು ಕಿರಿದು ಎಂಬ ಭೇದವು ಯಾವಾಗಲೂ ಇರುವದಿಲ್ಲ. ॥ ೯೧ ॥ ಶುದ್ಧ ಬಂಗಾರದ ' ಮುದ್ದೆಯು ' ಮೇರುಪರ್ವತದಷ್ಟು ದೊಡ್ಡದು ದೊರಕಿದರೂ ಅದು ಮಣ್ಣಿನ ಮಟ್ಟಿಯೆಂದೇ ಅವರು ತಿಳಿಯುತ್ತಾರೆ ॥ ೯೨ ॥ ಯಾವುದರ ಬೆಲೆಯನ್ನು ನೋಡುತ್ತಿರಲಿಕ್ಕಾಗಿ ಅದರ ಮುಂದೆ ಪೃಥ್ವಿಯೇ ಕಡಿಮೆ ಕಿಮ್ಮತ್ತಿನದಾಗಿ ಕಾಣುವದೋ ಅಂಥ ಅವೆಸೌಲ್ಯವಾದ ರತ್ನವನ್ನೇ ಪಾಷಾಣವೆಂದು ತಿಳಿಯುವಷ್ಟು ಅವರು ನಿರಿಚ್ಛರಾಗಿರುತ್ತಾರೆ. ॥ ೯೩ ॥

ಸುಹೃನ್ಮಿತ್ರಾರ್ಯುದಾಸೀನಮಧ್ಯಸ್ಥದ್ವೇಷ್ಯಬಂಧುಷು ।
ಸಾಧುಷ್ವಪಿ ಚ ಪಾಪೇಷು ಸಮಬುದ್ಧಿರ್ವಿಶಿಷ್ಯತೇ ॥ ೯ ॥

[**ಸುಹೃನ್ಮಿತ್ರೆತಿ**] ತೇಥ ಸುಹೃದ ಆಣಿ ಶತ್ರು । ಕಾ ಉದಾಸ ಆಣಿ ಮಿತ್ರು । ಹಾ ಭಾವ ಭೇದ ವಿಚಿತ್ರು । ಕಲ್ಪೂ ಕೈಂಚಾ ॥ ೯೪ ॥ ತಯಾ ಬಂಧು ಕೋಣ ಕಾಹ್ಯಾಚಾ । ದ್ವೇಷಿಯಾ ಕವಣ ತಯಾಚಾ । ಮೀಚಿ ವಿಶ್ವ ಐಸಾ ಜಿಯಾಚಾ । ಬೋಧ ಜಾಹಾಲಾ ॥ ೯೫ ॥ ಮಗ ತಯಾಚಿಯೇ । ದೃಷ್ಟೀ । ಅಧಮೋತ್ತಮ ಅಸೇ ಕಿರೀಟೀ । ಕಾಯ ಪರಿಸಾಚಿಯೇ ಕಸವಟೀ । ವಾಸಿಯಾ ಕೇಜೇ ॥೯೬॥ ತೇ ಜೈಸೀ ನಿರ್ವಾಣ ಸುವರ್ಣಚಿ ಕರೀ । ತೈಸೀ ಜಯಾಚೀ ಬುದ್ಧೀ ಚರಾಚರೀ । ಹೋಯ ಸಾಮ್ಯಚಿ ಉಜರೀ । ನಿರಂತರ ॥ ೯೭ ॥ ಜೇ ತೇ ವಿಶ್ವಾಳಂಕಾರಾಚೇ ವಿಸುರೇ । ಜರೀ ಆಹಾತೀ ಆನಾನೇ ಆಕಾರೇ । ತರೀ ಘಡಲೇ ಏಕಚಿ ಭಾಂಗಾರೇ । ಪರಬ್ರಹ್ಮೆ ॥ ೯೮ ॥ ಐಸೇ ಜಾಣಣೇ ಜೇ ಬರವೇ । ತೇ ಫಾವಲೇ ತಯಾ ಆಘವೇ । ಮ್ಹಣೋನಿ ಅಹಜವಾಹಾಚೇ ನ ಝುಕವೇ । ಯೇಣೇ ಆಕಾರಚಿತ್ರೇ ॥ ೯೯ ॥ ಘಾಪೇ ಪಟಾಮಾಜೀ ದೃಷ್ಟೀ । ದಿಸೇ ತಂತೂಚೀ ಸೈಂಧ ಸೃಷ್ಟೀ । ಪರೀ ತೋ ಏಕ ವಾಂಚೂನಿ ಗೋಷ್ಟೀ । ಜಜೀನಾಹೀ ॥ ೧೦೦ ॥ ಐಸೇನಿ ಪ್ರತೀತೀ ಹೇ ಗವಸೇ । ಐಸಾ ಅನುಭವ ಜಯಾತೇ ಅಸೇ । ತೋಚಿ ಸಮಬುದ್ಧೀ ಹೇ ಆನಾರಿಸೇ । ನಪ್ಪೇ ಜಾಣೇ ॥೧೧॥ ಜಯಾಚೇ ನಾವ ತೀರ್ಥರಾವೋ। ದರ್ಶನೇ ಪ್ರಶಸ್ತಿಸಿ ಠಾವೋ । ಜಯಾಚೇನಿ ಸಂಗೇ ಬ್ರಹ್ಮಭಾವೋ । ಭ್ರಾಂತಾಸಹಿ ॥೨॥ ಜಯಾಚೇನಿ ಬೋಲೇ ಧರ್ಮಜಿಯೇ । ದಿಠೀ ಮಹಾ ಸಿದ್ಧೀತೇ ವಿಯೇ । ದೇಪೇ ಸ್ವರ್ಗಸುಖಾದಿಇಯೇ । ಪೇಳ ಜಯಾಚಾ ॥ ೩ ॥ ವಿಪಾಯೇ ಜರೀ ಆಠವಲಾಚಿತ್ತಾ । ತರೀ ದೇ ಆಪುಲೀ ಯೋಗ್ಯತಾ । ಹೇ ಅಸೋ ತಯಾತೇ ಪ್ರಶಂಸಿತಾ । ಲಾಭ ಆಥೀ ॥ ೪ ॥

ಅರ್ಥ— ಇವರು ಆಪ್ತರು ಮತ್ತು ಇವರು ಶತ್ರುಗಳು ಅಥವಾ ಉದಾಸೀನರು ಎಂಬ ಭೇದದೃಷ್ಟಿಯು ಯಾರಲ್ಲಿ ಉಳಿದಿರುವದಿಲ್ಲವೋ, ಅವರಿಗೆ ಇಂಥ ವಿಚಿತ್ರ ಕಲ್ಪನೆಯಾದರೂ ಎಲ್ಲಿಂದ ಬರಬೇಕು ? ॥ ೯೪ ॥ ನಾನೇ ಜಗತ್ತು ಇದ್ದೇನೆಂಬ ಜೋಧವು ಯಾರ ಮನಸ್ಸಿನಲ್ಲಿ ದೃಢವಾಗಿರುವದೋ, ಅವರಿಗೆ ಬಂಧುಗಳು ಯಾರು ? ದ್ವೇಷವೆಲ್ಲಿಯದು ? ॥ ೯೫ ॥ ಆ ಮೇಲೆ ಅರ್ಜುನಾ, ಅವರ ದೃಷ್ಟಿಗೆ ಉತ್ತಮ- ಅಧಮ ಎಂಬ ಭ್ರಮೆಯು

ಉಂಟಾಗುವ ಬಗೆ ಹೇಗೆ ? ಹೀಗೆ ನೋಡು– ಸ್ಪರ್ಶಮಣಿಯ ಸ್ಪರ್ಶದಿಂದ, ಹೀನ–ಮಧ್ಯಮ–ಉತ್ತಮ ಮುಂತಾದ ಬೇರೆ ಬೇರೆ ತರದ ಬಂಗಾರವು ಆಗಬಹುದೇ ? ಅದು ಹೇಗೆ ಶುದ್ಧ– ಸಿದ್ಧೋಷ ಬಂಗಾರವನ್ನು ಮಾಡುತ್ತದೋ, ಅದರಂತೆಯೇ ಯಾವನ ಬುದ್ಧಿಯು ಚರಾಚರಾತ್ಮಕವಾದ ವಸ್ತುಗಳಲ್ಲಿ ನಿರ್ಮಲವಾದ ಸನಾತನದೃಷ್ಟಿಯೇ ಇರುವದರಿಂದ ಒಂದೇ ತತ್ವವಿರುವದೆಂದು ತಿಳಿಯುತ್ತಾರೆ. ॥ ೯೬ ॥ ಯಾಕಂದರೆ ವಿಶ್ವರೂಪದ ಅಲಂಕಾರದ ಮುದ್ರೆಯು ಒಂದು ವೇಳೆ ಅನೇಕ ಆಕಾರದವು ಇರುತ್ತವೆ. ಆದರೂ ಅವು ಒಂದೇ ಪರಬ್ರಹ್ಮರೂಪೀ ಬಂಗಾರದಿಂದ ಮಾಡಿದ ವಿರುತ್ತವೆ. ॥ ೯೮ ॥ ಈ ಮೇರೆಗೆ ಶುದ್ಧ ಮತ್ತು ಸತ್ಯವಾದ ತತ್ವವು ಯಾವನಿಗೆ ಪೂರ್ಣವಾಗಿ ತಿಳಿದಿರುತ್ತದೋ, ಅವನು ಚಿತ್ರವಿಚಿತ್ರ ರಚನೆಗಳಿಂದ ಮೇಲಿಂದ ಮೇಲೆ ಮೋಸಹೊಂದುವದಿಲ್ಲ. ॥ ೯೯ ॥ ವಸ್ತುದ ಕಡೆಗೆ ನೋಡಿದರೆ ಅದು ಹೇಗೆ ತಂತುಮಯವಾಗಿ ತೋರುತ್ತದೋ, ಅದರಂತೆಯೇ ಅವನಿಗೆ ಬ್ರಹ್ಮಸತ್ತಾದ ಹೊರ್ತು ಜಗತ್ತಿನಲ್ಲಿ ಅನ್ಯವಾವುದೂ ಕಾಣುವದಿಲ್ಲ. ॥ ೧೦೦ ॥ ಈ ಮೇರೆಗೆ ಸರ್ವ ಜಗತ್ತು ತುಂಬಿಕೊಂಡಿರುತ್ತದೆ. ಹೀಗೆ ಯಾವನಿಗೆ ಅನುಭವ ಬರುತ್ತಿದೆಯೋ, ಅವನೇ ಸಮಬುದ್ಧಿಯವನಾಗಿರುವನು. ಇದು ಅಸತ್ಯವಲ್ಲವೆಂಬುದನ್ನು ನಿಶ್ಚಯವಾಗಿ ನಂಬು. ॥ ೧೦೧ ॥ ಯಾವನ ಹೆಸರು ತೀರ್ಥರಾಜ ಎಂದಿರುವದೋ, ಯಾವನ ದರ್ಶನದಿಂದ ಅಂತಃಕರಣದಲ್ಲಿ ಸಮಾಧಾನವುಂಟಾಗುವದೋ ಮತ್ತು ಯಾವನ ಸಂಗತಿಯಿಂದ ಅಹಂಕಾರದಿಂದ ಭ್ರಮೆವಿಟ್ಟ ಪುರುಷನ ಭ್ರಾಂತಿಯು ಹೋಗಿ ಅವನು ಬ್ರಹ್ಮಸ್ವರೂಪನಾಗುತ್ತಾನೋ, ॥ ೨ ॥ ಯಾವನ ಮಾತುಗಳು ಧರ್ಮದ ಜೀವವಾಗಿ ದೃಷ್ಟಿಯು ಮಹಾಸಿದ್ಧಿಯನ್ನು ಪ್ರಾಪ್ತಿಮಾಡಿಕೊಡುವಂತಹದಾಗಿರುವದೋ, ಮತ್ತು ಸ್ವರ್ಗಾದಿ ಸುಖಗಳು ಯಾವನ ಆಟವಾಗಿರುವವೋ, ॥ ೩ ॥ ಇಂಥ ಮನುಷ್ಯನನ್ನು ಚಿತ್ತದಲ್ಲಿ ಒಂದುನೇಳೆ ಸ್ಮರಣೆಮಾಡಿದ ಕೂಡಲೇ, ಅವನು ತನ್ನ ಯೋಗ್ಯತೆಯನ್ನೇ ಕೊಡುತ್ತಾನೆ. ಬಹಳ ಹೇಳುವದೇನು ! ಅವನ ಸ್ತೋತ್ರವನ್ನು ಮಾಡುವದರಿಂದ ಮಹತ್ವವಾದ ಲಾಭವೇ ಇರುತ್ತದೆ. ॥ ೪ ॥

ಯೋಗೀ ಯುಂಜೀತ ಸತತಮಾತ್ಮಾನಂ ರಹಸಿ ಸ್ಥಿತಃ ।
ಏಕಾಕೀ ಯತ ಚಿತ್ತಾತ್ಮಾ ನಿರಾಶೀರಪರಿಗ್ರಹಃ ॥ ೧೦ ॥

[ಯೋಗೀತಿ] ಪುಢತೀ ಅಸ್ಮವೇನಾ ಐಸೇ । ಜಯಾ ಪಾಹಲೇ ಆವ್ಹೈತದಿವಸೇ । ಮಗ ಆಪಣ ಪಾಂಚಿ ಆಪಣ ಅಸೇ । ಅಖಂಡಿತ ॥ ೫ ॥ ಐಸಿಯಾ ದೃಷ್ಟೀ ಜೋಪಿವೇಕೀ । ಪಾರ್ಥಾ ತೋ ಏಕಾಕೀ । ಸಹಜೇ ಅಪರಿಗ್ರಹೀ ಜೋ । ತಿಹೀ ಲೋಕೀ । ತೋಚಿ ಮ್ಹಣವುನೀ ॥ ೬ ॥ ಐಸಿಯೇ ಅಸಾಧಾರಣೇ । ನಿಸ್ಪನ್ನಾಚೀ ಲಕ್ಷಣೇ । ಆಪುಲೇನಿ ಬಹುವಸಪಣೇ । ಶ್ರೀಕೃಷ್ಣ ಬೋಲೇ ॥ ೭ ॥ ಜೋ ಜ್ಞಾನಿಯಾಚಾ ಬಾಪ । ದೇಖಣೇ ಯಾಂಚೇ ದಿಠೀಚಾದೀಪ । ಜಯಾ ದಾದುಲಯಾಚಾ ಸಂಕಲ್ಪು । ವಿಶ್ವ ರಚೀ ॥ ೮ ॥ ಪ್ರಣವಾಚಿಯೇ ಪೇಠೇ । ಜಾಹಾಲೇ ಶಬ್ದ ಬ್ರಹ್ಮ ಮಾಜಿತೇ । ತೇಜಯಾಚಿಯೇ ಯಶಾ ಧಾಕುಟೇ । ವೇಢೂನ ಪುರೇ ॥ ೯ ॥ ಜಯಾಚೇನಿ ಆಂಗಿಕೇ ತೇಜೇ । ಆಪೋ ರವಿ ಶಶಿಂಚಿಯೇ ವಣಿಜೇ । ಮ್ಹಣವೂನಿ ಜಗ ಹೇ ವೇಸಜೇ । ವೀಣ ಅಸೇ ತಯಾ ॥ ೧೦ ॥ ಹಾಗಾ ನಾಮಚಿ ಏಕ ಜಯಾಚೇ । ಪಾಹತಾ ಗಗನಹೀ ದಿಸೇ ಟಾಂಚೇ । ಗುಣ ಏಕೈಕ ಕಾಯ ತಯಾಚೇ । ಕಲಶೀಲ ತೂ ॥ ೧೧ ॥ ಮ್ಹಣೋನಿ ಅಸೋ ಹೇ ವಾನಣೇ । ಸಾಂಗೋ ನೇಣೋ ಕವಣಾಚಾ ಲಕ್ಷಣೇ । ದಾವಾವೀ ಮಿಷೇಯೇಣೇ । ಕಾ ಬೋಲಿಲೋ ತೇ ॥ ೧೨ ॥ ಐಕೇ ದ್ವೈತಾಚಾ ಶಾವೋಚಿ ಫೇಡೀ । ತೇ ಬ್ರಹ್ಮನಿದ್ಯಾ ಕಿಜೇಲ ಉಘಡೀ । ತರೀ ಅರ್ಜುನ ಪಢಿಯೇ ಹೇ ಗೋಡೀ । ನಾಸೇಲ ಹನ ॥ ೧೩ ॥ ಮ್ಹಣೋನಿ ತೇ ತೈಸೇ ಬೋಲಣೇ । ನವ್ಹೇ ಸಪಾತಳ ಆಡ ಲಾವಣೇ । ಕೇಲೇ ಮನಚಿ ವೇಗಳ ವಾಣೇ । ಭೋಗಾವಯಾ ॥ ೧೪ ॥ ಜಯಾ ಸೋಹಂಭಾವ ಅಟಕ । ಮೋಕ್ಷ ಸುಖಾಲಾಗೋನಿ ರಂಕ । ತಯಾಚಿಯೇ ದಿಠೀಚಾ ಝುಣೇ ಕಳಂಕ । ಲಾಗೇಲ ತುಝಿಯಾ ಪ್ರೇಮಾ ॥ ೧೫ ॥ ವಿಪಾಯೇ ಅಹಂಭಾವ ಯಯಾಚಾ

ಜಾಈಲ । ಮೀತೇಂಚಿ ಹಾ ಜರೀ ಹೋಈಲ । ತರೀ ಮಗ ಕಾಯ ಕೀಜೇಲ । ಏಕಲೀಯಾ ॥ ೧೬ ॥
ದಿಠೀಚಿ ಪಾಹತಾ ನಿವಿಜೇ । ಕಾತೋಂಡ ಭರೋನಿ ಬೋಲಿಜೇ । ನಾತರೀ ದಾಟೂನಿ ಖೇವದೀಜೇ ।
ಐಸೇ ಕೋಣ ಆಹೇ ॥ ೧೭ ॥ ಆಪುಲಿಯಾ ಮನಾ ಬರವೀ । ಅಸಮಾ ಈ ಗೋಠೀ ಜೀವೀ । ತೇ
ಕನಣೇಸಿ ಚಾವಳಾವೀ । ಜರೀ ಐಕ್ಯ ಜಾಹಲೀ ॥ ೧೮ ॥ ಇಯಾ ಕಾಕುಳತೀ ಜನಾರ್ದನನೇ । ಅನ್ಯೋ
ಪದೇಶಾಚೇನಿ ಹಾತಾಸನೇ। ಬೋಲಾ ಮಾಜೀ ಮನ ಮನೆ ಆಲಿಂಗೂ ಸರಲೇ ॥೧೯॥ ಹೇ ಪರಿಸತಾ ಜರೀ
ಕಾನಡೇ। ತರೀ ಜಾಣ ಪಾ ಪಾರ್ಥ ಉಘಡೇ। ಶ್ರೀಕೃಷ್ಣ ಸುಖಾಂಚೆಚಿ ರೂಪಡೇ। ವೋತಲೀಗಾ ॥೧೩೦॥
ಹೇಅಸೋ ವಯಸೇಚಿಯೀ ಶೈವಟೀ । ಜೈಸೇ ಏಕಚೀ ವಿಯೇ ನಾಂಯ್ಕೋಟೀ । ಮಗತೇ ನೋಹಾಚೀ
ತ್ರಿಪುಟೀ । ನಾಚೋ ಲಾಗೇ ॥ ೩೧ ॥ ತೈಸೇ ಜಾಹಾಲೇ ಶ್ರೀ ಅನಂತಾ । ಐಸೇ ತರೀ ಮೀ ನ
ಮ್ಹಣತಾ । ಜರೀ ತಯಾಚಾ ನ ದೇಖತಾ । ಅತಿಶಯೋ ಏಥ ॥ ೩೨ ॥ ಪಹಾ ಪಾ ನವಲ ಕೈಸೇ
ಚೋಜ । ಕೇ ಉಪದೇಶ ಕೇವುತೇ ಝುಂಜ । ಪರೀ ಪ್ರಢೇ ವಾಲ ಭಾಜೇ ಭೋಜ । ನಾಚತ
ಅಸೇ ॥ ೩೩ ॥ ಆವಡೀ ಆಣಿ ಲಾಜವೀ । ವ್ಯಸನ ಆಣಿಶಿಣವೀ । ಪಿಸೇ ಆಣಿನ ಭುಲವೀ । ತರೀ ತೇಚಿ
ಕಾಈ ॥ ೩೪ ॥ ಮ್ಹಣವೂನಿ ಭಾವಾರ್ಥ ತೋಐಸಾ । ಅರ್ಜುನ ಮೈತ್ರಿಯೇಚಾ ಕುವಾಸಾ । ಕೀ
ಸುಖೇ ಶೃಂಗಾರಲಿಯಾ ಮಾನಸಾ । ದರ್ಪಣ ತೋ ॥ ೩೫ ॥ ಯಾ ಪರೀ ಬಾಪ ಪುಣ್ಯ ಪವಿತ್ರ ।
ಜಗೀ ಭಕ್ತಿಬೀಜಾಸೀ ಸುಕ್ಷೇತ್ರ । ತೋ ಶ್ರೀಕೃಷ್ಣ ಕೃಪೇಪಾತ್ರ । ಯಾಚಿ ಲಾಗೀ ॥ ೩೬ ॥
ಹೋಕಾ ಅತ್ಮನಿವೇದನಾ ತಳೀಂಚೀ । ಜೇ ಪಿಠಿಕಾ ಹೋಯ ಸಖ್ಯಾಚೀ । ಪಾರ್ಥ ಅಧಿಷ್ಠಾತ್ರೀ
ತೇಥಿಂಚೀ । ಮೂತ್ಯಕಾ ಗಾ ॥ ೩೭ ॥ ಪಾಸೀಂಚಿ ಗೋಸಾವೀ ನ ವಾಸಿಜೇ । ಮಗ
ಪಾಇಕಾಚಾ ಗುಣ ಘೇಇಜೇ । ಐಸಾ ಅರ್ಜುನ ತೋ ಸಹಜೇ । ಪಢಿಯೇ ಹರೀ ॥ ೩೮ ॥
ಪಾಹಾ ಪಾ ಅನುರಾಗೇ ಭಜೇ। ಜೇ ಪ್ರಿಯೋತ್ಮಮೇ ಮಾಸಿಜೇ। ತೇ ಪತೀಹೂನಿ ಕಾಯ ನ ವಾಸಿಜೇ ।
ಪತಿವ್ರತಾ ॥ ೩೯ ॥ ತೈಸಾ ಅರ್ಜುನಚಿ ವಿಶೇಷೇಸ್ತವಾ । ಐಸೇ ಆವಡಲೇ ಮಜಚೀವಾ । ಜೇ ತೋ
ತ್ರಿಭುವನಿಂಚಿಯಾ ದೈವಾ । ಏಕಾಯತನ ಜಾಹಾಲಾ ॥ ೧೩೦ ॥ ಜಯಾಚಿಯಾ ಆವಡೀ ಚೇನಿ
ಪಾಂಗೇ । ಅಪೂರ್ತಪಿಣೀ ಮೂರ್ತಿ ಆಂಗವೇ । ಪೂರ್ಣಾಹಿಪರೀ ಲಾಗೇ । ಅವಸ್ಥಾ ಜಯಾಚೀ ॥೩೧॥
ತವ ಶ್ರೋತೇ ಮ್ಹಣತೀ ದೈವ । ಕೈಸೀ ಬೋಲಾಚೀ ಹವಾವ । ಕಾಯ ನಾದಾತೇ ಹನ ಬರವ ।
ಜೀಕೋನಿ ಆಲೀ ॥ ೩೨ ॥ ಹಾ ಹೂ ನವಲ ನೋಹೇ ದೇಶೀ । ಮರ್ಮ್ಹಟೀ ಬೋಲಿಜೇ ತರೀ ಐಸೀ ।
ವಾಣೀ ಉಮಟತಾಹೇ ಆಕಾಶೀ । ಸಾಹಿತ್ಯ ರಂಗಾಚೇ ॥ ೩೩ ॥ ಕೈಸೇ ಉನ್ಮೈಖಚಾಂದಿಣೇ ತಾರ ।
ಆಣಿ ಭಾವಾರ್ಥ ಪಡೇಗಾರ । ಹೇಚಿ ಶ್ಲೋಕಾರ್ಥ ಕುಮುದಿನೀ ಫಾರ । ಸಾವಿಯಾ ಹೋತೀ ॥ ೩೪ ॥
ಚಾಡಚಿ ನಿಜಾಡಾ ಕರೀ। ಐಸೀ ಮನೋರಥೀ ಯೇ ಥೋರೀ । ತೇಣೇ ವಿಪಳಲೇ ಅಂತರೀ । ತೇಥ ಡೋಲ
ಆಲಾ ॥೩೫॥ ತೇ ನಿವೃತ್ತಿದಾಸೇ ಜಾಣಿತಲೇ । ಮಗ ಅವಧಾನ ದ್ಯಾಮಣಿತಲೇ । ನವಲ ಪಾಂಡವ ಕುಳೀ
ಪಾಹಲೇ । ಕೃಷ್ಣದಿವಸೇ ॥೩೬॥ ದೇವಕೀ ಯಾ ಉದರೀ ವಾಹಿಲಾ । ಯಶೋದಾ ಸಾಯಾಸೇ ಪಾಳಿಲಾ ।
ಶೇಖೀ ಉಪೇಗಾ ಗೇಲಾ । ಪಾಂಡವಾಸೀ ॥ ೩೭ ॥ ಮ್ಹಣವೂನಿ ಬಹುದಿವಸ ವೋಳಗಾವಾ । ಕಾ ಅವ
ಸರೂ ಪಾಹೋನಿ ವಿನವಾವಾ । ಪಾಹೀ ಸೋಸ ತಯಾ ಸದೈವಾ । ಪಡೇಚಿನಾ ॥ ೩೮ ॥ ಹೇ ಅಸೋ
ಕಥಾ ಸಾಂಗೇ ವೇಗೀ । ಮಗ ಅರ್ಜುನ ಮ್ಹಣೇ ಸಲಗೀ । ದೇವಾ ಇಯೇ ಸಂತಚಿನ್ಹೇ ಆಂಗೀ । ನ
ಶಕತೀ ಮಾಝಾ ॥ ೩೯ ॥ ಯೇರವ್ಹೀ ಯಾ ಲಕ್ಷಣಾಂಚಿಯಾ ನಿಜಸಾರಾ । ಮೀ ಅಪಾಡೇ ಕೀರ
ಅಪುರಾ । ಪರೀ ತುಮಚೇನಿ ಬೋಲೇ ಅವಧಾರಾ । ಥೋರಾನೇ ಜರೀ ॥ ೧೪೦ ॥ ಜೀ ತುಮ್ಹೀ ಚಿತ್ತ
ದೇಯಾಲ । ತರೀ ಬ್ರಹ್ಮಯಾ ಹೋಯಿಜೇಲ । ಕಾಯ ಜಾಹಾಲೇ ಅಭ್ಯಾಸಿಜೇಲ । ಸಾಂಗಾಲಜೇ
॥ ೪೧ ॥ ಹಾ ಹೂ ನೇಣಂ ಕವಣಾಚೀ ಕಾಹಾಣೇ । ಆಇಕೋನಿ ಶ್ಲೋಳಿಚಿತ ಅಸೋ ಅಂತಃಕರಣೇ ।

ಐಸಿ ಜಾಹಾಲೇ ಪಣಾಚೀ ಶಿರಯಾಣೇ । ಕಾಯಸೀ ದೇವಾ ॥ ೪೨ ॥ ಹೇ ಆಂಗೇ ಮ್ಯಾಹೋಇಜೋ ಕಾ । ಯೇ ತುಲೇ ಗೋಸಾವೀ ಆಪುಲೀಪಣೇ ಕೀ ಜೋ ಕಾ । ತವ ಕಾಸೋನ ಶ್ರೀಕೃಷ್ಣ ಹೋಕಾ ಕರೂ ಮ್ಹಣತೀ ॥ ೪೩ ॥ ದೇಖಾ ಸಂತೋಷ ಏಕ ನ ಜೋಡೇ । ತವಚಿ ಸುಖಾಂಚೇ ಸೈಂಧ ಸಾಂಕಡೇ। ಮಗ ಜೋಡಲಿಯಾ ಕವಣೇಕಡೇ । ಅಪುರೇ ಅಸೇ ॥ ೪೪ ॥ ತೈಸಾ ಸರ್ವೇಶ್ವರ ಬಳಿಯಾ ಸೇವಕೇ । ಮ್ಹಣೋನಿ ಬ್ರಹ್ಮಹೀ ಹೋಯ ತೋ ಕೌತುಕೇ । ಪರೀ ಕೈಸಾ ಭಾರೇ ಆತಲಾ ಪಿಕೇ । ದೈವಾಚೇನಿ । ॥ ೪೫ ॥ ಜೋ ಜನ್ಮ ಸಹಸ್ರಾಚಿಯಾ ಸಾಠೀ । ಇಂದ್ರಾದಿಕಾಹೀ ಮಹಾಗ ಭೇಟೀ । ತೋ ಆಧೀನ ಕೇತುಲಾ ಕಿರೀಟೀ । ಜೇ ಬೋಲಹೀ ನ ಸಾಹೇ ॥ ೪೬ ॥ ಮಗ ಐಕಾ ಜೇ ಪಾಂಡವೇ । ಮ್ಹಣಿತಲೇ ಮ್ಯಾ ಬ್ರಹ್ಮ ಹೋ ಆವೇ । ತೇ ಅಶೇಷಹೀ ದೇವೇ । ಅವಧಾರಿಲೇ ॥ ೪೭ ॥ ತೇಥ ಐಸೇಚಿ ಏಕ ವಿಚಾರಿಲೇ । ಜೇ ಯಾ ಬ್ರಹ್ಮತ್ವಾಚೇ ಡೋಹಳೇ ಜಾಹಲೇ । ಪರೀ ಉದರಾ ವೈರಾಗ್ಯ ಆಹೇ ಆಲೇ । ಬುದ್ಧೀ ಚಿಯಾ ॥ ೪೮ ॥ ಯೆರ್ಹವೀ ದಿವಸ ತರೀ ಯಾ ಅಪುರೇ । ಪರೀ ವೈರಾಗ್ಯ ಪಸಂತಾಚೇನಿ ಭರೇ । ಜೇ ಸೋಹಂಭಾವ ಮಹುರೇ । ಮೊಡೋನಿ ಆಲಾ ॥ ೪೯ ॥ ಮ್ಹಣೋನಿ ಪ್ರಾಪ್ತಿ ಫಳೇ ಫಳತಾ । ಯಯಾಸಿ ವೇಳ ನಲಗೇಲ ಆತಾ । ಹೋಯ ವಿರಕ್ತ ಐಸಾ ಅನಂತಾ । ಭರವಸಾ ಜಾಹಲಾ ॥ ೫೦ ॥ ಮ್ಹಣೇ ಜೇ ಜೇ ಹಾ ಅಧಿಷ್ಠಿಲ । ತೇ ಆರಂಭೀಚ ಯಯಾ ಫಳೇಲ । ಮ್ಹಣೋನಿ ಸಾಂಗಿತಲಾ ನ ವಚೇಲ । ಅಭ್ಯಾಸ ವಾಯಾ ॥ ೫೧ ॥ ಐಸೇ ವಿವರೋನಿಯಾ ಶ್ರೀಹರೀ । ಮ್ಹಣಿತಲೇ ತಿಯೇ ಅವಸರೀ ॥ ಅರ್ಜುನಾ ಹಾ ಅನಧಾರೀ। ಪಂಧರಾಜ ॥ ೫೨ ॥ ತೇಥ ಪ್ರವೃತ್ತಿ ತರೂಚ್ಯಾ ಬುಡೀ । ದಿಸತೀ ನಿವೃತ್ತೀ ಫಳಾಚಿಯಾ ಕೋಡೀ । ಜಿಯೇ ಮಾರ್ಗಿಗೇಚಾ, ಕಾಪಡೀ । ಮಹೇಶ ಆಝುಸೇ ॥ ೫೩ ॥ ಪೈ ಯೋಗಿ ವೃಂದೇ ಪಹಿಲೇ । ಆಡವೀ ಆಕಾಶೀ ನಿಘಾಲೀ । ಕೀ ತೇಥ ಅನುಭವಾಚ್ಯಾ ಪಾವುಲೀ । ಧೋರಣ ಪಡಿಲಾ ॥ ೫೪ ॥ ತೀಹೀ ಆತ್ಮ ಬೋಧಾಚೇನಿ ಉಜುಕಾರೇ । ಧಾವ ಘೇತಲೇ ಏಕ ಸರೇ । ಕೀ ಯೇರ ಸಕಳ ಮಾರ್ಗ ನಿವಸುನಿ । ಸಾಂಡೂನಿಯಾ ॥ ೫೫ ॥ ಪಾತೀಮಹರ್ಷೀ ಯೆಣೇ ಆಲೇ । ಸಾಧಕಾಂಚೇ ಸಿದ್ಧ ಜಾಹಾಲೀ । ಆತ್ಮನಿವ ಥೋರಾವಲೇ । ಯೇಣೇಚಿ ಪಂಥೇ ॥ ೫೬ ॥ ಹಾ ಮಾರ್ಗ ಜೈ ದೇಖಿಜೇ। ತೈ ತಾಹಾನ ಭೂಕ ವಿಸರಜೇ । ರಾತ್ರಿ ದಿವಸ ನೇಣಿಜೇ । ವಾಟೇ ಇಯೇ ॥ ೫೭ ॥ ಚಾಲತಾ ವಾವುಲ ಜೇಥ ಪಡೇ । ತೇಥ ಅಪನರ್ಗಾಚೀ ಖಾಣೇ ಉಘಡೇ । ಆವ್ಹಾಂಟಲಿಯಾ ತರೀ ಜೋಡೇ । ಸ್ವರ್ಗ ಸುಖ ॥ ೫೮ ॥ ಸಗಿಜೇ ಪೂರ್ವಿಲಿಯಾ ಮೋಹರಾ । ಕೀ ಯೇಇಜೇ ಪಶ್ಚಿಮೇಚಿಯಾ ಘರಾ । ನಿಶ್ಚಳವಣೇ ಧನುರ್ಧರಾ । ಚಾಲಣೇ ಏಥಿಂಚೇ ॥ ೫೯ ॥ ಯೇಣೇ ಮಾರ್ಗೇ ಜಯಾ ತಾಯಾ ಜಾಇಜೇ । ತೋ ಗಾಂವ ಆವಣಚಿ ಹೋಇಜೇ । ಹೇ ಸಾಂಗೋ ಕಾಯ ಸಹಜೇ । ಜಾಣಸೀ ತೂ ॥ ೧೬೦ ॥ ತೆಥೇ ಪಾರ್ಥೇ ಮ್ಹಣಿತಲೇ ದೇವಾ । ತರೀ ತೇಚಿ ಮಗ ಕೆಂವ್ಹಾ । ಕಾ ಆರ್ತಿ ಸನುದ್ರೌಸಿ ನ ಕಾಢಾವಾ । ಬುಡತು ಜೀಮೀ ॥ ೬೧ ॥ ತವ ಕೃಷ್ಣ ಮ್ಹಣತೀ ಐಸೇ । ಹೇ ಉತ್ಸಂಖಿಳ ಬೋಲಣೇ ಕಾಯಿಸೇ । ಆಮ್ಹಿ ಸಾಂಗತಸೊ ಆಪೈಸೆ । ವರೀ ಪುಶಿಲೇ ತೂವಾ ॥ ೬೨ ॥

ಅರ್ಥ— ಎಂದಿಗೂ ಮುಳಗದಂಥ ಜ್ಞಾನ ಸೂರ್ಯನು ಯಾವನ ಹೃದಯಾಕಾಶದಲ್ಲಿ ವುದಯವಾಗಿರುವನೋ ಅವನು ಯಾವಾಗಲೂ ತಾನು ತನ್ನಲ್ಲಿಯೇ ಬ್ರಹ್ಮಾನಂದ ಸುಖವಲ್ಲಿ ಮಗ್ನನಾಗಿರುತ್ತಾನೆ. ॥ ೫೫ ॥ ಪಾರ್ಥನೇ ! ಈ ದೃಷ್ಟಿಯಿಂದ ಯಾವನು ವಿಚಾರ ಮಾಡುತ್ತಾನೋ ಅವನು ಮೂರು ಲೋಕಗಳಲ್ಲಿಯೂ ಅದ್ವಿತೀಯನು ಪರಿವಾರ ಸಂಗ್ರಹ ಮಾಡದೇ ಪರಿಗ್ರಹಶೂನ್ಯನಾಗಿರುವನು ॥ ೬ ॥ (ಜ್ಞಾನೇಶ್ವರನು ಸಾರಾಜರು ಅನ್ನುತ್ತಾರೆ.) ಇಂಥ ಅಸಾಮಾನ್ಯಸಿದ್ಧ ಪುರುಷ ಸಾಧುವಿನ ಲಕ್ಷಣಗಳನ್ನು ಶ್ರೀಕೃಷ್ಣಪರಮಾತ್ಮನು, ತನ್ನಿಂದಧಿಕವಾದ ಗೌರವವನ್ನು ಕೊಟ್ಟು ಮೆರೆಸಿ ಹೇಳಿದನು. ॥ ೬ ॥ ಯಾವನು ಸರ್ವಜ್ಞಾನಿಗಳಲ್ಲಿ ಶ್ರೇಷ್ಠನೂ ಸರ್ವರ ದೃಷ್ಟಿಗೆ ಪ್ರಕಾಶಕನೂ ಆಗಿರುವನೋ, ಮತ್ತು

ಯಾವನು ತನ್ನ ಸಾಮರ್ಥ್ಯದಬಲದಿಂದ ಸಂಕಲ್ಪಮಾತ್ರದಿಂದಲೇ ಈ ವಿಶ್ವಸೃಷ್ಟಿಯನ್ನೇ ಸೃಜಿಸಬಲ್ಲನೋ ॥ ೪ ॥ ಮತ್ತು ಓಂ ಕಾರದ ಸಂತೆಯಲ್ಲಿ ಸಿದ್ಧವಾದ ವೇದರೂಪೀ ಶುಭ್ರ ವಸ್ತ್ರದಿಂದ ಯಾವನ ಆರುಗುಣಗಳಲ್ಲೊಂದು ಗುಣವಾದ 'ಯಶ'ವನ್ನು ಸಹ ಆವರಿಸಲು ಅಪೂರ್ಣವಾಗಿರುವದೋ, ಆ ಷಡ್ಗುಣೈಶ್ವರ್ಯ ಮಂಡಿತನಾದ ಶ್ರೀಕೃಷ್ಣ ಕೀರ್ತಿ ಎಂಬ ಒಂದೇ ಗುಣವನ್ನು ಕೂಡಾ ವೇದಗಳಿಂದಲೂ ಸಂಪೂರ್ಣವಾಗಿ ವರ್ಣಿಸಲು ಸಾಧ್ಯವಾಗಲಿಲ್ಲ (ಸೋತು ಹೋದವು) ॥ ೯ ॥ ಯಾವನ ಅಂಗ ಪ್ರಭೆಯಿಂದಲೇ ಸೂರ್ಯಚಂದ್ರರ ವ್ಯವಹಾರದಲ್ಲಿ ಸಾಮರ್ಥ್ಯವುಂಟಾಗಿರುವದೋ, ಅಂತಹ ಆ ಪರಮಾತ್ಮನ ದಿವ್ಯ ಪ್ರಕಾಶದ ಆಧಾರವಿಲ್ಲದಲೇ ಈ ಜಗತ್ತು ಪ್ರಕಾಶಿತವಾಗಬಹುದೇ? ॥ ೧೧೦॥ ಶ್ರೀ ಜ್ಞಾನೇಶ್ವರ ಮಹಾರಾಜರು ತಮ್ಮ ಮನಸಿನಲ್ಲಿಯೇ ಅನ್ನುತ್ತಾರೆ— (ಎಲೋ ಪುನಸ್ಸೇ!) ಯಾವ ಭಗವಂತನ ನಾಮ ಮಹಾತ್ಮ್ಯೆಯೊಂದನ್ನೇ ಪರಿಶೀಲಿಸಿದರೆ ಅವರಮುಂದೆ ಆಕಾಶದ ವಿಸ್ತಾರವೂ ಕಡಿಮೆಯೆಂದು ತೋರುತ್ತದೋ, ಆ ಭಗವಂತನ ಒಂದೊಂದು ಗುಣಗಳನ್ನು ನೀನು ಹೇಗೆ ತಿಳಿಯಲು ಶಕ್ತನಾಗುವೆ? ॥ ೧೧॥ ಆದುದರಿಂದ ಇನ್ನು ಮೇಲೆ ಈ ವರ್ಣನೆಯನ್ನು ಸಾಕುಮಾಡು. ಈ (ಸಂತರ) ಲಕ್ಷಣವನ್ನು ಹೇಳುವ ನಿಮಿತ್ಯದಿಂದ ಭಗವಾನನು ಯಾರ ಲಕ್ಷಣಗಳನ್ನು ಹೇಳಿದನೋ (!) ಏತಕ್ಕಾಗಿ ಹೇಳಿದನೋ (!) ನನಗೆ ತಿಳಿಯಲು ಅಸಾಧ್ಯವಾಗಿದೆ. ॥ ೧೨। ಆದರೆ ನನಗೆ ಹೀಗೆ ಕಾಣುತ್ತದೆ ಅದನ್ನು ಹೇಳುವೆನು ಕೇಳು. *ದ್ವೈತವು ಅಡಗಿ ಹೆಸರಿಗೆ ಸಹ ಉಳಿಯದಂತೆ ಮಾಡುವಂಥ ಬ್ರಹ್ಮಜ್ಞಾನವನ್ನು ಸ್ಪಷ್ಟವಾಗಿ ವ್ಯಕ್ತನೂಡುವದರಿಂದ, ತನ್ನ ಪ್ರೀಯಕರನಾದ ಅರ್ಜುನನಲ್ಲಿ (ಭಗವಂತನ ವಿಷಯಕವಾಗಿ) ಇದ್ದ ಭಕ್ತಿಪ್ರೇಮವು ನಾಶವಾದೀತು, ॥ ೧೩ ॥ ಎಂಬ ವಿಚಾರದಿಂದ ಭಗವಂತನು ದೇವಭಕ್ತ ಇವರ ಮಧ್ಯದಲ್ಲಿ ಪ್ರೇಮಸುಖ ಭೋಗಿಸುವವರ ದೆಶೆಯಿಂದ ಅರ್ಜುನನಲ್ಲಿ ಸೇವ್ಯಸೇವಕತ್ವ (ದ್ವೈತ)ಭಾವವನ್ನುಳಿಸಿದ್ದಲ್ಲದೇ ಪರ್ಯಾಯದಿಂದ ಸಾಧುಗಳ ಸ್ಥಿತಿಯ ವರ್ಣನೆಮಾಡಿ ಬ್ರಹ್ಮಜ್ಞಾನದ ವಿಷಯದಲ್ಲಿ ಸ್ಪಷ್ಟವಾಗಿ ಮಾತನಾಡಲಿಲ್ಲ. ॥ ೧೪ ॥ ಯಾರು ಅಹಂಬ್ರಹ್ಮಸ್ಫುರಣದಲ್ಲಿ ಅಡಕವಾಗಿ ಮೋಕ್ಷವಾಪ್ತಿಯದೆಶೆಯಿಂದ ದೀನರಾಗಿರುವರೋ, ಅಂಥ ಅದ್ವೈತರ ದೃಷ್ಟಿಯಕಪ್ಪು ಅರ್ಜುನನೇ! ಒಂದು ವೇಳೆ ನಿನ್ನ ಪ್ರೇಮಕ್ಕೆ ತಗಲಬಹುದು ॥ ೧೫ ॥ ಅಕಸ್ಮಾತ್ತ ಅರ್ಜುನನಲ್ಲಿ "ನಾನು" ಎಂಬ (ಅಹಂತಾ) ರೂಪಿ ದ್ವೈತಭಾವನೆಯೇ ಅಳಿದುಹೋಗಿ ಅದ್ವೈತನಾಗಲು ನಾನೇ ಅವನು ಎಂಬ ಧೃಡವಾದ ಜ್ಞಾನವು ಉಂಟಾದರೆ ಆ ಮೇಲೆ ನಾನೊಬ್ಬನೇ ಏನು ಮಾಡಬೇಕು? ॥ ೧೬ ॥ ನೋಡಿದಕೂಡ್ಲೆ ನೇತ್ರಾನಂದ ಪಡೆಯಲು, ನಾಲಿಗೆಯಿಂದ ಸವಿಮಾತುಗಳನ್ನಾಡಿ ಸಂತೋಷಹೊಂದಲು, ಮತ್ತು ಆನಂದದಿಂದ ದೃಢಾಲಿಂಗನಕೊಡಲಿಕ್ಕೆ ಅರ್ಜುನನನ್ನುಳಿದು ಅನ್ಯ ಪ್ರೇಮದ ಸದ್ಭಕ್ತರು ನನಗೆ ಮತ್ತಾರಿರುವರು? ॥ ೧೭ ॥ ಆದರೆ ಅರ್ಜುನನು ನನ್ನಲ್ಲಿ ಐಕ್ಯಹೊಂದಿದರೆ ನನ್ನ ಮನಸಿನಲ್ಲಿದ್ದ ಶ್ರೇಷ್ಠ ರಹಸ್ಯವಾದ ಸಂಭಾಷಣವು ಯಾವದೋ, ಅದು ನನ್ನ ಅಂತಃಕರಣದಲ್ಲಿ ಹಿಡಿಯದೇ ಹೋದರೆ ನಾನು ಯಾರಸಂಗಡ ಮಾತನಾಡಬೇಕು? ॥ ೧೮ ॥ ಇಂಥ ತೊಂದರೆಯನ್ನು ಶ್ರೀಕೃಷ್ಣನು ಮನಸಿನಲ್ಲಿ ತಂದು ತನ್ನ ವಿಷಯದಲ್ಲಿ ಕನಿಕರವುಳ್ಳವನಾಗಿ ಅನ್ಯೋಪದೇಶದ ಹತವಟಿಯಿಂದ ಮಾತನಾಡಿ ಅರ್ಜುನನ ಅರ್ಜುನತ್ವವನ್ನು (ಶೇವಕತ್ವವನ್ನು) ಸ್ಥಿರಪಡಿಸಿ ತನ್ನ ಮನಸಿನಿಂದ ಅರ್ಜುನನ ಮನಸಿಗೆ ಆಲಿಂಗನವನ್ನು ಕೊಟ್ಟನು. ॥ ೧೯ ॥ ಇದನ್ನು ಕೇಳುವವರಿಗೆ ಒಂದುವೇಳೆ ಅಶಕ್ಯವೆಂದು ಕಾಣಬಹುದು ಆದರೂ ಅರ್ಜುನನು ಶ್ರೀಕೃಷ್ಣನ ಸುಖದ ಪಡೆಯಚ್ಚಿನಲ್ಲಿ ಮೂಡಿಸಿ ತೆಗೆದ ಮೂರ್ತಿಯೇ ಆಗಿದ್ದಾನೆಂಬದು ನಿಶ್ಚಯವೆಂದು ತಿಳಿಯರಿ. ॥ ೧೨೦ ॥ ಇದಂತೂ ಯಿರಲಿ. ಒಬ್ಬಾನೊಬ್ಬ ಬಂಜೆ ಸ್ತ್ರೀಯಳಿಗೆ ಅವಳ ವಯಸ್ಸು ಆಗಿಹೋದ ಮೇಲೆ ಆ ಮುದುಕಿಗೆ ಒಂದೇ ಮಗನು ಹುಟ್ಟಿದರೆ ಅವಳಿಗೆ ಆ ಮಗುವಿನ ನೋಹದಲ್ಲಿ ತಲ್ಲೀನವಾಗಿ ಅವಳು ಹೇಗೆ

---

* ದ್ವೈತದಲ್ಲಿ ಒಬ್ಬರು ಇನ್ನೊಬ್ಬರನ್ನು ಮೂಸಿಸುವರು. ನೋಡುವರು ಕೇಳುವರು ಮಾತಾಡಿಸುವರು. ಇನ್ನೊಬ್ಬರನ್ನು ಕುರಿತು ವಿಚಾರಮಾಡುವರು. ಆದರೆ, ಆತ್ಮನೋರ್ವನೇ ಇರುವಲ್ಲಿ ಯಾರನ್ನು ಯಾತರಿಂದ ಯಾರು ಮೂಸಿಸಬೇಕು. ನೋಡಬೇಕು; ಕೇಳಬೇಕು ಮಾತಾಡಬೇಕು, ವಿಚಾರಿಸಬೇಕು? ಯಾವನು ಇದನ್ನೆಲ್ಲ ಅರಿಯುವನೋ, ಆ ಆತ್ಮನನ್ನು ಯಾತರಿಂದ ಅರಿತುಕೊಳ್ಳಬೇಕು? ಅವನು ಅನಾದಿಜ್ಞಾನಿಯು ಅವನ ಜ್ಞಾನವು ಯಾತರಿಂದಾಗಬೇಕು. ಎಂದು ಯಾಜ್ಞವಲ್ಕ್ಯನು ಮೈತ್ರೇಯಿಗೆ ಹೇಳಿರುವನು. (ಬೃಹದಾರಣ್ಯಕೋಪನಿಷತ್ತು. ಅಂ ೨ ಬ್ರಾಂ ೪ ಮಂತ್ರ ೧೩–೧೪)

ಕುಣಿಯುವಳೋ, ॥ ೨೧ ॥ ಅದರಂತೆ ಶ್ರೀಕೃಷ್ಣನ ಸ್ಥಿತಿಯಾಗಿರುವದು. ಅರ್ಜುನನ ಮೇಲಿನ ಅತಿಶಯವಾದ ಅವನ ಪ್ರೇಮವು ನನ್ನ ದೃಷ್ಟಿಗೆ ಬೀಳದಿದ್ದರೆ ನಾನು ಹೀಗೆ ಅನ್ನುತ್ತಿದ್ದಿಲ್ಲ. ॥ ೨೨ ॥ ನೋಡು, ನೋಡು. ಇದು ಏನು ಆಶ್ಚರ್ಯ! ಮತ್ತು ಎಷ್ಟು ಪ್ರೇಮ! ಇಂಥ ಘೋರವಾದ ರಣರಂಗದಲ್ಲಿ ಇದು ಎಂಥ ಬ್ರಹ್ಮಜ್ಞಾನದ ಉಪದೇಶವು? ಇಂಥ ಇಕ್ಕಟ್ಟಿನ ಸ್ಥಳದಲ್ಲಿ ಭಗವಂತನ ಪ್ರೀತಿಯ ಗೊಂಬೆಯಾದ ಅರ್ಜುನನ ಮುಂದೆ ಪ್ರೇಮಮೂರ್ತಿ ಶ್ರೀಕೃಷ್ಣನು ಕುಣಿಯುತ್ತಿದ್ದನು. ॥ ೨೩ ॥ ಪ್ರೇಮವಿದ್ದು ನಾಚಿಕೆಯನ್ನು ತೊರೆಯದೆ ಯಿದ್ದರೆ ವ್ಯಸನವಿದ್ದು ಬೇಸರ ಬರುತ್ತಿದ್ದರೆ ಹುಚ್ಚು ಹಿಡಿದಿರಲು ಮನುಷ್ಯನ ಬುದ್ಧಿಯು ಭ್ರಮಿಷ್ಟವಾಗದೇಯಿದ್ದರೆ ಅವು ಇರುವವೆಂದು ಅನ್ನುವದರಲ್ಲಿ ಅರ್ಥವೇನಿರುವದು? ॥ ೨೪ ॥ ಈ ಮಾತಿನ ಸಾರವು (ರಹಸ್ಯವು) ಇಷ್ಟೇಯಿರುವದು. ಅರ್ಜುನನು ಶ್ರೀಕೃಷ್ಣನ ಮಿತ್ರತ್ವದ ಮಂದಿರವೇ ಆಗಿರುವನು. ಮತ್ತು ಸುಖದಿಂದ ಶೃಂಗಾರವನ್ನಾಡಿರುವಂಥ ಶ್ರೀಕೃಷ್ಣನ ಮನಸ್ಸು ಪ್ರತ್ಯಕ್ಷ ನೋಡುವಂಥ ಕೈಗನ್ನಡಿಯೇ ಆಗಿರುವನು. ॥ ೨೫ ॥ ಈ ಪ್ರಕಾರಾ ಅರ್ಜುನನು ಧನ್ಯನೂ, ಪುಣ್ಯಪವಿತ್ರನೂ ಮತ್ತು ಭಕ್ತಿರೂಪ ಬೀಜವನ್ನು ಬಿತ್ತುವ ಉತ್ತಮವಾದ ಭೂಮಿಯೂ ಯಿದ್ದುದರಿಂದಲೇ ಅವನು ಶ್ರೀಕೃಷ್ಣನ ಕೃಪೆಗೆ ಪಾತ್ರನಾಗಿರುವನು. ॥ ೨೬ ॥ ಶ್ರವಣದಿಂದ ಆತ್ಮನಿವೇದನದ ವರೆಗೆ ನವವಿಧ ಭಕ್ತಿಗಳಲ್ಲಿ ಆತ್ಮನಿವೇದನದ ಹಿಂದಿನ ಸಖ್ಯವೆಂಬ ಲನೇ ಭಕ್ತಿಗೆ ಪಾರ್ಥನು ಅಧಿಷ್ಠಾನನೂ ಆಶ್ರಯಭೂತನೂ ಮುಖ್ಯ ದೈವತವೂ ಆಗಿರುತ್ತಾನೆ. ॥ ೨೭ ॥ ಭಗವಾನ ಶ್ರೀಷ್ಣಧನಿಯು ಹತ್ತರದಲ್ಲಿಯೇ ಇರಲು ಆ ಪ್ರಭುವಿನ ವರ್ಣನೆಯನ್ನು ಮಾಡದೇ ಭೃತ್ಯನನ್ನು ಸ್ತುತಿಸುವದರಿಂದ ಅತ್ಯಧಿಕವಾದ ಸಂತೋಷವು ಭಗವಂತನಿಗೆ ಉಂಟಾಗಬೇಕೆಂದರೆ ಪಾರ್ಥನು ಇಂಥ ಯೋಗ್ಯತೆಯುಳ್ಳವನೂ ಸಹಜವೇ ಶ್ರೀಹರಿಗೆ ಅತಿಪ್ರೀತಿಯವನೂ ಆಗಿದ್ದನು. ॥ ೨೮ ॥ ಯಾವ ಪತಿವ್ರತೆಯು ತನ್ನ ಪತಿಯನ್ನು ಅತಿ ಪ್ರೀತಿಯಿಂದ ಸೇವೆಮಾಡಿ ಪತಿಗೆ ಮಾನ್ಯವಾಗಿರುವಳೋ ಆ ಪತಿವ್ರತೆಯನ್ನು ಲೋಕದ ಜನರು ವಿಶೇಷವಾಗಿ ವರ್ಣಿಸುವದಿಲ್ಲವೇ? ॥ ೨೯ ॥ ಇದೇ ರೀತಿಯಿಂದಾ ಅರ್ಜುನನನ್ನೇ ಇಲ್ಲಿ ವಿಶೇಷವಾಗಿ ಸ್ತೋತ್ರಮಾಡಬೇಕಾಗಿರುವದೆಂಬದು ನನ್ನ ಮನಸ್ಸಿಗೆ ತೋಚಿದ್ದರಿಂದ ನಾನು ಹಾಗೆ ಮಾಡಿರುವೆನು. ಯಾಕಂದರೆ ತ್ರಿಭುವನದ ಸರ್ವಭಾಗ್ಯವು ಒಬ್ಬ ಅರ್ಜುನನಲ್ಲಿಯೇ ನೆಲಸಿರುವದು. ॥ ೩೦ ॥ ಯಾವ ಪಾರ್ಥನ ಪ್ರೇಮದ ದೆಶೆಯಿಂದ ಮರುಳನಾಗಿ ನಿರಾಕೃತಿಯಾದ ಪರಬ್ರಹ್ಮ ಶ್ರೀಕೃಷ್ಣಮೂರ್ತಿಯು ಸಗುಣಸ್ವರೂಪಧರಿಸಿ ಅವನಿಗಧೀನನಾಗಿ ಅವತಾರ ತೆಗೆದುಕೊಳ್ಳಬೇಕಾಯಿತೋ, ಆ ದೇವನು ಪೂರ್ಣನಾಗಿದ್ದರೂ ಅರ್ಜುನನ ಸಖ್ಯತ್ವದ ಉತ್ಕಟವಾದ ಇಚ್ಛೆಯು ಆ ಪರಮೇಶ್ವರನಿಗೆ ಉಂಟಾಗಿರುವದು. ॥ ೧೩೧ ॥ ಆಗ್ಗೆ ಶ್ರೋತೃಗಳು ಅನ್ನುತ್ತಾರೆ. ನಮ್ಮ ಭಾಗ್ಯವು ದೊಡ್ಡದು! ಶ್ರೀ ಜ್ಞಾನೇಶ್ವರನ ಭಾಷಾಸರಣಿಯು ಅದರಲ್ಲಿಯ ಸುಂದರ ಶಬ್ದಗಳ ನುಧುರತೆಯ ಸೌಂದರ್ಯವು, ನಾದಬ್ರಹ್ಮನಿಗೆ ಸಹ ಜಯಸಿರುವದು. ॥೩೨॥ ಎಲೋ! ಶುದ್ಧ ಮಹಾರಾಷ್ಟ್ರ ಭಾಷೆಯ ಸಂಭಾಷಣದ ವರ್ಣನೆಯಿಂದ ಹೃದಯಾಕಾಶದ ಮೇಲೆ ಶೃಂಗಾರಾದಿ ನವರಸದ ಬೇರೆ ಬೇರೆ ಮುದ್ರೆಗಳು ಮೂಡಬೇಕೆಂದರೆ, ಇದು ಹೆಚ್ಚಿನ ಆಶ್ಚರ್ಯವಿರುವದಿಲ್ಲೇನು? ॥ ೧೩೩ ॥ ಶ್ರೀ ಜ್ಞಾನೇಶ್ವರ ಮಹಾರಾಜರ ಸಂಭಾಷಣವು ಹ್ಯಾಗಿರುವದೆಂದರೆ ಜ್ಞಾನರೂಪ ಚಂದ್ರಮನ ಬೆಳದಿಂಗಳದಂತೆ ಸ್ವಚ್ಛವಾಗಿದ್ದು ಅವರ ಭಾಷಣದ ಭಾವಾರ್ಥದಿಂದ ಮನಸಿಗೆ ಆನಂದ ಉಂಟಾಗುತ್ತದೆ. ಆದುದರಿಂದ ಗೀತೆಯ ಶ್ಲೋಕದಲ್ಲಿಯ ಅರ್ಥವು ಚಂದ್ರವಿಕಾಶೀನೀ ಕಮಲದಂತೆ ಸಹಜವೇ ಅರಳಿರುವದು. ॥ ೩೪ ॥ ಆ ಸಂಭಾಷಣದ ಯೋಗ್ಯತೆಯು ಹ್ಯಾಗೆ ಇರುವದೆಂದರೆ ನೀರೀಚ್ಛ ಮನುಷ್ಯನಿಗೆ ಸಹ ಈ ವ್ಯಾಖ್ಯಾನವನ್ನು ಕೇಳುವ ಅಪೇಕ್ಷೆಯು ಉಂಟಾಗುವದು. ಈ ವ್ಯಾಖ್ಯಾನದ ಶ್ರವಣದಿಂದ ಶ್ರೋತೃಗಳ ಅಂತಃಕರಣದಲ್ಲಿ ಪ್ರಕಾಶಬಿದ್ದು ಅವರು ಸಂತೋಷದಿಂದ ತಲೆದೂಗಿದರು. ॥ ೧೩೫ ॥ ಹೀಗೆ ಶ್ರೋತೃಗಳ ಮನಸ್ಸಿನಭಾವವನ್ನು ತಿಳಿದು ನಿವೃತ್ತಿದಾಸ ಜ್ಞಾನದೇವರು ಅನ್ನುತ್ತಾರೆ. ಶ್ರೋತೃಗಳಿರಾ! ಇತ್ತಕಡೆಗೆ ಅವಧಾನವನ್ನೀಯಬೇಕೆಂದು ನುಡಿದರು. ಶ್ರೀಕೃಷ್ಣರೂಪ ಸೂರ್ಯನು ಪಾಂಡವರ ಕುಲದಮೇಲೆ ಪ್ರಕಾಶ ಮಾಡಿದನು. (ಶ್ರೀಕೃಷ್ಣನು ಪಾಂಡವರ ಮೇಲೆ ಪರಮಾನುಗ್ರಹ ಮಾಡಿದನು.) ॥೩೬॥ ಯಾವನಿಗೆದೇವಕಿಯು ನವಮಾಸ ಗರ್ಭದೊಳಗೆ ಹೊತ್ತಳೋ, ಯಶೋದೆಯು ಕಷ್ಟಬಟ್ಟು ಯಾವ ಅರ್ಭಕನನ್ನು ಜೋಪಾನಮಾಡಿ ಸಲುಹಿದಳೋ, ಆ ಗೋಪಾಲಕೃಷ್ಣಮೂರ್ತಿಯು ಪಾಂಡವರ ಅಧೀನನಾಗಿ ಅವರ ಬಂಡಿ ಹೊಡೆಯುವ ಆಳಾದನು. ಕಟ್ಟ

ಕಡೆಗೆ ಪಾಂಡವರಿಗೇ ಉಪಯೋಗವಾದನು. ॥ ೩೭ ॥ ಆದುದರಿಂದ ಬಹುದಿನಸಗಳ ವರೆಗೆ ಅವನ ಸೇವೆಮಾಡಬೇಕು. ಮತ್ತು ಸಮಯ ಸಾಧಿಸಿ ಅವನಲ್ಲಿ ವಿನಯದಿಂದ ಬೇಡಿಕೊಳ್ಳಬೇಕೆಂಬುವಷ್ಟು ಸಹಪ್ರಯಾಸವು ಆ,ಭಾಗ್ಯಶಾಲಿಯಾದ ಅರ್ಜುನನಿಗೆ ಬೀಳಲಿಲ್ಲ ! ॥ ೩೭ ॥ ಶ್ರೋತೃಗಳು ಅನ್ನುತ್ತಾರೆ ಇಷ್ಟಂತೂ ಇರಲಿ, ಇನ್ನುಮುಂದೆ ಕಥಾಭಾಗವನ್ನು ಬೇಗನೇ ಹೇಳಬೇಕೆಂದು ಕೇಳಿಕೊಳ್ಳಲು (ಶ್ರೀ ಜ್ಞಾನೇಶ್ವರ ಮಹಾರಾಜರು ಅನ್ನುತ್ತಾರೆ.) ಅರ್ಜುನನು ಸಲಿಗೆಯಿಂದ ಬೇಡಿಕೊಳ್ಳುತ್ತಾನೆ. ದೇವಾ ! ನೀವು ಯಾವ ಈ ಸಂತರ ಲಕ್ಷಣವನ್ನು ಹೇಳಿದಿರಿ ಅದು ನನ್ನ ಅಂತಃಕರಣದಲ್ಲಿ ನಿಲ್ಲುವ ದಿಲ್ಲ. ॥೩೯॥ ಈ ಲಕ್ಷಣದ ತಾತ್ಪರ್ಯವನ್ನು ತಿಳಿದುಕೊಳ್ಳಲಿಕ್ಕೆ ನಾನು ನಿಜವಾಗಿ ಅಯೋಗ್ಯನೂ ಅಪೂರ್ತನೂ ಇರುವೆನು. ಆದರೂ ನಿಮ್ಮ ಅನುಗ್ರಹದಿಂದ ಒಂದುವೇಳೆ ನನಗೆ ಯೋಗ್ಯತೆಯು ಬಂದರೂ ಬರಬಹುದು. ॥ ೧೪೦ ॥ ಆದರೆ ನಿಮ್ಮ ಮನಸ್ಸಿಗೆ ಬಂದರೆ ನನ್ನನ್ನು ಬ್ರಹ್ಮಸ್ವರೂಪದೊಳಗಿರಿಸುವದು. ನಿಮಗೆ ಆಶ್ಚರ್ಯವೇ ? ನೀವು ಯಾವ ದಾದರೊಂದು ಅಭ್ಯಾಸಮಾಡಲು ನನಗೆ ಉಪದೇಶ ಮಾಡಿದರೆ ಅದೆಲ್ಲವನ್ನು ಭಕ್ತಿಪೂರ್ವಕವಾಗಿ ಮಾಡಲು ನನಗೆ ಅಸಾಧ್ಯವಿರುವದೇ ? ॥ ೪೧ ॥ ಎಲೋ ದೇವನೆ ! ನೀವು ಯಾರ ಮಾತು ಹೇಳುತ್ತಿರುವಿರೆಂಬದು, ನನಗೆ ತಿಳಿಯುವ ದಿಲ್ಲ. ಅದನ್ನು ಕೇಳಿ ನಾನು ನನ್ನ ಮನಸಿನಲ್ಲಿ ಅವರ ಸ್ತೋತ್ರಮಾಡುತ್ತಿರುವೆನು. ಆವರೆ ಇಂಥ ಲಕ್ಷಣಗಳು ಯಾವ ಪುರುಷನಲ್ಲಿ ಸ್ವಯಂಸಿದ್ಧವಾಗಿರುವವೋ, ಆ ಪುರುಷನ ಯೋಗ್ಯತೆಗೆ ಪರಿಮಿತಿಯೇ ಇರುವದಿಲ್ಲ. ॥ ೪೨ ॥ ಪ್ರಭೋ! ನಾನು ನಿಮ್ಮವನೇ ಎಂದು ತಿಳಿದು ನನ್ನಲ್ಲಿ ಅಷ್ಟು ಯೋಗ್ಯತೆಯು ಬರುವಂತೆ ಮಾಡುವಿರೇನು ? ಆಗ್ಗೆ ಶ್ರೀಕೃಷ್ಣ ಭಗವಾನನು ನಗೆಮೊಗದಿಂದ ಅನ್ನುತ್ತಾನೆ. ಅಹುದು, ಯಾಕಾಗಲೊಲ್ಲದು. ನಿನ್ನ ಮನೋಬಯಕೆಯಂತೆ ಮಾಡುವೆವು. ॥ ೪೩ ॥ ನೋಡು, ಎಲ್ಲಿಯವರೆಗೆ ಒಂದು ಸಮಾಧಾನ ಪ್ರಾಪ್ತವಾಗಿರುವದಿಲ್ಲವೋ, ಅಲ್ಲಿಯವರೆಗೆ ನಾಲ್ಕೂ ಕಡೆಯಿಂದ ಸುಖದ ಬರಗಾಲವೇ ಉಂಟಾಗುತ್ತದೆ. ಒಂದುವೇಳೆ ಸಂತೋಷವು ಪೂರ್ಣಪ್ರಾಪ್ತವಾದಮೇಲೆ ಸುಖದ ಕೊರತೆ ಹೇಗೆ ಆಗುವದು ! ॥ ೪೪ ॥ ಅದೇ ಪ್ರಕಾರ ಸರ್ವಶಕ್ತಿಸಮನ್ ಸಮರ್ಥ ಸರ್ವೇಶ್ವರನ ಪೂರ್ಣ ಸೇವಕನೆನಿಸಿದ ಅರ್ಜುನನು ಸಹಜವೇ ಬ್ರಹ್ಮಸ್ವರೂಪನಾಗುವದರಲ್ಲಿ ಸಂದೇಹವೇನು ? ಅರ್ಜುನನ ಸದೈವಭಾಗ್ಯದ ಭಾರದಿಂದ ಶ್ರೀಕೃಷ್ಣನು ಬಾಗಿ ಅವನಿಗಧೀನನಾಗಿ ಹೇಗೆ ಫಲಪ್ರಾಪ್ತನಾಗಿರುವನೆಂಬದನ್ನು ನೋಡಿರಿ. ॥ ೪೫ ॥ ಇಂದ್ರಾದಿ ದೇವತೆಗಳಿಗೆ ಸಹ ಸಾವಿತಾರು ಜನ್ಮತೆಗೆದುಕೊಂಡರೂ, ಯಾವನ ದರ್ಶನವಾಗಬೇಕಾದರೆ ದುರ್ಮಿಳವಾಗಿರುವದೋ, ಆ ಶ್ರೀಕೃಷ್ಣನು ಅರ್ಜುನನ ಮಾತನ್ನು ಒಂದೂ ಮೀರುತ್ತಿದ್ದಿಲ್ಲ. ಭಕ್ತಾಧೀನನಾಗಿದ್ದನು. ॥ ೪೬ ॥ ಆ ಮೇಲೆ ಅರ್ಜುನನು ಬ್ರಹ್ಮಸ್ವರೂಪನಾಗಬೇಕೆಂಬದನ್ನು ಶ್ರೀಕೃಷ್ಣನು ಸಂಪೂರ್ಣವಾಗಿ ಕೇಳಿದನು. ॥ ೪೭ ॥ ಆ ಸಮಯದಲ್ಲಿ ಶ್ರೀಕೃಷ್ಣನು ಮನಸ್ಸಿನಲ್ಲಿ ವಿಚಾರಮಾಡಿ ಅನ್ನುತ್ತಾನೆ. ಕಾನು ಬ್ರಹ್ಮಸ್ವರೂಪನಾಗಬೇಕೆಂಬ ಬಯಕೆಯು ಅರ್ಜುನನಿಗೆ ಉಂಟಾಗಿದೆ ಎಂದಬಳಿಕ ಅವನ ಬುದ್ಧಿಯ ಉದರದಲ್ಲಿ ವೈರಾಗ್ಯದ ಗರ್ಭವು ನಿಂತಿರುವದು. ॥ ೪೮ ॥ ಅಥವಾ ಅರ್ಜುನನು ನೂತನವಾದ ವೃಕ್ಷವಿದ್ದಾಗ್ಯೂ ವೈರಾಗ್ಯರೂಪ ವಸಂತದ ಭರದಿಂದ ಅಶಂಬ್ರಹ್ಮ ರೂಪ ಮೊಗ್ಗೆಗಳ ಭಾರದಿಂದ ಬಾಗಿರುವನು. ॥ ೪೯ ॥ ಆದುದರಿಂದ ಇವನಿಗೆ ಮೋಕ್ಷರೂಪ ಫಲದ ಪ್ರಾಪ್ತಿಯು ತೀವ್ರವೇ ದೊರಕಬಹುದು. ಯಾಕಂದರೆ ಇವನು ವೈರಾಗ್ಯಸಂಪನ್ನನಾಗಿರುವನೆಂಬದು ಶ್ರೀಕೃಷ್ಣನಿಗೆ ಮನೋನಿರ್ಧಾರ ಉಂಟಾಯಿತು. ॥ ೧೫೦ ॥ ಶ್ರೀಕೃಷ್ಣನು ಅನ್ನುತ್ತಾನೆ— ಇನ್ನು ಮೇಲೆ ಅರ್ಜುನನು ಯಾವ ಅನುಷ್ಠಾನವನ್ನು ಆಚರಿಸುವನೋ, ಅದೆಲ್ಲವೂ ಅವನಿಗೆ ತೀವ್ರಸೇ ಫಲದ್ರೂಪವಾದೀತು. ಆದುದರಿಂದ ಇವನಿಗೆ ಯೋಗಾಭ್ಯಾಸ ಮಾಡಲು ಉಪದೇಶಮಾಡಿದರೆ ಅದು ಎಂದಿಗೂ ವ್ಯರ್ಥವಾಗಲಾರದು. ॥ ೧೫೧ ॥ ಎಂಬದನ್ನು ಆಗ್ಗೆ ಶ್ರೀಹರಿಯು ತನ್ನ ಮನಸ್ಸಿನಲ್ಲಿ ವಿಚಾರಮಾಡಿ ಅನ್ನುತ್ತಾನೆ— ಅರ್ಜುನನೇ ! ನಾವು ನಿನಗೆ ಯಾವ ಯೋಗಮಾರ್ಗವನ್ನು ಹೇಳಬೇಕೆಂದಿರುವೆವೋ, ಅದು ಸರ್ವಮಾರ್ಗದಲ್ಲಿ ರಾಜನೆನಿಸಿಕೊಂಡಿರುತ್ತದೆ ಅದನ್ನು ನೀನು ಕೇಳು. ॥ ೧೫೨ ॥ ಈ ಮಾರ್ಗದಲ್ಲಿ ಪ್ರವೃತ್ತಿರೂಪ ಗಿಡದ ಬುಡಕ್ಕೆ ನಿವೃತ್ತಿರೂಪ ಕೋಟಗಟ್ಟೇ ಫಲಗಳು ಕಾಣುತ್ತಿರುತ್ತವೆ. (ಈ ಮಾರ್ಗದ ಆಚರಣ ಮಾಡಲಿಕ್ಕೆ ಹತ್ತುವದರಿಂದ ಮೋಕ್ಷರೂಪಿ ಫಲವು ದೊರಕುತ್ತದೆ.) ಮತ್ತು ಇದೇ ಮಾರ್ಗದಿಂದ ಶ್ರೀ ಶಂಕರನು ಈ ಹೊತ್ತಿನವರೆಗೆ ಯಾತ್ರೆಯನ್ನು ಮಾಡುತ್ತಿರುವನು. ॥ ೧೫೩ ॥ ಎರಡನೇ ಯೋಗೀ ಜನಿಸಿದರೂ

ಹೃದಯಾಕಾಶದಲ್ಲಿ ಅಡ್ಡಮಾರ್ಗದಿಂದ ನಡಿಯಹತ್ತಿದರು. ಆ ಮೇಲೆ ಅನುಭವದಿಂದ ಈ ರಾಜಮಾರ್ಗದ ಧೋರಣವು ಅವರಿಗೆ ದೊರಕಿತು. ॥ ೧೫೪ ॥ ಅವರು ಮಿಕ್ಕುಳಿದ ಸರ್ವ ಅಜ್ಞಾನದ ಮಾರ್ಗಗಳನ್ನು ಬಿಟ್ಟುಕೊಟ್ಟು ಸರಳವಾದ ಮಾರ್ಗದಿಂದ ಒಂದೇಸವನೇ ನಡಿಯಲಿಕ್ಕೆ ಹತ್ತಿದರು. ॥ ೧೫೫ ॥ ಆ ಮೇಲೆ ಪೂರ್ವದಲ್ಲಿಯ ಮಹರ್ಷಿಗಳಾದರೂ ಇದೇ ಮಾರ್ಗದಿಂದ ಬಂದರು. ಅಸದು ಸಾಧಕರಿದ್ದು ಸಿದ್ಧರಾದರು. ಮತ್ತು ಅದೇಪ್ರಕಾರಾ ತತ್ವಜ್ಞಾನಿಗಳು ಇದೇ ಪಂಥದಿಂದ ಶ್ರೇಷ್ಠತ್ವವನ್ನು ಪಡೆದರು. ॥ ೧೬ ॥ ಈ ಮಾರ್ಗದಿಂದ ನಡೆಯುತ್ತಿರಲು ಹಸಿವೆ ನೀರಡಿಕೆಗಳ ಸ್ಮರಣೆಯು ಉಳಿಯುವದಿಲ್ಲ. ಈ ದಾರಿಯಿಂದ ನಡೆಯುತ್ತಿರಲು ರಾತ್ರಿ ಮತ್ತು ಹಗಲು ಇದರ ಕಲ್ಪನೆಯು ಆಗುವದಿಲ್ಲ. ॥ ೧೭ ॥ ಈ ಮಾರ್ಗಕ್ರಮಣ ಮಾಡುತ್ತಿರಲು ಎಲ್ಲೆಲ್ಲಿ ಪಾದಗಳು ಬೀಳುವವು ಆ, ಆ, ಸ್ಥಳದಲ್ಲಿ ಮೋಕ್ಷದ ಖಣಿಯೇ ತೆರೆಯುತ್ತದೆ. ಮತ್ತು ಅಕಸ್ಮಾತ ಅವನು ಅಡಮಾರ್ಗವನ್ನು ಹಿಡಿದರೂ ಅವನಿಗೆ ಸ್ವರ್ಗಸುಖವು ದೊರಕುತ್ತದೆ. ॥ ೧೮ ॥ ಅವನು * ಪೂರ್ವದ ಮಾರ್ಗದಿಂದ ಹೊರಟು ಅಂದರೆ ಪ್ರವತ್ತಿ ಮಾರ್ಗವನ್ನು ಬಿಟ್ಟು (ಇಂದ್ರಿಯಗಳ ನಿಗ್ರಹನಾಡಿ) ಪಶ್ಚಿಮಕ್ಕೆ ಬರುತ್ತಾನೆ. (ನಿವೃತ್ತಿಯ ಮಾರ್ಗಕ್ಕೆ ಹತ್ತುತ್ತಾನೆ.) ಎಲೈ ಧನುರ್ಧರನೇ! ಈ ಸ್ಥಳದ ಮಾರ್ಗಕ್ರಮಣಮಾಡುವದು ಹೇಗೆಂದರೆ ನಿಶ್ಚಲವಾದ ನಿರ್ಧಾರ ಮನಸಿನಿಂದ ಕೂಡುವದೇ ಆಗಿರುವದು. ॥ ೫೯ ॥ ಈ ಹಾದಿಯಿಂದ ಯಾವ ಗ್ರಾಮಕ್ಕೆ ಹೋಗಬೇಕಾಗಿರುವದು ಆ ಗ್ರಾಮವೇ ತಾನು ಆಗುತ್ತಾನೆ. ಇದನ್ನು ಯಾಕೆ ಹೇಳಬೇಕು? ಅದು ನಿನಗೆ ಸಹಜವೇ ತಿಳಿಯುವದು. ॥ ೬೦ ॥ ಆಗ್ಗೆ ಅರ್ಜುನನು ಅನ್ನುತ್ತಾನೆ ಶ್ರೀಕೃಷ್ಣಾ! ಈ ಯೋಗರಾಸ್ಯವನ್ನು ಯಾವಾಗ್ಗೆ ನನಗೆ ಹೇಳುವಿರಿ? ಕಾರಣವೇನಂದರೆ ನಾನು ಉತ್ಸುಂರಾರೂಪ ಸಮುದ್ರದಲ್ಲಿ ಮುಳುಗುತ್ತಿರಲು ಅದರೊಳಗಿಂದ ನೀವು ನನ್ನನ್ನು ಯಾಕೆ ಕಡೆಗೆ ತೆಗೆಯುವದಿಲ್ಲ? ॥ ೬೧ ॥ ಆಗ್ಗೆ ಶ್ರೀಕೃಷ್ಣನು ಅನ್ನುತ್ತಾನೆ, ನಾವಾಗಯೇ ನಿನಗೆ ಹೇಳುತ್ತಿರುವಾಗ್ಗೆ ಪ್ರಶ್ನನೂಡುವದಕ್ಕೆ ಇಷ್ಟು ಯಾಕೆ ಆತುರಪಡುತ್ತಿರುವಿ? ॥೬೨॥

ಶುಚೌ ದೇಶೇ ಪ್ರತಿಷ್ಠಾಪ್ಯ ಸ್ಥಿರಮಾಸನಮಾತ್ಮನಃ।
ನಾತ್ಯುಚ್ಛ್ರಿತಂ ನಾತಿನೀಚಂ ಚೈಲಾಜಿನಕುಶೋತ್ತರಂ ॥ ೧೧ ॥

[ಶುಚೌ ದೇಶೇಇತಿ] ತರೀ ವಿಶೇಷೇ ಆತಾ ಬೋಲಿಜೇಲ। ಪರೀ ತೇ ಅನುಭವೇ ಉಪೇಗಾ ಜಾಈಲ। ಮ್ಹಣೋನ ತೈಸೇ ಏಕ ಲಾಗೇಲ। ಸ್ಥಾನ ಪಾಹಾವೇ ॥ ೬೩ ॥ ಜೇಥ ಆರಾಣುಕೇಚೇನಿ ಕೋಡೇ। ಬೈಸಲಿಯಾ ಉಠೋ ನಾವಡೇ। ವೈರಾಗ್ಯಾಸೀ ದುಣೀವ ಚಢೇ। ದೇ ಖಿಲಿಯಾಜೇ ॥ ೬೪ ॥ ಜೋ ಸಂತೀ ವಸವಿಲಾ ಠಾವೋ। ಸಂತೋಷಾಸಿ ಸಾವಾವೋ। ಮನಾ ಹೋಯ ಉತ್ಸಾವೋ। ಘೈರ್ಯಾಚಾ ॥ ೬೫ ॥ ಅಭ್ಯಾಸಚಿ ಆವಣ ಯಾತೇ ಕರೀ। ಹೃದಯಾತೇ ಅನುಭವರೀ। ಐಸೀ ರಮ್ಯ ಪಣಾಚೀ ಥೋರೀ। ಅಖಂಡ ಜೇಥ ॥ ೬೬ ॥ ಜಯಾ ಆಡ ಜಾತಾ ಪಾರ್ಥಾ। ತವಶ್ಚರ್ಯಾ ಮನೋರಥ। ಪಾಖಾಂಡೀ ಯಾಹೀ ಆಸ್ಥಾ। ಸಮೂಳ ಹೋಯ ॥ ೬೭ ॥ ಸ್ವಭಾವೇ ವಾಟೇ ಯೆತಾ। ಜರೀ ವರ ಪಡಾ ಜಾಹಾಲಾ। ಅವಚಿತಾ। ತರೀ ಸಕಾಮಹೀ ಪರೀ ಮೂಘೌತಾ। ನಿಘೋ ವಿಸರೇ ॥೬೮॥ ಐಸೇನೀ ನರಾಹತಯಾತೇ ರಾಹಾವೀ। ಭ್ರಮತಯಾತೇ ಬೈಸವೀ। ಥಾವಟೂನಿ ಟೀವವೀ। ವಿರಕ್ತೀತೇ ॥ ೬೯ ॥ ಹೇ ರಾಜ್ಯವರ ಸಾಂಡಿಜೇ। ಮಗ ನಿವಾಂತಾ ಏಥೆಂಚಿ ಅಸಿಜೇ। ಐಸೆ ಶೃಂಗಾರಯಾಂಹಿ ಉಪಜೇ। ದೇಖತ ಖೇವೋ ॥ ೭೦ ॥ ಜೇ ಯೇಣೇ ಮಾನೇ ಬರವಂಟ। ಆಣಿ ತೈಸೇಚಿ ಅತಿ ಚೋಖಟ। ಜೇಥ ಅಧಿಷ್ಠಾನ ಪ್ರಗಟ। ಡೋಳಾ ದಿಸೇ ॥ ೭೧ ॥ ಆಣಿಕಹೀ ಏಕ ಪಹಾವೇ। ಜೇ ಸಾಧಕೀ ವಸತೇ ಹೋ ಆವೇ। ಆಣಿ ಜನಾಚೇನಿ ಪಾಯರವೇ। ರುಳೇಚಿನಾ ॥೭೨॥ ಜೇಥ ಅಮೃತಾ ಚೇನೀ ಪಾಡೇ।

---

* ಟೀಪು— ಪೂರ್ವಮಾರ್ಗ ಅಂದರೆ ಅಧಾರಾದಿ ಅಗ್ನಿಚಕ್ರದವರೆಗೆ ಇರುವ ಮಾರ್ಗವು. ಪಶ್ಚಿಮಮಾರ್ಗವೆಂದರೆ ಶ್ರೀಕೂಟಾದಿ ಶೈಕಸ್ಯ ಚಕ್ರದವರೆಗಿನ ಮಾರ್ಗವು.

ವನ್ನು ಸೇರಿದರೇನೋ ನಿಜ. ಆದರೆ ಅಲ್ಲಿಯೇ ಅವಿತು ಕುಳಿತಿದ್ದ ವಿಷಯವೆಂಬ ಮೊಸಳೆಯು ಹಿಂಡಿ ಹಿಪ್ಪೆ ಮಾಡಿತು. ॥ ೬೫ ॥ ಮುಂದೆ ಅವರು ವಾರ್ಧಿಕ್ಯರೂಪೀ ತೆರೆಯಲ್ಲಿ ತೇಲುತ್ತಿರಲು, ಮತಿಭ್ರಂಶರೂಪ ಜಲದಲ್ಲಿ ಶಿಲುಕಿ ಬೀಳಬೇಕಾಯಿತು. ಹೀಗೆ ನಾಲ್ಕೂಕಡೆಯಿಂದ ಮುತ್ತಲ್ಪಟ್ಟವರಾಗಿ, ॥ ೬೬ ॥ ಶೋಕರೂಪೀ ದಂಡೆಗೆ ಅಪ್ಪಳಿಸಲ್ಪಡುತ್ತಾರೆ. ಇವರು ಕ್ರೋಧ ರೂಪೀ ತಿರಗಣಿ ಮಡುವಿನಲ್ಲಿ ಶಿಕ್ಕು ತೊಳಲಿ ಪಾರಾಗಬೇಕೆಂದು ಮುಖ ವನ್ನು ಮೇಲಕ್ಕೆತ್ತುವಷ್ಟರಲ್ಲಿಯೇ, ಆಪದರೂಪೀ ರಣಹದ್ದುಗಳು, ಚುಚ್ಚಿ, ಚುಚ್ಚಿ ಹಿಂಸಿಸಹತ್ತುತ್ತವೆ. ॥ ೬೭ ॥ ಆ ಮೇಲೆ ಅವರು ದುಃಖರೂಪೀ ಕೆಸರಿನಲ್ಲಿ ಉರಳ್ಯಾಡಿ ಮರಣರೂಪೀ ಉಸುಬಿನಲ್ಲಿ ಹೂಳಲ್ಪಡುತ್ತಾರೆ. ಹೀಗೆ ಯಾರು ವಿಷಯಗಳನ್ನು ಹಿಂಬಾಲಿಸಿದರೋ ಅವರು ವ್ಯರ್ಥವಾಗಿ ತಮ್ಮ ಜೀವಿತವನ್ನು ಹಾಳುಮಾಡಿಕೊಂಡರು. ॥ ೬೮ ॥ ಕೆಲವರು ಯಜ್ಞಾದಿಕ್ರಿಯಾ ರೂಪೀ ಪೆಟ್ಟಿಗೆಗಳನ್ನು ತಮ್ಮ ಹೊಟ್ಟೆಗೆ ಕಟ್ಟಿಕೊಂಡು (ಮಾಯಾನದಿಯನ್ನು) ದಾಟಲು ಯತ್ನಿಸಿದರು. ಅವರು ಸ್ವರ್ಗಸುಖರೂಪೀ ಗೂಹೆಯಲ್ಲಿ ಸಿಕ್ಕು ಬೀಳಬೇಕಾಯಿತು. ॥ ೬೯ ॥ ಕೆಲವರು ಮೋಕ್ಷ ಪ್ರಾಪ್ತಿಯ ಆಶೆಗಾಗಿ ಕರ್ಮರೂಪೀ ಬಾಹುಬಲದಲ್ಲಿ ನಂಬಿಗೆಯನ್ನಿಡುತ್ತಾರೆ. ಆದರೆ ಅವರು ವಿಧಿ ನಿಷೇಧದ (ಕರ್ತವ್ಯಾಕರ್ತವ್ಯ) ಗೊಂದಲದಲ್ಲಿ ಶಿಲುಕುತ್ತಾರೆ. ॥ ೭೦ ॥ ಯಾವ (ಮಾಯಾ) ನದಿಯಲ್ಲಿ ವೈರಾಗ್ಯರೂಪೀ ನೌಕೆಯು ನಡೆಯುವದಿಲ್ಲವೋ, ಮತ್ತು ಯಾವುದಕ್ಕೆ ವಿವೇಕದ ನೆಲೆಯು ಹತ್ತುವದಿಲ್ಲವೋ, ಇಂತಹ ನದಿಯನ್ನು ಇನ್ನಾವ ಉಪಾಯದಿಂದಲಾದರೂ ದಾಟಿ ಪಾರುಗಾಣಲು ಸಾಧ್ಯವಾಗಬಹುದೇ ? ॥ ೭೧ ॥ ಆದರೆ ಜೀವದ ಸ್ವಪರಾಕ್ರಮದಿಂದ ಈ (ಮಾಯಾ) ನದಿಯನ್ನು ದಾಟಿ ಪಾರಾಗಲು ಬರುತ್ತದೆಂದು ಹೇಳುವದು ಎಂತಹ ಪ್ರಕಾರದ್ದೆಂದು ಹೇಳುತ್ತೇನೆ ಕೇಳು ॥ ೭೨ ॥ ಪಥ್ಯ ಮಾಡದೇ ಇದ್ದವರ ಬೇನೆಯು ವಾಸಿಯಾಗಬಹುದಾದರೆ ? ದುರ್ಜನರ ಹೃದಯ ವನ್ನು ಅರಿಯಲು ಸಾಧುಗಳಿಗೆ ಸಾಧ್ಯವಾದರೆ ? ವಿಷಯಾಸಕ್ತ ಪುರುಷನಿಗೆ ಐಶ್ವರ್ಯ ಪ್ರಾಪ್ತವಾಗಲು ಅದನ್ನು ಅವನು ತ್ಯಾಗಮಾಡಬಹುದಾದರೆ ? ॥ ೭೩ ॥ ಅಥವಾ ಕಳ್ಳರ ಸಭೆಯು ನೆರೆಯಲು ಸಾಧ್ಯವಾದರೆ ? ಮೀನುಗಳಿಗೆ 'ಗಾಣ' ವನ್ನು ನುಂಗಲಿಕ್ಕೆ ಬರುವದಾದರೆ ? ಮತ್ತು ಅಂಜುಬುರುಕನು ಭೂತವನ್ನು ಅಂಜಿಸಬಲ್ಲನಾದರೆ ? ॥ ೭೪ ॥ ಇಲ್ಲವೇ ಚಿಗುರೆಯ ಚಿಕ್ಕ ಮರಿಯು ಬಲಿಯನ್ನು ಕತ್ತರಿಸಿ ಬಂಧನದಿಂದ ಮುಕ್ತವಾಗಬಹುದಾದರೆ ? ಇರುವೆಯು ಮೇರುಪರ್ವತವನ್ನು ಉಲ್ಲಂಘಿಸಬಹುದಾದರೆ ? ಮಾತ್ರ ಜೀವರುಗಳಿಗೆ ತಮ್ಮ ಸ್ವಯಂಬುದ್ಧಿಬಲದಿಂದ ಈ (ಮಾಯಾ) ನದಿಯನ್ನು ದಾಟಿ ಪಾರಾಗಲು ಸಾಧ್ಯವಾಗಬಹುದು. ॥ ೭೫ ॥ ಆದುದರಿಂದ ಎಲೈ ಪಂಡುಪುತ್ರನೇ ! ಯಾವ ಪ್ರಕಾರ ವಿಷಯದಲ್ಲಿ ಆಸಕ್ತನಾದ ಪುರುಷನಿಗೆ ಸ್ತ್ರೀಯಳನ್ನು ಜಯಿಸುವದು ಆಗುವದಿಲ್ಲವೋ, ಅದೇ ಪ್ರಕಾರ ಈ ಮಾಯೂರೂಪ ನದಿಯನ್ನು ಜೀವರುಗಳಿಗೆ ಸ್ವಸಾಮರ್ಥ್ಯದಿಂದ ದಾಟಿ ಹೋಗುವದಾಗುವದಿಲ್ಲ. ॥ ೭೬ ॥ ಆದರೆ ಯಾರು ನನಗೆ ಅನನ್ಯಭಾವದಿಂದ ಶರಣುಬಂದಿರುವರೋ, ಮತ್ತು ನನ್ನನ್ನು ಭಜಿಸುವರೋ ಅವರೊಬ್ಬರೇ ಮಾತ್ರ ಈ ಮಾಯಾನದಿಯನ್ನು ದಾಟಿ ಹೋಗಿರುವರು. ಅವರು ಈಚೆಯ ದಂಡೆಗೆ ಇರುವಾಗಲೇನೇ ಮಾಯಾನದಿಯ ನೀರು ಮಾಯವಾಗಿ (ಇಲ್ಲವಂತಾಗಿ) ಹೋಗಿರುವದು. ॥ ೭೭ ॥ ಯಾವನಿಗೆ ಧೃಡಮನಸ್ಕರಾದ ಸದ್ಗುರುಗಳು, ನೌಕೆ ಯನ್ನು ನಡಿಸಬಲ್ಲ ಅಂಬಿಗರಾಗಿರುವರೋ; ಯಾವ ಸಾಧಕನಿಗೆ ಆತ್ಮಾನುಭವರೂಪೀ ಹಿಡಿತವು ಸಿಕ್ಕಿರುವದೋ, ಯಾವನಿಗೆ ಆತ್ಮನಿವೇದನರೂಪೀ ನೌಕೆಯ ಸಹಾಯವು ದೊರಕಿರುವದೋ, ॥ ೭೮ ॥ ಯಾವನಿಗೆ ಅಹಂಭಾವದ ಭಾರವು ತಪ್ಪಿ ಹೋಗಿರುವದೋ, ವಿಕಲ್ಪರೂಪೀ ಗಾಳಿಯ ಝುಳುಕು ತಪ್ಪಿಸಿ ಮತ್ತು ಹೆಂಡರು ಸುಕ್ಕಳ ಮೇಲಿನ ಪ್ರೇಮರೂಪ ನೀರಿನ ಧಾರೆಯು ತಡೆಯಲ್ಪಟ್ಟಿರುವದೋ, ॥ ೭೯ ॥ ಮತ್ತು ಯಾವನಿಗೆ ಜೀವಪರಮಾತ್ಮರ ಐಕ್ಯ ರೂಪದ ಕಿರಿನೀರಿನಲ್ಲಿ ಜ್ಞಾನರೂಪೀ ಸುಲಭವಾದ ಕಾಲುದಾರಿಯು ದೊರಕಿರುವದೋ, ಅಂತಹರಿಗೆ ಮಾತ್ರ ನಿವೃತ್ತಿ ರೂಪಿ (ಆಚೆಯ) ದಡವನ್ನು ಸಲಭವಾಗಿ ಸೇರಲು ಸಾಧ್ಯ. ॥ ೮೦೦ ॥ ಅವರು ವೈರಾಗ್ಯರೂಪೀ ಕೈಗಳಿಂದ ನೀರನ್ನು ಕಡಿಯುತ್ತ, (ಈಸುತ್ತ) 'ನಾನು ಪರಮಾತ್ಮ ಸ್ವರೂಪ' ನೆಂಬ ಭಾವನೆಯ ಬಲದಿಂದ ಸಾವಧಾನದಿಂದ ಸಾಗುತ್ತ, ಯಾವುದೊಂದೂ ತೊಂದರೆಗಳಿಲ್ಲದಲೇನೆ, ಸುರಕ್ಷಿತರಾಗಿ ನಿವೃತ್ತರೂಪೀ ದಡವನ್ನು ಸೇರುವರು. ॥೮೦೧॥ ಈ ಮಾರ್ಗದಿಂದ ಯಾರು ನನ್ನನ್ನು ಭಜಿಸುತ್ತಾರೋ ಅವರೇ ಈ (ದುರ್ಧರವಾದ) ಮಾಯಾರೂಪ ನದಿಯನ್ನು

ದಾಟಿ ಪಾರಾಗುತ್ತಾರೆ. ಆದರೆ ಇಂಥ ಭಕ್ತರು ಬಹುವಾಗಿ ಸಿಕ್ಕಲಾರರು. ಎಲ್ಲಿಯೋ ಒಬ್ಬರು ದೊರಕ ಬಹುದು. ॥ ೧೦೨ ॥

ನ ಮಾಂ ದುಷ್ಕೃತೀನೋ ಮೂಢಾಃ ಪ್ರಪದ್ಯಂತೇ ನರಾಧಮಾಃ ।
ಮಾಯಯಾಪಹೃತಜ್ಞಾನಾ ಆಸುರಂ ಭಾವಮಾಶ್ರಿತಾಃ ॥ ೧೫ ॥
ಚತುರ್ವಿಧಾ ಭಜಂತೇ ಮಾಂ ಜನಾಃ ಸುಕೃತಿನೋಽರ್ಜುನ ।
ಆರ್ತೋ ಜಿಜ್ಞಾಸುರರ್ಥಾರ್ಥೀ ಜ್ಞಾನೀ ಚ ಭರತರ್ಷಭ ॥ ೧೬ ॥

[ನ ಮಾಮಿತಿ] ಜೀ ಬಹುತಾ ಏಕಾ ಅವಾಂತರ । ಅಹಂಕಾರಾಚಾ ಭೂತ ಸಂಚಾರ । ಜಾಹಾಲಾ ಮ್ಹಣೋನಿ ವಿಸರ । ಆತ್ಮ ಬೋಧಾಚಾ ॥ ೩ ॥ ತೇ ಮೇಳೀ ನಿಯಮಾಚೇ ವಸ್ತು ನಾಠವೇ । ಪುಢೀಲ ಅಧೋಗತೀಚೀ ಲಾಜ ನೇಣವೇ । ಆಣಿ ಕರಿತಾತ ಜೇ ನ ಕರಾವೇ । ವೇದ ಮ್ಹಣೇ ॥ ೪ ॥ ಪಾಹೇ ಪಾ ಶರೀರಾಚಿಯಾ ಗಾಂವಾ । ಜಯಾಲಾಗೀ ಆಲೇ ಪಾಂಡವಾ । ತೋಕಾರ್ಯಾರ್ಥ ಆಘವಾ । ಸಾಂಡೂನಿಯಾ ॥ ೫ ॥ ಇಂದ್ರಿಯ ಗ್ರಾಮಿಂಚೇ ರಾಜಬಿದೀ । ಅಹಂ ಮಮತೇಚಿಯಾ ಜಲ್ಪವಾದೀ । ವಿಕಾರಾಂತರಾಂಚೀ ಮಾಂದೀ । ಮೇಳವೂನಿಯಾ ॥ ೬ ॥ ದುಃಖಶೋಕಾಂಚ್ಯಾ ಘಾಈ । ಮಾರಲಿಯಾತೀ ಸೇಚಿ ನಾಹೀ । ಹೇ ಸಾಂಗಾವಯಾ ಕಾರಣ ಕಾಈ । ಜೇ ಗ್ರಾಸಿಲೇ ಮಾಯಾ ॥ ೭ ॥ ಮ್ಹಣೋನಿ ತೇ ನರಾತೇ ಚುಕಲೇ । ಏಕ ಚತುರ್ವಿಧ ಮಜ ಭಜಲೆ । ಜೆ ಹೀ ಆತ್ಮ ಹಿತಕೇಲೆ ।ವಾಢತೇಗಾ ॥ ೮ ॥ ತೋ ಪಹಿಲಾ ಆರ್ತ ಮ್ಹಣಿಜೆ । ದುಸರಾ ಜಿಜ್ಞಾಸು ಬೋಲಿಜೇ । ತಿಜಾ ಅರ್ಥಾರ್ಥಿ ಜಾಣಿಜೆ । ಜ್ಞಾನಿಯಾ ಚೌಥಾ ॥ ೯ ॥

ಅರ್ಥ— ಆದಕಾರಣ ಆ ಒಬ್ಬ ಸಾಧಕಪುರುಷನಹೊರ್ತು ಇನ್ನುಳಿದ ಎಲ್ಲ ಪ್ರಾಣಿಗಳಿಗೆ ಅನಾದಿಕಾಲದಿಂದ ಅಹಂಕಾರರೂಪಭೂತ ಸಂಚಾರವಾದುದರಿಂದ ಅವರಿಗೆ ಆತ್ಮಸ್ವರೂಪದ ವಿಸ್ಮೃತಿಯು ಆಗುತ್ತದೆ. ॥ ೩ ॥ ಆ ಕಾಲದಲ್ಲಿ ಅವರಿಗೆ ನಿಯಮರೂಪೀವಸ್ತುದ ಹೊದಿಕೆಯ ಅರಿವು ಕೂಡ ಇರುವದಿಲ್ಲ. ಮುಂದೆ ಬರುವ ಅಧೋಗತಿಯ ಲಜ್ಜಾಹೀನಸ್ಥಿತಿಯ ಆಭಾಸವೂ ಅವರಿಗೆ ಇರುವದಿಲ್ಲ. ಅವರು ವೇದಬಾಹ್ಯ (ನಾಸ್ತಿಕ)ರಾಗಿ ವರ್ತಿಸುತ್ತಾರೆ. ॥ ೪ ॥ ಅರ್ಜುನಾ, ಹೀಗೆ ನೋಡು! ಈ ಶರೀರರೂಪ ಗ್ರಾಮದಲ್ಲಿ ಯಾವ ಕಾರ್ಯಕ್ಕಾಗಿ ಅವತರಿಸಿರುವರೋ, ಆ ಎಲ್ಲ ಕಾರ್ಯಗಳನ್ನು ಬಿಟ್ಟುಕೊಟ್ಟು, ॥ ೫ ॥ ಇಂದ್ರಿಯ ಸಮುದಾಯರೂಪ ರಾಜಮಾರ್ಗದ ಮೇಲೆ ನಾನು–ನನ್ನದು ಎಂಬ ಬಡಬಡಿಕೆಗಾಗಿ, ಕಾಮಕ್ರೋಧ ಮೊದಲಾದ ವಿಕಾರಗಳನ್ನು ಕೂಡಿಹಾಕುತ್ತಾರೆ. ॥೬॥ ಮತ್ತು ದುಃಖ, ಶೋಕ ಮೊದಲಾದ ಗಾಯಗಳಾಗಿದ್ದರೂ ಅವರಿಗೆ ಅದರ ಸ್ಮರಣೆಸಹ ಇರುವದಿಲ್ಲ. ಇದನ್ನು ಹೇಳುವ ಕಾರಣವೇನೆಂದರೆ, ಆ ಪ್ರಾಣಿಗಳು ಮಾಯಾಮೋಹದಲ್ಲಿ ಮುಳುಗಿಹೋಗಿರುವರು. ॥ ೭ ॥ ಅಂತೆಯೇ ಅವರು ನನ್ನನ್ನು ಕಳೆದುಕೊಳ್ಳುತ್ತಾರೆ. ಆದರೆ ನಾಲ್ಕು ಜನರು ಮಾತ್ರ ನನ್ನ ಭಜನೆಯನ್ನು ಮಾಡಿ ಆತ್ಮಹಿತವನ್ನು ಹೆಚ್ಚಿಸಿಕೊಂಡರು ॥ ೮ ॥ ಅವರಲ್ಲಿ ಮೊದಲನೆಯವನು 'ಆರ್ತ' (ದುಃಖಪೀಡಿತ)ನೆಂದೂ ಎರಡನೆಯವನು 'ಜಿಜ್ಞಾಸು' (ಜ್ಞಾನದ ಇಚ್ಛೆಯನ್ನು ಮಾಡುವವನು). ಎಂದೂ ಮೂರನೆಯವನು 'ಅರ್ಥಾರ್ಥಿ' (ದ್ರವ್ಯದ ಅಪೇಕ್ಷೆನೂಡುವವನು) ಎಂದೂ ಮತ್ತು ನಾಲ್ಕನೆಯವನು 'ಜ್ಞಾನಿ' ಎಂದೂ ತಿಳಿಯಬೇಕು. ॥ ೯ ॥

ತೇಷಾಂ ಜ್ಞಾನೀ ನಿತ್ಯಯುಕ್ತ ಏಕಭಕ್ತಿರ್ವಿಶಿಷ್ಯತೇ ।
ಪ್ರಿಯೋ ಹಿ ಜ್ಞಾನಿನೋಽತ್ಯರ್ಥಮಹಂ ಸ ಚ ಮಮ ಪ್ರಿಯಃ ॥ ೧೭ ॥

[ತೇಷಾಮಿತಿ] ತೇಥ ಆರ್ತ ತೋ ಆರ್ತೀಚೇನಿ ವ್ಯಾಜೇ । ಜಿಜ್ಞಾಸು ತೋ ಜಾಣಾವಯಾಲಾಗೀ ಭಜೇ । ತಿಜೇನಿ ತೇಣೇ ಇಚ್ಛಿಜೇ । ಅರ್ಥಸಿದ್ಧಿ ॥ ೧೧೦ ॥ ಮಗ ಚೌಥಿಯಾಚ್ಯಾ ಠಾಯೀ । ಕಾಹೀಂಚಿ

ಕರಣೇ ನಾಹೀ । ಮ್ಹಣೋನಿ ಭಕ್ತ ಏಕ ಪಾಹೀ । ಜ್ಞಾನಿಯಾ ಜೋ ॥ ೧೧ ॥ ಜೇ ತಯಾ ಜ್ಞಾನಾಚೇನಿ ಪ್ರಕಾಶೇ । ಫಿಟಲೇ ಭೇದಾಚೇ ಕಡವಸೇ । ಮಗ ಮೀಚಿ ಜಾಹಾಲಾ ಸಮರಸೇ । ಆಣಿ ಭಕ್ತಹೀ ತೇಮಿಂಚಿ ॥ ೧೨ ॥ ಪರೀ ಆಣಿಕಾಂಚಿಯೇ ದಿಠೀ ನಾವೇಕ । ಜೈಸಾ ಸ್ಫಟಿಕಚೀ ಭಾಸೇ ಉದಕ । ತೈಸಾ ಜ್ಞಾನೀ ನವ್ಹೇ ಕೌತುಕ । ಸಾಂಗತಾ ತೋ ॥ ೧೩ ॥ ಜೈಸಾ ವಾಯಾ ಕಾ ಗಗನೀವಿರೇ। ಮಗ ವಾರೇಪಣ ವೇಗಳೇ ನುರೇ । ತೇವೀ ಭಕ್ತ ಹೇ ಪೈಜ ನ ಸರೇ । ಜರೀ ಐಕ್ಯಾಅಲಾ ॥ ೧೪ ॥ ಜರೀ ಪವನ ಹಾಲವೂನಿ ಪಾಹಿಜೇ । ತರೀ ಗಗನಾ ವೇಗಳಾ ದೇಖಿಜೇ । ಯೇರ್ಹವೀ ಗಗನ ತೋ ಸಹಜೇ । ಅಸೇ ಜೈಸೇ ॥ ೧೫ ॥ ತೈಸೇ ಶರೀರೀ ಹನ ಕರ್ಮೇ । ತೋ ಭಕ್ತ ಐಸಾ ಗಮೇ । ಪರೀ ಅಂತರ ಪ್ರತೀತೀ ಧರ್ಮೇ । ಮೀಚಿ ಜಾಲಾ ॥ ೧೬ ॥ ಆಣಿ ಜ್ಞಾನಾಚೇನಿ ಉಜಿಡಲೇಪಣೇ । ಮೀ ಆತ್ಮಾ ಐಸೇ ತೋ ಜಾಣೇ । ಮ್ಹಣವೂನೀ ಮಿಹೀ ತೈಸೇಂಚಿ ಮ್ಹಣೇ । ಉಚಂಬಳಲಾಸಾಂತಾ ॥ ೧೭ ॥ ಹಾಗಾ ಜೀವಾ ಪೈಲೀಕಡಿಲೀ ಖುಣೇ । ಜೋ ಪಾವೋನಿ ವಾವರೋ ಜಾಣೇ । ತೋ ದೇಹಾಚೇನಿ ವೇಗಳೇಪಣೇ । ಕಾಯವೇಗಳಾ ಹೋಯ ? ॥ ೧೮ ॥

ಅರ್ಥ— ಅವರಲ್ಲಿ ಆರ್ತಭಕ್ತನು ತನ್ನ ದುಃಖಗಳ ನಿವಾರಣಾರ್ಥವಾಗಿ ನನ್ನನ್ನು ಭಜಿಸುತ್ತಾನೆ. ಜಿಜ್ಞಾಸುವು ಜ್ಞಾನಪ್ರಾಪ್ತಿಗಾಗಿ ನನ್ನನ್ನು ಭಜಿಸುತ್ತಾನೆ. ಮೂರನೆಯವನಾದ ಅರ್ಥಾರ್ಥಿಯು ಧನಾಪೇಕ್ಷೆಯಿಂದ ನನ್ನನ್ನು ಭಜಿಸುತ್ತಾನೆ. । ೧೧೦ ॥ ಆದರೆ ಕಡೆಯವನಾದ ಜ್ಞಾನಿಯು ಮಾತ್ರ ಯಾವ ಕರ್ತವ್ಯಕ್ಕೂ ಅಂಟಿರದಿದ್ದರೂ (ನನ್ನ ಪ್ರಾಪ್ತಿಯ ದೆಸೆಯಿಂದಲೇ) ನನ್ನನ್ನು ಭಜಿಸುತ್ತಾನೆ. ಆದ್ದರಿಂದ ಆ ಜ್ಞಾನಿಪುರುಷನೇ ನನ್ನ ಭಕ್ತನಾಗಿರುವ ನೆಂಬುದನ್ನು ನೀನು ಜ್ಞಾಪಕದಲ್ಲಿಡು. ॥ ೧೧ ॥ ಕಾರಣವೇನೆಂದರೆ ಅವನ ಜ್ಞಾನಪ್ರಕಾಶದಿಂದ ಭೇದಾಭೇದರೂಪೀ ಅಂಧಃಕಾರವು ಮಾಯವಾಗುತ್ತದೆ. ಮತ್ತು ಆ ಮೇಲೆ (ಪರಸ್ಪರರಲ್ಲಿ ಪ್ರೇಮವು ಹೆಚ್ಚಾಗಿ) ಅವನು ನನ್ನ ಸ್ವರೂಪವನ್ನು ಹೊಂದುತ್ತಾನೆ. ನನ್ನ ಸಂಗಡ ಐಕ್ಯಹೊಂದಿದಾಗ್ಯಾದರೂ ನನ್ನಲ್ಲಿ ಅವನ ಪ್ರೇಮಯುಕ್ತ ಭಕ್ತಿಯು (ಸೇವ್ಯ–ಸೇವಕತ್ವಭಾವವು) ಹಾಗೆಯೇ ಸ್ಥಿರವಾಗಿ ನಿಲ್ಲುತ್ತದೆ. ॥ ೧೨ ॥ ಆವರೆ ಅನ್ಯರ ದೃಷ್ಟಿಗೆ ಕ್ಷಣಹೊತ್ತು ಸ್ಫಟಿಕಮಣಿಯು ಹೇಗೆ ಉದಕಮಯವಾಗಿ ತೋರುತ್ತದೊ, ಅದರಂತೆಯೇ ಇತರರ ದೃಷ್ಟಿಗೆ ಆ ಜ್ಞಾನೀಪುರುಷನು (ಭಜನ–ಪೂಜನ ಮುಂತಾದ ಶಾರೀರಿಕ ಕ್ರಿಯೆಗಳಿಂದ) ನನ್ನಿಂದ ಬೇರೆಯಾಗಿ ಕಾಣುತ್ತಾನೆ. ಆದರೆ ಅವನು ಹಾಗೆ ಇರದೇ ನನ್ನ ಸ್ವರೂಪವೇ ಆಗಿರುತ್ತಾನೆ. ಅದರ ವರ್ಣನೆಯನ್ನು ಮಾಡಬೇಕಾದರೆ ಬಹಳೇ ಆಶ್ಚರ್ಯವೆನಿಸುತ್ತದೆ. ॥ ೧೩ ॥ ಯಾವ ಪ್ರಕಾರ ಗಾಳಿಯು ಆಕಾಶದಲ್ಲಿ ಶಾಂತವಾದನೆಲೆ ಆ ಗಾಳಿಯು ಬೇರೆ ಉಳಿಯುವದಿಲ್ಲವ್ಹೋ, ಅದೇ ಪ್ರಕಾರ ಜ್ಞಾನಿಯು ಒಂದು ವೇಳೆ ನನ್ನ ಸಂಗಡ ಐಕ್ಯಹೊಂದಿದಾಗ್ಯಾದರೂ ಅವನು ಭಕ್ತನೆಂಬ ಪ್ರತಿಜ್ಞೆಯು ಹೋಗುವದಿಲ್ಲ. ॥ ೧೪ ॥ ಒಂದು ವೇಳೆ ಗಾಳಿಯನ್ನು ಅಲ್ಲಾಡಿಸಿ ನೋಡಿದರೆ ಅದು ಆಕಾಶದಿಂದ ಭಿನ್ನವಾಗಿರುವ ದೆಂಬದು ಸಹಜವೇ ತೋರುತ್ತದೆ. ಆದರೆ ಗಾಳಿಯು ಸ್ವಭಾವತಃ ಆಕಾಶರೂಪವೇ ಆಗಿರುತ್ತದೆ. ॥ ೧೫ ॥ ಅದೇ ಪ್ರಕಾರ ಜ್ಞಾನೀಪುರುಷನು ಯಾವಾಗ್ಯೆ ಶರೀರಸಂಬಂಧಿಯ ಸರ್ವಕರ್ಮದ (ಭಜನಪೂಜನಾದಿ) ಆಚರಣವನ್ನು ಮಾಡುತ್ತಾನೋ, ಆವಾಗ್ಯೆ ಅವನು ನನ್ನ ಭಕ್ತನಂತೆ ಕಾಣುತ್ತಾನೆ. ಆದರೆ ಸ್ವಾನುಭವದ ಯೋಗದಿಂದ ಅವನು ಮದ್ರೂಪನೇ ಆಗಿರುತ್ತಾನೆ. ॥ ೧೬ ॥ ಮತ್ತು ಜ್ಞಾನೋದಯವಾದುದರಿಂದ ಅವನು ನನಗೆ ತನ್ನ ಆತ್ಮನೇ ಇರುವೆ ನೆಂದು ತಿಳಿಯುತ್ತಾನೆ. ಆದುದರಿಂದ ನಾನು ಸಂತೋಷಗೊಂಡು ಜ್ಞಾನಿಯೂ ಕೂಡ ನನ್ನ ಆತ್ಮನಾಗಿರುವನೆಂದು ತಿಳಿಯುತ್ತೇನೆ. ॥ ೧೭ ॥ ಯಾವನು ಜೀವಪಣದ ಆಚೆಯಕಡೆಯ ಆತ್ಮಸ್ವರೂಪದ ಗುಟ್ಟನ್ನು ಕಂಡುಹಿಡಿದು ವ್ಯವಹಾರದಲ್ಲಿ ಅದರಂತೆ ವರ್ತಿಸುತ್ತಾನೋ, ಅವನು ದೇಹಧಾರಣಮಾಡಿದ್ದರಿಂದಷ್ಟೇ ನನ್ನಿಂದ ಬೇರೆ ಹೇಗಾಗುವನು ? ॥ ೧೮ ॥

ಉದಾರಾಃ ಸರ್ವ ಏವೈತೇ ಜ್ಞಾನೀ ತ್ವಾತ್ಮೈವ ಮೇ ಮತಂ ।
ಆಸ್ಥಿತಃ ಸ ಹಿ ಯುಕ್ತಾತ್ಮಾ ಮಾಮೇವಾನುತ್ತಮಾಂ ಗತಿಂ ॥ ೧೯ ॥

[ಉದಾರಾಃ ಇತಿ] ಮ್ಹಣೋನಿ ಆಪುಲಾಲ್ಯಾ ಹಿತಾಚೇನಿ ಲೋಭೆ । ಮಜ ಆವಡೇತೋಹೀ ಭಕ್ತ ಸ್ಪೋಂಬೇ । ಪರೀ ಮೀಚಿ ಕರೀ ವಾಲಭೇ । ಏಸಾ ಜ್ಞಾನಿಯಾ ಏಕ ॥ ೧೯ ॥ ಪಾಹೇ ಪಾ ದುಭತೇ ಯಾಚಿಯಾ ಆಶಾ । ಜಗಧೇನೂಸಿ ಕರೀತಸೇ ಫಾಂಸಾ । ಪರೀ ದೋರೇವೀಣ ಕೈಸಾ । ವತ್ಸಾಚಾ ಬಳೀ ॥ ೧೨೦ ॥ ಕಾ, ಜೇ, ತನುಮನ ಪ್ರಾಣೇ । ತೇ ಆಣಿಕ ಕಾಂಹೀಚಿ ನೇಣೇ । ದೇಖತ ಸಾಂತೇ ಮ್ಹಣೇ । ಹೇ ಮಾಯ ಮಾಝೀ ॥ ೨೧ ॥ ತೇ ಯೇಣೇ ಮಾನೇ ಅನನ್ಯಗತೀ । ಮ್ಹಣೂನಿ ಧೇನೂಹೀ ತೈಸೀಚಿ ಪ್ರೀತಿ । ತಯಾಲಾಗೀ ಲಕ್ಷ್ಮೀಪತೀ । ಬೋಲಿಲೀ ಸಾಚೇ ॥ ೨೨ ॥ ಹೇಅಸೋ ಮಗ ಮ್ಯಾಣಿತಲೇ । ಜೇ ಕಾ ತುಜ ಸಾಂಗಿತಲೇ । ತೇಹೀ ಭಕ್ತ ಭಲೇ । ಪಢಿಯಂತೇ ಆನ್ಹಾ ॥ ೨೩ ॥ ಪರೀ ಜಾಣೋನಿಯಾ ಮಾತೇ । ಜೇ ಪಾಹೋ ವಿಸರಲೇ ಮಾಘೌತೇ । ಜೈಸೇ ಸಾಗರಾ ಯೇವೂನಿ ಸರಿತೇ । ಮುರಡಾವೇ ಠೇಲೇ ॥ ೨೪ ॥ ತೈಸೀ ಅಂತಃಕರಣ ಕುಹರೀ ಜನ್ಮಲೀ । ಜಯಾಚೀ ಪ್ರೀತೀಗಂಗಾ ಮಜ ಮೀನಲೀ । ತೋಮೀ ಹೇ ಕಾಯಬೋಲೀ । ಫಾರಕರೂ ॥ ೨೫ ॥ ಯೇರ್ಹವೀ ಜ್ಞಾನಿಯಾ ಜೋ ಮ್ಹಣಿಜೇ । ತೋ ಚೈತನ್ಯಚಿ ಕೇವಳ ಮಾಝೋ । ಹೇ ನ ಮ್ಹಣಾವೇ ಪರೀ ಕಾಯಕೀಜೇ । ನ ಬೋಲಣೇ ಬೋಲೋ ॥ ೨೬ ॥

ಅರ್ಥ— ಆದ್ದರಿಂದ ಯಾವನಾದರೂ ಒಬ್ಬ ಮನುಷ್ಯನು ತನ್ನ ಹಿತದ ಸಲುವಾಗಿ ನನ್ನನ್ನು ಅಂಟಿಕೊಳ್ಳುತ್ತಾನೆ. ಆದರೆ ನಾನು ಮಾತ್ರ ಜ್ಞಾನೀಭಕ್ತನೊಬ್ಬನಲ್ಲಿಯೇ ಪ್ರೇಮವನ್ನಿಟ್ಟಿರುತ್ತೇನೆ. ॥ ೧೯ ॥ ಅರ್ಜುನಾ । ಹೀಗೆ ನೋಡು. ಹಾಲಿನ ಆಶೆಯಿಂದ ಸರ್ವಜನರು ತಾವಾಗಿಯೇ ಆಕಳಿಗೆ ' ದಳಿ ' ಹಾಕುತ್ತಿರುತ್ತಾರೆ. ಆದರೆ ಆಕಳಿಗೆ ಅದರ ಕರುವಿನ ಪ್ರೇಮಪಾಶವು ಎಷ್ಟು, ಬಿಗಿಯಾಗಿರುತ್ತದೆಂಬುದನ್ನು ನೋಡು. ಆಕಳು ತನ್ನ ಕರುವಿಗೆ ದಳಿಯ ಹೊರ್ತು ಸಹಜವೇ ಹಾಲು ಕುಡಿಸುತ್ತದೆ. ॥೧೨೦॥ ಇದರ ಕಾರಣನೇನೆಂದರೆ ಆ ಕರುವು, ಶರೀರದಿಂದಲೂ, ಮನಸ್ಸಿನಿಂದಲೂ, ಪ್ರಾಣದಿಂದಲೂ (ತನ್ನ ತಾಯಿಯನ್ನೇ ಆಶ್ರಯಿಸಿದ್ದು) ಎರಡನೇ ಯಾರನ್ನೂ ಅರಿಯದು. ಯಾವದು ಅದರ ಮುಂದೆ ಕಾಣುವದೋ ಅದು ತನ್ನ ತಾಯಿಯೇ ಇರುವದೆಂದು ನಂಬುತ್ತದೆ. ॥ ೨೧ ॥ ಆ ಕರುವು ಆಕಳ ವಿಷಯದಲ್ಲಿ ಇಷ್ಟು ಅನನ್ಯ ಪ್ರೇಮವನ್ನಿಟ್ಟಿರುತ್ತದೆ. ಅಂತೆಯೇ ಆ ಕರುವಿನ ಮೇಲೆ ಆಕಳು ಕೂಡಾ ತನ್ನ ಜೀವದ ಕಿಂತಲೂ ಹೆಚ್ಚಾದ ಪ್ರೇಮ-ವಿಶ್ವಾಸವನ್ನಿಟ್ಟಿರುತ್ತದೆ. ಆ ಕಾರಣದ ದೆಶೆಯಿಂದಲೇ ಮೇಲೆ ಭಗವಾನ್ ಶ್ರೀಕೃಷ್ಣನು ಏನು ಮಾತನಾಡಿದನೋ ಅದು ನಿಜವಿರುವದು. (ಎಂದು ಜ್ಞಾನೇಶ್ವರ ಮಹಾರಾಜರು ಅನ್ನುತ್ತಾರೆ.) ॥ ೨೨ ॥ ಆ ಮೇಲೆ ಭಗವಂತನು ಅನ್ನುತ್ತಾನೆ, ಇದಂತೂ ಇರಲಿ, ಜ್ಞಾನಿಗಳ ಹೊರ್ತು ನಿನಗೆ ಹೇಳಿದ ಬೇರೆ ಮೂರು ಪ್ರಕಾರದ ಭಕ್ತರನ್ನೂ ಕೂಡ ನಾನು ಪ್ರೀತಿಸುವೆನೆಂದೂ ತಿಳಿ. ॥ ೨೩ ॥ ಆದರೆ ನನ್ನನ್ನು ತಿಳಿದು ಯಾವನು (ಜ್ಞಾನೀಭಕ್ತನು) ಹಿಂದೆ ನೋಡುವದನ್ನು ಮರೆತಿರುವನೋ (ದೇಹ ಇಂದ್ರಿಯಾದಿ ಪ್ರಪಂಚವನ್ನು ಮರೆತಿರುವನೋ,) ಯಾವ ಪ್ರಕಾರ ನದಿಯು ಸಮುದ್ರಕ್ಕೆ ಕೂಡಿದವೆಲೆ, ಅದು ಹಿಂದಕ್ಕೆ ತಿರುಗುವದು ನಿಂತು ಹೋಗುತ್ತದೋ, ॥ ೨೪ ॥ ಅದೇ ಪ್ರಕಾರ ಯಾವನ ಅಂತಃಕರಣರೂಪೀ (ಹೃದಯ) ಗುಹೆಯೊಳಗಿಂದ, ಅನುಭವರೂಪೀ ಗಂಗೆಯು ಹೊರಬಿದ್ದು ನನ್ನನ್ನು ಕೂಡಿರುವಳೋ, ಆ ಗಂಗೆಯು ಮುಖ್ಯಪವೇ ಆಗಿರುವಳೆಂಬದನ್ನು ಶಬ್ದದಿಂದ ವಿಸ್ತಾರಮಾಡಿ ಏನು ಹೇಳಲಿ ? ॥ ೨೫ ॥ ನಿಜವಾಗಿ ನೋಡಿದರೆ ಜ್ಞಾನಿಯೆಂದು ಯಾರಿಗೆ ಅನ್ನುವರೋ ಅವರು ಕೇವಲ ನನ್ನ ಜೀವ ಇಲ್ಲವೇ ಪ್ರಾಣವೇ ಆಗಿರುತ್ತಾರೆ. ಈ ಮಾತನ್ನು ಶಬ್ದದಿಂದೇನೂ ಹೇಳಬೇಕಾಗಿಲ್ಲ. ಆದರೆ ಏನು ಮಾಡಬೇಕು ? ಇದು ಮಾತಾಡದೇ ಇದ್ದ ಮಾತಾಗಿದ್ದರೂ, ಪ್ರಸಂಗ ಬಿದ್ದದರಿಂದ ಹೇಳಬೇಕಾಯಿತು. ॥೨೬॥

ಬಹೂನಾಂ ಜನ್ಮನಾಮಂತೇ ಜ್ಞಾನವಾನ್ಮಾಂ ಪ್ರಪದ್ಯತೇ ।
ವಾಸುದೇವಃ ಸರ್ವಮಿತಿ ಸ ಮಹಾತ್ಮಾ ಸುದುರ್ಲಭಃ ॥ ೧೯ ॥

[ಬಹೂನಾಂ ಜನ್ಮನಾಮಿತಿ] ಜೇ ತೋ ವಿಷಯಾಚೀ ಮೋಠೀಝಾಡೀ । ಮಾಜೀ ಕಾಮ ಕ್ರೋಧಾಂಚೀ ಸಾಂಕಡೀ । ಚುಕಾವೂನಿ ಆಲಾ ಫಾಡೀ । ಸದ್ವಾಸನೇಚಿಯಾ ॥ ೨೭ ॥ ಮಗ ಸಾಧು

ಸಂಗೇ ಸುಭಟಾ । ಉಜೂ ಸತ್ಕರ್ಮಾಚಿಯಾ ವಾಟಾ । ಅಪೈವೃತ್ತೀಚಾ ಅವ್ಹಾಂಟಾ । ಡಾವ ಲೂನೀ ॥ ೨೮ ॥ ಆಣಿ ಜನ್ಮ ಶತಾಂಚಾ ವಾಹತವಣಾ । ತೇವೀ ಆಸ್ಥೇಚಿಯಾ ನ ಲೇಚಿ ವಾಹಣಾ । ತೇಥ ಫಲಹೇತೂಚಾ ಉಗಾಣಾ । ಕವಣ ಚಾಳೀ ॥ ೨೯ ॥ ಐಸಾ ಶರೀರ ಸಂಯೋಗಾಚಿಯೇ ರಾತೀ । ಮಾಜೀ ಧಾವತಾ ಸಡಿಯಾ ಆಯತೀ । ತವ ಕರ್ಮ ಕ್ಷಯಾಚೀ ಪಾಹಾತೀ । ಪಾಹಾಂಟ ಜಾಲಿ ॥೩೦॥ ತೈಸೀಚ ಗುರುಕೃಪಾ ಉಷಾ ಉಜಳಲೀ । ಜ್ಞಾನಾಚೀ ವೋತವಲೀ ಪಡಲೀ । ತೇಥ ಸಾಮ್ಯಾಚೀ ಬುದ್ಧಿ ಉಘಡಲೀ । ತಯಾಚಿಯೇ ದೃಷ್ಟಿ ॥ ೩೧ ॥ ತೇ ವೇಳೀ ಜಯಾಕಡೇ ವಾಸಪಾಹೀ । ತೇವುತಾ ಮೀಚಿತಯಾ ಏಕ ಆಹೇ । ಅಥವಾ ನಿವಾಂತ ಜರೀ ರಾಹೇ । ತರ್ಹೀಮೀಚಿ ತಯಾ ॥ ೩೨ ॥ ಹೇ ಅನೋ ಆಣಿಕ ಕಾಂಹೀ । ತಯಾಸರ್ವತ್ರ ಮೀವಾಂಜಾನಿ ನಾಹೀ । ಜೈಸೇ ಸಭಾಹ್ಯ ಜಳ ಡೋಹೀ । ಬುಡಾಲಿಯಾ ಘಟಾ ॥ ೩೩ ॥ ತೈಸಾ ತೋ ಮಜಭೀತರೀ । ಮೀ ತಯಾ ಆಂತ ಬಾಹೇರೀ । ಹೇ ಸಾಂಗಿಜೇಲ ಬೋಲಸರೀ । ತೈಸೇ ನಸ್ಹೇ ॥೩೪॥ ಮ್ಹಣೋನಿ ಅಸೋ ಹೇ ಇಯಾ ಪರೀ । ತೋದೇವೀ ಜ್ಞಾನಾಚೀ ವಾಖಾಯೀ । ತೇಣೇ ಸಂಸರಲೇನಿ ಕಟೀ । ಆಪ ವಿಶ್ವ ॥ ೩೫ ॥ ಹೇ ಸಮಸ್ತಹೀ ಶ್ರೀ ವಾಸುದೇವ । ಐಸಾ ಪ್ರತೀತಿ ರಸಾಚಾ ಪೋತಲಾ ಭಾವ । ಮ್ಹಣೋನಿಭಕ್ತಾ ಸಾಜೀ ರಾವ । ಆಣಿ ಜ್ಞಾನಿಯಾ ತೋಚಿ ॥ ೩೬ ॥ ಜಯಾಚಿಯೇ ಪ್ರತೀತೀಚ್ಯಾ ವಾಖಾರಾ । ಪವಾಡ ಹೋಯ ಚರಾಚರಾ । ತೋ ಮಯಾತ್ಮಾಧನುರ್ಧರಾ । ದುರ್ಲಭ ಆಥೀ ॥ ೩೭ ॥ ಯೇರ ಬಹುತ ಜೋಡತೀ ಕಿರೀಬೆ । ಜಯಾಂಚೀ ಭಜನೇ ಭೋಗಾಸಾರೀ । ಜೇ ಅಜ ತಿಮಿರೇ ದೃಷ್ಟಿ । ಮುದಜಾಲೇ ॥ ೩೮ ॥

ಅರ್ಥ— ಯಾವನು ವಿಷಯರೂಪ ಗಡುಚಾದ ಗಿಡಗಳ ಗುಂಪಿನಲ್ಲಿ ಕಾಮ ಕ್ರೋಧಾದಿಕ ಸಂಕಟಗಳನ್ನು ತಪ್ಪಿಸಿ, ಸದ್ವಾಸನೆಯ ಪರ್ವತದ ಮೇಲೆ ಹತ್ತಿ ಬಂದಿರುವನು. ಆ ಮೇಲೆ ಅರ್ಜುನನೇ । ಸಾಧುಗಳ ಸಂಗತಿಯಿಂದ ವಿಹಿತಕರ್ಮದ ಸರಳವಾದ ಮಾರ್ಗದಿಂದ ದುರಾಚಾರದ ನೀಚಮಾರ್ಗವನ್ನು ಬಿಟ್ಟುಕೊಟ್ಟು, ॥೨೮॥ ಮತ್ತು ನೂರು ಜನ್ಮಗಳವರೆಗೆ (ಕರ್ಮಮಾರ್ಗದ) ಪ್ರವಾಸ ಮಾಡುತ್ತಿರಲಿಕ್ಕಾಗಿಯೂ, ಅವನು ಫಲಾಪೇಕ್ಷಾರೂಪೀ ಪಾದರಕ್ಷೆಗಳನ್ನು (ಅಂತಃಕರುಣಾರೂಪೀ) ಕಾಲುಗಳಲ್ಲಿ ಹಾಕುವದಿಲ್ಲ. ಇಂಥ ಸ್ಥಿತಿಯಲ್ಲಿ ಜ್ಞಾನೀ ಭಕ್ತನು ಸ್ವರ್ಗಾದಿ ಫಲದ ಅಪೇಕ್ಷೆಯ ದೇಶೆಯಿಂದ, (ಸಾಧನದ) ಗಣಿತೆಯನ್ನು ಯಾಕೆ ಮಾಡುತ್ತ ಕೂಡುವನು? ॥ ೨೯ ॥ ಇದೇ ಪ್ರಕಾರ ಶರೀರ ಸಂಬಂಧಿ ಅಜ್ಞಾನರೂಪ ರಾತ್ರಿಯಲ್ಲಿ ಉಪಾಧಿರಹಿತನಾಗಿ ಒಬ್ಬನೇ ಹಾದೀ ನಡೆಯುತ್ತಿರಲಿಕ್ಕಾಗಿ, ಸಹಜವೇ ಕರ್ಮಕ್ಷಯವಾಗಿ, ಜ್ಞಾನೋದಯದ ಪ್ರಾತಃಕಾಲವು (ಸುರ್ಯೋದಯವು) ಆಗುತ್ತದೆ.॥೩೦॥ ಅದೇಕಾಲಕ್ಕೆ ಗುರುಕೃಪಾರೂಪೀ ಉಷಃಕಾಲವೂ ಆಗುತ್ತದೆ. ಮತ್ತು ಆ ಮೇಲೆ ಜ್ಞಾನರೂಪೀ ಸೂರ್ಯಪ್ರಕಾಶದ ಎಳೆ ಬಿಸಿಲು ಬಿದ್ದು, ಸಮದೃಷ್ಟಿಯ ಐಶ್ವರ್ಯವು ಅವನ ಕಣ್ಣಿಗೆ ಕಾಣುತ್ತದೆ. ॥ ೩೧ ॥ ಆವಾಗ ಅವನು ಯಾವ ಯಾವ ಕಡೆಗೆ ನೋಡುತ್ತಾನೋ, ಆ ಎಲ್ಲ ಸ್ಥಳದಲ್ಲಿ ನನ್ನ ಹೊರ್ತು ಇನ್ನಾವುದೂ ಕಾಣುವದಿಲ್ಲ. ಅಥವಾ ಅವನು ಒಂದು ವೇಳೆ ಸ್ವಸ್ಥವಾಗಿ ಕುಳಿತುಕೊಂಡರೂ, ನಾನಾಗಿಯೇ ಅವನಿಗೆ ಕಾಣಿಸಿಕೊಳ್ಳುತ್ತೇನೆ. ॥ ೩೨ ॥ ಬಹಳ ಹೇಳುವದೇನು, ಅವನಿಗೆ ಸರ್ವಸ್ಥಳದಲ್ಲಿ ನನ್ನ ಹೊರ್ತು ಎರಡನೆಯದ್ಯಾವುದೂ ಕಾಣುವದಿಲ್ಲ. ಯಾವ ಪ್ರಕಾರ ನೀರಿನಲ್ಲಿ ಮುಳುಗಿದ ಕೊಡದಲ್ಲಿ ಒಳಗೆ ಹೊರಗೆ ನೀರೇ ತುಂಬಿರುತ್ತದೋ, ॥ ೩೩ ॥ ಅದೇ ಪ್ರಕಾರ ಅವನು ನನ್ನೊಳಗೆ ಮತ್ತು ನಾನು ಅವನ ಅಂತರ್ಬಾಹ್ಯ ತುಂಬಿಕೊಂಡಿದ್ದೇನೆ, ಈ ಸ್ಥಿತಿಯನ್ನು ಶಬ್ದದಿಂದ ಹೇಳಿ ತೋರಿಸುವಂತದೇನೂ ಅಲ್ಲ. ॥ ೩೪ ॥ ಅದು ಹಾಗೇ ಇರಲಿ; ಈ ಪ್ರಕಾರ ಅವರಿಗೆ ಜ್ಞಾನ ಭಾಂಡಾರವನ್ನಿಡುವ ಒಂದು ದೊಡ್ಡ ಕೊಠಡಿಯೇ ದೃಷ್ಟಿಗೆ ಬೀಳುತ್ತದೆ. ಮತ್ತು ಅಜ್ಞಾನದಿಂದ ಕೂಡಿ ಹೋದಮೇಲೆ ಯಾವ ಯಾವ ಕಡೆಗೆ ಸಂಚಾರ ಮಾಡುತ್ತಾನೋ, ಆ ಆ ಸ್ಥಳದಲ್ಲಿ ಅವನಿಗೆ ನಾನೇ ವಿಶ್ವವಿರುವನೆಂದು ಭಾಸವಾಗುತ್ತದೆ. ॥ ೩೫ ॥ ಈ ಸರ್ವ ವಿಶ್ವದಲ್ಲಿ ವಾಸುದೇವನು ತುಂಬಿಕೊಂಡಿರುವನೆಂಬ ಬಗ್ಗೆ ಅವನಿಗೆ ಪೂರ್ಣ ಅನುಭವ ಇರುತ್ತದೆ. ಆದ್ದರಿಂದ ಭಕ್ತ

ರೊಳಗೆ ಅವನೇ ಸರ್ವಶ್ರೇಷ್ಠ ಮತ್ತೂ ಅವನೇ ಜ್ಞಾನಿಯೂ ಆಗಿರುವನು. ॥ ೩೭ ॥ ಧನುರ್ಧರನೇ ! ಯಾವನ ಅನುಭವದಕೊಡಿಯಲ್ಲಿ ಸರ್ವಚರಾತ್ಮಕ ವಿಶ್ವವು ತುಂಬಿಕೊಂಡಿರುತ್ತದೋ, ಇಂಥ ಸುಹಾತ್ಮರು ಬಹಳೇ ದುರ್ಲಭರಾಗಿದ್ದಾರೆ. ॥೩೮॥ ಇನರ ಹೊರ್ತು ಅರ್ಜುನಾ ! ಬಹಳೇ ಜನರು ನನ್ನನ್ನು ಭಜಿಸುತ್ತಾರೆ. ಆದರೆ ಅವರ ಭಕ್ತಿಯು ಕೇವಲ ವಿಷಯಸುಖದ ಆಶೆಗಾಗಿಯೇ ಇರುತ್ತದೆ. ಕಾರಣ ಆಶಾರೂಪೀ ಕತ್ತಲೆಯಿಂದ ಅವರ ದೃಷ್ಟಿಯು ವಿಷಯಾಂಧವಾಗಿರುತ್ತದೆ.॥ ೩೯ ॥

ಕಾಮೈಸ್ತೈರ್ತೈರ್ಹೃತಜ್ಞಾನಾಃ ಪ್ರಪದ್ಯಂತೇಽನ್ಯದೇವತಾಃ ।
ತಂ ತಂ ನಿಯಮಮಾಸ್ಥಾಯ ಪ್ರಕೃತ್ಯಾ ನಿಯತಾಃ ಸ್ವಯಾ ॥ ೨೦ ॥

[ಕಾಮೈರಿತಿ] ಆಣಿ ಫಳಾಚಿಯಾ ಹಾಂವಾ । ಹೃದಯೀ ಕಾಮಾ ಜಾಲಾ ರಿಗಾವಾ । ಕೀ ತಯಾ ಚಿಯೇ ಘಸಣೇ ದಿವಾ । ಜ್ಞಾನಾಚಾ ಗೇಲಾ ॥ ೩೯ ॥ ಐಸೇ ಉಭಯತಾ ಆಂಧಾರೀ ಪಡಲೇ । ಮ್ಹಣೋನಿ ಪಾಸೀಂಚೀ ಮಾತೇ ಚುಕಲೆ । ಮಗ ಸರ್ವಭಾವೇ ಅನುಸರಲೇ । ದೇವತಾಂತರಾ ॥೨೦॥ ಆಧೀಂಚ ಪ್ರಕೃತೀಚೇ ಪಾಯಿಕ । ವರೀ ಭೋಗಾಲಾಗೀ ತವ ರಂಕ । ಮಗ ತೇಣೇ ಲೋಲುಪತ್ವೇ ಕೌತುಕ । ಕೈಸೇನಿ ಭಜತೀ ॥ ೪೧ ॥ ಕವಣೀ ತಿಯಾ ನಿಯಮ ಬುದ್ಧಿ । ಕೈಸಿಯಾ ಹನ ಉಪಚಾರ ಸಮೃದ್ಧಿ । ಕಾ ಅರ್ಪಣ ಯಥಾ ವಿಧಿ । ವಿಹಿತ ಕರಣೇ ॥ ೪೨ ॥

ಅರ್ಥ— ಮತ್ತು ಫಲದ ಇಚ್ಛೆಯಿಂದ ಅವರ ಹೃದಯದಲ್ಲಿ ಕಾಮವು ಉಬ್ಬವಿಸಿ ಅದರ ಸಂಗತಿಯಿಂದ ಜ್ಞಾನರೂಪೀ ದಿವಿಗೆಯು ಆರಿಹೋಗುತ್ತದೆ. ॥ ೩೯ ॥ ಈ ರೀತಿಯಿಂದ ಅವನಿಗೆ ಒಳಗೆ ಹೊರಗೆ ಕೂಡಿಯೇ ಕತ್ತಲೆಯು ಬೀಳುತ್ತದೆ. ಆದುದರಿಂದ ನಾನು ಅವರ ಹತ್ತಿರ ಇದ್ದಾಗ್ಯಾದರೂ, ಅವರು ನನ್ನಿಂದ ದೂರವಾಗಿರುತ್ತಾರೆ. ಮತ್ತು ಆ ಮೇಲೆ ಸರ್ವಭಾವದಿಂದ ಅನ್ಯ ದೇವತೆಗಳನ್ನು ಭಜಿಸಲಿಕ್ಕೆ ಹತ್ತುತ್ತಾರೆ. ॥ ೧೪೦ ॥ ಮೊದಲಿಗೇ ಅವರು ಪ್ರಕೃತಿಯ ಆಧೀನರಾದವರು. ಮತ್ತು ಅದರಲ್ಲಿ ಭೋಗಫಲ ಪ್ರಾಪ್ತಿಯ ದೆಶೆಯಿಂದ ದೀನರಾದವರು. ಆ ಮೇಲೆ ಕೇಳುವದೇನಿದೆ ? ಅವರು ಲಂಪಟರಾಗಿ ಕೌತುಕದಿಂದ ದೇವರ ಭಕ್ತಿಯನ್ನು ಹೇಗೆ ಮಾಡುತ್ತಾರೆಂಬುದನ್ನು ನೋಡು ॥ ೪೧ ॥ ಆ ದೇವತೆಗಳ ಆರಾಧನೆಯ ವಿಷಯದಲ್ಲಿ ಯಾವ ಯಾವ ನಿಯಮಗಳು ಪ್ರಸಿದ್ಧವಿರುತ್ತವೆಯೋ, ಆ ಎಲ್ಲವುಗಳ ಆಶ್ರಯನನ್ನು ಪಡಾಡಿ ಯಾವ ಯಾವ ಉಪಚಾರಗಳು ಹತ್ತುತ್ತವೆಯೋ, ಅವುಗಳನ್ನು ಸಹ ಕೂಡಹಾಕಿ ಅಥವಾ ಆ ಉಪಚಾರಗಳನ್ನು ಹೇಗೆ ಮಾಡಬೇಕೆಂಬುದನ್ನು ತಿಳಿದುಕೊಂಡು, ಶಾಸ್ತ್ರದಿಂದ ಹೇಳಿದ ವಿಧಿಯಿಂದ ಕರ್ಮಗಳನ್ನು ಮಾಡುತ್ತಾರೆ. ॥ ೪೨ ॥

ಯೋ ಯೋ ಯಾಂ ಯಾಂ ತನುಂ ಭಕ್ತಃ ಶ್ರದ್ಧಯಾರ್ಚಿತುಮಿಚ್ಛತಿ ।
ತಸ್ಯ ತಸ್ಯಾಚಲಾಂ ಶ್ರದ್ಧಾಂ ತಾಮೇವ ವಿದಧಾಮ್ಯಹಂ ॥ ೨೧ ॥

[ಯೋ ಯೋ ಇತಿ] ಪೈ ಜೋ ಜಿಯೇ ದೇವತಾಂತರೀ । ಭಜಾವಯಾಂಚೀ ಚಾಡಕರೀ । ತಯಾಚೀ ತೇ ಚಾಡಪುರೀ । ಪುರವಿತಾ ಮೀ ॥ ೪೩ ॥ ದೇಸೋ ದೇವೀ ಮೀಚಿ ಪಾಹೀ । ಹಾಹೀ ನಿಶ್ಚಯ ತ್ಯಾಸೀ ನಾಹೀ । ಭಾವ ತೇ ತೇ ತಾಯೀ । ವೇಗಳಾಲಾ ಧರೀ ॥ ೪೪ ॥

ಅರ್ಥ— ಆದರೆ ಯಾರು ಅನ್ಯದೇವತೆಗಳನ್ನು ಭಜಿಸುವ ಇಚ್ಛೆಮಾಡುತ್ತಾರೋ, ಅವರ ಎಲ್ಲ ಇಚ್ಛೆಗಳನ್ನು ಸಂಪೂರ್ಣವಾಗಿ ಪೂರೈಸುವವನು ನಾನೇ ಆಗಿರುವೆನು. ॥ ೪೩ ॥ ದೇವ-ದೇವಿ ಎಲ್ಲವೂ ನಾನೇ ಆಗಿದ್ದೇನೆ. ಆದರೆ ಅವರಿಗೆ ಈ ಮಾತಿನ ವಿಷಯವಾಗಿ ಧೃಢವಾದ ನಂಬುಗೆ ಇರುವದಿಲ್ಲ. ಆ ದೇವತೆಗಳ ವಿಷಯದಲ್ಲಿ ಅವರು ಭಿನ್ನ ಭಿನ್ನವಾದ ಭಾವನೆಯನ್ನು ಇಟ್ಟಿರುತ್ತಾರೆ. ॥ ೪೪ ॥

ಸ ತಯಾ ಶ್ರದ್ಧಯಾ ಯುಕ್ತಸ್ತಸ್ಯಾರಾಧನಮೀಹತೇ ।
ಲಭತೇ ಚ ತತಃ ಕಾಮಾನ್ಮಯೈವ ವಿಹಿತಾನ್ಹಿತಾನ್ ॥ ೨೨ ॥

[ಸ ತಯೇತಿ] ಮಗ ತಿಯಾ ಶ್ರದ್ಧಾಯುಕ್ತ । ತೇಥೀಂಚೇ ಆರಾಧನ ಜೇ ಉಚಿತ । ತೇ ಸಿದ್ಧಿ ವರೀ ಸಮಸ್ತ । ವರ್ತೋ ಲಾಗೇ ॥ ೪೫ ॥ ಐಸೇ ಜೆಣೇ ಜೇ ಭಾವಿಜೇ । ತೇ ಫಳ ತೇಣೇ ಪಾವಿಜೇ । ಪರೀ ತೇಂಹೀ ಸಕಳ ನಿಪಜೇ । ಮಜಚಿಸ್ತವ ॥ ೪೬ ॥

ಅರ್ಥ— ಆ ಮೇಲೆ ಅವರಿಗೆ ಯಾವ ಯಾವ ದೇವತೆಗಳ ವಿಷಯವಾಗಿ ಶ್ರದ್ಧೆ ಉಂಟಾಗುವದೋ ಆ, ಆ ದೈವತೆಗಳನ್ನು ತಮ್ಮ ಕಾರ್ಯಸಿದ್ಧಿಯಾಗುವ ವರೆಗೆ ಅವರು ಯಥಾವಿಧಿಯಿಂದ ಪೂಜಿಸುತ್ತಾರೆ. ॥ ೪೫ ॥ ಇದೇ ಪ್ರಕಾರ ಯಾವನು ಯಾವ ಫಲವನ್ನು ಅಪೇಕ್ಷೆ ಮಾಡುವನೋ, ಅವನು ಇಚ್ಛಾ ಮಾಡಿದ ಫಲವು ಅವನಿಗೆ ಪ್ರಾಪ್ತ ವಾಗುವದೇನೋ ನಿಜ. ಆದರೆ ಅವರ ವನೋ'ರಥದ ಫಲವು ನನ್ನಿಂದಲೇ ಅವನಿಗೆ ದೊರಕುತ್ತದೆ. ॥ ೪೬ ॥

ಅಂತವತ್ತು ಫಲಂ ತೇಷಾಂ ತದ್ಭವತ್ಯಲ್ಪಮೇಧಸಾಂ ।
ದೇವಾನ್ದೇವಯಜೋ ಯಾಂತಿಮದ್ಭಕ್ತಾ ಯಾಂತಿ ಮಾಮಪಿ ॥ ೨೩ ॥

[ಅಂತವತ್ತುಫಲಂ ತೇಷಾಮಿತಿ] ಪರೀ ತೇ ಭಕ್ತ ಮಾತೇ ನೇಣತೀ । ಜೇ ಕಲ್ಪನೇ ಬಾಹೇರೀ ನ ನಿಘತೀ । ವ್ಯಾಣೋನಿ ಕಲ್ಪಿತ ಫಳಾ ಪಾವತೀ । ಅಂತವಂತ ॥ ೪೭ ॥ ಕಿಂಬಹುನಾ ಐಸೇ ಭಜನ । ತೇ ಸಂಸಾರಾಚೇಂಚಿ ಸಾಧನ । ಯೇರ ಫಳಭೋಗ ತೋ ಸ್ವಪ್ನ । ನಾವಭರೀ ದಿಸೇ । ೪೮ ॥ ಹೇ ಅಸೋ ಪರೌತೇ । ಮಗ ಹೋ ಕಾ ಆನಡತೇ । ಪರೀ ಯಜೀ ಜೋ ದೇಸತಾಂತೇ । ತೋ ದೇವತ್ಪ್ಯಾಚೀಯೇ ॥ ೪೯ ॥ ಯೇರ ತನುಮನ ಪ್ರಾಣೀ । ಜೇ ಅನುಸರಲೇ ಮಾಝ್ಯಾಯಾಚಿ ವಾಹಣೀ । ತೇ ದೇಹಾಚ್ಯಾ ನಿರ್ವಾಣೀ । ಮೀಚಿ ಹೋತಿ ॥ ೫೦ ॥

ಅರ್ಥ— ಆದರೆ ಆ ಭಕ್ತರು ನನನ್ನು ತಿಳಿಯುವದಿಲ್ಲ. ಕಾರಣ, ಆ ಭಕ್ತರು ಆಶಾಪಾಶದೊಳಗಿಂದ ಮುಕ್ತ ರಾಗುವದಿಲ್ಲ. (ಅದರಲ್ಲಿಯೇ ಶಿಲುಕಿ ಬೀಳುತ್ತಾರೆ.) ಮತ್ತು ಅದೇ ಕಾರಣದಿಂದ ನಾಶವಂತವಾದ ಅವರ ಇಚ್ಛಿತ ಫಲಗಳು ಅವರಿಗೆ ಪ್ರಾಪ್ತವಾಗುತ್ತವೆ. ॥ ೪೭ ॥ ಇಲ್ಲವೇ, ಇಂಥ ಪ್ರಕಾರದ ಈ ಭಜನೆಯು ಸಂಸಾರದ ಸಾಧನವೇ ಆಗಿರುವದು. ಅದರಿಂದ ದೊರೆತ ಫಲ ಭೋಗಗಳು ಸ್ವಪ್ನದೊಳಗಿನ ಕ್ಷಣಿಕ ಸುಖದಂತೆ ಇರುವದು. ॥ ೪೮ ॥ ಈ ಫಲಭೋಗದ ಮಾತು ಒಂದು ಕಡೆಗೆ ಇರಲಿ; ಆ ಭಕ್ತರ ಪ್ರೀತಿಯ ಉಪಾಸನಾ ದೈವತವು ಯಾವದೇ ಆಗಿರಲಿ, ಆದರೆ ಯಾವನು ಯಾವ ದೈವತವನ್ನು ಭಜಿಸುತ್ತಾನೋ, ಅವನು ಆ ದೇವತ್ವವನ್ನು ಹೊಂದುತ್ತಾನೆ. ॥ ೪೯ ॥ ಮಿಕ್ಕಾ ದವರು ತನುಮನ ಪ್ರಾಣವನ್ನು ನನಗೆ ಅರ್ಪಣ ಮಾಡಿ, ನನ್ನನ್ನೇ ಆಶ್ರಯಿಸಿ ನನ್ನ ಭಕ್ತಿಮಾರ್ಗಕ್ಕೆ ಹತ್ತಿದರು. ಅವರು ದೇಹಾಂತದಲ್ಲಿ ನನ್ನನ್ನೇ ಹೊಂದುತ್ತಾರೆ. ॥ ೫೦ ॥

ಅವ್ಯಕ್ತಂ ವ್ಯಕ್ತಿಮಾಪನ್ನಂ ಮನ್ಯಂತೇ ಮಾಮಬುದ್ಧಯಃ ।
ಪರಂ ಭಾವಮಜಾನಂತೋ ಮಮಾವ್ಯಯಮನುತ್ತಮಂ ॥ ೨೪ ॥

[ಅವ್ಯಕ್ತ ಮಿತಿ] ಪರೀ ತೈಸೇ ನ ಕರಿತೀ ಪ್ರಾಣಿಯೇ । ವಾಯಾ ಆಪಲ್ಯಾ ಹಿತೀ ವಾಣಿಯೇ ಜೇ ಪೋಹತಾತಿ ಪಾಣಿಯೇ । ತಳಹಾತೀಂಚೇನೀ ॥ ೫೧ ॥ ನಾನಾ ಅಮೃತಾಚ್ಯಾ ಸಾಗರೀ ಬುಡಿಜೇ । ಮಗ ತೋಂಡಾ ಕಾ ವಜ್ರಮಿಠೀ ಪಾಡಿಜೇ । ಆಣಿ ನುನೀ ತರೀ ಆಠವೀಜೇ ॥ ಥಿಲ್ಲರೋದಕಾತೇ ॥೫೨॥ ಹೇ ಐಸೇ ಕಾಸಯಾ ಕರಾವೇ । ಜೇ ಅಮೃತೀಹೀ ರಿಗೋನಿ ಮರಾವೆ । ತೇ ಸುಖೇ ಅಮೃತ ಹೊವೂನಿ ಕಾ ನಸಾವೇ । ಅಮೃತಾಮಾಜೀ ॥ ೫೩ ॥ ತೈಸಾ ಫಳ ಹೇತೂಚಾ ಪಾಂಜರಾ । ಸಾಂಡೂನಿಯಾ ಧನು ರ್ಧರಾ । ಕಾ ಪ್ರತೀತಿಪಾಖೀ ಚಿದಂಬರಾ । ಗೋಸಾವಿಯಾ ನೋಹಾವೇ ॥ ೫೪ ॥ ಜೇಥ ಉಂಚಾವ ಲೇಸಿ ಪವಾಡೇ । ಸುಖಾಚೇ ಬೈಸಾಠ ಚೋಡೆ । ಆಪುಲೇನಿ ಸುರವಾಡೆ । ಉಡೋಯೇ ಐಸಾ ॥ ೫೫ ॥ ತಯಾ ಉಪಮಾ ಮಾಪ ಕಾ ಸುಖಾನೇ । ಪುಜ ಅವ್ಯಕ್ತಾ ವ್ಯಕ್ತ ಕಾ ಮಾನಾವೇ । ಸಿದ್ಧ ಅಸತಾ

ಕಾ ನಿಮಾನೇ । ಸಾಧನವರೀ ॥ ೫೬ ॥ ಪರೀ ಹಾ ಬೋಲ ಆಪ್ತವಾ । ಜರೀ ವಿಚಾರಿಜತ ಅಸೇ ಪಾಂಡವಾ । ತರೀ ವಿಶೇಷೇ ಯಾ ಜೀವಾ । ನ ಚೋಜವೇಗಾ ॥ ೫೭ ॥

ಅರ್ಥ— ಆದರೆ ಪ್ರಾಣಿಗಳು ಹಾಗೆ ಮಾಡುವದಿಲ್ಲ. ಮತ್ತು ವ್ಯರ್ಥವಾಗಿ ತಮ್ಮ ಕಲ್ಯಾಣದ ವಿಷಯದಲ್ಲಿ, ಪುಕ್ಕಟೆಯಾಗಿ ತಮ್ಮ ಹಿತದ ಹಾನಿ ಮಾಡಿಕೊಂಡು (ಅನ್ಯದೈವತಗಳ ಪೂಜಾ ಅರ್ಚಾದಿಗಳನ್ನು ಮಾಡಿ) ನಾಶವಂತ ಕ್ಷಣಿಕವಾದ ಫಲಪ್ರಾಪ್ತಿಯನ್ನು ಹೊಂದುತ್ತಾರೆ. ಅವರ ಈ ಕೈತ್ಯವು ಒಂದು ಮೊಳಕೆರಿದಾವ ನೀರಿನಲ್ಲಿ ಈಸಿದಂತೆ ಇರುತ್ತದೆ. ॥ ೫೧ ॥ ಇಲ್ಲವೇ ಅಮೃತದ ಸಮುದ್ರದಲ್ಲಿಯೇ ಹಾರಿಕೊಂಡಿದ್ದರೂ ತನ್ನ ಬಾಯಿಯನ್ನು ಗಟ್ಟಿಯಾಗಿ ಏಕೆ ಮುಚ್ಚಿಕೊಳ್ಳಬೇಕು ? ಮತ್ತು ಗಟಾರದಲ್ಲಿಯ ಮಲಯುಕ್ತ ಕೊಳಚಿನೀರಿನ ಸ್ಮರಣವನ್ನು ಮನಸ್ಸಿನಲ್ಲಿ ತಂದುಕೊಳ್ಳುವದೇಕೆ ? ॥ ೫೨ ॥ ಅಮೃತದಲ್ಲಿ ಪುನೇಶನಾಡಿಯೂ ಬಾಯಿಯಲ್ಲಿ ಅಮೃತವನ್ನು ಹೋಗಗೊಡದೇ ಸಾವನ್ನು ತಂದು ಕೊಳ್ಳುವದೇಕೆ ? ಆದರೆ ಅಮೃತದಲ್ಲಿ ಸುಖದಿಂದ ಅಮರನಾಗಿ ಏಕೆ ಇರಕೂಡದು ? ॥ ೫೩ ॥ ಅದೇ ಪ್ರಕಾರ ಧನುರ್ಧರಾ ! ಫಲಾಶಾರೂಪವಾದ ಶರೀರವನ್ನು ಬಿಟ್ಟುಕೊಟ್ಟು ಆತ್ಮಾನುಭವರೂಪ ಪಕ್ಕಗಳಿಂದ (ಉಡ್ಡಾಣ ಮಾಡಿ) ಚಿದಾಕಾಶದಲ್ಲಿ ಬೇಕಾದತ್ತ ಸಂಚಾರ ಮಾಡಲು ಏಕೆ ಸಮರ್ಥನಾಗಬಾರದು ? ॥ ೫೪ ॥ ಆ ಚಿದಾಕಾಶದಲ್ಲಿ ಎಷ್ಟೆಷ್ಟು ನಾವು ಮೇಲಕ್ಕೆ ದೂರನಾಗಿ ಹೋಗುವೆವೋ, ಆ ಮಾನದಿಂದ ನನಗೆ ಸುಖನಾಗಿ ಸಂಚಾರ ಮಾಡಲಿಕ್ಕೆ ಬರುವಂತೆ ಅದು ಬೇಕಾದಷ್ಟು ವಿಸ್ತಾರವಾಗಿರುವದು. ॥ ೫೫ ॥ ಆ ಅಮರ್ಯಾದ ಸ್ವರೂಪಕ್ಕೆ ಅಳತೆಯನ್ನು ಏಕೆ ಮಾಡಬೇಕು ? ನಿರಾಕಾರನಾದ ನನಗೆ ಸರಕಾರನೆಂದು ಏಕೆ ತಿಳಿಯಬೇಕು ? ನಾನು ಸ್ವಯಂಸಿದ್ಧನಿರಲು ನನ್ನ ಪ್ರಾಪ್ತಿಯ ದೆಶೆಯಿಂದ ಸಾಧನೆಗಳನ್ನು ಮಾಡಿಮಾಡಿ ಏಕೆ ದಣಿಯ ಬೇಕು ? ॥ ೫೬ ॥ ಆದರೆ ಅರ್ಜುನಾ ! ನಿಜವಾಗಿ ವಿಚಾರ ಮಾಡಿ ನೋಡಿದರೆ, ಈ ಮೇಲಿನ ನನ್ನ ಸಂಭಾಷಣವು ಜೀವರುಗಳಿಗೆ ಬಹಳ ಮಾಡಿ ಸೇರುವದಿಲ್ಲ. ॥೫೭॥

ನಾಹಂ ಪ್ರಕಾಶಃ ಸರ್ವಸ್ಯ ಯೋಗಮಾಯಾಸಮಾವೃತಃ ।
ಮೂಢೋऽಯಂ ನಾಭಿಜಾನಾತಿ ಲೋಕೋ ಮಾಮಜಮವ್ಯಯಂ ॥ ೨೫ ॥

[ನಾಹಂ ಪ್ರಕಾಶ ಇತಿ] ಕಾ ಜೇ ಯೊಗ ಮಾಯಾ ಪಡಳೇ । ಹೇ ಜಾಲೇ ಆ ಹಾತೀ ಆಂಧಳೇ । ಮ್ಹಣೋನಿ ಪ್ರಕಾಶಾಚೇನಿ ದೇಹಬಳೇ । ನ ದೇಖತೀ ಮಾತೇ ॥ ೫೮ ॥ ಯೇರ್ಹವೀ ಮೀ ನಸೇ ಐಸೇ । ಕಾಯ ವಸ್ತು ಜಾತ ಅಸೇ ? । ಪಾಹೇ ಪಾ ಕವಣ ಜಳ ರಸೇ । ರಹಿತ ಆಹೇ ॥ ೫೯ ॥ ಪವನ ಕವಣಾತೇ ನ ಶಿವೇಚೀ । ಆಕಾಶಕೇ ನ ಸಮಾಯೇಚಿ । ಹೇ ಅಸೋ ಏಕ ಮೀಚಿ । ವಿಶ್ವೀ ಆಹೇ ॥ ೧೬೦ ॥

ಅರ್ಥ— ಕಾರಣವೇನೆಂದರೆ, ಅವರು ಯೋಗಮಾಯೆಯಪರದೆಯಿಂದ ಆವೃತರಾಗಿ ಅಂಧರಾಗಿರುವರು. ಆದುದರಿಂದ ಅವರು ಪ್ರಕಾಶವಂತನಾದ ನನ್ನನ್ನು ದೇಹಬುದ್ಧಿಯ ಬಲದಿಂದ ನೋಡಲು ಅಶಕ್ತರಾಗಿರುವರು. ॥೫೮॥ ಆದರೆ ನಾನು ವಾಸವಾಗಿ ಇಲ್ಲದೇ ಇರುವ ವಸ್ತುವು ಒಂದಾದರೂ ಸಿಕ್ಕಬಹುದೇ ? ಹೀಗೆ ನೋಡು ಯಾವದಾದರೂ ನೀರು ರಸ ವಿರಹಿತವಾಗಿರುವುದೇ ? ॥ ೫೯ ॥ ಗಾಳಿಯು ಯಾರಿಗೆ ಸ್ಪರ್ಶಮಾಡುವದಿಲ್ಲ ? ಆಕಾಶವು ಎಲ್ಲಿಗೆ ಮುಗಿಯುವದು ? ಇದಂತೂ ಇರಲಿ, ಎಲ್ಲ ವಿಶ್ವವನ್ನೇ ನಾನು ವ್ಯಾಪಿಸಿದ್ದೇನೆ. ॥ ೧೬೦ ॥

ವೇದಾಹಂ ಸಮತೀತಾನಿ ವರ್ತಮಾನಾನಿ ಚಾರ್ಜುನ ।
ಭವಿಷ್ಯಾಣಿ ಚ ಭೂತಾನಿ ಮಾಂ ತು ವೇದ ನ ಕಶ್ಚನ ॥ ೨೬ ॥

[ವೇದಾಹಂ ಸಮತೀತಾನೀತಿ] ಯೆಥೇ ಭೂತೇ ಜೀಯೇ ಅತೀತಲೇ । ತಿಯೇ ಮೀಚಿ ಹೋವುನಿ ಠೇಲೇ । ಆನಿವರ್ತತ ಆಹಾತಿ ಜೇತುಲೇ । ತಿಹೀ ಮೀಚಿ ॥ ೬೧ ॥ ಕಾ ಭವಿಷ್ಯಮಾಣೇ

ಜಿಯೇಹೀ । ತಿಹೀ ಮಜ ವೇಗಳೀ ನಾಹೀ । ಹಾ ಬೋಲಚಿ ಯೇರ್ಹವೀ ಕಾಂಹೀ । ಹೋಯು ನಾ ಜಾಯ ॥ ೬೨ ॥ ದೋರಾಚಿಯಾ ಸಾಪಾಸೀ । ಡೊಂಬಾ ಬಡಿಯಾ ಐಸೀ । ಸಂಖ್ಯಾ ನ ಕರವೇ ಕೋಣ್ಯಾಸೀ । ತೇವೀ ಭೂತಾಂಸೀ । ಮಿಥ್ಯತ್ವೇ ॥ ೬೩ ॥ ಐಸಾ ಮೀ ಪಾಂಡುಸುತಾ । ಅನುಸ್ಯೂತ ಸದಾ ಅಸತಾ । ಯಾ ಸಂಸಾರ ಜೋ ಭೂತಾ । ತೋ ಆನೇ ಬೋಲೇ ॥ ೬೪ ॥ ತರೀ ತೇಚಿ ಆತಾ ಥೋಡೀಸೀ । ಗೋಡೀ ಸಾಂಗಿಜೇಲ ಪರಿಯೇಸೀ । ಜೇಥ ಅಹಂಕಾರತನೂಂಸೀ । ವಾಲಭ ಪಡಿಲೇ ॥ ೬೫ ॥

ಅರ್ಥ— ಈ ಜಗತ್ತಿನಲ್ಲಿ ಎಷ್ಟೋ ಪ್ರಾಣಿಗಳು ಆಗಿ ಹೋಗಿರುವವು. ಅವೆಲ್ಲವುಗಳಲ್ಲಿಯೂ ನಾನೇ ವ್ಯಾಪಿಸಿದ್ದೆನು. ಮತ್ತು ಈಗ ಇರುವವರಲ್ಲಿಯೂ ನಾನಿದ್ದೇನೆ. ॥ ೬೧ ॥ ಅಲ್ಲದೇ ಮುಂದೆ ಹುಟ್ಟುವ ಪ್ರಾಣಿಗಳಾದರೂ ನನ್ನಿಂದ ಬೇರೆಯಾಗಿರಲಾರವು. ಹೀಗೆ ಇದೆಲ್ಲವೂ ಬರಿಯ ಮಾತೇ ಹೊರ್ತು, ಯಾವುದೂ ಆಗುವಂತಿಲ್ಲ; ಮತ್ತು ಹೋಗುವಂತೂ ಇಲ್ಲ. ॥ ೬೨ ॥ ಹಗ್ಗದ ಮೇಲಿಂದ ಭಾಸಮಾನವಾದ ಹಾವಿಗೆ, ಅದು ಯಾವ ಜಾತಿಯದು ? ಮತ್ತು ಅದು ಕರಿಯದು, ಬಿಳಿಯದು ಮುಂತಾದ ಅದರ ಬಣ್ಣಗಳ ಕಲ್ಪನೆಯು ಹೇಗೆ ಮಾಡಲು ಬರಲಾರದೋ, ಅದೇ ಪ್ರಕಾರ ಪ್ರಾಣಿಮಾತ್ರಗಳು ಮಿಥ್ಯ (ನಾಶವಂತ) ವಾದವುಗಳಿರುವದರಿಂದ ಆ ಸಂಬಂಧವಾಗಿ ಯಾವ ಕಲ್ಪನೆಯನ್ನೂ ಮಾಡಲು ಬರಲಾರದು. ॥ ೬೩ ॥ ಏಲೈ ಪಾಂಡುಸುತನೇ ! ಈ ಪ್ರಕಾರವಾಗಿ ನಾನು ಯಾವಾಗಲೂ ಅಖಂಡ ವ್ಯಾಪಕನಾಗಿರುತ್ತೇನೆ. ಹೀಗಿರಲು ಈ ಸಂಸಾರವು ಪ್ರಾಣಿಮಾತ್ರಗಳ ಬೆನ್ನು ಹತ್ತಿದುದರ ಕಾರಣವು ಬೇರೆಯಾಗಿರುತ್ತದೆ. ॥ ೬೪ ॥ ಇನ್ನು ಆ ವಿಷಯವಾಗಿ ಸ್ವಲ್ಪ ಮಾತನ್ನು ನಾನು ಹೇಳುತ್ತೇನೆ. ಅದನ್ನು ಕೇಳು.— ಅಹಂಕಾರ ಮತ್ತು ಶರೀರ, ಇವುಗಳಲ್ಲಿ ಪ್ರೇಮವು ಅನ್ಯೋನ್ಯವಾಗಿ ಯಾವಾಗ ಕೂಡುವದೋ, ॥ ೬೫ ॥

ಇಚ್ಛಾದ್ವೇಷಸಮುತ್ಥೇನ ದ್ವಂದ್ವಮೋಹೇನ ಭಾರತ ।
ಸರ್ವಭೂತಾನಿ ಸಂಮೋಹಂ ಸರ್ಗೇ ಯಾಂತಿ ಪರಂತಪ ॥ ೨೭ ॥

[ಇಚ್ಛಾದ್ವೇಷ ಸಮುತ್ಥೇನೇತಿ] ತೇಥ ಇಚ್ಛಾ ಹೇ ಕುಮಾರೀ ಜಾಲೀ । ಮಗ ತೇ ಕಾಮಾಚಿಯಾ ತಾರುಣ್ಯ ಆಲೀ । ತೇಥ ದ್ವೇಷೆಂಸೀ ಮಾಂಡಿಲೀ । ವರಾಡಕ ॥ ೬೬ ॥ ತಯಾ ದೋಘಾಸ್ತವ ಜನ್ಮಲಾ । ಐಸಾ ದ್ವಂದ್ವ ಮೋಹ ಜಾಲಾ । ಮಗ ತೋ ಆಜೇಯಾನೇ ವಾಢ ವಿಲಾ । ಅಹಂಕಾರೇ ॥ ೬೭ ॥ ತೋ ಧೃತೀಸಿ ಸದಾ ಪ್ರತಿಕೂಳ । ನಿಯಮಾಹೀ ನಾಗನೇ ಸ್ಫೂಳ । ಆಶಾರಸೇ ದೊಂದೀಲ । ಜಾಲಾ ಸಾಂತಾ ॥ ೬೮ ॥ ಅಸಂತುಷ್ಟಿಚೀಯಾ ಮದಿರಾ । ಮತ್ತ ಹೋವೋನಿ ಧನುರ್ಧರಾ । ವಿಷಯಾಚೇ ವೋವರಾ । ವಿಕೃತೀಸೀ ಅಸೇ ॥ ೬೯ ॥ ತೇಣೇ ಭಾವಶುದ್ಧೀಚಿಯಾ ವಾಟೇ । ವಿಖುರ ಲೇ ವಿಕಲ್ಪಾಚೇ ಕಾಂಟೇ । ಮಗ ಚಿರಿಲೇ ಅವ್ಹಾಂಟೇ । ಅವೃವೃತ್ತೀಚೇ ॥೭೦॥ ತೇಣೇ ಭೂತೇ ಭಾಂಬಾವಲೀ । ಮ್ಹಣೋನಿ ಸಂಸಾರಾಚಿಯಾ ಆಡವಾ ಮಾಜೇ ಪಡಿಲೀ । ಮಗ ಮಹಾ ದುಃಖಾಜ್ಯಾ ಫೇತಲೀ । ವೋಝುಂವರೀ ॥ ೭೧ ॥

ಅರ್ಥ— ಆವಾಗ ಆ ಉಭಯತರ ಪ್ರೀತಿಯಿಂದ ಅಲ್ಲಿ ಇಚ್ಛಾರೂಪ ಕನ್ಯೆಯು ಉದಯವಾದಳು. ಅವಳು ಕಾಮದ ತಾರುಣ್ಯಾವಸ್ಥೆಯಲ್ಲಿ ಪೂರ್ಣವಾಗಿ ಪ್ರವೇಶಿಸಿ ದೊಡನೆಯೇ, ದ್ವೇಷನನ್ನು ಲಗ್ನಮಾಡಿಕೊಂಡಳು. ॥ ೬೬ ॥ ಆ ಉಭಯತರಿಂದ (ಸುಖದುಃಖರೂಪ) ದ್ವಂದ ಮೋಹನೆಂಬ ಪುತ್ರನು ಜನಿಸಿದನು. ಆಮೇಲೆ ಅವನನ್ನು ಆತನ ಅಜ್ಜನಾದ ಅಹಂಕಾರನು ಜೋಕೆ ಮಾಡಿ ಬೆಳೆಸಿದನು. ॥ ೬೭ ॥ ಆ ದ್ವಂದ ಮೋಹವು ಯಾವಾಗಲೂ ಸಾತ್ವಿಕ ಧೈರ್ಯಕ್ಕೆ ಪ್ರತಿಕೂಲ ಇರುತ್ತದೆ. ಮತ್ತು ಆಶಾರೂಪ ಹಾಲನ್ನು ಕುಡಿದು ಪುಷ್ಟವಾದುದರಿಂದ, ಛಲನಾ ಮಾಡುವ ಸ್ವಭಾವದವನಾದ ದ್ವಂದ-ಮೋಹನು ಇಂದ್ರಿಯಗಳ ನಿಯಮಗಳಿಗೆ ಬದ್ಧನಾಗಿರುವದಿಲ್ಲ. ॥ ೬೮ ॥ ಧನುರ್ಧರನೇ !

ಅಸಂತೋಷರೂಪೀ ಮದ್ಯವನ್ನು ಕುಡಿದು ಉನ್ಮತ್ತನಾದುದರಿಂದ ಅವನು ಪಂಚವಿಷಯ (ಶಬ್ದ–ಸ್ಪರ್ಶ–ರೂಪ–ರಸ –ಗಂಧ) ರೂಪೀ ಕೋಣೆಯಲ್ಲಿ ವಿಕಾರರೂಪೀ ಸ್ತ್ರೀಯನ್ನು ಕೂಡಿಕೊಂಡಿರುತ್ತಾನೆ. ॥ ೬೯ ॥ ಆ ದ್ವಂದ ಮೋಹನು ಶುದ್ಧ ಭಕ್ತಿಯ ಹಾದಿಯಮೇಲೆ ವಿಕಲ್ಪದ ಮುಳ್ಳುಗಳನ್ನು ಹರವಿ, ಅಲ್ಲಿ ತಿರುಗಾಡಲು ಬಾರದಂತೆ ಮಾಡಿ, ಕುಮಾರ್ಗದ ಅಡ್ಡ ಹಾದಿಯನ್ನು ಮಾತ್ರ ತೆರವು ಮಾಡಿದನು. ॥ ೧೭೦ ॥ ಆ ಯೋಗದಿಂದ ಪ್ರಾಣಿಮಾತ್ರಗಳು ಭ್ರಮೆಹೊಂದಿ ಸಂಸಾರರೂಪ ಅರಣ್ಯವನ್ನು ಸೇರುತ್ತಾರೆ. ಹೀಗೆ ಅವರು ಸಂಕಟಗಳನ್ನು ಅನುಭವಿಸಬೇಕಾಗುತ್ತದೆ. ॥ ೭೧ ।

ಯೇಷಾಂ ತ್ವಂತಗತಂ ಪಾಪಂ ಜನಾನಾಂ ಪುಣ್ಯಕರ್ಮಣಾಂ ।
ತೇ ದ್ವಂದ್ವಮೋಹನಿರ್ಮುಕ್ತಾ ಭಜಂತೇ ಮಾಂ ದೃಢವ್ರತಾಃ॥ ೨೮ ॥

[ಯೇಷಾಂ ತ್ವಂತಗತಮಿತಿ] ಐಸೇ ವಿಕಲ್ಪಚಿ ವಾಯಾಣೇ । ಕಾಂಟೇ ದೇಖೋನಿ ಸಿಸಾಣೇ। ಚೇ ಮತಿ ಭ್ರಮಾಚೇ ಪಾಸಾವಣೇ । ಘೇತೀಚಿ ನಾ ॥ ೭೨ ॥ ಉಘೂ ಏಕ ನಿಷ್ಕೃಷ್ಟಾ ಪಾವುಲೀ । ರಗಡೂನಿ ವಿಕಲ್ಪಾಚಿಯಾ ಭಾಲೀ । ಮಹಾ ಪಾತಕಾಂಚೀ ಸಾಂಡಿಲೀ । ಆಟವಿನಿ ಜೀಹೀ ॥ ೭೩ ॥ ಮಗ ಪುಣ್ಯಾಚಿ ಧಾವಾ ಘೇತಲೇ। ಆಣಿ ಮಾಯಿಲೇ ಜನಲೇಕ ಪಾವಲೇ। ಕಿಂಬಹುನಾ ತೇ ಚುಕಲೇ। ವಾಟ ವಧೇಯಾ ॥೭೪॥

ಅರ್ಥ— ಈ ಪ್ರಕಾರ ವಿಕಲ್ಪದ ತೀಕ್ಷ್ಣ ಮತ್ತು ಪೊಳ್ಳು ಮುಳ್ಳುಗಳನ್ನು ನೋಡಿ ಯಾವನ ಬುದ್ಧಿಯು ಭ್ರಾಂತವಾಗುವದಿಲ್ಲವೋ, ಅವನು ಮತಿ ಭ್ರಾಂತದ ಪಾಶದಲ್ಲಿ ಶಿಕ್ಕು ಬೀಳುವದಿಲ್ಲ. ॥ ೭೨ ॥ ಅವನು ಸರಳ ಭಕ್ತಿಯ ಏಕ ನಿಷ್ಠಾರೂಪೀ ಪಾದಗಳಿಂದ, ವಿಕಲ್ಪರೂಪೀ ಭಲ್ಲೆಗಳಂತಹ ಹರಿತಾದ ಮುಳ್ಳುಗಳನ್ನು ಪ್ರೌಢತನದಿಂದ ಮೆಟ್ಟುತ್ತ ಎಲ್ಲ ಮಹಾ ಪಾತಕಗಳ ಅರಣ್ಯವನ್ನು ದಾಟಿ ಪಾರಾಗಿ ಹೋಗುತ್ತಾನೆ. ॥೭೩॥ ಆಮೇಲೆ ಪುಣ್ಯದ ಮಾರ್ಗದಿಂದ ತೀರ್ಥವೇ ನಡೆದು ಬಂದು ನನ್ನ ಸನ್ನಿಧಿಯನ್ನು ಸೇರುತ್ತಾನೆ. ಮತ್ತು ಈ ರೀತಿಯಿಂದ ಅವನು ಹಾದೀ ಹೊಡೆಯುವ ಕಳ್ಳರನ್ನು (ಕಾಮ ಕ್ರೋಧಾದಿಗಳನ್ನು) ಜೈಸಿ ಮುಕ್ತನಾಗುತ್ತಾನೆ ॥ ೭೪ ॥

ಜರಾಮರಣ ಮೋಕ್ಷಾಯ ಮಾಮಾಶ್ರಿತ್ಯ ಯತಂತಿ ಯೇ ।
ತೇ ಬ್ರಹ್ಮ ತದ್ವಿದುಃ ಕೃತ್ಸ್ನಮಧ್ಯಾತ್ಮಂ ಕರ್ಮ ಚಾಖಿಲಂ ॥ ೨೯ ॥

[ಜರಾ ಮರಣ ಮೋಕ್ಷಾಯೇತಿ] ಯೇರವ್ಹೀ ತರೀ ಪಾರ್ಥಾ । ಜನ್ಮ ಮರಣಾಚೀ ನಿಮೇ ಕಥಾ । ಐಸಿಯಾ ಪ್ರಯತ್ನಾತೇ ಆಸ್ಥಾ । ವಿಯೇ ಜಯಾಂಚೀ ॥೭೫॥ ತಯಾ ತೋ ಪ್ರಯತ್ನಚಿ ಏಕೇ ವೇಳೇ । ಮಗ ಸಮಗ್ರ ಪರಬ್ರಹ್ಮ ಫಳೇ । ಜಯಾ ಪಿಕಲೇಯಾ ರಸಗಳೇ । ಪೂರ್ಣತೇಚಾ ॥ ೭೬ ॥ ತೇ ವೇಳೀ ಕೃತಕೃತ್ಯ ತಾ ಜಗಭರೇ । ತೇಥ ಅಧ್ಯಾತ್ಮಾಚೇ ನವಲ ಪಣ ಪುರೇ । ಕರ್ಮಾಚೇ ಕಾಮು ಸರೇ । ವಿರಮೇ ಮನ ॥ ೭೭ ॥ ಐಸಾ ಅಧ್ಯಾತ್ಮ ಲಾಭ ತಯಾ। ಹೋಯ ಗಾಧನಂಜಯಾ। ಭಾಂಡವಲ ಜಯಾ । ಉದ್ಯಮೀ ಮೀ ॥ ೭೮ ॥ ತಯಾತೇ ಸಾಮ್ಯಾಚಿಯೇ ವಾಡೀ । ಐಕ್ಯಾಚೀ ಸಾಂದೇ ಕುಲವಾಡೀ । ತೇಥ ಭೇದಾಚಿಯಾ ದುಬಳವಾಡೀ । ಸೇಣಿಜೇ ತಯಾ ॥ ೭೯ ॥

ಅರ್ಥ— ಆದರೆ ಪಾರ್ಥಾ, ಜನನ ಮರಣಗಳ ಭ್ರಮಣದಿಂದ ಮುಕ್ತನಾಗಬೇಕಾದರೆ ಇಂಥ ಯಾನ ಸಾಧನೆಯು ಉಂಟೋ ಅದರ ಪ್ರಾಪ್ತಿಗಾಗಿ ಯಾವನು ಅಪೇಕ್ಷಿಸುತ್ತಾನೋ, ॥ ೭೫ ॥ ಅವನಿಗೆ ಆ ಪ್ರಯತ್ನವು ಯಾವಾಗಾದರೂ ಫಲದ್ರೂಪವಾಗಿ ಬ್ರಹ್ಮಪ್ರಾಪ್ತಿ ಆಗುತ್ತದೆ. ಆ ಪರಬ್ರಹ್ಮರೂಪ ಫಲವು ಪಕ್ವವಾದುದರಿಂದ ಅದರೊಳಗಿಂದ ಪೂರ್ಣತೆಯ ರಸವು ಸೋರಲಿಕ್ಕೆ ಹತ್ತುತ್ತದೆ, ॥ ೭೬ ॥ ಆವಾಗ ಅವರಿಗೆ ತಾವು ಧನ್ಯರೆಂಬುದು ತಿಳಿಯುವದು. ಅಖಿಲ ಪ್ರಪಂಚನೇ ಆನಂದದಿಂದ ತುಂಬಿದಂತೆ ಕಾಣುತ್ತದೆ. ಆಮೇಲೆ ಆತ್ಮಜ್ಞಾನದ ಉತ್ಸಾಹವು ಪೂರ್ಣವಾಗುತ್ತದೆ. ಅಲ್ಲದೇ ಕರ್ಮಗಳು ಅಲ್ಲಿಂದಲ್ಲೇ ನಿಂತು ಅವನ ಮನಸ್ಸು ಶಾಂತಿಯನ್ನು ಹೊಂದುತ್ತದೆ. ॥ ೭೭ ॥ ಎಲೈ ಧನಂಜಯನೇ ! ಇದೇ ರೀತಿಯಿಂದ ಅವನಿಗೆ ಆತ್ಮಜ್ಞಾನ ಲಾಭವು ಪ್ರಾಪ್ತವಾಗುತ್ತದೆ. ಕಾರಣ ಅವರ ಈ

ಸಾರಮೂರ್ಖ ರೂಪ ವ್ಯವಹಾರದಲ್ಲಿ ನಾನೇ ' ಭಾಂಡನವಲು ' ಆಗಿದ್ದೇನೆ. ॥ ೭೮ ॥ ಅವರಿಗೆ ' ಸಮುದೃಷ್ಟಿ ' ಯೆಂಬ ಬಡ್ತಿಯು ದೊರಕಿ ' ಐಕ್ಯರೂಪ ಸಂಪತ್ತಿಯ ಸಮೃದ್ಧಿಯಾಗುತ್ತದೆ. ಇದರಿಂದ ಭೇದರೂಪ ದರಿದ್ರತನವು ಅವರಲ್ಲಿ ಗುರ್ತಿಗೆ ಸಹ ಉಳಿಯುವದಿಲ್ಲ. ॥ ೭೯ ॥

ಸಾಧಿಭೂತಾಧಿದೈವಂ ಮಾಂ ಸಾಧಿಯಜ್ಞಂ ಚ ಯೇ ವಿದುಃ ।
ಪ್ರಯಾಣಕಾಲೇಽಪಿ ಚ ಮಾಂ ತೇ ವಿದುರ್ಯುಕ್ತಚೇತಸಃ ॥ ೩೦ ॥

ಇತಿ ಶ್ರೀಮದ್ಭಗವದ್ಗೀತಾ ಸೂಪನಿಷತ್ಸು ಬ್ರಹ್ಮವಿದ್ಯಾಯಾಂ ಯೋಗಶಾಸ್ತ್ರೇ ಶ್ರೀಕೃಷ್ಣಾರ್ಜುನ
ಸಂವಾದೇ ' ಜ್ಞಾನ ವಿಜ್ಞಾನ ' ಯೋಗೋ ನಾಮ ಸಪ್ತಮೋಧ್ಯಾಯಃ ॥ ೭ ॥

[ಸಾಧಿಭೂತಾಧಿದೈವಮಿತಿ] ಜೀಹೀ ಸಾಧಿಭೂತಾಮಾತೇ । ಪ್ರತೀತೀಚೇನಿ ಹಾತೇ । ಧರೂನಿ ಅಧಿದ್ಯೆವಾತೇ। ಶಿವತಲೇ ಗಾ ॥ ೧೮೦ ॥ ಜಯಾ ಜಾಣಿವೇಚೇನಿ ವೇಗೇ । ಮೀ ಅಧಿಯಜ್ಞ ದೃಷ್ಟಿರಿಗೇ । ತೇ ತನೂಚೇನಿ ವಿಯೋಗೇ । ವಿರ್ಹಯೇ ನವ್ಹತೀ ॥೮೧॥ ಯೇರ್ಹವೀ ಆಯುಷ್ಯಾಚೇ ಸೂತ್ರ ವಿಘಡತಾ । ಭೂತಾಂಚೀ ಉನುಟೇ ಖಡಾಡಿತಾ । ಕಾಯ ನ ಮರತಯಾಹಿ ಚಿತ್ತಾ । ಯುಗಾಂತ ನೋಹೇ ॥ ೮೨ ॥ ಪರೀ ನೇಣೋ ಕೈಸೇ ಸೈ ಗಾ । ಜೇ ಜಡೋನಿ ಗೇಳೆ ನಾಯಿಯಾ ಆಂಗಾ । ತೇ ಪ್ರಯಾಣೀಚಿಯಾ ಲಗಬಗಾ । ನ ಸಾಂಡಿತೀಚಿ ಮಾತೇ ॥ ೮೩ ॥ ಯೇರ್ಹವೀ ತರೀ ಜಾಣ । ಐಸೇ ಜೇ ನಿಪುಣ । ತೇಚಿ ಅಂತಃಕರಣ । ಯುಕ್ತಯೋಗೀ ॥ ೮೪ ॥ ತವ ಇಯೇ ಶಬ್ದಕುಪಿಕೇತಳೇ । ನೋಡವೇಚಿ ಅನಧಾನಾಚೀ ಅಂಜುಳೇ । ಜೇ ನಾವೇಕ ಅರ್ಜುನ ತಯೇ ವೇಳೇ । ಮಾಗಾಂಚಿ ಹೋತಾ ॥ ೮೫ ॥ ಜೇಥ ತಪ್ಪ್ರಾಹ್ಮ ವಾಕ್ಯಫಳೇ । ಜಿಯೇ ನಾನಾರ್ಥ ರಸೇ ರಸಾಳೇ । ಬಹಕತೆ ಆ ಹಾತಿ ಪರಿಮಳೇ । ಭಾವಾಚೇನಿ ॥ ೮೬ ॥ ಸಹಜ ಕೃಪಾ ಮಂದಾನಿಳೇ । ಶ್ರೀಕೃಷ್ಣದ್ರುಮಾಚೀ ನಚನಫಳೇ । ಆರ್ಜುನ ಶ್ರವಣಾಚಿಯೇ ಖೋಳೇ। ಅವಚಿತ ಪಡಲೀ ॥ ೮೭ ॥ ತಿಯೇ ಪ್ರಮೇಯಾಂಚೀ ಹೋ ಕಾ ವಳಲೀ । ಕೀ ಬ್ರಹ್ಮರಸಾಚ್ಯಾ ಸಾಗರೀ ಚುಬುಕಳಲಿಲೀ । ಮಗ ತೈಸೀಂಚ ಕಾ ಘೊಳಿಲೀ । ಪರಮಾನಂದೆ ॥ ೮೮ ॥ ತೇಣೇ ಬರವೆ ವಣೆ ಸಮರ್ಪಳೇ । ಅರ್ಜುನಾ ಉನ್ಮೇಷಾಚೇ ಡೋಹಳೇ । ಘೇತಾತಿ ಗಳಾಳೇ । ವಿಸ್ಮಿಯಾಮೃತಾಚೇ ॥ ೮೯ ॥ ತಿಯಾ ಸುಖ ಸಂಪತ್ತಿ ಚೋಡಲಿಯಾ । ಮಗ ಸ್ವರ್ಗಾವಾಯೇ ವಾಂಕುಲಿಯಾ । ಹೃದಯಾಚ್ಯಾ ಜೀವೀ ಗುತಕುಲಿಯಾ । ಹೋತ ಆಹಾತೀ ॥ ೧೯೦ ॥ ಐಸೇ ವರಚಿಲೀಚೀ ಬರವಾ । ಸುಖ ಜಾಪ್ತೋ ಲಾಗಲೇ ಘಾವಾ । ತವ ರಸಸ್ವಾದಾಚಿಯಾ ಹಾಂವಾ । ಲಾಹೋ ಕೇಲಾ ॥ ೯೧ ॥ ಝಡಕರೀ ಅನುಮಾನಾಚೇನಿ ಕರತಳೇ । ಘೇವೂನಿ ತಿಯೇ ವಾಕ್ಯಫಳೇ । ಪ್ರತೀತಿ ಮುಖೀ ಏಕೇ ವೇಳೇ । ಘಾಲೂ ಪಾಹೆ ॥ ೯೨ ॥ ತವ ವಿಚಾರಾಚಿಯಾ ರಸನಾ ನ ದಾಟತೀ । ಪರೀ ಹೇತೂಚ್ಯಾ ದಶನೀ ನ ಘಟ್ಟತೀ । ಐಸೇ ಜಾಣೋನಿ ಸುಭದ್ರಾಪತಿ । ಚುಂಬೀಚಿನಾ ॥ ೯೩ ॥ ಮಗ ಚಮತ್ಕಾರಲಾ ಮ್ಹಣೇ। ಇಯೇ ಜಳೀಂಚೀ ಮಾ ತಾರಾಗಣೇ । ಕೈಸಾ ಝುಕವಿಲೋ ಅಸಲಾಗಪಣೇ । ಅಕ್ಷರಾಂಚೇನಿ ॥ ೯೪ ॥ ಇಯೇ ಪದೇ ನವ್ಹತೀ ಘಡಿಯಾ । ಗಗನಾಚಿಯಾ ಘೆಡಿಯಾ । ಯೇಥ ಆನುಚೀ ಮತೀ ಉಡಾಲಿಯಾ। ಥಾವ ನ ನಿಘೆ ॥ ೯೫ ॥ ವಾಂಚೂನಿ ಜಾಣಾವಯಾಚೀ ಕೇ ಗೋಠೀ । ಐಸೇ ಜೀವಿ ಕಲ್ಪೂನಿ ಕಿರೀಟೀ। ತಿಯಾ ಪುನರಪಿ ಕೇಲೀ ದೃಷ್ಟಿಗೇ । ಯಾದವೇಂದ್ರಾ ॥ ೯೬ ॥ ಮಗ ವಿನವಲೆ ಘಭಳೇ । ಹಾ ಹೋಜೇ ಯೇ ಏಕವಾಟೇ । ಸಾತಹೀ ಪದೇ ಅನುಚ್ಛಿಷ್ಟೇ । ನವಲೇ ಆಹಾತೀ ॥ ೯೭ ॥ ಯೇರ್ಹವೀ ಆವಧಾ ನಾಚೇನಿ ವಹಿಲೇಪಣೇ । ನಾನಾ ಪ್ರಮೇಯಾಂಚೇ ಉಗಾಣೇ । ಕಾಯ ಶ್ರವಣಾಚೇನಿ ಆಂಗವಣೇ । ಬೋಲೋ ರಾಹತೀ ॥ ೯೮ ॥ ಪರೀ ತೈಸೇ ಹೇ ನೋಹೇಚಿ ದೇವಾ । ದೇಜಿಲಾ ಅಕ್ಷರಾಂಚಾ ಮೇಳಾವಾ ಆಣಿ ವಿಸ್ಮಯಾಚಿಯಾ ಜೀವಾ । ವಿಸ್ಮಯೋ ಜಾಲಾ ॥ ೯೯ ॥ ಜಾನಾಚೇನಿ ಗವಾಕ್ಷದ್ವಾರೇ ।

ಬೋಲಾಚೇರಶ್ಮೀ ಅಭ್ಯಂತರೇ । ಸಾಹೇ ನಾ ತಂವ ಚಮತ್ಕಾರೇ । ಅವಧಾನ ಠಾಕಲೇ ॥ ೫೦೦ ॥
ತೇವೀಂಚಿ ಅರ್ಥಾಚೀ ಚಾಡ ಮಜ ಆಹೇ । ತೇ ಸಾಂಗತಾಹೀವೇಳ ನ ಸಾಹೇ । ಮ್ಹಣೂನ
ನಿರೂಪಣ ಲವಲಾಹೇ । ಕಿ ಜೋ ದೇವಾ ॥ ೧ ॥ ಐಸಾ ಮಾಗೀಲ ಪಡಕಾಳಾ ಫೇವುನೀ ।
ಪುಢಾ ಅಭಿಪ್ರಾಯ ದೃಷ್ಟೀಸುನೀ । ತೇವೀಂಚಿ ಮಾಜೀ ಶಿರವೂನ । ಆತಿಂಗೇ ಆಪುಲೀ ॥ ೨ ॥
ಕೈಸೀ ಪುಸತೀ ಪಾಹೇ ಪಾ ಜಾಣೀವ । ಭಡೇಚೀ ತರೀ ಲಂಘೋ ನೇದೀ ತಿವ । ಯೇರ್ಹವೀ
ಶ್ರೀಕೃಷ್ಣಹೃದಯಾಸಿ ಜೇವ । ದೇವೋ ಸರಲಾ ॥ ೩ ॥ ಅಹೋ ಶ್ರೀಗುರೂತೇ ಜೈ ಪುಸಾನೇ । ತೇ
ಯೇಣೇ ಮಾನೇ ಸಾವಧ ಹೋಇನೇ । ಹೇ ಏಕಚಿ ಜಾಣೇ ಆಘನೇ । ಸನ್ಯಸಾಚೀ ॥ ೪ ॥
ಆತಾ ತಯಾಚೇ ತೇ ಪ್ರಶ್ನ ಕರಣೇ । ವರೀ ಸರ್ವಜ್ಞ ಶ್ರೀ ಹರೀಚೇ ಬೋಲಣೇ । ಹೇ
ಸಂಜಯೋ ಆನಡಲೇಪಣೇ । ಸಾಂಗೇಲ ಕೈಸೇ ॥ ೫ ॥ ತಿಯೇ ಅವಧಾನ ದ್ಯಾನೇ ಗೋಠೀ ।
ಬೋಲಿಜೇಲ ನೀಟ ಮರ್ಹಾಠೀ । ಜೈಸೇ ಕಾನಾಜೇ ಆಧೀ ದೃಷ್ಟೀ । ಉಪೇಗಾ ಜಾಯೇ ॥ ೬ ॥
ಬುದ್ಧೀಚಿಯಾ ಜಿಭಾ । ಬೋಲಾಚಾ ನ ಚಾಖತಾ ಗಾಭಾ । ಅಕ್ಷರಾಂಚಿಯಾ ಭಾಂವಾ । ಇಂದ್ರಿಯೇ
ಜೀತೇ ॥ ೭ ॥ ಪಾಹಾ ಪಾ ಮಾಲತೀಚೇ ಕಳೇ । ಘ್ರಾಣಾಸಿ ಕೀರ ವಾಟಲೇ ಪರಿಮಳೆ । ಪರೀ
ವರಚಿಯಾ ಬರವಾ ಕಾಈ ಡೋಳೇ । ಸುಖಿಯೇ ನಸ್ಪತೀ ॥ ೮ ॥ ತೈಸೇ ದೇಶಿಯೇಂಚಿಯಾ
ಹವಾವಾ । ಇಂದ್ರಿಯೇ ಕರಿತೀ ರಾಣಿವಾ । ಮಗ ಪ್ರಮೆಯಾಚಿಯಾ ಗಾಂವಾ । ಲೇಸಾ
ಜಾಇಜೇ ॥ ೯ ॥ ಐಸೇನಿ ನಾಗರಪಣೇ । ಬೋಲನಿಮೀ ತೇ ಬೋಲಣೇ । ಐಕಾ ಜ್ಞಾನದೇವ ಮ್ಹಣೇ ।
ನಿವೃತ್ತಿಚಾ ॥ ೫೧೦ ॥

ಇತಿ ಶ್ರೀ ಜ್ಞಾನದೇವ ವಿರಚಿತಾಯಾಂ ಭಾವಾರ್ಥ ದೀಪಿಕಾಯಾಂ ಸಪ್ತಮೋಽಧ್ಯಾಯಃ ॥ ೭ ॥ ಶ್ಲೋಕ ೩೦. ಓವಿಗಳು ೫೧೦

ಅರ್ಥ— ಅವನು ಆಧಿ ಭೂತ ಸಹನಾಗಿ (ಶರೀರ ಸಹ) ನನಗೆ ಅನುಭವದ್ವಾರದಿಂದ ಯಥಾರ್ಥವಾಗಿ ತಿಳಿದು ಯಾವನು ಆಧಿದೈವತ (ಜೀವನಿಗೆ) ಆಕಲನವಾಡಿದನು. ॥ ೧೮೦ ॥ ಮತ್ತು ಆ ಜ್ಞಾನದ ಬಲದಿಂದ ನನಗೆ ಆಧಿಯಜ್ಞ (ಪರಮಾತ್ಮ) ನಿರುವನೆಂಬ ಅನುಭವದ ಪ್ರಖ್ಯಿಯಿಂದ ನೋಡುತ್ತಾನೆ. ಅವನಿಗೆ ಶರೀರದ ವಿಯೋಗದಿಂದ ಮರಣಕಾಲದಲ್ಲಿ ದುಃಖವಾಗುವದಿಲ್ಲ. ॥ ೮೧ ॥ ಆದರೆ ಆಯುಷ್ಯದ ಧಾರವು ಹರಿಯುವ ಹವಣಿಕೆಯಲ್ಲಿದ್ದಾಗ, ಪಡುವ ಪ್ರಾಣಿಗಳ ಸಂಕಟವನ್ನು ಕಂಡು ಸಾವನ್ನರಿಯದ ಬೇರೆ ಜನರಿಗೆ ಕೂಡ ಪ್ರಳಯಕಾಲದಲ್ಲಿ ತೋರಿಬರುವ ಭೀತಿಯು ಉದಯವಾಗಲಾರದೇ ? ॥ ೮೨ ॥ ಆದರೆ ಅವರು ನನ್ನೊಂದಿಗೆ ಒಂದುಗೂಡಿರುವ ಸೊಬಗನ್ನು ಹೇಗೆ, ಯಾವರೀತಿಯಿಂದಲೂ ಬಣ್ಣಿಸಲು ಬರಲಾರದು. ಏಕೆಂದರೆ ಅವರು ಮರಣದಂತಹ ನಿಕಟಕಾಲದಲ್ಲಿಯೂ ನನ್ನನ್ನು ಮರೆತಿರಲಾರರು. ॥ ೮೩ ॥ ಇಲ್ಲನೇ ಯಾರು ಇಂಥ ಪ್ರಕಾರದ ಪೂರ್ಣ ಜ್ಞಾನಿಗಳಾಗಿರುವರೋ, ಅವರೇ (ನನ್ನಲ್ಲಿ) ಸ್ಥಿರ ಅಂತಃಕರಣವುಳ್ಳ ಯೋಗಿಗಳಾಗಿರುವರೆಂಬ ತಿಳಿ. ॥ ೮೪ ॥ (ಇಲ್ಲಿಂದ ಟೀಕಾಕಾರರ ಭಾಷಣವು ಪ್ರಾರಂಭವಾಗುತ್ತದೆ.) ಆ ಸಮಯದಲ್ಲಿ ಶ್ರೀ ಕೃಷ್ಣನ ಮುಖದಿಂದ ಹೊರಟ ಶಬ್ದರೂಪೀ ಪಾತ್ರೆಯ ಕೆಳಗೆ ಅರ್ಜುನನು ' ಅವಧಾನರೂಪಿ ' ಬೊಗಸೆಯನ್ನು ಒಡ್ಡಿರಲಿಲ್ಲ. ಕಾರಣವೇನೆಂದರೆ, ಅವನ ಅಂತಃಕರಣವು ಹಿಂದಿನ (೨೯ ನೇ ಶ್ಲೋಕಾರ್ಥದ) ಚಿಂತನೆಯಲ್ಲಿ ತೊಡಗಿದ್ದಿತು. ಆದುದರಿಂದ ಭಗವಾನನು ಹೇಳುವ ಮಾತಿನ ಕಡೆಗೆ ಅರ್ಜುನನ ಲಕ್ಷವಿರಲಿಲ್ಲ. ॥ ೮೫ ॥ ಆ ಸ್ಥಳದಲ್ಲಿ ಈ ಬ್ರಹ್ಮ ಪ್ರತಿಪಾದಕ ವಾಕ್ಯನೆಂಬ ಫಲವು ಜನ್ಮಾಗಿ ರಸಭರಿತವಾಗಿದ್ದಿತು. ಮತ್ತು ಅದರ ಭಕ್ತಿರೂಪ ಸುಗಂಧವಾಸನೆಯು ನಾಲ್ಕೂ ಕಡೆಗೆ ಹಬ್ಬಿದ್ದಿತು. ॥ ೮೬ ॥ ಆವಾಗ ಕೃಷ್ಣಕೃಪಾರೂಪ ಮಂದವಾಯುವು ಬೀಸಿ, ಶ್ರೀ ಕೃಷ್ಣರೂಪೀ ವೃಕ್ಷದಿಂದ, ಫಜನರೂಪೀ ಫಲಗಳು, ಅರ್ಜುನನ ಶ್ರವಣರೂಪೀ ಉಡಿಯಲ್ಲಿ ಸಹಜವಾಗಿಯೇ ಬಿದ್ದವು. ॥೮೭॥ ಈ ವಾಕ್ಯರೂಪೀ ಫಲಗಳನ್ನು ತತ್ವಜ್ಞಾನದ ಸಿದ್ಧಾಂತದಿಂದಲೇ ಮಾಡಿ, ಬ್ರಹ್ಮರಸರೂಪೀ ಸಮುದ್ರದಲ್ಲಿ ಆದ್ದಿ, ಪರಮಾನಂದರೂಪೀ ಸಕ್ಕರೆಯಲ್ಲಿ ಉರುಳಾಡಿಸಿರುವರೋ, ಎಂದು ತೋರು

ತ್ತಿದ್ದನು. ॥ ೪೪ ॥ ಇಂಥ ರೀತಿಯಿಂದ ಸಿದ್ಧಪಡಿಸಿದ ಈ ನಿರ್ಮಲ ಫಲಗಳಲ್ಲಿಯ ಅರ್ಥರೂಪೀ ಗರ್ಭದ (ಜ್ಞಾನದ) ಲಾಭವಾಡಿಕೊಳ್ಳಬೇಕೆಂಬ ಇಚ್ಛೆಯು ಅರ್ಜುನನಲ್ಲಿ ಉತ್ಪನ್ನವಾಗಿ, ಅವನು ವಿಸ್ಮಯರೂಪೀ ಅಮೃತದ ಗುಟುಕು ತೆಗೆದುಕೊಳ್ಳಲಾಂಭಿಸಿದನು. ॥೪೯॥ ಹೀಗೆ ಸುಖಸಂಪತ್ತಿಯ ಲಾಭಕ್ಕೋಸುಗ ಅರ್ಜುನನ ಅಂತಃಕರಣದಲ್ಲಿ ಆದ ಆನಂದದ ಭರತಿಯು, ಅವನನ್ನು ಸ್ವರ್ಗಸುಖವು ತುಚ್ಛವೆಂದು ತಿಳಿಯುವಂತೆ ಮಾಡಿತು. ॥ ೯೦ ॥ ಈ ಪ್ರಕಾರ ಆ ಫಲದ ಬಾಹ್ಯ ಸೌಂದರ್ಯ ಸುಖದ ಅನುಭವವನ್ನು ಅರ್ಜುನನು ಕಾಣಹತ್ತಿದನು. ಅವನು ಕೂಡಲೇ ಆ ಫಲದ ರಸವನ್ನು ಸವಿಯಬೇಕೆಂಬ ಪ್ರಬಲ ಇಚ್ಛೆಯಿಂದ ತ್ವರೆಮಾಡಿದನು. ॥ ೯೧ ॥ ತೀವ್ರನೇ ಅನುಮಾನರೂಪೀ ಕರದಲ್ಲಿ ಆ ಕೃಷ್ಣರೂಪೀ ವಾಕ್ಯದ ಫಲವನ್ನು ಹಿಡಿದುಕೊಂಡು, ಅದನ್ನು ಅನುಭವರೂಪೀ ಮುಖದಲ್ಲಿ ಒಮ್ಮೆಲೇ ಇಟ್ಟುಕೊಳ್ಳಲು ಹವಣಿಸಿದನು. ॥ ೯೨ ॥ ಆ ಸಮಯದಲ್ಲಿ ವಿಚಾರರೂಪಿ ಬಾಯಿಯಲ್ಲಿ ಆ ಫಲವು ಹಿಡಿಯದಾಯಿತು. ಮತ್ತು ಹೇತೂರೂಪ ಹಲ್ಲುಗಳಿಂದ ನುರಿಯಲೂ ಬರದಾಯಿತು. ಇದನ್ನು ತಿಳಿದು ಸುಧದ್ರಾವತಿಯು ಆ ವಾಕ್ಯರೂಪೀ ಫಲವನ್ನು ಬಾಯಿಯಲ್ಲಿಡಲಿಲ್ಲ. ॥ ೯೩ ॥ ಆ ಚಿನುತ್ಕಾರವನ್ನುಕಂಡು ಅರ್ಜುನನು ಅನ್ನುತ್ತಾನೆ, ನೀರಿನಲ್ಲಿ ಬಿದ್ದಿರುವ ನಕ್ಷತ್ರದ ಪ್ರತಿಬಿಂಬದೋಪಾದಿಯಲ್ಲಿರುವ ಆ ವಾಕ್ಯಾಕ್ಷರಗಳ ಸೌಂದರ್ಯವನ್ನು ನೋಡಿ, ಆ ಅಕ್ಷರಗಳು ಹಣ್ಣುಗಳೆಂದು ನಾನು ಭ್ರಮಿಸಿದುದು ಹೇಗೆ? ॥ ೯೪ ॥ ಇವು ನಿಜವಾಗಿ ವಾಕ್ಯಗಳಾಗಿರದೇ ಆಕಾಶದ ಮಡಿಕೆಗಳೇ ಆಗಿರುವವು. ಅಲ್ಲಿ ನಾವು ನಮ್ಮ ಬುದ್ಧಿಯಿಂದ ಎಷ್ಟು ಒದ್ದಾಡಿದರೂ ಅದರ ನೆಲೆಯನ್ನು ಹೊಂದಲಾರೆವು. ॥ ೯೫ ॥ ಹೀಗಿದ್ದಮೇಲೆ ಆ ವಾಕ್ಯವನ್ನು ತಿಳಿಯುವ ಬಗೆ ಹೇಗೆ ? ಎಂದು ಅರ್ಜುನನು ಮನದಲ್ಲಿ ವಿಚಾರಮಾಡಿ, ಪುನಃ ಯಾದವೇಂದ್ರನಾದ ಶ್ರೀ ಕೃಷ್ಣನಕಡೆಗೆ ನೋಡಿದನು. ॥ ೯೬ ॥ ಆಮೇಲೆ ಅರ್ಜುನನು ಭಗವಾನ್ ಶ್ರೀ ಕೃಷ್ಣನಿಗೆ ವಿನಯದಿಂದ ಬೇಡಿಕೊಳ್ಳುತ್ತಾನೆ — ಈ ಒಂದಾಗಿ ಕೂಡಿ ಹೋಗಿರುವ ಏಳು ಪದಗಳ ((೧) ಬ್ರಹ್ಮ (೨) ಅಧ್ಯಾತ್ಮ (೩) ಕರ್ಮ (೪) ಅಧಿಭೂತ (೫) ಅಧಿದೈವತ (೬) ಅಧಿಯಜ್ಞ (೭) ಪ್ರಯಾಣಕಾಲದಲ್ಲಿ ಯೋಗಿಗಳಿಗೆ ಆಗುವ ನಿನ್ನ ಸ್ಮರಣ.) ಸ್ವಾದವನ್ನು ಯಾರೂ ಎಂದೂ ತೆಗೆದುಕೊಂಡಿರುವದಿಲ್ಲ. ಇದು ಬಹಳೇ ಆಶ್ಚರ್ಯವಾಗುವಂತಹದು ! ॥ ೯೭ ॥ ಸಹಜವಾಗಿ ವಿಚಾರಮಾಡಿ ನೋಡಿದರೆ ಈ ಏಳು ವಾಕ್ಯಗಳಿಂಗಿನ ಬೇರೆಬೇರೆ ಪ್ರಮೇಯಗಳನ್ನು ತೀವ್ರವಾಗಿ ಅವಧಾನ ಕೊಟ್ಟು ಶ್ರವಣಮಾಡುವದರಿಂದ, ಆ ಶ್ರವಣದ ಬಲದಿಂದ ಏನಾದರೂ ಮಾತನಾಡಲು ಬರಬಹುದು. ಎಂದು ನನಗೆ ತೋರಿತು. ॥ ೯೮ ॥ ಆದರೆ ದೇವಾ, ಈ ಸಂಭಾಷಣವು ಸಾಧಾರಣವಾದುದಲ್ಲ. ಈ ಅಕ್ಷರಗಳು ಸಹಜವಾಗಿಯೇ ನೋಡಿದರೆ ವಿಸ್ಮಯಕ್ಕೇ ವಿಸ್ಮಯವಾಗಿ ತೋರುವದು. ॥ ೯೯ ॥ ಕವಿಗಳ ರಂಧ್ರಗಳೊಳಗಿಂದ ಭಾಷಣರೂಪೀ ಕಿರಣಗಳು ಇನ್ನೂ ಒಳಗೆ ಪ್ರವೇಶವಾಗಿರುವದಿಲ್ಲ. ಅಷ್ಟರಲ್ಲಿಯೇ ಆಶ್ಚರ್ಯವು ಮೈದೋರಿ ನನ್ನ ಲಕ್ಷವು ಮಂದವಾಯಿತು, ॥ ೧೦೦ ॥ ಈ ಶಬ್ದದ ಅರ್ಥವನ್ನು ತಿಳಿದುಕೊಳ್ಳಬೇಕೆಂದು ನನಗೆ ಉತ್ಕಟವಾದ ಇಚ್ಛೆಯು ಹುಟ್ಟಿದೆ. ಹೀಗೆ ಹೇಳುವಾಗ ಹಿಡಿಯುವ ವೇಳೆಯನ್ನು ಕಳೆಯಲು ಕೂಡಾ ನನಗೆ ಸಾಧ್ಯವಾಗಲಾರದಾಗಿದೆ. ಅದು ಕಾರಣ ದೇವಾ, ಅದರ ಅರ್ಥವನ್ನು ತೀವ್ರವಾಗಿ ಹೇಳುವದಾಗ ಬೇಕು. ಈ ಪ್ರಕಾರ ಹಿಂದಿನ ಸಂಗತಿಯನ್ನು ತೆಗೆದುಕೊಂಡು ಮುಂದಿನ ಅಭಿಪ್ರಾಯದ ಮೇಲೆ ದೃಷ್ಟಿಯನ್ನಿಟ್ಟು ಮಧ್ಯದಲ್ಲಿಯೇ ಕೇಳಬೇಕೆಂಬ ತನ್ನ ಅಪೇಕ್ಷೆಯನ್ನು ತೋರಿಸಿ, ಅರ್ಜುನನು ವಿಚಾರ ಮಾಡಿದನು ॥ ೨ ॥ ಅರ್ಜುನನಲ್ಲಿ ಪ್ರಶ್ನೆಮಾಡುವ ಶೈಲಿಯು ಹೇಗಿರುವುದು ನೋಡಿರಿ ? ಮರ್ಯಾದೆಯ ಉಲ್ಲಂಘನೆಯನ್ನು ಮಾಡದೇ, ಶ್ರೀಕೃಷ್ಣನ ಹೃದಯಕ್ಕೆ ಪ್ರೇಮಾಲಿಂಗನವನ್ನು ಕೊಡಲಿಕ್ಕೆ ಸಿದ್ಧನಾದನು. ॥ ೩ ॥ ಶ್ರೀ ಗುರುಗಳಿಗೆ ಯಾವ ಕಾಲಕ್ಕೆ ಕೇಳಬೆಕೋ ಆವಾಗ ಇಂಥ ಮರ್ಯಾದೆಯಿಂದಲೇ ಕೇಳಬೇಕು. ಅವರ ಮರ್ಯಾದೆಯನ್ನು ಸ್ಥಿರವಾಗಿ ಇಟ್ಟು ತನ್ನ ಶಂಕೆಯನ್ನು ಕೇಳುವ ಶೈಲಿಯ ಬಗೆಯನ್ನು ಅರ್ಜುನನೊಬ್ಬನೇ ಬಲ್ಲನು. ॥೪॥ ಈಗ ಅವನ ಆ ಪ್ರಶ್ನೆಮಾಡುವದನ್ನೂ, ಆ ಪ್ರಶ್ನೆಗೆ ಸರ್ವಜ್ಞ ಶ್ರೀಹರಿಯು ಉತ್ತರಕೊಡುವದನ್ನೂ ಆ ಸಂಜಯನು ಹೇಗೆ ಪ್ರೇಮದಿಂದ ಹೇಳುವನೆಂಬುದನ್ನು ನೋಡಿರಿ. ॥೫॥ ಯಾವ ಮಾತು ನೆಟ್ಟಗೆ ಮಹಾರಾಷ್ಟ್ರ ಭಾಷೆಯಲ್ಲಿ ಹೇಳಲು ಬರುವದೋ, ಅದರ ಕಡೆಗೆ ಜನ್ಯಾಗಿ ಲಕ್ಷವನ್ನು ಕೊಡಬೇಕು. ಏಕೆಂದರೆ ಆ ಯೋಗದಿಂದ ಕವಿಗಳ ದೃಷ್ಟಿಗೆ ಮೊದಲಿಗೇ ಅರ್ಥವು ಕಾಣಹತ್ತುವದು. ॥ ೬ ॥ ಬುದ್ಧಿರೂಪ

ನಾಲಿಗೆಯಿಂದ ಆ ಶಬ್ದರಸವನ್ನು ಕುಡಿಯದೇ, ಅಕ್ಷರದ ಸೌಂದರ್ಯದಿಂದ ಇಂದ್ರಿಯಗಳು ತಟಸ್ಥವಾಗುವವು. ॥೭॥ ಹೀಗೆ ನೋಡು, ಮಲ್ಲಿಗೆಯ ಹೂವಿನ ಸುಗಂಧವು ಘ್ರಾಣೇಂದ್ರಿಯಕ್ಕೆ ಬರುವದು ಸಹಜವು. ಆದರೆ ಆ ಪುಷ್ಪದ ಹೊರಗಿನ ಸೌಂದರ್ಯವನ್ನು ನೋಡಿ ಕಣ್ಣುಗಳಿಗೆ ಸುಖವು ಆಗದಿರುವುದೇ ಹೇಗೆ ? ॥೮॥ ಅದೇ ಪ್ರಕಾರ ಮಹಾರಾಷ್ಟ್ರ ಭಾಷೆಯ ಶೋಭೆಯಿಂದ ಇಂದ್ರಿಯಗಳು ಸುಖದ ಸಾವ್ರಾಜ್ಯವನ್ನು ಭೋಗಿಸುವವು. ಮತ್ತು ಆಮೇಲೆ ತೀವ್ರವೇ ಸಿದ್ಧಾಂತರೂಪೀ ಗ್ರಾಮದಲ್ಲಿ ಪ್ರವೇಶವಾಗುವವು. ॥ ೯ ॥ ಇಂಥ ಸೌಂದರ್ಯದಿಂದ ತುಂಬಿದ ಈ ಸಂಭಾಷಣವನ್ನು ಕೇಳಿದಕೂಡಲೇ ಮಾತುಗಳೇ ನಿಂತು ಹೋಗುತ್ತವೆ. ಇಂತಹ ಸುರಸ ಸಂಭಾಷಣೆಯನ್ನು ಕೇಳಿರಿ, ಎಂದು ನಿವೃತ್ತಿ ದಾಸರಿಗೆ ಜ್ಞಾನದೇವ ಮಹಾರಾಜರು ಅನ್ನುತ್ತಾರೆ. ॥ ೨೧೦ ॥

ಶ್ರೀಮದ್ಭಗವದ್ಗೀತೆ ಅರ್ಥಾತ್ ಜ್ಞಾನೇಶ್ವರಿಯ ಸುಲಭ, ಸರಲ ಕನ್ನಡ ಅನುವಾದದ ಏಳನೆಯ ಅಧ್ಯಾಯವು ಮುಗಿದುದು.

ಸಮಾಪ್ತವು

ಶ್ರೀಕೃಷ್ಣಾರ್ಪಣಮಸ್ತು



ಜ್ಞಾನೇಶ್ವರೀ

ಎಂಟನೆಯ ಅಧ್ಯಾಯವು

ಅರ್ಜುನ ಉವಾಚ--

ಕಂ ತದ್ಬ್ರಹ್ಮ ಕಮಧ್ಯಾತ್ಮಂ ಕಂ ಕರ್ಮ ಪುರುಷೋತ್ತಮ ।
ಅಧಿಭೂತಂ ಚ ಕಂ ಪ್ರೋಕ್ತಮಧಿದೈವಂ ಕಮುಚ್ಯತೇ ॥ ೧॥

[**ಕಂತದ್ಬ್ರಹ್ಮೇತಿ**] ಮಗ ಅರ್ಜುನನೇ ಮ್ಹಣೆತಲೇ । ಹಾ ಹೋಜೀ ಅವಧಾರಿಲೇ । ಜೇ ಮ್ಯಾ ಪುಸಿಲೇ । ತೇನಿರೂಪಿಜೇ ॥ ೧॥ ಸಾಂಗಾಕವಣ ತೇಬ್ರುಹ್ಮ । ಕಾಯಸಯಾ ನಾಮಕರ್ಮ । ಅಥವಾ ಅಧ್ಯಾತ್ಮ । ಕಾಯ ಮ್ಹಣಿಪೆ ॥ ೨॥ ಅಧಿಭೂತ ತೇ ಕೈಸೇ । ಏಥ ಅಧಿ ದೈನತ ತೇ ಕವಣ ಅಸೇ । ಹೇ ಉಘಡ ಮೀ ಪರಿಯೇಸೇ । ಐಸೇ ಬೋಲಾ ॥ ೩॥

ಅರ್ಥ— ಆ ಮೇಲೆ ಅರ್ಜುನನು ಅನ್ನುತ್ತಾನೆ: ಎಲೋ ದೇವನೆ ! ಕೇಳಿದಿರೇನು. ಯಾವದು ನಿಮಗೆ ವಿಚಾರಿಸುವೆನು, ಅದನ್ನು ನನಗೆ ವಿಸ್ತಾರದಿಂದ ಹೇಳಬೇಕು. ॥ ೧॥ ಆ ಬ್ರುಹ್ಮವು ಯಾವದು ? ಕರ್ಮವೆಂದು ಯಾವದಕ್ಕೆ ಕರಿಯುವರು ? ಅಧ್ಯಾತ್ಮವೆಂದರೆ ಯಾವದು ? ॥ ೨॥ ಅಧಿಭೂತವೆಂದೆನ್ನುತ್ತಾರೆ, ಅದು ಹೇಗೆ ಇರುವದು? ಇದರಲ್ಲಿ ಅಧಿದೈವತವು ಯಾವದು ? ಇದು ನನಗೆ ನಿಶ್ಚಳವಾಗಿ ತಿಳಿಯುವಂತೆ ಹೇಳಬೇಕು. ॥ ೩॥

ಅಧಿಯಜ್ಞಃ ಕಥಂ ಕೋಽತ್ರ ದೇಹೇಽಸ್ಮಿನ್ಮಧುಸೂದನ ।
ಪ್ರಯಾಣಕಾಲೇ ಚ ಕಥಂ ಜ್ಞೇಯೋಽಸಿ ನಿಯತಾತ್ಮಭಿಃ ॥ ೪॥

[**ಅಧಿಯಜ್ಞಃ ಇತಿ**] ದೇವಾ ಅಧಿಯಜ್ಞ ತೋಕಾಣ । ಕವಣ ಪಾ ಇಯೇ ದೇಹೀ । ಹೇ ಅನುಮಾನಾಸಿ ಕಾಂಹೀ । ದಿಠೀ ನ ಭರೇ ॥ ೪॥ ಆಣಿ ನಿಯತಾ ಅಂತಃಕರಣೀ । ತೂಜಾಣೇಜಸೀ ದೇಹ ಪ್ರಯಾಣೀ । ತೇ ಕೈಸೇನಿ ಹೇ ಶಾರ್ಙ್ಗಪಾಣೀ । ಪರಿಸವಾ ಮಾತೇ ॥ ೫॥ ದೇಹಾಧಸಳಾರೀ ಚಿಂತಾಮಣೀಚಾ । ಜರೀ ಪಹುಡಲಾ ಹೋಯ ದೈವಾಚಾ । ತೆಥೀ ಓಸಣ ತಾಹೀ ಬೋಲ ತಯಾಚಾ । ಸೋಪ ನ ವಚೇ ॥ ೬॥ ತೈಸೇ ಅರ್ಜುನಾಚಿಯಾ ಬೋಲಾಸವೇ । ಆಲೇ ತೇಚಿ ಮ್ಹಣೆತಲೇ ದೇವೇ । ಪರಿಯೇಸೇ ಗಾ ಬರವೇ । ಜೇ ಪುಸಿಲೇ ತುವಾ ॥ ೭॥ ಕಿರೀಟೀ ಕಾಮಧೇನೂಚಾ ಪಾಡಾ । ವಠೀ ಕಲ್ಪ ತರೂಚಾ ಆಹೇ ಮಾಂದೋಡಾ । ಮ್ಹಣೋನಿ ಮನೋರಥ ಸಿದ್ಧೀಚಿಯಾ ಚಾಡಾ । ತೋನವಲ ನೋಹೇ ॥ ೮॥ ಶ್ರೀಕೃಷ್ಣ ಕೋಪೋನಿ ಜ್ಯಾಸಿ ಮಾರೀ । ತೋ ಪಾವೇ ಪರಬ್ರುಹ್ಮ ಸಾಕ್ಷಾತ್ಕಾರೀ । ಮಾ ಕೃಪೇನೇ ಉಪದೇಶ ಕರೀ । ತೋ ಕೈಶಾಪರೀ ನ ಪವೇಲ ॥ ೯॥ **ಜೈಕೃಷ್ಣಚಿ** ಹೋಇಜೇ ಆಪಣ । ತೈಕೃಷ್ಣ ಹೋಯೆ ಆಪುಲೇ ಅಂತಃಕರಣ । ತೇಧವಾ ಸಂಕಲ್ಪಾಚೇ ಅಂಗಣ । ವೋಳಗತೀ ಸಿದ್ಧೀ ॥ ೧೦॥ ಪರೀ ಐಸೇ ಜೇ ಪ್ರೇಮ । ತೇ ಅರ್ಜುನೀಂಚಿ ಆಥಿ ನಃಸ್ಸೀಮ । ಮ್ಹಣವೋನಿ ತಯಾತೇ ಕಾಮ । ಸದಾ ಸಫಳ ॥ ೧೧॥ ಯಾ ಕಾರಣೇ ಶ್ರೀ ಅನಂತೇ । ತೇ ಮನೋಗತ ತಯಾಚೇ ಪುಸತೇ । ಹೋಇಲ ಜಾಣೂನಿ ಆಇತೆ । ವೋಗರೂನಿ ಠೇವಿಲೇ ॥ ೧೨॥ ಜೇ ಅಪತ್ಯ ಥಾನೀ ನಿಗೇ ।

ತಯಾಚೀ ಭೂಕ ತೇ ಮಾತೇಸೀಚಿ ಲಾಗೇ । ಯೇರ್ಹವೀ ತೇ ಶಬ್ದೇ ಕಾಯ ಸಾಂಗೇ । ಮಗ, ಸ್ವನ್ಯ ದೇಯೇರೀ ॥ ೧೩ ॥ ಮ್ಹಣೋನಿ ಕೃಪಾಳುವಾ ಗುರೂಚಿಯಾ ಠಾಯೀ । ಹೇ ನವಲ ನೋಹೇ ಕಾಂಹೀ । ಪರೀ ತೇ ಅಸೋ ಆಇಕಾ ಕಾಇ । ಜೇ ದೇವ ಬೋಲತೇ ಜಾಹಾಲೇ ॥ ೧೪ ॥

ಅರ್ಥ— ದೇವಾ ! ಅಧಿಯಜ್ಞ ಯಾವದು ಮತ್ತು ಅದು ಈ ದೇಹದಲ್ಲಿ ಹೇಗೆ ಶೋಭಿಸುವದು ? ಇದು ಅನು ಮಾನ ಯೋಗದಿಂದ ಚನ್ನಾಗಿ ಲಕ್ಷದಲ್ಲಿ ಬರುವದಿಲ್ಲ. ॥೪॥ ಎಲೋ ಶಾರ್ಙ್ಗಪಾಣಿಯೇ ! ಯಾವನು ಅಂತಃಕರಣವನ್ನು ಸ್ವಾಧೀನಮಾಡಿಕೊಂಡಿರುತ್ತಾನೋ, ಅವನು ಮರಣ ಕಾಲದಲ್ಲಿ ನಿಂಮನ್ನು ಹೇಗೆ ಅರಿವನು ಎಂಬದನ್ನು ನನಗೆ ಸ್ಪಷ್ಟ ಮಾಡಿ ವಿಸ್ತಾರವಾಗಿ ಹೇಳು. ॥ ೫ ॥ (ಜ್ಞಾನೇಶ್ವರ ಮಹಾರಾಜರು ಅನ್ನುತ್ತಾರೆ) ನೋಡು. ಚಿಂತಾಮಣಿಯ ಮಂದಿರ ದಲ್ಲಿ ಅಕಸ್ಮಾತ್ ಒಬ್ಬ ಭಾಗ್ಯವಾನ್ ಪುರುಷನು ಮಲಗಿರಲು ಅವನು ನಿದ್ದೆಯಲ್ಲಿ ಬಡಬಡಿಸಿದರೂ, ಅವನ ಬಡಬಡಿ ಸುವಿಕೆಯು ವ್ಯರ್ಥವಾಗದೇ ಸಾರ್ಥಕವಾಗುವದು. ॥೬॥ ಅದೇ ಪ್ರಕಾರ ಅದನ್ನು ನನಗೆ ಹೇಳಬೇಕೆಂದು ಅರ್ಜುನನ ಮಾತಿನ ಸಂಗಡವೇ ಶ್ರೀಕೃಷ್ಣನು ಅನ್ನುತ್ತಾನೆ. ಎಲೋ ಪಾರ್ಥನೇ ! ಯಾವದನ್ನು ನೀನು ವಿಚಾರಿಸಿದಿ ಅದನ್ನು ಚನ್ನಾಗಿ ಕೇಳು. ॥ ೭ ॥ ಅರ್ಜುನನು ಕಾಮಧೇನುವಿನ ಕರವು, ಅದರ ಮೇಲೆ ಕಲ್ಪತರುವಿನ ಮಂಟಪವು ಅದೆ. ಅಂದ ಬಳಿಕ ಅರ್ಥಾತ್ ಅವನ ಮನಸಿನಲ್ಲಿಯ ಸರ್ವ ಮನೋರಥಗಳು ಸಿದ್ಧಿಗೆ ಹೋಗುತ್ತವೆಂಬುದರಲ್ಲಿ ಆಶ್ಚರ್ಯವೇನು ? ॥ ೮ ॥ ಶ್ರೀಕೃಷ್ಣನು ಯಾರನ್ನು ಕ್ರೋಧದಿಂದ ಕೊಲ್ಲುವನೋ, ಅವರು ಪರಬ್ರಹ್ಮಸ್ವರೂಪ ಸಾಕ್ಷಾತ್ಕಾರ ಪಡೆಯು ತ್ತಾರೆ. ಆದರೆ ಯಾವನಿಗೆ ಭಗವಂತನು ಕೃಪಾದೃಷ್ಟಿಯಿಂದ ಉಪದೇಶಮಾಡುತ್ತಾನೆ, ಅವನಿಗೆ ಯಾವದು ದೊರಕ ಲಿಕ್ಕಿಲ್ಲ ? ॥ ೯ ॥ ಯಾವಾಗ್ಗೆ ಕೃಷ್ಣಸ್ವರೂಪವೇ ನಾನು ಇರುವೆನೆಂಬ ನಿಶ್ಚಯವಾದ ಭಾವನೆಯು ಉಂಟಾಗುತ್ತದೆ. ಆಗ್ಗೆ ಅವನ ಅಂತಃಕರಣವು ಕೃಷ್ಣಸ್ವರೂಪವಾಗುತ್ತದೆ. ಆಮೇಲೆ ಸಂಕಲ್ಪರೂಪ ಅಂಗಳದಲ್ಲಿ (ತನ್ನ ಮನಸಿನಲ್ಲಿ ಯಾವ ಯಾವ ಸಂಕಲ್ಪಗಳು ಉಂಟಾಗುವವು, ಆ ಎಲ್ಲ ಮನೋರಥಗಳನ್ನು ಪೂರ್ಣ ಮಾಡುವದರ ದೆಶೆಯಿಂದ) ಅಷ್ಟ ಮಹಾಸಿದ್ಧಿಗಳು ಅಲ್ಲಿ ಸೇವೆ ಮಾಡುತ್ತಿರುತ್ತವೆ. ॥ ೧೦ ॥ ಇಂಥ ಪ್ರಕಾರದ ನಿಶ್ಚೀಮ ಪ್ರೇಮವು ಒಬ್ಬ ಅರ್ಜುನ ನಲ್ಲಿಯೇ ಕಂಡು ಬರುತ್ತದೆ. ಆದುದರಿಂದ ಅವನ ಮನೋರಥಗಳು ಯಾವಾಗಲೂ ಪೂರ್ಣವಾಗುತ್ತಿರುತ್ತವೆ. ॥೧೧॥ ಅರ್ಜುನನು ಇಸ್ಸು ಮೇಲೆ ತನ್ನ ಮನಸಿನೊಳಗಿನ ಮಾತು ನನಗೆ ವಿಚಾರ ಮಾಡುವನೆಂಬದನ್ನು ಪೊದಲೆಗೇ ತಿಳಿದು, ಭಗವಾನ್ ಶ್ರೀಕೃಷ್ಣನು ಮುಂಚಿತವಾಗಿಯೇ ಉತ್ತರರೂಪಿ ಪಕ್ವಾನ್ನವನ್ನು ಸುವರ್ಣದ ಪಾತ್ರೆಯಲ್ಲಿ ನೀಡಿ ತುಂಬಿ ಯಿಟ್ಟಿದ್ದನು. ॥ ೧೨ ॥ ಸ್ತನಪಾನವನ್ನು ಮಾಡಿ ದೂರ ಆಡುತ್ತಿರುವ ಬಾಲಕನಿಗೆ ಹಸಿವಿ ಆಗಿರುವದೆಂಬದು ಆ ಕೂಸಿನ ತಾಯಿಯೊಬ್ಬಳಿಗೇ ಮಾತ್ರ ತಿಳಿಯುತ್ತದೆ. ಆ ಕೂಸು ಹಾಲು ಕುಡಿಸೆಂದು ತನ್ನ ತಾಯಿಗಾದರೂ ಹೇಳುವದೇನು ? ಇಲ್ಲ. ಆದರೆ, ತಾಯಿಯು ತಾನಾಗಿಯೇ ಸ್ತನಪಾನವನ್ನು ಮಾಡಿಸುವಳು. ॥ ೧೩ ॥ ಅರ್ಥಾತ್, ಕೃಪಾಳುವಾದ ಗುರುಗಳ ಸ್ಥಳದಲ್ಲಿ, (ತಮ್ಮ ಶಿಷ್ಯನ ಸಮ್ಮಂಧವಾಗಿ) ಇಂಥ ನಿಶ್ಚೀಮವಾದ ಪ್ರೇಮವಿರುವದು ಆಶ್ಚರ್ಯವೇನು ? ಅದಂತೂ ಇರಲಿ. ಭಗವಂತನು ಏನು ಮಾತಾಡಿದನು ಅದನ್ನು ಹೇಳುವೆನು (ಶ್ರವಣಮಾಡಿರಿ.) ॥ ೧೪ ॥

ಶ್ರೀ ಭಗವಾನುವಾಚ—

ಅಕ್ಷರಂ ಬ್ರಹ್ಮ ಪರಮಂ ಸ್ವಭಾವೋಽಧ್ಯಾತ್ಮಮುಚ್ಯತೇ ।
ಭೂತಭಾವೋದ್ಭವಕರೋ ವಿಸರ್ಗಃ ಕರ್ಮಸಂಜ್ಞಿತಃ ॥ ೩ ॥

[ಅಕ್ಷರಮಿತಿ] ಮಗ ಮ್ಹಣಿತಲೇ ಸರ್ವೇಶ್ವರೇ । ಆಕಾರೀ ಇಯೇ ಮೋಕಳೇ । ಕೋಂದಲೇ ಅಸತ ನ ಖಿರೇ । ಕವಣೇ ಕಾಳಿ ॥ ೧೫ ॥ ಯೇರ್ಹವೀ ಸಪುರಪಣ ತಯಾಚೇ ಪಾಹಾವೇ । ತರಿ ಶೂನ್ಯಚಿ ನವ್ಹೇ ಸ್ವಭಾವೇ । ವರೀ ಗಗನಾಚೇನಿ ಪಾಲವೇ । ಗಾಳೂನಿ ಘೇತಲೇ ॥ ೧೬ ॥ ಜೇ ಐಸೇಹೀ ಪರೀ ನಿರುಳೇ । ಇಯೇ ವಿಜ್ಞಾನಾಚಿಯೇ ಮೋಳೇ । ಹಾಲವಲೇಹೀ

ನ ಗಳೇ । ತೇಪರಬ್ರಹ್ಮ ॥ ೧೬ ॥ ಆಣೀ ಆಕಾರಾಚೇನಿ ಜಾಲೇ ಪಣೇ । ಜನ್ಮಘರ್ಮಾತೇ ನೇಣೇ । ಆಕಾರ ಲೋಪೀ ನಿಮಣೇ । ನಾಹೀ ಕಹೀ ॥ ೧೮ ॥ ಐಸಿಯಾ ಆಪುಲಿಯಾಚೆ ಸಹಜ ಸ್ಥಿತೀ । ಜಯಾ ಬ್ರಹ್ಮಾಚೀ ನಿತ್ಯತಾ ಅಸತೀ । ತಯಾನಾಮ ಸುಭದ್ರಾಪತೀ । ಅಧ್ಯಾತ್ಮಗಾ ॥ ೧೯ ॥ ಮಗ ಗಗನೀ ಜೇವೀ ನಿರ್ಮಳೇ । ನೇಣೋ ಕೈಚಿ ಏಕ ವೇಳೇ । ಉಠತೀ ಘನಪಟಳೇ । ನಾನಾವರ್ಣೇ ॥ ೨೦ ॥ ತೈಸೇ ಅಮೂರ್ತೀ ತಿಯೇ ವಿಶುದ್ಧೇ । ಮಹದಾದಿಭೂತಭೇದೇ । ಬ್ರಹ್ಮಾಂಡಾಚೇ ಬಾಂಧೇ । ಹೋಚಿ ಲಾಗತೀ ॥೨೧॥ ಪೈ ನಿರ್ವಿಕಲ್ಪಾಚಿಯೇ ಬರಡೀ । ಘಟೇ ಆದಿ ಸಂಕಲ್ಪಾಚೇ ವಿರೂಢೀ । ಆಣಿತೇ ಸವೇಂಚಿ ಮೋಡೋನಿ ಯೇ ಢೋಂಡೀ । ಬ್ರಹ್ಮಗೋಳಕಾಂಚ್ಯಾ ॥ ೨೨ ॥ ತಥಾ ಏಕೈಕಾಚೇ ಭೀತರೀ ಪಾಹಿಜೇ । ತವ ಬೀಜಾಚಾಚಿ ಭರಿಲಾದೇಪಿಜೇ । ಮಾಜೀ ಹೋತಿಯಾ ಜಾತಿಯಾ ನೇಣಿಜೇ । ಲೇಖು ಜೀವಾ ॥ ೨೩ ॥ ಮಗ ತಯಾ ಬ್ರಹ್ಮಗೋಳಕಾಂಚೇ ಅಂಶಾಂಶ । ವ್ರ ಸವತೀ ಆದಿಸಂಕಲ್ಪ ಅಸಮಾಸ । ಹೇ ಅಸಾ ಐಸೀ ಬಹುವಸ । ಸೃಷ್ಟಿವಾಥೇ ॥ ೨೪ ॥ ಪರೀ ದುಜೇನ ವೀಣ ಏಕಲಾ । ಪರಬ್ರಹ್ಮಚಿ ಸಂಚಲಾ । ಅನೇಕತತ್ವಾಚಾ ಆಲಾ । ಪೂರ ಜೈಸಾ ॥ ೨೫ ॥ ತೈಸೇ ಸಮ ವಿಷಮತ್ವ ನೇಣೋ ಕೈಚೇ । ವಾಯಾಂಚಿ ಚರಾಚರ ರಚೇ । ಪಾಹಾತಾ ಪ್ರಸವತಿಯಾ ಯೋಸಿಚೇ । ಲಕ್ಷ ದಿಸತೇ ॥ ೨೬ ॥ ಯೇರೀ ಜೀವ ಭಾವಾಚಿಯೇ ಪಾಲಪಿಯೇ । ಕಾಹೀ ಮರ್ಯಾದಾ ಕರೂನಯೇ । ಪಾಹಿಜೇ ಕವಣಹೇ ಆಘವೇ ವಿಯೇ । ತವ ಮೂಳ ತೇ ಶೂನ್ಯ ॥ ೨೭ ॥ ಸ್ಥೂಣಾನಿ ಕರ್ತಾ ಮುದಲ ನ ದಿಸೇ । ಆಣಿ ಸೇಪೀ ಕಾರಣಹೀ ಕಾಹೀ ನಸೇ । ಮಾಜೀ ಕಾರ್ಯಾಚಿ ಆಪೈಸೇ । ವಾಢೋಂಚಿ ಲಾಗೇ ॥ ೨೮ ॥ ಐಸಾ ಕರಿತೇ ನ ವೀಣಗೋಚರ । ಅವ್ಯ ಕ್ತೀ ಹಾ ಆಕಾರ । ನಿಪಜೇ ಜೋ ವ್ಯಾಪಾರ । ತಯಾ ನಾಮಕರ್ಮ ॥ ೨೯ ॥

ಅರ್ಥ— ಆಮೇಲೆ ಸರ್ವೇಶ್ವರ ಶ್ರೀಕೃಷ್ಣ ಪರಮಾತ್ಮನು ಅನ್ನುತ್ತಾನೆ. ಯಾವದು ನವಛಿದ್ರವಾದ ಆಕಾರದ ದೇಹದಲ್ಲಿ ಓತಪ್ರೋತ ತುಂಬಿಕೊಂಡಿದ್ದು ಅದು ಯಾವ ಕಾಲದಲ್ಲಯೂ ಸೋರಿ ಹೋಗುವದಿಲ್ಲ. ॥ ೧೫ ॥ ಅದರ ಸೂಕ್ಷ್ಮತನವನ್ನು ಸಹಜವೇ ನೋಡಲಿಕ್ಕೆ ಹೋದರೆ, ಅದು ಶೂನ್ಯವೇ ಇರುತ್ತದೆಂಬದನ್ನು ಕಾಣಬಹುದು. ಆದರೆ ಹಾಗೆ ಅನ್ನಲಿಕ್ಕೆ ಬರುವದಿಲ್ಲ. ಅದು ಎಷ್ಟು ಸೂಕ್ಷ್ಮವಿರುತ್ತದೆಂದು ವಿಚಾರಮಾಡಿ ನೋಡಿದರೆ, ಆಕಾಶದ ಪದರಿನಲ್ಲಿ ಅದನ್ನು ಸೋಸಿ ತೆಗೆದುಕೊಂಡಿರುತ್ತದೆ. ॥ ೧೬ ॥ ಅದು ಇಷ್ಟು ಸೂಕ್ಷ್ಮವಿದ್ದರೂ ನವಛಿದ್ರವಾಗಿರುವ ಈ ಪ್ರಪಂಚ ರೂಪ ವಸ್ತ್ರದಲ್ಲಿಂದ (ಶರೀರದಲ್ಲಿ) ಅಲ್ಲಾಡಿಸಿದರೂ ಅದು ಸೋರಿಹೋಗುವದಿಲ್ಲ. ಅದಕ್ಕೆ ಪರಬ್ರಹ್ಮ ವೆಂದೆನ್ನುತಾರೆ. ॥ ೧೭ ॥ ಮತ್ತು ಆಕಾರ ಅಂದರೆ ಶರೀರವು ಜನ್ಮಕ್ಕೆ ಬಂದವದರಿಂದ ಅದು ಜನ್ಮರೂಪಿ ವಿಕಾರವನ್ನು ತಿಳಿಯುವದಿಲ್ಲ. ಮತ್ತು ಶರೀರವು ನಾಶಹೊಂದಿದ ಮೇಲೆ ಆದರೂ ಅದು ಯಾವಾಗ್ಯೂ ನಾಶಹೊಂದುವದಿಲ್ಲ. ॥ ೧೮ ॥ ಎಲೋ ಸುಭದ್ರಾಪತೇ ! ಈರೀತಿ ಯಾವ ಬ್ರಹ್ಮಸ್ವರೂಪವು ತಮ್ಮ ಸ್ಥಳದಲ್ಲಿಯೇ ನಿರಂತರ ಸಹಜಸ್ಥಿತಿ ಯಿರುತ್ತದ. ಅದರ ಹೆಸರು " ಅಧ್ಯಾತ್ಮ " ವೆಂದು ಅನ್ನುತ್ತಾರೆ. ॥ ೧೯ ॥ ಆಮೇಲೆ ನಿರ್ಮಲವಾದ ಆಕಾಶದಲ್ಲಿ ಒಂದೇಕಾಲಕ್ಕೆ ಅನೇಕಬಣ್ಣದ ಮೋಡಗಳು ಹೇಗೆ ಬರುತ್ತವೆಂಬದು ತಿಳಿಯುವದಿಲ್ಲ ॥ ೨೦ ॥ ಅದೇಪ್ರಕಾರಾ ನಿರಾಕಾರ ಶುದ್ಧ ಬ್ರಹ್ಮನಲ್ಲಿ ಪ್ರಕೃತಿ ಅಹಂಕಾರ ಮುಂತಾದ ಭೇದದಿಂದ ಬ್ರಹ್ಮಾಂಡದ ಆಕಾರಗಳು ವುದ್ಭವಿಸಲಿಕ್ಕೆ ಹತ್ತುತ್ತವೆ. ॥ ನಿರ್ವಿಕಲ್ಪ ಪರಬ್ರಹ್ಮರೂಪಿ ಬೈಲುಭೂಮಿಯಲ್ಲಿ ಮೂಲಸಂಕಲ್ಪ (ಏಕೋSಹಂಬಹುಶ್ಯಾಮ್) ರೂಪಿ ಅಂಕುರವು ಹುಟ್ಟುತ್ತದೆ. ಮತ್ತು ಅದರ ಸಂಗಡವೇ ಬ್ರಹ್ಮಗೋಲಕದ ಆಕಾರವು ದಟತವಾಗುತ್ತದೆ. ॥ ೨೨ ॥ ಆ ಒಂದೊಂದು ಬ್ರಹ್ಮಾಂಡದಲ್ಲಿ ನೋಡಿದರೆ ಅದು ಬ್ರಹ್ಮಾಂಡದ ಬೀಜದಿಂದಲೇ (ಮೂಲ ಸಂಕಲ್ಪದಿಂದಲೇ) ತುಂಬಿ ಕಾಣುತ್ತದೆ. ಮತ್ತು ಒಂದೊಂದು ಬ್ರಹ್ಮಾಂಡದಲ್ಲಿ ಆಗುವ ಹೋಗುವ ಜೀವರುಗಳಂತೂ ಗಣತಿಯೇ ಇರುವದಿಲ್ಲ. ॥ ೨೩ ॥ ಆಮೇಲೆ ಆ ಬ್ರಹ್ಮಾಂಡಗೋಲದ ಪ್ರತಿ ಒಂದು ಅಂಗದಿಂದ ಅಂಶರೂಪಿ ಜೀವವು ಅಸಂಖ್ಯವಾ

ಗಿರುತ್ತವೆ. ಮತ್ತು ಆದಿಸಂಕಲ್ಪ ಉತ್ಪನ್ನವಾಗುತ್ತದೆ. ಇದಂತೂ ಇರಲಿ, ಈ ರೀತಿಯಿಂದ ಸೃಷ್ಟಿಯು ಬಹಳೇ ವಿಸ್ತಾರವಾಗಿ ಬೆಳೆಯಲಿಕ್ಕೆ ಹತ್ತುತ್ತದೆ. ॥ ೨೪ ॥ ಆದರೆ ಅನ್ಯ ಯಾರದೂ ಸಂಬಂಧವಿಲ್ಲದೇ ಒಂದು ಪರಬ್ರಹ್ಮನೇ ಸರ್ವದರಲ್ಲಿಯು ತುಂಬಿಕೊಂಡಿದ್ದು ಅನೇಕ ರೂಪದಿಂದ ನಟಿಸಿ ಮಹಾಪೂರ ಬಂದಂತೆ ಭಾಸವಾಗುತ್ತದೆ. ॥ ೨೫ ॥ ಅದರಂತೆ ಸ್ಥಾವರ ಜಂಗಮದ ವಿಶ್ವದ ರಚನೆಯು ಕಾರಣವಿಲ್ಲದೇ, ಸಹಜನೇ ಆಗಿ ಅದರಲ್ಲಿ ಸನು ವಿಷಮುತ್ಪತ್ತಿವು ಹೇಗೆ ಆಗಿರುವದೆಂಬದು ಮಾತ್ರ ತಿಳಿಯುವದಿಲ್ಲ. ಆದರೆ ನೋಡುತ್ತಿರಲಿಕ್ಕಾಗಿ ಅನಂತ ಯೋನಿಗಳಿಂದ ಲಕ್ಷಾನವು ಜಾತಿಗಳು ಉತ್ಪನ್ನವಾದದ್ದು ಕಂಡುಬರುತ್ತದೆ. ॥ ೨೬ ॥ ಇದರ ಹೊರ್ತುಪಡಿಸಿ ನಾನಾ ಪ್ರಕಾರದ ಜೀವರುಗಳ ವಿಸ್ತಾರದ ಮರ್ಯಾದೆಯ ಗಣನೆಯನ್ನು ಮಾಡಲಿಕ್ಕೆ ಬರುವದಿಲ್ಲ. ಇವು ಯಾರಿಂದ ಉತ್ಪನ್ನವಾಗುತ್ತವೆಂಬದನ್ನು ನೋಡಿದರೆ, ಅದರ ಮೂಲವು ಅವ್ಯಕ್ತರೂಪ ಪರಬ್ರಹ್ಮನ ಮಾಯಾ ಆಗಿರುವದು. ॥ ೨೭ ॥ ಆದುದರಿಂದ ಮೂಲದಲ್ಲಿ ಕರ್ತುವಿನ ಗೊತ್ತು ಇಲ್ಲದೇ ಕಟ್ಟಕಡೆಗೆ ಏನೂ ಕಾರಣವಿಲ್ಲವೇ, ಮುದ್ದೆದಲ್ಲಿ ತನ್ನಿಂದ ತಾನೇ ಕಾರ್ಯವೃದ್ಧಿ ಹೊಂದುತ್ತದೆ. ॥ ೨೮ ॥ ಈ ಪ್ರಕಾರಾ ಅವ್ಯಕ್ತದ ಸ್ಥಳದಲ್ಲಿ ಕರ್ತುವಿನ ಹೊರ್ತು ಪ್ರತ್ಯಕ್ಷ ಕಾಣಿಸುವಂಥ ಆಕಾರ ಉತ್ಪನ್ನ ಮಾಡುವ ಯಾವ ವ್ಯಾಪಾರವು ಅದೆ. ಅದಕ್ಕೆ "ಕರ್ಮು" ವೆಂದೆನ್ನುತ್ತಾರೆ. ॥ ೨೯ ॥

ಅಧಿಭೂತಂ ಕ್ಷರೋ ಭಾವಃ ಪುರುಷಶ್ಚಾಧಿದೈವತಮ್ ।
ಅಧಿಯಜ್ಞೋಽಹಮೇವಾತ್ರ ದೇಹೇ ದೇಹಭೃತಾಂವರ ॥ ೪ ॥

[ಅಧಿಭೂತಮಿತಿ] ಆತಾ ಅಧಿಭೂತ ಜೇ ಮ್ಹಣಿಪೆ । ತೇಹೀ ಸಾಂಗೋ ಸಂಕ್ಷೇಪೇ ತರೀ ಹೋಯ ಆಣಿ ಹಾರಪೇ । ಅಭ್ರಜೈಸೇ ॥ ೩೦ ॥ ತೈಸೇ ಅಸತೇಪಣ ಆಹಾಚ । ನಾಹೀ ಹೋಇಜೇ ಹೇಸಾಚ । ಜಯಾತೇ ರೂಪಾ ಆಣಿತೀ ಪಾಂಚ ಸಾಂಚ । ವಿಳೋನಿಯಾ ॥ ೩೧ ॥ ಭೂತಾಂತೇ ಅಧಿಕರೂನಿ ಅಸೇ । ಆಣಿ ಭೂತ ಸಂಯೋಗೇ ತರೀ ದಿಸೇ । ಜೇ ವಿಯೋಗ ವೇಳೇ ಭ್ರಂಶೇ । ನಾಮೆ ರೂಪಾದಿಕ ॥ ೩೨ ॥ ತಯಾತೇ ಅಧಿಭೂತ ಮ್ಹಣಿಜೇ । ಮಗ ಅಧಿದೈವತ ಪುರುಷ ಜಾಣಿಜೇ । ಜೇಣೇ ಪ್ರಕೃತೀಜೇ ಭೋಗಿಜೇ । ಉಪಾರ್ಜಿಲೇ ॥ ೩೩ ॥ ಜೋ ಚೇತನೇಚಾ ಚಕ್ಷು । ಜೋ ಇಂದ್ರಿಯ ದೇಶೀಂಚಾ ಅಧ್ಯಕ್ಷು । ಜೋ ದೇಹಾಸ್ತವಾನೀ ವೃಕ್ಷು । ಸಂಕಲ್ಪವಿಹಂಗವಾಚಾ ॥ ೩೪ ॥ ಜೋ ಪರಮಾತ್ಮಾಚಿ ಪರೀ ದುಸರಾ । ಜೇ ಅಹಂಕಾರ ನಿದ್ರಾನಿದಸುರಾ । ಮ್ಹಣೋನಿ ಸ್ವಪ್ನಾಚಿಯಾ ಪೋರಟಾರಾ । ಸಂತೋಸೇ ಶಿಣೇ ॥ ೩೫ ॥ ಜೀವ ಯೆಣೇ ನಾವೇ । ಜಯಾತೇ ಅಳವಿಜೇ ಸ್ವಭಾವೇ । ತೇ ಅಧಿದೈವತ ಜಾಣಾವೇ । ಪಂಚಾಯತನೀಜೇ ॥ ೩೬ ॥ ಆತಾ ಇಯೆಜೆ ಶರೀರ ಗ್ರಾಮೀ । ಜೋ ಶರೀರ ಭಾವಾತೇ ಉಪಶಮೀ । ತೋ ಅಧಿಯಜ್ಞ ಏಥ ಗಾಮೀ । ಪಾಂಡು ಕುಮರಾ ॥ ೩೭ ॥ ಯೇರ ಅಧಿದೈವಾಧಿಭೂತ । ತೇಹೀ ಮೀಚಿ ಕೀರ ಸಮಸ್ತ । ಪರಿ ಪಂಧರೇ ಕಿಡಾಳಾ ಮಿಳತ । ತೇ ಕಾಯ ಸಾಂಕೇ ನೋಹೇ ॥ ೩೮ ॥ ತರೀ ತೇ ಪಂಧರೇ ಪಣ ನ ಪೈಳೇ । ಆಣಿ ಕಿಡಾಳಾಚಿಯಾಹೀ ಅಂಶಾ ನ ಮಿಳೇ । ಪರೀ ಜವ ಅಸೇ ತಯಾಚೇನಿ ಮೇಳೇ । ತವ ಸಾಂಕೇಚಿ ಮ್ಹಣಿಜೇ ॥ ೩೯ ॥ ತೈಸೇ ಅಧಿಭೂತಾದಿ ಆಘವೇ । ಹೇ ಅವಿದ್ಯೇಚೇನಿ ಪಾಲವೇ । ಝಾಂಕಲೇ ತವ ಮಾನಾವೇ । ವೇಗಳೇ ಐಸೇ ॥ ೪೦ ॥ ತೇಚ ಅವಿದ್ದೇಚೀ ಜವನೀಕ ಫಟೇ । ಆಣಿ ಭೇದಭಾವಾಚೀ ಅವಧೀ ತುಟೇ । ಮಗ ಮ್ಹಣೋ ಏಕ ಹೋವ್ಹೂನಿ ಜರೀ ಆಟೇ । ತರೀ ದೋನೀ ಕಾಯ ಹೋತೀ ॥ ೪೧ ॥ ಪೈ ಕೇಶೀಚಾ ಗುಂಡಾಳಾ । ವರೀ ಶೇವಿಲೀ ಸ್ಫಟಿಕ ಶಿಳಾ । ತೇಜವ ಪಾಹಿಜೇ ಡೋಳಾ । ತವ ಭೇದಲೀ ಗಮತೀ ॥ ೪೨ ॥ ಪಾಠೀ ಕೇಶ ಪರೌತೇ ನೇಲೇ । ಆಣಿ ಭೇದಲೇ ಪಣ ಕಾಯ ನೇಣೋ ಝಾಹಾಲೇ । ತರಿ ಡ್ಹಾಂಕ ದೇವ್ಹೂನಿ ಸಾಂದಿಲೇ । ಶಿಳೇ ತೇ ಕಾಈ ॥ ೪೩ ॥ ನಾ ತೇ

ಅಖಂಡಚಿ ಆಯತೀ । ಪರೀ ಸಂಗೇ ಭಿನ್ನ ಗಮಲೀ ಹೋತೀ । ತೇ ಸಾರಿಲಿಯಾ ಮಾಗೌತೀ । ಜೈಸೀ ಕಾ ತೈಸೀ ॥ ೪೪ ॥ ತೇವೀಂಚಿ ಅಹಂಭಾವ ಜಾಯೇ । ತರೀ ಐಕ್ಯ ತೇ ಆಧೀಚಿ ಆಹೇ । ಹೇಚಿ ಸಾಚೇ ಜೇಥ ಹೋಯೇ । ತೋ ಅಧಿಯಜ್ಞಾಮೀ ॥ ೪೫ ॥ ಪೈಗಾ ಆಮ್ಹೀ ತುಜ । ಸಕಳಯಜ್ಞ ಕರ್ಮಜ । ಸಾಂಗಿತಲೇ ಜೇ ಕಾಜ । ಮನೀ ಧರೂನಿ ॥ ೪೬ ॥ ತೋ ಹಾ ಸಕಳ ಜೀವಾಂಚಾ ವಿಸಾವಾ । ನೈಷ್ಕರ್ಮ್ಯ ಸುಖಾಜಾ ಠೇವಾ । ಪರೀ ಉಘಡ ಕರೂನಿ ಪಾಂಡವಾ । ದಾವಿಜತ ಅಸೇ ॥ ೪೭ ॥ ಪಹಿಲೇ ವೈರಾಗ್ಯ ಇಂಧನ ಪರಿಪೂರ್ತೀ । ಇಂದ್ರಿಯಾ ನಳೀ ಪ್ರದೀಪ್ತೀ । ವಿಷಯ ದ್ರವ್ಯಾಂಚಿಯಾ ಆಹುತೀ । ದೇವೂನಿಯಾ ॥ ೪೮ ॥ ಮಗ ವಜ್ರಾಸನ ತೇಚಿ ಉರ್ವೀ । ಶೋಧೂನಿ ಆಧಾರ ಮುದ್ರಾ ಬರವೀ । ವೇದಿಕಾ ರಚೇ ಮಾಂಡವೀ । ಶರೀರಾಚ್ಯಾ ॥ ೪೯ ॥ ತೇಥ ಸಂಯಮಾಗ್ನೀಚೀ ಕುಂಡೇ । ಇಂದ್ರಿಯ ದ್ರವ್ಯಾಚೇನಿ ಪವಾಡೇ । ಪೂಜಿಜತಿ ಉದಂಡೇ । ಯುಕ್ತಿ ಘೋಷೇ ॥ ೫೦ ॥ ಮಗ ಮನ ಪ್ರಾಣ ಸಂಯಮು । ಹಾಚಿ ಹವನ ಸಂಪದೇಚಾ ಸಂಭ್ರಮು । ಯೇಣೇ ಸಂತೋಷ ವಿಜೇ ನಿರ್ಧಾಮ । ಜ್ಞಾನಾನಳ ॥ ೫೧ ॥ ಐಸೇ ನಿಹೇ ಸಕಳ ಜ್ಞಾನೀ ಸಮರ್ಪೀ । ಮಗ ಜ್ಞಾನ ತೇ ಜ್ಞೇಯೀ ಹಾರಪೇ । ಪಾಠೀ ಜ್ಞೇಯಚೀ ಸ್ವರೂಪೇ । ನಿಖಿಲ ಉರೇ ॥ ೫೨ ॥ ತಯಾ ನಾವ ಗಾ ಅಧಿಯಜ್ಞ । ಐಸೇ ಬೋಲಿಲಾ ಜವ ಸರ್ವಜ್ಞ । ತವ ಅರ್ಜುನ ಅತಿ ಪ್ರಾಜ್ಞ । ತಯಾ ಪಾತಲೇ ತೇ ॥ ೫೩ ॥ ಹೇ ಜಾಣೋನಿ ಪ್ಪುಣಿತಲೇ ದೇವೇ । ಪಾರ್ಥಾ ಪರಿಸತ ಆಹಾಸಿ ಬರವೇ । ಯಾ ಕೃಷ್ಣಾಚಿಯಾ ಬೋಲಾಸವೇ । ಯೇರೂ ಸುಖಾಚಾ ಜಾಹಾಲಾ ॥ ೫೪ ॥ ದೇಖಾ ಬಾಳಕಾಚಿಯಾ ಧಣೇ ಧಾವಜೇ । ಕಾತಿಷ್ಯಾ ಚೇನಿ ಜಾಹಾಲೇ ಪಣೇ ಹೋಇಜೇ । ಹೇ ಸದ್ಗುರೂಚಿ ಏಕಲೇನಿ ಜಾಣಿಜೇ । ಕಾ ಪ್ರಸವತಿಯಾ ॥ ೫೫ ॥ ಮ್ಹಣೋನಿ ಸಾತ್ವಿಕ ಭಾವಾಂಚೇ ಮಾಂದೀ । ಕೃಷ್ಣಾ ಆಂಗೀ ಅರ್ಜುನಾ ಆಧೀ । ನ ಸನಾತಸೇ ಪರೀ ಬುದ್ಧೀ । ಸಾವರೂನಿ ದೇವೇ ॥ ೫೬ ॥ ಮಗ ಪಿಕಲಿಯಾ ಸುಖಾಚಾ ಪಡಿಮಳ । ಕೀ ನಿವಾಲಿಯಾ ಅಮೃತಾಚಾ ಕಲ್ಲೋಳ । ತೈಸಾ ಕೋವಳಾ ಆಣಿ ರಸಾಳ । ಬೋಲ ಬೋಲಿಲಾ ॥ ೫೭ ॥ ಮ್ಹಣೇ ಪರಿಸಣೇಯಾಂಚ್ಯಾ ರಾಯಾ । ಆಇಕೇ ಬಾಪಾ ಧನಂಜಯಾ । ಐಸೇ ಜಳೋ ಸರಲಿಯಾ ಮಾಯಾ । ತೇಥ ಜಾಳಿತೇ ತೇಹೀ ಜಳೇ ॥ ೫೮ ॥

ಅರ್ಥ— ಇನ್ನುಮೇಲೆ ಅಧಿಭೂತವೆಂದು ಯಾವದಕ್ಕೆ ಅನ್ನುತ್ತಾರೆ, ಅವನ್ನಾದರೂ ಸ್ವಲ್ಪದರಲ್ಲಿಯೇ ಹೇಳುತ್ತೇನೆ ಕೇಳು. ಆದರೆ ನೋಡಗಳು ಹ್ಯಾಗೆ ಹುಟ್ಟಿ ಲಯ ಹೊಂದುತ್ತವೋ, ॥ ೩೦ ॥ ಅದೇಪ್ರಕಾರಾ ಯಾವದರ ಅಸ್ತಿತ್ವವು ಅಸತ್ಯವಾಗಿರುತ್ತದೆ. ಮತ್ತು ಅದು (ತೋರಿಕೆಗೆ ಮಾತ್ರ ಕಾಣುತ್ತದೆ.) ನಿಜವಾಗಿ ನೋಡಲಿಕ್ಕೆ ಹೋದರೆ ಆಗದೇ ಇರುವದೇ ಯಾವದರ ನಿಜವಾದ ಸ್ವರೂಪವಿರುವದೋ, ಮತ್ತು ಯಾವದಕ್ಕೆ ಪಂಚಮಹಾಭೂತಗಳು ಏಕತ್ರವಾಗಿ ರೂಪಕ್ಕೆ ತರುತ್ತವೆ. ॥ ೩೧ ॥ ಯಾವದು ಪಂಚಮಹಾಭೂತಗಳ ಆಶ್ರಯದಿಂದ ಇರುತ್ತದೋ, ಮತ್ತು ಪಂಚಮಹಾಭೂತದ ಸಂಯೋಗ (ಪಂಚೀಕರಣ) ಆದರೆ ಮಾತ್ರ ಯಾವದು ಕಂಣಿಗೆ ಕಾಣುತ್ತದೋ, ಮತ್ತು ಪಂಚಮಹಾಭೂತಗಳ ವಿಯೋಗವಾಗುತ್ತಿರಲು ನಾಮರೂಪಾತ್ಮಕವಾದ ಶರೀರವು ನಾಶಹೊಂದುತ್ತದೆ.॥೩೨॥ ಆ ಶರೀರಕ್ಕೆ ಅಧಿ ಭೂತವೆಂದು ಹೆಸರು. ಮತ್ತು ಅಧಿ ದೈವತವೆಂದರೆ ಜೀವವೆಂದು ತಿಳಿಯಬೇಕು. ಅದು ಪ್ರಕೃತಿ ಜನ್ಯ ಭೋಗಗಳ ಉಪಭೋಗವನ್ನು ತೆಗಿದುಕೊಳ್ಳುತ್ತದೆ. ॥ ೩೩ ॥ ಯಾವನು ಚೇತನದ ಪ್ರಕಾಶಕವಾಗಿರುವನೋ, ಮತ್ತು ಯಾವನು ಇಂದ್ರಿಯರೂಪ ದೇಶದ ಸ್ವಾಮಿಯಾಗಿರುವನೋ, ಮತ್ತು ಯಾವ ದೇಹವು ಬಿದ್ದು ಹೋಗುವಾಗ್ಗೆ ಸಂಕಲ್ಪರೂಪ ಪಕ್ಷಿಯು ವಾಸಮಾಡಿಕೊಂಡಿರುವ ವೃಕ್ಷವಾಗಿರುವನೋ, ॥ ೩೪ ॥ ಯಾವನು ನಿಜವಾಗಿ ಪರಮಾತ್ಮ ತತ್ವನೇ ಆಗಿರುವನೋ, ಅವನು ಅಹಂಕಾರ ರೂಪ ನಿದ್ದೆಯಲ್ಲಿ ಮುಳಗಿಕೊಂಡದ್ದರಿಂದ ಅವನಿಗೆ ಸ್ವಪ್ನದ ಕಷ್ಟದಿಂದ

ಸಂತೋಷವೂ ಶ್ರಮವು ಆಗುತ್ತದೆ. ॥ ೩೫ ॥ ಯಾವನಿಗೆ ಸ್ವಭಾವಿಕವಾಗಿ ಜೀವ ಈ ಹೆಸರಿನಿಂದ ಕರೆಯುವರೋ, ಅವನು ಪಂಚಮಹಾಭೂತಾತ್ಮಕರೂಪಿ ಮನೆಯೊಳಗಿನ "ಅಧಿದೈವತ"ವೆಂದು ತಿಳಿಯಬೇಕು. ॥ ೩೬ ॥ ಇನ್ನು ಮೇಲೆ ಪಂಡುನಂದನನೇ ! ಇದೇ ಶರೀರರೂಪಿ ಗ್ರಾಮದಲ್ಲಿ ಯಾವನು ಶಾರೀರಿಕ ಉಪಾಧಿ "ದೇಹ ಅಹಂಕಾರಾದಿ" ಗಳಿಗೆ ಇಲ್ಲದಂತೆ ಮಾಡುತ್ತಾನೋ ! ಅವನ ದೇಹದಲ್ಲಿಯ ಅಧಿಯಜ್ಞವು ನಾನೇ ಇರುವೆನು. ॥ ೩೭ ॥ ಇನ್ನುಳಿದ ಅಧಿದೈವ, ಅಧಿಭೂತ, ಇವುಗಳಾದರೂ ನಿಜವಾಗಿ ನಾನೇ ಇರುತ್ತೇನೆ. ಆದರೆ ಚೀಪಗಟ್ಟ ಶುದ್ಧ ನಂಬರಿನ ಬಂಗಾರದಲ್ಲಿ ಹೀನ ಬಂಗಾರವು ವಿಶ್ರವಾಗುವದರಿಂದ ಅದು ಹೀನತ್ವವನ್ನು ಹೊಂದುವದಿಲ್ಲೇ ಹ್ಯಾಗೆ ? ॥ ೩೮ ॥ ಆದರೆ ನಿಜವಾಗಿ ಆ ಬಂಗಾರದ ಶುದ್ಧತ್ವವು ಮಲಿನ ಹೊಂದುವದಿಲ್ಲ. ಮತ್ತು ಆ ಬಂಗಾರವು ಹೀನ ಬಂಗಾರದ ಭಾಗದಲ್ಲಿ ತದ್ರೂಪವಾಗುವದಿಲ್ಲ ಆದರೂ ಎಲ್ಲಿಯವರೆಗೆ ಆ ಉತ್ತನು ಬಂಗಾರವು ಹೀನ ಧಾತುವಿನ ಸಂಗಡ ಕೂಡಿ ಹೋಗಿರುತ್ತದೆ, ಅಲ್ಲಿಯವರೆಗೆ ಅದಕ್ಕೆ ಹೀನ ಬಂಗಾರವೇ ಎಂದು ಅನ್ನಬೇಕಾಗಿರುವದು. ॥ ೩೯ ॥ ಅದೇ ಪ್ರಕಾರಾ ಅಧಿಭೂತ ಮುಂತಾದವು ಮತ್ತು ಈ ಸರ್ವವೂ ಎಲ್ಲಿಯವರೆಗೆ ಅಜ್ಞಾನದ ಪದವಿನಲ್ಲಿ ಮುಚ್ಚಿ ಹೋಗಿರುತ್ತವೆ, ಅಲ್ಲಿಯವರೆಗೆ ಅವು ಬೇರೆ ಬೇರೆ ಎಂದು ತಿಳಿಯಬೇಕು. ॥ ೪೦ ॥ ಅವೇ ಅಜ್ಞಾನದ ಪಡದೆಯನ್ನು ತೆಗೆದಕೊಡಲೆ ಭೇದ ಭಾವನೆಯ ಸೀಮೆಯು ಮುಗಿಯುತ್ತದೆ. ಆ ಮೇಲೆ ಒಂದರಲ್ಲೊಂದು ಕೂಡಿ ತದ್ರೂಪವಾಯಿತೆಂದು ಹೀಗೆ ಒಂದು ವೇಳೆ ಅನಬೇಕೆಂದರೆ ಮೊದಲಿಗೆ ಅವು ಎರಡು ಇದ್ದವೋ ! (ಇಲ್ಲೇ ಇಲ್ಲ.) ॥ ೪೧ ॥ ಕೂದಲದ ಸುರಳಿಯ ಮೇಲೆ ಸ್ಫಟಿಕ ಶಿಲೆಯನ್ನಿಟ್ಟರೆ ಅದು ಮೇಲಿಂದಮೇಲೆ ನೋಡಿದರೆ ಕಂಣಿಗೆ ಒಡೆದಂತೆ ಕಾಣುತ್ತದೆ. ॥ ೪೨ ॥ ಆ ಮೇಲೆ ಕೂದಲನನ್ನು ಆ ಸ್ಫಟಿಕ ಶಿಲೆಯಿಂದ ಬೇರೆ ತೆಗೆದು ನೋಡಿದರೆ ಆ ಅದರ ಒಡಕು. (ಗೆರಿಯು) ಯಾವ ಕಡೆಗೆ ಹೋಗಿರುವದೆಂಬದು ತಿಳಿಯುವದಿಲ್ಲ. ಆದರೆ ಸ್ಪಟಿಕ ಶಿಲೆಯ ಒಡಕು ಚೂರಗಳನ್ನು ಬೆಸೆದು ಒಂದಕ್ಕೊಂದು ಜೋಡಿಸಿದ್ದರೇನು ? ॥ ೪೩ ॥ ಆದರೆ ಅದು ಹಾಗೆ ಇದ್ದೇ ಇಲ್ಲ. ಅದು ಮೂಲತಃ ಅಖಂಡನೇ ಇತ್ತು. ಈಗಾದರೂ ಹಾಗೇ ಅದೆ. ಆದರೆ ಅದು ಕೂದಲದ ಸಂಗತಿಯಿಂದ ಮಾತ್ರ ಒಡೆದಂತೆ ಕಾಣುತ್ತಿತ್ತು. ಆ ಕೂದಲವನ್ನು ಬೇರೆ ಮಾಡಿದನೇಲೆ, ಪುನ್ಹಾ ಮೂಲತಃ ಮೊದಲಿಗೆ ಹ್ಯಾಗೆ ಅಖಂಡವಾಗಿತ್ತೋ ಅದರಂತೆ ಇರುವದು. ॥೪೪॥ ಅದೇ ಪ್ರಕಾರಾ ಅಹಂಕಾರವು ಹೋದಕೂಡಲೇ ಐಕ್ಯವು ಮೊದಲಿನಿಂದೇ ಅದೆ. ಈ ಪ್ರಕಾರವು ಎಲ್ಲಿ ನಿಜವಾಗಿ ಉಂಟಾಗುತ್ತದೋ ಆ ಅಧಿಯಜ್ಞವು ನಾನೇ ಇದ್ದೇನೆ. ಎಲೋ ಅರ್ಜುನನೇ ! ಯಾವ ಹೇತು ಮನಸಿನಲ್ಲಿ ಹಿಡಿದು ಸರ್ವ ಯಜ್ಞಗಳು ಕರ್ಮದಿಂದ ಆಗಿರುವವೆಂದು ಹೀಗೆ (ಳನೇ ಅಧ್ಯಾಯದಲ್ಲಿ) ನಿನಗೆ ಹಿಂದೆ ಹೇಳಿದ್ದೇನೆ. ॥೪೬॥ ಅದು ಇದೇ ಅಧಿಯಜ್ಞವು. ಅದು ಸರ್ವ ಜೀವರುಗಳಿಗೆ ವಿಶ್ರಾಮವಾಗಿರುವದು. ಮತ್ತು ನೈಷ್ಕರ್ಮ್ಯ ಸುಖದ (ನಿಧಿ) ಮೂಲ ಧನವೇ ಆಗಿರುವದು. ಆದರೆ ಅರ್ಜುನನೇ ! ನಿನಗೆ ನಾನು ಸ್ಪಷ್ಟವಾಡಿ ತೋರಿಸುತ್ತಿರುವೆನು. ॥೪೭॥ ಪ್ರಥಮದಲ್ಲಿ ವೈರಾಗ್ಯರೂಪಿ ಕಟ್ಟಗೆಗಳನ್ನು ಪೂರ್ಣವಾಗಿ ಕೂಡಹಾಕಿಟ್ಟು ಚನ್ನಾಗಿ ಉರಿಯುವಂಥ ಇಂದ್ರಿಯರೂಪಿ ಅಗ್ನಿಯಲ್ಲಿ ಶಬ್ದಾದಿ ವಿಷಯರೂಪ ಆಹುತಿಯನ್ನು ಕೊಟ್ಟು, ॥ ೪೮ ॥ ಆ ಮೇಲೆ ವಜ್ರಾಸನವೆಂಬ ಭೂಮಿಕೆಯನ್ನು ಶುದ್ಧಮಾಡಿ, ಶಾರೀರ ರೂಪಿ ಮಂಟಪದಲ್ಲಿ ಆಧಾರ ಮುದ್ರಾರೂಪಿ ಉತ್ತನುವಾದ ಆಸನವನ್ನು (ವೇದಿಕಾ ರಚನೆಯನ್ನು) ಹಾಕಿರುತ್ತಾರೆ. ಅದರಮೇಲೆ ಶರೀರದ ಮಂಟಪವನ್ನು ನಿಲ್ಲಿಸುತ್ತಾರೆ. ॥ ೪೯ ॥ ಅಲ್ಲಿ ಜ್ಞಾನ, ಧಾರಣ, ಸಮಾಧಿ, ರೂಪಿ ಅಗ್ನಿಕುಂಡದಲ್ಲಿ ಬಂಧತ್ರಯದ ಮಂತ್ರಘೋಷದಿಂದ ಇಂದ್ರಿಯ ರೂಪಿ ವಿಪುಲವಾದ ದ್ರವ್ಯದ ಸಹಾಯದಿಂದ ಯಜನ ಮಾಡುತ್ತಾರೆ. ॥ ೫೦ ॥ ಆ ಮೇಲೆ ಮನ, ಪ್ರಾಣ, ಮತ್ತು ಸಂಯಮ, ಮುಂತಾದ ಯಜ್ಞ ಸಂಪತ್ತಿಯ ಸಮಾರಂಭದಿಂದ ನಿರ್ಧೂಮ (ಹೊಗೆಯಿಲ್ಲದ) ನಿರ್ದೋಷವಾದ ಜ್ಞಾನರೂಪ ಅಗ್ನಿಗೆ ಸಂತ್ರಪ್ತ ಮಾಡುತ್ತಾರೆ. ॥ ೫೧ ॥ ಈ ರೀತಿಯಿಂದ ಈ ಮೇಲೆ ಹೇಳಿದ ಸಾಹಿತ್ಯವನ್ನು ಜ್ಞಾನರೂಪ ಅಗ್ನಿಯಲ್ಲಿ ಸಮರ್ಪಣ ಮಾಡಿದಮೇಲೆ ಆ, ಜ್ಞಾನವಾದರೂ ಜ್ಞೇಯದಲ್ಲಿ ಲಯ ಹೊಂದುತ್ತದೆ, ಆ ಮೇಲೆ ಜ್ಞೇಯವೇ ಸ್ವರೂಪದಿಂದ ನಿಲ್ಲುತ್ತದೆ. ॥ ೫೨ ॥ ಅದಕ್ಕೆ 'ಅಧಿಯಜ್ಞ',ಎಂದು ಹೆಸರು ಆದೆ. ಹೀಗೆ ಸರ್ವಜ್ಞನಾದಂಥ ಶ್ರೀ ಕೃಷ್ಣನು ಯಾವ ವೇಳೆಯಲ್ಲಿ ಈ ವಿಷಯವನ್ನು ಹೇಳಿದನೋ, ಆಗ್ಗೆ ಅರ್ಜುನನು ತೀಕ್ಷ್ಣ ಬುದ್ಧಿಯವನಾದುದರಿಂದ ಆ ವಿಷಯವು

ಅವನ ಲಕ್ಷದಲ್ಲಿ ಬಂದಿತು. ॥ ೫೩ ॥ ಇದನ್ನು ತಿಳಿದು ಭಗವಾನನು ಅನ್ನುತ್ತಾನೆ. ಅರ್ಜುನನೇ ! ನಾನು ಹೇಳಿದ್ದನ್ನು ನೀನು ಉತ್ತಮ ರೀತಿಯಿಂದ ಶ್ರದ್ಧಾಪೂರ್ವಕವಾಗಿ ಕೇಳುತ್ತಿರುವಿ- ಎಂಬ ಈ ಶ್ರೀಕೃಷ್ಣನ ವಾಕ್ಯವನ್ನು ಕೇಳಿ ಅರ್ಜುನನು ಅನಂದಭರಿತನಾದನು. ॥ ೫೪ ॥ ನೋಡು, ಸಂಣ ಮಗುವಿನ ತ್ರಪ್ತಿಯಿಂದ ನಾವು ತೃಪ್ತರಾಗುವದಿಲ್ಲೇ ಹ್ಯಾಗೆ ? ಶಿಷ್ಯನು ಪೂರ್ಣಜ್ಞಾನಿಯಾಗುವದರಿಂದ ತಾವು ಕೃತಾರ್ಥರಾಗಬೇಕೆಂಬುದೊಂದು ಜನ್ಮಕೊಟ್ಟಂಥ ತಾಯಿಯೂ ಇಲ್ಲವೇ ಸದ್ಗುರುಗಳು ಮಾತ್ರ ತಿಳಿಯುತ್ತಾರೆ. ॥ ೫೫ ॥ ಆದುದರಿಂದ ಅಷ್ಟಸಾತ್ವಿಕ ಭಾವದ ಸಮುದಾಯವು ಅರ್ಜುನನಕಿಂತಲೂ ಮೊದಲು ಶ್ರೀಕೃಷ್ಣನ ನ್ಯೆಯಲ್ಲಿ ತುಂಬಿ ತುಳುಕಿತು. (ಆದರಿಂದ ಅನಂದ ಭಾಷ್ಪಗಳು ಸುರಿದವು) ಆದರೆ ಭಗವಂತನು ಅದನ್ನು ತನ್ನ ಬುದ್ಧಿಯಿಂದ ಆನುಸಿದನು. ॥ ೫೬ ॥ ಮತ್ತು ಪೂರ್ಣತೆಗೆ, ಮುಟ್ಟಿದ ಸುಖದ ಸುಗಂಧದಂತೆ ಇಲ್ಲವೇ ತಂಣಗೆ ಮಾಡಿದಂಥ ಅನ್ಯುತದ ಥೆರೆಗಳಂತೆ ಕೋಮಲ ಮತ್ತು ಸರಳ ಸುಂದರವಾದ ಸಂಭಾಷಣವನ್ನು ವಾಡಲಿಕ್ಕೆ ಪ್ರಾರಂಭಮಾಡಿದನು. ॥ ೫೭ ॥ ಆ ಮೇಲೆ ಶ್ರೀಕೃಷ್ಣ ಪರಮಾತ್ಮನು ಅನ್ನುತ್ತಾನೆ. ಶ್ರವಣವಾಡುವವರಲ್ಲಿ ಶ್ರೇಷ್ಠನಾದ ಅರ್ಜುನನೇ ! ಅಪ್ಪಾ, ಕೇಳು ಈ ಪ್ರಕಾರಾ ಮಾಯೆಯನ್ನು ಸುಡುವದು ಸಾಧ್ಯವಾದಮೇಲೆ ಅದನ್ನು ಸುಟ್ಟು ಬಿಡುವಂಥ ಯಾವ ಜ್ಞಾನವು ಅದು ಸಹಾ ಆ ಪ್ರಸಂಗದಲ್ಲಿ ನಾಶವಾಗುತ್ತದೆ. ॥ ೫೮ ॥

ಅಂತ ಕಾಲೇ ಚ ಮಾಮೇವ ಸ್ಮರನ್ಮುಕ್ತ್ವಾ ಕಲೇವರಂ ।
ಯಃ ಪ್ರಯಾತಿ ಸ ಮದ್ಭಾವಂ ಯಾತಿ ನಾಸ್ತ್ಯತ್ರ ಸಂಶಯಃ ॥ ೫ ॥

[ಅಂತಕಾಲೇಚೇತಿ] ಜೇ ಆತಾಂಚಿ ಸಾಗಿತಲೇ ಹೋತೇ । ಅಗಾ ಅಧಿಯಜ್ಞ ಮ್ಹಣಿತಲಾ ಜಯಾತೇ । ಜೇ ಆದೀಂಚಿ ತಯಾ ಮಾತೇ । ಜಾಣೋನಿ ಅಂತಿ ॥ ೫೯ ॥ ತೇ ದೇಹ ಝೊಳ ಐಸೇ ಮಾನುನೀ । ಠೇಲೇ ಆಪಣಪೇ ಆಪಣ ಹೋವುನೀ । ಜೈಸಾ ಮಠ ಗಗನಾ ಭರೂನೀ । ಗಗನೀಂತಿ ಅಸೇ ॥ ೬೦ ॥ ಯೇ ಪ್ರತೀತೀಚಿಯಾ ಮಾಜಘರೀ । ತಯಾ ನಿಶ್ಚಯಾಚೇ ಪೋವರೀ । ಆಲೀ ಮ್ಹಣೋನಿ ಬಾಹೇರೀ ' ನನ್ಹೇಚಿಸೇ ॥ ೬೧ ॥ ಐಸೇ ಸಬಾಹ್ಯ ಐಕ್ಯ ಸಂಚಲೇ । ಮೀಚಿ ಹೋವೂನಿ ಅಸತಾ ರಚಿಲೇ । ಬಾಹೇರೀ ಭೂತಾಂಚೀ ಪಾಂಚಹೀ ಖವಳೇ । ನೇಣತಾಂಚೆ ಪಡಲೇ ॥ ೬೨ ॥ ಆತಾ ಉಭೇಯಾ ಉಭೇಪಣ ನಾಹೀ ಜಯಾಚೇ । ಮಾ ಪಡಲಿ ಯಾ ಗಹನ ಕವಣ ತಯಾಚೇ । ಮ್ಹಣೋನಿ ಪ್ರತೀತಿಚಿಯೇ ಪೋಟೀಂಚೇ । ಪಾಣೇ ನ ಹಾಲೇ ॥ ೬೩ ॥ ತೇ ಐಕ್ಯಾಚೀ ಆಹೇ ಓತಿಲೇ । ಕೀ ನಿತ್ಯತೇಚಿಯಾ ಹೃದಯೀ ಘಾತಲೇ । ಜೈಸೀ ಸಮರಸ ಸಮುದ್ರೀ ಧುತಲೀ । ರುಳೇ ಚಿನಾ ॥ ೬೪ ॥ ಪೈ ಅಥಾವೀ ಘಟ ಬುಡಾಲಾ । ತೋ ಆಂತ ಬಾಹೇರಿ ಉದಕೇ ಭರಲಾ । ಪಾಠೀ ದೈವಗತ್ಯಾ ಜರೀ ಫುಟಲಾ । ತರೀ ಉದಕ ಕಾಯ ಫುಟೇ ॥ ೬೫ ॥ ನಾತರೀ ಸರ್ವೇ ಕವಚ ಸಾಂಡಿಲೇ । ಕಾ ಉಬಾರೇನೇ ವಸ್ತು ಫೇಡಿಲೇ । ತರೀ ಸಾಂಗ ಪಾ ಕಾಯ ವೋಡಲೇ । ಅವೇವಾಮಾಜೀ ॥ ೬೬ ॥ ತೈಸಾ ಆಕಾರ ಹಾ ಆಹಾಚ ಭ್ರಂಶೇ । ವಾಂಚೂನಿ ವಸ್ತು ತೇ ಸಾಂಜಲೀಚಿ ಅಸೇ । ತೇಚಿ ಬುದ್ಧಿ ಜಾಲಿಯಾ ವಿಸುಕುಸೇ । ಕೈಸೇನಿ ಆತಾ ॥ ೬೭ ॥ ಮ್ಹಣೋನಿ ಯಾಪರೀ ಮಾತೇ । ಅಂತಕಾಳೀ ಜಾಣತಸಾತೇ । ಜೇ ಮೋಕಲಿತೀ ದೇಹಾತೇ । ತೇ ಮೀಚಿ ಹೋತೀ ॥ ೬೮ ॥ ಯೇರ್ಹವೀ ತರೀ ಸಾಧಾರಣ । ಉದೀ ಆದಳಲಿಯಾ ಮರಣ । ಜೋ ಆಠವ ಧರೀ ಅಂತಃಕರಣ । ತೇಚಿ ಹೋಇಜೇ ॥ ೬೯ ॥ ಜೈಸಾ ಕವಣ ಏಕ ಕಾಕುಳತೀ । ಪಳತಾ ಪವನ ಗತೀ । ದುಪಾವಲೀ ಅವಿಚಿತೀ । ಕುಹಾನಾಮಾಜೀ ಪಡಿಯೇಲಾ ॥ ೭೦ ॥ ಆತಾ ತಯಾ ಪಡಣಯಾ ಆರೌತೇ । ಪಡಣ ಹುಕವಾವಯಾ ಪರೌತೇ । ನಾಹೀ ಮ್ಹಣೋನಿ ತೇಥೇ । ಪಡಾವೇಚಿ

ಪಡೇ ॥ ೭೧ ॥ ತೇವೀ ಮೃತ್ಯೂಚೇನಿ ಅವಸರೇ ಏಕೇ । ಜೇ ಯೇವೂನಿ ಜೀವಾಸಮೋರ
ತಾಕೇ । ತೇ ಹೋಣೇ ಮಗ ನ ಜುಕೇ । ಭಲತಯಾಪರೇ ॥ ೭೨ ॥ ಆಣಿ ಜಾಗತಾ ಜವ ಅಸಿಜೇ ।
ತವ ಜೇಣೇ ಧ್ಯಾನೇ ಭಾವನಾ ಭಾವಿಜೇ। ಡೋಳಾ ಲಾಗತ ಜೀವೋ ದೇ ಖಿಜೇ। ತೋಚಿ ಸ್ವಪ್ನೀ ।೭೩॥

ಅರ್ಥ— ಅರ್ಜುನನೇ ! ಯಾವದಕ್ಕೆ ಅಧಿಯಜ್ಞವೆಂದೆನ್ನುತ್ತಾರೆಂಬದನ್ನು ಇದೀಗ ನಾನು ನಿನಗೆ ಹೇಳಿದೆನು, ಆ ಅಧಿಯಜ್ಞವೇ ನಾನು. ಆ ಪರಮಾತ್ಮನಾವ ನಂಸನ್ನು ಯಾವ ಪುರುಷರು ಜೀವದಿಂದ ತಾವು ಇರುವಾಗ್ಗೆಯೇ ಅರಿತು ಮರಣಕಾಲದಲ್ಲಿಯೂ ಅರಿತಿರುತ್ತಾರೆ, ॥ ೫೯ ॥ ಯಾವ ಪ್ರಕಾರಾ ಮನಿಯು (ಬೈಲಿನಿಂದ) ತುಂಬಿ ಬೈಲಿನಲ್ಲಿಯೇ ಇರುವಂತೆ ಆ ಪುರುಷನ ದೇಹವು ಅನಿತ್ಯವಾದದ್ದಿರುತ್ತದೆ. ಇಂಥ ವಿಚಾರದಿಂದ ತಿಳಿದು ತಾನೇ (ಆತ್ಮ ರೂಪವಾಗಿ) ತಂನ ಸ್ಥಳದಲ್ಲಿಯೇ ಇರುತ್ತಾನೆ. ॥ ೬೦ ॥ ಹೀಗೆ ಈ ಮೇಲಿನ ಅನುಭವದ ನಡುಮನೆಯಲ್ಲಿ ನಿಶ್ಚಯ ರೂಪಿ ಕೋಣೆಯಲ್ಲಿ ಅವನಿಗೆ ನಿದ್ದೆಯು (ಸ್ಥಿರತೆಯು) ಉಂಟಾಗಿರುವದು ಆದುದರಿಂದ ಅವನಿಗೆ ಹೊರಗಿನ ವಿಷಯ ಗಳ ಸ್ಮರಣವೇ ಆಗುವದಿಲ್ಲ. ॥ ೬೧ ॥ ಈ ಪ್ರಕಾರಾ ಆಂತರ್ಬಾಹ್ಯ ಐಕ್ಯವು ತುಂಬಿಕೊಂಡಿದ್ದು ಆ ಪುರುಷನು ಮದ್ರೂಪ ಉಳ್ಳವನಾಗಿರುವದರಿಂದ, ಅವನು ಹೊರಗಿನ ಪಂಚಮಹಾಭೂತದ ಐದು ಕವಚಗಳಿಂದಾದ ಈ ಶರೀರವು ಅವನಿಗೆ ತಿಳಿಯದೇ ಬಿದ್ದು ಹೋಗುತ್ತದೆ. ॥ ೬೨ ॥ ಯಾವ ಶರೀರವು ಜೀವಂತ ಇದ್ದು (ಸರ್ವವ್ಯವಹಾರ ಮಾಡು ತ್ತಿರುವಾಗ್ಗೆ) ಸಹಾ ಆ ಶರೀರದ ಸ್ಮರಣವು ಅವನಿಗೆ ಇರುವದಿಲ್ಲ, ಅಂದ ಬಳಿಕ ಶರೀರವು ಪತನವಾಗುವಕಾಲಕ್ಕೆ ಆದ ಸಂಕಟವು ಅವನಿಗೆ ಏನು ಮಾಡೀತು ? ಆದುದರಿಂದ ಇಂಥ (ಕಠಿಣ) ಪ್ರಸಂಗದಲ್ಲಿ ಅವನ ಸ್ವರೂಪಾನುಭವದ ಹೊಟ್ಟೆಯೊಳಗಿನ (ನಿಶ್ಚಯರೂಪಿನೀರು) ಅಲ್ಲಾಡುವದಿಲ್ಲ. ॥ ೬೩ ॥ ಆ ಅನುಭವವು, ಕೇವಲ ಐಕ್ಯಭಾವನೆಯಂಬ ರಸವನ್ನು ಸುರಿವಿ ಅವಿನಾಶದಿಂದ ಯುಕ್ತವಾದ ಹೃದಯದಲ್ಲಿ ಹಾಕಿರುತ್ತದೆ, ಮತ್ತು ಪೂರ್ಣಾನಂದ ಸಮುದ್ರದಲ್ಲಿ ತೊಳೆದು (ಸ್ವಚ್ಛ) ಮಾಡಿರುತ್ತದೆ. ಆದುದರಿಂದ ಕಾಮ–ಕ್ರೋಧ ಮುಂತಾದ ಮಲಿನತ್ವದಿಂದ ಅದು ಮಲಿನ ವಾಗುವದಿಲ್ಲ. ॥ ೬೪ ॥ ಹೀಗೆ ನೋಡು, ಅಳವಾದ ನೀರಿನಲ್ಲಿ ಕೊಡವು ಮುಳುಗಿದರೆ ಅದರವಳಗೆ ಮತ್ತು ಹೊರಗೆ ಕೂಡೇ ನೀರೇ ಇರುತ್ತದೆ. ಮತ್ತು ದೈವಗತ್ಯವಾಗಿ ಅದು ಅಕಸ್ಮಾತ ಹಿಂದಿನಿಂದ ಒಡೆದರೆ ನೀರು ನಾಶವಾಗಿ ಹೋಗು ವದೇನು ? ॥ ೬೫ ॥ ಇಲ್ಲವೇ ಹಾವಿನ ಪರೆಯು ಉಚ್ಚಿಬೀಳಲು, ಅಥವಾ ಬಸಲಿನ ತಾಪದಿಂದ ಮೈಮೇಲಿನ ವಸ್ತ್ರಗಳ ನೆಲ್ಲ ಕಳೆದೂಗೆದರೆ, ಅವಯವಗಳಲ್ಲಿ ಏನಾದರೂ ಹೆಚ್ಚು ಕಡಮೆ ಆಗಿರುವದೇನು ? ॥ ೬೬ ॥ ಅದೇ ಪ್ರಕಾರಾ ಮೇಲಿಂದ ಮೇಲೆ ಕಾಣುವ ಮಿಥ್ಯವಾದ ಶರೀರವು ನಾಶ ಹೊಂದಿದರೆ ಸಹಾ ಬ್ರಹ್ಮವು ಸರ್ವತ್ರದಲ್ಲಿಯೂ ತುಂಬಿಕೊಂಡೆ ಇರುತ್ತದೆ. ಆ ಸ್ಥಳದಲ್ಲಿ ಬುದ್ಧಿಯು ನಿಪುಣತ್ವವನ್ನು ಹೊಂದಿದರೆ ಮಾತ್ರ ಯಾವನಾತಿನ ಭಯವೂ ಇರುವದಿಲ್ಲ. ॥೬೭॥ ಆದುದರಿಂದ ಈ ರೀತಿಯಿಂದ ಅಂತ್ಯಕಾಲದಲ್ಲಿ ನನ್ನ ಸ್ಮರಣವನ್ನು ಧೃಡಪಡಿಸಿ ಯಾರು ದೇಹವನ್ನು ಬಿಡುತ್ತಾರೆ. ಅವರು ನನ್ನ ಸ್ವರೂಪವನ್ನು ಪಡೆಯುತ್ತಾರೆ. ॥ ೬೮ ॥ ವಿಚಾರಮಾಡಿ ನೋಡಿದರೆ ಸಾಧಾರಣ ನಿಯಮವು ಹೇಗಿ ರುವದೆಂದರೆ ಮರಣ ಸಮಯವು ಬಂದೊದಗಿದರಲು ಮನುಷ್ಯನ ಅಂತಃಕರಣದಲ್ಲಿ ಯಾವದರ ಸ್ಮರಣ ಉಂಟಾಗುತ್ತದೆ. ಅದೇ ವಸ್ತುವಿನ ಸ್ವರೂಪವು ಆ ಪ್ರಾಣಿಗೆ ಪ್ರಾಪ್ತವಾಗುತ್ತದೆ. ॥ ೬೯ ॥ ಯಾವ ಪ್ರಕಾರಾ ಒಬ್ಬಾನೊಬ್ಬ ಮನು ಷ್ಯನು ಭಯದಿಂದ ದೀನನಾಗಿ ವಾಯುವೇಗದಿಂದೋಡುತ್ತಿರಲು, ಮಾರ್ಗದಲ್ಲಿ ಅಕಸ್ಮಾತ್ ಎರಡೂ ಕಾಲುಗಳು ಜಾರಿ ಬಾವಿಯಲ್ಲಿ ಬೀಳುತ್ತಾನೆ. ॥ ೭೦ ॥ ಆ ಸ್ಥಿತಿಯಲ್ಲಿ ಅವನಿಗೆ ಬೀಳುವದರ ಪೂರ್ವದಲ್ಲಿ ಓಡುವ ವೇಗವನ್ನು ಆವರಿಸಿ ಹಿಡಿಯುವದು. ಮತ್ತು ಬೀಳುವದನ್ನು ತಪ್ಪಿಸಲು ಸಾಧ್ಯವಿರುವದಿಲ್ಲ. ಆದುದರಿಂದ ಅವನು ಬಾವಿಯಲ್ಲಿಯೇ ಬೀಳ ಬೇಕಾಗುತ್ತದೆ. ॥ ೭೧ ॥ ಅದರಂತೆ ಮೃತ್ಯು ಸಮಯದಲ್ಲಿ ಜೀವದ ಎದುರಿಗೆ ಯಾವ ವಸ್ತು ಬಂದು ನಿಲ್ಲುತ್ತದೆ. ಅದರಂತೆ ತದ್ರೂಪವೇ (ಮರಣದನಂತರ) ಅವನಿಗೆ ಆಗಬೇಕಾಗುತ್ತದೆ. ಆದು ಯಾವ ಉಪಾಯದಿಂದಲೂ ತಪ್ಪಿ ಸುವದಾಗುವದಿಲ್ಲ. ॥ ೭೨ ॥ ಮನುಷ್ಯನು ಜಾಗ್ರತನಾಗಿರಲು ಅವನ ಮನಸಿನಲ್ಲಿ ಯಾವ ಕಲ್ಪನೆಯು ಬರುತ್ತದೆ. ಅದೇ ಕಲ್ಪನೆಯು ನಿದ್ದೆಹತ್ತಿದಮೇಲೆ ಸ್ವಪ್ನದಲ್ಲಿ ಕಾಣಲಿಕ್ಕೆ ಹತ್ತುತ್ತದೆ. ॥ ೭೩ ॥

ಯಂ ಯಂ ವಾಽಪಿ ಸ್ಮರನ್ ಭಾವಂ ತ್ಯಜತ್ಯಂತೇ ಕಲೇವರಮ್ ।
ತಂ ತಮೇವೈತಿ ಕೌಂತೇಯ ಸದಾ ತದ್ಭಾವ ಭಾವಿತಃ ॥ ೬ ॥

ತೇವಿಜಿತೇನಿ ಅವಸರೇ । ಜೆ ಅವಡೋನಿ ಜೀವಿಉರೇ । ತೇಚಿ ಮರಣಾಚೆಯೇ ಮೇರೇ ।
ಘಾರ ಹೋಲಾಗೇ ॥ ೭೪ ॥ ಆಣಿ ಮರಣೇ ಜಯಾಜೇ ಆಠವೇ । ತೋ ತೇಚಿಗತಿತೇ ಪಾವೆ ।

ಅರ್ಥ— ಅದೇ ಪ್ರಕಾರಾ ಜೀವಂತ ಇರುವಾಗ್ಗೆ ಅಂತಃಕರಣದಲ್ಲಿ ಯಾವದರ ವಿಷಯವಾಗಿ ಪ್ರೇಮವಿ ವದೋ, ಅದೇ ವಿಷಯದಲ್ಲಿ ಪ್ರೇಮವು ಅಂತ್ಯಕಾಲ ಸಮಯದಲ್ಲಿ ವೃದ್ಧಿಂಗತವಾಗುತ್ತದೆ. ॥ ೭೪ ॥ ಮ* ಮರಣಸಮಯದಲ್ಲಿ ಯಾವ ಮಾತಿನ ಸ್ಮರಣ ಉಂಟಾಗುತ್ತದೆ ಅದೇಗತಿಗೆ ಅವನು (ಮರಣದ ನಂತರಾ) ತಪ್ಪ ಮುಟ್ಟುತ್ತಾನೆ ॥

ತಸ್ಮಾತ್ಸರ್ವೇಷು ಕಾಲೇಷು ಮಾಮನುಸ್ಮರ ಯುಧ್ಯ ಚ ।
ಮಯ್ಯರ್ಪಿತಮನೋಬುದ್ಧಿರ್ಮಾಮೇವೈಷ್ಯಸ್ಯಸಂಶಯಂ ॥ ೭ ॥

[**ತಸ್ಮಾದಿತಿ**] ವ್ಯಾಪೋನಿ ಸದಾ ಸ್ಮರಾವೇ । ಮಾತೇಚಿ ತುವಾ ॥ ೭೫ ॥
ಡೋಳಾ ಜೇ ದೇಖಾವೇ । ಕಾ ಕಾಸೀ ಹನ ಐಕಾವೇ । ಮನೀ ಜೇ ಭಾವಾವೇ । ಬೋಲಾವೇ
ವಾಚೇ ॥ ೭೬ ॥ ತೇ ಆಂತ ಬಾಹೇರೀ ಆಘವೇ । ಮೀಚಿ ಕರೂನಿ ಘಾಲಾವೇ । ಮಗ ಸರ್ವೀ
ಕಾಳೀ ಸ್ವಭಾವೇ । ಮೀಚಿ ಆಹೇ ॥ ೭೭ ॥ ಅರ್ಜುನಾ ಐಸಾ ಜಾಹಾಲಿಯಾ । ಮಗ ನ
ಮರಿಜೇ ದೇಹ ಗೇಲಿಯಾ । ಮಾ ಸಂಗ್ರಾಮು ಕೇಲಿಯಾ । ಭಯು ಕಾಯ ತುಜ ॥ ೭೮ ॥
ತೂ ಮನ ಬುದ್ಧೀ ಸಾಚೇಸೀ । ಜರೀ ಮಾಝಿಯಾ ಸ್ವರೂಪೀ ಅರ್ಪಿಸೀ । ತರೀ ಮಾತೇಚಿಗಾ
ಪಾವಸೀ । ಹೇ ಮಾಝೀ ಭಾಕ ॥ ೭೯ ॥ ಹೇಚಿ ಕಾಯಸಯಾವರೀ ಹೋಯೇ । ಐಸಾ
ಜರೀ ಸಂದೇಹ ವರ್ತತ ಆಹೇ । ತರೀ ಅಭ್ಯಾಸೂನಿ ಆದೀ ಪಾಹೇ । ಮಗ ನವ್ಹೇ ತರೀ
ಕೋಪೇ ॥ ೮೦ ॥

---

* ಟೀಪು— ಮರಣಸಮಯದಲ್ಲಿ ಪರಮೇಶ್ವರನನ್ನೂ, ಸ್ಮರಿಸುವ ಅವಶ್ಯಕತೆಯನ್ನೂ, ಮತ್ತು ಆ ಸ್ಮರಣದ ಫಲವನ್ನೂ, ಈ ವೆ ಹೇಳಿದ ೫ನೇ ಶ್ಲೋಕದಲ್ಲಿ ಹೇಳಿ ಮುಂದೆ ೬ನೇ ಶ್ಲೋಕದಲ್ಲಿ ಅದರ ಸ್ಪಷ್ಟೀಕರಣವನ್ನು ಮಾಡಿದ್ದಾರೆ. ಅಂದರೆ ಈ ಮಾತಿನಂ ಮರಣಸಮಯದಲ್ಲಿಯೇ ಪರಮೇಶ್ವರನ ಸ್ಮರಣವನ್ನು ಮಾಡಿದರೆ ತೀರಿತೆಂದು ಜನರು ತಪ್ಪುತಿಳುವಳಿಕೆಮಾಡಿಕೊಳ್ಳುವ ಸಂಭವವಿದೆ. ಆ ಯಾವದು ಯಾವಜ್ಜೀವವಾಗಿ ಮನಸ್ಸಿನಲ್ಲಿ ವಾಸಮಾಡಿಕೊಂಡಿರುವದೋ, ಆದು ಅಂತ್ಯಕಾಲದಲ್ಲಿಯೂ ಅಂಟಿಕೊಂಡಿರುವದರಿಂದ ಆ ಕಾಲದಲ್ಲಿಮ್ಮೆ ಮಾತ್ರವಲ್ಲ. ಅಯುಷ್ಯವಿರುವಷ್ಟಂಗಲೆಲ್ಲ ಪರಮೇಶ್ವರನ ಸ್ಮರಣ ಉಪಾಸನೆಗಳನ್ನು ಮಾಡುತ್ತಿರುವದು ಅವಶ್ಯವಾಗಿ ದೆಂಬದು ಸಿದ್ಧವಾಗಿ ತೋರಿಸಿದ್ದಾರೆ. (ಗೀ. ಅ. ೬—೨೩ ಅ—೧೩,೯—೨೫, ನೋಡಿರಿ) ಜನ್ಮದಲ್ಲೆಲ್ಲ ಒಂದೇ ಭಾವನೆಯಲ್ಲಿ ಮಗ್ನರಾಗಿ ಹೋಗಿದ್ದಿದ್ದರೆ ಅಂತ್ಯಕಾಲದ ಯಾತನೆಯಲ್ಲಿರುವಾಗ ಅದೇ ಭಾವನೆಯು ಹುಟ್ಟುವದು ಅಸಂಭವವೆಂದು ಗೀತೆಯು ಹೇಳುವ ಅದಕ್ಕಾಗಿ ಅಂತ್ಯಕಾಲದಲ್ಲಿ ಪರಮೇಶ್ವರನ ಸ್ಮರಣವು ತಪ್ಪಬೇಕಾದರೆ ಯಾವ ಜೀವವು ಪರಮೇಶ್ವರನ ಧ್ಯಾನಮಾಡುವದು ಅವಶ್ಯವು. ಸಿದ್ಧಾಂತಕ್ಕನುಸರಿಸಿ ಭಗವಂತನು ಅರ್ಜುನನ ಮುಂದೆ ,, ತಸ್ಮಾತ್ಸರ್ವೇಷು ಕಾಲೇಷು ಮಾಮನುಸ್ಮರ ಯುಧ್ಯ ಚ ಈ ಶ್ಲೋಕದ ಸ್ಪಷ್ಟಮಾಡಿ ಹೇಳಿದ್ದಾನೆ. ಜೀವನು ಪರಲೋಕಕ್ಕೆ ಹೋಗುವಾಗ ಬುದ್ಧೀಂದ್ರಿಯಾದಿಗಳು ಅವನೊಡನೆ ಕಲೆತುಬರುವವೆಂದು ಸೂಚಿಸ

(ಛ. ಗೀ. ಅ. ೧೫ ಶ್ಲೋಕ ೭—೮)

,,ಮನಃಷಷ್ಠಾನೀಂದ್ರಿಯಾಣಿ ಪ್ರಕೃತಿಸ್ಥಾನಿ ಕರ್ಷತಿ। ಶರೀರಂ ಯದವಾಪ್ನೋತಿ ಯಚ್ಚಾ
ಪ್ಯುತ್ಕ್ರಾಮತೀಶ್ವರಃ। ಗೃಹೀತ್ವೈತಾನಿ ಸಂಯಾತಿವಾಯುರ್ಗಂಧಾನಿವಾಶಯಾತ್ ,,

ಎಂದು ಇಲ್ಲಿ ಪ್ರಮಾಣವು. ಇದರಿಂದ ಜೀವನಿಗೆ ಪ್ರಾಣೋತ್ಕ್ರಮಣಕಾಲದಲ್ಲಿ ಯಾವ ಭಾವನೆಯುಂಟಾಗುವದೋ ಅದಕ್ಕೆ ತಕ್ಕ

ಅರ್ಥ— ಆದುದರಿಂದ ಸರ್ವ ಕಾಲದಲ್ಲಿಯೂ ನನ್ನನ್ನು ಸ್ಮರಿಸುವವನಾಗು. ॥ ೭೫ ॥ ಕಣ್ಣಿನಿಂದ ಯಾವುದನ್ನು ನೋಡುತ್ತಿರುವಿಯೋ ಕಿವಿಯಿಂದ ಯಾವುದನ್ನು ಕೇಳುವಿಯೋ, ಅಥವಾ ಮನಸಿನಲ್ಲಿ ಯಾವುದನ್ನು ಕಲ್ಪನೆ ಮಾಡುವಿಯೋ, ವಾಣಿಯಿಂದ ಯಾವುದನ್ನು ಮಾತಾಡುವಿಯೋ, ॥ ೭೬ ॥ ಹೀಗೆ ಮೇಲೆ ಹೇಳಿದ ಸರ್ವ ವ್ಯವಹಾರಗಳಲ್ಲಿ ಅಂತರ್ಬಾಹ್ಯ ನಾನೇ ಇರುವೆನೆಂದು ನಂಬು. ಆ ಮೇಲೆ ಸರ್ವದರಲ್ಲಿಯೂ ನಾನೇ ವ್ಯಾಪಕನಾಗಿರುವೆನೆಂಬದು ನಿನಗೆ ಸಹಜವೇ ಕಂಡುಬರುವದು. ॥ ೭೭ ॥ ಅರ್ಜುನನೇ ! ಹೀಗೆ ಸರ್ವವೂ ನನ್ನ ಸ್ವರೂಪವೇ ಇರುವದೆಂಬ ಜ್ಞಾನವು ಆದಕೂಡಲೆ ದೇಹವು ನಾಶವಾಗಿ ಹೋದರೂ ಅವನು ಸಾಯುವದಿಲ್ಲ. ಅಂದಬಳಿಕ ಯುದ್ಧ ಮಾಡುವದರಿಂದ ನಿನಗೆ ಯಾವ ಭಯವಿರುವದು ಹೇಳು ? ॥ ೭೮ ॥ ನೀನು ಮನ ಬುದ್ಧಿ ಇವುಗಳನ್ನು ನಿಜವಾಗಿ ನನ್ನ ಸ್ವರೂಪದಲ್ಲಿ ಅರ್ಪಣೆ ಮಾಡಿದರೆ, ಆ ಮೇಲೆ ನನ್ನ ಸ್ವರೂಪವನ್ನೇ ಹೊಂದುವಿ. ಇದು ನನ್ನ ಪ್ರತಿಜ್ಞಾಪೂರ್ವಕವಾದ ಭಾಷಣವು ಇರುವದು ॥ ೭೯ ॥ ಇಂಥಾ ಸ್ಥಿತಿಯು ಯಾವದರಿಂದ ಆಬೀತೆಂಬ ಸಂಶಯವು ನಿನ್ನ ಮನಸಿನಲ್ಲಿ ಬರಬಹುದು. ಆದರೆ ಮುಂಚಿತವಾಗಿ (ನಾನು ಹೇಳಿದಂತೆ ಆದರ) ಅಭ್ಯಾಸ ಮಾಡಿ ನೋಡು. ಆ ಮೇಲೆ ಆ ಬ್ರಹ್ಮಸ್ಥಿತಿಯು ನಿನಗೆ ಪ್ರಾಪ್ತವಾಗದಿದ್ದರೆ ಮಾತ್ರ (ನನ್ನ ಮೇಲೆ) ಸಿಟ್ಟುಗೇಳು. ॥ ೮೦ ॥

ಅಭ್ಯಾಸಯೋಗಯುಕ್ತೇನ ಚೇತಸಾ ನಾನ್ಯಗಾಮಿನಾ ।
ಪರಮಂ ಪುರುಷಂ ದಿವ್ಯಂ ಯಾತಿ ಪಾರ್ಥಾನುಚಿಂತಯನ್ ॥ ೮ ॥

[ಅಭ್ಯಾಸ ಯೋಗೇತಿ] ಯೇಣೇಚಿ ಅಭ್ಯಾಸೇಸಿ ಯೋಗೂ । ಚಿತ್ತಾಸಿ ಕರೀ ಪಾ ಚಾಂಗೂ । ಅಗಾ ಉಪಾಯ ಬಳೇ ಪಂಗೂ । ಪಹಾಡ ಪಾಕೇ ॥ ೮೧ ॥ ತೇವೀ ಸದಭ್ಯಾಸೇ ನಿರಂತರ । ಚಿತ್ತಾಸಿ ಪರಮಪುರುಷಾಜೀ ಮೋಹರ । ಲಾವೀಮಗ ಶರೀರ । ರಾಹೋ ಅಥವಾ ಜಾವ್ಹೋ ॥ ೮೨ ॥ ಜೇ ನಾನಾ ಗತೀತೇ ಪಾವವಿತೇ । ತೇಚಿತ್ತ ವರೀಲ ಆತ್ಮಯಾತೇ । ಮಗ ಕವಣ ಆತವೀ ದೇಹಾತೇ । ಗೇಲೇಕೀ ಆಹೇ ॥ ೮೩ ॥ ವೈಸರಿತೇಚೇನಿ ಓಘೇ । ಸಿಂಧುಜಳಾ ಮೀನಲೇ ಘೋಘೇ । ತೇ ಕಾಯ ವರ್ತತ ಆಹೇ ಮಾಗೇ । ಮ್ಹಣೋನಿ ಪಾಹೋ ಯೇತೀ ॥ ೮೪ ॥ ನಾ ತೇ ಸಮುದ್ರಚಿ ಹೋವೂನಿ ಠೇಲೇ । ತೇವೀ ಚಿತ್ತಾಚೇ ಚೈತನ್ಯ ಜಾಹಾಲೇ । ಜೇಥ ಯಾತಾಯಾತ ನಿಮಾಲೇ । ಘನಾನಂದ ಜೇ ॥ ೮೫ ॥'

ಅರ್ಥ- ಈ ಕಾರಣದಿಂದ ಚಿತ್ತಗೊಟ್ಟು ಮನಃಪೂರ್ವಕವಾಗಿ ಅಭ್ಯಾಸಮಾಡಿದರೆ, ಸತತ ಉದ್ಯೋಗ ಬಲದಿಂದ ಹೆಳವನು ಸಹಜವೇ ಪರ್ವತನನ್ನು ಹತ್ತುತ್ತಾನೆ. ॥ ೮೧ ॥ ಅದರಂತೆ ಯಾವಾಗಲೂ ಬ್ರಹ್ಮಚಿಂತನದ ಅಭ್ಯಾಸದಿಂದ, ನಿನ್ನ ಅಂತಃಕರಣದಲ್ಲಿ ಪರಮ ಪುರುಷನ ಧ್ಯಾನದ (ಧ್ರುಡವಾದ) ವ್ಯಸನವನ್ನು ಹಚ್ಚಿಕೊಳ್ಳುವವನಾಗು. ಹೀಗೆ ಆದಮೇಲೆ ಶರೀರವು ಇದ್ದರೇನು ? ಅಥವಾ ಹೋದರೇನು ? ॥ ೮೨ ॥ ನಾನಾತರದ ಗತಿಯನ್ನು ಪ್ರಾಪ್ತನಾಡಿಕೊಡುವಂಥ ಈ ನಿನ್ನ ಚಿತ್ತವು (ಅಕಸ್ಮಾತ) ಒಂದು ವೇಳೆ ಆತ್ಮನನ್ನು ಕೂಡಿಕೊಂಡರೆ, ಆ ಮೇಲೆ ದೇಹವು ಅದೆಯೋ ಅಥವಾ ನಾಶಹೊಂದಿರುವದೆಂಬದರ ಸ್ಮರಣವನ್ನು ಯಾರು ಇಡಬೇಕು ? ॥ ೮೩ ॥ ನದಿಯು ಪ್ರವಾಹದ ಯೋಗದಿಂದ ಘೋ, ಘೊ, ಎಂಬ ಶಬ್ದಮಾಡುತ್ತ ಸಮುದ್ರರಾಜನನ್ನು ಕೂಡುವದಕ್ಕೆ ಹೊರಟಿರಲು ಹಿಂದೆ ಏನು ನಡೆದಿರುವದೆಂಬದನ್ನು ನೋಡುವದರ ದೆಶೆಯಿಂದ ತಿರುಗಿ ಹೋಗುವದೇ ಹೇಗೆ ? ॥ ೮೪ ॥ ಇಲ್ಲ ! ಆದರೆ ಅದು ಸಮುದ್ರ ರೂಪವೇ ಆಗಿ ಹೋಗುತ್ತದೆ. ಅದರಂತೆ ಚಿತ್ತವು ಆತ್ಮರೂಪವಾದರೆ ಜನನ ಮರಣದ ಸಂಕಟವು ಮತ್ತು (ಬರಹೋಗುವ ಯಾತನೆಯು) ತಪ್ಪಿ ಹೋಗುತ್ತದೆ. ಕಾರಣವೇನಂದರೆ ಆ ಸ್ಥಳದಲ್ಲಿ ಪರನಾನಂದವೇ ತುಂಬಿಕೊಂಡಿರುತ್ತದೆ. ॥ ೮೫ ॥

ಕವಿಂ ಪುರಾಣಮನುಶಾಸಿತಾರಮಣೋರಣೀಯಾಂಸಮನುಸ್ಮರೇದ್ಯಃ ॥
ಸರ್ವಸ್ಯ ಧಾತಾರಮಚಿಂತ್ಯರೂಪಮಾದಿತ್ಯವರ್ಣಂ ತಮಸಃ ಪರಸ್ತಾತ್ ॥೯॥

[ಕವಿಮಿತಿ] ಜಯಾಜೀ ಆಕಾಶೀವೀಣ ಅಸಣೇ. ಜಯಾಜನ್ಮ ನಾ ನಿಮಣೇಜೆಆಳವೆಂಚಿ ಅಳವೇಸಣೇ । ದೇಖತ ಅಸೇ ॥ ೪೬ ॥ ಜೇ ಗಗನಾಹೂನಿ ಜುನೇ । ಜೇ ಪರಮಾಣೂಹೂನಿಸಾನೆ । ಜಯಾಚೇನಿ ಸನ್ನಿಧಾನೇ । ವಿಶ್ವಚಳೇ ॥ ೪೭ ॥ ಜೇ ಸರ್ವಾತೇ ಯಯಾವಿಯೇ । ವಿಶ್ವಸರ್ವ ಜೇಣೇ ಜಿಯೇ । ಹೇತು ಜಯಾ ಬಿಹೇ । ಅಚಿಂತ್ಯ ಜೇ ॥ ೪೮ ॥ ದೇಖೇ ವೋಳಂಬಾ ಇಂಗಳ ನಹರೇ । ತೇಜೀ ತಿಮಿರ ನಶೀನೇ । ಜೇ ದಿಹಾಚಿ ಆಂಧಾರೇ । ಚರ್ಮ ಚಕ್ಷೂಸೀ ॥ ೪೯ ॥ ಸುಸಡಾ ಸೂರ್ಯ ಕಣಾಂಚ್ಯಾರಾಶೀ । ಜೋನಿತ್ಯ ಉದೋ ಜ್ಞಾನಿಯಾಸೀ । ಅಸ್ತಮಾನಾಚೇ ಜಯಾಸೀ । ಅಡನಾವ ನಾಹೀ ॥ ೯೦ ॥

ಅರ್ಥ— ಯಾವದರ ಅಸ್ತಿತ್ವವು ಆಕಾರದ ಹೊರ್ತು ಅದ. ಮತ್ತು ಯಾವದು ಜನ್ಮ ಮೃತ್ಯು ರಹಿತವಿದ್ದು ಅದು ಸರ್ವ ವ್ಯಾಪಕತ್ವದಿಂದ ಸರ್ವವನ್ನೂ ನೋಡುತ್ತದೆ. ॥ ೪೬ ॥ ಮತ್ತು ಯಾವದು ಆಕಾಶದಕಿಂತಲೂ ಪುರಾತನವಾದದ್ದಿರುತ್ತದೆ. ಮತ್ತು ಯಾವದು ಪರಿಮಾಣುವಿನಕಿಂತಲೂ. ಸಂಣದಿದ್ದು ಯಾವದರ ಸಾನ್ನಿಧ್ಯದಿಂದ ವಿಶ್ವದ ಚಲನ ವಲನವು ನಡೆದಿರುತ್ತದೆ. ॥ ೪೭ ॥ ಮತ್ತು ಯಾವದರಿಂದ ಈ ಸರ್ವ ಜಗತ್ತಿನ ಘಟನಾ ಘಟನೆಗಳು (ಉತ್ಪತ್ತಿಯು) ಆಗುತ್ತವೆ. ಮತ್ತು ಈ ಸರ್ವ ಜಗತ್ತು ಅವರಿಂದಲೆ ಬದುಕಿ ಇರುತ್ತದೆ. ಮತ್ತು ಯಾವದರ ಅನುಮಾನವನ್ನು ಮಾಡಲಿಕ್ಕೆ ಬರುವದಿಲ್ಲ. ಕಾರಣವೇನೆಂದರೆ ಅದು ಅಚಿಂತ್ಯವಿರುತ್ತದೆ. ॥ ೪೮ ॥ ಹೀಗೆ ನೋಡು, ಬೆಂಕಿಯನ್ನು ಹೇಗೆ ಗೊರ್ಲಿ ತಿನ್ನುವದಿಲ್ಲ, ಮತ್ತು ಪ್ರಕಾಶದಲ್ಲಿ ಕತ್ತಲೆಯು ಹೇಗೆ ಪ್ರವೇಶಮಾಡುವದಿಲ್ಲ, ದೇಹದ ವಿಷಯದಲ್ಲಿರುವ ಅಜ್ಞಾನವು ಯಾವನ ಚರ್ಮ ಚಕ್ಷುವಿಗೆ ಸಹಾ ಕಾಣುವದಿಲ್ಲ, ॥ ೪೯ ॥ ಯಾವದು ನಿರ್ಮಳ ಸೂರ್ಯರೂಪ ಕಣಗಳ ರಾಸಿಯಂತೆ ಇರುವದು, ಮತ್ತು ಜ್ಞಾನಿಗಳಿಗೆ ನಿತ್ಯಪ್ರಕಾಶ ಮಾಡುವಂಥದು ಅದೆ. ಮತ್ತು ಆ ಸ್ಥಳದಲ್ಲಿ ಅಸ್ತವಾಗುವಂಥ ಗುಣವು ಹೆಸರಿಗೆ ಸಹಾ ಇರುವದಿಲ್ಲ. ॥ ೯೦ ॥

ಪ್ರಯಾಣ ಕಾಲೇ ಮನಸಾऽಚಲೇನ । ಭಕ್ತ್ಯಾಯುಕ್ತೋ ಯೋಗಬಲೇನ ಚೈವ ॥
ಭ್ರುವೋರ್ಮಧ್ಯೇ ಪ್ರಾಣಮಾವೇಶ್ಯ ಸಮ್ಯಕ್ । ಸ ತಂ ಪರಂ ಪುರುಷಮುಪೈತಿದಿವ್ಯಂ ॥೧೦॥

[ಪ್ರಯಾಣಕಾಲೇ ಇತಿ] ತಯಾ ಅವ್ಯಂಗ ನಾಣೇಯಾ ಬ್ರಹ್ಮಾತೇ । ಪ್ರಯಾಣಕಾಲೇಪ್ರಾಪ್ತೇ । ಜೋ ಸ್ಥಿರಾವಲೇನಿ ಚಿತ್ತೇ । ಜಾಣೋನಿ ಸ್ಮರೇ ॥ ೯೧ ॥ ಬಾಹೇರ ಪದಾರ್ಥಾಸನ ರಚನಿ । ಉತ್ತರಾಭಿಮುಖ ಬೈಸೋನಿ । ಜೇವೀ ಸುಖಸೂನೀ । ಕರ್ಮಯೋಗಾಚೇ ॥ ೯೨ ॥ ಆಂತು ಮಿನಲೇನಿ ಮನೋಧರ್ಮೇ । ಸ್ವರೂಪ ಪ್ರಾಪ್ತೀ ಚೇನಿ ಪ್ರೇಮೇ । ಆಪೆ ಆಪ ಸಂಭ್ರಮೇ । ಮಿಳಾವಯಾ ॥೯೩॥ ಆಕಳಲೇನಿ ಯೋಗೇ । ಮಧ್ಯಮಾ ಮಧ್ಯಮಾರ್ಗೇ । ಅಗ್ನಿಸ್ಥಾನೌನಿ ನಿಗೇ । ಬ್ರಹ್ಮರಂಧ್ರಾ ॥ ೯೪ ॥ ತೇಥ ಅಚೇತ ಚಿತ್ತಾಚಾ । ಸಾಂಗತಾ । ಅಹಾಚವಾಣಾ ದಿಸೇ ಮಾಂಡತ । ಜೇಥ ಪ್ರಾಣ ಗಗನಾ ಅಂತ । ಸಂಚರೇಕಾ ॥ ೯೫ ॥ ಪರೀ ಮನಾಚೇನಿ ಸ್ಥೈರ್ಯ ಧರಿಲಾ । ಭಕ್ತಿಚಿಯಾ ಭಾವನಾ ಭರಲಾ । ಯೋಗಬಳೇ ಆವರಲಾ । ಸಜ್ಜ ಹೋವುನಿ ॥ ೯೬ ॥ ತೋ ಜಡಾ ಜಡಾ ತೇ ವಿರವಿತೂ । ಭ್ರೂಲತಾ ಮಾಜೀ ಸಂಚರತು । ಜೈಸಾ ಘಂಟಾನಾದ ಲಯಸ್ತು । ಘಂಟೇಸೀಚ ಹೋಯು ॥ ೯೭ ॥ ಕಾಯ್ಗುಂಕಲಿಯೇ ಘಟೀಂಚಾ ದಿವಾ । ನೇಣಿಜೇ ಕಾಯ ಜಾಹಲಾ ಕೆಂವ್ಹಾ । ಯಾ ರೀತಿ ಜೋ ಪಾಂಡವಾ । ದೇಹ ತೇವೀ ॥ ೯೮ ॥ ತೋ ಕೇವಳ ಪರಬ್ರಹ್ಮ । ಜಯಾ ಪರಮ ಪುರುಷ ಐಸೇ ನಾಮ । ತೇ ಮಾಝೇ ನಿಜಧಾಮ । ಹೋವ್ಗುನಿ ತಾಕೇ ॥ ೯೯ ॥

ಅರ್ಥ— ಮರಣಕಾಲವು ಸಮೀಪ ಬಂದಿರಲು ಸ್ಥಿರವಾದ ಅಂತಃಕರಣದಿಂದ ಯಾವನು ಪರಿಪೂರ್ಣನಾದ ಅನ್ಯಕ್ಕೆ ಬ್ರಹ್ಮನನ್ನು ತಿಳಿದು ಸ್ಮರಿಸುತ್ತಾನೆ. ॥ ೯೧ ॥ ಹೊರಗೆ ವದ್ಮಾಸನವನ್ನು ಹಾಕಿ ಉತ್ತರಕ್ಕೆ ನೋಡಿಯನ್ನು ಮಾಡಿ ಕುಳಿತುಕೊಂಡು, ಮತ್ತು ಯೋಗಾಭ್ಯಾಸದ ಕ್ರಮದಲ್ಲಿ ಪ್ರಾಪ್ತವಾದಂಥ ಸುಖವನ್ನು ಅಂತಃಕರಣದಲ್ಲಿ ಕೂಡಹಾಕಿಟ್ಟು, ॥ ೯೨ ॥ ಅಂತರ್ಯಾಮಿ ಏಕಾಗ್ರ ಚಿತ್ತದಿಂದ ಸ್ವರೂಪ ಪ್ರಾಪ್ತಿಯ ಪ್ರೇಮದಿಂದ ತನ್ನಿಂದ ತಾನೇ ತ್ವರೆಯಾಗಿ ಪರಬ್ರಹ್ಮ ಸ್ವರೂಪದಲ್ಲಿ ಕೂಡಿ ಹೋಗುವದರ ದೆಶೆಯಿಂದ, ॥ ೯೩ ॥ ಸಂಪಾದನಮಾಡಿದ ಯೋಗದ್ವಾರದಿಂದ ಸುಷುಮ್ನಾನಾಡಿಯ ಮಧ್ಯಮಾರ್ಗದಲ್ಲಿ ಅಗ್ನಿ ಸ್ಥಾನದಿಂದ ಬ್ರಹ್ಮರಂಧ್ರದಲ್ಲಿ ಪ್ರವೇಶಮಾಡುವದರ ದೆಶೆಯಿಂದ ಹೊರಡುತ್ತಾನೆ. ॥ ೯೪ ॥ ಪ್ರಾಣ, ಮತ್ತು ಚಿತ್ತ, ಇವುಗಳ ಒಂದಕ್ಕೊಂದು ಸಂಗತಿ ಅವೆಂಬದು ಸುಮ್ಮನೇ ಬಹಿರಂಗವಾಗಿ ತೋರಿಕೆಗೆ ಮಾತ್ರ ಕಾಣುತ್ತದೆ. ಮತ್ತು ಪ್ರಾಣದ ಲಯವು ಆಕಾಶದಲ್ಲಿ ಆಗುತ್ತದೆ. ॥೯೫॥ ಆದರೆ ಮನಸ್ಸಿನ ಸ್ಥಿರತೆಯಿಂದ ಯಾವನು ಬಂಧಿಸಲ್ಪಟ್ಟಿರುವನೋ ಮತ್ತು ಯಾವನ ಅಂತಃಕರಣವು ಭಕ್ತಿಯುಕ್ತವಾಗಿರುವದೋ, ಮತ್ತು ಯಾವನು ಯೋಗಬಲದಿಂದ ಸಿದ್ಧವಾಗಿ ತನ್ನ ಮನಸ್ಸು ಸ್ವಾಧೀನದಲ್ಲಿಟ್ಟುಕೊಳ್ಳುತ್ತಾನೋ, ।೯೬॥ ಆ ಯೋಗಿಯ ಪ್ರಾಣವಾಯು ಚೇತನ ಅಚೇತನ ಪದಾರ್ಥಕ್ಕೆ ಇಲ್ಲದಂತೆ ಮಾಡಿ ಭ್ರುಕುಟಿಯಲ್ಲಿ ಸಂಚಾರ ಮಾಡಿ ಘಂಟೆಯನಾದ ಗಂಟೆಯಲ್ಲಿಯೇ ಲಯಹೊಂದುವಂತೆ ಪ್ರಾಣವಾಯು ಅಲ್ಲಿಯೇ ಲಯಹೊಂದುತ್ತದೆ. ॥ ೯೭ ॥ ಇಲ್ಲವೇ ಗಡಿಗೆಯ ಕೆಳಗೆ ಮುಚ್ಚಿದಂಥ ದೀವಿಗೆಯು ಯಾವಾಗ್ಗೆ ಇಲ್ಲದಂತೆ ಆಗುತ್ತದೋ ಇದು ಯಾವ ಪ್ರಕಾರಾ ತಿಳಿಯುವದಿಲ್ಲ. ಅದರಂತೆ ಅರ್ಜುನನೇ ಯಾವನು (ಬ್ರಹ್ಮಾಕಾಶದಲ್ಲಿ ಪ್ರಾಣವಾಯು ನೈದು ಅದು ಆತ್ಮ ಸ್ವರೂಪದಲ್ಲಿ ಯಾವಾಗ್ಗೆ ಲೀನವಾಗುತ್ತದೆಂಬದನ್ನು ತಿಳಿಯಗೊಡದೇ ತನ್ನ ದೇಹವನ್ನು ಇಡುತ್ತಾನೆ.) ೯೮ ॥ ಅವನಿಗೆ ಕೇವಲ ಪರಬ್ರಹ್ಮಮೂರ್ತಿ ಪರನು ಪುರುಷನೆಂಬ ಹೆಸರು ಅದೇ ಅವನು ನನ್ನ ನಿಜ ಸ್ವರೂಪದವರೆಗೆ ಹೋಗಿ ಮುಟ್ಟುತ್ತಾನೆ. ॥ ೯೯ ॥

ಯದಕ್ಷರಂ ವೇದವಿದೋ ವದಂತಿ । ವಿಶಂತಿ ಯದ್ಯತಯೋ ವೀತರಾಗಾಃ ॥
ಯದಿಚ್ಛಂತೋ ಬ್ರಹ್ಮಚರ್ಯಂ ಚರಂತಿ। ತತ್ತೇ ಪದಂ ಸಂಗ್ರಹೇಣ ಪ್ರವಕ್ಷ್ಯೆ ॥೧೦॥

[ಯದಕ್ಷರಮಿತಿ] ಸಕಳಾ ಜಾಣಣೇಯಾ ಜೇಲಾಣೇ । ತಿಯೇ ಜಾಣಿವೇಚೀ ಜೇ ಖಾಣೇ । ತಯಾ ಜ್ಞಾನಿಯಾಂಚಿಯೇ ಆಯಣೀ । ಜಯಾತೇ ಅಕ್ಷರ ಮ್ಹಣಿಪೇ ॥ ೧೦೦ ॥ ಚಂಡವಾತೇಹೀ ನ ಮೋಡೇ । ತೇ ಗಗನಚಿಕೀ ಫುಡೇ । ವಾಂಚೂನಿ ಜರೀ ಹೋಈಲ ಜರೀ ಮೆಹುಡೇ । ತರೀ ಉರೇಲ ಕೈಂಚೇ ॥ ೧೦೧ ॥ ತೇವೀ ಜಾಣಣೇಯಾ ಜೇ ಆಕಳಲೇ । ತೇ ಜಾಣಿವಲೇಪಣೆಂಚಿ ಉಮಾಣಲೇ । ಮಗ ನೇಣವೇಚಿ ತಯಾ ಮ್ಹಣಿತಲೇ । ಅಕ್ಷರ ಸಹಜೇ ॥ ೨ ॥ ಮ್ಹಣೋನಿ ವೇದವಿದ ನರ । ಮ್ಹಣತೀ ಜಯಾತೇ ಅಕ್ಷರ ! ಜೇ ಪ್ರಕೃತೀಸೀ ಪರ । ಪರಮಾತ್ಮರೂಪ ॥ ೩ ॥ ಆಣಿ ವಿಷಯಾಂಚೇ ವಿಷ ಉಲಂಡೂನಿ । ಜೇ ಸರ್ವೇಂದ್ರಿಯಾ ಪ್ರಾಯಶ್ಚಿತ್ತ ದೇವೂನಿ । ಆಹಾತಿ ದೇಹಾಚಿಯಾ ಬೈಸೋನಿ । ಝಾಡಾತಳೇ ॥ ೪ ॥ ತೇ ಯಾ ಪರೀ ವಿರಕ್ತ । ಜಯಾಚೀ ನಿರಂತರ ವಾಟ ವಹಾತ । ನಿಷ್ಕಾಮಾಸೀ ಅಭಿಪ್ರೇತ । ಸರ್ವದಾಜೇ ॥ ೫ ॥ ಜಯಾಚಿಯಾ ಆವಡೀ । ನ ಗಣಿತಿ ಬ್ರಹ್ಮಚರ್ಯಾಚೀ ಸಾಂಕಡೀ । ನಿಷ್ಕುರ ಹೋವೂನಿ ಬಾ ಫುಡೀ । ಇಂದ್ರಿಯೇ ಕರಿತೀ ॥ ೬ ॥ ಐಸೇ ಜೇ ಪದ । ದುರ್ಲಭ ಆಣಿ ಅಗಾಧ । ಜಯಾಚಿಯೇ ಥಡಿಯೇ ವೇದ । ಚುಬುಕಳಿಲೇ ಠೇಲೇ ॥ ೭ ॥ ತೇ ತೇ ಪುರುಷ ಹೋತೀ । ಜೇ ಯಾಸರೀ ಲಯಾ ಜಾತೀ । ತರೀ ಪಾರ್ಥಾ ಹೇಚಿ ಸ್ಥಿತಿ । ಏಕ ವೇಳ ಸಾಂಗೋ ॥ ೮ ॥ ತೇಥ ಅರ್ಜುನೇ ಮ್ಹಣಿತಲೇ ಸ್ವಾಮೀ । ಹೇಚ ಮ್ಹಣಾವಯಾ ಹೋತೋ ಪಾ ಮೀ । ತವ ಸಹಜೇ ಕೃಪಾ ಕೇಲೀ ತುಮ್ಹೀ । ತರೀ ಬೋಲಿಜೋಕಾ ॥ ೯ ॥ ಪರೀ

ಬೋಲಾವೇ ತೇ ಅತಿ ಸೋಹೋಪೇ । ತೇಥೇ ಮ್ಹಣಿತಲೇ ತ್ರಿಭುವನ ದೀಪೇ । ತುಜ ಕಾಯ ನೇಣೋ ಸಂಕ್ಷೇಪೇ । ಸಾಂಗೇಕ ಏಕ ॥ ೧೦ ॥ ತರೀ ಮನಾ ಬಾಹೇರಿಲೀ ಕಡೇ । ಯೇಯಾಚೀ ಸಾವಿಯಾ ಸವೇ ಮೋಡೇ । ಹೇ ಹೃದಯಾಚಿಯಾ ಡೋಹೀ ಬುಡೇ । ತೈಸೇ ಕೀಜೇ ॥ ೧೧ ॥

ಅರ್ಥ— ಯಾವ ಜ್ಞಾನವು ಸಂಪೂರ್ಣ ಜ್ಞಾನದ ಕಡೆಯದು ಮತ್ತು ಸರ್ವ ಜ್ಞಾನದ ಖಣಿಯು ಆಗಿರುವದು. ಇಂಥ ಬುದ್ಧಿ ಮಾನ ಜ್ಞಾನಿಪುರುಷರು ಸಹ ಯಾವದಕ್ಕೆ ಅಕ್ಷರವೆಂದು ಅಂದಿರುತ್ತಾರೆ. ॥೧೦೦॥ ಪ್ರಚಂಡವಾದ ಗಾಳಿಯಿಂದ ಯಾವದು ಇಲ್ಲದಂತೆ ಆಗುವದಿಲ್ಲವೋ, ಅದು ನಿಜವಾಗಿ ಆಕಾಶನೇ ಆಗಿರಬೇಕು. ಇಲ್ಲದೇ ಅದು ಮೋಡವಾಗಿದ್ದರೆ ಪ್ರಚಂಡವಾದ ಗಾಳಿಯಿಂದ ಹೇಗೆ ಕಡೆದೀತು ? ॥ ೧೦೧ ॥ ಆ ಪ್ರಕಾರಾ ಜ್ಞಾನಿಗಳಿಗೆ ಯಾವದು ತಿಳಿದಿರುವದು ಅದು ಜ್ಞಾನದ ಅಳತೆಯಲ್ಲಿ ಬಂದಿರುವದು. ಆದುದರಿಂದ ಅದು ಕ್ಷರ (ನಾಶವಂತ) ವಾಗಿರುವದು. ಯಾವದು ತಿಳಿಯಲಿಕ್ಕೆ ಅಶಕ್ಯವಾಗಿರುವದು. ಅದಕ್ಕೆ ಸಹಜವೇ "ಅಕ್ಷರ" (ಅವಿನಾಶಿ) ಹೀಗೆ ಅನ್ನುತ್ತಾರೆ. ॥ ೨ ॥ ಆದುದರಿಂದ ವೇದ ಪಾರಾಂಗತ ಪುರುಷರು ಯಾವದಕ್ಕೆ ಅಕ್ಷರ (ಬ್ರಹ್ಮ) ವೆಂದು ಕರೆಯುತ್ತಾರೆ, ಮತ್ತು ಯಾವದು ಮಾಯಾದ ಆಚೆ ಕಡೆಗೆ ಇದ್ದು ಸಚ್ಚಿದಾನಂದರೂಪವಾಗಿರುತ್ತದೆ, ॥ ೩ ॥ ಮತ್ತು ವಿಷಯದ ಅಪೇಕ್ಷೆಯನ್ನು ಬಿಟ್ಟು ಸರ್ವ ಇಂದ್ರಿಯಗಳ ದಮನ ಮಾಡಿ ದೇಹರೂಪಿ ವೃಕ್ಷದ ಕೆಳಗೆ ಉದಾಸೀನ ವೃತ್ತಿಯಿಂದ ಕುಳಿತಿರುವ, ॥ ೪ ॥ ವಿರಕ್ತ ಪುರುಷರು ಸಹಾ ಯಾವಾಗಲೂ ಯಾವದರ ಹಾದಿ ನೋಡುತ್ತಿರುತ್ತಾರೆ, ಮತ್ತು ಅದು ಯಾವಾಗಲೂ ನಿರೀಚ್ಛ ಪುರುಷರಿಗೆ ಪ್ರೀಯವಾಗಿರುತ್ತದೆ. ॥ ೫ ॥ ಯಾವ ದರ ಪ್ರೇಮದ ದೆಶೆಯಿಂದ ಯೋಗೀ ಜನರು ಬ್ರಹ್ಮಚರ್ಯ ಮುಂತಾದ ಸಂಕಟಗಳನ್ನು ಗಣನೆಗೆ ತರುವದಿಲ್ಲ. ಮತ್ತು ನಿಷ್ಠುರತನದಿಂದ ಇಂದ್ರಿಯಗಳ ನಿಗ್ರಹವನ್ನು ಮಾಡುತ್ತಾರೆ. ॥ ೬ ॥ ಇಂಥ ಯಾವ ದುರ್ಲಭ ಪದದ ಅಂತವು ಹತ್ತುವದಿಲ್ಲವೋ. ವೇದಗಳ ಕಡೆಯಿಂದಲೂ ತಿಳಿಯುವದಾಗುವದಿಲ್ಲವೋ, ಅದು (ಅಗವ್ಯವಾಗಿರುವದು). ॥ ೧೦೭ ॥ ಆ ಪರಬ್ರಹ್ಮಪದಕ್ಕೆ ನಾನು ಹೇಳಿದಂತೆ ಯಾರು ದೇಹನನ್ನಿಡುತ್ತಾರೆ, ಅವರು ಬ್ರಹ್ಮಸ್ವರೂಪನೇ ಆಗುತ್ತಾರೆ. ಆದುದರಿಂದ ಪಾರ್ಥಾ ! ಅದರ ವಿಷಯವಾಗಿ ಇನ್ನೂ ಒಂದು ನೇಳ್ಕೆ ನಿನಗೆ ಹೇಳುತ್ತೇನೆ ಕೇಳು. ॥ ೮ ॥ ಆ ನೇಳ್ಕೆಕ್ಕೆ ಅರ್ಜುನನು ಅನ್ನುತ್ತಾನೆ, ಎಲೈ ಪ್ರಭುವೇ ! ನಾನು ನಿನಗೆ ಈಗ ಇದನ್ನೇ ಕೇಳಬೇ ಕೆಂದಿದ್ದೆನು. ಅದನ್ನು ಹೇಳಲು ನೀವೇ ನನ್ನ ಮೇಲೆ ಅನುಗ್ರಹ ಮಾಡಿರುವಿರಿ. ಆದರೆ ಇನ್ನು ಮೇಲೆ ಹೇಳಲಿಕ್ಕೆ ಪ್ರಾರಂಭ ಮಾಡಿರಿ. ॥ ೯ ॥ ಆದರೆ ಏನು ಹೇಳತಕ್ಕದ್ದದೆ. ಅದು ಕೇವಲ ಸುಲಭ ಶೈಲಿಯಿಂದ ಮಾತ್ರ ಹೇಳ ಬೇಕು. ಆ ನೇಳೆದಲ್ಲಿ ತ್ರಿಭುವನ ಜ್ಯೋತಿಯಾದ ಭಗವಾನ ಶ್ರೀಕೃಷ್ಣನು ಅನ್ನುತ್ತಾನೆ, ನಿನ್ನ (ಮನಸಿನಲ್ಲಿರುವ) ಅಭಿಪ್ರಾಯವು ನಮಗೆ ತಿಳಿಯುವದಿಲ್ಲೇನು ? ನಿನಗೆ ಸಂಕ್ಷೇಪವಾಗಿಯೂ ಸುಲಭವಾಗಿಯೂ, ಹೇಳುತ್ತೇನೆ. ಅದನ್ನು (ಶ್ರದ್ಧಾಪೂರ್ವಕವಾಗಿ) ಕೇಳು. ॥ ೧೧೦ ॥ ಆದರೆ ಆ ಮೇಲೆ ನೀನು ಹೊರಗೆ ಓಡ್ಯಾಡುವ ಮನಸಿನ ಸ್ವಭಾವಿಕ ವ್ಯಸನವನ್ನು ಮುರಿದು ಅದು ಹೃದಯದಲ್ಲಿಯೇ ಸ್ಥಿರವಾಗಿ ಇರುವಂತೆ ಮಾಡು. ॥ ೧೧ ॥

ಸರ್ವದ್ವಾರಾಣಿ ಸಂಯಮ್ಯ ಮನೋ ಹೃದಿ ನಿರುದ್ಧ್ಯ ಚ ।
ಮೂರ್ಧ್ನ್ಯಾರ್ಧಾಯಾತ್ಮನಃ ಪ್ರಾಣಮಾಸ್ಥಿತೋ ಯೋಗಧಾರಣಾಂ ॥ ೧೨ ॥

[ಸರ್ವದ್ವಾರಾಣಿ ಸಂಯಮ್ಯೇತಿ] ಪರೀ ಹೇ ತರೀಚ ಘಡೇ । ಜರೀ ಸಂಯಮಾಚೀ ಅಖಂಡೇ । ಸರ್ವ ದ್ವಾರೀ ಕವಾಡೇ । ಕಳಾಸತೀ ॥ ೧೨ ॥ ತರೀ ಸಹಜೇ ಮನ ಕೋಂಡಲೇ । ಹೃದಯೀಂಚಿ ಅಸೇಲ ಜಗಲೇ । ಜೈಸೇ ಕರಚರಣೀ ಮೋಡಲೇ । ಪರಿವರ ನ ಸಂಡೀ ॥ ೧೩ ॥ ತೈಸೇ ಚಿತ್ತ ರಾಹಿಲ್ಯಾ ಪಾಂಡವಾ । ಪ್ರಾಣಾಂಚಾ ಪ್ರಣವಚಿ ಕರಾವಾ । ಮಗ ಅನುವೃತ್ತಿ ಪಂಥೇ ಆಣಾವಾ । ಮೂರ್ಧ್ನಿವರೀ ॥ ೧೪ ॥ ತೇಥ ಆಕಾತೀ ಮಿಳೇ ನ ಮಿಳೇ । ತೈಸಾ ಧರಾವಾ

ಧಾರಣಾ ಬಳೇ । ಜವ ಮಾತ್ರಾತ್ರಯ ಮಾವಳೇ । ಅರ್ಧ ಬಿಂಬೀ ॥ ೧೫ ॥ ತವವರೀ ತೋಸಮೀರೂ ।
ನಿರಾಳೀ ಕೀಜೇ ಸ್ಥಿರೂ । ಮಗ ಲಗ್ನೀ ಜೇವೀ ಓಂಕಾರೂ । ಬಿಂಬೀಚಿ ವಿಲಸೇ ॥ ೧೬ ॥

ಅರ್ಥ— ಆದರೆ ಯಾವ ವೇಳೆಯಲ್ಲಿ ಇಂದ್ರಿಯಗಳ ದ್ವಾರಗಳು ನಿಗ್ರಹದಿಂದ ಮುಚ್ಚಿ ಹೋಗುತ್ತವೆ, ಆಗ್ಗೆ ಮಾತ್ರ ಈ ಮಾತು ಸಾಧ್ಯವಾಗುತ್ತದೆ. ॥ ೧೨ ॥ ಹೀಗೆ ಆಗುವದರಿಂದ ಸಹಜವೇ ಮನಸು ಪ್ರತಿಬಂಧವಾಗಿ ಹೃದಯದಲ್ಲಿಯೇ ಸ್ವಸ್ಥವಾಗಿ ಸ್ಥಿರವಾಗಿ ನಿಲ್ಲುತ್ತದೆ. ಯಾವ ಪ್ರಕಾರಾ ಕೈ ಕಾಲುಗಳು ಮುರಿದಂಥ ಮನುಷ್ಯನು ತನ್ನ ಮನಿಯನ್ನು ಬಿಟ್ಟು ಎಲ್ಲಿಯೂ ಹೋಗುವದಿಲ್ಲವೋ, ॥ ೧೩ ॥ ಅದೇ ಪ್ರಕಾರಾ ಅರ್ಜುನಾ! ಚಿತ್ತದಲ್ಲಿ (ಅಕಸ್ಮಾತ್) ಸ್ಥಿರತೆಯು ಉಂಟಾದ ಮೇಲೆ ಪ್ರಾಣಾಯಾಮದಿಂದ ಓಂಕಾರದ ಧ್ಯಾನವನ್ನು ಮಾಡಬೇಕು ಆನೆಮೇಲೆ ಪ್ರಾಣವಾಯುವನ್ನು ಕ್ರಮ ಕ್ರಮದಿಂದ ಬ್ರಹ್ಮರಂಧ್ರದ ವರೆಗೆ ವೈಬೇಕು. ॥ ೧೪ ॥ ಆ ಮೇಲೆ ಆಕಾರ, ಉಕಾರ, ಮಕಾರ, ಈ ತ್ರಯಿ ಅರ್ಧ ಮಾತ್ರೆಯಲ್ಲಿ ಕೂಡುವವರೆಗೆ ಧಾರಣಾ ಶಕ್ತಿಯ ಬಲದಿಂದ ವ್ರಾಣವು ಬ್ರಹ್ಮಾಕಾಶದಲ್ಲಿ ಕೂಡುತ್ತದೆ. ಅರ್ಥಾತ್ ಇನ್ನೂ ಕೂಡಬೇಕೆಂಬುವಷ್ಟರಲ್ಲಿ ಸಾಧಿಸಿ ಆ ವಾಯುವಿನನ್ನು ಇಂಥ ಯುಕ್ತಿಯಿಂದ ಹಿಡಿಯಬೇಕು. ॥ ೧೫ ॥ ಅಲ್ಲೀವರೆಗೆ ಆ ವಾಯು ಮಸ್ಕಾಕಾಶದಲ್ಲಿ ಸ್ಥಿರಪಡಿಸಬೇಕು. ಆ ಮೇಲೆ ಓಂಕಾರದ ಮತ್ತು ಅದರ ಸಂಯೋಗವು ಆದ ಮೇಲೆ ಮೂಲ ಸ್ವರೂಪವಾದ ಯಾವ ಬ್ರಹ್ಮವು ಅದರಲ್ಲಿ ಅದು (ಪ್ರಾಣವು) ರಮಮಾಣವಾಗುತ್ತದೆ. (ಲಯಹೊಂದುತ್ತದೆ) ॥ ೧೬॥

ಓಮಿತ್ಯೇಕಾಕ್ಷರಂ ಬ್ರಹ್ಮ ವ್ಯಾಹರನ್ಮಾಮನುಸ್ಮರನ್ ।
ಯಃ ಪ್ರಯಾತಿ ತ್ಯಜನ್ದೇಹಂ ಸ ಯಾತಿ ಪರಮಾಂ ಗತಿಂ ॥ ೧೩ ॥

[ಓಮಿತಿ] ತೈಸೇ ಓಮ್ ಹೇ ಸ್ಮರೋ ಸರೇ । ಆಣಿ ತೇಥೇಂಚಿ ಪ್ರಾಣ ಪುರೇ ।
ಮಗ ಪ್ರಣವಾತೀತ ಉರೇ । ಪೂರ್ಣಘನ ಜೇ ॥ ೧೭ ॥ ವ್ಹಣೋನಿ ಪ್ರಣವೈಕ ನಾಮು ।
ಹೇ ಏಕಾಕ್ಷರ ಬ್ರಹ್ಮ । ಜೋ ಮಾಝೇ ಸ್ವರೂಪ ಪರಮ । ಸ್ಮರತ ಸಾಂತಾ ॥ ೧೮ ॥ ಯಾ
ಪರೀ ತ್ಯಜೀ ದೇಹಾತೇ । ತೋ ತ್ರಿಶುದ್ಧೀ ಪಾವೇ ಮಾತೇ । ಯಯಾ ಪಾವಣಯಾ ಪರೌತೇ ।
ಆಣಿಕ ಪಾವಣೇ ನಾಹೀ ॥ ೧೯ ॥ ತೇಥ ಅರ್ಜುನಾ ಜರೀ ವಿಪಾಯೇ । ತುಝ್ಯಾ ಜೀವೀ ಹನ
ಐಸೇ ಜಾಯೀ ॥ ನಾಹೀ ಸ್ಮರಣ ಮಗ ಹೋಯೇ । ಕಾಯಸಯಾವರೀ ಅಂತೀ ॥ ೨೦ ॥
ಇಂದ್ರಿಯಾ ಅನಘಡ ಪಡಿಲಿಯಾ । ಜೀವಿತಾಚೇಸುಖ ಬುಡಾಲಿಯಾ । ಆಂತ ಬಾಹೇರೀ
ಉಘಡಲಿಯಾ । ಮೃತ್ಯು ಚಿನ್ಹೇ ॥ ೨೧ ॥ ತೇ ವೇಳೀ ಬೈಸಾನೇಚಿ ಕವಣೇ । ಮಗ ಕವಣ
ನಿರೋಧೀ ಕರಣೇ । ತೇಥ ಕಾಹ್ಯಾ ಚೇನಿ ಅಂತಃಕರಣೇ । ಪ್ರಣವ ಸ್ಮರಾವಾ ॥ ೨೨ ॥ ತರೀಗಾ
ಐಸಿಯಾ ಹೋ ಧ್ವನೀ । ಝುಣೇ ಥಾರಾ ದೇತೀ ಗಾ ಮನೇ । ಪೈ ನಿತ್ಯ ಸೇವಿಲಾ ಮೀ ನಿದಾನೀ
ಸೇವಕ ಹೋಯ ॥ ೨೩ ॥

ಅರ್ಥ— ಅದರ ಸಂಗಡವೇ ಓಂಕಾರದ ಸ್ಮರಣವು ಬಂದಬೀಳುತ್ತದೆ. ಅದೇ ಕಾಲಕ್ಕೆ ಪ್ರಾಣದ ಅಂತ್ಯವು ಆಗುತ್ತದೆ. ಓಂಕಾರದ ಆಚೆಕಡೆಗೆ ಇರುವ ಯಾವ ಬ್ರಹ್ಮಾನಂದಸ್ವರೂಪವು ಅದೇ ಕಟ್ಟಕಡೆಗೆ ಉಳಿಯುತ್ತದೆ. ॥ ೧೭ ॥ ಆದುದರಿಂದ ಯಾವದಕ್ಕೆ " ಪ್ರಣವ"ವೆಂದೆನ್ನುತ್ತಾರೆ. ಮತ್ತು ಯಾವದು ಏಕಾಕ್ಷರ ಬ್ರಹ್ಮವಿರುತ್ತದೆ, ಆ ನನ್ನ ಪರಮಸ್ವರೂಪದ ಸ್ಮರಣಮಾಡುತ್ತಿರಲಾಗಿ, ॥ ೧೮ ॥ ಯಾವನು ಇಂಥ ಸ್ಥಿತಿಯಲ್ಲಿಯೇ ದೇಹತ್ಯಾಗ ಮಾಡುವನು, ಅವನು ನಿಶ್ಚಯದಿಂದ ನನ್ನಲ್ಲಿ ಬಂದು ಸೇರುತ್ತಾನೆ. ಕಾರಣವೇನಂದರೆ ಅವನಿಗೆ ನನ್ನ ಪ್ರಾಪ್ತಿಯ ಹೊರ್ತು ಅನ್ಯ ಯಾವ ಶ್ರೇಷ್ಠವಾದ ಗತಿಯೇ ಇರುವದಿಲ್ಲ. ॥ ೧೯ ॥ ಅರ್ಜುನನೇ ! ನಿನ್ನ ಮನಸಿನಲ್ಲಿ ಒಂದು ವೇಳೆ ಹೀಗೆ ಸಂಶಯ ಬರಬಹುದು. ಮರಣಸಮಯದಲ್ಲಿ ನನ್ನ ಸ್ಮರಣವು ಹೇಗೆ ಆಗಬೇಕು ? (ಅದು ಸಾಧ್ಯವೇ

ಇರುವದಿಲ್ಲ! ವೆಂದು ಅನಬಹುದು.) ॥ ೧೬೦ ॥ ಜೀವಿತದ ಸುಖವು ಇಲ್ಲದಂತಾಗಿ ಮತ್ತು ಇಂದ್ರಿಯಗಳು ಸಂಕಟದಲ್ಲಿ ಬಿದ್ದಿರಲು, ಅಂತರ್ಯಾಮಿ ಮತ್ತು ಹೊರಗೆ ಮೃತ್ಯುವಿನ ಲಕ್ಷಣಗಳು ಪ್ರತ್ಯಕ್ಷ ಸ್ಪಷ್ಟವಾಗಿ ಕಾಣಲಿಕ್ಕೆ ಹತ್ತಿದ ಮೇಲೆ, ॥ ೧೬೧ ॥ ಆ ವೇಳೆದಲ್ಲಿ ಎದ್ದು ಕೂತುಕೊಳ್ಳಲಿಕ್ಕಾದರೂ, ಹೇಗೆ ಸಾಧ್ಯವಾದೀತು? ಆಗ್ಗೆ ಇಂದ್ರಿಯಗಳ ಸಂಯಮನಮಾಡುವ ಬಗೆ ಹೇಗೆ? ಈ ಮಾತು ಯಾರಿಂದ ಸಾಧ್ಯವಾದೀತು? (ಅಂಥ ಕಠಿಣ ಕಾಲದಲ್ಲಿ.) ಅಂತಃಕರಣಪೂರ್ವಕವಾಗಿ ಓಂಕಾರದ (ಮೂಲ ಪರಬ್ರಹ್ಮ ಶ್ರೀಪಾಂಡುರಂಗನ) ಸ್ಮರಣಮಾಡುವ ಮಾತಾದರೂ ಯಾರಿಂದ ಹೇಗೆ ಸಾಧಿಸೀತು? (ಅಸಾಧ್ಯವೇ ಸರಿ.) ॥ ೧೬೨ ॥ ಆದರೆ ಅಪ್ಪಾ ಅರ್ಜುನನೇ! ಇಂಥ ಸಂಶಯವನ್ನು ನಿನ್ನ ಅಂತಃಕರಣದಲ್ಲಿ ಪ್ರವೇಶಮಾಡಗೊಡಬೇಡ ಕಂಡಿಯಾ! ಹೀಗೆ ನೋಡು, ನನ್ನ ಸೇವೆಯನ್ನು ನಿತ್ಯ (ಭಕ್ತಿಪೂರ್ವಕವಾಗಿ) ಯಾರು ಮಾಡುವರೋ, ಅವರ ಮರಣಸಮಯದಲ್ಲಿ ನಾನು ಅವರ ದಾಸನಾಗಿ ಅವರ ಸೇವೆಯಲ್ಲಿ ನಿರತನಾಗಿ ಇರುತ್ತೇನೆ. ॥ ೧೬೩ ॥

ಅನನ್ಯಚೇತಃ ಸತತಂ ಯೋ ಮಾಂ ಸ್ಮರತಿ ನಿತ್ಯಶಃ ।
ತಸ್ಯಾಹಂ ಸುಲಭಃ ಪಾರ್ಥ ನಿತ್ಯಯುಕ್ತಸ್ಯ ಯೋಗಿನಃ ॥ ೧೪ ॥
ಮಾಮುಪೇತ್ಯ ಪುನರ್ಜನ್ಮ ದುಃಖಾಲಯಮಶಾಶ್ವತಮ್ ।
ನಾಪ್ನುವಂತಿ ಮಹಾತ್ಮಾನಃ ಸಂಸಿದ್ಧಿಂ ಪರಮಾಂ ಗತಾಃ ॥ ೧೫ ॥

[ಅನನ್ಯಚೇತಾ ಇತಿ] ಜೇ ವಿಷಯಾಸಿ ತಿಳಾಂಜಳೀ ದೇವುನೀ । ವೃವೃತ್ತಿನರೀ ನಿಗಡವಾವುನೇ । ಮಾತೇ ಹೃದಯೀ ಸುನೀ । ಭೋಗಿಕಾತೀ ॥ ೪೪ ॥ ಪರಿ ಭೋಗಿತಯಾ ನಾರಾಣುಕಾ । ಭೇಟಣೇ ನಾಹೀ ಕ್ಷುಧಾದಿಕಾ । ತೇಥ ಚಕ್ಷುರಾದಿರಂಕಾ । ಕವಣ ಪಾಡ ॥ ೪೫ ॥ ಐಸೇ ನಿರಂತರ ಏಕವಟಲೇ । ಜೇ ಅಂತಃಕರಣೀ ಮಜಶೀ ಲಿಗಟಲೇ । ಮೀಚಿ ಹೋವೂನಿ ಆಂತಲೇ । ಉಪಾಸಿತೀ ॥ ೪೬ ॥ ತಯಾ ದೇಹಾವಸಾನ ಜೈ ಪಾವೇ । ತೈ ತಿಹೀ ಸೂತೇ ಸ್ಮರಾವೇ । ಮಗ ಮ್ಯಾ ಜರೀ ನ ಪಾವಾವೇ । ತರೀ ಉಪಾಸ್ತಿ ತೇ ಕಾಯಸೀ ॥ ೪೭ ॥ ಪೈರಂಕ ಏಕ ಆಡಲೇಪಣೇ । ಕಾಕುಳತೀ ಧಾವ ಗಾ ಧಾವ ಮ್ಹಣೇ। ತರೀ ತಯಾಚಿಯೇ ಗ್ಹಾನಿ ಧಾವಣೇ । ಕಾಯನ ಘಡೇ ನುಜ ॥ ೪೮ ॥ ಆಣಿ ಭಕ್ತಾಹೀ ತೇಚಿ ದಶಾ। ತರೀ ಭಕ್ತೀಚಾ ಸೋಸ ಕಾಯಸಾ । ಮ್ಹಣವೂನಿ ಹಾ ಧ್ವಸೀ ಐಸಾ । ನ ವಾಖಾಣಾವಾ ॥ ೪೯ ॥ ತಿಹೀ ಜೇ ನೇಳೀ ಮೀ ಸ್ಮರಾವಾ । ತೇ ನೇಳೀ ಸ್ಮರಿಲಾ ಕೀ ಪಾವಾವಾ । ತೋ ಆಭಾರಹೀ ಜೀವಾ । ಸಾಹವೇಚಿ ನಾ ॥ ೧೫೦ ॥ ತೇ ರುಣವೈಪಣ ದೇಖೋನಿ ಆಂಗೀ । ಮೀ ಆಪುಲಿಯಾಚಿ ಉತ್ತೀರ್ಣ ತ್ವಾ ಲಾಗೀ । ಭಕ್ತಾಚಿಯಾ ತನುತ್ಯಾಗೀ । ಪರಿ ಚರ್ಯಾ ಕರೀ ॥ ೧೫೧ ॥ ದೇಹನೈಕಲ್ಯಾಚಾ ವಾರಾ । ಝುಣೇ ಲಾಗೇಲ ಯಾ ಸುಕುಮಾರಾ । ಮ್ಹಣೋನಿ ಆತ್ಮಬೋಧಾಚೀ ಪಾಂಜಿರಾ । ಸುಯೇ ತಯಾತೇ ॥ ೧೫೨ ॥ ಮಗ ಆಪುಲಿಯಾ ಸ್ಮರಣಾಚೀ ಉವಾ ಇಲೀ । ಹೀನ ಐಸೀ ಕರೀ ಸಾವುಲೀ । ಐಸೇನಿ ನಿತ್ಯ ಬುದ್ಧಿ ಸಂಚಲೀ । ಮೀ ಆಣೀ ತಯಾತೇ ॥ ೧೫೩ ॥ ಮ್ಹಣೋನಿ ದೇಹಾಂತೀಚೇ ಸಾಂಕಡೇ । ಮಾಝ್ಯಯಾ ಕಾಹೀಚಿ ನ ಪಡೇ । ಮೀ ಆಪುಲಿಯಾಂತೇ ಆಪುಲೀಕಡೇ । ಸುಖೇಂಚೀ ಆಣೀ ॥ ೧೫೪ ॥ ವರಚೀಲ ದೇಹಾಚೀ ಗವಸಣೇ ಫೇಡುನೀ । ಆಹಾಚ ಅಹಂಕಾರಾಚೀ ರಜ ಝಾಡುನೀ।ಶುದ್ಧ ವಾಸನಾ ನಿವಡುನೀ । ಆಪಣಪಾ ಮೇಳವೀ ॥ ೧೫೫ ॥ ಆಣಿ ಭಕ್ತಾತರೀ ದೇಹೀ । ವಿಶೇಷ ಏಕವಂಕೀಚಾ ಠಾವ ನಾಹೀ । ಮ್ಹಣವೂನಿ ಅವ್ಹೇರ ಕರಿತಾ ಕಾಹೀ । ವಿಯೋಗ ಐಸಾ ನ ವಾಟೇ ॥ ೧೫೬ ॥ ನಾ ತರೀ ದೇಹಾಂತೀಚಿ ಮಿಯಾ ಯಾವೇ । ಮಗ ಆಪಣಚೇ ಯಾತೇ ನ್ಯಾವೇ । ಹೇಹೀ ನಾಹೀ ಜೇ ಸ್ವಭಾವೇ। ಜೇ ಆಧೀಂಚಿ ಮಜ ಮಿನಲೇ ॥ ೧೫೭ ॥ ಯೇರೀ ಶರೀರಾಚಿಯಾ ಸಲಿಲೀ । ಅಸತೇಪಣ ಹೇಚಿ ಸಾವುಲೀ । ವಾಹೂನಿ ಚಂದ್ರಿಕಾ ತೇ ಠೇಲೀ । ಚಂದ್ರೀಚ ಆಹೇ ॥ ೧೫೮ ॥ ಐಸೇ ಜೇ ನಿತ್ಯಯುಕ್ತ ।

ತಯಾಸಿ ಸುಲಭ ಮೀ ಸತತ । ಮ್ಹಣವೊನಿ ದೇಹಾಂತೀ ನಿಶ್ಚಿತ । ಮೀಚಿ ಹೋತೀ ॥ ೩೯ ॥ ಮಗ ಕ್ಲೇಶ ತರೂಚೀ ವಾಡೀ । ಜೇ ತಾಪತ್ರಯಾಗ್ನೀಚೀ ಸಗಡೀ । ಜೇ ಮೃತ್ಯುಕಾಕಾಸಿ ಕುರೋಂಡೀ । ಸಾಂಡಿಲೀ ಆಹೇ ॥ ೧೪೦ ॥ ಜೇ ದೈನ್ಯಾಚೇ ದುಭತೇ । ಜೇ ಸುಹಾಭಯಾತೇ ವಾಢವಿತೆ । ಜೇ ಸಕಳ ದುಃಖಾಚೇ ಪುರತೇ । ಭಾಂಡಪಲ ॥ ೪೧ ॥ ಜೇ ದುರ್ಮತೀಚೇ ಮೂಳ । ಜೇ ಕುಕರ್ಮಾಚೇ ಫಳ । ಜೇ ವ್ಯಾಮೋಹಾಚೇ ಕೇವಳ । ಸ್ವರೂಪಚಿ ॥ ೪೨ ॥ ಜೇ ಸಂಸಾರಾಚೇ ಬೈಸಣೇ । ಜೇ ವಿಕಾರಾಚೇ ಉದ್ಯಾನೇ । ಜೇ ಸಕಳ ರೋಗಾಂಚೇ ಭಾಣೇ । ವಾಢಿಲೇ ಆಹೇ ॥ ೪೩ ॥ ಜೇ ಕಾಳಾಚಾ ಖಿಚ ಉಶಿಟಾ । ಜೇ ಆಶೇಚಾ ಆಂಗವತಾ । ಜನ್ಮಮರಣಾಚಾ ವೋಲಿನಟಾ । ಸ್ವಭಾವೇ ಜೇ ॥ ೪೪ ॥ ಜೇ ಭುಲೀಚೇ ಭರಿವ । ಜೇ ವಿಕಲ್ಪಾಚೇ ವೋತಿವ । ಕಿಂಬಹುನಾ ಸೇವ । ವಿಂಚುವಾಂಚೇ ॥ ೪೫ ॥ ಜೇ ವ್ಯಾಘ್ರಾಚೇ ಕ್ಷೇತ್ರ । ಜೇ ಪಣ್ಯಾಂಗನಾಚೇ ಮಿತ್ರ । ಜೇ ವಿಷಯವಿಜ್ಞಾನಯಂತ್ರ । ಸುಪೂಜಿತ ॥ ೪೬ ॥ ಜೇ ಲಾವೇಚಾ ಕಳವಳಾ । ನಿವಾಲಿಯಾ ವಿಷೋದಕಾಚಾ ಗಳಾಳಾ । ಜೇ ವಿಶ್ವಾಸು ಆಂಗವಳಾ । ಸಂವಚೋರಾಚಾ ॥ ೪೭ ॥ ಜೇ ಕೋಧಿಯಾಚೇ ಜೇವ । ಜೇ ಕಾಳಸರ್ಪಾಚಾ ಮಾರ್ದವ । ಗೋರಿಯೇಚೇ ಸ್ವಭಾವ । ಗಾಯನ ಜೇ ॥ ೪೮ ॥ ಜೇ ವೈರಿಯಾಚಾ ಪಾಹುಣೇರ । ಜೇ ದುರ್ಜನಾಚಾ ಆದರ । ಹೇ ಅಸೋ ಜೇ ಸಾಗರ । ಅನರ್ಥಾಚಾ ॥ ೪೯ ॥ ಜೇ ಸ್ವಪ್ನೀ ದೇಖಿಲೇ ಸ್ವಪ್ನ । ಜೇ ಮೃಗಜಳೇ ಸಾಸಿನ್ನಲೇ ವನ । ಜೇಧೂಮ್ಯರಜಾಜೇ ಗಗನ । ಓತಲೇ ಆಹೇ ॥ ೫೦ ॥ ಐಸೇ ಜೇ ಹೇ ಶರೀರ । ತೇ ತೇ ನ ಪವತೀಚಿ ಪುಢತೀ ನರ । ಜೇ ಹೋವೊನಿ ಠೇಲೆ ಅಪಾರ । ಸ್ವರೂಪ ಮಾಝೇ ॥ ೫೧ ॥

ಅರ್ಥ— ಯಾವನು ವಿಷಯಸುಖಕ್ಕೆ ತಿಲಾಂಜಲಿಯನ್ನಿತ್ತು ವಿಷಯ ಸಂಗತಿಯಿಂದ ಉಂಟಾಗುವ ಎಲ್ಲ ಮನೋಬಯಕೆಗಳನ್ನು ಆವರಿಸಿ ಪ್ರತಿಬಂದಿಸಿ ನನ್ನನ್ನು ತನ್ನ ಹೃದಯದಲ್ಲಿಟ್ಟುಕೊಂಡು ಆ ಸುಖದ ಉಪಭೋಗವನ್ನು ತೆಗಿದುಕೊಳ್ಳುತ್ತಾನೆ. ಅವನಿಗೆ ಆ ಶಾಂತಿ ಸಮಾಧಿ ಸುಖದಲ್ಲಿ ಕ್ಷುಧಾ, ತೃಷಾ, ಮುಂತಾದವುಗಳ ಸ್ಮರಣವು ಸಹಾ ಉಳಿಯುವದಿಲ್ಲ. ಅಂದಬಳಿಕ ಯಃಕಶ್ಚಿತ ಆ ಬಡ ನೇತ್ರಗಳು ನಿದ್ರಾದಿಗಳ ಪಾಡೇನು ? ॥ ೨೫ ॥ ಈ ರೀತಿಯಿಂದ ನಿರಂತರ ನನ್ನ ಅನನ್ಯ ಭಕ್ತರಾಗಿ ತಮ್ಮ ಅಂತಃಕರಣದಲ್ಲಿ ಸದಾ ನನ್ನ ಚಿಂತನ ಒಂದನ್ನೇ ನೆಲೆಗೊಳಿಸಿ ಅದರಲ್ಲಿಯೇ ತಲ್ಲೀನರಾಗಿ, ಅವರು ಮದ್ರೂಪವಾಗಿಯೂ ಯಾರು ನನ್ನ ಸೇವಾ ಮಾಡುತ್ತಾರೋ, ॥ ೨೬ ॥ ಆ ನನ್ನ ಭಕ್ತರಿಗೆ ಯಾವಾಗ್ಗೆ ಅಂತ್ಯಕಾಲ ಸಮಿಾಪಬರುವದೋ, ತಗ್ಗೆ ಅವರು ನನ್ನ ಸ್ಮರಣ ಮಾಡುತ್ತಿರಲಿಕ್ಕಾಗಿ ನಾನು ಒಂದು ವೇಳೆ ಅವರ ಸಂಕಟ ಸಮಯಕ್ಕೆ ಒದಗದಿದ್ದರೆ ಅವರು ನನ್ನ ಭಕ್ತಿಯನ್ನು ಏಕೆ ಮಾಡಬೇಕು ? ಮತ್ತು ಅವರು ಮಾಡಿದ ಭಕ್ತಿಯ ಮಹತ್ವವೇನು ? ॥ ೧೨೭ ॥ ಹಾಗಾದರೂ ಯಾಕೆ, ಒಬ್ಬಾಸೊಬ್ಬ ದಾದ್ರುನು (ಅಭಕ್ತನು) ಅನಾಥನಾಗಿ ಸಂಕಟಪಡುವ ಸಮಯದಲ್ಲಿ ಬಹಳೇ ದೀನವಾಣಿಯಿಂದ ದೇವಾ ಓಡಿಬಾ (ಅಂತ್ಯಕಾಲದ ಈ ಸಂಕಟದಲ್ಲಿಂದ ನನ್ನನ್ನು ಮುಕ್ತನನ್ನಾಗಿ ಮಾಡು.) ಎಂದು ಕೂಗಿಕೊಂಡ ಕೂಡಲೆ ಅವನ ದುಃಖನಿವಾರಣೆ ಮಾಡುವದಕ್ಕಾಗಿ ಅವನ ಹತ್ತರ ನಾನು ಅವಶ್ಯವಾಗಿ ಹೋಗಬೇಕಾಗಿರುವದಿಲ್ಲೇನು ? ॥ ೨೮ ॥ ಮತ್ತು ನನ್ನ ಭಕ್ತರಿಗಾದರೂ ಅದೇ ಅವಸ್ಥೆಯು ಪ್ರಾಪ್ತವಾದರೆ, ಭಕ್ತಿಯ ಅಪೇಕ್ಷೆಯನ್ನಾದರೂ ಏಕೆ ಮಾಡಬೇಕು ? ಕಾರಣ ಭಕ್ತರು ಇಂಥ ಸಂಶಯವನ್ನು ಎಂದಿಗೂ ತಮ್ಮ ಮನಸಿನಲ್ಲಿ ತರಬಾರದು. ॥ ೨೯ ॥ ಅವರು ಯಾವ ವೇಳೆಗೆ ನನ್ನ ಸ್ಮರಣವಾಡುತ್ತಾರೋ, ಅದೇ ವೇಳೆಕ್ಕೆ ಅವರ ಆ ಸ್ಮರಣಕ್ಕೆ ನಾನು ನಿಶ್ಚಯವಾಗಿ ಒದಗುತ್ತೇನೆ. ಅವರ ಉಪಕಾರದ ಭಾರವು ನನ್ನ ಜೀವಕ್ಕೆ ಸ್ವಲ್ಪವಾದರೂ ಸಹನವಾಗುವದಿಲ್ಲ. ॥ ೩೦ ॥ ಆ ಸಾಲದ ಭಾರವನ್ನು (ನನ್ನ ಭಕ್ತರು) ನನ್ನ ತಲೆಯಮೇಲೆ ಹೊರಿಸಿರುತ್ತಾರೆಂದು ತಿಳಿದು, ಅವರ ಋಣದಿಂದ ಮುಕ್ತನಾಗುವದಕ್ಕಾಗಿ ನಾನು ಪರಾಧೀನನಂತೆ ಭಕ್ತರಿಗೆ ಅಡಿಯಾಳಾಗಿ ಭಕ್ತರ ಮರಣ ಕಾಲಕ್ಕೆ ನಾನು ಅವರ ಹತ್ತರದಲ್ಲಿಯೇ ಕುಳಿತು ಅವರ ಸೇವೆಯನ್ನು ಮಾಡುತ್ತೇನೆ. ॥ ೩೧ ॥ ಆ

ನನ್ನ ಪ್ರೀತಿಯ ಸುಳುಮಾರ ಭಕ್ತರಿಗೆ ದೇಹಪತನವಾಗುವ ಕಾಲಕ್ಕೆ ಆಗುವ ಸಂಕಟವೂ ಮರಣಭಯವೂ, ಆಗ ಬಾರದೆಂದು ನಾನು ಅವರಿಗೆ ಆತ್ಮಬೋಧದ ಕವಚವನ್ನು ಹಾಕಿ ಅದರಲ್ಲಿ ಇಡುತ್ತೇನೆ ॥ ೩೨ ॥ ಇದರ ಹೊರತು ಆ ಕವಚದ ಪಿಂಜರದಲ್ಲಿ ನನ್ನ ಸ್ಮರಣದ ಅಲ್ಪಾದಕಾರಕ ಶೀತಲವಾದ ಗಾರ ನೆರಳನ್ನು ಕೆಡವುತ್ತೇನೆ. ಹೀಗೆ ಆಗುವದರಿಂದ ಅವರ ಬುದ್ಧಿಯು ಯಾವಾಗಲೂ ನನ್ನ ಸ್ಮರಣದಲ್ಲಿ ಸ್ಥಿರವಾಗಿ ಉಳಿಯುತ್ತದೆ. ಅವರಿಗೆ ನಾನು ನನ್ನ ಸ್ವರೂಪ (ಸಾಯುಜ್ಯ) ಮುಕ್ತಿಯನ್ನು ಕೊಡುತ್ತೇನೆ. ॥ ೩೩ ॥ ಆದುದರಿಂದ ದೇಹದ ಅಂತ್ಯಕಾಲದ ದುಃಖವು ನನ್ನ ಭಕ್ತರಿಗೆ ಎಂದಿಗೂ ಆಗುವದಿಲ್ಲ. ಮತ್ತು ಯಾವನು ನನ್ನ ಭಕ್ತನಿರುವನು ಅವನಿಗೆ ನಾನು ಸುಖದಿಂದ ನನ್ನ (ಮೋಕ್ಷ) ಸ್ಥಾನದ ಕಡೆಗೆ ತರುತ್ತೇನೆ ॥ ೩೪ ॥ ಆತ್ಮದ ಮೇಲಿನ ದೇಹರೂಪಿ ಗವಸಣಿಕೆಯನ್ನು ತೆಗೆದು ಅಹಂಕಾರದ ಧೂಳಿಯನ್ನು ಝಾಡಿಸಿ, (ನಿರ್ಮಲಮಾಡಿ) ಕೇವಲ ಭಗವತ್ ಪ್ರಾಪ್ತಿಯ ವಾಸನೆಯಿಂದ ಅವನನ್ನು ಮದುಪನನ್ನಾಗಿ ಮಾಡುತ್ತೇನೆ. ॥ ೩೫ ॥ ಮತ್ತು ಭಕ್ತರಿಗಾದರೂ (ಅನಿತ್ಯವಾದ) ದೇಹದ ಸ್ಥಳದಲ್ಲಿ ಆಸಕ್ತಿ (ಪ್ರೇಮವು) ಇಲ್ಲದೇ ಇದ್ದದರಿಂದ ದೇಹತ್ಯಾಗವಾಗುವಾಗ್ಗೆ, ದೇಹವು ತಮ್ಮಿಂದ ವಿಯೋಗವಾಗುವದೆಂದು ಅವರಿಗೆ ದುಃಖವೆನಿಸುವದಿಲ್ಲ. ॥ ೩೬ ॥ ಕಾರಣ ದೇಹದ ಅಂತ್ಯಕಾಲ ಸಮಯದಲ್ಲಿ ಭಗವಂತನು (ನಾನು) ಬರಬೇಕು ಅವನು ತನ್ನ ಹತ್ತರ ಕರದೊಯ್ಯಬೇಕು ಎಂಬುವದಾದರೂ ಅವರ ಮನಸಿನಲ್ಲಿ ಬರುವದಿಲ್ಲ. ಯಾಕಂದರೆ ಅವರು ಪೂರ್ವದಲ್ಲಿಯೇ ನನ್ನನ್ನು ಕೂಡಿಕೊಂಡಿರುತ್ತಾರೆ. ॥ ೩೭ ॥ ಸಹಜನೇ ಅವರ ಶರೀರರೂಪಿ ನೀರಿನಲ್ಲಿ ಆತ್ಮಾ ಅದೆ ಎಂಬುವದು ಕಾಣುತ್ತಿರುವದೇನೋ ನಿಜ. ಆದರೆ ಅದು ಪ್ರತಿಬಿಂಬದಂತೆ ಮಿಥ್ಯವಾದದ್ದಿರುತ್ತದೆಂಬ ಭಾನನೆಯು ಅವರಲ್ಲಿರುತ್ತದೆ. ಯಾವ ಪ್ರಕಾರಾ ಬೆಳದಿಂಗಳು ಹೊರಗೆ ವಿಸ್ತಾರವಾದದ್ದು ಕಂಡಿಗೆ ಕಾಣುತ್ತದೆ, ಆದರೂ ನಿಜವಾಗಿ ನೋಡಿದರೆ ಚಂದ್ರನ ಸ್ಥಳದಲ್ಲಿಯೇ ಅದು ಇರುತ್ತದೆ. ॥ ೩೮ ॥ ಈ ತರದ ಬೋಧದಿಂದ ನನ್ನ ಸಂಗಡ ಯಾರು ಐಕ್ಯ ಹೊಂದಿರುತ್ತಾರೆ, ಅವರಿಗೆ ನಾನು ಯಾವಾಗಲೂ ಹತ್ತರವೇ ಇದ್ದೇನೆ. ಆದುದರಿಂದ ಅವರು ಮರಣದನಂತರ ನಿಶ್ಚಯದಿಂದ ನಂನನ್ನೇ ಆಶ್ರಯಿಸುತ್ತಾರೆ. ॥ ೩೯ ॥ ಆನೇಲೆ ಯಾವ ಶರೀರವು ಕ್ಲೇಶರೂಪಿ ವೃಕ್ಷಗಳಿಂದ ಕೂಡಿದ ವನವು, ಮತ್ತು ಅಧ್ಯಾತ್ಮ ಮುಂತಾದ ತ್ರಿವಿಧ ತಾಪತ್ರಯರೂಪಿ ಅಗ್ನಿಯ (ಉರಿಯುವ) ಅಗ್ನಿಹೋತ್ರಿಯು, ಮತ್ತು ಮೃತ್ಯುರೂಪಿ ಕಾಗಿಗೆ ನಿವಾಳಿ ಮಾಡಿ ವಗೆದ (ಕಾಕ) ಬಲಿಯು, ॥ ೧೪೦ ॥ ದೀನತ್ವವನ್ನು ಹುಟ್ಟಿಸುವಂಥದು ಮತ್ತು ಮೃತ್ಯುವಿನ ಭಯವನ್ನು ಬೆಳಿಸುವಂಥದು ಮತ್ತು ಸರ್ವ ದುಃಖದ ಪೂರ್ಣ ಭಾಂಡವಲವು ಇರುತ್ತದೆ. ॥೧೪೧॥ ಯಾವದು ದುಷ್ಟ ಬುದ್ಧಿಯ ಉತ್ಪತ್ತಿಸ್ಥಾನವು, ಮತ್ತು ಕೆಟ್ಟ ಬುದ್ಧಿಯ ಮೂಲವು, ಪೂರ್ವ ಜನ್ಮದ ಕೆಟ್ಟ ಕರ್ಮದ ಫಲವು, ಮತ್ತು ಅವಿವೇಕದ (ಭ್ರಾಂತಿಯ) ಕೇವಲ ಮೂರ್ತಿಮಂತ ಸ್ವರೂಪವು ಅದೆ. ॥ ೧೪೨ ॥ ಸಂಸಾರ ಸ್ಥಾಪನಾ ಮಾಡುವ ಸ್ಥಳವು ಮತ್ತು ಅಹಂಕಾರಮುಂತಾದ ವಿಕಾರರೂಪಿ ವೃಕ್ಷದ ವನವು, ಮತ್ತು ಸರ್ವ ರೋಗಗಳನ್ನು ಉಣ ಬಡಿಸಲಿಕ್ಕೆ ಇಟ್ಟ ಪಾತ್ರೆಯೇ ಆಗಿರುವದು. ॥ ೧೪೩ ॥ ಯಾವದು ಮೃತ್ಯುರೂಪಿ ಕಾಲನು ತಿಂದು ಉಳಿದ (ಯಂಜಲ) ಕಿಚಡಿಯು ಅದೆ. ಮತ್ತು ಯಾವದು ಮೂರ್ತಿಮಂತ ಆಶಾದ ಅಂಗ ಬಲವು ಮತ್ತು ಜನ್ಮ ಮೃತ್ಯುವಿನ ಸ್ವಭಾವಿಕವಾಗಿ ಹೋಗಿಬರುವ (ಲೈನ) ಮಾರ್ಗವಾಗಿರುವದು. ॥ ೧೪೪ ॥ ಮತ್ತು ಯಾವದು ಭ್ರಾಂತಿಯಿಂದ ತುಂಬದ, ಕೆಟ್ಟ ಸಂಶಯದಿಂದ ಸುರುವಿದ (ರಸವು) ಆಗಿರುವದು. ಬಹಳೇ ಹೇಳುವದೇನು ಜೇಳಿಸಿಂದ ತುಂಬಿದಹಗೆಯೇ ಆಗಿರುವದು. ॥ ೧೪೫ ॥ ಶರೀರವು ಹುಲಿಯ ವಸತಿಸ್ಥಾನವಾಗಿರುವದು. ಮತ್ತು ವೇಶ್ಯಾಸ್ತ್ರೀಯಳ ಸ್ನೇಹದಂತೆ (ಮನೋಹರ) ವಾಗಿರುವದು. ಮತ್ತು ವಿಷಯದ ಅನುಭವ ಮಾಡಿಕೊಡುವಂಥ ಉತ್ತಮ ಯಂತ್ರವೇ ಆಗಿರುವದು. ॥ ೧೪೬ ॥ ಯಾವದು ರಾಕ್ಷಸೀಯ (ಕಪಟ) ಕಳವಳವು ಅದೆ. ಮತ್ತು ವಿಷವನ್ನು ಬೆರಸಿದ ಶೀತಲವಾದ ಗಾರ ವಿಷೋದಕದ ಗುಟಕು, ಮತ್ತು ಸ್ನೇಹ ಭಾವದಿಂದ ನಡೆಯುವ ಸೋಗು ಹಾಕಿಕೊಂಡ ಮಹಾನುಭಾವ ಕಳ್ಳರ ವಿಶ್ವಾಸ ಸ್ಥಳವು ಇರುವದು. ॥೧೪೭॥ ಮತ್ತು ಅದು ರಕ್ತಪಿತ್ತ (ಮಹಾರೋಗ) ದಿಂದ ಗ್ರಸ್ತನಾದ ಮನುಷ್ಯನ ಆಲಿಂಗನದಂತೆ ಅದೆ. ॥ ೧೪೮ ॥ ಮತ್ತು ಅದು ನಿಶ್ಚಯವಾಗಿ ಮರಣವನ್ನು ತರುವಂಥ ಸರ್ಪಿನ ಅಂಗದ ಮುದುತನದಂತೆ ಇರುತ್ತದೆ. ಬೇಟಿಗಾರರು ಚಿಗರೆಯನ್ನು ಮೋಹಿಸಿ ಬಂಧನದಲ್ಲಿ ಕೆಡವುವ ಸ್ವಭಾವಿಕ ಗಾಯನವು ಅದೆ,

ಯಾವದು ಶತ್ರುವಿನ ಆದರ ಉಪಚಾರವು. ಮತ್ತು ದುಷ್ಟಜನರ ಸನ್ಮಾನವು ಆಗಿರುತ್ತದೆ. ಇದಂತೂ ಇರಲಿ ಬಹಳ ಹೇಳುವದೇನು ? ಅನರ್ಥದ ಸಮುದ್ರವೇ ಆಗಿರುವದು. । ೧೪೯ ॥ ಈ ಶರೀರವು ಸ್ವಪ್ನದಲ್ಲಿ ನೋಡಿದ ಸ್ವಪ್ನವು, ಅಥವಾ ಮೃಗಜಲದ ನೀರಿನಿಂದ ಬೆಳೆದು ಭರಕ್ಕೆ ಬಂದ ವನವು ಅದೆ. ಈ ಶರೀರವು ಅಂದರೆ ಹೊಗೆಯ ಧೂಮ್ರದಿಂದ ಮಾಡಿದ ಆಕಾಶವಿರುತ್ತದೆ. ॥ ೧೫೦ ॥ ಹೀಗೆ (ಅನರ್ಥಕಾರಕವಾದ ಮತ್ತು ಅಸತ್ಯವಾದ) ಯಾವ ಶರೀರವು, ಅದು ಯಾವ ಪುರುಷನು ನಂನ ಅಮರ್ಯಾದ ಸ್ವರೂಪ ಜ್ಞಾನದಿಂದ ಮದ್ರೂಪವಾಗಿ ಹೋಗಿರುವನೋ, ಅವನಿಗೆ ಇಂಥ (ನರಕರೂಪವಾದ) ಶರೀರವು ಪುನ್ಹಾ ಪ್ರಾಪ್ತಿಯಾಗುವದಿಲ್ಲ. ॥ ೧೫೧ ॥

ಆಬ್ರಹ್ಮಭುವನಾಲ್ಲೋಕಾಃ ಪುನರಾವರ್ತಿನೋಽರ್ಜುನ ।
ಮಾಮುಪೇತ್ಯ ತು ಕೌಂತೇಯ ಪುನರ್ಜನ್ಮ ನ ವಿದ್ಯತೇ ॥ ೧೬ ॥

[ಆ ಬ್ರಹ್ಮೇತಿ] ಯೇರ್ಹುವೀ ಬ್ರಹ್ಮಪಣಾಚಿಯೇ ಭಡಸೇ । ನ ಚುಕತೀಚಿ ಪುನರಾವೃತ್ತೀಚೆ ವಳಸೇ । ಪರೀ ನಿವಟಲಿಯಾಚೇ ಜೈಸೇ । ಪೋಟ ನ ದುಖೇ ॥ ೫೨ ॥ ನಾತರೀ ಜೇ ಈಲಿಯಾನಂತರೇ । ನ ಬುಡಿಜೇ ಸ್ವಪ್ನೀಚೇನಿ ಮಹಾಪೂರೆ । ತೇವೀ ಮಾತೇ ಪಾವಲೇ ತೇ ಸಂಸಾರೇ । ಲಿಂಪತೀಚಿ ನಾ ॥ ೫೩ ॥ ಯೇರವೀ ಜಗದಾಕಾರಾಚೇ ಸಿರೇ । ಜೇ ಚಿರಸ್ಥಾ ಈಯಾಂಜೇ ಧುರೇ । ಬ್ರಹ್ಮ ಭುವನಗಾ ಚನರೇ । ಲೋಕಾಚಳಾಚೇ ॥ ೫೪ ॥ ಜೆಯೀ ಗಾಂವೀಚಾ ಪಹಾರ ದಿವ್ಹೋವರೀ । ಏಕಾ ಅಮರೇಂದ್ರಾಚೇ ಆಯುಷ್ಯ ನ ಧರೀ । ವಿಳೋನಿ ಪಾಂತಿ ಉರೀ ಏಕ ಸರೀ ! ಚವದಾ ಜಣಾಂಚೀ ॥ ೫೫ ॥

ಅರ್ಥ— ಸಹಜ ಬ್ರಹ್ಮಪದದ ಅಗ್ರಸ್ಥಾನವು (ಮಹತ್ವವು) ಒಂದುನೇಳೆ ಪ್ರಾಪ್ತವಾದರೂ ಅಹಂಕಾರ ಇರೋವರೆಗೆ (ಬ್ರಹ್ಮವೇ ಸರಿಗೆ ಸಹಾ) ಪುನರ್ಜನ್ಮದ ಬರಹೋಗುವ ದಾರಿಯು ಬಿಡುಗಡೆಯಾಗುವದಿಲ್ಲ. ಆದರೆ ಮೃತಹೊಂದಿದ ಮನುಷ್ಯನ ಹೊಟ್ಟೆಯು ಹೇಗೆ ನೋಯುವದಿಲ್ಲವೋ, ॥ ೫೨ ॥ ಇಲ್ಲವೆ ಜಾಗ್ರತವಾದಮೇಲೆ ಸ್ವಪ್ನ ದೊಳಗಿನ ಮಹಾಪೂರ ನದಿಯಲ್ಲಿ ಹೇಗೆ ಯಾರೂ ಮುಳಗುವದಿಲ್ಲವೋ, ಅದೇ ಪ್ರಕಾರಾ ಯಾರು ನಂನ ಸ್ವರೂಪ ಪ್ರಾಪ್ತಿನಾಡಿಕೊಂಡರು, ಆ ಪರಮಪುರುಷರು ಸಂಸಾರದ ಬಂಧನದಲ್ಲಿ ಶಿಗುವದೇ ಇಲ್ಲ. ॥ ೧೫೩ ॥ ಸಹಜವೇ ಜಗದಾಕಾರದ ಶಿರೋಭಾಗವು, ಮತ್ತು ಸರ್ವ ಚಿರಸ್ಥಾಯಿ ಪದಾರ್ಥದಲ್ಲಿ ಅಗ್ರಗಣ್ಯವು, ಮತ್ತು ಸ್ವರ್ಗಾದಿ ಲೋಕ ರೂಪಿ ಪರ್ವತದ ಶಿಖರವು, ಯಾವ ಬ್ರಹ್ಮ ಭುವನವು ಅಂದರೆ ಸತ್ಯಲೋಕವು, ॥ ೧೫೪ ॥ ಆ ಸತ್ಯಲೋಕದ ಒಂದು ಪ್ರಹರದಿವಸದಲ್ಲಿ ಒಬ್ಬನಾದರೂ ಇಂದ್ರನ ಆಯುಷ್ಯವು ಉಳಿಯುವದಿಲ್ಲ (ಮುಗಿಯುತ್ತದೆ) ಆದರೆ ಯಾವ ಗ್ರಾಮದ ಒಂದು ಪ್ರಹರ ದಿವಸದಲ್ಲಿ ಒಂದೇ ಕಾಲಕ್ಕೆ ೧೪ ಮಂದಿ ಇಂದ್ರರು ಮೃತ್ಯು ಮುಖರಲ್ಲಿ ಬೀಳುತ್ತಾರೆ. ೫೫॥

ಸಹಸ್ರಯುಗಪರ್ಯಂತಮಹರ್ಯದ್ಬ್ರಹ್ಮಣೋ ವಿದುಃ ।
ರಾತ್ರಿಂ ಯುಗಸಹಸ್ರಾಂ ತಾಂ ತೇಽಹೋರಾತ್ರವಿದೋ ಜನಾಃ ॥ ೧೭ ॥

[ಸಹಸ್ರಯುಗಪರ್ಯಂತಮಿತಿ] ಜೈ ಚೌಕಡಿಯಾ ಸಹಸ್ರ ಜಾಯೇ । ತೈ ಠಾಯೇ ಠಾವೋ ವಿಳಚಿ ಹೋಯೇ । ಆಣಿ ತೈಸೇಂಚಿ ಸಹಸ್ರವರಿಯೇ ಪಾಹೆ । ರಾತ್ರೀ ಜೇಥ ॥ ೫೬ ॥ ಯೇವಢೇ ಅಹೋರಾತ್ರ ಜೇಥೀಂಚೇ । ತೇಣೇ ನ ಲೋಟತೀ ಜೇ ಭಾಗ್ಯಾಚೇ। ದೇಖತೀ ತೆ ಸ್ವರ್ಗಿಚೇ । ಚಿರಂಜೀವ ॥ ೫೭ ॥ ಯೇರಾ ಸುರಗಣಾಂಚೀ ನವಾಈ । ವಿಶೇಷ ಸಾಂಗಾವೀ ತೇಥ ಕಾಯೀ । ಮುದಲ ಇಂದ್ರಾಚೀಚಿ ದಶಾ ಪಾಹೀ । ಜೇ ದಿಹಾಚೇ ಚೌದಾ ॥೫೮॥ ಪರೀ ಬ್ರಹ್ಮಯಾಚಿಯಾಹಿ ಆಠಾ ಪ್ರಹರಾಂತೇ । ಆಪುಲಿಯಾ ಡೋಳಾ ದೇಖತೇ । ಜೇ ಅಹಾತಿ ಗಾ ತಯಾಂತೇ । ಅಹೋರಾತ್ರುನಿದ ಮ್ಹಣಜೇ ॥ ೫೯ ॥

ಅರ್ಥ— ಯಾವಾಗ್ಗೆ ನಾಲ್ಕು ಯುಗಗಳು ಸಾವಿರಸಾರೆ ತಿರಗುವವು ಆಗ್ಗೆ ಬ್ರಹ್ಮನಿಗೆ ನಿಜವಾಗಿ ಒಂದು ದಿವಸವಾಗುತ್ತದೆ. ಅದರಂತೆ ನಾಲ್ಕು ಯುಗಗಳು ಒಂದು ಸಾವಿರಸಾರೆ ತಿರುಗಿ ಬಂದಾಗ್ಗೆ, ಬ್ರಹ್ಮದೇವನಿಗೆ ಒಂದು ರಾತ್ರಿಯು ಆಗುತ್ತದೆ. ॥ ೧೫೬ ॥ ಇಷ್ಟು ದಿವಸ ಮತ್ತು ರಾತ್ರಿಯು (ಕೂಡಿ ಲಂಬ ಯುಗಗಳ ಪ್ರಮಾಣವು) ಎಲ್ಲಿ ಅದೆ ಅದನ್ನು ಭಾಗ್ಯವಾನ ಪುರುಷನು ಸಾಯದೇ ಆ ದಿವಸ ರಾತ್ರಿಗಳನ್ನು ನೋಡುತ್ತಾನೆ. ಅವನಿಗೆ ಸ್ವರ್ಗಲೋಕದ ಚಿರಂಜೀವನೆಂದು ಅನ್ನುತ್ತಾರೆ. ॥ ೧೫೭ ॥ ಸಹಜವೇ ಎಲ್ಲಿ ಮೂಲತಃ ಒಂದು ದಿವಸದಲ್ಲಿ ೧೪ ಮಂದಿ ಇಂದ್ರರು ಆಗಿ ಹೋಗುತ್ತಾರೆ (ಹೀಗೆ ಇಂದ್ರನ ಅವಸ್ಥೆಯೇ ಆದಮೇಲೆ) ಅಲ್ಲಿ ದೇವತಾಗಣವ ಪ್ರತಿಷ್ಠಾದ ವರ್ಣನವನ್ನು ಏನು ಮಾಡಬೇಕು ? ॥ ೫೮ ॥ ಆದರೆ ಬ್ರಾಹ್ಮದೇನರ ಎಂಟು ಪ್ರಹರಕ್ಕೆ ಯಾರು ತಂಮ ಕಂಣಿನಿಂದ ಪ್ರತ್ಯಕ್ಷ ನೋಡುತ್ತಾರೋ, ಅವರಿಗೆ ಬ್ರಹ್ಮದೇವರ ದಿನಸ ಮತ್ತು ರಾತ್ರಿಯನ್ನು ತಿಳಿಯುವವರೆಂದು ಅನ್ನುತ್ತಾರೆ. ॥ ೫೯ ॥

ಅವ್ಯಕ್ತಾದ್ವ್ಯಕ್ತಯಃ ಸರ್ವಾಃ ಪ್ರಭವಂತ್ಯಹರಾಗಮೇ ।
ರಾತ್ರ್ಯಾಗಮೇ ಪ್ರಲೀಯಂತೇ ತತ್ರೈವಾವ್ಯಕ್ತಸಂಜ್ಞಕೇ ॥ ೧೪ ॥
ಭೂತ ಗ್ರಾಮಃ ಸ ಏವಾಯಂ ಭೂತ್ವಾ ಭೂತ್ವಾ ಪ್ರಲೀಯತೆ ।
ರಾತ್ರ್ಯಾಗಮೇಽವಶಃ ಪಾರ್ಥ ಪ್ರಭವತ್ಯಹರಾಗಮೇ ॥ ೧೯ ॥

[ಅವ್ಯಕ್ತಾದ್ವ್ಯಕ್ತಯ ಇತಿ] ತಯೆ ಬ್ರಹ್ಮ ಭುವನೀ ದಿವಸೇ ವಾಹೇ । ತೇ ವೇಳೀ ಗಣನಾ ಕೇಹೀ ನ ಸಮಾಯೇ । ಐಸೇ ಅವ್ಯಕ್ತಾಚೇ ಹೋಯೇ । ವ್ಯಕ್ತ ವಿಶ್ವ ॥ ೧೬೦ ॥ ಪುಢತಿ ದಿಹಾಚೀ ಚೌಪಾಹಾರೀ ಫಿಟೇ । ಆಣಿ ಹಾ ಆಕಾರ ಸಮುದ್ರ ಆಟೇ । ಪಾಠೀ ತೈಸಾಚಿ ಮಗ ಪಾಹಾಟೇ । ಭರೋ ಲಾಗೇ ॥ ೬೧ ॥ ಶಾರದೀಯೇಚಿಯೇ ಪ್ರುನೇಶೀ । ಆಭ್ರೇ ಜರತೀ ಆಕಾಶೀ । ಮಗ ಗ್ರಿಷ್ಮಾಂತೀ ಜೈಸೀ । ನಿಗತೀ ಪುಢತೀ ॥ ೬೨ ॥ ತೈಸೀ ಬ್ರಹ್ಮದಿನಾಚಿಯೇ ಆದೀ । ಹೆ ಭೂತ ಸೃಷ್ಟೀಚೀ ಮಾಂದೀ । ಮಿಳೇ ಜನ ಸಹಸ್ರಾವಧೀ । ನಿಮಿತ್ತ ಪುರೇ ॥ ೬೩ ॥ ಪಾಠೀ ರಾತ್ರೀಚಾ ಅನಸರ ಹೋಯೇ । ಆಣಿ ವಿಶ್ವ ಅವ್ಯಕ್ತೀ ಲಯಾ ಜಾಯೇ । ತೋಹೀಯುಗಸಹಸ್ರ ಮೋಟಕಾ ಪಾಹೇ । ಆಣಿ ತೈಸೇಂಚಿ ರಚೇ ॥ ೬೪ ॥ ಜೇ ಸಾಂಗಾವಯಾ ಕಾಯ ಉಪಪತ್ತೀ । ಜೇ ಜಗಾಚಾ ಪ್ರಳಯೋ ಅಣಿ ಸಂಭೂತೀ । ಇಯೇ ಬ್ರಹ್ಮಭುವನೀಂಚಿಯಾ ಹೋತಿ । ಆಹೋ ರಾತ್ರಿಮಾಜೀ ॥ ೬೫ ॥ ಕೈಸೇ ಥೋರಿಯೇಚೇ ಮಾನ ಪಾಹೇ ವಾ । ತೋ ಸೃಷ್ಟಿ ಬೀಜಾಚಾ ಸಾಂಟೋಪಾ । ಪರೀ ಪುನರಾವೃತ್ತೀಚಿಯಾ ಮಾಪಾ । ಶೀಗ ಜಾಹಾಲಾ ॥ ೬೬ ॥ ಯೇರ್ಹವೀ ತ್ರೈಲೋಕ್ಯ ಹೇ ಧನುರ್ಧರಾ । ತಿಯೇ ಗಾವೀಂಚಾ ಗಾ ಪಸಾರಾ । ತೋ ಹಾ ದಿನೋದಯೀ ಏಕಸರಾ । ಮಾಂಡತ ಅಸೇ ॥ ೬೭ ॥ ವಾಠೀ ರಾತ್ರೀಜಾ ಸಮೋಪಾವೇ । ಆಣಿ ಆಪೈಸಾಚೀ ಸಾಂತವೇ । ಮ್ಹಣಿಯೇ ಜೀಥೀಂಚೀ ತೇಥ ಸ್ವಭಾವೇ । ಸಾವ್ಯಾಸಿಯೇ ॥ ೬೮ ॥ ಜೈಸೇ ನೈಷ್ಪಣ ಬೀಜಾಸಿ ಆಲೇ । ಕೀ ಮೇಘ ಹೇ ಗಗನ ಜಾಹಾಲೇ । ತೈಸೇ ಅನೇಕತ್ವ ಜೇಥ ಸಾಮಾವಲೇ । ತೇ ಸಾಮ್ಯ ಮ್ಹಣಿಸೇ ॥ ೬೯ ॥

ಅರ್ಥ— ಆ ಬ್ರಹ್ಮಲೋಕದಲ್ಲಿ ದಿವಸವು ಯಾವಾಗ್ಗೆ ಉದಯವಾಗುತ್ತದೆ. ಆ ವೇಳೆಕ್ಕೆ ನಿರಾಕಾರದಿಂದ ಸಾಕಾರವಿಶ್ವವು ಯಾವರೀತಿಯಿಂದ ಉತ್ಪನ್ನವಾಗುವದೆಂಬವದನು ನೋಡಿದರೆ, ಅದರ ಪ್ರಮಾಣವ ಗಣಿತೆಯನ್ನು ಮಾಡಲು ಬರುವಂತೆ ಇರುವದಿಲ್ಲ. ॥೧೬೦॥ ಮುಂದೆ ಆ ದಿವಸದ ನಾಲ್ಕು ಪ್ರಹರಗಳು ಮುಗಿದು ಹೋದಮೇಲೆ, ಈ ವಿಶ್ವವು ಇಲ್ಲದಂತೆ ಆಗುತ್ತದೆ. ಮತ್ತೆ ಮರಳಿ ಸೂರ್ಯೋದಯವಾದಮೇಲೆ ಮೊದಲಿನಂತೆ ತುಂಬಲಿಕ್ಕೆ ಹತ್ತುತ್ತದೆ. ॥೧೬೧॥ ಶರತ್ಕಾಲದ ಆರಂಭದಲ್ಲಿ ಅಭ್ರಗಳು ಆಕಾಶದಲ್ಲಿ ಇಲ್ಲದಂತೆ ಆಗುತ್ತವೆ. ಅವೇ ಮರಳಿ ಗ್ರೀಷ್ಮಋತುವು ಮುಗಿ

ಯುವ ಸಂಧಿಗೆ ಉತ್ಪನ್ನವಾಗುತ್ತವೆ. ॥ ೧೬೨॥ ಅದೇ ಪ್ರಕಾರಾ ಬ್ರಹ್ಮದೇವರ ದಿವಸದ ಆರಂಭದಲ್ಲಿ ಭೂತ ಸೃಷ್ಟಿಯ ಸಮುದಾಯವು ಏಕತ್ರವಾಗುತ್ತದೆ. ಅದು ನಾಲ್ಕು ಯುಗಗಳು ಸಾವಿರಸಾರಿ ತಿರುಗಿ ಬರೋವರೆಗೆ ಇರುತ್ತದೆ. ॥ ೧೬೩ ॥ ಹಿಂದಿನಿಂದ ಬ್ರಹ್ಮದೇವರ ರಾತ್ರಿ ಸಮಯ ಬರಲು, ಈ ವಿಶ್ವವು ನಿರಾಕಾರದಲ್ಲಿ ಲಯವನ್ನು ಹೊಂದುತ್ತದೆ. ಅದಾದರೂ ಪೂರ್ವೋಕ್ತ ಕಾಲವು ಹೋದಮೇಲೆ ಉದಯಕಾಲದಲ್ಲಿ ಪೂರ್ವದಂತೆ ಆಗುತ್ತದೆ. ॥ ೧೬೪ ॥ ಈ ರೀತಿಯಿಂದ ವಿಶ್ವದ ರಚನೆಯು ಆಗುತ್ತಿರುತ್ತದೆ. ಆದನ್ನು ಹೇಳುವ ಉದ್ದಿಶ್ಯವು ಯಾವದೆಂದರೆ ಈ ಬ್ರಹ್ಮದೇವರ ದಿವಸ ಮತ್ತು ರಾತ್ರಿಯಲ್ಲಿ ಈಜಗತ್ಯದ ಉತ್ಪತ್ತಿ ಮತ್ತು ನಾಶವು ಆಗುತ್ತಿರುತ್ತದೆ. ॥ ೧೬೫ ॥ ಅದರ ಮಹತ್ವವು ಯೋಗ್ಯತೆಯು ಹೇಗೆ ಇರುವದೆಂದು ನೋಡಲಿಕ್ಕೆ ಹೋದರೆ ಆ ಬ್ರಹ್ಮದೇವನು ಸೃಷ್ಟಿಯ ಬೀಜದ ಭಾಂಡಾರವೇ ಆಗಿರುವನು. ಆದರೆ ಅವನೂಸಹಾಜನನಮರಣದಆಧೀನನಾಗಿರುತ್ತಾನೆ. ॥ ೧೬೬ ॥ ಎಲೋ ಧನುರ್ಧರನೇ ! ವಿಚಾರನೂಡಿ ನೋಡಲು ಈ ಮೂರೂ ಲೋಕ ಸೃಷ್ಟಿಯ ವಿಸ್ತಾರವು ಸತ್ಯಲೋಕ ನಾಯಕನ ಭಾಂಡಾರವು ಇದ್ದು ಬ್ರಹ್ಮದೇವರ ದಿವಸವು ಉದಯವಾದಕೂಡಲೆ ಇದು ಒಂದೇ ಸವನೆ ತುಂಬಲಿಕ್ಕೆ ಹತ್ತುತ್ತದೆ. ॥ ೧೬೭ ॥ ಹಿಂದಿನಿಂದ ರಾತ್ರಿಆಗುವ ಸಮಯ ಬಂದೊದಗಲು, ಅದು ತನ್ನಿಂದ ತಾನೇ ಅವ್ಯಕ್ತದಲ್ಲಿ ಲಯಹೊಂದುತ್ತದೆ. ಮತ್ತು ಈಪಂಚ ಮಹಾಭೂತ ಮುಂತಾದವುಗಳು ಬ್ರಹ್ಮದೇವರ ಆಜ್ಞೆಯಿಂದ ಸಹಜವಾಗಿ ಅಲ್ಲಿಂದಲ್ಲಿ ಲಯಹೊಂದುತ್ತವೆ. ॥ ೧೬೮ ॥ ಯಾವಪ್ರಕಾರ ಗಿಡವು ಬೀಜ ರೂಪದಿಂದ ಅಡಗುತ್ತದೆ, ಇಲ್ಲವೇ ಪೇಷನು ಆಕಾಶ ರೂಪವಾಗುತ್ತದೆ, ಅದೇಪ್ರಕಾರ ಪ್ರಕೃತಿಯ ಸ್ಥಳದಲ್ಲಿ ಬಹಳೊಂದು ವಸ್ತುವಿನ ಸಮಾನೇಶ ವಾಗುತ್ತದೆ. ಅದಕ್ಕೆ ಸಾಮ್ಯವೆಂದು ಅನ್ನುತ್ತಾರೆ. ॥ ೧೬೯ ॥

ಪರಸ್ತಸ್ಮಾತ್ತು ಭಾವೋಽನ್ಯೋಽವ್ಯಕ್ತೋಽವ್ಯಕ್ತಾತ್ಸನಾತನಃ ।
ಯಃ ಸ ಸರ್ವೇಷು ಭೂತೇಷು ನಶ್ಯತ್ಸು ನ ವಿನಶ್ಯತಿ ॥ ೨೦ ॥

[ಪರಸ್ತಸ್ಮಾತ್ತು ಭಾವ ಇತಿ] ತೇಧ ಸಮುವಿಷನು ನದಿಸೇ ಕಾಹೀ । ನ್ಯೂನೊನಿ ಭೂತೇ ಹೀ ಭಾಷನಾಹೀ । ಜೇವೀ ದುಧಚಿ ಜಾಹಾಲಿಯಾ ದಹೀ ನಾಮರೂಪ ಜಾಯ ॥ ೧೭೦ ॥ ತೇವೀ ಆಕಾರ ಲೋಪಾ ಸರಿಸೇ । ಜಗಾಜೇ ಜಗಪಣ ಭ್ರುಂಶೇ । ಪರೀ ಜೇಥೆ ಜಾಹಾಲೇ ತೇ ಜೈಸೇ । ತೈಸೇಂಚಿ ಅಸೇ ॥ ೭೧ ॥ ತೈ ತಯಾ ನಾವ ಸಹಜ ಅವ್ಯಕ್ತ । ಆಣಿ ಆಕಾರಾಯೇ ತೇಚಿವ್ಯಕ್ತ । ಹೇ ಏಕಾಸ್ತವ ಏಕ ಸೂಚಿತ । ಯೇರ್ಹವೀ ದೋನೀ ನಾಹೀ ॥ ೭೨ ॥ ಜೈಸೇ ಆಟಲಿಯಾ ರುಪೇ । ಆಟಲೇಪಣ ತೇ ಖೋಟೇ ಮ್ಹಣಿಪೇ । ಪುಢತೀ ತೋ ಘನಾಕಾರ ಹಾರಪೇ । ಜೇ ನೇಣೇ ಅಳಂಕಾರ ಹೋತೀ ॥ ೭೩ ॥ ಹೀ ದೋನ್ಹೀ ಜೈಸೀ ಹೋಣೀ । ಏಕೀ ಸಾಕ್ಷೀಭೂತ ಸುವರ್ಣೀ । ತೈಸೀ ವ್ಯಕ್ತಾವ್ಯಕ್ತಚೀ ಕಡಸಣೀ । ವಸ್ತೂಚ್ಯಾ ಠಾಯೀ ॥ ೭೪ ॥ ತೇ ತರೀ ವ್ಯಕ್ತನಾ ಅವ್ಯಕ್ತ । ನಿತ್ಯನಾ ನಾಶವಂತ । ಯಾದೋಹೀ ಭಾವಾ ಅತೀತ । ಅನಾದಿಸಿದ್ಧ ॥ ೭೫ ॥ ಜೀ ಹೆ ವಿಶ್ವಚಿ ಹೋವೂನಿ ಅಸೇ । ಪರೀ ವಿಶ್ವಪಣ ನಾಸಲೇನಿ ನ ನಾಸೇ । ಅಕ್ಷವೇ ಪುಸಿಲ್ಯಾ ನ ಪುಸೇ । ಅರ್ಥ ಜೈಸಾ ॥ ೭೬ ॥ ಪಾಹೇ ಪಾ ತರಂಗ ತೋ ಹೋತ ಜಾತ । ಪರೀ ತೇಥ ಉದಕ ತೇ ಅಖಂಡ ಅಸತ । ತೇವೀ ಭೂತಾಭಾವೀ ನ ನಾಶತ । ಅವಿನಾಶ ಜೇ ॥ ೭೭ ॥ ನಾತರೀ ಅಟತಿಯೇ ಅಳಂಕಾರೀ । ನಾಟತೇ ಕನಕ ಅಸೇ ಜಯಾ ಪರೀ । ತೇವೀ ಮರತಿಯೇ ಜೀವಕಾರೀ । ಅಮರ ಜೇ ಅಹೇ ॥ ೭೮ ॥

ಅರ್ಥ – ಆ ಸಾಮ್ಯದಲ್ಲಿ ನ್ಯೂನಾಧಿಕತೆಗಳೂ ಕಂಡುಬರುವದಿಲ್ಲ. ಆದುದರಿಂದ ಅದು ಭೂತವೆಂಬ ಹೆಸರು ಹೊಂದುವದಿಲ್ಲ. ಹಾಲಿನಿಂದ ಮೊಸರು ಆದಮೇಲೆ ಆ ಹಾಲಿನ ಹೆಸರು ಮತ್ತು ರೂಪಗಳು ಇಲ್ಲದಂತೆ ಆಗುತ್ತವೆ. ॥ ೧೭೦ ॥ ಅದೇ ಪ್ರಕಾರಾ ಆಕಾರದ ನಾಶ ಆದಕೂಡಲೆ ಜಗತ್ಯದ ಜಗತ್ಯವೆಂಬ ಹೆಸರು ಇಲ್ಲದಂತೆ ಆಗುತ್ತದೆ. ಆದರೆ ಯಾವದರಿಂದ ಇದು ಆಗಿರುತ್ತದೆ. ಆಸ್ಥಳದಲ್ಲಿ ಅದು ಇದ್ದಕ್ಕಿದ್ದಂತೆ ಇರುತ್ತದೆ. ॥ ೧೭೧ ॥

ಆಗ್ಗೆ ಸ್ವಾಭಾವಿಕವಾಗಿ ಅದರ ಹೆಸರು ಅವ್ಯಕ್ತವೆಂದೆನ್ನುತ್ತಾರೆ. ಇವುಗಳು ಒಂದನ್ನೊಂದು ತೋರಿಸುವಂಥ ವಾಗಿರುತ್ತವೆ. ಆದರೆ ಸ್ವರೂಪ ದೃಷ್ಟಿಯಿಂದ ನೋಡಲು ಎರಡು ಇರುವದಿಲ್ಲ. । ೧೭೨ ॥ ಯಾವಪ್ರಕಾರ ಅಲಂಕಾ ರಗಳನ್ನು ಕರಗಿಸಿದ ಮೇಲೆ ಅದರ ಆಕಾರಕ್ಕೆ ಘಟ್ಟ ಎಂದೆನ್ನುತ್ತಾರೆ, ಮುಂದೆ ಆಘಟ್ಟವನ್ನು ಕರಗಿಸಿ ಅಲಂ ಕಾರ ಮಾಡಿದಬಳಿಕ ಘಟ್ಟವೆಂಬ ಹೆಸರು ಲೋಪಹೊಂದುತ್ತದೆ. ॥ ೧೭೩ ॥ ಅಲಂಕಾರ ಮತ್ತು ಘಟ್ಟ ಈ ಎರಡು ರೂಪಾಂತರಗಳು ಒಂದು ಆಧಾರ ಭೂತವಾದ ಬಂಗಾರವೇ ಇರುತ್ತದೆ. ಅದರಂತೆ ಆಕಾರ (ಜಗ) ಮತ್ತು ನಿರಾಕಾರ (ಮಾಯಾ) ಇವುಗಳ ವಿಚಾರವು ಪರಬ್ರಹ್ಮನ ಸ್ಥಳದಲ್ಲಿಯೇ ಉಂಟಾಗುತ್ತದೆ. ॥ ೧೭೪ ॥ ಆಬ್ರಹ್ಮವು ಮಾತ್ರ ವ್ಯಕ್ತಇರುವದಿಲ್ಲ. ಮತ್ತು ಅವ್ಯಕ್ತವೂ, ಇರುವದಿಲ್ಲ. ಅದು ಉತ್ಪನ್ನ ಮತ್ತು ನಾಶ ಹೊಂದುವದಿಲ್ಲ. ಆದರೆ ಆ ಎರಡೂ ಸ್ಥಿತಿಯ ಆಚೆಕಡೆಗೆ ಅನಾದಿ ಸಿದ್ಧವಾದದ್ದಿರುತ್ತದೆ. ॥ ೧೭೫ ॥ ಆ ಬ್ರಹ್ಮವು ವಿಶ್ವಾಕಾರವಾಗಿರುತ್ತದೆ. ಆದರೆ ವಿಶ್ವತನವು ಲಯಕ್ಕೆ ಹೊಂದಿದರೂ ಅದು ಲಯ ಹೊಂದುವದಿಲ್ಲ. ಯಾವ ಪ್ರಕಾರಾ ಬರೆದ ಅಕ್ಷರಗಳನ್ನು ವರಸಿ ಬಿಟ್ಟರೂ, ಅದರಿಂದ ಆಗುವ ಬೋಧವು ಇಲ್ಲದಂತೆ ಆಗುವದಿಲ್ಲ ॥ ೧೭೬ ॥ ಹೀಗೆ ನೋಡು, ನೀರಿನ ಮೇಲೆ ತೆರೆಗಳು ಬರುತ್ತವೆ ಮತ್ತು ಹೋಗುತ್ತವೆ. ನೀರು ಯಾವಾಗಲೂ ಸ್ಥಿರ ವಾಗಿರುತ್ತದೆ. ಅದರಂತೆ ನಾಶಿವಂತ ಪ್ರಾಣಿಮಾತ್ರಗಳಲ್ಲಿ ಅವುಗಳಿಗೆ ಆಧಾರಭೂತವಾದಂಥ ಯಾವ ಬ್ರಹ್ಮವು ಅದು ಅವಿನಾಶವೇ ಇರುತ್ತದೆ. ॥ ೧೭೭ ॥ ಇಲ್ಲವೇ ಅಲಂಕಾರವು ಅಟ್ಟಿಸಿ ಹೋದ ಮೇಲೆ ಬಂಗಾರವು ಹೇಗೆ ಅಟ್ಟಿಸಿ ಹೋಗುವದಿಲ್ಲ. ಅದರಂತೆ ಮೃತ್ಯು ಮುಖದಲ್ಲಿ ಬೀಳುವಂಥ ಈ ಶರೀರದಲ್ಲಿ ಅವರು ಅಮರರಾಗಿದ್ದಾರೆ ॥೧೭೮॥

ಅವ್ಯಕ್ತೋಽಕ್ಷರ ಇತ್ಯುಕ್ತಸ್ತಮಾಹುಃ ಪರಮಾಂ ಗತಿಂ ।
ಯಂ ಪ್ರಾಪ್ಯ ನ ನಿವರ್ತಂತೇ ತದ್ಧಾಮ ಪರಮಂ ಮಮ ॥ ೨೧ ॥
ಪುರುಷಃ ಸ ಪರಃ ಪಾರ್ಥ ಭಕ್ತ್ಯಾ ಲಭ್ಯಸ್ತ್ವನನ್ಯಯಾ ।
ಯಸ್ಯಾಂತಃಸ್ಥಾನಿ ಭೂತಾನಿ ಯೇನ ಸರ್ವಮಿದಂ ತತಂ ॥ ೨೨ ॥

[ಅವ್ಯಕ್ತ ಇತಿ] ಜಯಾತೇ ಅವ್ಯಕ್ತ ಮ್ಹಣೋ ಯೇ ಕೋಡೇ । ಮ್ಹಣತಾ ಸ್ತುತಿ ಹೇ ಐಸೇ ನಾವಡೇ । ಜೇ ಮನಬುದ್ಧೀ ನ ಸಾಂಪಡೇ । ಮ್ಹಣವೂನಿಯಾ ॥ ೬೯ ॥ ಆಣಿ ಆಕಾರಾ ಆಲಿಯಾ ಜಯಾಚೇ । ನಿರಾಕಾರ ಪಣ ನ ನವಚೇ । ಆಕಾರ ಲೋಪೇ ನ ವಿಸಂಚೇ । ಸತ್ಯತಾಗಾ ॥ ೭೦ ॥ ಮ್ಹಣೋನಿ ಅಕ್ಷರ ಜೇ ಮ್ಹಣಿಜೇ । ತೇವೀಂಚಿ ಮ್ಹಣತಾ ಬೋಧಹೀ ಉಪಜೇ । ಜಯಾ ಪರೌತಾ ಪೈಸ ನ ದೇಖಿಜೇ । ಯಾ ನಾಮ ಪರಮಗತೀ ॥ ೭೧ ॥ ಪರೀ ಆಘವಾ ಇಹೀ ದೇಹ ಪುರೀ । ಆಹೆ ನಿಜೇಲಿಯಾಚೇ ಪರೀ । ಜೇ ವ್ಯಾಪಾರ ಕರವಿ' ನಾ ಕರೀ । ಮ್ಹಣವೂನಿಯಾ ॥ ೭೨ ॥ ಯೇರ್ಹವಿ ಜೇ ಶಾರೀರ ಚೇಷ್ಟಾ । ತ್ಯಾ ಮಾಜೀ ಏಕಿಹೀ ನ ಠಕೇ ಗಾ ಸುಭಟಾ । ದಾಹೀ ಇಂದ್ರಿಯಾಚಿಯಾ ವಾಟಾ । ವಾಹತಚಿ ಆಹಾತೀ ॥ ೭೩ ॥ ಉಕಲೂನಿ ವಿಷಯಾಂಚಾ ಪೇಟಾ । ಹೋತ ಮನಾಚಾ ಚೋಹಟಾ । ತೋ ಸುಖದುಃಖಾಚಾ ರಾಜವಾಟಾ । ಭಿತರಾಹೀ ಪಾವೇ ॥ ೭೪ ॥ ಪರೀ ರಾವೋ ಪಹುಡಲಿಯಾ ಸುಖೇ । ಜೈಸಾ ದೇಶೀಂಚಾ ವ್ಯಾಪಾರ ನ ಠಕೇ । ಪ್ರಜಾಆಪುಲಾಲೇನಿ ಅಭಿಲಾಖೇ । ಕರಿತೀಚ ಅಸತೀ ॥ ೭೫ ॥ ತೈಸೇ ಬುದ್ಧೀಚೇ ಹನ ಜಾಣಣೇ । ಕಾ ಮನಾಚೇ ದೇಣೇ ಘೇಣೇ । ಇಂದ್ರಿಯಾಂಚೇ ಕರಣೇ । ಸ್ಫುರಣ ವಾಯೂಚೇ ॥ ೭೬ ॥ ಹೇ ದೇಹಕ್ರಿಯಾ ಆಘವೀ । ನ ಕರಿತಾ ಹೋಯ ಬರವೀ । ಜೈಸಾ ನ ಚಲವಿತೇನಿ ರವೀ । ಲೋಕಚಾಲೇ ॥ ೭೭ ॥ ಅರ್ಜುನಾ ತಯಾ ಪರೀ । ಸುತಲಾ ಐಸಾ ಆಹೇ ಶರೀರೀ । ಮ್ಹಣೋನಿ ಪುರುಷಗಾ ಅವಧಾರೀ । ಮ್ಹಣಿಪೇ ಜಯಾತೇ ॥ ೭೮ ॥

ಆಣಿ ಪ್ರಕೃತಿ ಪತಿವೃತೇ । ಪಡಿಲಾ ಏಕ ಪತ್ನೀ ವೃತೇ । ಯೇಣೇಹೀ ಕಾರಣೇ ಜಯಾತೇ ।
ಪುರುಷ ವ್ಹಣೋಯೇ ॥ ೮೯ ॥ ಪೈ ವೇದಾಂಚೇ ಬಹುವಸ ಪಣ । ದೇವೇಚಿನಾ ಜಯಾಂಚೇ
ಆಂಗಣ । ಹೇ ಗಗನಾಚೇ ಪಾಂಘುರಣ । ಹೋಯ ದೇಖಾ ॥ ೯೦ ॥ ಏಸೇ ಜಾಣೂನಿ
ಯೋಗೇಶ್ವರ । ಜಯಾತೇ ವ್ಹಣತೀ ಪರಾತ್ಪರ । ಜೇ ಅನನ್ಯ ಗತೀಚೇ ಘರ । ಗಿವಸೀತಯೇ ॥ ೯೧ ॥
ಜೇ ತನೂವಾಚಾ ಚಿತ್ತೇ । ನಾಇಕತೀ ದುಜಿಯೇ ಗೋಷ್ಟೀತೇ । ತಯಾ ಏಕನಿಷ್ಠಾಂಚೇ
ಪಿಕತೇ । ಸುಕ್ಷೇತ್ರ ಜೇ ॥ ೯೨ ॥ ಹೇ ತ್ರೈಲೋಕ್ಯಚಿ ಪುರುಷೋತ್ತಮ । ಐಸಾ ಸಾಚಾ
ಜಯಾಚಾ ಮನೋಧರ್ಮ । ತಯಾ ಆಸ್ತಿಕಾಚಾ ಆಶ್ರಮ । ಪಾಂಡವಾ ಗಾ ॥ ೯೩ ॥ ಜೇ
ನಿಗರ್ವಾಚೇ ಗೌರವ । ಜೇ ನಿರ್ಗುಣಾಚೀ ಜಾಣಿವ । ಜೇ ಸುಖಾಚೀ ರಾಣಿವ । ನಿರಾಶಾಂಸೀ
॥ ೯೪ ॥ ಜೇ ಸಂತೋಷಿಯಾ ವಾಢಿಲೇ ತಾಟ । ಜೇ ಅಚಿಂತಾ ಅನಾಥಾ ಚೇ ಮಾಯ ಪೋಟ ।
ಭಕ್ತೀಸೀ ಉಜೂ ವಾಟ । ಜಯಾ ಗಾಂವಾ ॥ ೯೫ ॥ ಹೇ ಏಕೈಕ ಸಾಂಗೋನಿ ವಾಯಾ । ಕಾಯ
ಫಾರ ಕರೂ ಧನಂಜಯಾ । ಪೈ ಗೇಲಿಯಾ ಜಯಾ ಠಾಯಾ । ತೋ ಠಾವೋಚಿ ಹೋಇಜೇ
॥ ೯೬ ॥ ಹಿವಾಚಿಯಾ ಝುಳುಕಾ । ಜೈಸೇ ಹಿ ವಚಿ ಪಡೇ ಉಷ್ಣೋದಕಾ । ಕಾ ಸಮೋರಾ
ಜಾಲಿಯಾ ಅರ್ಕಾ । ತನುಚಿ ಪ್ರಕಾಶ ಹೋಯೇ ॥ ೯೭ ॥ ತೈಸಾ ಸಂಸಾರ ಜಯಾ ಗಾಂವಾ ।
ಗೇಲಾ ಸಾಂತಾ ಪಾಂಡವಾ । ಹೋವೂನಿ ಠಾಕೇ ಆಘವಾ । ಮೊಕ್ಷಾಚಾ ॥ ೯೮ ॥ ತರೀ
ಅಗ್ನಿ ಮಾಜೀ ಆಲೇ । ಜೈಸೇ ಇಂಧನಚೀ ಅಗ್ನಿ ಜಾಹಾಲೇ । ಪಾಕಿ ನ ನಿವಡೇಚಿ ಕಾಂಹೀ
ಕೇಲೇ । ಕಾಷ್ಠ ಪಣ ॥ ೯೯ ॥ ನಾತರೀ ಸಾಖರೇಚಾ ಮಾಘೌತಾ । ಬುದ್ಧಿವಂತ ಪಣೇ ಹೀ
ಕರಿತಾ । ಫರೀ ಊಂಸ ನವ್ಹೇ ಪಾಂಡುಸುತಾ । ಜಿಯಾ ಪರೀ ॥ ೧೦೦ ॥ ಲೋಹಾಜೇ ಕನಕ
ಜಾಹಾಲೇ । ಹೇ ಏಕೇ ಪರಿಸೇಂಚಿ ಕೇಲೇ । ಆಕಾ ಆಣಿಕ ಕೈಚೇ ತೇ ಗೇಲೇ । ಲೋಹತ್ವ
ಆಣಿ ॥ ೧೦೧ ॥ ವ್ಹಣೋನಿ ತೂಪ ಹೋವೂನಿ ಮಾಘೌತೇ । ಜೇವೀ ದೂಧಪಣಾ ನ ಯೇಚಿ
ನಿರುತೇ । ತೇವಿ ಪಾವೋನಿಯಾ ಜಯಾತೇ ಪುನರಾವೃತ್ತಿ ನಾಹೀ ॥ ೨ ॥ ತೇ ಮಾಝೇ ಪರಮ ।
ಸಾಚೋ ಕಾರೇ ನಿಜಧಾಮ । ಹೇ ಅಂತುವಟ ತುಜ ವರ್ಮ ದಾವಿಜತ ಅಸೇ ॥ ೩ ॥

ಅರ್ಥ— ಕೌತುಕದೋಳ್ ಅವ್ಯಕ್ತವೆಂದರೆ ಆ ಪರಬ್ರಹ್ಮನ ಸ್ತೋತ್ರವಾಗಲಾರದು. ಕಾರಣವೇನಂದರೆ ಅದು ಮನಬುದ್ಧಿಗೆ ಅಗೋಚರವಾಗಿರುವದು. ॥ ೧೮೯ ॥ ಅರ್ಜುನನೇ ! ಆಕಾರಕ್ಕೆ ಬರುವದರಿಂದ ಯಾವದರ ನಿರಾಕಾರತ್ವವು ನಾಶಹೊಂದುವದಿಲ್ಲ. ಮತ್ತು ಆಕಾರದ ಲೋಪವಾಗಲು ಅದರ ನಿತ್ಯತೆಯು ಹಾಳಾಗಿ ಹೋಗುವದಿಲ್ಲ. ॥೧೪೦॥ ಆದುದರಿಂದ ಯಾವ (ಬ್ರಹ್ಮವಿಗೆ) 'ಅಕ್ಷರ, ಅವಿನಾಶಿ ಎಂದೆನ್ನುತ್ತಾರೆ. ಅಕ್ಷರವೆಂಬುದರಿಂದಲೇ ಬ್ರಹ್ಮಬೋಧ ಉಂಟಾಗುತ್ತದೆ. ಅದರ ಆಚೆಕಡೆಗೆ ಯಾವದಾದರೂ ವಿಸ್ತಾರವು ಕಾಣುವದರಲ್ಲಿ ಬರುವದಿಲ್ಲ. ಮತ್ತು ಇದರ ಹೆಸರೇ ಪರಮಗತಿಯಾಗಿರುವದು. ॥ ೧೪೧ ॥ ಆದರೆ ಸಂಪೂರ್ಣದೇಹರೂಪಿ ನಗರದಲ್ಲಿ ಅವನು ಮಲಗಿಕೊಂಡಂತೆ ಇರುತ್ತಾನೆ. ಮತ್ತು (ಉದಾಸೀನನಾಗಿದ್ದಾನೆ.) ಕಾರಣವೇನಂದರೆ ಆ * ಪರಮಾತ್ಮನು ಯಾವದಾದರೂ ವ್ಯವಹಾರ ಮಾಡುವದಿಲ್ಲ ಮತ್ತು ಮಾಡಿಸುವದೂ ಇಲ್ಲ. ॥ ೧೪೨ ॥ ಸಹಜವೇ ಶರೀರದ ಯಾವ ವ್ಯಾಪಾರಗಳು ಇರುತ್ತವೆ. ಅವುಗಳಲ್ಲಿ ಅರ್ಜುನನೇ ! ಒಂದೂ ನಿಲ್ಲುವದಿಲ್ಲ ಕಂಡಿಯಾ ! ಆದರೆ ದಶ ಇಂದ್ರಿಯಗಳ ವ್ಯವಹಾರಗಳು ನಡದೇ ಇರುತ್ತವೆ. ॥ ೧೪೩ ॥ ವಿಷಯರೂಪಿ ಸಂತೆಯು ತೆರೆದು ಮನೋರೂಪಿ ಅಂಗಳದಲ್ಲಿ ವ್ಯವಹಾರವು ಪ್ರಾರಂಭವಾಗುವದರಿಂದ ಉಂಟಾಗುವ ಸುಖ ದುಃಖದ ಪ್ರಾಪ್ತಿಯೊಳಗಿನ ಮುಖ್ಯ ಲಾಭವು ಅಂತರ್ಯಾಮಿ ಜೀವನಿಗೂ

ಟೀಪು—ಅಗ್ನಿ ವಾಯುಗಳು ಸೃಷ್ಟಿಯಲ್ಲಿ ಅನೇಕ ರೂಪಗಳನ್ನು ಧರಿಸಿದರೂ, ತಾವು ಅಲಿಪ್ತರಾಗಿಯೇ ಇರುವಂತೆ ಪರಮಾತ್ಮನು ವಿಶ್ವದ ಅಣುರೇಣುಗಳಲ್ಲಿ ತುಂಬಿದ್ದರೂ, ಅಲಿಪ್ತನೇ ಇರುವನು. (ಕಠೋಪನಿಷತ್ತು' ಅಂ, ೨ ವ ೫ ಮಂ, ೯–೧೦)

ದೊರಕುತ್ತದೆ. ॥ ೬೪ ॥ ಆದರೆ ರಾಜನು ಸುಖದಿಂದ ಮಲಗಿರಲು ಯಾವಪ್ರಕಾರಾ ದೇಶದ ವ್ಯಾಪಾರವು ನಿಲ್ಲುವ ದಿಲ್ಲ. ಆದರೆ ಆ ರಾಜನ ಪ್ರಜೆಗಳು ತಮ್ಮ ತಮ್ಮ ಇಚ್ಛಾನುರೂಪವಾಗಿ ಯಾವಾಗಲೂ ವ್ಯಾಪಾರವನ್ನು ನಡಿಸೇ ನಡಿಸುತ್ತಾರೆ. ॥ ೬೫ ॥ ಅದೇಪ್ರಕಾರಾ ಬುದ್ಧಿಯಿಂದ ತಿಳಿದುಕೊಳ್ಳುವ ಕ್ರಿಯೆಗಳು ಅಥವಾ ಮನಸಿನ ಸಂಕಲ್ಪ ವಿಕಲ್ಪರೂಪ ಕೊಡತಗೊಂಬುವ ಕ್ರಿಯೆಗಳು, ಮತ್ತು ಇಂದ್ರಿಯಗಳ ವ್ಯಾಪಾರಗಳು, ಮತ್ತು ಪ್ರಾಣವಾಯುವಿನ ಸ್ಫುರಣವು ॥ ೬೬ ॥ ಈ ಸರ್ವದೇಹ ಕರ್ಮಗಳನ್ನು (ಪರಮಾತ್ಮನು ಸ್ವತಃ) ಮಾಡಿಸದೇ ಉತ್ತಮವಾಗಿ ನಡಿಯುತ್ತವೆ. ಸೂರ್ಯನು ಸ್ವತಃ ಜನರಿಗೆ ಉದ್ಯೋಗ ಮಾಡಲು ಹಚ್ಚುದೇ ಜನರ ಉದ್ಯೋಗ ವ್ಯಾಪಾರಗಳು ಹೇಗೆ ಚನ್ನಾಗಿ ನವೆಯುತ್ತವೆ, ॥ ೬೭ ॥ ಅದೇ ಪ್ರಕಾರಾ ಅರ್ಜುನನೇ ! ಆತ್ಮಾ ಇದು ಶರೀರದಲ್ಲಿ ಸ್ವಸ್ಥ ಮಲಗಿಕೊಂಡಂತೆ ಇರುತ್ತದೆ, ಆದುದರಿಂದ ಅವರ ಹೆಸರು ಪುರುಷನೆಂದೆನ್ನುತ್ತಾರೆ. ॥ ೬೮ ॥ ಮತ್ತು ಆತ್ಮನು ಪ್ರಕೃತಿರೂಪ ಪತಿವ್ರತೆಯ ಸಂಗತಿಯಿಂದ ಏಕಪತ್ನಿವ್ರತಸ್ಥನಾಗಿರುವದರಿಂದ ಇವನಿಗೆ ಪುರುಷನೆಂಬ ಹೆಸರು ಉಂಟಾಗಿದೆ. ॥ ೬೯ ॥ ಆದರೆ ನಾಲ್ಕು ವೇದಗಳು ಬಹಳೇ ರೀತಿಯಿಂದ ವಿಚಾರವಾಡಿದರೂ ಆ ಪರಮಾತ್ಮನ ಅಂಗಳವು ಸಹ ದೃಷ್ಟಿಗೆ ಬೀಳುವದಿಲ್ಲ. ಆ ಪರಮಾತ್ಮನು ಆಕಾಶದ ಹೊದಿಕೆ ಯಾಗಿರುವನು. ॥ ೭೦ ॥ ಹೀಗೆ ತಿಳಿದು ಯೋಗಿಜನರು ಅವನಿಗೆ ಜೀವ ಪ್ರಕೃತಿಗಳ ಆಚೆಕಡೆಯವನಾದ ಪರಾತ್ಪರ ಪರಬ್ರಹ್ಮನೆಂದೆನ್ನುತ್ತಾರೆ. ಅವನು ಏಕನಿಷ್ಠಭಕ್ತರ ಶೋಧಮಾಡುತ್ತ ಅವರ ಮನೆಗೆ ಬರುತ್ತಾನೆ. ॥ ೭೧ ॥ ಯಾರು ಕಾಯವಾಚಾ ಮನಸ್ಸಿನಿಂದ ಪರಮಾತ್ಮನ ಹೊರ್ತು ಅನ್ಯ ಭಾಷಣಗಳನ್ನೇ ಕೇಳುವದಿಲ್ಲ ಅಂಥ ಪರಾಭಕ್ತರಿಗೆ ಪರಮಾತ್ಮನು ಏಕನಿಷ್ಠೆಯ ಬೆಳಿಯ ಫಲವನ್ನು ಕೊಡುವಂಥ ಉತ್ತಮ ಭೂಮಿಯೋ ಆಗಿರುವನು. ॥ ೭೨ ॥ ಎಲೋ, ಪಾಂಡವನೇ ! ಈ ಮೂರು ಲೋಕಗಳು ಭಗವದ್ರೂಪ ವಾಗಿರುವನೆಂದು ನಿಜವಾಗಿ ಯಾರ ಮನೋಭಾವನೆ ಇರುವದೋ, ಆ, ಆಸ್ತಿಕ, ಭಕ್ತನಿಗೆ ಇವನು ಆಶ್ರಯನೇ ಆಗಿರುವನು ॥ ೭೩ ॥ ಯಾವದು ನಿರಾಭಿಮಾನಿಗಳ ವೈಭವವು, ಗುಣಾತೀತ ತನ ಜ್ಞಾನವು ಮತ್ತು ಯಾವದು ನಿಸ್ಪೃಹನು ಸುಖೋಪಭೋಗ ತೆಗೆದುಕೊಳ್ಳುವ ಸ್ಥಾನವು (ರಾಜ್ಯವು) ॥ ೭೪ ॥ ಯಾವದು (ಪರಮಾತ್ಮ ರೂಪದಲ್ಲಿ) ಸಂತೋಷಭರಿತ ಪುರುಷನಿಗೆ ಪಕ್ವಾನ್ ಬಡಿಸಿ ಇಟ್ಟ ಪಾತ್ರೆಯು ಮತ್ತು ಸಂಸಾರ ಚಿಂತೆಯನ್ನು ಮಾಡದೇ ನಂಬನ್ನೇ ಆಶ್ರಯಿಸಿ ನನಗೆ ಶರಣಾಗತರಾದ ಭಕ್ತರ ತಾಯಿಯ ಹೊಟ್ಟೆಯು ಅಥವಾ ತೌರಮನೆಯು ಆಗಿರುವದು. ಮತ್ತು ಅದು ಭಕ್ತಿಯಿಂದ ನಡೆಯುವವರಿಗೆ ಮೋಕ್ಷರೂಪಿ ಗ್ರಾಮಗಳ ಸರಳವಾರ್ಗವು ಆಗಿರುವದು. ॥ ೭೫ ॥ ಧನಂಜಯನೇ ! ಹೀಗೆ ಒಂದೊಂದೇ ಹೇಳಿ ಸುಮ್ಮನೇ ವ್ಯರ್ಥವಾಗಿ ಎಷ್ಟು ವರ್ಣನ ಮಾಡಬೇಕು ? ಆದರೆ ಯಾವ ಸ್ಥಾನದಲ್ಲಿ ಹೋಗುವದರಿಂದ ಮನುಷ್ಯನು ನಂನ ಸ್ವರೂಪವನ್ನು ಹೊಂದುತ್ತಾನೆ. ॥ ೭೬ ॥ ಥಂಡಿಯ ಸುಳಿದಾಟದಿಂದ ಹೇಗೆ ಬಿಸಿನೀರು ತಣ್ಣಗಾಗುತ್ತದೆ. ಇಲ್ಲವೇ ಸೂರ್ಯೋದಯವಾದಮೇಲೆ ಕತ್ತಲೆಯು ಹೇಗೆ ಪ್ರಕಾಶರೂಪ ವಾಗುತ್ತದೆ. ॥ ೭೭ ॥ ಅದೇ ಪ್ರಕಾರಾ ಪಾಂಡವನೇ ! ಅಜ್ಞಾನ ಮತ್ತು ಅವರ ಕಾರ್ಯ ಜಗತ್ತು ಯಾವ ಪರಮಾತ್ಮರೂಪಿ ಗ್ರಾಮಕ್ಕೆ ಹೋಗುವದರಿಂದ ಅವು ತಾವೇ ಮೋಕ್ಷ ರೂಪ ವಾಗುತ್ತವೆ. ॥ ೭೮ ॥ ಅದರಂತೆ ಕಬ್ಬುಗೆಗಳು ಬೆಂಕಿಯಲ್ಲಿ ಹಾಕುವದರಿಂದ ಆ ಕಬ್ಬುಗೆಗಳು ಬೆಂಕಿಯ ಸ್ವರೂಪವೇ ಆಗುತ್ತವೆ. ಆಮೇಲೆ ಅವುಗಳನ್ನು ಬೇರೆ ಮಾಡಬೇಕೆಂದರೆ ಅಲ್ಲಿ ಕಬ್ಬುಗೆಯು ಗುರ್ತು ಸಹ ದೃಷ್ಟಿಗೆ ಬೀಳುವದಿಲ್ಲ. ॥ ೭೯ ॥ ಇಲ್ಲವೇ ಅರ್ಜುನನೇ ! ಒಂದು ವೇಳೆ ಸಕ್ಕರಿ ಆದಮೇಲೆ ಯಾವ ಪ್ರಕಾರಾ ಪುನಶ್ಚಾ ಆದನ್ನು ಚಾತುರ್ಯದಿಂದ ಕಬ್ಬುಮಾಡಲು ಬರುವದುಂಟೇ ? ॥ ೭೦ ॥ ಕಬ್ಬಿಣವು ಒಂದುವೇಳೆ ಪರೀಸ ಮಣಿಯ ಸ್ಪರ್ಶದಿಂದ ಬಂಗಾರವಾದಮೇಲೆ ಕಳೆದುಹೋದ ಕಬ್ಬಿಣತ್ವವನ್ನು ತಿರುಗಿ ತಂದು ಕೊಡುವಂಥ ಸಾಮರ್ಥ್ಯವು ಇನ್ಯಾವ ಅನ್ಯ ಪದಾರ್ಥದಲ್ಲಿ ಉಂಟಾದೀತು ? ॥ ೧ ॥ ತುಪ್ಪವು ಮರಳಿ ಹಾಲು ಆಗುವದುಂಟೇ ? ಅದೇ ಪ್ರಕಾರ ಯಾವದರಹತ್ತರ ಹೋಗುವದರಿಂದ (ಅದನ್ನೇ ಆಶ್ರಯಿಸುವದರಿಂದ) ಪುನರ್ಜನ್ಮವು ಉಂಟಾಗುವದಿಲ್ಲ. ॥ ೨೦೩ ॥ ಅದೇ ನನ್ನ ನಿಜವಾದ ಉತ್ತಮ (ಶ್ರೇಷ್ಠ) ಸ್ಥಾನವಾಗಿರುವದು. ಈ ಗುಪ್ತವಾದ ರಹಸ್ಯವನ್ನು ನಿನಗೆ ಸ್ಪಷ್ಟಮಾಡಿ ಒಡೆದು ಕಾಣುವಂತೆ ಹೇಳಿರುತ್ತೇನೆ. ॥ ೨೦೪ ॥

ಯತ್ರ ಕಾಲೇ ತ್ವನಾವೃತ್ತಿಮಾವೃತ್ತಿಂ ಚೈವ ಯೋಗಿನಃ ।
ಪ್ರಯಾತಾ ಯಾಂತಿ ತಂ ಕಾಲಂ ವಕ್ಷ್ಯಾಮಿ ಭರತರ್ಷಭ ॥ ೨೩ ॥

[ಯತ್ರ ಕಾಲೇ ತ್ವನಾವೃತ್ತಿ ವಿಂತಿ] ತೇವಿಂಚಿ ಆಣಿಕೇಂಹೀ ಏಕೇ ಪ್ರಕಾರೇ । ಹೇ ಜಾಣತಾ ಆಹೇ ಸೋಪಾರೇ । ತರೀ ದೇಹ ಸಾಂಡತೇನಿ ಅವಸವೇ । ಜೇಥೇ ಮಿಳತೀ ಯೋಗೀ ॥ ೪ ॥ ಅಥವಾ ಅವಚಟೀ ಐಸೇ ಘಡೇ । ಜೇ ಅನವಸರೇ ದೇಹ ಸಾಂಡೇ । ತರೀ ಮಾಘೌತೇ ಯೇಣೇ ಘಡೇ । ದೇಹಾಸೀಚಿ ॥ ೫ ॥ ಮ್ಹಣೋನಿ ಕಾಳಶುದ್ಧೀ ಜರೀ ದೇಹ ಠೇವಿತೀ । ತರೀ ಠೇವಿತ ಖೇವೀ ಬ್ರಹ್ಮಚಿ ಹೋತೀ । ಏರವೀ ಅಕಾಳೀ ತರೀ ಯೇತೀ । ಸಂಸಾರಾ ಪುಢತೀ । ೬ ॥ ತೈಸೇ ಸಾಯುಜ್ಯ ಆಣಿ ಪುನರಾವೃತ್ತೀ । ಯಾ ದೊಸ್ತೀ ಅವಸರಾ ಆಹಾತೀ । ತೋಚಿ ಅವಸರ ತುಜ ಪ್ರತೀ । ಪ್ರಸಂಗೇ ಸಾಂಗೋ ॥ ೭ ॥ ತರೀ ಐಕೇ ಗಾ ಸುಭಟಾ । ಪಾತಲಿಯಾ ಮರಣಾಚಾ ಮಾಜೀವಟಾ । ಪಾಂಚೈ ಆಪುಲಾಲಿಯಾ ವಾಟಾ । ನಿಘತೀ ಅಂತೀ ॥ ೮ ॥ ಐಸಾ ವರಿ ವರೀ ಪಡಿಲಾ ಪ್ರಯಾಣ ಕಾಳೀ ಬುದ್ಧಿತೇ ಭ್ರಮ ನ ಗಿಳೀ । ಸ್ಮೃತಿ ನವ್ಹೇ ಆಂಧಳೀ । ನ ಮರೇ ಮನ ॥ ೯ ॥ ಹಾ ಚೇತನಾ ವರ್ಗ ಆಘವಾ । ಮರಣೇ ದಿಸೇ ರವ ಕವಾ । ಪರೀ ಅನುಭವಿಲಿಯಾ ಬ್ರಹ್ಮ ಭಾವಾ । ಗವಸಣೀ ಹೋವೂಸಿ ॥ ೧೦ ॥ ಐಸಾ ಸಾನಥಹಾ ಸವಾ ಭಾವೋ । ಆಣೀ ನಿರ್ವಾಣ ವೇಡ್ಡೀ ನಿರ್ವಾಹೋ । ಹೇ ತರೀಚ ಘಡೇ ಸಾವಾವೋ । ಅಗ್ನೀಚಾ ಆಥೀ ॥ ೧೧ ॥ ಪಾಪಾ ಪಾ ವಾರೇನೇ ಕಾ ಉದಕೇ । ಜೈ ದಿವಿಯಾಚೇ ದಿನೇ ಪಣ ಝಾಂಕೇ । ತೈ ಅಸತೀಚ ಕಾಯ ದೇಖೇ । ದಿಠೀ ಆಪುಲೀ ॥ ೧೨ ॥ ತೈಸೇ ದೇಹಾಂತೀಚೇನಿ ವಿಷಮು ವಾತೇ । ದೇಹ ಆಂತ ಬಾಹೇರಿ ಶ್ಲೇಷ್ಮಾ ಆತೇ । ತೈ ವಿಝೋನಿ ಜಾಯ ಉಚಿತೇ । ಅಗ್ನೀಚೇ ತೆಂವ್ಹಾ ॥ ೧೩ ॥ ತೇ ವೇಳೀ ಪ್ರಾಣಾಸಿ ಪ್ರಾಣ ನಾಹೀ । ತೇಥ ಬುದ್ಧಿ ಅಸೋನಿ ಕರೀಲ ಕಾಈ । ಮ್ಹಣೋನಿ ಅಗ್ನೀ ವೀಣ ದೇಹೀ । ಚೇತನಾ ನ ಥಾರೇ ॥ ೧೪ ॥ ಆಗಾ ದೇಹೀಂಚಾ ಅಗ್ನಿ ಜರೀ ಗೇಲಾ । ತರೀ ದೇಹ ನವ್ಹೇ ಚಿಖಲ ವೋಲಾ । ವಾಯಾ ಆಯುಷ್ಯ ವೇಳ ಆಪುಲಾ । ಅಂಧಾರೇ ಗಿಂವಸೀ ॥ ೧೫ ॥ ಆಣಿ ಮಾಗೀಲ ಸ್ಮರಣ ಆಘವೇ । ತೇ ತೇಣೇ ಅವಸರೇ ಸಾಂಭಾಳಾವೇ । ಮಗ ದೇಹ ತ್ಯಜೂನಿ ವಿಠಳಾವೆ । ಸ್ವರೂಪೀ ಕೇ ॥ ೧೬ ॥ ತವ ತಯಾ ದೇಹ ಶ್ಲೇಷ್ಮಾಚೇ ಚಿಖಲೀ । ಚೇತನಾಚೀ ಬುಡೊನಿ ಗೇಲೀ । ತೇಥ ಮಾಗಿಲೀ ಪುಢಿಲೀ ಠೇಲೀ । ಆತವಣ ॥ ೧೭ ॥ ಮ್ಹಣೋನಿ ಆಧೀ ಅಭ್ಯಾಸ ಜೋ ಕೇಲಾ । ತೋ ಮರಣ ನ ಯೇತಾ ನಿಮೊನಿ ಗೆಲಾ । ಜೈಸೇ ಠೇವಣೇ ನ ದಿಸತಾ ಮೂಲವಲಾ । ದೀಪ ಹಾತೀಚಾ ॥ ೧೮ ॥ ಆತಾ ಅಸೋ ಹೇ ಸಕಳ । ಜಾಣ ಪಾ ಜ್ಞಾನಾಸೀ ಅಗ್ನಿ ಮೂಳ । ತಯಾ ಅಗ್ನೀಚೇ ಪ್ರಯಾಣೀ ಬಳ । ಸಂಪೂರ್ಣ ಆಥೀ ॥ ೧೯ ॥

ಅರ್ಥ— ಅದೇ ರೀತಿಯಿಂದ ಯೋಗಿಗಳು ದೇಹಾವಸಾನದ ನಂತರ ಯಾವ ಸ್ವರೂಪಕ್ಕೆ ಹೋಗಿ ಮುಟ್ಟುತ್ತಾರೆ ಆ ಗುಪ್ತ ರಹಸ್ಯವು ಇನ್ನೂ ಒಂದು ಪ್ರಕಾರದಿಂದ ತಿಳಿಕೊಳ್ಳುವದಕ್ಕೆ ಸುಲಭವಾಗಿರುತ್ತದೆ. ॥೨೦॥ ಅಥವಾ ಅಕಸ್ಮಾತ್ತ ಹೀಗೆ ಪ್ರಸಂಗವು ಒದಗುತ್ತದೆ. ಯಾವ ಯೋಗಿಗಳು ಅಕಾಲದಲ್ಲಿ ದೇಹತ್ಯಾಗ ಮಾಡುತ್ತಾರೆ ಅವರಿಗೆ ಪುನ್ಹಾ ದೇಹಧಾರಣ ಮಾಡಬೇಕಾಗುತ್ತದೆ. ॥ ೨೦೫ ॥ ಆದುದರಿಂದ ಶಾಸ್ತ್ರೋಕ್ತ ಶುದ್ಧ ಕಾಲದಲ್ಲಿ ದೇಹದ ಅವಸಾನವಾದರೆ ಆ ಕ್ಷಣದಲ್ಲಿ ಆ ಯೋಗಿಗಳು ಬ್ರಹ್ಮಸ್ವರೂಪವಾಗುತ್ತಾರೆ. ಇಲ್ಲವೇ ಅಕಾಲದಲ್ಲಿ ದೇಹಾವಸಾನವಾದಮೇಲೆ ತಿರುಗಿ ಜನ್ಮಕ್ಕೆ ಬರುತ್ತಾರೆ. ॥ ೨೦೬ ॥ ಅದರಂತೆ ಮೋಕ್ಷ ಮತ್ತು ಪುನರ್ಜನ್ಮಗಳು ಇವು ಎರಡೂ ಕಾಲಾಧೀನವಾಗಿರುತ್ತವೆ. ಇಂಥ ಕಾಲವಾದರು ಯಾವದೆಂಬದನ್ನು ಪ್ರಸಂಗಾನುಸಾರವಾಗಿ ನಿನಗೆ ಹೇಳುತ್ತೇನೆ. ॥೭॥ ಆದರೆ ಎಲೋ ಮಹಾವೀರ ಅರ್ಜುನನೇ ! ಕೇಳು, ಮರಣಕಾಲವು ಸಮಿಾಪ ಬಂದಿರಲು ಕಟ್ಟಕಡೆಗೆ ಪಂಚಮಹಾ

ಭೂತಗಳು ತಮ್ಮ ತಮ್ಮ ಮಾರ್ಗದಿಂದ ಹೊರಟು ಹೋಗುತ್ತವೆ. ॥ ೪ ॥ ಇಂಥ ಮರಣಕಾಲವು ಪ್ರಾಪ್ತವಾಗಿರಲು, ಬುದ್ಧಿಗೆ ಭ್ರಾಂತಿಯು ಗ್ರಾಸಮಾಡುವದಿಲ್ಲ. ಸ್ಮರಣಶಕ್ತಿಯು ಕುರುಡವಾಗುವದಿಲ್ಲ. (ನಾಶಹೊಂದುವದಿಲ್ಲ) ಮತ್ತು ಮನಸು ಸಾಯುವದಿಲ್ಲ. ॥ ೯ ॥ ಹೀಗೆ ಸರ್ವ ಜ್ಞಾನ ಸಮುದಾಯಗಳು ಶವಶವಿತವಾಗಿ ಇದ್ದು ಅನುಭವ ತೆಗೆದು ಕೊಂಡ ಬ್ರಹ್ಮಭಾವನೆಯ ಬೋಧನೇ ಅಲ್ಲಿ ಇರುತ್ತದೆ. ॥ ೪೧೦ ॥ ಈ ರೀತಿಯಿಂದ ಈ ಸಮುದಾಯಗಳು ಸಾವಧ ವಾಗಿರುತ್ತವೆ. ಆದರೆ ಹೊರಗಿನ ಜಠರಾಗ್ನಿಯು ಪ್ರದೀಪ್ತವಾಗಿದ್ದರೆ ಮಾತ್ರ ಅವನಿಗೆ, ಸಾಯುವರೆಗೆ ಇಂದ್ರಿಯಗಳ ಸಹಾಯವು ದೊರಕುತ್ತದೆ. ॥ ೪೧೧ ॥ ಹೀಗೆ ನೋಡು ಗಾಳಿಯಿಂದ ಇಲ್ಲನೇ ನೀರಿನಿಂದ ಯಾವ ವ್ಯಾಳೆಕ್ಕೆ ದೀವಿಗೆಯ ಪ್ರಕಾಶವು ನಾಶಹೊಂದುತ್ತದೆ, ಆ ಕಾಲಕ್ಕೆ ತಮ್ಮ ಕಣ್ಣುಗಳು ನೆಟ್ಟಗೆಯಿದ್ದರೂ, ಅವನಿಗೆ ಏನಾದರೂ ಕಾಣು ವದೋ, ಹ್ಯಾಗೆ ? ॥ ೧೨ ॥ ಆದೇ ಪ್ರಕಾರಾ ದೇಹಾವಸಾನದ ಗಾಳಿಯು ಬೆಳೆದು ವಿಸ್ತಾರವಾದುದರಿಂದ ಶರೀರವು ತ್ರಿದೋಷದಿಂದ ಕೂಡಿ ಒಳಗೆ ಹೊರಗೆ ಕಫದಿಂದ ವ್ಯಾಪ್ತವಾಗುತ್ತದೆ. ಆಗ್ಗೆ ಜಠರಾಗ್ನಿಯ ತೇಜವು ಆರಿಹೋಗು ತ್ತದೆ. ॥ ೧೩ ॥ ಆ ಕಾಲದಲ್ಲಿ ಪ್ರಾಣಕ್ಕೆ ಅವಸಾನವು ಇರುವದಿಲ್ಲ. ಆದುದರಿಂದ ಬುದ್ಧಿಯು ಇದ್ದಾಗ್ಯಾದೂ, ಅದು ಏನುಮಾಡಬಹುದು ? ಆದುದರಿಂದ ಅಗ್ನಿಯ ಹೊರ್ತು ದೇಹದಲ್ಲಿ ಚೇತನಾ ಉಳಿಯುವದಿಲ್ಲ. ॥ ೧೪ ॥ ಹೀಗೆ ನೋಡು, ಶರೀರದೊಳಗಿನ ಜಠರಾಗ್ನಿಯು ಇಲ್ಲದಂತೆ ಆದಮೇಲೆ ಅದು ದೇಹವಿರದೇ ಕೆಸರಿನ ಮುದ್ದಿಯೇ ಆಗಿರು ವದು. ಹೀಗೆ ಆಗುವದರಿಂದ ಆಯುಷ್ಯವು ತನ್ನ ಕಾಲವನ್ನು ವ್ಯರ್ಥವಾಗಿ ಕತ್ತಲೆಯಲ್ಲಿ ಶೋಧಮಾಡುತ್ತದೆ. ॥೧೫॥ ಇಂಥ ಸ್ಥಿತಿಯಲ್ಲಿ ಹಿಂದಿನ ಅಭ್ಯಾಸದ ಸ್ಮರಣ ಇಟ್ಟುಕೊಂಡು ದೇಹವನ್ನು ಬಿಟ್ಟು ಸ್ವರೂಪದ ಸ್ಥಳದಲ್ಲಿ ಕೂಡ ಬೇಕೆಂಬುವದು ಸಾಧಿಸುವ ಹಾಗೆ ಹ್ಯಾಗೆ ? ॥ ೧೬ ॥ ಆ ವೇಳೆದಲ್ಲಿ ಆ ದೇಹದೊಳಗಿನ ಕಫದ ಕೆಸರಿನಲ್ಲಿ ಚೇತನವು ಮುಳುಗಿ ಹೋಗುವದರಿಂದ ಹಿಂದಿನ ಅಥವಾ ಮುಂದಿನ ಮಾತುಗಳ ಸ್ಮರಣವು ಇಲ್ಲದಂತೆ ಆಗುತ್ತದೆ. ॥ ೧೭ ॥ ಆದುದರಿಂದ ಪೂರ್ವದಲ್ಲಿ ಯಾರು ಯೋಗಾಭ್ಯಾಸ ಮಾಡಿದರು ಅವರು ತಮ್ಮ ಮರಣ ಬರುವ ಪೂರ್ವದಲ್ಲಿಯೇ, ತಮ್ಮ ಕಾರ್ಯವನ್ನು ಸಾಧಿಸಿಕೊಂಡು ದೇಹವನ್ನಿಡುತ್ತಾರೆ. (ಅದು ಹೇಗಂದರೆ) ನಾವು ಕತ್ತಲೆಯಲ್ಲಿಟ್ಟಂಥ ವಸ್ತು ದೊರಕುವ ಪೂರ್ವದಲ್ಲಿ ದೀವಿಗೆಯು ಆರಿಹೋಗಬೇಕು, ಅದರಂತೆ ಆಗುತ್ತದೆ. ॥ ೧೮ ॥ ಇನ್ನು ಮೇಲೆ ಈ ಸರ್ವ ಮಾತುಗಳು ಹಾಗೇ ಇರಲಿ, ಜ್ಞಾನಕ್ಕೆ ಮೂಲಕಾರಣವು ಜಠರಾಗ್ನಿಯೇ ಇರುತ್ತದೆ. ಸಾರಾಂಶ ಮರಣ ಸಮಯದಲ್ಲಿ ಆ, " ಜಠರಾಗ್ನಿಯ " ಪೂರ್ಣ ಸಹಾಯವು (ಬಲವು) ಇರಬೇಕಾಗುತ್ತದೆ. ॥ ೧೯ ॥

ಅಗ್ನಿರ್ಜ್ಯೋತಿರಹಃ ಶುಕ್ಲಃ ಷಣ್ಮಾಸಾ ಉತ್ತರಾಯಣಂ ।
ತತ್ರ ಪ್ರಯತಾ ಗಚ್ಛಂತಿ ಬ್ರಹ್ಮ ಬ್ರಹ್ಮವಿದೋ ಜನಾಃ ॥ ೨೪ ॥

[ಅಗ್ನಿರ್ಜ್ಯೋತಿರಿತಿ] ಅಂತ ಅಗ್ನಿಜ್ಯೋತೀಚಾ ಪ್ರಕಾಶ । ಬಾಹೇರಿ ಶುಕ್ಲಪಕ್ಷ ಆಣಿ ದಿವಸ । ಆಣಿ ಸಾಮಾಸಾಮಾಜೀ ಮಾಸ । ಉತ್ತರಾಯಣ ॥ ೨೨೦ ॥ ಐಸಿಯಾ ಸಮಯೋಗಾ ಚೀ ನಿರುತೀ । ಲಾಹೋನಿ ಜೀ ದೇಹ ತೇವಿತೀ । ತೇ ಬ್ರಹ್ಮಚೀ ಹೋತೀ । ಬ್ರಹ್ಮವಿದ ॥ ೨೧ ॥ ಅವಧಾರೀ ಗಾ ಧನುರ್ಧರಾ । ಯೇಥವರೀ ಸಾಮರ್ಥ್ಯ ಯಯಾ ಅವಸರಾ । ತೇವೀಂಚಿ ಪಾಯಜೂ ಮಾರ್ಗ ಸ್ವಪುರಾ । ಯಾವಯಾ ಪೈ ॥ ೨೨ ॥ ಏಥ ಅಗ್ನೀ ಹೇ ಪಹಿಲೇ ಪಾಯತರೇ । ಜ್ಯೋತಿರ್ಮಯ ಹೇ ದುಸರೇ । ದಿವಸ ಜಾಣೇ ತಿಸರೇ । ಚೌಥೇ ಶುಕ್ಲಪಕ್ಷ ॥ ೨೩ ॥ ಆಣಿ ಸಾಮಾಸ ಉತ್ತರಾಯಣ । ತೇ ವರಚೀಲಗಾ ಸೋಪಾನ । ಯೇಣೇ ಸಾಯುಜ್ಯ ಸಿದ್ಧಿಸದನ । ಪಾವತೀ ಯೋಗೀ ॥ ೨೪ ॥ ಹಾ ಉತ್ತಮ ಕಾಳ ಜಾಣಿಜೇ । ಯಾತೇ ಅರ್ಚಿರಾದಿ ಮಾರ್ಗ ಮ್ಹಣಿಜೇ । ಆತಾ ಅಕಾಳ ತೋಹೀ ಸಹಜೇ । ಸಾಂಗೇನ ಆಇಕ ॥ ೨೫ ॥

ಅರ್ಥ— ಶರೀರದಲ್ಲಿ ಜಠರಾಗ್ನಿ (ಜ್ಯೋತಿ) ಯ ಪ್ರಕಾಶವು ಹೊರಗೆ ಉತ್ತರಾಯಣದಲ್ಲಿಯ ಯಾವದಾದ ರೊಂದು ತಿಂಗಳ ಶುದ್ಧಪಕ್ಷದ ದಿವಸವು, (ರಾತ್ರಿ ಇರಬಾರದು) ॥ ೨೨೦ ॥ ಈ ರೀತಿಯಿಂದ ಸರ್ವದರಿಂದ

ಉತ್ತಮವಾದ ಯೋಗವು ಬರುತ್ತಿರಲು ಯಾವ ಬ್ರಹ್ಮಾಭ್ಯಾಸಿ ಪುರುಷನು ತನ್ನ ದೇಹವನ್ನಿಡುತ್ತಾನೆ ಅವನು ಬ್ರಹ್ಮ ಸ್ವರೂಪನೇ ಆಗುತ್ತಾನೆ. ॥ ೨೨೧ ॥ ಧನುರ್ಧರನೇ ! ಕೇಳು, ಈ ಕಾಲದ ಯೋಗದಿಂದ (ತತ್‌ಕಾಲಾಭಿಮಾನಿ ದೇವತೆಗಳಲ್ಲಿ) ಇಂಥ ವಿಲಕ್ಷಣವಾದ ಸಾಮರ್ಥ್ಯವಿರುತ್ತದೆ! ಆದರಿಂದಲೇ, ಮೋಕ್ಷಾಭಿಲಾಷೆಯುಳ್ಳವರಿಗೆ ಸ್ವಸ್ವ ರೂಪದಲ್ಲಿ ಪ್ರವೇಶ ಮಾಡಲು ಇದು ಸರಳವಾದ ಮಾರ್ಗವು ಆದೆ. ॥ ೨೨ ॥ ಈ ಮಾರ್ಗದಲ್ಲಿ ಜಠರಾಗ್ನಿಯು ಮೊದಲನೇ ಪಾವಟಿಗೆಯಾಗಿರುವದು. ಅಗ್ನಿಯ ಸತೇಜತನವು ಎರಡನೇ ಪಾವಟಿಗೆ ಯಾಗಿರುವದು. ದಿವಸವು (ಹಗಲು) ಮೂರನೇ ಪಾವಟಿಗೆ ಯಾಗಿರುವದು. ॥ ೨೩ ॥ ಮತ್ತು ಉತ್ತರಾಯಣದ ಆರು ತಿಂಗಳಲ್ಲಿ ಒಂದು ತಿಂಗಳವು ಇದು ಮೇಲೆ ಏರಿ ಹೋಗುವ ಮೆಟ್ಟಿಲು ಆಗಿರುವದು. ಹೀಗೆ ಕ್ರಮದಿಂದ ಒಂದೊಂದು ಮೆಟ್ಟಿಲು ಗಳನ್ನು ಹತ್ತಿ ಹೋಗುವದರಿಂದ, ಯೋಗಿಯು ನೋಕ್ಷ ಸಿದ್ಧಿರೂಪವಾದ ಗ್ರಹದಲ್ಲಿ ಪ್ರವೇಶ ಮಾಡುತ್ತಾನೆ. ॥ ೨೪ ॥ ಇದು ಉತ್ತಮಕಾಲವೆಂದು ನಂಬು. ಮತ್ತು ಇದಕ್ಕೇ ಅರ್ಚಿ*ರಾದಿ ಮಾರ್ಗವೆಂದು ಶಾಸ್ತ್ರದಲ್ಲಿ ಅಂದಿರುತ್ತಾರೆ. ಯೋಗಿಗಳಿಗೆ ಮತ್ತು ಸಾಧಕರಿಗೆ ಇನ್ನು ಮೇಲೆ ದೇಹವನ್ನಿಡಲಿಕ್ಕೆ ಅಯೋಗ್ಯ ಕಾಲವು ಯಾವದೆಂಬದನ್ನು ಪ್ರಸಂಗಾನುಸಾರವಾಗಿ ನಿನಗೆ ಹೇಳುತ್ತೇನೆ ಕೇಳು. ॥ ೨೨೫ ॥

ಧೂಮೋ ರಾತ್ರಿಸ್ತಥಾ ಕೃಷ್ಣಃ ಷಣ್ಮಾಸಾ ದಕ್ಷಿಣಾಯನಂ ।
ತತ್ರ ಚಾಂದ್ರಮಸಂ ಜ್ಯೋತಿರ್ಯೋಗೀ ಪ್ರಾಪ್ಯ ನಿವರ್ತತೇ ॥ ೨೫ ॥

[ಧೂಮ ಇತಿ] ತರೀ ಪ್ರಯಾಣಾಚಿಯಾ ಅವಸರೇ । ವಾತಶ್ಲೇಷ್ಮಾ ಸುಭರೇ । ತೇಣೇ ಅಂತಃಕರಣೀ ಆಂಧಾರೇ । ಕೊಂದಲೇ ಶಾಕೇ ॥ ೨೬ ॥ ಸರ್ವೇಂದ್ರಿಯಾ ಲಾಂಕುಡಪಡೇ । ಸ್ಮೃತಿ ಭ್ರಮಾ ಮಾಜೀ ಬುಡೇ । ಮನ ಹೋಯ ವೇಡೇ । ಕೊಂಡೇ ಪ್ರಾಣ ॥ ೨೭ ॥ ಅಗ್ನೀಚೇ ಅಗ್ನಿಪಣಜಾಯೇ । ಮಗ ತೋ ಧೂಮಚಿ ಅವಘಾ ಹೋಯೇ । ತೇಣೇ ಚೇತನಾ ಗಿಂವಸಿಲೇ ಠಾಯೇ । ಶರೀರಿಂಚೀ ॥೨೮॥ ಜೈಸೇ ಚಂದ್ರಾಆಚ ಆಭಾಳ । ಸದಟ ದಾಟೇ ಸಜಳ । ಮಗ ಗಡದ ನಾ ಉಜಾಳ । ಐಸೇ ಝಾಂಬಳೇ ಹೋಯ ॥ ೨೯ ॥ ಕಾ ಮರೇ ನಾ ಸಾವಧ । ಐಸೇ ಜೀವಿತಾಸೀ ಪಡೇ ಸ್ತಬ್ಧ । ಆಯುಷ್ಯ ಮುರ ಣಾಚೀ ಮರ್ಯಾದ । ವೇಳೂಠಾಕೀ ॥ ೩೦ ॥ ಐಸೀ ಮನಬುದ್ಧಿಕರಣೇ । ಸಭೊಂವತೀ ಧೂಮ ಶುಳಾಚೀ ಕೋಂದಣೇ । ತೇಥ ಜನ್ಮೇ ಜೋಡಲಿಯೇ ವಾಹಣೇ । ಯುಗಾಚೆ ಬುಡೇ ॥ ೩೧ ॥ ಹಾಗಾ ಹಾತೀಚೆ ಜೇ ವೇಳೀ ಜಾಯೇ । ತೇ ವೇಳೀ ಆಣಿಕಾ ಲಾಭಾಚೀ ಗೋಠೀ ಕೇ ಆಹೇ । ಮ್ಹಣೂನಿ ಪ್ರಯಾಣೇ ತವ ಹೋಯೆ । ಯೇತುಲೀ ದಶಾ ॥ ೩೨ ॥ ಐಸೀ ದೇಹಾ ಅಂತ ಸ್ಥಿತೀ । ಬಾಹೇರೀ ಕೃಷ್ಣಪಕ್ಷವರೀ ರಾತೀ । ಆಣಿ ಸಾಮಾಸಹೀ ವೋಡವತೀ । ದಕ್ಷಿಣಾಯನ ॥ ೩೩ ॥ ಇಯೇ ಪುನರಾ ವೃತ್ತೀಚೀ ಫರಾಣೀ । ಆಘವೀ ಏಕವಟತೀ ಜಯಾಚಿಯಾ ಪ್ರಯಾಣೇ । ತೋ ಸ್ವರೂಪ ಸಿದ್ಧೀಚೀ ಕಹಾಣೀ । ಕೈಸೇನಿ ಆಇಕೇ ॥ ೩೪ ॥ ಐಸಾ ಜಯಾಚಾ ದೇಹ ಪಡೇ । ತಯಾ ಯೋಗೀ ಮ್ಹಣೋನಿ ಚಂದ್ರವರೀ ಜಾಣೇ ಫಡೇ । ಮಗ ತೇಥೂನಿ ಮಾಗುತಾ ಬಹುಡೇ । ಸಂಸಾರಾಯೇ ॥ ೩೫ ॥ ಅಮ್ಹೀ ಅಕಾಳ ಜೋ ಪಾಂಡವಾ । ಮ್ಹಣೆತಲಾ ತೋ ಹಾ ಜಾಣಾವಾ । ಆಣಿಹಾಚಿ ಧೂಮ್ಯಮಾರ್ಗ ಗಾಂವಾ । ಪುನರಾವೃತ್ತೀಚಿಯಾ ॥ ೩೬ ॥ ಯೇರ ತೋ ಅರ್ಚಿರಾದಿ ಮಾರ್ಗ । ತೋ ವಸತಾ ಆಣಿ ಅಸಲಗ । ಸಾವಿಯಾ ಸ್ವಸ್ತಚಾಂಗ । ನಿವೃತ್ತೀವರೀ ॥ ೩೭ ॥

ಅರ್ಥ— ಮರಣ ಸಮಯದಲ್ಲಿ ಕಫ ವಾತಾದಿ ತ್ರಿದೋಷಗಳು ಅತಿಧರದಿಂದ ಕೂಡಲು ಅಂತಃಕರಣದಲ್ಲಿ ಕತ್ತಲೆಯಾಗಿ ಹೋಗುತ್ತದೆ. ॥ ೨೬ ॥ ಮತ್ತು ಸರ್ವ ಇಂದ್ರಿಯಗಳ ಗತಿಯು ಕುಂಠಿತವಾಗಿ ಸ್ಮೃತಿಗೆ ಭ್ರಮೆಯುಂ

ಟೀಪು— * ಜ್ಯೋತಿ (ಜ್ಞಾನ) ಈ ಶಬ್ದದ ಬದಲು ಉಪನಿಷತ್ತಿನಲ್ಲಿ ಅರ್ಚಿ (ಜ್ವಾಲೆ) ಈ ಶಬ್ದವಿರುವಕಾರಣ ಮೊದಲನೇ ಮಾರ್ಗಕ್ಕೆ « ಅರ್ಚಿರಾದಿ » ಎಂತಲೂ ಎರಡನೇದಕ್ಕೆ "ಧೂಮ್ರಾದಿ" ಯೆಂತಲೂ ಹೆಸರುಗಳಿವೆ.

೩೨— ೪೪೧೩

ಟಾಗುತ್ತದೆ. ಮನಸಿಗೆ ಹುಚ್ಚುಹಿಡಿದು ಪ್ರಾಣವು ಗೊಂದಲದಲ್ಲಿ ಬೀಳುತ್ತದೆ. ॥ ೨೭ ॥ ಜಠರಾಗ್ನಿಯು ಆರಿ ಹೋಗಿ ಅದರ ಹೊಗೆಯು ನಾಲ್ಕೂಕಡೆಗೆ ಮುಸುಕುವದರಿಂದ ಶರೀರದೊಳಗಿನ ಜ್ಞಾನವು ಅಚ್ಛಾದಿತವಾಗುತ್ತದೆ. ॥ ೨೭ಎ ॥ ಹೇಗೆ ಚಂದ್ರನಿಗೆ ಆದ್ದವಾಗಿ ದಟ್ಟಿತವಾದ ನೀರಿನಿಂದ ತುಂಬಿದ ಮೋಡವು ಬರುವದರಿಂದ ಇತ್ತ ಕಗ್ಗತ್ತಲೆಯೂ ಇರುವದಿಲ್ಲ, ಇತ್ತ ಸ್ವಚ್ಛವಾದ ಪ್ರಕಾಶವು ಬೀಳುವದಿಲ್ಲ, ಮಬ್ಬು ಕತ್ತಲೆಯೇ ಉಂಟಾಗುತ್ತದೆ. ॥ ೨೯ ॥ ಅದೇ ಪ್ರಕಾರಾ ಅವನು ಸಾಯುವದೂ ಇಲ್ಲ, ಮತ್ತು ಸಾವಧನೂ ಇರುವದಿಲ್ಲ, ಈ ರೀತಿಯಿಂದ ಜೀವಿತದ ಸ್ಥಿತಿಯು ಆಗುತ್ತದೆ. ಆಯುಷ್ಯವು ಮರಣ ಕಾಲವನ್ನು ನಿರೀಕ್ಷಣಮಾಡುತ್ತಿರುತ್ತದೆ. ॥ ೨೩೦ ॥ ಈ ರೀತಿ ಮನ, ಬುದ್ಧಿ, ಇಂದ್ರಿಯಗಳ ಸುತ್ತಮುತ್ತಲೆ ಹೊಗೆಯು ದಟಿತವಾಗಿ ಮುಸುಕಿಕೊಳ್ಳುತ್ತದೆ. ಆ ಕಾಲದಲ್ಲಿ ಅವನು ಜನ್ಮ ಇರೋವರೆಗೆ ದೊರಕಿಸಿದ ಸರ್ವ ಲಾಭಗಳು ನಾಶ ಹೊಂದುತ್ತನೆ. ॥ ೨೩೧ ॥ ಹೀಗೆ ನೋಡು, ಯಾವ ವೇಳೆಕ್ಕೆ ಕೈಯೊಳಗಿದ್ದದ್ದೇ ಹೋಗುತ್ತದೆ. ಅಂದಬಳಿಕ ಮರಣ ಸಮಯದಲ್ಲಿ ಇಂಥ ಅವಸ್ಥೆಯು ಪ್ರಾಪ್ತವಾದಮೇಲೆ ಎರಡನೆಯ ಕಡೆಯಿಂದ ಮತ್ತೆನಾದರೂ ಲಾಭವಾದೀತೇನು ? ॥ ೨೩೨ ॥ ಈ ಪ್ರಕಾರಾ ದೇಹದೊಳಗಿನ ಸ್ಥಿತಿಯು ಇದ್ದು ಹೊರಗೆ ಕೃಷ್ಣಪಕ್ಷದ ಹದಿನೈದು ದಿವಸಗಳು, ಅದರಲ್ಲಿ ರಾತ್ರಿ, ಮತ್ತು ದಕ್ಷಿಣಾಯನದೊಳಗಿನ ಆರುತಿಂಗಳ ದಲ್ಲೊಂದು ತಿಂಗಳ ಪ್ರಾಪ್ತವಾಗುತ್ತದೆ. ॥ ೩೩ ॥ ಈ ಎಲ್ಲ ಕುಯೋಗಗಳು ಜನನ ಮರಣದ ಪುನರಾವೃತ್ತಿಯಲ್ಲಿ ತೊಡಕಿಸುವಂಥವು, ಯಾರ ಮರಣ ಸಮಯದಲ್ಲಿ ಒಂದೇ ಕಾಲಕ್ಕೆ ಬಂದೊದಗುತ್ತವೆಯೋ, ಅವರ ಕಿವಿಗೆ ಮೋಕ್ಷ ಪ್ರಾಪ್ತಿಯ ಶಬ್ದವಾದರೂ ಹೇಗೆ ಬಿದ್ದೀತು ? ॥ ೩೪ ॥ ಇಂಥಕಾಲದಲ್ಲಿ ಯಾವನ ದೇಹಾವಸಾನವಾಗುತ್ತದೆ ಅವನು ಯೋಗಿ ಇರುವದರಿಂದ ಅವನಿಗೆ ಚಂದ್ರಲೋಕದವರೆಗೆ ಹೋಗಲಿಕ್ಕೆ ಬರುತ್ತದೆ. ಅಲ್ಲಿಂದ ಹಿಂದಕ್ಕೆ ತಿರುಗಿ ಅವನು ಭವಚಕ್ರದ ಪಾಶದಲ್ಲಿ ಶಿಗುವನು. ॥ ೩೩ಎ ॥ ಎಲೋ ಪಂಡು ಪುತ್ರನೇ ! ಮರಣಕ್ಕೆ ಅಯೋಗ್ಯ ಕಾಲ ನೆಂದು ನಾವು ಹಿಂದೆ ಏನು ಹೇಳಿದ್ದೆವು ಅದು ಇದೇ ಇರುವದೆಂದು ತಿಳಿದುಕೊಳ್ಳುವನಾಗು. ಜನನ ಮರಣದಲ್ಲಿ ತೊಡಕಿಸುವ ಧೂಮ್ರ ಮಾರ್ಗವು ಇದೇ. ॥ ೩೩೬ ॥ ಎರಡನೆಯ "ಅರ್ಚಿರಾದಿ" ಮಾರ್ಗವು ಅದು ಸುಲಭ ಮತ್ತು ಸುಗಮವಾದದ್ದು ಅದೆ. ಮತ್ತು ಅದು ಸಹಜವಾಗಿ ಕಲ್ಯಾಣ ಕಾರಕವಾದದ್ದಿದ್ದು ಮೋಕ್ಷ ಪ್ರಾಪ್ತಿಯನ್ನು ಮಾಡಿಕೊಡಲಿಕ್ಕೆ ಉತ್ತಮವಾದದ್ದು ಅದೆ. ॥ ೩೩೭ ॥

ಶುಕ್ಲಕೃಷ್ಣೇ ಗತೀ ಹ್ಯೇತೇ ಜಗತಃ ಶಾಶ್ವತೇ ಮತೇ ।
ಏಕಯಾ ಯಾತ್ಯನಾವೃತ್ತಿಮನ್ಯಯಾಽವರ್ತತೇ ಪುನಃ ॥ ೨೬ ॥

[ಶುಕ್ಲ ಕೃಷ್ಣೇ ಇತಿ] ಐಸಿಯಾ ಅನಾದಿಯಾ ದೋನೀ ವಾಟಾ । ಏಕೀ ಉಜೂ ಏಕೀ ಅವ್ಹಾಂಟಾ । ಮ್ಹಣವ್ಹಾನಿ ಬುದ್ಧಿಪೂರ್ವಕ ಸುಭಟಾ । ದಾವಿಲಿಯಾ ತುಜ ॥ ೩೪ ॥ ಕಾಜೇ ಮಾರ್ಗಾ ಮಾರ್ಗ ದೇಖಾವೇ । ಸಾಚ ಲಟಕೇ ಓಳಖಾವೇ । ಹಿತಾಹಿತ ಜಾಣಾವೇ । ಹಿತಾಚಿ ಲಾಗೀ ॥ ೩೫ ॥ ಪಾಡೇ ಪಾ ನಾವ ದೇಖತಾ ಬರವೀ । ಕೋಣೇ ಆಡ ಘಾಲೀಕಾಯ ಅಥಾವೀ । ಕಾ ಸುವಂಥ ಜಾಣೋನಿ ಅಡವೀ । ರಿಗವತ ಅಸೇ ॥ ೩೪೦ ॥ ಜೋ ವಿಷ ಅಮೃತ ಓಳಖೇ । ತೋ ಅಮೃತ ಕಾಯ ಸಾಂಡೂ ಶಕೇ । ತೇವೀ ಜೋ ಉಜುವಾಟ ದೇಖೇ । ತೋ ಅವ್ಹಾಂಟಾ ನ ಘಚೇ ॥ ೪೧ ॥ ಮ್ಹಣೋನಿ ಪುಢೇ । ಪಾರಖಾವೇ ಖರೇ ಕುಡೇ । ಪಾರಖಿಲೇ ತರೀ ನ ಪಡೇ । ಅನವಸರೇ ಕಾಂಹೀ ॥ ೪೨ ॥ ಏಥ್ಹವೀ ದೇಹಾಂತೀ ಥೋರ ವಿಷಮ । ಯಾ ಮಾರ್ಗಾಚೇ ಆಹೇ ಸಂಭ್ರಮ । ಜನ್ಮೋ ಅಭ್ಯಾಸಿಲಿಯಾಚೇ ಹನಕಾಮ । ಜಾಈಲ ವಾಯಾ ॥ ೪೩ ॥ ಜರೀ ಅರ್ಚಿರಾದಿ ಮಾರ್ಗ ಚುಕಲಿಯಾ । ಅವಚಟೇ ಧೂಮ್ರಪಂಥೀ ಪಡಿಲಿಯಾ । ತರೀ ಸಂಸಾರ ಪಾಂತೀ ಜುಂತಲಿಯಾ । ಭಂವತಚಿ ಅಸಾವೇ ॥ ೪೪ ॥ ಹೇ ಸಾಯಾಸ ದೇಖೋನಿ ನೋಕೇ । ಅತಾ ಕೈಸೇನಿ ಪಾ ಏಕ ವೇಳ ಫಿಟೇ । ಮ್ಹಣೋನಿ ಯೋಗ ಮಾರ್ಗ

ಗೋಮಟೇ । ಶೋಧಿಲೇ ದೋನ್ಹೀ ॥ ೪೫ ॥ ತವ ಏಕೇ ಬ್ರಹ್ಮತ್ಪ್ರಾ ಜಾಇಜೇ । ಆಣಿ ಏಕೇ ಪುನರಾವೃತ್ತೀಯೇಇಜೇ । ಪರೀ ದೈವಗತ್ಯಾ ಜೋ ಲಾಹಿಜೇ । ದೇಹಾಂತೀ ಜೇಣೇ ॥ ೪೬ ॥

ಅರ್ಥ— ಒಂದು ಸರಲ, ಒಂದು ಅಡ್ಡ ಹೀಗೆ ಎರಡು ದಾರಿಗಳು, ಅನಾದಿಕಾಲದಿಂದ ನಡೆದು ಬಂದಿರುತ್ತವೆ. ಆದುದರಿಂದ ಎಲೋ ಮಹಾವೀರನೇ! ಅವನ್ನು ನಿನಗೆ ಬುದ್ಧಿಪೂರ್ವಕವಾಗಿ ತೋರಿಸಿದ್ದೇನೆ. ॥ ೩೮ ॥ ಯಾಕಂದರೆ ಆ ಮಾರ್ಗದಲ್ಲಿ ಉತ್ತಮವಾದದ್ದು ಯಾವದು, ಮತ್ತು ಕೆಡಕು ಯಾವದೆಂಬದು ನಿನಗೆ ಒಡೆದು ಕಾಣಬೇಕು. ಮತ್ತು ನಿಜವಾದದ್ದು ಯಾವದು ಎಂಬದರ ವಿಚಾರವನ್ನು ಮಾಡಬೇಕಾಗುವದು. ॥ ೩೯ ॥ ಹೀಗೆ ನೋಡು, ಉತ್ತಮವಾದ ನೌಕೆಯನ್ನು ನೋಡಿದ ಮೇಲೆಯೂ ಆಳವಾದ ಮಡುವಿನಲ್ಲಿ ಯಾರಾದರೂ, ಹಾರಿಕೊಳ್ಳುವರೇ ? ಅಥವಾ ಸರಳವಾದ ರಾಜಮಾರ್ಗವನ್ನು ಬಿಟ್ಟು ಅಡದಾರಿಯನ್ನು ಹಿಡಿದು ಯಾರಾದರೂ ಹೋಗುವರೇನು ? ॥ ೪೦ ॥ ವಿಷ ಮತ್ತು ಅಮೃತ ಈ ಎರಡೂ ಪದಾರ್ಥಗಳನ್ನು ಪರೀಕ್ಷಿಸಬಲ್ಲನು. ಅಮೃತವನ್ನು ಚಲ್ಲಿಕೊಡುವನೇನು ? ಅದೇ ಪ್ರಕಾರ ಯಾವನು ಸರಳ ಮಾರ್ಗವನ್ನು ನೋಡಿರುತ್ತಾನೋ, ಅವನು ಅಡಮಾರ್ಗವನ್ನು ಎಂದಿಗೂ ಹಿಡಿಯುವದಿಲ್ಲ. ॥ ೪೧ ॥ ಆದುದರಿಂದ ಮೊದಲಿಗೆ ನಿಜವಾದದ್ದಾವುದು, ಮತ್ತು ಅಸತ್ಯವಾದದ್ಯಾವದೆಂಬುದನ್ನು ಪರೀಕ್ಷಿಸಲಿಕ್ಕೆ ಬೇಕು. ಹಾಗೆ ಮಾಡದವನು ಯಾವಾಗ್ಯೂ ಸಂಕಟದಲ್ಲಿ ಬೀಳುವದಿಲ್ಲ. ಅವನ ದೇಹವು ಅಕಾಲದಲ್ಲಿ, ಬಿದ್ದು ಹೋಗುವದಿಲ್ಲ. ॥ ೪೨ ॥ ಹಾಗೆ ಮಾಡದೇ ಇದ್ದರೆ, ಮರಣ ಕಾಲದಲ್ಲಿ ಈ ಭ್ರಾಂತಿಕಾರಕ ಧೂಮ್ರ ಮಾರ್ಗದ ದೊಡ್ಡ ಭಯವು ಮತ್ತು ಸಂಕಟವು ಅದೆ. ಇದರ ಹೊರ್ತು ಜನ್ಮದಾರಭ್ಯ ಯಾವ ಹೇತುವಿನಿಂದ ಅಭ್ಯಾಸ ಮಾಡಿರುವನು, ಅದು ವ್ಯರ್ಥವಾಗಿ ಹೋಗುವದು. ॥ ೪೩ ॥ ಅರ್ಚಿರಾದಿ ಮಾರ್ಗವು ತಪ್ಪಿ ಹೋಗಿ ಅಕಸ್ಮಾತ್ ಧೂಮ್ರ ಮಾರ್ಗದಲ್ಲಿ ಬಿದ್ದರೆ ಜನನಮರಣದ ಚಕ್ರದಲ್ಲಿ ತೊಡಕಿಕೊಂಡು ಯಾವಾಗಲೂ ಸುತ್ತುತ್ತಲೇ ಇರಬೇಕಾಗುವದು. ॥ ೪೪ ॥ ಈ ಜನನ ಮರಣದ ಕಷ್ಟವನ್ನು ನೋಡಿ ಈ ಸಂಕಟವು ಯಾವದರಿಂದ ಇಲ್ಲದಂತೆ ಆದೀತೆಂದು ವಿಚಾರಮಾಡಿ ಈ ಎರಡೂ ಯೋಗ ಮಾರ್ಗಗಳನ್ನು ಚೆನ್ನಾಗಿ ಸ್ಪಷ್ಟವಾಗಿ ಹೇಳಿರುವೆನು. ॥ ೪೪ ॥ ಆದರೆ ಒಂದು (ಅರ್ಚಿರಾದಿ) ಮಾರ್ಗದಿಂದ ಬ್ರಹ್ಮ ಪ್ರಾಪ್ತಿಯಾಗುತ್ತದೆ. ಇನ್ನೊಂದು (ಧೂಮ್ರಮಾರ್ಗದಿಂದ) ಪುನರ್ಜನ್ಮಕ್ಕೆ ಬರಬೇಕಾಗುತ್ತದೆ. ಆದರೆ ದೇಹಾವಸಾನದ ಕಾಲಕ್ಕೆ ಪ್ರಾಕ್ತನಾನು ಸಾರವಾಗಿ ಯಾವನಿಗೆ ಯಾವದು ಪ್ರಾಪ್ತವಾದೀತು ಅದೇ ನಿಜ ॥ ೪೪ ॥

ನೈತೇ ಸೃತೀ ಪಾರ್ಥ ಜಾನನ್ ಯೋಗೀ ಮುಹ್ಯತಿ ಕಶ್ಚನ ।
ತಸ್ಮಾತ್ಸರ್ವೇಷು ಕಾಲೇಷು ಯೋಗಯುಕ್ತೋ ಭವಾರ್ಜುನ ॥ ೨೭ ॥

[ನೈತೇ ಇತಿ] ತೇ ವೇಳೀ ಮ್ಹಣಿತಲೇ ಹೇ ನವ್ಹೇ । ವಾಯಾ ಅವಚಟೇ ಕಾಯ ಪಾವೇ । ದೇಹ ತ್ಯಜೂನಿ ವಸ್ತು ಹೋಆವೇ । ಮಾಗೇರ್ ಚ ಕೀ ॥ ೪೭ ॥ ತರೀ ಆತಾ ದೇಹ ಅಸೋ ಆಥವಾ ಜಾವೋ । ಆಮ್ಹೀ ತೋ ಕೇವಳ ವಸ್ತೂಚಿ ಆಹೋ । ಕಾ ಜೇ ದೋರೀ ಸರ್ವತ್ವವಾವೋ । ದೋರಾಚಿ-ಕಡೂನಿ ॥ ೪೪ ॥ ಮಗ ತರಂಗ ಪಣ ಅಸೇ ಕೀ ನಸೇ । ಐಸೇ ಹೇ ಉದಕಾ ಪ್ರತಿ ಕಹಿ ಭಾಸೇ । ತೇ ಭಲತೇವ್ಹಾ ಜೈಸೇ ತೈಸೇ । ಉದಕಚಿ ಕೀ ॥ ೪೯ ॥ ತರಂಗಾಕಾರೀ ನ ಜನ್ಮೇಚಿ । ನಾ ತರಂಗ ಲೋಪೇ ನಿಮೇಚಿ । ತೇವೀ ದೇಹೀ ಜೀ ದೇಹೇಂಚಿ । ವಸ್ತು ಜಾಹಾಲೀ ॥ ೫೦ ॥ ಆತಾ ಶರೀರಾಚೇ ತಯಾಂಚಿಯಾ ರಾಈ । ಆಡನಾವಹೀ ಉರಲೇ ನಾಹೀ । ತರೀ ಕೋಣೇ ಕಾಳೀ ಕಾಈ । ನಿಮೇ ತೇ ಪಾಹೇ ಪಾ ॥ ೫೧ ॥ ಮಗ ಮಾರ್ಗಾತೇ ಕಾಸಯಾ ಶೋಧಾವೇ । ಕೋಣೇ ಕೋಠೂನಿ ಕೇ ಜಾವೇ । ಜರೀ ದೇಶ ಕಾಳಾದಿ ಆಘವೇ ಆಪಣಚಿ ಅಸೇ ॥ ೫೨ ॥ ಆಣಿ ಹಾ ಗಾ ಘಟ್ಟ ಜೇ ವೇಳೀ ಘಟೀ । ತೇ ವೇಳೀ ತೇಥೀಂಚೇ ಆಕಾಶ ಲಾಗೇ ನೀಟ ವಾಟೇ । ವಾಟಾ ಲಾಗಲೇ ತರಿ ಗಗನಾ ಭೇಟೇ । ಯೇರವೀ ಚುಕೇ ॥ ೫೩ ॥

ಪಾಹೇ ಪಾ ಐಸೇ ಹನ ಆಹೇ । ಕೀ ತೋ ಆಕಾರೂಚಿ ಜಾಯೇ । ಯೇರ ಗಗನ ತೇ ಗಗನೀಚಿ ಆಹೇ । ಘಟತ್ವಾಹೀ ಆಧೀ ॥ ೫೪ ॥ ಐಸಿಯಾ ಬೋಧಾಚೇನಿ ಸುರವಾಡೇ । ಮಾರ್ಗ ಮಾರ್ಗಾಚೇ ಸಾಂಕಡೇ । ತಯಾ ಸೋಹಂ ಸಿದ್ಧಾ ನ ಪಡೇ । ಯೋಗಿ ಯಾಂಸೀ ॥ ೫೫ ॥ ಯಾ ಕಾರಣೇ ಪಾಂಡುಸುತಾ । ತುವಾ ಹೋ ಆವೇ ಯೋಗ ಯುಕ್ತಾ । ತೇತುಲೇನಿ ಸರ್ವ ಕಾಳೀ ಸಾಮ್ಯತಾ । ಆಪೈಸಯಾ ಹೋಯಿಲ ॥ ೫೬ ॥ ಮಗ ಭಲತೇಥ ಭಲತೇ ವ್ಹಾ । ದೇಹ ಅಸೋ ಅಥವಾ ಜಾವಾ । ಪರೀ ಅಬಂಧಾ ನಿತ್ಯ ಬ್ರಹ್ಮಭಾವಾ । ವಿಘಡ ನಾಹೀ ॥ ೫೭ ॥ ತೋ ಕಲ್ಪಾದಿ ಜನ್ಮಾ ನಾಗವೇ । ಕಲ್ಪಾಂತೀ ಮರಣೇ ನಾಸ್ಲನೇ । ಮಾಜೀ ಸ್ವರ್ಗ ಸಂಸಾರಾಚೇನಿ ಲಾಘವೇ । ಝುಕವೇನಾ ॥ ೫೮ ॥ ಯೇಣೇ ಬಾಧೆ ಜೋ ಯೋಗೀ ಹೋಯೇ । ತಯಾಸೀಚಿ ಯಾ ಬೋಧಾಚೇ ನೀಟಪಣ ಆಹೇ । ಕಾ ಜೇ ಭೋಗಾಂಚೇ ಪೇಲೂನ ಪಾಯೇ । ನಿಜ ರೂಪಾ ಯೇ ॥ ೫೯ ॥ ಪೈಗಾ ಇಂದ್ರಾದಿಕಾ ದೇವಾ । ಜಯಾ ಸರ್ವಸ್ವೇ ಸ್ವರ್ಗೀ ಗಾಜತೀ ರಾಣಿವಾ । ತೇ ಸಾಂಡಣೇ ಮಾನೂನಿ ಪಾಂಡವಾ । ಡಾವಲೀ ಜೋ ॥ ೬೦ ॥

ಅರ್ಥ— (ಮರಣಕಾಲದಲ್ಲಿ ಅರ್ಚಿರಾದಿ ಮಾರ್ಗವು ನಮ್ಮ ಪಾಲಿಗೆ ಬರುತ್ತದೋ, ಅಥವಾ ಧೂಮ್ರು ಮಾರ್ಗವು ಬಂದು ಒದಗುತ್ತದೆಂಬಮ ಅನಿಶ್ಚಿತವಾಗಿರುತ್ತದೆಂಬದನ್ನು ನೋಡಿ ಅರ್ಜುನನು ಖಿನ್ನನಾದನು.) ಆ ವೇಳೆದಲ್ಲಿ ಭಗವಂತನು ಅನ್ನುತ್ತಾನೆ. ದೇಹವು ಹೋಗಿ ಅರ್ಚಿರಾದಿ ಮಾರ್ಗದಿಂದ ಬ್ರಹ್ಮರೂಪವಾದೀತೆಂಬದು ವ್ಯರ್ಥವಾದದ್ದಿರುತ್ತದೆ. ಕಾರಣವೇನಂದರೆ ಪ್ರಾರಬ್ಧವಶಾತ್ ಅಳಸ್ಮಾತ ಯಾವಮು ಪ್ರಾಪ್ತವಾದೀತೆಂಬದು ಯಾರಿಗೆ ಗೊತ್ತಾಗುವದು ? (ಅದು ತಿಳಿಯುವದಿಲ್ಲ.) ಆದುದರಿಂದ ಇದು ಬೇಡೇ ಬೇಡ. ॥ ೫೭ ॥ ಆದರೆ ಇನ್ನು ಮೇಲೆ ದೇಹ ಇರಲಿ, ಅಥವಾ ಹೋಗಲಿ, ನಾವು ಕೇವಲ ಬ್ರಹ್ಮಸ್ವರೂಪನೇ ಇದ್ದೇವೆಂಬವನ್ನು ಜ್ಞಾನಿಗಳು ತಿಳಿಯುತ್ತಾರೆ. ಕಾರಣವೇನಂದರೆ ಹಗ್ಗದ ಮೇಲಿನ ಸರ್ಪನ ಭ್ರಮೆಯು ಹಗ್ಗದ ಸತ್ಯತ್ವವು ಕಂಡು ಬಂದಕೂಡಲೆ ಹೇಗೆ ಇಲ್ಲದಂತೆ ಆಗುತ್ತದೆ. ॥ ೫೮ ॥ ತನ್ನ ಮೇಲೆ ಥೆರೆಗಳು ಬರುತ್ತವೆ ಅಥವಾ ಇಲ್ಲದಂತೆ ಆಗಿರುತ್ತವೆಂಬದು, ಯಾವ ಕಾಲದಲ್ಲಿಯೂ, ನೀರಿಗೆ ಭಾಸವಾಗುವದೇನು ? ಆದರೆ ಯಾವಾಗ ನೋಡಿದರೂ ನೀರು ಇದ್ದಕ್ಕಿದ್ದಂತೆ ಸ್ಥಿರವಾಗಿಯೇ ಇರುತ್ತದೆ. ॥ ೫೯ ॥ ಆ ನೀರಿನಲ್ಲಿ ಥೆರೆಗಳು ಉಂಟಾಗುವದರಿಂದ ಅವು ಜನ್ಮ ಹೊಂದುವದಿಲ್ಲ, ಇಲ್ಲವೇ ಥೆರೆಗಳು ಇಲ್ಲದಂತೆ ಆದಮೇಲೆಯೂ ಆ ನೀರು ನಾಶ ಹೊಂದುವದಿಲ್ಲ. ಈ ಪ್ರಕಾರಾ ದೇಹದಲ್ಲಿದ್ದು ಯಾರು ದೇಹಸಹಿತ ಬ್ರಹ್ಮರೂಪವಾದರು, ॥ ೬೫೦ ॥ ಅನರು ಬ್ರಹ್ಮರೂಪವಾದಮೇಲೆ ಆ ತತ್ವವೇತ್ಯರಲ್ಲಿ ಶರೀರವೆಂಬ ಹೆಸರೇ ಉಳಿಯುವದಿಲ್ಲ. ಆದರೆ ಅಲ್ಲಿ ಯಾವ ಕಾಲದಲ್ಲಿ ಯಾವದು ನಾಶ ಹೊಂದುವದದೆ ? ॥ ೬೫೧ ॥ ಆದರೆ ಸರ್ವ ದೇಶಕಾಲ ಮುಂಕಾದವು ತಾನೇ ಆಗಿರಲು ಅಂದಬಳಿಕ "ಅರ್ಚಿರಾದಿ" ಅಥವಾ "ಧೂಮ್ರು ಮಾರ್ಗ" ಇವುಗಳ ಶೋಧನೆಮಾಡುತ್ತ ಏಕೆ ಕೂಡಬೇಕು ಮತ್ತು ಯಾರು ಎಲ್ಲಿಂದ ಎಲ್ಲಿಗೆ ಹೋಗಬೇಕಾಗಿರುವದು ? ॥ ೬೫೨ ॥ ಮತ್ತು ಯಾವ ವೇಳ್ಯೆಕ್ಕೆ ಕೊಡವು ನಡಿಯುತ್ತದೆ. ಆಗ್ಗೆ ಆ ಕೊಡದಲ್ಲಿರುವ ಆಕಾಶವು ಸರಳ ಮಾರ್ಗದಿಂದ ಹೋದರೆ ಅದು ಮಹದಾಕಾಶದಲ್ಲಿ ಹೋಗಿ ಕೂಡುತ್ತದೆ. ಇಲ್ಲವೇ ಇದ್ದರೆ ಕೂಡುವದು ತಪ್ಪುವದೇನು ? ॥ ೬೫೩ ॥ ಹೀಗೆ ನೋಡು ನಿಜವಾದ ಮಾತು ಹೇಗೆ ಇರುವದೆಂದರೆ ಆ ಘಟದ ಆಕಾರದ್ದೇ ನಾಶವಾಗುತ್ತದೆ. ಆದರೆ ಘಟಾಕಾಶವು ಘಟನಿರ್ಮಾಣ ಮಾಡುವ ಸ್ಥರ್ವದಲ್ಲಿಯೂ, ಮೂಲತಃ ಆಕಾಶರೂಪವಾಗಿಯೇ ಇರುವದು. ॥ ೫೪ ॥ ಈ ತರದ ಬೋಧದ ಅನ ಕೂಲತೆಯಿಂದ ನಾನು ಬ್ರಹ್ಮಸ್ವರೂಪನಾಗಿರುವೆನೆಂದು ಜ್ಞಾನವಾದ ಯೋಗಿಗಳಿಗೆ ಅರ್ಚಿರಾದಿ ಅಥವಾ ಧೂಮ್ರು ಮಾರ್ಗದ ಸಂಕಟವು ಬೀಳುವದಿಲ್ಲ. ॥ ೬೫೫ ॥ ಈ ಕಾರಣದ ದೆಶೆಯಿಂದ ಎಲೋ ಪಂಡುಪುತ್ರನೇ ! ನೀನು ಯೋಗ ಸಂಪನ್ನನಾಗು ಆ ಯೋಗದಿಂದ ನಿನಗೆ ಯಾವಾಗಲೂ ತನ್ನಿಂದ ತಾನೇ ಬ್ರಹ್ಮಸ್ವರೂಪತಾ ಪ್ರಾಪ್ತವಾದೀತು. ॥೬೫೬॥

ಆ ಮೇಲೆ ಬೇಕಾದ ಸ್ಥಳದಲ್ಲಿ ಬೇಕಾದಾಗ್ಗೆ ದೇಹವು ಇರಲಿ ಅಥವಾ ಹೋಗಲಿ. ಆದರೆ ನಿಷ್ಪ್ರತಿಬಂಧಪರಬ್ರಹ್ಮ ಸ್ವರೂಪಕ್ಕೆ ಅಂತರ ಬೀಳಲಿಕ್ಕಿಲ್ಲ. ॥ ೨೫೬ ॥ ಅದು ಸೃಷ್ಟಿಯ ಆರಂಭದಲ್ಲಿ ಜನ್ಮಕ್ಕೆ ಬರುವದಿಲ್ಲ ಸೃಷ್ಟಿಯು ಅಂತ್ಯದಲ್ಲಿ ಮರಣವನ್ನು ಹೊಂದುವದಿಲ್ಲ ಮತ್ತು ಸೃಷ್ಟಿಯ ಸ್ಥಿತಿಯಲ್ಲಿ ಸ್ವರ್ಗ ಮತ್ತು ಸಂಸಾರಸುಖ ಇವುಗಳ ಮೋಹದಿಂದ ಯಾವಾಗಲೂ ಮೋಸಹೋಗುವದಿಲ್ಲ. ॥ ೫೮ ॥ ಈ ಬೋಧದಿಂದ ಯಾವ ಯೋಗಿಯು ಸಾವಧಾನವಾಗಿರುತ್ತಾನೋ, ಅವನಿಗೆ ಈ ಬೋಧದ ಫಲಪ್ರಾಪ್ತಿಯು ಆಗುತ್ತದೆ. ಕಾರಣನೇನಂದರೆ ಅವನು ವಿಷಯೋಪಭೋಗವನ್ನು ದಾಟಿ ಬ್ರಹ್ಮರೂಪದಲ್ಲಿ ಕೂಡಿರುತ್ತಾನೆ ॥ ೫೯ ॥ ಹೀಗೆ ನೋಡು, ಇಂದ್ರ ಮೊದಲಾದ ದೇವತೆಗಳಿಗೆ ಸ್ವರ್ಗದಲ್ಲಿ ಯಾವಾಗಲೂ ಸರ್ವಪ್ರಕಾರದ ಸುಖೋಪಭೋಗವು ದೊರಕುತ್ತದೆ. ಅರ್ಜುನನೆ! ಆ ಸುಖವನ್ನು ನಿವಾಳಿಸಿ ಒಗೆದ ಪದಾರ್ಥದಂತೆ ತ್ಯಾಜ್ಯವೆಂದು ತಿಳಿದು ಆ ಸುಖವನ್ನು (ಬ್ರಹ್ಮಜ್ಞಾನಿಗಳು) ದೂರವಾಗಿ ಸರಿಸಿ ಬಿಟ್ಟಿರುತ್ತಾರೆ. ॥ ೨೬೦ ॥

ವೇದೇಷು ಯೆಜ್ಞೇಷು ತಪಸ್ಸು ಚೈವ ದಾನೇಷು ಯತ್ಪುಣ್ಯಫಲಂ ಪ್ರದಿಷ್ಟಂ ॥
ಅತ್ಯೇತಿ ತತ್ಸರ್ವಮಿದಂ ವಿದಿತ್ವಾ ಯೋಗೀ ಪರಂ ಸ್ಥಾನಮುಪೈತಿ ಚಾದ್ಯಂ ॥೨೮॥

ಇತಿ ಶ್ರೀಮದ್ಭಗವದ್ಗೀತಾ ಸೂಪನಿಷತ್ಸು ಬ್ರಹ್ಮವಿದ್ಯಾಯಾಂ ಯೋಗಶಾಸ್ತ್ರೇ ಶ್ರೀಕೃಷ್ಣಾರ್ಜುನ
ಸಂವಾದೇ ' ಅಕ್ಷರ ಬ್ರಹ್ಮಯೋಗೋ ' ನಾಮ ಅಷ್ಟಮೋಽಧ್ಯಾಯಃ ॥ ೮ ॥

[ವೇದೇಷ್ವಿತಿ] ಜರೀ ವೇದಾಧ್ಯಯನಾಚೇ ಜಾಲೇ । ಅಥವಾ ಯಜ್ಞಾಚೇ ಶೇತ ಪಿಕಲೇ । ಕೀ ತಪದಾನಾಂಚೇ ಜೋಡಲೇ । ಸರ್ವಸ್ವ ಹನಜೇ ॥ ೬೧ ॥ ತಯಾ ಆಫವಾ ಪುಣ್ಯಾಚಾ ಮಳಾ । ಭಾರ ಆಂತೌನಿ ಜಯಾ ಯೇ ಫಳಾ । ತೇ ಪರಬ್ರಹ್ಮಾ ನಿರ್ಮಳಾ । ಸಾಂಟ ನ ಸರೆ ॥ ॥ ೬೨ ॥ ಜೇ ನಿತ್ಯಾನಂದಾಚೇನಿ ಮಾನೇ । ಉಸನೇಂಚಾ ಕಾಂಟಾಳಾ ನದಿಸೇ ಸಾನೇ । ಪಾ ಹಾ ಪಾ ವೇದ ಯಜ್ಞಾದಿ ಸಾಧನೇ । ಜಯಾ ಸುಖಾ ॥ ೬೩ ॥ ಜೇ ವಿಟೇ ನಾಸರೇ । ಭೋಗೀ ತಯಾ ಚೇನಿ ಪವಾಡೇ ಪುರೆ । ಪುಢತೀ ಮಹಾ ಸುಖಾಚೇ ಸೋಯೀರೇ । ಭಾವಂಡಚೀ ॥ ೬೪ ॥ ಐಸೇ ದೃಷ್ಟೀಚೇನಿ ಸುಖಪಣೇ । ಜಯಾಸೀ ಅದೃಷ್ಟಾಚೇ ಬೈಸಣೇ । ಜೇ ಶತಮಖಾಹೀ ಆಂಗವಣೇ ನೋಹೇಚಿ ಏಕಾ ॥ ೬೫ ॥ ತಯಾತೇ ಯೋಗೀಶ್ವರ ಅಲೌಕಿಕೇ । ದಿಠೀಚೇನಿ ಹಾತ ತುಕೇ । ಅನುಮಾನತೀ ಕೌತುಕೇ । ತವ ಹಳವಾರ ಆವಡೇ ॥ ೬೬ ॥ ಮಗ ತಯಾ ಸುಖಾಚೀ ಕಿರೀಟೀ । ಕರೂನಿಯಾ ಗಾ ಪಾವುಠೀ । ಪರಬ್ರಹ್ಮಾಚಿಯೇ ಪಾಠೀ । ಆರೂಢತೀ ॥ ೬೭ ॥ ಐಸೆ ಚರಾ ಚರ್ಯೆಕ ಭಾಗ್ಯ । ಜೇ ಬ್ರಹ್ಮೈಶಾ ಆರಾಧನೇ ಯೋಗ್ಯ । ಯೋಗಿಯಾಂಚೇ ಭೋಗ್ಯ । ಭೋಗಧನ ಜೇ ॥ ೬೮ ॥ ಜೋ ಸಕಳಕಳಾಚೀ ಕಳಾ । ಜೋ ಪರಮಾನಂದ ಪುತಳಾ । ಜೋ ಜೀವಾಚಾ ಜಿವ್ಹಾಳಾ । ವಿಶ್ವಾಚಿಯಾ ॥ ೬೯ ॥ ಜೋ ಸರ್ವಜ್ಞತೇಚಾ ವೋಲಾವಾ । ಜೋ ಯಾದವ ಕುಳೀಂಚಾ ಕುಳದಿವಾ । ತೋ ಶ್ರೀಕೃಷ್ಣಜೀ ಪಾಂಡವಾ । ಪ್ರತೀ ಬೋಲಿಲಾ ॥ ೭೦ ॥ ಐಸಾ ಕುರು ಕ್ಷೇತ್ರೀಂಚಾ ವೃತ್ತಾಂತ । ಸಂಜಯೋರಾಯಾಸಿ ಅಸೇ ಸಾಂಗತ । ತೇಚಿ ಪರಿಯೇಸಾ ಪುಢಾರೀ ಮಾತ ಜ್ಞಾನದೇನ ವ್ಹಣೇ ॥೭೧॥

ಇತಿ ಶ್ರೀಜ್ಞಾನದೇವವಿರಚಿತಾಯಾಂ ಭಾವಾರ್ಥದೀಪಿಕಾಯಾಂ ಅಷ್ಟಮೋಽಧ್ಯಾಯಃ ॥ ೮ ॥ ಹೊಸೇಳ ೨೮, ಓವಿಗಳು ೨೬೧

ಆರ್ಥ— ಒಂದುನೇಳೆ ವೇದಾಧ್ಯಯನಮಾಡಿ ವೈದಿಕನಾದರೆ, ಅಥವಾ ಯಜ್ಞಮಾಡಿ ಪುಣ್ಯದ ಹೊಲವೇ ಬೆಳೆದರೆ, ಇಲ್ಲವೇ ತಪಶ್ಚರ್ಯೆ ಮತ್ತು ದಾನಮಾಡಿ ಸರ್ವಪುಣ್ಯಗಳನ್ನು ದೊರಕಿಸಿದರೆ, ॥ ೨೬೧ ॥ ಇಂಥ ಪ್ರಕಾರದ ಸರ್ವಪುಣ್ಯಗಳ ತೋಟವು ಫಲದ ಭಾರದಿಂದ ತುಂಬಿಹೋದರೆ, ಆ ಸರ್ವ ಸುಕೃತಗಳು ನಿತ್ಯಶುದ್ಧ ಪರಮಾತ್ಮ ಪರಬ್ರಹ್ಮನ ಸಮಾನವಾಗಲಾರಿಯವು. ॥ ೨೬೨ ॥ ಯಾವದು ನಿತ್ಯಾನಂದದ ತುಲನೆಯ ತಕ್ಕಡಿಯಲ್ಲಿ

ಹಾಕಿನೋಡಲು, ಪರಬ್ರಹ್ಮ ರೂಪಕ್ಕೆ ಸಂಣದಾಗುತ್ತದೋ ಯಾವ ಸುಖದ ಪ್ರಾಪ್ತಿಯದೆಶೆಯಿಂದ ವೇದಯಜ್ಞಾದಿ ಸಾಧನಗಳನ್ನು ಮಾಡಬೇಕಾಗುತ್ತದೋ, ॥೨೬೩॥ ಆ ಸ್ವರ್ಗಸುಖವು ಬೇಸರವಾಗುವದಿಲ್ಲ. ಮತ್ತು ತೃಪ್ತಿಯಾಗುವಂತೆ ಇಲ್ಲ. (ಮುಗಿಯುವದಿಲ್ಲ.) ಮತ್ತು ಭೋಗ ತೆಗೆದುಕೊಳ್ಳುವವರ ಇಚ್ಛಾ ಪೂರ್ಣವಾಡುತ್ತದೆ, ಹೊರತು ಸ್ವರ್ಗಸುಖವು (ಮಹಾಸುಖ) ಅಂದರೆ ಪರಬ್ರಹ್ಮ ಸುಖದ ಪ್ರೀತಿಯ ತಂಮನೇ ಆಗಿರುವದು. ॥ ೨೬೪ ॥ ಈ ಪ್ರಕಾರಾ ಮೇಲಿಂದಲೇ ಮಾತ್ರ ಕಾಣುವ ಆ ಸುಖವು, ಮರಣಾನಂತರವೇ ದೊರಕುತ್ತದೆ. ಮತ್ತು ಅದು ನೂರುಯಜ್ಞಗಳನ್ನು ಮಾಡಿಯೂ, ಎಷ್ಟೋಜನರಿಗೆ ದೊರಕುವದಿಲ್ಲ. ॥ ೨೬೫ ॥ ಆ ಸ್ವರ್ಗಸುಖಕ್ಕೆ ಯೋಗೀಶ್ವರರು (ತಂಮ) ಲೋಕೋತ್ತರ ವಿಚಾರ ದೃಷ್ಟಿರೂಪಿ ಕೈಮೇಲೆ ಲೀಲೆಯಿಂದ ತೂಗಿನೋಡಲು, ಬ್ರಹ್ಮ ಸುಖದಮುಂದೆ ಸ್ವರ್ಗಸುಖವು ಹಗುರಾಗಿರುವದೆಂದು ಕಂಡುಬರುತ್ತದೆ. ॥ ೨೬೬ ॥ ಅರ್ಜುನನೇ ! ಆ ಮೇಲೆ ಆ ಯೋಗೀಶ್ವರರು ಆ ಸ್ವರ್ಗಸುಖದ ಪಾವಟಿಗೆಗಳನ್ನು ಮಾಡಿ ಪರಬ್ರಹ್ಮದ ರಾಜ್ಯದ ಮೇಲೆ ಆರೂಢರಾಗುತ್ತಾರೆ. ॥ ೨೬೭ ॥ ಈ ಪ್ರಕಾರಾ ಸ್ಥಾವರ ಜಂಗಮಾತ್ಮಕ ಜಗತ್ಯದ ಯಾವ ಒಂದು ಭಾಗ್ಯವು ಆದೆ, ಆದು ಬ್ರಹ್ಮದೇವನಿಗೂ, ಮತ್ತು ಶ್ರೀಶಂಕರನಿಗೂ, ಸಹಾ ಆರಾಧನೆ ಮಾಡುವಂಥದು, ಮತ್ತು ಯೋಗಿಗಳಿಗೆ ಉಪಭೋಗ ತೆಗೆದುಕೊಳ್ಳಲಿಕ್ಕೆ ಯೋಗ್ಯವಾದ ವಸ್ತು ಯಿರುತ್ತದೆ. ॥ ೨೬೮ ॥ ಮತ್ತು ಆದ್ಯ ಜ್ಞಾನಸ್ವರೂಪನು, ಮತ್ತು ಯಾವನು ಪರಮಾನಂದದ ಕೇವಲಮೂರ್ತಿಯು, ಯಾವನು ಸರ್ವ ವಿಶ್ವದೊಳಗಿನ ಪ್ರಾಣಿ ಮಾತ್ರಗಳ ಜೀವನನು, ॥ ೨೬೯ ॥ ಯಾವನು ಸರ್ವಜ್ಞಾನದ ಜೀವನ ನಾಗಿರುವನೋ, ಮತ್ತು ಯಾವಕುಲದ ಕುಲದೀಪಕನಾದ ಭಗವಾನ್ ಶ್ರೀಕೃಷ್ಣನು ಅರ್ಜುನನಿಗೆ ಹೀಗೆ ಮಾತನಾಡಿದನು. ॥ ೨೭೦ ॥ ಈ ಪ್ರಕಾರಾ ಕುರುಕ್ಷೇತ್ರದಲ್ಲಿಯ ಕಥೆಯು ಭಾಗನನ್ನು ಸಂಜಯನು ಧೃತರಾಷ್ಟ್ರರಾಜನ ಮುಂದೆ ಹೇಳುತ್ತಿದ್ದನು. ಆ ಕಥೆಯನ್ನು ಮುಂದೆ ಹೇಳುವೆನು. ಶ್ರವಣ ಮಾಡಿರೆಂದು ಶ್ರೀಜ್ಞಾನೇಶ್ವರರು ಅನ್ನುತ್ತಾರೆ. ॥ ೨೭೧ ॥

ಶ್ರೀಮದ್‌ಭಗವದ್ಗೀತೆಯು ಮತ್ತು ಶ್ರೀಜ್ಞಾನೇಶ್ವರಿಯು ಸರಲ, ಸುಲಭ, ಕನ್ನಡ, ಅನುವಾದದ ಎಂಟನೆಯ ಅಧ್ಯಾಯವು ಮುಗಿದುದು.

ಸಮಾಪ್ತವು

ಶ್ರೀಕೃಷ್ಣಾರ್ಪಣಮಸ್ತು



ಜ್ಞಾನೇಶ್ವರೀ

ಒಂಬತ್ತನೆಯ ಅಧ್ಯಾಯವು

ತರೀ ಅವಧಾನ ಯೇಕಲೇ ದೀಜೇ । ಮಗ ಸರ್ವ ಸುಖಾಸಿ ಪಾತ್ರು ಹೋಇಜೇ । ಹೇ ಪ್ರತಿ
ಜ್ಞೋತ್ತರ ಮಾಯಿ । ಉಘಡ ಆಇಕಾ ॥ ೧ ॥ ಪರೀ ಪೌಢಿ ನ ಬೋಲೇ ಹೋಜೀ । ತುಮ್ಹಾ
ಸರ್ವಜ್ಞಾಂಚ್ಯಾ ಸಮಾಜೀ । ದೇಯಾವೀ ಅವಧಾನ ಹೇ ಮಾಯಿ । ವಿನವಣೀ ಸಲಗೀಚೀ ॥ ೨ ॥
ಕಾ ಜೇ ಲಳೀಯಾಂಚೇ ಲಳೇ ಸರತೀ । ಮನೋರಥಾಂಚೇ ಮನೋರಥ ಪುರತೀ । ಜರೀ
ಮಾಹೇರ ಶ್ರೀಮಂತೇ ಹೋತೀ । ತುಮ್ಹಾ ಐಸೀ ॥ ೩ ॥ ತುಮಚೇಯಾ ದಿಠೀವೇಯಾಚಿಯೇ
ಬೋಲೇ । ಸಾಸಿನ್ನಲೇ ಪ್ರಸನ್ನ ತೇಚೇ । ತೇಸಾವುಲೇ ದೇಖೋನಿ ಲೋಳೇ । ಶ್ರಾಂತ
ಜೀ ಮೀ ॥ ೪ ॥ ಪ್ರಭೂ ತುಮ್ಹೀ ಸುಖಾನ್ಯುತಾಚೇ ಪೋಹೋ । ಮ್ಹಣೋನಿ ಆಪುಲಿಯಾ
ಸ್ವೇಚ್ಛಾ ವೋಲಾವಾ ಲಾಹೋ । ತೇಥಹೀ ಜರೀ ಸಲಗೀ ಕರೂಬಿಹೋ । ತರೀ ನಿವೋ ಕೇ ಪಾ
॥ ೫ ॥ ನಾತರೀ ಬಾಳಕ ಬೋಬಡಾ ಬೋಲೇ । ವಾಕುಡಾ ವಿಚುಕಾ ಪಾಉಲೀ । ತೇ ಚೋಜ
ಕರೂನಿ ಮಾವುಲೀ । ರಿಘೋ ಜೆವೀ ॥ ೬ ॥ ತೇವೀ ತುಮ್ಹಾ ಸಂತಾಚಾ ಪಢಿಯಾವೋ । ಕೈಸೇನಿ
ತರೀ ಆಮ್ಹಾವರೀ ಹೋ । ಯಾ ಬಹುವಾ ಆಳುಕಿಯಾ ಜೀ ಆಹೋ । ಸಲಗೀ ಕರತ ॥ ೭ ॥
ವಾಂಚೂನಿ ಮಾಯಿಯೇ ಬೋಲತೀಯೇ ಯೋಗ್ಯತೇ। ಸರ್ವಜ್ಞ ಭವಾದೃಶ ಶ್ರೋತೇ । ಕಾಯ
ಧಡ್ಯಾವರೀ ಸಾರಸ್ವತೇ । ವಢೋ ಸಿಕಿಜೇ ॥ ೮ ॥ ಅವಧಾರಾ ಆವಡೇ ತೇಸಣಾ ಧುಂಧುರೂ ।
ಪರೀ ಮಹಾತೇಜೀ ನ ಮಿರವೇ ಕಾಯ ಕರೂ । ಅಮೃತಾಚಿಯಾ ತಾಟೀ ವೋಗರೂ । ಐಸೀ
ರಸಸೋಯ ಕೈಂಚೀ ॥ ೯ ॥ ಹಾ ಹೋ ಹಿಮಕರಾಸೀ ವಿಂಜಣೇ ಕೀ ನಾದಾ ಪುಡೇ ಆಇಕವಣೇ ।
ಲೇಣಿಯಾಸಿ ಲೇಣೇ । ಹೇ ಕಹೀ ಆಥಿ ॥ ೧೦ ॥ ಸಾಂಗಾ ಪರಿಮಳೇ ಕಾಯ ತುರಂಬಾವೇ ।
ಸಾಗರೇ ಕವಣೇ ಠಾಯೀ ನಾಹಾವೇ । ಹೇ ಗಗನಚಿ ಆಡೇ ಆಘವೇ । ಐಸಾ ಪವಾಡು ಕೈಂಚಾ
॥ ೧೧ ॥ ತೈಸೇ ತುಮಚೇ ಅವಧಾನ ಧಾಯೇ । ಆಣಿ ತುಮ್ಹೀ ಮ್ಹಣಾ ಹೇ ಹೋಯೀ ।
ಐಸೇ ವಕ್ತೃತ್ವ ಕವಣಾ ಆಹೇ । ಜೇಣೇ ರಿಘೂ ತುಮ್ಹೀ ॥ ೧೨ ॥ ತರೀ ವಿಶ್ವ ಪ್ರಗಟಿತಿಯಾ
ಗಭಸ್ತೀ । ಕಾಯ ಹಾತಿವೇನ ನ ಕೀಜೇ ಆರತೀ । ಕಾ ಚುಳೋದಕೇ ಅಪಾಂಪತೀ । ಅರ್ಘ್ಯ
ನೇದಿಜೇ ॥ ೧೩ ॥ ಪ್ರಭೂ ತುಮ್ಹೀ ಮಹೇಶಾಚಿಯಾ ಮೂರ್ತಿ । ಆಣಿ ಮೀ ದುಬಳಾ ಅರ್ಚಿ
ತಸೇ ಭಕ್ತೀ । ಮ್ಹಣೋನಿ ಬೋಲ ಜರ್ಹೀ ಗಂಗಾವತೀ । ತರ್ಹೀ ಸ್ವೀಕಾರಾಲಕೀ ॥ ೧೪ ॥
ಬಾಳಕ ಬಾಪಾಚಿಯೇ ತಾಟೀರಿಗೆ । ಆಣಿ ಬಾಪಾತೇಜ ಜೇವವೂ ಲಾಗೇ । ಕೀ ತೋ ಸಂತೋಷ
ಲೇನಿ ವೇಗೇ । ಮುಖಚಿ ವೋಢವೀ ॥ ೧೫ ॥ ತೈಸಾ ಮೀ ಜರೀ ತುಮ್ಹಾ ಪ್ರತೀ । ಚಾವಟೀ
ಕರಿತಸೇ ಬಾಳಮತೀ । ತರೀ ತುಮ್ಹೀ ಸಂತೋಷಿಜೇ ಐಸೀ ಜಾತೀ । ಪ್ರೇಮಾಚೇ ಅಸೇ ॥ ೧೬ ॥
ಆಣಿ ತೇಣೇ ಆಪುಲೇ ಪಣಾಚೇನಿ ವೋಹೇ । ತುಮ್ಹೀ ಸಂತ ಘೇತಲೇ ಅಸಾ ಬೌಹೇ ।
ಮ್ಹಣೋನಿ ಕೇಲಿಯೇ ಸಲಗೀಚಾ ನೋಹೇ । ಅಧಾರ ತುಮ್ಹಾ ॥ ೧೭ ॥ ಅಹೋ ತಾನ್ಹಯಾಚೇ
ಲಾಗತಾ ಝುಟೇ । ತೇಣೇ ಅಧಿಕಚಿ ಪಾನ್ಹಾ ಫುಟೇ । ರೋಷೇ ಪ್ರೇಮ ದುಣವಟೇ । ಪಢಿಯಂತಯಾ-

ಚೇನಿ ॥ ೧೮ ॥ ಮ್ಹಣವೊನಿ ಮಜ ಲೇಕುರ ವಾಚೇನಿ ಬೋಲೇ । ತುಮಚೇ ಕೃಪಾಳೂ ಪಣ ನಿದೈಲೇ । ತೇ ಚೇಇಲೇ ಐಸೇ ಜೀ ಜಾಣವಲೇ । ಯಾ ಲಾಗೀ ಬೋಲಿಲೋ ವೀ ॥ ೧೯ ॥ ಯೇರ್ಹವೀ ಚಾಂದಣೇ ಪಿಕವಿಜತ ಆಹೇಚೇಪಣೇ । ಕೀ ವಾರ್ಯಾ ಘಾಪತ ಆಹೇ ವಾಹಣೇ । ಹಾ ಹೋ ಗಗನಾಸಿ ಗವಸಣೇ । ಘಾಲಿಜೇ ಕೇವೀ ॥ ೨೦ ॥ ಆಇಕಾ ಪಾಣೆ ವೋಥಿ ಜಾವೇ ನ ಲಗೇ । ನವನೀತೀ ಮಾಥುಲಾ ನ ರಿಗೇ । ತೇವೀ ಲಾಜಿಲೇ ವ್ಯಾಖ್ಯಾನ ಸಿಗೇ । ದೇಹೋನಿ ಜಯಾಂತೇ ॥ ೨೧ ॥ ಹೇ ಅಸೋ ಶಬ್ದಬ್ರಹ್ಮ ಜಿಯೇ ಬಾಜೇ । ಶಬ್ದ ಮಾವಳಲೇಯಾ ನಿವಾಂತ ನಿಜೇ । ತೋ ಗೀತಾರ್ಥ ಮರ್ಹಾಟೀಯಾ ಬೋಲಿಜೇ । ಹಾ ಪಾಡು ಕಾಈ ॥ ೨೨ ॥ ಪರಿ ಐಸಿಯಾಹೀ ಮಜ ಛಂವಸಾ । ತೋ ವುಧತೀ ಯಾಚಿ ಯೇಂಕೇ ಆಶಾ । ಜೇ ಧಿಟೀವಾ ಕರೂನ ಭವಾ ದೃಶಾ । ಪಧಿಯಂತಯಾ ಹೋ ಆವೇ ॥ ೨೩ ॥ ತರೀ ಆತಾ ಚಂದ್ರಾ ಪಾಸೋನಿ ನಿವ ವಿತೇ । ಜೇ ಅಮೃತಾ ಹೂನಿ ಜೀವವಿತೇ । ತೇಣೇ ಅವಧಾನೇ ಕೀಜೇ ವಾಧತೇ । ಮನೋರಥ ಮಾಝಿಯಾ ॥ ೨೪ ॥ ಕಾ ಜೈ ದಿಠಿವಾ ತುಮಚಾ ವರುಷೇ । ತೈ ಸಕಳಾರ್ಥ ಸಿದ್ಧಿ ಮತೀ ಪಿಕೇ । ಯೇರ್ಹವೀ ಕೊಂಭೇಲಾ ಉನ್ಮೇಷ ಸುಕೇ । ಜರೀ ಉದಾಸ ತುಮ್ಹೀ ॥ ೨೫ ॥ ಸಹಜೇ ತರೀ ಅವಧಾರಾ । ವಕ್ತೃತ್ವಾ ಅವಧಾನಾಚಾ ಹೋಯ ಚಾರಾ । ತರೀ ದೋಂದೇ ಪೇಲತೀ ಅಕ್ಷರಾ । ಪ್ರುಮೇಯಾಚೀ ॥ ೨೬ ॥ ಅರ್ಥ ಬೋಲಾಚೀ ವಾಟ ಪಾಹೆ । ತೇಥ ಅಭಿಪ್ರಾವೋಚಿ ಅಭಿಪ್ರಾಯಾತೇ ವಿಯೇ । ಭಾವಾಚಾ ಫುಲೌರಾ ಹೋತ ಜಾಯೇ । ಮತಿವರೀ ॥ ೨೭ ॥ ಮ್ಹಣೂನಿ ಸಂವಾದಾಚಾ ಸುವಾವೋ ಢಳೇ । ತರ್ಹೀ ಹೃದಯಾ ಕಾಶಾ ಸಾರಸ್ವತ ವೋಳೇ । ಆಣಿ ಶ್ರೋತಾ ದುಶ್ಚಿತ ತರೀ ನಿತುಳೇ । ಮಾಂಡಲಾರಸ ॥ ೨೮ ॥ ಅಹೋ ಚಂದ್ರಕಾಂತ ದ್ರವತಾ ಕೀರ ಹೋಯೇ । ಪರೀ ತೇ ಹಾತವಟೀ ಚಂದ್ರೀ ಕೀ ಆಹೇ । ಮ್ಹಣವೊನಿ ವಕ್ತಾ ತೋ ವಕ್ತಾ ನೋಹೆ । ಶ್ರೋತೇನಿವಿಣ ॥ ೨೯ ॥ ಪರೀ ಆತಾ ಆಮುತೇ ಗೋಡ ಕರಾವೇ । ಐಸೇ ತಾಂದುಳೀ ಕಾಸಯಾ ವಿನವಾವೇ । ಸಾಇಖಡೀಯಾನೇ ಕಾಈ ಪ್ರಾರ್ಥಾವೇ । ಸೂತ್ರಧಾರಾತೇ ॥ ೩೦ ॥ ತೋ ಕಾಯ ಬಾಹುಲಿಯಾಂಚಿಯಾ ಕಾಜಾ ನಾಚವೀ । ಕೀ ಆಪುಲಿಯೇ ಜಾಣಿವೇಚೀ ಕಳಾ ವಾಢವೀ । ಮ್ಹಣವೊನಿ ಆಮ್ಹಾ ಯಾ ತೇವಾತೇವೀ । ಕಾಯ ಕಾಜ ॥ ೩೧ ॥ ತವ ಶ್ರೀಗುರು ಮ್ಹಣತೀ ಕಾಈ ಜಾಹಾಲೇ । ಹೇ ಸವಸ್ತ ಹೀ ಆಮ್ಹಾ ಪಾವಲೇ । ಆತಾ ಸಾಂಗೇ ಜೇ ನಿರೋಪಿಲೇ । ಶ್ರೀಕೃಷ್ಣ ದೇವೇ ॥ ೩೨ ॥ ಯೇಥ ಸಂತೋಸೋನಿ ನಿವೃತ್ತಿ ದಾಸೇ । ಜೀ ಚೀ ಮ್ಹಣವೊನಿ ಉಲ್ಹಾಸೇ । ಅವಧಾರಾ ಶ್ರೀಕೃಷ್ಣ ಐಸೇ । ಬೋಲತೇ ಜಾಹಾಲೇ ॥ ೩೩ ॥

ಅರ್ಥ— ಶ್ರೀ ಜ್ಞಾನೇಶ್ವರ ಮಹಾರಾಜರು ಅನ್ನುತ್ತಾರೆ— ಶ್ರೋತೃಗಳಿರಾ ಕೇಳಿರಿ– ನಾನು ಪ್ರತಿಜ್ಞಾಪೂರ್ವಕವಾಗಿ ಸ್ಪಷ್ಟವಾಗಿ ಹೇಳುತ್ತೇನೆ. ನೀವು ಇತ್ತ ಕಡೆಗೆ ಅವಧಾನವಿಟ್ಟರೆ ಸರ್ವ ಸುಖಕ್ಕೆ ಪಾತ್ರರಾಗುವಿರಿ ।॥ ೧ ॥ ಆದರೆ ನಿಮ್ಮಂಥ ಸರ್ವಜ್ಞರ ಸಭೆಯಲ್ಲಿ ನಾನು ಪ್ರತಿಜ್ಞೆಯಿಂದ ಮಾತನಾಡುವದಿಲ್ಲ. ನೀವು ಅವಧಾನವನ್ನಿಡಿರಿ ಎಂದು ಹೇಳುವದು ಸಹಾ ಯೋಗ್ಯವಿರುವದಿಲ್ಲ. ಆದರೆ ಇದು ನಿಮಗೆ ನನ್ನ ಸಲಿಗೆಯ ವಿನಂತಿ ಇರುವದು. ॥ ೨ ॥ ಕಾರಣ ವೇನಂದರೆ ನಿಮ್ಮಂಥಾ ಐಶ್ವರ್ಯ ಸಂಪನ್ನರಾದ ತಪರುಮನೆಯವರು ಇದ್ದಮೇಲೆ ಅಲ್ಲಿ ಅಪೇಕ್ಷೆ ಮಾಡಿದ ಪ್ರೀತಿಯ ವಸ್ತುಗಳು ದೊರಕುವದಲ್ಲದೆ ಮನೋಭೀಷ್ಟಗಳೂ ಪೂರ್ಣ ಹೊಂದುತ್ತವೆ. ॥ ೩ ॥ ನಿಮ್ಮ ಕೃಪಾದೃಷ್ಟಿಯ ಹಸಿಯಿಂದ ಪ್ರಸನ್ನತೆಯ ತೋಟದಲ್ಲಿ ಭರದಿಂದ ಬೆಳೆದ ವೃಕ್ಷಗಳ ತಣ್ಣಗಿನ ನೆಳಲನ್ನು ನೋಡಿ ಶ್ರಮ ಹೊಂದಿದಂಥ ನಾನು ಆ ಸ್ಥಳದಲ್ಲಿ ವಿಶ್ರಾಂತಿ ಹೊಂದುತ್ತೇನೆ. ॥ ೪ ॥ ಮಹಾರಾಜರೇ ! ನೀವು ಸುಧಾಮೃತದ ಸಾಗರವೇ ಆಗಿರುವಿರಿ ಆದುದರಿಂದ ನಾನು ನನ್ನ ಇಚ್ಛಾಪ್ರಕಾರ ಅಲ್ಲಿ ಅವಗಾಹನವನ್ನು ಮಾಡಿ ತಣ್ಣಗಾಗಬೇಕೆಂದು ಅನ್ನುತ್ತೇನೆ. ಆ ಸ್ಥಳದಲ್ಲಿಯೂ ನಾನು ನಿಮ್ಮ ಕೂಡ ಸಲಿಗೆ ಮಾಡಲು ಭಯಪಟ್ಟು ಹಿಂಜರಿದರೆ ನನಗೆ ಇನ್ನು ಯಾವ ಸ್ಥಳದಲ್ಲಿ

ವಿಶ್ರಾಂತಿ ದೊರಕಬೇಕು ? ॥ ೫ ॥ ಇಲ್ಲವೆ ಸಣ್ಣ ಕೂಸಿನ ತೊದಲ್ನುಡಿಗಳಿಂದಲೂ, ತಪ್ಪೆಜ್ಜೆಗಳನ್ನಿಟ್ಟು ನಡೆಯುವ ದರಿಂದಲೂ, ತಾಯಿಯು ಆಶ್ಚರ್ಯಚಕಿತಳಾಗಿ ಹೇಗೆ ಆನಂದ ಪಡುವಳೋ, ॥ ೬ ॥ ಅದೇ ಪ್ರಕಾರ ನಿಮ್ಮ ಸಂತ ಜನರ ಪ್ರೀತಿಯು ಯಾವದಾದರೂ ರೀತಿಯಿಂದ ನನ್ನ ಮೇಲೆ ಆಗಬೇಕೆಂಬ ಪೂರ್ಣವಾದ ಉತ್ಕಟೇಚ್ಛೆಯಿಂದ ನಾನು ನಿಮ್ಮ ಕೂಡ ಸಲಿಗೆ ಮಾಡುತ್ತೇನೆ. ॥ ೭ ॥ ನಿಮ್ಮ ಸಮಾನರಾದ ಸರ್ವಜ್ಞ ಶ್ರೋತ್ರುಗಳ ಮುಂದೆ ನನ್ನ ಸಂಭಾಷಣ ದಿಂದ ಹೊಸದಾಗಿ ನೀವು ತಿಳಿದುಕೊಳ್ಳುವ ವಿಷಯವು ಏನಿರುವದು. ಸರಸ್ವತಿಯ ಮಗನಿಗೆ ಪಾಠಗಳನ್ನು ಕಲಿಸಬೇಕಾ ಗಿರುವದೇನು ? ॥ ೮ ॥ ನೋಡಿರಿ ಬೇಕಾದಂಥ ದೊಡ್ಡ ಕಾಜು ಇದ್ದರೂ ಸೂರ್ಯನ ಪ್ರಕಾಶದ ಮುಂದೆ ಅದರ ತೇಜ ಬೀಳುವದೇನು ? ಅಮೃತರೂಪಿ ತಾಟನಲ್ಲಿ ನೀಡುವಂಥ ಅಡಿಗೆಯನ್ನು ಹೇಗೆ ಮಾಡಬೇಕು ? ॥ ೯ ॥ ಎಲೋ, ಯಾವನ ಕಿರಣಗಳು ತಣ್ಣಗಿರುವವೋ ಇಂಥ ಚಂದ್ರನಿಗೆ ಬೀಸಣಿಕೆಯಿಂದ ಗಾಳಿ ಹಾಕುವದೂ, ಮಧುರ ಸುಸ್ವ ರಕ್ಕೆ ಗಾಯನವನ್ನು ಕೇಳಿಸುವದೂ, ಅಭರಣಗಳಿಗೆ ಅಲಂಕಾರವನ್ನು ಹಾಕುವದೂ, ಎಲ್ಲಿಯಾದರೂ ಇರುವದೇ? ॥೧೦॥ ಪರಿಮಳವು ಯಾವುದರ ವಾಸನೆಯನ್ನು ತೆಗೆದುಕೊಳ್ಳಬೇಕು ? ಸಮುದ್ರವು ಯಾವ ಸ್ಥಳದಲ್ಲಿ ಸ್ನಾನಮಾಡಬೇಕು ? ಆಕಾಶವು ಹಿಡಿಯುವಷ್ಟು ದೊಡ್ಡ ವಸ್ತುವು ಯಾವದು ? ಹೇಳು ನೋಡುವಾ ! ॥ ೧೧ ॥ ಅದೇ ಪ್ರಕಾರ ನೀವು ಈ ಶ್ರವಣದಿಂದ ತೃಪ್ತರಾದೀರಿ. ಮತ್ತು ಅಪ್ಪಾ ಈ ವಾಖ್ಯಾನವು ಬಹಳ ಚೆನ್ನಾಗಿರುವದೆಂದು ಅನ್ನು ವಿರಿ. ಹೀಗೆ ನಿಮ್ಮನ್ನು ತೃಪ್ತಿಪಡಿಸುವಂಥ ವಕ್ತೃತ್ವವು ಯಾರಲ್ಲಿರುವದು ? ॥ ೧೨ ॥ ಆದರೂ ಸರ್ವ ಜಗತ್ತನ್ನು ಪ್ರಕಾಶಪಡಿಸುವಂಥ ಸೂರ್ಯ ನಾರಾಯಣನಿಗೆ ಭಕ್ತಿಯಿಂದ ತುಪ್ಪದಿಂದ ತೊಯ್ದ ಬತ್ತಿಯಿಂದ ಆರತಿಯನ್ನು ಬೆಳಗಬಾರದೇ ಹೇಗೆ ? ಇಲ್ಲವೇ ಸಮುದ್ರರಾಜನಿಗೆ ಬೊಗಸೆ ತುಂಬ ನೀರಿನಿಂದ ಅರ್ಘ್ಯವನ್ನು ಕೊಡಬಾರದೇ ಹೇಗೆ ? ॥ ೧೩ ॥ ಮಹಾರಾಜರೇ ! ನೀವು ಸಾಕ್ಷಾತ ಕೇವಲ ಪ್ರತ್ಯಕ್ಷ ಶ್ರೀ ಶಂಕರನ ಮೂರ್ತಿಯೇ ಇರುವಿರಿ. ಮತ್ತು ನಾನು ಒಬ್ಬ ದೈನ್ಯ ದರಿದ್ರನಿದ್ದು ನಿಮ್ಮನ್ನು ಭಕ್ತಿಪೂರ್ವಕವಾಗಿ ಪೂಜಿಸುತ್ತಿರುವೆನು. ಆದುದರಿಂದ ನನ್ನ ಸಂಭಾಷಣ ರೂಪೀ ಬಿಲ್ವದಳಗಳನ್ನು ನಿಮಗೆ ಅರ್ಪಿಸಿರುವೆನು. ನೀವು (ಆ ದಳಗಳನ್ನು) ನಿಶ್ಚಯವಾಗಿ ಸ್ವೀಕರಿಸುವಿರಿ. ॥೧೪॥ ಸಣ್ಣ ಮಗುವು ತಂದೆಯ ತಳಿಗೆಯಲ್ಲಿ ಭೋಜನ ಮಾಡುತ್ತಿರಲು ತನ್ನ ಯೋಗ್ಯತೆ ಇಲ್ಲದೇ ತಂದೆಗೆ ಉಣಿಸಹೋಗುತ್ತದೆ. ಆಗ್ಗೆ ಅವನು ಸಂತೋಷದ ಭರದಲ್ಲಿ ಮಗುವಿನ ಕೈ ತುತ್ತನ್ನು ತೆಗಿದುಕೊಳ್ಳುವದಕ್ಕೆ ತಾನಾಗಿಯೇ ಬಾಯಿ ಮುಂದೆ ಮಾಡುತ್ತಾನೆ. ॥ ೧೫ ॥ ಅದೇ ಪ್ರಕಾರ ನಾನು ಒಂದುನೇಳೆ ನಿಮ್ಮ ಸಂಗಡ ಸಣ್ಣ ಕೂಸಿನಂತೆ ವಿನೋದ ಮಾಡು ತ್ತಿರಲು ಆ ನನ್ನ ವರ್ತನದಿಂದ ನಿಮಗೆ ಹೆಚ್ಚಿಗೆ ಆನಂದವು ಆಗಲಿಕ್ಕೇಬೇಕು. ಹೀಗೆ ಪ್ರೇಮದಲ್ಲಿ ಗುಣವೇ ಇರುವದು. ॥ ೧೬ ॥ ಮತ್ತು ನಾನು ನಿಮ್ಮವನೇ ಎಂಬುವ ಅಭಿಮಾನದಿಂದ ನೀವು ಸಂತ ಜನರು ಬಹಳೇ ರೀತಿಯಿಂದ ನನ್ನ ಮೇಲೆ (ಮಗುವಿನಂತೆ) ಪ್ರೇಮ ಮಾಡುತ್ತಿರುವಿರಿ. ಆದುದರಿಂದ ನನ್ನ ಈ ಸಲಿಗೆಯ ಸಂಭಾಷಣದ ವಿಷಯ ವಾಗಿ ನಿಮಗೆ ವಿಷಾದವೂ (ಭಾರವೂ) ಆಗಲಾರದು. ॥ ೧೭ ॥ ಎಲೋ! ಆಕಳ ಕರುವು ತಾಯಿಯ ಮೊಲೆಯನ್ನು ಗುದ್ದಿ ಗುದ್ದಿ ಉಂಡ ಹಾಗೆಲ್ಲ ಆಕಳವು ಹೆಚ್ಚೆಚ್ಚಿಗೆ ತೊರಿಬಿಡುತ್ತದೆ. ಆದರಂತೆ ಅತ್ಯಂತ ಪ್ರೀತಿಯ ಮನುಷ್ಯನ ಶಿಟ್ಟಿನಿಂದ ಪ್ರೇಮವು ದ್ವಿಗುಣಿತವಾಗುತ್ತದೆ. ॥ ೧೮ ॥ ಆದುದರಿಂದ ನನ್ನ ಸಣ್ಣ ಮಗುವಿನ ತೊದಲ್ನುಡಿಗಳಿಂದ ನಿಮ್ಮ ಮಲಗಿಕೊಂಡ ಕೃಪಾಳು ತನವು ಜಾಗೃತವಾದೀತೆಂಬ ನಂಬಿಗೆಯಿಂದ ನಾನು ಮಾತನಾಡಿದೆನು. ॥ ೧೯ ॥ ಆದರೆ ಚಂದ್ರಮನ ಬೆಳದಿಂಗಳನ್ನು ಯಾರ ದರೂ ಹಣ್ಣಿಗೆ ಹುಕಿ ಪಕ್ವ ಮಾಡಿರುವಿರೋ ಹೇಗೆ ? ಇಲ್ಲವೇ ಗಾಳಿಗೆ ಬೀಸಲಿಕ್ಕೆ ಯಾರಾದರೂ ಗತಿ ಕೊಟ್ಟರುವರೋ ಹೇಗೆ ? ಅದರಂತೆ ಆಕಾಶಕ್ಕೆ ಆಚ್ಛಾದನವನ್ನು ಹೇಗೆ ಮಾಡಬೇಕು ? ॥ ೨೦ ॥ ಅಕ್ಷ್ಯವಿಡಿರಿ. ನೀರನ್ನು ತೆಳ್ಳಗೆ ಮಾಡಲಿಕ್ಕೆ ಬೇಕಾಗುವದಿಲ್ಲ. ಆದರೆ ಬೆಣ್ಣೆಯು ಬಂದಮೇಲೆ ಕಡಗೋಲಿನಿಂದ ಅದನ್ನು ಯಾರೂ ಕಡೆಯುವದಿಲ್ಲ. ಅದೇ ಪ್ರಕಾರ ಗೀತಾರ್ಥವನ್ನು ನೋಡಿ ನನ್ನ ವ್ಯಾಖ್ಯಾನವು ನಾಚಿ ಹೊರ ಹೊರಡುವದಿಲ್ಲ. ॥ ೨೧ ॥ ಇಂದತೂ ಇರಲಿ. ಯಾವದರ ಮುಂದೆ ವೇದದ ಶಬ್ದಗಳು ಕುಂಠಿತ ವಾದುದರಿಂದ ಅವು ಗೀತಾರ್ಥದ ಹಾಸಿಗೆಯ ಮೇಲೆ ಗಾಢವಾಗಿ ನಿದ್ರಿಸುತ್ತಿರುವವೋ ಆ ಗೀತಾರ್ಥವನ್ನು ಮಹಾರಾಷ್ಟ್ರ ಭಾಷೆಯಲ್ಲಿ ವರ್ಣಿಸುವ ಅಧಿಕಾರವು ನನ್ನಲ್ಲಿರುವದೇನು ? ॥ ೨೨ ॥ ಆದರೆ

ಹೀಗೆ ನನ್ನ ಸ್ಥಿತಿಯು ಇದ್ದರೂ, ಮುಂದಿನ ಒಂದು ಆಶಾದಿಂದ (ಗೀತಾರ್ಥ ಹೇಳುವ) ಆಪೇಕ್ಷೆ ಉಂಟಾಗಿರುವದು ಆದು ಯಾವದೆಂದರೆ ಧಿಟ್ಟತನದಿಂದ ಮಾತನಾಡಿ ನಿಮ್ಮಂಥ (ಸತ್ಪುರುಷರ) ಪ್ರೇಮಕ್ಕೆ ಪಾತ್ರ ನಾಗಬೇಕೆಂಬದೇ ನನ್ನ ಉದ್ದೇಶವು. ॥ ೨೩ ॥ ಆದರೆ ಚಂದ್ರನಿಗಿಂತ ತಣ್ಣಗೆ ಮಾಡುವ ಮತ್ತು ಅಮೃತದಕಿಂತಲೂ ಜೀವಿತ ವನ್ನು ವೃದ್ಧಿ ಮಾಡುವಂಥ ನಿಮ್ಮ ಅವಧಾನದಿಂದ ನನ್ನ ಮನೋರಥಕ್ಕೆ ಪುಷ್ಟಿಯನ್ನುಂಟುಮಾಡಬೇಕು ॥ ೨೪ ॥ ಕಾರಣವೇನಂದರೆ ನಿಮ್ಮ ಕೃಪಾದೃಷ್ಟಿರೂಪ ಮಳೆಯು ನನ್ನಮೇಲೆ ಸಂಪೂರ್ಣವಾಗಿ ಸುರಿದರೆ ನನ್ನ ಬುದ್ಧಿ ರೂಪ ಭೂಮಿಯಲ್ಲಿ ಸಕಲಾರ್ಥರೂಪ ಧಾನ್ಯದ ಬೆಳೆಯು ಬೆಳೆಯುವದು. ನೀವು ಉದಾಸೀನರಾದರೆ ಮಾತ್ರ ನನ್ನಲ್ಲಿ ಅಂಕುರಿಸಿದ ಜ್ಞಾನವು ನಶಿಸಿ ಹೋಗುವದು. ॥ ೨೫ ॥ ಸಹಜವೇ ವಕ್ತಾನ ವಕೃತ್ವದ ಕಡೆಗೆ ಶ್ರೋತಾಗಳ (ಸಂಪೂರ್ಣ) ಲಕ್ಷ್ಯರೂಪಿ ಭೋಜನವು ದೊರೆತರೆ ವಕ್ತಾನ ಅಕ್ಷರಗಳಿಗೆ ಅರ್ಥರೂಪಿ ಪುಷ್ಟಿಯು ಉಂಟಾಗುತ್ತದೆ. ॥ ೨೬ ॥ ಅರ್ಥವು ಶಬ್ದಗಳು ಹೋಗಿ ಬೀಳುವ ಮಾರ್ಗದ ನಿರೀಕ್ಷಣ ಮಾಡುತ್ತಿರುತ್ತದೆ. ಶಬ್ದಗಳು ಹೊರಗೆ ಬಿದ್ದ ಕೂಡಲೇ ಅದರೊಳಗಿಂದ ಅರ್ಥವು ಮೇಲೆ ಅರ್ಥ ಹೊರಡುತ್ತ ಹೋಗುತ್ತದೆ. ಮತ್ತು ಬುದ್ಧಿಗೆ ನಾನಾ ಪ್ರಕಾರದ ಅಭಿಪ್ರಾಯಗಳ ಸ್ಫೂರ್ತಿ ಉಂಟಾಗಹತ್ತುತ್ತದೆ. ॥ ೨೭ ॥ ಆದುದರಿಂದ ಸಂವಾದರೂಪೀ ಅನುಕೂಲವಾದ ಗಾಳಿಯು ಬೀಸುವದರಿಂದ ವಕ್ತಾನ ಹೃದಯಾಕಾಶದಲ್ಲಿ ಶಾಸ್ತ್ರಸಿದ್ಧಾಂತರೂಪೀ ಮೇಘಗಳು ತುಂಬಿ ಬರುತ್ತವೆ. ಮತ್ತು ಅಲ್ಲಿ ಕೇಳುವವರ ದುರ್ಲಕ್ಷ್ಯವಿದ್ದರೆ ಮಾತ್ರವಕೃತ್ವಕ್ಕೆ ಉಂಟಾದ ರಸವು ಅಲ್ಲಿಂದಲ್ಲಿಯೇ ಕರಗಿ ಹೋಗುತ್ತದೆ. ॥ ೨೮ ॥ ಎಲೋ, ಚಂದ್ರಕಾಂತಮಣಿಯಲ್ಲಿ ಶೆಲೆಯು (ನೀರು) ಹೊರಡುವದೇನೋ ನಿಜ. ಆದರೆ ಈ ಸಾಮರ್ಥ್ಯವು ಚಂದ್ರನಲ್ಲಿಯೇ ಇರುವದು. ಆದುದರಿಂದ ವಾಖ್ಯಾನ ಕರ್ತನಿಗೆ ಶ್ರೋತ್ರುಗಳ ಹೊರ್ತು ಗತಿಯೇ ಇರುವದಿಲ್ಲ. ಶ್ರೊತ್ರುಗಳ ಚಿತ್ತವು ಸಂಪೂರ್ಣ ಇರಬೇಕಾಗುತ್ತದೆ. ॥ ೨೯॥ ಆದರೆ ನಮಗೆ ರುಚಿ ಮಾಡಿಕೊಂಡು ಭಕ್ಷಿಸ ಬೇಕೆಂದು ಜನರಿಗೆ ಅಕ್ಕಿಗಳು ಬೇಡಿಕೊಳ್ಳುವನೇನು ? ಸೂತ್ರ ಗೊಂಬೆಗಳು ನಮಗೆ ಚನ್ನಾಗಿ ಕುಣಿಸೆಂದು ಸೂತ್ರಧಾರನಿಗೆ ಬೇಡಿಕೊಳ್ಳಬೇಕಾಗಿರುವದೇನು ? ॥ ೩೦ ॥ ಆ ಸೂತ್ರಧಾರನು ಆ ಗೊಂಬೆಗಳ ಸಲುವಾಗಿ ಅವುಗಳನ್ನು ಕುಣಿಸುತ್ತಿರುವನು ? ಆದರೆ ಅವನು ತನ್ನ ಜಾಣ ತನವನ್ನು ಜನರಿಗೆ ತೋರಿಸುವದರ ಸಲುವಾಗಿಯೇ ಆ ಗೊಂಬೆಗಳನ್ನು ಕುಣಿಸುತ್ತಿರುವನು. ಆಪ್ರಕಾರ ನಾನು ಒಂದು ಗೊಂಬೆಯಂತೆ ಇದ್ದೇನೆ. ನೀವು ಮಾತಾಡಿಸಿದಂತೆ ನಾನು ಮಾತನಾಡುವೆನು ! ನನಗೆ ಇಂಥಾದ್ದೇ ಹೀಗೇ ಮಾತಾಡಿಸಿರೆಂದು ನಿಮಗೆ ಪ್ರಾರ್ಥನೆಯನ್ನು ಮಾಡಿ ವ್ಯರ್ಥ ಶ್ರಮಪಡುವ ಕಾರಣವೇನು ? ॥ ೩೧ ॥ ಆ ವೇಳೆ ಯಲ್ಲಿ ಶ್ರೀಗುರು ನಿವೃತ್ತಿ ಮಹಾರಾಜರು ಅನ್ನುತ್ತಾರೆ— ಜ್ಞಾನದೇವನೇ ! ನೀನು ಇಷ್ಟು ವಿಸ್ತಾರವಾದ ವ್ಯಾಖ್ಯಾನ ವನ್ನು ಯಾಕೆ ಮಾಡುವಿ ? ನಿನ್ನ ಸರ್ವ ಅಭಿಪ್ರಾಯವು ನಮಗೆ ತಿಳಿದಿರುವದು. ಆದರೆ ಇನ್ನು ಮೇಲೆ ಶ್ರೀಕೃಷ್ಣ ಪರಮಾತ್ಮನು ಯಾವ ಸಂಭಾಷಣವನ್ನು ಅರ್ಜುನನ ಮುಂದೆ ಹೇಳದನು. ಅದನ್ನೇ ಶ್ರೋತ್ರುಗಳ ಮುಂದೆ ಹೇಳು. ॥ ೩೨ ॥ ಆಗ್ಗೆ ನಿವೃತ್ತಿದಾಸ ಜ್ಞಾನದೇವನು ಸಂತೋಷವುಳ್ಳವನಾಗಿ ಬಹಳ ಆನಂದದಿಂದ ಅನ್ನುತ್ತಾನೆ— ಆಹುದು, ಶ್ರೀಗುರುಗಳೇ ಇನ್ನುನುಂದೆ ನಾನು ಶ್ರೀಕೃಷ್ಣಾರ್ಜುನರ ಸಂವಾದವನ್ನೇ ಹೇಳುವೆನು. ಲಕ್ಷ್ಯವಿಡಬೇಕು. ॥ ೩೩ ॥

ಶ್ರೀ ಭಗವಾನುವಾಚ:—

ಇದಂ ತು ತೇ ಗುಹ್ಯತಮಂ ಪ್ರವಕ್ಷ್ಯಾಮ್ಯನಸೂಯವೇ ।
ಜ್ಞಾನಂ ವಿಜ್ಞಾನಸಹಿತಂ ಯಜ್ಜ್ಞಾತ್ವಾ ಮೋಕ್ಷ್ಯಸೇಽಶುಭಾತ್ ॥ ೧ ॥

[ಇದಂ ತುತೇ ಗುಹ್ಯತಮಮಿತಿ] ನಾತರೀ ಅರ್ಜುನಾ ಹೇ ಬೀಜ । ಪುಢತೀ ಸಾಂಗಿಜೇಲ ತುಜ । ಜೇಹೇ ಅಂತಃಕರಣೀಚೇ ಗುಜ । ಜೀವಾಚಿಯೇ ॥ ೩೪ ॥ ಯೇಣೇ ಮಾನೇ ಜೀವಾಚೇ ಹಿಯೇ ಫೋಡಾವೇ । ಮಗ ಗುಜಕಾಪಾ ಮಜ ಸಾಂಗಾವೇ । ಐಸೇ ಕಾಹೀ ಸ್ವಭಾವೇ । ಕಲ್ಪಿತೀ ಜರೀ ॥ ೩೫॥ ತರೀ ಪರಿಯೇಸೀ ಗಾ ಪ್ರಾಜ್ಞಾ । ತೂ ಆಸ್ಕೇಚೀಚ

ಸಂಜ್ಞಾ । ಬೋಲಿಲಿಯೇ ಗೋಷ್ಮೀಚೇ ಅವಜ್ಞಾ । ನೇಣಸೀ ಕರೂ ॥ ೩೬ ॥ ಮ್ಹಣೋನಿ ಗೂಢಪಣ ಆಪುಲೇ ನೋಡೋ । ವರೀ ನ ಬೋಲಣೇಹೀ ಬೋಲಾವೇ ಘತೋ । ಪರೀ ಅಮುಚಿಯೇ ಜೀವೀಂಚೆ ಪಡೋ । ತುಝಾ ಜೀವೀ ॥ ೩೭ ॥ ಅಗಾ ಥಾನೀ ಕೀರ ದೂಧ ಗೂಢ । ಪರೀ ಥಾನಾ ಸೀಚ ನವ್ಹೇ ಕೀ ಗೋಡ । ಮ್ಹಣೋನಿ ಸರೋ ಕಾ ಸೇವಿ ತಯಾಚೀ ಚಾಡ । ಜರೀ ಅನನ್ಯ ಮಿಳೇ ॥ ೩೮ ॥ ಮೂಡಾಹೂನಿ ಬೀಜ ಕಾಢಲೇ । ಮಗ ನಿರ್ಮಾಳಾಲಿಯೇ ಭೂಮೀ ಪೇರಿಲೇ । ತರೀ ತೇ ಸಾಂಡಿ ವಿಖುರೀ ಗೇಲೇ । ಮ್ಹಣೋಯೇ ಕಾಇ ॥ ೩೯ ॥ ಯಾಲಾಗೀ ಸುಮನ ಆಣಿ ಶುದ್ಧಮತೀ । ಜೋ ಅನಿಂದಕ ಅನನ್ಯಗತೀ । ಸೈಗಾ ಗೌಪ್ಯಹೀ ಪರೀ ತಯಾ ಪ್ರತೀ । ಚಾವಳಿಜೇ ಸುಖೇ ॥೪೦॥ ತರೀ ಪ್ರಸ್ತುತ ಆತಾ ಗುಣೇ ಇಹೀ । ತೂ ವಾಂಚೂನ ಆನೆಕ ನಾಹೀ । ಮ್ಹಣೋನಿ ಗುಜ ತರೀ ತುಝ್ಯಾ ಠಾಯೀ । ಲಪವೂನಯೇ ॥ ೪೧ ॥ ಆತಾ ಕಿತೀ ನಾವಾ ನಾವಾ ಗುಜ । ಮ್ಹಣತಾ ಕಾನಡೇ ವಾಟೇಲ ತುಜ । ತರೀ ಸಾಂಗೇನ ಜ್ಞಾನ ಸಹಜ । ವಿಜ್ಞಾನೇಸೀ ॥ ೪೨ ॥ ಪರೀ ತೇಚಿ ಐಸೇನಿ ನಿವಾಡೇ । ಜೈಸೇ ಭೇಸಳಲೇ ಖರೇ ಕಾಡೇ । ಮಗ ಕಾಢಿಜೇ ಫಾಡೋ ವಾಡೇ । ಪಾರಖೂನಿಯಾ ॥ ೪೩ ॥ ಕಾ ಚಾಂಚೂಚೇನಿ ಸಾಂಡಸೇ । ಖಾಂಡಿಜೇ ಪಯ ಪಾಣೀ ರಾಜಹಂಸೇ । ತುಜ ಜ್ಞಾನ ವಿಜ್ಞಾನ ತೈಸೇ । ವಾಂಟೂನಿ ದೇವೂ ॥ ೪೪ ॥ ಮಗ ವಾರಯಾಚಿಯಾ ಧಾರಸಾ । ಪಡಿನಲಾ ಕೋಂಡಾ ಕಾ ನುರೇಚಿ ಜೈಸಾ । ಅಣಿ ಕಣಾಂತಾ ಅಪೈಸಾ । ರಾಶಿವಾ ಜೋಡೇ ॥ ೪೫ ॥ ತೈಸೇ ಜೇ ಜಾಣಿ ತಲೇಯಾ ಸಾಠೀ । ಸಂಸಾರ ಸಂಸಾರಾಚಿಯೇ ಗಾಂಠೀ । ಲಾವೂನಿ ಬೈಸವೀ ಪಾಟೇ । ಮೋಕ್ಷ ಶ್ರಿಯೇಚ್ಯಾ ॥ ೪೬ ॥

ಅರ್ಥ— ಅರ್ಜುನನೇ ! ನನ್ನ ಅಂತಃಕರಣದಲ್ಲಿ ಅತಿ ಗುಪ್ತವಾದ ಜ್ಞಾನದ ಆದಿ ಕಾರಣವನ್ನು ನಿನಗೆ ಮತ್ತೆ ಹೇಳುತ್ತೇನೆ. ॥ ೩೪ ॥ ಆದರೆ ಈ ಪ್ರಕಾರದ ಜೀವದೊಳಗಿನ ಗುಹ್ಯ ಮಾತನ್ನು ಬೈಲಿಗೆ ಒಡೆದು ಕಾಣುವಂತೆ ನಿನಗೆ ನಾನು ಯಾಕೆ ಹೇಳುತ್ತಿರಬೇಕೆಂಬ ಸಂಶಯವು ನಿನ್ನ ಮನಸಿನಲ್ಲಿ ಬರಬಹುದು. ॥ ೩೫ ॥ ಆದರೆ ಅಪ್ಪಾ ಅರ್ಜುನನೇ ! ಕೇಳು. ನೀನು ಒಳ್ಳೇ ತಿಳುವಳಿಕೆಯುಳ್ಳವನಿದ್ದು ಕೇವಲ ಆಸ್ತಾದ ಮೂರ್ತಿಯೇ ಆಗಿರುವಿ ಮತ್ತು ನಾವು ನಿನಗೆ ಏನು ಹೇಳುತ್ತೇವೆ ಅದನ್ನು ನೀನು ಅನಾದರ ಮಾಡುವದಿಲ್ಲ. ॥ ೩೬ ॥ ಆದುದರಿಂದ ನಮ್ಮ ಗುಪ್ತವಾದ ಮಾತು ಬೈಲಿಗೆ ಬಿದ್ದರೆ ಬೀಳಲಿ, ಮತ್ತು ಮಾತಾತಬಾರದಂಥ ಮಾತು ಮಾತಾಡುವ ಪ್ರಸಂಗ ಬಂದರೂ ಬರಲಿ, ಆದರೆ ನನ್ನ ಹೃದಯದೊಳಗಿನ ಗುಹ್ಯ ಸಂಭಾಷಣವು ನಿನ್ನ ಹೃದಯದಲ್ಲಿ ಬೀಳಲಿ. ॥ ೩೭ ॥ ಎಲೋ ಅರ್ಜುನನೇ ! ಬೊಲಿಯಲ್ಲಿ ಹಾಲು ತುಂಬಿ ಕೊಂಡಿದ್ದಗ್ಯೂ ಅದರ ಸ್ವಾದವು ಸ್ವನಗಳಿಗೆ ಉಂಟಾಗುವದಿಲ್ಲ. ಮೊಲೆಯ ಹಾಲು ತೀರಿ ಹೋದರೂ ಅನನ್ಯ ಭಾವನೆಯಿಂದ ಸೇವನಮಾಡುವಂಥ ಕರುವಿಗೆ ಉಣಿಸುವ ಆಪೇಕ್ಷೆಯು ತಾಯಿಗೆ ಇರುತ್ತದೆ. ॥ ೩೮ ॥ ಕೂಡಿಟ್ಟ ಬಿತ್ತುವ ಬೀಜಗಳನ್ನು ತೆಗೆದು ಹಸನ ಮಾಡಿದ ಭೂಮಿಯಲ್ಲಿ ಬಿತ್ತುವದರಿಂದ ಅವು ವ್ಯರ್ಥವಾಗಿ ಹಾಳಾದವೆಂದು ಅನ್ನಲಿಕ್ಕೆ ಬಂದೀತೆ ಹೇಗೆ ॥ ೩೯ ॥ ಈ ಕಾರಣದಿಂದ ನಿರ್ಮಳಾಂತಃಕರಣವುಳ್ಳ ಶುದ್ಧಬುದ್ಧಿಯುವನೂ ಮತ್ತು ನಿಂದಾಮಾಡದೇಇರುವ ಏಕನಿಷ್ಠ ಭಕ್ತನಿಗೆ ನಮ್ಮ ಮನಸಿನೊಳಗಿನ ಗುಹ್ಯ ಸಂಭಾಷಣವನ್ನು ಆನಂದವಿಂವ ಹೇಳಬೇಕು. ॥ ೪೦ ॥ ಆದರೆ ಈ ಗುಣವಿಂದ ಸಂಪನ್ನನಾದಂಥವನು ಸದ್ಯಕ್ಕೆ ನಿನ್ನ ಹೊರ್ತು ಯಾರೂ ಇರುವದಿಲ್ಲ. ಆದುದರಿಂದ ಗುಪ್ತವಾದ ಮಾತು ಇದ್ದರೂ ನಿನಗೆ ಹೇಳದೆ ಮುಚ್ಚಿಡುವದು ಯೋಗ್ಯವಿರುವದಿಲ್ಲ. ॥ ೪೧ ॥ ಆದರೆ ಮೇಲಿಂದಮೇಲೆ ಗುಹ್ಯ ಮತ್ತು ಗುಪ್ತವೆಂದು ವರ್ಣನಮಾಡುವದರಿಂದ ನಿನಗೆ ಬೇಸರ ಉಂಟಾದೀತು. ಈ ಗುಹ್ಯ ಬ್ರಹ್ಮಜ್ಞಾನವನ್ನು ಪ್ರಾಪಂಚಿಕ ಜ್ಞಾನಸಹವಾಗಿ ನಿನಗೆ ಹೇಳುತ್ತೇನೆ. ॥ ೪೨ ॥ ಆದರೆ ನಿಜವಾದ ನಾಣ್ಯ ಇಲ್ಲವೇ ಖೊಟ್ಟಿ ನಾಣ್ಯಗಳು ಒಂದೇ ಸ್ಥಳದಲ್ಲಿ ಕೂಡಿದಮೇಲೆ ಅವುಗಳನ್ನು ಪರೀಕ್ಷಿಸಿ ಬೇರೆ ಬೇರೆ ಮಾಡಿ ಇಡುವಂತೆ. ॥೪೩॥ ಅಥವಾ ರಾಜಹಂಸ ಪಕ್ಷಿಯು ತನ್ನ ಚೊಂಚಿನಿಂದ ಪರೀಕ್ಷಿಸಿ ಹಾಲು ಮತ್ತು ನೀರು

ಬೇರೆ ಬೇರೆಯಾಗಿ ಮಾಡಿಡುವಂತೆ ಜ್ಞಾನ ಮತ್ತು ವಿಜ್ಞಾನ ಇವುಗಳನ್ನು ವಿಂಗಡಿಸಿ ಒಡೆದು ಕಾಣುವಂತೆ ಹೇಳುವೆನು ।। ೪೪ ।। ಆದರೆ ಧಾನ್ಯದ ರಾಸಿ ಆದಮೇಲೆ ಒಂದೇಕಡೆಗೆ ಕೂಡಿದ ಕಾಳು ಹೊಟ್ಟನ್ನು ಗಾಳಿಗೆ ಹಿಡಿದು ತೂರಿದರೆ ಹೊಟ್ಟು ಹಾರಿಹೋಗಿ ತಳದಲ್ಲಿ ಕಾಳಿನರಾಸಿಯೇ ಉಳಿಯುತ್ತದೆ ।।೪೫।। ಅದೇ ಪ್ರಕಾರಾ ಆ ಗುಹ್ಯಬ್ರಹ್ಮಜ್ಞಾನವನ್ನು ಪ್ರಾಪ್ತಿಮಾಡಿಕೊಳ್ಳುವದರಿಂದ ಶರೀರ ಮತ್ತು ಜನ್ಮಮರಣವ ತೊಡಕುಪಾಕಿ ಜನನ ಮರಣ ಬಂಧನದಿಂದ ಮುಕ್ತನಾಗಿ ಮುಮುಕ್ಷುವಿಗೆ ಆತ್ಮಸ್ವರೂಪ ಮೋಕ್ಷೈಶ್ವರ್ಯದ ರಾಜ್ಯದಮೇಲೆ ಪಟ್ಟಾಭಿಷೇಕವಾಗುವದು. ।। ೪೬ ।।

ರಾಜವಿದ್ಯಾ ರಾಜಗುಹ್ಯಂ ಪವಿತ್ರಮಿದಮುತ್ತಮಮ್ ।
ಪ್ರತ್ಯಕ್ಷಾವಗಮಂ ಧರ್ಮ್ಯಂ ಸುಸುಖಂ ಕರ್ತುಮವ್ಯಯಮ್ ।। ೨ ।।

[ರಾಜವಿದ್ಯಾ ರಾಜಗುಹ್ಯಮಿತಿ] ಜೇ ಜಾಣಣೇಯಾ ಸುವಿದ್ಯೇಚ್ಯಾ ಗಾಂವೀ । ಗುರುತತ್ವಾಚೀ ಆಚಾರ್ಯ ಪದವೀ । ಜೇ ಸಕಳ ಗುಹ್ಯಾಂಚಾ ಗೋಸಾವೀ । ಪವಿತ್ರಾ ರಾವೋ ।। ೪೭ ।। ಆಣಿ ಧರ್ಮಾಚೇ ನಿಜಧಾಮ । ತೇವೀಂಚಿ ಉತ್ತಮಾಚೇ ಉತ್ತಮ । ಪೈಜಯಾ ಯೇತಾ ನಾಹೀ ಕಾಮ । ಜನ್ಮಾಂತರಾಚೇ ।। ೪೮ ।। ಮೊಘಟಕೇ ಗುರುಮುಖೇ ಉದೈಜತ ದಿಸೇ । ಆಣಿ ಹೃದಯೀ ಸ್ವಯಂಭುಚಿ ಅಸೇ । ಪ್ರತ್ಯಕ್ಷ ಫಾವೋ ಲಾಗೇ ತೈಸೇ । ಅಪೈಸಯಾಚಿ ।। ೪೯ ।। ತೇವೀಂಚಿ ಗಾ ಸುಖಾಚ್ಯಾ ಪಾವುಟೀ । ಚಢತಾ ಯೇಇಜೇ ಜಯಾಚ್ಯಾ ಭೇಟೀ । ಮಗ ಭೇಟಲ್ಯಾ ಕೀರ ಮಿಠೀ । ಭೋಗಣೇಯಾಹಿ ಪಡೇ ।। ೫೦ ।। ಪರೀ ಭೋಗಾಚಿಯೇ ಐಲಿಕಡಿಲಿಯೇ ಮೇರೆ । ಚಿತ್ತ ಉಭೇ ರೇಲೇ ಸುಖಾಭರೇ । ಐಸೇ ಸುಲಭ ಆಣಿ ಸೋಪಾರೇ । ವರೀ ಪರಬ್ರಹ್ಮ ।। ೫೧ ।। ಪೈ ಗಾ ಆಣಿಕಹೀ ಏಕ ಯಾಚೇ । ಜೇ ಹಾತಾ ಆಲಿಯಾ ತರೀ ನ ವಜೇ । ಆಣಿ ಅನುಭವಿತಾ ಕಾಹೀ ನ ವೇಂಚೇ । ವರೀ ವಿಟೇಹಿ ನಾ ।। ೫೨ ।। ಯೇಥ ಜರೀ ತೂ ತಾರ್ಕಿ ಕಾ । ಐಸೀ ಹನ ಫೇಸೀ ಶಂಕಾ । ನಾ ಯೇವಢೀ ವಸ್ತು ಹೇ ಲೋಕಾ । ಉರಲೀ ಕೇವೀ ಪಾ ।। ೫೩ ।। ಜೇ ಏಕೋತ್ತರೀಯಾಚಿಯಾ ವಾಢೀ । ಜಳತಿಯೇ ಅಗೀ ಘಾಲಿತೀ ಉಡೀ । ತೇ ಅನಾಯಾಸೇ ಸ್ವಗೋಡೀ । ಸಾಂಡಿತೀ ಕೇವೀ ।। ೫೪ ।। ತರೀ ಪವಿತ್ರ ಆಣಿ ರಮ್ಯ । ತೇವಿಂಚಿ ಸುಖೋಪಾಯ ಸುಗಮ್ಯ । ಆಣಿ ಸುಸುಖ ಪರಮ ಧರ್ಮ್ಯ । ವರೀ ಆವಣಸಾ ಜೋಡೇ ।। ೫೫ ।। ಐಸಾ ಆಘವಾಚಿ ಹಾ ಸುರವಾಡ ಆಹೇ । ತರೀ ಜನಾ ಹಾತೀ ಕೇವೀ ಉರೋ ಲಾಹೇ । ಹಾ ಶಂಕೇಚಾ ಠಾವ ಕೀರ ಹೋಯೇ । ಪರೀ ನ ಧರಾವೇ ತುವಾ ।। ೫೬ ।।

ಅರ್ಥ — ಯಾರಿಗೆ ಸರ್ವಜ್ಞಾನದ ವಿಷಯದಲ್ಲಿ ಮುಖ್ಯ ಆಚಾರ್ಯರೆಂಬ ಪದವಿಯು ದೊರಕುತ್ತದೆ ಮತ್ತು ಯಾರು ಸರ್ವಗುಹ್ಯ ಜ್ಞಾನದ ಸ್ವಾಮಿಯೂ, ಪವಿತ್ರವಸ್ತುಗಳ ರಾಜನೂ, ।।೪೭।। ಮತ್ತು ಧರ್ಮದ ಅಧಿಷ್ಠಾನವೂ ಉತ್ತಮರಲ್ಲಿ ಉತ್ತಮನೂ ಆಗಿರುವನು. ಯಾವ ಜ್ಞಾನವ ಪ್ರಾಪ್ತಿಯಾಗುವದರಿಂದ. ಅವನಿಗೆ ಪುನರ್ಜನ್ಮವನ್ನೆತ್ತುವ ಕಾರಣವೇ ಉಳಿಯುವದಿಲ್ಲ. ।। ೪೮।। ಆ ಬ್ರಹ್ಮಜ್ಞಾನವು ಗುರುಗಳ ಮುಖದಿಂದ ಮಹಾವಾಕ್ಯದ್ವಾರಾ ಶಬ್ದಸ್ವರೂಪದಿಂದ ಹೊರ ಹೊರಡುವಷ್ಟರಲ್ಲಿ ಶಿಷ್ಯನ ಅಂತಃಕರಣದಲ್ಲಿ ಸ್ವಯಂವೇದ್ಯ ಇರುವ ಬ್ರಹ್ಮವು ಅವನಿಗೆ ಸಹಜವೇ ಪ್ರತ್ಯಕ್ಷವಾಗುತ್ತದೆ. ।। ೪೯ ।। ಅದೇ ಪ್ರಕಾರಾ ಸುಖದ ಪಾವಟಗೆಗಳನ್ನು ಹತ್ತುತ್ತಹೋಗುವದರಿಂದ ಯಾವದರ ಭೆಟ್ಟಿಯಾಗುತ್ತದೊ, ಮತ್ತು ಆ ಭೆಟ್ಟಿ ಆದಮೇಲೆ ದರ್ಶನಮಾತ್ರದಿಂದ ಆಗುವ ಸುಖವು ಯಾವ ಸ್ಥಳದಲ್ಲಿ ಲಯಹೊಂದುತ್ತದೋ ।। ೫೦ ।। ಆದರೆ ಯಾವ ಸುಖದ ಈಚಿಯವಂಡೆಯು ನೋಲೆ ನಿಂತಿರುವಾಗ್ಗೆ ಸಹ ಅಂತಃಕರಣವು ಆನಂದಯುಕ್ತವಾಗುತ್ತದೊ, ಹೀಗೆ ಸುಲಭವಿದ್ದು ಅದು ಶ್ರೇಷ್ಠಪರಬ್ರಹ್ಮವು ಅದೆ. ।। ೫೧ ।। ಅರ್ಜುನನೇ! ನಿಜವಾಗಿ ಈ ಜ್ಞಾನದಲ್ಲಿ ಮತ್ತೊಂದು ಗುಣವಿರುತ್ತದೆ ಅದು ಯಾವದೆಂದರೆ ಅದು ಪ್ರಾಪ್ತವಾಗಿರಲು ಇಲ್ಲದಂತೆ ಆಗುವದಿಲ್ಲ. ಅದರ ಅನುಭವತೆಗೆದುಕೊಳ್ಳುವದರಿಂದ ಕಡಿಮೆ ಆಗುವದಿಲ್ಲ. ಮತ್ತು ಬೇಸರವೂ ಬರುವದಿಲ್ಲ ।। ೫೨ ।। ಎಲೈ ಜಾಣನಾದ ಅರ್ಜುನನೇ! ಇಂಥ ಅಪ್ರತಿಮವಾದ ವಸ್ತು ಜನರ ಕೈಯೊಳಗಿಂದ ಹೇಗೆ

ಉಳದಿರುವದು? ಈ ಶ್ರೀಷ್ಮವಸ್ತುವಿನ ಕಡೆಗೆ ಜನರು ಯಾಕೆ ನೋಡುವದಿಲ್ಲ? ಎಂಬ ಸಂಶಯವು ನಿನಗೆ ಬರಬಹುದು. ॥ ೫೩ ॥ ಕಾರಣವೇನಂದರೆ– ಅವರು ನೂರಕ್ಕೆ ಒಂದು ರುಪಾಯಿ ಬಡ್ಡಿಯ ಲಾಭದ ಆಶದಿಂದ ಉರಿಯು ಬೆಂಕಿಯಲ್ಲಿ ಹಾರಿಕೊಳ್ಳುವರು (ತಕ್ಕರಿಗೆ ಹಣಕೊಟ್ಟು ಸಂಕಟದಲ್ಲಿಬಿದ್ದು ಗೋಳಾಡುವರು ಅವರು ಸಹಜವೇ ತಮ್ಮಲ್ಲಿರುವ ಸುಖಸ್ವಾದವನ್ನು ಹೇಗೆ ಬಿಟ್ಟುಬಿಡುವರು? ॥ ೫೪ ॥ ಆದರೂ ಅದು ಪವಿತ್ರ ಮತ್ತು ರಮ್ಯ ಸುಖೋಪಾಯದಿಂದ ಪ್ರಾಪ್ತವಾಗುವಂಥದು, ತಿಳಿಯಲು ಅತಿ ಸುಲಭವಾದಂಥದು, ಬಹು ಸುಖಕರವಾದುದು, ಮತ್ತು ಪೂರ್ಣ ಧರ್ಮಾನುಕೂಲವಾಗಿರುವದು. ಅದು ತನ್ನಲ್ಲಿಯೇ ಇದ್ದು ತನಗೆ ದೊರಕುತ್ತದೆ. ॥ ೫೫ ॥ ಅರ್ಜುನನೇ! ಈ ಪ್ರಕಾರಾ ಸರ್ವ ಮಾತುಗಳು ಅನಕೂಲ ಇರುತ್ತಿರುವದು. ಅದು ಜನರ ಕೈಯೊಳಗೆ ದೊರಕದೇ ಹೇಗೆ ಉಳದಿರಬೇಕೆಂಬ ಸಂಶಯವು ಉಂಟಾಗುವದೇನೋ ನಿಜ ಆದರೆ ಈ ಸಂಶಯವನ್ನು ನಿನ್ನ ಮನಸಿನಲ್ಲಿ ತರಬೇಡ ಕಂಡಿಯಾ! ॥ ೫೬ ॥

ಅಶ್ರದ್ದಧಾನಾಃ ಪುರುಷಾ ಧರ್ಮಸ್ಯಾಸ್ಯ ಪರಂತಪ।
ಅಪ್ರಾಪ್ಯ ಮಾಂ ನಿವರ್ತಂತೇ ಮೃತ್ಯುಸಂಸಾರವರ್ತ್ಮನಿ ॥ ೩ ॥

[ಅಶ್ರದ್ದಧಾನಾ ಇತಿ] ಪಾಹೇ ಪಾ ದೂಧ ಪವಿತ್ರ ಆಣಿ ಗೋಡ। ಪಾಹೀ ತ್ವಚೇಚಿಯಾ ಪದಾರಾ ಆಡ। ತರೀ ತೇ ಅನ್ಹೆರೂಸಿಯಾ ಗೋಚಿಡ। ಅಶುದ್ಧಚಿ ಸೇವೀ ॥ ೫೭ ॥ ಕಾ ಕಮಲ ಕಂದಾ ಆಣಿ ಪರ್ಯರೀ। ನಾಂದಣೂಕ ಏಕೇಚಿ ಫರೀ। ಪರೀ ವರಾಗ ಸೇವಿಜೇ ಭ್ರಮರೀ। ಯೇರಾ ಚಿಖಲಚಿ ಉರೇ ॥ ೫೮ ॥ ನಾ ತರೀ ನಿಧೈವಾಚ್ಯಾ ಪರಿವರೀ। ಲೋಹ್ಯಾ ರುತಲಿಯಾ ಆಹಾತಿ ಸಹಸ್ರವರೀ। ಪರಿ ತೇಥ ಬೈನೋಸಿ ಉಪವಾಸ ಕರೀ। ಕಾವುದ್ರೋಜಿಯೇ ॥ ೫೯ ॥ ತೈಸಾ ಹೃದಯಾ ಮಧ್ಯ ಮೀ ರಾಮು। ಅಸತಾ ಸರ್ವ ಸುಖಾಚಾ ಆರಾಮು। ಕೀ ಭ್ರಾಂತಾಸೀ ಕಾಮು। ವಿಷಯಾವರೀ ॥ ೬೦ ॥ ಬಹು ಮೃಗಜಳ ದೇಖೋನಿ ಡೋಳಾ। ಥುಂಕಿಜೇ ಅಮೃತಾಚಾ ಗಿಳಿತಾ ಗಳಾಳಾ। ತೋಡಿಲಾ ವರಿಸ ಬಾಂಧಿಲಾ ಗಳಾ। ಶುಕ್ತಿಕಾಲಾಭೇ ॥ ೬೧ ॥ ತೈಸೀ ಅಹಂಮಮತೇಚಿಯೇ ಲವಡ ಸವಡೀ। ಮಾತೇ ನ ಪವಿತೀಚಿ ಬಾಪುಡೀ। ಮೃತ್ಯುಸೋನಿ ಜನ್ಮಮರಣಾಚಿಯೇ ಮುಥಡೀ। ಡಹುಳಿತೇ ಠೇಲೀ ॥ ೬೨ ॥ ಯೇರ್ಹವೀ ತರೀ ಮೀ ಕೈಸಾ। ಮುಖಾಪ್ರತಿ ಭಾನು ಕಾ ಜೈಸಾ। ಕೇಹೀ ನಸೇ ನ ದಿಸೇ ಐಸಾ। ವಾಣೀಚಾ ನೋಹೇ ॥ ೬೩ ॥

ಅರ್ಥ— ಅರ್ಜುನನೇ! ನೋಡು ಆಕಳ ಹಾಲು ಪವಿತ್ರವಿದ್ದು, ರುಚಿಕರವಾಗಿರುತ್ತವೆ. ಅವು ತೀರ ತ್ವಚದ ಸಮೀಪದಲ್ಲಿ ವಂದು ಪದರಿನವಳಗೇ ಇದ್ದು ಆ ಹಾಲನ್ನು ಸ್ವೀಕರಿಸದೇ ತ್ಯಾಗಮಾಡಿ ಉಣ್ಣೆಯು ರಕ್ತವನ್ನೇ ಸೇವನ ಮಾಡುತ್ತದೆ. ॥ ೫೭ ॥ ಇಲ್ಲನೇ ಕಮಲದ ಬೊಡ್ಡಿಗುಲ್ಲಿಯೇ ಕಪ್ಪಿಯು ವಾಸಮಾಡಿಕೊಂಡಿರುತ್ತದೆ. ಆದರೆ ಕಮಲ ಪುಷ್ಪದೊಳಗಿನ ಸುಗಂಧನನ್ನು (ಬಹು ದೂರಿನಿಂದ ಬಂದ) ಭ್ರಮರಗಳೇ ಸೇವನೆಮಾಡುತ್ತವೆ ಹೊರ್ತು ಕಪ್ಪೆಯ ಪಾಲಿಗೆ ಕೆಸರೇ ಉಳಿಯುತ್ತದೆ. ॥ ೫೮ ॥ ಅಥವಾ ದುರ್ದೈವಿ ಪುರುಷನ ಮನೆಯಲ್ಲಿ ಸಾವಿರಾರು ಮೋಹರುಗಳು ಹೂಳಿರುವವು ಆದರೆ ಅವನು ಆ ಸ್ಥಳದಲ್ಲಿಯೇ ಕುಳಿತುಕೊಂಡು ಉಪವಾಸಬಿದ್ದು ದರಿದ್ರಾವಸ್ಥೆಯನ್ನು ಭೋಗಿಸುವಂತೆ ॥ ೫೯ ॥ ಪ್ರಾಣಿಮಾತ್ರಗಳಿಗೆ ಸರ್ವಸುಖವನ್ನು ಕೊಡುವ ಸುಖದ ವಿಶ್ರಾಂತಿಸ್ಥಾನನಾದ ಹೃದಯಸ್ಥ. "ಶ್ರೀರಾಮನು" ಇರುತ್ತಿರಲು ಆ ಅಜ್ಞಾನಿ ಜೀವರುಗಳಿಗೆ ವಿಷಯದಲ್ಲಿ ವಾಸನಾ ಉಂಟಾಗುತ್ತದೆ. ॥ ೬೦ ॥ ಬಹಳೇ ಮೃಗಜಲವನ್ನು (ಬಿಸಲುಕುದರೆಯನ್ನು) ನೋಡಿ ತನ್ನ ಬಾಯಿಯಲ್ಲಿರುವ ಅಮೃತತುಲ್ಯ ರುಚಿಕರವಾದ ನೀರಿನ ಗುಟಕನ್ನು ಉಗಳಿಬಿಡುವನು ಇಲ್ಲವೇ ಶುಭ್ರವಾದ ಸಿಂಪಿಗಳ ಸರವನ್ನು ನೋಡಿದ ಕೂಡಲೆ ತನ್ನ ಕೊರಳಲ್ಲಿ ಕಟ್ಟಿಕೊಂಡ ಸ್ಪರ್ಶಮಣಿಯ ಹಾರವನ್ನು ಹರಿದು ಬಿಸಾಡುವನು ॥ ೬೧ ॥ ಅದೇ ಪ್ರಕಾರಾ ನಾನು ನನ್ನದು ಎಂಬ

ಭ್ರಾಂತಿಯಿಂದ ದೈನ್ಯರಾದ ಜೀವರಿಗೆ ನನ್ನ ಪ್ರಾಪ್ತಿಯು ಆಗುವದಿಲ್ಲ. ಅವರು ಜನನಮರಣದ ಎರಡೂ ದಂಡೆಯ ಮೇಲೆ ಯಾವಾಗಲೂ ಮುಳಮುಳಿಗಿ ಏಳುತ್ತಿರುತ್ತಾರೆ. ವ್ಯರ್ಥವಾಗಿ (ಸಂಸಾರದ ಬಲಿಯಲ್ಲಿ ಶಿಕ್ಕುಬಿದ್ದು) ಸಂಕಟಪಡುತ್ತಾರೆ. ॥ ೬೨ ॥ ಆದರೆ ನಾನು ಹೇಗೆ ಇರುತ್ತೇನೆಂದರೆ ಸೂರ್ಯನು ಒಂದು ವೇಳೆ ಕಾಣುವನು ಮತ್ತೊಂದು ವೇಳೆ ನೋಡಿದರೆ ಕಾಣದೇ ಹೋಗುವನು ಹೀಗೆ ಹೆಚ್ಚುಕಡಿಮೆ ಕಾಣುವ (ವ್ಯಂಗವು) ಸೂರ್ಯನಲ್ಲಿರುವದು ಅದು ನನ್ನಲ್ಲಿರುವದಿಲ್ಲ ॥ ೬೩ ॥

ಮಯಾ ತತಮಿದಂ ಸರ್ವಂ ಜಗದವ್ಯಕ್ತಮೂರ್ತಿನಾ
ಮತ್ಸ್ಥಾನಿ ಸರ್ವಭೂತಾನಿ ನ ಚಾಹಂ ತೇಷ್ವವಸ್ಥಿತಃ ॥ ೪ ॥

[ಮಯಾ ತತಮಿದಮಿತಿ] ಮೂರ್ಪಿಯಾ ವಿಸ್ತಾರಲೇ ಪಣಾಚೇನಿ ನಾನೇ । ಹೇ ಜಗಚಿ ನೋಹೇ ಆಘವೇ । ಜೈಸೇ ದೂಧ ಮುರಾಲೇ ಸ್ವಭಾವೇ । ತರೀ ತೇಚಿ ದಹೀ ॥ ೬೪ ॥ ಕಾ ಬೀಜಚಿ ಜಾಹಲೇ ತರೂ । ಅಥವಾ ಭಾಂಗಾರಚಿ ಅಳಂಕಾರೂ । ತೈಸಾ ಮಜ ಏಕಾಚಾ ವಿಸ್ತಾರೂ । ತೇ ಹೇ ಜಗ ॥ ೬೫ ॥ ಹೇ ಅವ್ಯಕ್ತಪಣ ಥಿಜಲೇ । ತೇಚಿ ನುಗ ವಿಶ್ವಾಕಾರೇ ವ್ಯೋಥಿಜಲೇ । ತೈಸೇ ಅಮೂರ್ತ ಮೂರ್ತಿವಿಂಯಾ ವಿಸ್ತಾರಲೇ । ತ್ರೈಲೋಕ್ಯ ಜಾಣೇ ॥ ೬೬ ॥ ಮಹದಾದಿ ದೇಹಾಂತೇ । ಇಯೇ ಅಶೇಷೇಹೀ ಭೂತೇ । ಪೈ ಮಾಝ್ಯಾ ಠಾಯೀ ಬಿಂಬಿತೇ । ಜೈಸೇ ಜಳೀ ಫೇಣ ॥ ೬೭ ॥ ಪರೀ ತಯಾ ಫೇನಾ ಆಂತ ಪಾಹತಾ । ಜೇವೀ ಜಳ ನ ದಿಸೇ ಪಾಂಡುಸುತಾ । ನಾತರೀ ಸ್ವಪ್ನೆಂಚೀ ಅನೇಕತಾ ಚೇಇಲಿಯಾ ನೋಹಿಜೇ ॥ ೬೮ ॥ ತೈಸೇ ಭೂತೇ ಇಯೇ ಮಾಝ್ಯಾಠಾಯೀ । ಬಿಂಬತಿ ತಯಾ ಮಾಜೀ ಮೀ ನಾಹೀ । ಇಯಾ ಉಪಪತ್ತೀ ತುಜಪಾಹೀ । ಸಾಂಗಿತಲಿಯಾ ಮಾಗಾ ॥೬೯॥ ಮ್ಹಣವೂನಿ ಬೋಲಿಲಿಯಾ ಬೋಲಾಚಾ ಅತಿಸೋ । ನ ಕೀಜೇ ಯಾಲಾಗೀ ಹೇ ಅಸೋ । ಪರೀ ನುಜ ಆಂತ ಪೈಸೋ । ದಿಠೀ ತುಝೀ ॥ ೭೦ ॥

ಅರ್ಥ— ನನ್ನ ನಿರ್ಗುಣ ಸ್ವರೂಪವ ವಿಸ್ತಾರವೇ ಈ ಜಗತ್ತು ಇರುವದಿಲ್ಲೀನು ? ಅದರಂತೆ ಸಹಜವೇ ಹಾಲು ಹೆರೆತರೆ ಅದೇ ಮೊಸರು. ॥ ೬೪ ॥ ಇಲ್ಲವೇ ಬೀಜವೇ ವೃಕ್ಷವಾಗುವದು. ಸುವರ್ಣದಿಂದ ಅಲಂಕಾರಗಳಾಗುವಂತೆ ನಿರ್ಗುಣನಾದ ನನ್ನೊಬ್ಬನಿಂದಲೇ ಈ ಜಗತ್ತು ವಿಸ್ತಾರವಾಗಿರುವದು. ॥ ೬೫ ॥ ನನ್ನ ಈ ಸ್ವರೂಪವು ಅವ್ಯಕ್ತವಿರುವಾಗ್ಗೆ ನಿರಾಕಾರ ಇರುತ್ತದೆ. ಆ ಮೇಲೆ ಅದೇ ಸೃಷ್ಟಿಯ ರೂಪದಿಂದ ವಿಸ್ತಾರ ಉಳ್ಳದ್ದಾಗಿ ಆಕಾರಕ್ಕೆ ಬರುತ್ತದೆ. ಇದರಂತೆ ನಿರ್ಗುಣನಿದ್ದು ಸಾಕಾರನಾದ ಯಾವ ನಾನು ಮೂರು ಲೋಕಗಳನ್ನು ಯೋಜನೆ ಮಾಡಿರುವೆನೆಂದು ತಿಳಿ. ॥ ೬೬ ॥ ಮಹತತ್ವದಿಂದ ದೇಹದವರೆಗೆ ಈಭೂತಗಳು ನಿಜವಾಗಿ ನನ್ನ ಸತ್ತಾಮಾತ್ರದಿಂದಲೇ ಭಾಸವಾಗುತ್ತವೆ. ಯಾವ ಪ್ರಕಾರಾ ನೀರಿನಲ್ಲಿ ಬುರಗು, ಭಾಸವಾಗುತ್ತದೋ ॥ ೬೭ ॥ ಆದರೆ ಆ ಬುರಗಿನಲ್ಲಿ ನೋಡಲಿಕ್ಕೆ ಹೋದರೆ ನೀರು ಕಾಣುವದಿಲ್ಲ. ಇಲ್ಲವೇ ಅರ್ಜುನನೇ ! ಸ್ವಪ್ನದಲ್ಲಿ ಅನೇಕ ರೂಪಗಳನ್ನು ಧಾರಣ ಮಾಡಿದಾಗ್ಯೂ ಜಾಗ್ರತವಾದನೇಲೆ ಇಲ್ಲದಂತೆ ಆಗುತ್ತವೆ ॥ ೬೮ ॥ ಅದೇ ಪ್ರಕಾರಾ ಈ ಭೂತಗಳು ನನ್ನಲ್ಲಿ ಭಾಸಮಾನವಾಗಿದ್ದರೂ, ಆ ಭೂತಗಳಲ್ಲಿ ನಾನು ಇರುವದಿಲ್ಲ. ಈ ಅಖ್ಯಾನವನ್ನು ಹಿಂದೆ (ಅಧ್ಯಾಯ ೭ ಶ್ಲೋಕ ೧೨ನೇದರಲ್ಲಿ ನೋಡು) ॥ ೬೯ ॥ ಆದುದರಿಂದ ಮೊದಲು ಮಾತಾಡಿದ ಮಾತಿನ ವಿಸ್ತಾರವನ್ನು ಮರಳುಮಾಡವ ಕಾರಣವಿಲ್ಲ. ಅದಂತೂ ಇರಲಿ ಆದರೆ ನಿನ್ನ ಸೃಷ್ಟಿಯ ಪ್ರವೇಶವು ನನ್ನ ಯಥಾರ್ಥವಾದ ಸ್ವರೂಪದಲ್ಲಿಯೇ ನೆಲೆಗೊಳಿಸು. ॥ ೭೦ ॥

ನ ಚ ಮತ್ಸ್ಥಾನಿ ಭೂತಾನಿ ಪಶ್ಯ ಮೇ ಯೋಗಮೈಶ್ವರಂ ।
ಭೂತಭೃನ್ನ ಚ ಭೂತಸ್ಥೋ ಮಮಾತ್ಮಾ ಭೂತಭಾವನಃ ॥ ೫ ॥

[ನಚ ಮಚ್ಛಾನೀತಿ] ಆಮುಚ್ಯಾ ಪ್ರಕೃತೀ ಪೈಲೀಕಡೀಲ ಭಾವೋ । ಜರೀ ಕಲ್ಪನೇ ವೀಣ ಲಾಗಸೀ ಪಾಹೋ । ತರೀ ಮಜ ಮಾಜೀ ಭೂತೇ ಹೇಹೀ ವಾಹೋ । ಜೇ ಮೀ ಸರ್ವ ಮ್ಹಣವೂನಿ ॥ ೭೧ ॥ ಯೇರ್ಹವೀ ಸಂಕಲ್ಪಾಚಿಯೇ ಸಾಂಜವೇಳೇ । ನಾನೇಕ ತಿಮಿರಜತೀ ಬುದ್ಧೀಜೇ ಡೋಳೇ । ಮ್ಹಣೋನಿ ಅಖಂಡಿತಚೀ ಪರೀ ಝಾಂಬಳೇ । ಭೂತ ಭಿನ್ನ ಐಸೇ ದೇಖೇ ॥ ೭೨ ॥ ತೇಚಿ ಸಂಕಲ್ಪಾಚೀ ಸಾಂಜ ಪೈ ಲೋಪೇ । ತೈ ಅಖಂಡಿತಚೀ ಆಪೆ ಸ್ವರೂಪೇ । ಜೈಸೇ ಶಂಕಾ ಜಾತ ಖೆ'ವೋ ಲೋಪೇ । ಸಾಪಪಣ ಮಾಳೇಜೇ ॥ ೭೩ ॥ ಯೇರ್ಹವೀ ತರೀ ಭೂಮೀ ಆಂತೂನಿ ಸ್ವಯಂಭ । ಕಾಯ ಘಡೇಯಾ ಗಾಡಗೇ ಯಾಂಚೇ ನಿಘತೀ ಕೊಂಭ । ಪರೀ ತೇ ಕುಲಾಲ ಮತೀಚೇ ಗರ್ಭ । ಉಮಟಲೇ ಕೀ ॥ ೭೪ ॥ ನಾತರೀ ಸಾಗರೀಂಚ್ಯಾ ಪಾಣೀ । ಕಾಯ ತರಂಗಾಚಿಯಾ ಆಹತೀ ಖಾಣೀ । ತೇ ಅವಾಂತರ ಕರಣೀ । ವಾರಯಾಚೀ ನನ್ವೇ ॥ ೭೫ ॥ ಪಾಹೇ ಪಾ ಕಾಪಸಾಚ್ಯಾ ಪೋಟೀ । ಕಾಯ ಕಾವಡಾಚೀ ಹೋತೀ ಪೇಟೀ । ತೋ ವೇಢಿತಯಾಚಿಯಾ ದಿಠೀ । ಕಾಪಡ ಜಾಹಲಾ ॥ ೭೬ ॥ ಜಾ ಸೋನೇ ಲೇಣೇ ಹೋವೂನಿ ಘಡೇ । ತರೀ ತಯಾಚೇ ಸೋನೇಪಣ ನ ಮೋಡೆ' । ಯೇರ ಅಲಂಕಾರ ಹೇ ವರಚಿಲೀ ಕಡೆ । ಲೇತಯಾಚೇನಿ ಭಾವೇ ॥ ೭೭ ॥ ಸಾಂಗೇ ಪಡಿ ಸಾದಾಚೀ ಪ್ರತ್ಯುತ್ಪತ್ತಿರೇ । ಕಾ ಆರಿಸಾ ಜೇ ಆವಿಷ್ಕರೇ । ತೇ ಆವುಲೇಕೇ ಸಾಚೋಕಾರೇ । ತೇಥಿಚೇ ಹೊತೇ ॥ ೭೮ ॥ ತೈಸೇ ಇಯೇ ನಿರ್ಮಳ ಮಾಝ್ಯಾ ಸ್ವರೂಪೀ । ಜೋ ಭೂತ ಭಾವನಾ ಆರೋಪಿ । ತಯಾಸಿ ತಯಾಚಾ ಸಂಕಲ್ಪೀ । ಭೂತಾ ಭಾಸ ಅಸೇ ॥ ೭೯ ॥ ತೇಚಿ ಕಲ್ಪಿತೀ ಪ್ರಕೃತಿ ಪುರೇ । ತರೀ ಭೂತಾಭಾಸ ಅಧೀಂಜ ಸರೇ । ಮಗ ಸ್ವರೂಪ ಉರೇ ಏಕಸರೇ । ನಿಖಳ ಮಾಝೆ ॥ ೮೦ ॥ ಹೇ ಅಸೋ ಆಂಗೀ ಭರಲಿಯಾ ಭವಂಡೀ । ಜೈಶಾ ಭೋವತ ದಿಸತೀ ಅರಡೀ ದರಡೀ । ತೈಸೀ ಆವುಲಿಯಾ ಕಲ್ಪನಾ ಅಖಂಡೀ । ಗಮತೀ ಭೂತೇ ॥ ೮೧ ॥ ತೇಚಿ ಕಲ್ಪನಾ ಸಾಂಡೂನಿ ಪಾಹೀ । ತರೀ ಮೀ ಭೂತೀ ಭೂತೇ ಮಾಝ್ಯಾಯಾ ಠಾಯೀ । ಸ್ಪಪ್ನೀಹೀ ಪರೀ ನಾಹೀ । ಕಲ್ಪಾವಯಾ ಜೋಗೇ ॥ ೮೨ ॥ ಅತಾ ಮೀಚ ಯೇಕ ಭೂತಾಂತೇ ಧರ್ತಾ । ಅಥವಾ ಭೂತಾಮಾಜೀ ಮೀ ಅಸತಾ । ಯಾ ಸಂಕಲ್ಪ ಸನ್ನಿಪಾತಾ । ಆಂತುಲಿಯಾ ಬೋಲಿಯಾ ॥ ೮೩ ॥ ಮ್ಹಣೋನಿ ಪರಿಯೇಸೀಗಾ ಪ್ರಿಯೋತ್ತಮಾ । ಯಾಪರೀ ಮೀ ವಿಶ್ವೇಸಿ ವಿಶ್ವಾತ್ಮಾ । ಜೋ ಇಯಾ ಲಟಕಿಯಾ ಭೂತಗ್ರಾಮಾ । ಭಾವ್ಯ ಸದಾ ॥ ೮೪ ॥ ರಸ್ಮೀಜೇನಿ ಆಧಾರೇ ಜೈಸೇ । ನವ್ಹತೇಚಿ ಮೃಗಜಳ ಅಭಾಸೇ । ಮಾಝ್ಯಾ ಠಾಯೀ ಭೂತಜಾತ ತೈಸೇ । ಆಣಿ ಮಾತೇಹೀ ಭಾವೀ ॥ ೮೫ ॥ ಮೀ ಯೇ ಪರೀಚಾ ಭೂತಭಾವನೂ । ಪರೀ ಸರ್ವ ಭೂತಾಂಸಿ ಅಭಿನ್ನೂ । ಜೈಸೀ ಪ್ರಭಾ ಆಣಿ ಭಾನೂ । ಏಕಚಿತೇ ॥ ೮೬ ॥ ಹಾ ಆಮುಚಾ ಐಶ್ವರ್ಯ ಯೋಗ । ತುವಾ ದೇಖಿಲಾ ಕೀ ಚಾಂಗ । ಆತಾ ಸಾಂಗೇ ಕಾಹೀ ಏಥ ಲಾಗ । ಭೂತ ಭೇದಾಚಾ ಅಸೇ ॥ ೮೭ ॥ ಯಾಲಾಗೀ ಮಜ ಪಾಸೂನಿ ಭೂತೇ । ಆಸೇ ನವ್ಹತೀ ಹೇ ನಿರುತೇ । ಆಣಿ ಭೂತಾವೇಗಳಿಯಾ ಮಾತೇ । ಕಹೀಚ ನ ಮನೀಹೋ ॥ ೮೮ ॥

ಅರ್ಥ— ಮಾಯಾದ ಆಚೆಕಡೆಗೆ ಇರುವ ನನ್ನ ಶುದ್ಧ ಸ್ವರೂಪವನ್ನು ಒಂದು ವೇಳೆ ನೀನು ನಿನ್ನ ಕಲ್ಪನೆಯನ್ನು ಬಿಟ್ಟು ನೋಡಿದರೆ ನನ್ನ ಸ್ಥಳದಲ್ಲಿ ಈ ಸರ್ವ ಪ್ರಾಣಿಗಳು ಇರುತ್ತವೆಂಬುವದು ಸಹ ಮಿಥ್ಯವಿರುತ್ತದೆಂಬದು ನಿನಗೆ ಕಾಣಬಹುದು. ಆದರೆ ಸರ್ವದರಲ್ಲಿಯೂ ನಾನೇ ಇದ್ದೇನೆ. ॥ ೭೧ ॥ ಆದರೆ ಸಂಕಲ್ಪರೂಪ ಸಾಯಂಕಾಲದ ವೇಳೆಕ್ಕೆ ಜ್ಞಾನರೂಪ ಕಂಣುಗಳು ಅಜ್ಞಾನರೂಪ ಕತ್ತಲೆಯಿಂದ ಕೆಲವು ಕಾಲದವರೆಗೆ ಮುಚ್ಚಿಕೊಂಡಿರುವದರಿಂದ ಆ ಕತ್ತಲೆಯಲ್ಲಿ ನಾನು ಅಖಂಡ ಇರುತ್ತಿರಲು ಭೂತಗಳು ನನ್ನಿಂದ ಬೇರೆಯಾಗಿ ದೃಷ್ಟಿಗೆ ಬೀಳುತ್ತವೆ. ॥ ೭೨ ॥ ಮಾಲೆಯ ಮೇಲಿನ ಸರ್ಪ ಭ್ರಾಂತಿಯು ಇಲ್ಲದಂತಾದಮೇಲೆ ಮಾಲೆಯೇ ಅಲ್ಲಿ ಉಳದಿರುತ್ತದೆ. ಅದೇ ಪ್ರಕಾರಾ

ಸಂಕಲ್ಪದ ಸಂಜೆಯವೇಳೆಯು ಇಲ್ಲದಂತಾದಮೇಲೆ ನನ್ನ ಅಖಂಡ ಸ್ವರೂಪವು ಅವಶೇಷವಾಗಿ ಉಳಿಯುತ್ತದೆ. ॥೭೩॥ ಭೂತ ಭೇದದ ಪ್ರತೀತಿಯನ್ನು ನೋಡುವವರ ಸಂಕಲ್ಪವೇ ಕಾರಣವಾಗಿರುತ್ತದೆ. ಇದಕ್ಕೆ ದೃಷ್ಟಾಂತವೇನೆಂದರೆ (ಮಣ್ಣಿನ ಪಾತ್ರೆಗಳು) ಕೊಡ ಗಡಿಗೆ ಮುಂತಾದವುಗಳು ಭೂಮಿಯಲ್ಲಿಯೇ ಸ್ವಯಂಭವಾಗಿ ಉದ್ಭವಿಸುವವೋ ? ಇಲ್ಲ. ಆದರೆ ಕುಂಬಾರನ ಬುದ್ಧಿ (ಕುಶಲತೆ) ಯಂತೆ ಅವು ಎಲ್ಲ ಸಾಮಗ್ರಿಗಳು ಸಿದ್ಧವಾಗುತ್ತವೆ. ॥ ೭೪ ॥ ಇಲ್ಲವೇ ಸಮುದ್ರದ ನೀರಿನಲ್ಲಿ ತೆರೆಗಳ ಖಣಿಯು ಇರುವದೋ ಹೇಗೆ? ನೀರಿನ ರೂಪಾಂತರವು (ತೆರೆಗಳು) ಗಾಳಿಯಿಂದುಂಟಾಗುವದಿಲ್ಲೇನು ? ॥ ೭೫ ॥ ಹೀಗೆ ನೋಡು, ಹತ್ತಿಯ ಹೊಟ್ಟೆಯಲ್ಲಿ ಅರಿವೆಗಳ ಗಂಟು ಇರುವವೇನು ? ಅವುಗಳು ಉರಿಭೋಗ ಮಾಡುವವರ ಅಪೇಕ್ಷೆಯಂತೆ ಆ ಹತ್ತಿಯಿಂದ ವಸ್ತ್ರಗಳನ್ನು ಸಿದ್ಧಪಡಿಸಿರುತ್ತಾರೆ. ॥ ೭೬ ॥ ಆದರೆ ಬಂಗಾರದ ದಾಗೀನೆಗಳನ್ನು ಮಾಡಿಸಿದರೆ ಬಂಗಾರವು ಇಲ್ಲದಂತೆ ಆಗುವದಿಲ್ಲ ಅದರೆ ಸ್ಥೂಲ ದೃಷ್ಟಿಯಿಂದ ಅವುಗಳನ್ನು ಉಪಯೋಗಿಸುವವರ ಕಲ್ಪನೆಯಿಂದ ಅವು ಅಲಂಕಾರಗಳೆಂದು ಕಂಡುಬರುತ್ತವೆ. ॥ ೭೭ ॥ ನಮ್ಮ ಶಬ್ದದ ಯಾವ ಪ್ರತಿಧ್ವನಿಯು ಕೇಳಬರುತ್ತದೋ ಇಲ್ಲವೇ ಕನ್ನಡಿಯಲ್ಲಿ ನಮ್ಮ ಸ್ವದೂಪನನ್ನು ನಾವು ನೋಡುತ್ತೇವೆ. ಅದು ನಿಜ, ವಾಗಿ ನಾವು ಮಾತಾಡಿದ ಇಲ್ಲವೇ ನೋಡುವ ಪರಿಣಾಮವೇ ಇರುವದು ಇಲ್ಲವೇ ನಮ್ಮಕಿಂತಲೂ ಬೊವಲಿಗೆ ಅದು ಅಲ್ಲಿ ನಿಜವಾಗಿ ಇತ್ತೋ ಹೇಗೆ ಹೇಳು ? ॥ ೭೮ ॥ ಅದೇ ಪ್ರಕಾರಾ ನನ್ನ ನಿರುಪಾಧಿಕ ಸ್ವರೂಪದ ಮೇಲೆ ಯಾರು ಭೂತಗಳ ಕಲ್ಪನೆಯ ಆರೋಪ ಮಾಡುವರೋ, ಅವರಿಗೆ ನನ್ನಲ್ಲಿ ಭೂತಗಳ ಭಾಸವಾಗುತ್ತದೆ. ॥ ೭೯ ॥ ಅದೇ ಕಲ್ಪನಾ ಮಾಡುವ ಪ್ರಕೃತಿ ಇಲ್ಲದಂತಾದ ಮೇಲೆ ನನ್ನಲ್ಲಿ ಮೊದಲಿಗೇ ಇಲ್ಲದ ಭೂತಗಳ ಭಾಸವು ಎಂದಿಗೂ ಆಗುವದಿಲ್ಲ ಆ ಮೇಲೆ ನನ್ನ ನಿರುಪಾಧಿಕವಾದ ಶುದ್ಧ ಸ್ವರೂಪವು ಅದೇ ಅಖಂಡವಾಗಿ ಉಳಿಯುತ್ತದೆ. ॥ ೮೦ ॥ ಇದಂತೂ ಇರಲಿ, ತನ್ನ ಮೈಸುತ್ತಲೆ ತಾನು ಗರಗರ ತಿರಗುವಾಗ್ಗೆ ಕಣ್ಣು ತಿರುಗಿ ಗುಡ್ಡ ಮುಂತಾದವುಗಳು ತಿರುಗಿದಂತೆ ಕಾಣುತ್ತವೆ ಅದೇಪ್ರಕಾರ ನಮ್ಮ ಮನಸ್ಸಿನಲ್ಲಿ ಕಲ್ಪನೆಯು ಉಂಟಾದಮೆಲೆ ಅಖಂಡ ಬ್ರಹ್ಮ ಸ್ವರೂಪದಲ್ಲಿ ಭೂತಗಳ ಭಾನವಾಗುತ್ತದೆ. ॥ ೮೧ ॥ ಅದೇ ಕಲ್ಪನೆಯನ್ನು ಬಿಟ್ಟುಕೊಟ್ಟು ನೋಡಿದರೆ ನಾನು ಭೂತಗಳಲ್ಲಿ ಭೂತಗಳು ನನ್ನಲ್ಲಿ ಇರುತ್ತವೆಂಬದು ಸ್ವಪ್ನದಲ್ಲಿ ಸಹ ಕಲ್ಪನೆ ಮಾಡುವಂಥ ಮಾತು ಇರುವದಿಲ್ಲ. ॥ ೮೨ ॥ ಇನ್ನುಮೇಲೆ ನಾನೇ ಒಬ್ಬ ಭೂತ ಮಾತ್ರಗಳ ಧಾರಣ ಮಾಡುವವನು ಅಥವಾ ಭೂತಗಳಲ್ಲಿರುವನನು ಎಂಬ ಈ ಎಲ್ಲ ಮಾತುಗಳು ಸಂಕಲ್ಪರೂಪ ಸನ್ನಿಪಾತ ವಾಯುವಿನ ಲಹರಿಯಲ್ಲಿ ಬಡಬಡಿಸುವಂತೆ ಅದೆ. ॥ ೮೩ ॥ ಆದುದರಿಂದ ಎಲೋ ಪ್ರೀಯೆತ್ತಮನೇ ಕೇಳು ನಾನು ಸೃಷ್ಟಿಯ ಪಿಶ್ವಾತ್ಮನು ಇಲ್ಲವೇ ಮಿಥ್ಯವಾದ ಸೃಷ್ಟಿಯ ಆಧಾರ ಭೂತನೂ ಎಂಬುವ ಭಾವನೆಯು ಅಸತ್ಯವಾದ ದ್ದಿರುತ್ತದೆ. ॥ ೮೪ ॥ ಸೂರ್ಯ ಕಿರಣಗಳ ಆಧಾರದಿಂದಲೇ ಇಲ್ಲದೇ ಇದ್ದ, ಮೃಗ ಜಲವು ಇದ್ದಂತೆ ಕಂಡುಬರುತ್ತದೆ. ಅದೇ ಪ್ರಕಾರಾ ಪ್ರಾಣಿಮಾತ್ರಗಳು ನನ್ನಲ್ಲಿ ಮೃಗಜಲದಂತೆ ಮಿಥ್ಯವಿರುವೆಂದು ನಂಬು. ಮತ್ತು ನನ್ನನ್ನು ಸೂರ್ಯ ಕಿರಣದಂತೆ ಸತ್ಯವೆಂದು ತಿಳಿಯುವನಾಗು. ॥ ೮೫ ॥ ಈ ರೀತಿಯಿಂದ ನಾನು ಭೂತಗಳ ಉತ್ಪತ್ತಿ ಮಾಡುತ್ತೇನೆಂದು ಅನ್ನುತ್ತಿರೆ ಆದರೆ ನಿಜವಾಗಿ ಭೂತಗಳು ಮತ್ತು ನಾನು ಒಂದೇ ಆಗಿರುವೆವು. ಸೂರ್ಯ ಮತ್ತು ಪ್ರಕಾಶ ಎರಡೂ ಒಂದೇ ಹೇಗೆ ಇರುವವೋ, ॥ ೮೬ ॥ ಅದರಂತೆ ಈ ನಮ್ಮ ಐಶ್ವರ್ಯ ಯೋಗವು ನಿನಗೆ ಚನ್ನಾಗಿ ತಿಳಿದಿರುವದೇನು ? ಈಗ ಹೇಳು ನೋಡುವಾ ! ನಾನು ಮತ್ತು ಪ್ರಾಣಿ ಮಾತ್ರಗಳಲ್ಲಿ ಏನಾದರೂ ಭೇದದ ಸಮ್ಮಂಧ ಉಳಿದಿರುವದೇನು ? ॥ ೮೭ ॥ ಈ ಕಾರಣದಿಂದ ಸರ್ವ ಪ್ರಾಣಿಮಾತ್ರಗಳು ನಿಜವಾಗಿ ನನ್ನಿಂದ ಬೇರೆ ಇರುವದಿಲ್ಲ. ಮತ್ತು ನಾನಾದರೂ ಅವರಿಂದ ಬೇರೆ ಇರುವೆನೆಂಬದನ್ನು ತಿಳಿಯಬೇಡ ಕಂಡಿಯಾ ? ॥ ೮೮ ॥

यथाकाशस्थितो नित्यं वायुः सर्वत्रगो महान् ।
तथा सर्वाणि भूतानि मत्स्थानीत्युपधारय ॥ ६ ॥

[यथाकाशस्थितो नित्यमिति] ಪೈ ಗಗನ ಜೇವಢೇ ಜೈಸೇ । ಪವನಹಿ ಗಗನೀ ತೇವ ಢಾಚಿ ಅಸೇ । ಸಹಜೇ ಹಾಲವಿಲಿಯಾ ವೇಗಳಾ ಏಸೇ । ಯೇರ್ಹವೀ ಗಗನ ತೇಚಿ ತೋ ॥ ೯೯ ॥ ತೈಸೇ

ಭೂತಜಾತ ಮಾಝ್ಯಾ ತಾಯೀ । ಕಲ್ಪಜೇ ತರೀ ಆಭಾಂಸೇ ಕಾಂಹೀ । ನಿರ್ವಿಕಲ್ಪೀ ತರೀ ನಾಹೀ ।
ತೇಥ ಮೀಚಿ ಮೀ ಆಹೇನೇ ॥ ೯೦ ॥ ಮ್ಹಣೂನ ನಾಹೀ ಆಣಿ ಅಸೇ । ಹೇ ಕಲ್ಪನೆಚೇನಿ ಸೌರಸೇ ।
ಜೇ ಕಲ್ಪನಾ ಲೋಪೇ ಭ್ರಂಶೇ । ಆಣಿ ಕಲ್ಪನೇ ಸವೇ ಹೋಯ ॥ ೯೧ ॥ ತೇಚಿ ಕಲ್ಪಿತೇ ಮುದಲ
ಜಾಯೇ । ತೈ ಅಸೇ ನಾಹೀ ಹೇ ಕೇ ಆಹೆ ! ಮ್ಹಣವೂನಿ ಪುಢತೀ ತೂ ಸಾಹೇ । ಹಾ ಐಶ್ವರ್ಯಯೋಗ
॥೯೨॥ ಐಸಿಯಾ ಪ್ರತೀತೀ ಬೋಧ ಸಾಗರೀ । ತೂ ಆವಣ ಯಾತೇ ಕಲ್ಲೋಳ ಏಕ ಕರೀ । ಮಗ ಜವ
ಪಹಾಸೀ ಚರಾಚರೀ । ತವ ತೂಚಿ ಆಹಾಸೀ ॥೯೩॥ ಯಾ ಜಾಣಣೇಯಾಚಾ ಚೇನೋ । ತುಜ ಆಲಾನಾ
ಮ್ಹಣತೀ ದೇವೋ । ತರೀ ಆತಾ ದ್ವೈತ ಸ್ವಪ್ನ ವಾವೋ । ಜಾಲೇ ಕೀ ನಾ ॥ ೯೪ ॥ ತರೀ ಪುಢತೀ ಜರೀ
ವಿಪಾಯೇ । ಬುದ್ಧೀಸಿ ಕಲ್ಪನೇಚೀ ಝೋಪ ಯೇ । ತರೀ ಅಭೇದ ಬೋಧ ಜಾಯೇ । ಜೈ ಸ್ವಪ್ನೀ
ಪಡಿಜೇ ॥೯೫॥ ಮ್ಹಣೋನಿ ಯೇ ನಿದ್ರೇಚೀ ವಾಟ ಮೋಡೇ । ನಿಖಿಳ ಉದ್ಭ್ರೋಧಾಚೇಂಚಿ ಆವಣ ಪೇ
ಘುಡೇ । ಐಸೇ ವರ್ಮ ಜೇ ಆಹೇ ಘುಡೇ । ತೇ ದಾವೋ ಆತಾ ॥೯೬॥ ತರೀ ಧನುರ್ಧರಾ ಧೈರ್ಯಾ ।
ನಿಕೇ ಅವಧಾನ ದೆಈ ಬಾ ಧನಂಜಯಾ । ಪೈ ಸರ್ವ ಭೂತಾತೇ ಮಾಯಾ । ಕರೀ ಹರೀ ಗಾ ॥ ೯೭ ॥

ಅರ್ಥ— ಆಕಾಶವು ಎಷ್ಟು ವಿಸ್ತಾರವಾಗಿರುವದು ಅಷ್ಟು ಗಾಳಿಯು ತುಂಬಿಕೊಂಡಿರುತ್ತದೆ. ಆದರೆ ಅದನ್ನು ಸಹಜವೇ ಅಲ್ಲಾಡಿಸಿದಾಗ ಆಕಾಶದಿಂದ ಬೇರೆಯಾಗಿ ಕಂಡರೂ ಅದು ಆಕಾಶವೇ ಆಗಿರುವದು. ॥ ೮೯ ॥ ಆ ಪ್ರಕಾರಾ ವ್ಯಾಣಿಗಳು ನನ್ನಲ್ಲಿರುವವು ಎಂಬ ಕಲ್ಪನೆಯು ಮನಸ್ಸಿನಲ್ಲಿ ಬಂದರೆ ನಂನಲ್ಲಿ ಭೂತಗಳು ಇರುತ್ತವೆಂಬ ಭಾಸವಾಗುತ್ತದೆ. ಅದೇ ಕಲ್ಪನೆಯ ಅಭಾವದಲ್ಲಿ ನೋಡಿದರೆ ಸರ್ವದರಲ್ಲಿಯೂ ನಾನು ಒಬ್ಬನೇ ಇದ್ದೇನೆ. । ೯೦ ॥ ಅದರಿಂದ ಭೂತಗಳು ಇರುವದು ಅರ್ಥಾತ್ ಇಲ್ಲದೇ ಇರುವದು ಇದು ಕಲ್ಪನೆಯ ಸಂಬಂಧವಾಗಿ ಭಾಸಮಾನ ವಾಗುತ್ತದೆ. ಕಾರಣನೇನಂದರೆ ಭೂತಾಭಾಸಕಲ್ಪನೆಯು ನಷ್ಟವಹೊಂದಿದ ಕೂಡಲೆ ಅದರ ಸಂಗಡವೇ ನಾಶಹೊಂದುತ್ತದೆ. ಕಲ್ಪನೆಯು ಉತ್ಪನ್ನವಾದ ಕೂಡಲೇ ಅದರ ಸಂಗಡವೇ ಉತ್ಪನ್ನವಾಗುತ್ತದೆ. ॥ ೯೧ ॥ ಅದೇ ಕಲ್ಪನೆಯನ್ನು ಹುಟ್ಟಿಸುವ ಅಜ್ಞಾನವು ಸಮೂಲವಾಗಿ ಇಲ್ಲದಂತೆ ಆದ ಮೇಲೆ ಭೂತಗಳು ಇರುವದೂ, ಇಲ್ಲವೇ ಇರದೇ ಇರುವದು, ಇದು ಎಲ್ಲಿಂದ ಹ್ಯಾಗೆ ಭಾಸವಾಗಬೇಕು? ಆದುದರಿಂದ ನೀನು ಇನ್ನೂ ಒಂದು ಸಾರಿ ಈ ಐಶ್ವರ್ಯಯೋಗದ ಸಂಬಂಧವಾಗಿ ಪುನ್ಹಾ ವಿಚಾರಮಾಡಿ ನೋಡು. ॥ ೯೨ ॥ ಈ ತರದ ಅನುಭವರೂಪ ಸಮುದ್ರದಲ್ಲಿ ನೀನು ಸ್ವತಃ ತೆರೆಯಾಗಿ ಈ ಚರಾಚರದ ಕಡೆಗೆ ನೋಡು, ಎಂದರೆ ಸರ್ವತ್ರದಲ್ಲಿಯೂ ನೀನೆ ತುಂಬಿಕೊಂಡಿರುವದು ನಿನ್ನ ದೃಷ್ಟಿಗೆ ಬೀಳುವದು. ॥ ೯೩ ॥ ಭಗವಾನ ಶ್ರೀಕೃಷ್ಣನು ಅನ್ನುತ್ತಾನೆ ಅರ್ಜುನನೇ! ಈ ಯಾವ ಜ್ಞಾನವನ್ನು ನಾನು ನಿನಗೆ ಹೇಳಿದೆನು ಅದರ ಪ್ರಕಾಶವು ನಿನ್ನ ಹೃದಯದಲ್ಲಿ ಬಿದ್ದಿರುವದೇನು? ನಾನು ಮತ್ತು ಈ ವಿಶ್ವವು ಎರಡು ಇರುವವೆಂಬ ಸ್ವಪ್ನವು ನಿನಗೆ ಬಿದ್ದಿರುವದು ಈಗ ಅದು ಅಸತ್ಯವಾಗಿರುವದೆಂಬದು ನಿನಗೆ ನಿಶ್ಚಯವಾಗಿರುವದೇನು? ॥ ೯೪ ॥ ಆದರೆ ನಿನ್ನ ಬುದ್ಧಿಗೆ ಪುನ್ಹಾ ಒಂದು ವೇಳೆ ಕಲ್ಪನಾರೂಪೀ ನಿದ್ರೆಯು ಹತ್ತಿದರೆ ಭೇದರೂಪ ಸ್ವಪ್ನದಲ್ಲಿ ನೀನು ಬೀಳಬಹುದು. ಮತ್ತು ಅಭೇದ ಬೋಧವು ನಷ್ಟವಾಗಿ ಹೋದೀತು. ॥ ೯೫ ॥ ಆದುದರಿಂದ ಈ ಕಲ್ಪನಾರೂಪಿ ನಿದ್ರೆಯ ಹಾದಿಗೆ ಹೋಗದೆ ಶುದ್ಧ ಬೋಧರೂಪನು ನಾನೇ ಇರುವೆನೆಂಬ ಜ್ಞಾನದ ಒಂದು ರಹಸ್ಯವಿರುತ್ತದೆ. ಅದನ್ನು ನಿನಗೆ ಇನ್ನು ಮುಂದೆ ಹೇಳುತ್ತೇನೆ. ॥ ೯೬ ॥ ಆದರೆ ಧೈರ್ಯಶಾಲಿಯಾದ ಧನುರ್ಧರ ಧನಂಜಯನೇ! ನೀನು ಲಕ್ಷಕೊಡು. ಪ್ರಾಣಿಮಾತ್ರಗಳ ಉತ್ಪತ್ತಿ, ಸ್ಥಿತಿ, ಲಯ, ಇವುಗಳಿಗೆ ಮಾಯಾ ಒಂದೇ ಕಾರಣವಾಗಿರುತ್ತದೆ. ॥ ೯೭ ॥

ಸರ್ವಭೂತಾನಿ ಕೌಂತೇಯ ಪ್ರಕೃತಿಂ ಯಾಂತಿ ಮಾಮಿಕಾಂ ।
ಕಲ್ಪಕ್ಷಯೇ ಪುನಸ್ತಾನಿ ಕಲ್ಪಾದೌ ವಿಸೃಜಾಮ್ಯಹಮ್ ॥ ೭ ॥

[ಸರ್ವಭೂತಾನೀತಿ] ಜಿಯೇ ನಾವ ಗಾ ಪ್ರಕೃತೀ । ಜೇ ದ್ವಿವಿಧ ಸಾಂಗಿತಲೇ ತುಜಪ್ರತೀ ।
ಏಕೀ ಅಷ್ಟಧಾ ಭೇದ ವ್ಯಕ್ತೀ । ದುಜೀ ಜೀವರೂಪಾ ॥ ೯೮ ॥ ಹಾ ಪ್ರಕೃತೀ ವಿಖೋ ಆಘವಾ ।

ತೂವಾ ಮಾಗಾ ಪರಿಸಲಾಸೇ ಪಾಂಡವಾ । ಮ್ಹಣೋನಿ ಅಸೋ ಕಾ ಈ ಸಾಂಗಾವಾ । ಪುಢತ ಪುಢತೀ ॥ ೯೯ ॥ ತರೀ ಯೇ ಮಾಝಿಯೇ ಪ್ರಕೃತೀ । ಮಹಾ ಕಲ್ಪಾಚ್ಯಾ ಅಂತೀ । ಸರ್ವ ಭೂತೇ ಅನ್ಯಕ್ತೀ । ಐಕ್ಯಾಸೀ ಯೇತೀ ॥ ೧೦೦ ॥ ಗ್ರೀಷ್ಮಾಚ್ಯಾ ಅತಿರಸೀ । ಸಬೀಜೇ ತೃಣೇ ಜೈಸೀ । ಮಾಗುತೀ ಭೂಮೀಸೀ । ಸುಲೀನೇ ಹೋತೀ ॥ ೧ ॥ ಕಾ ವಾರ್ಷಿಯೇ ಢೇಂಢೇ ಫುಟೇ । ಜೀವ್ಹಾ ಶಾರದೀಯೆಚಾ ಅನುಘಡು ಘುಟೇ । ತೆವ್ಹಾ ಘನಜಾತ ಆಟೇ । ಗಗನೀಂಚಿ ಗಗನೀ ॥ ೨ ॥ ನಾತರೀ ಆಕಾಶಾಚೇ ಪೋಸೇ । ವಾಯು ನಿವಾಂತಚಿ ಲೋಪೇ । ಕಾ ತರಂಗಾಕಾರ ಹಾರಪೇ । ಜಳೀ ಜೇವೀ ॥ ೩ ॥ ಅಥವಾ ಜಾಗಿ ನಲಯೇ ವೇಳೇ । ಸ್ವಪ್ನ ಮನೀಚೇ ಮನೀ ಮಾನಳೇ । ತೈಸೇ ಪಾಕೃತ ಪೈಕೃತೀ ಮಿಳೇ । ಕಲ್ಪಕ್ಷಯೀ ॥ ೪ ॥ ಮಗ ಕಲ್ಪಾದೀ ಪುಢತೀ । ಮೀಚಿ ಸೃಜೇ ಐಸೀ ವದಂತೀ । ತರೀ ಇಯೇ ವಿಷಯೀ ನಿರುತೀ । ಉಪಪತ್ತೀ ಆಯಿಕ ॥ ೫ ॥

ಅರ್ಥ— ಆ ಮಾಯೆಗೆ ಪ್ರಕೃತಿ ಎಂಬ ಹೆಸರಿರುವದು ಅದು ದ್ವಿವಧವಾಗಿರುವದೆಂಬದನ್ನು ಮೊದಲು ನಾನು ನಿನಗೆ ಹೇಳಿದ್ದೇನೆ. ಅದರಲ್ಲಿ ಒಂದು ಎಂಟು ವಿಧರೂಪದಿಂದ ಭಿನ್ನವಿರುತ್ತದೆ. ಮತ್ತು, ಎರಡನೇದು ಜೀವರೂಪವೆಂದು ಅದೆ. ॥ ೯೮ ॥ ಪಂಡುಪುತ್ರನೇ ! ನೀನು ಪ್ರಕೃತಿಯ ಸರ್ವ ವಿಷಯಗಳನ್ನು ಮೊದಲಿಗೇ (ಅಧ್ಯಾಯ ೭ ಶ್ಲೋಕ ೪।೫ ರಲ್ಲಿ ನೋಡು) ಕೇಳಿರುವಿ ಅದಂತೂ ಇರಲಿ ಇನ್ನು ಮುಂದೆ ಹೇಳಿದ್ದನ್ನೇ ಹೇಳುವ ಕಾರಣವೇನು ? ॥ ೯೯ ॥ ಆದರೆ ಮಹಾಪ್ರಳಯದ ಕೊನೆಗೆ ಈ ಸರ್ವ ಭೂತಗಳು ನನ್ನ ಪ್ರಕೃತಿರೂಪ ಅನ್ಯಕ್ತಸ್ವರೂಪದಲ್ಲಿ ಲಯ ಹೊಂದುತ್ತವೆ. ॥ ೧೦೦ ॥ ಗ್ರೀಷ್ಮಋತುವಿನ ಕೊನೆಗೆ ಹುಲ್ಲು ಬೀಜದಿಂದ ಕೂಡಿಕೊಂಡು ಮರಳಿ ಭೂಮಿಯಲ್ಲಿ ಅಡಿಗಿ ಹೋಗುತ್ತದೆ. ॥೧೦೧॥ ಇಲ್ಲವೇ ವರ್ಷಕಾಲದ ಮೇಘದ ಅಬ್ಬರವು ಮುಗಿದಮೇಲೆ ಶರದ್ಋತುವಿನ ಅಂಕುರವು ಹುಟ್ಟುತ್ತದೆ. ಆಗ್ಗೆ ಸರ್ವ ಆಕಾಶದೊಳಗಿನ ಮೋಡಗಳು ಅಡಿಗಿಹೋಗುತ್ತವೆ. ॥ ೨ ॥ ಅಥವಾ ಆಕಾಶದ ಪೊಳ್ಳಿನಲ್ಲಿ ಹೇಗೆ ವಾಯುವಿಲ್ಲದಂತೆ ಆಗುತ್ತದೆ. ಇಲ್ಲವೇ ನೀರಿನಲ್ಲಿ ಉತ್ಪನ್ನವಾದ ತೆರೆಗಳು ನೀರಿನಲ್ಲಿಯೇ ನಾಶಹೊಂದುವಂತೆ ॥ ೩ ॥ ಇಲ್ಲವೇ ಜಾಗ್ರತವಾದ ಮೇಲೆ ಮನಸಿನಲ್ಲಿಯ ಸ್ವಪ್ನವು ಮನಸಿನಲ್ಲಿಯೇ ಅಡಿಗಿ ಹೋಗುವಂತೆ ಮಹಾ ಪ್ರಳಯದ ಕೊನೆಗೆ ಪ್ರಕೃತಿಯಿಂದ ಉತ್ಪನ್ನವಾದ ಸರ್ವಭೂತಗಳು ಪ್ರಕೃತಿಯಲ್ಲಿಯೇ ಕೂಡಿಹೋಗುತ್ತವೆ. ॥ ೪ ॥ ಆಮೇಲೆ ಸೃಷ್ಟಿಯು ಪ್ರಾರಂಭವಾದಲ್ಲಿ ೨೩ತ್ತೆ ಅವುಗಳನ್ನು ನಾನೇ ನಿರ್ವಾಣ ಮಾಡುತ್ತೇನೆಂಬುವದು ಶಾಸ್ತ್ರಸಂಮತ ವಾಗಿರುತ್ತದೆ. ಆ ವಿಷಯದಲ್ಲಿ ನಿಜವಾದ ಸ್ಥಿತಿಯನ್ನು ನಿನಗೆ ಹೇಳುತ್ತೇನೆ ಕೇಳು. ॥ ೫ ॥

ಪ್ರಕೃತಿಂ ಸ್ವಾಮವಷ್ಟಭ್ಯ ವಿಸೃಜಾಮಿ ಪುನಃ ಪುನಃ ।
ಭೂತಗ್ರಾಮಮಿಮಂ ಕೃತ್ಸ್ನಮವಶಂ ಪ್ರಕೃತೇರ್ವಶಾತ್ ॥ ೮ ॥

[ಪ್ರಕೃತಿಂ ಸ್ವಾಮವಷ್ಟಭ್ಯೇತಿ] ತರಿ ಹೇಚಿ ಪ್ರಕೃತೀ ಕಿರೀಟೀ । ಮೀ ಸ್ವಕೀಯಾ ಸಹಜೇ ಅಧಿಷ್ಠೀ । ತೇಥ ತಂತೂ ಸಮವಾಯ ಪಟೀ । ಜೇವಿ ವಿಜ್ಞಾವಣೀ ದಿಸೇ ॥ ೧೦೬ ॥ ಮಗ ತಿಯೇ ವಿಜ್ಞಾವಣೀಚೇನಿ ಆಧಾರೇ । ಲಾಹಾನಾ ಚೌಕಡಿಯಾ ಪಟತ್ವ ಧರೀ । ತೈಸೀ ಪಂಚಾತ್ಮಕೇ ಆಕಾರೇ । ಪ್ರಕೃತೀಚಿ ಹೋಯ ॥ ೭ ॥ ಜೈಸೇ ವಿರಜಣಿಯಾಚೇನಿ ಸಂಗೇ ದೂಧಚಿ ಆಟೇಜೋ ಲಾಗೇ । ತೈಸೀ ಪ್ರಕೃತೀ ಆಂಗಾರಿಗೇ । ಸೃಷ್ಟೀ ಪಣಾಚಿಯಾ ॥ ೮ ॥ ಬೀಜ ಜಳಾಚೇ ಜವಳೀಕ ಲಾಹೇ । ಆಣಿ ತೇಚಿ ಶಾಖೋಪಶಾಖೀ ಹೋಯೇ । ತೈಸೇ ಮಜ ಕರಣೇ ಆಹೇ । ಭೂತಾಚೇ ಹೇ ॥ ೯ ॥ ಅಗಾ ನಗರ ಹೇ ರಾಯೇ ಕೇಲೇ । ಯಾ ಮ್ಹಣಣ್ಯಾ ಸಾಚಪಣ ಕೀರ ಆಲೇ । ಪರೀ ನಿರುತೇ ಪಾಹಾತಾ ಕಾಯ ಸಿಣಲೇ । ರಾಯಾಚೇ ಹಾತ ॥ ೧೧೦ ॥ ಆಣಿ ಮೀ ಪ್ರಕೃತೀ ಅಧಿಷ್ಠೀತೇ ಕೈಸೇ । ಜೈಸಾ ಸ್ವಪ್ನಿ ಜೋ ಅಸೇ । ಮಗ ತೋಚಿ ಪುನೇಶೇ । ಜಾಗ್ರತಾವಸ್ಥೇ ॥ ೧೧ ॥ ತರೀ ಸ್ವಪ್ನೀನಿ ಜಾಗೃತೀ ಯೇತಾ । ಕಾಯ ಪಾಯ

ದುಋತೀ ಪಾಂಡುಸುತಾ । ಕೀ ಸ್ವಪ್ನಾ ಮಾಜೀ ಅಸತಾ । ಪ್ರವಾಸ ಹೋಯ ॥ ೧೨ ॥ ಯಾ ಆಘವಿಯಾಚಾಅಭಿಪ್ರಾಯೋಕಾಯೀ । ಜೀ ಹೇ ಭೂತ ಸೃಷ್ಟೀಚೀ ಕಾಹೀ । ಮಜ ಏಕಹೀ ಕರಣೇ ನಾಹೀ । ಐಸಾಚಿ ಅರ್ಥ ॥ ೧೩ ॥ ಜೈಸೀ ರಾಯೇ ಅಧಿಷ್ಠಿಲೀ ಪ್ರಜಾ । ವ್ಯಾಪಾರೇ ಆಪುಲಾಲಿಯಾ ಕಾಜಾ । ತೈಸಾ ಪ್ರಕೃತೀ ಸಂಗ ಮಾಝಾ । ಯೇರ ಕರಣೇ ತೇ ಇಯೇಜೇ ॥ ೧೪ ॥ ಪಾಹೇ ಪಾ ಪೂರ್ಣ ಚಂದ್ರಾಚಿಯೇ ಭೇಟೀ । ಸಮುದ್ರೀ ಅಸಾವ ಭರತೇ ದಾಟೀ । ತೇಥ ಚಂದ್ರಾಸಿ ಕಾಯ ಕಿರೀಟೀ । ಉಸಣಾ ಪಡೇ ॥ ೧೫ ॥ ಜಡ ಪರೀ ಜವಳಿಕಾ । ಲೋಹ ಚಳೇ ತರೀ ಚಳೋಕಾ । ತರೀ ಕವಣತೀಣ ಭ್ರಾನುಕಾ । ಸನ್ನಿಧಾನಾಚಾ ॥ ೧೬ ॥ ಕಿಂಬಹುನಾ ಯಾ ಪರೀ । ಮೀ ನಿಜ ಪ್ರಕೃತೀ ಅಂಗಿಕಾರೀ । ಆಣಿ ಭೂತ ಸೃಷ್ಟ್ಯೇ ಏಕಸರೀ । ಪ್ರಸವೋಂಚಿ ಲಾಗೇ ॥ ೧೭ ॥ ಜೋ ಹಾ ಭೂತ ಗ್ರಾಮ ಆಘವಾ । ಅಸೇ ಪ್ರಕೃತೀ ಅಧೀನ ಪಾಂಡವಾ । ಜೈಸೀ ಬೀಜಾಚಿಯಾ ವೇಲ ಪಾಲವಾ । ಸಮರ್ಥ ಭೂಮಿ ॥ ೧೮ ॥ ನಾತರೀ ಬಾಳಾದಿಕಾ ವಯಸಾ । ಗೋಸಾವೀ ದೇಹ ಸಂಗ ಜೈಸಾ । ಅಥವಾ ಘನಾನಳೀ ಆಕಾಶಾ । ವಾರ್ಷಿಯೇ ಜೇವೀ ॥ ೧೯ ॥ ಕಾ ಸ್ವಪ್ನಾಸಿ ಕಾರಣ ನಿದ್ರಾ । ತೈಸೀ ಪ್ರಕೃತೀ ಹೇ ನವೇಂದ್ರಾ । ಯಾ ಅಶೇಷಾಹಿ ಭೂತ ಸಮುದ್ರಾ । ಗೋಸಾವಿನೀ ಗಾ ॥ ೨೦ ॥ ಸ್ಥಾವರಾ ಆಣಿ ಜಂಗಮಾ । ಸೂಕ್ಷ್ಮಾ ಅಥವಾ ಸೂಕ್ಷ್ಮಾ । ಹೇ ಅಸೋಭೂತಗ್ರಾಮಾ । ಪ್ರಕೃತೀಚಿ ಮೂಳ ॥ ೨೧ ॥ ಮ್ಹಣೋನಿ ಭೂತೇ ಹನ ಸೃಜಾವೀ । ಕಾಸಯಿಜೀಲೀ ಪ್ರತಿ ಪಾಳಾವೀ । ಇಯೇ ಕರಣೇ ನ ಯೇತೀ ಆಘವೀ । ಆಮುಚಿಯಾ ಆಂಗಾ ॥ ೨೨ ॥ ಜಳೀ ಚಂದ್ರಿಕೇಚಿಯಾ ಪಸರತೀ ವೇಲೀ । ತೇ ವಾಢೀ ಚಂದ್ರೋ ನಾಹೀ ಕೇಲೀ । ತೇವಿ ಮಾತೇ ಪಾವ್ಹೋನಿ ಠೇಲೀ । ದೂರೀ ಕರ್ಮೇ ॥ ೨೩ ॥

ಅರ್ಥ— ಆದರೆ ಅರ್ಜುನನೇ ! ನನ್ನ ಪ್ರಕೃತಿಯನ್ನು ನಾನು ಯಾವಾಗ್ಗೆ ಸಹಜವೇ ಅಂಗಿಕಾರ ಮಾಡುತ್ತೇನೆ. ಆಗ್ಗೆ ನೂಲಿನ ನಿತ್ಯ ಸಮಂಧ ಇರುವ ವಸ್ತ್ರದಲ್ಲಿ ಯಾವ ಪ್ರಕಾರಾ ನೇಕಾರನು ಕಂಡು ಬರುತ್ತಾನೆ. ॥ ೧೦೬ ॥ ಆ ನೇಯುವವನ ಆಧಾರದಿಂದ ಹೇಗೆ ಸಣ್ಣ ಸಣ್ಣ ಚೌಕ ವಸ್ತ್ರಗಳು ಹುಟ್ಟುವಂತೆ ಪಂಚಭೂತಾ ಭೂತಗಳಿಂದ ಜಗತ್ಯದ ಆಕಾರವನ್ನು ಪ್ರಕೃತಿಯೇ ಪ್ರಕಟಮಾಡುತ್ತದೆ. ॥ ೧೦೭ ॥ ಆದರೆ ನೀರಿನಂತೆ ಇರುವ ಹಾಲು ಹೆರಿಯುವದರಿಂದ ಮೊಸರಿನ ರೂಪದಿಂದ ಘಟ್ಟಿಯಾಗುತ್ತ ಹೋಗುವಂತೆ ಪ್ರಕೃತಿಯು ಸೃಷ್ಟಿಯ ಆಕಾರವನ್ನು ಹೊಂದುತ್ತದೆ. ॥ ೧೦೮ ॥ ಯಾವ ಪ್ರಕಾರಾ ಬೀಜಕ್ಕೆ ನೀರಿನ ಸಾನ್ನಿಧ್ಯ ದೊರಕಿದ ಕೂಡಲೆ ಆ ಬೀಜವೇ ಸಣ್ಣ ದೊಡ್ಡ ಟೊಂಗೆಗಳ ರೂಪದಿಂದ ವಿಸ್ತರಿಸಿ ವಿಸ್ತಾರವಾಗುವಂತೆ ನಾನು ಪ್ರಾಣಿಮಾತ್ರಗಳನ್ನು ಉತ್ಪನ್ನ ಮಾಡುವದು ಆದೆ. ॥ ೧೦೯ ॥ ಎಲೋ ಅರ್ಜುನನೇ ! ಒಂದಾನೊಂದು ಪಟ್ಟಣವನ್ನು ರಾಜನು ನಿರ್ಮಾಣ ಮಾಡಿದನೆಂಬುವದು ನಿಜವಿದ್ದರೂ ವಿಚಾರಿಸಿ ನೋಡಲು ರಾಜನ ಕೈಗೆ ಏನಾದರೂ ಶ್ರಮ ಪಡಬೇಕಾಗಿರುವದೇನು ? ॥ ೧೧೦ ॥ ಮತ್ತು ಸ್ವಪ್ನದಲ್ಲಿದ್ದ ಮನುಷ್ಯನು ಜಾಗ್ರದವಸ್ಥೆಯಲ್ಲಿ ಬರುತ್ತಾನೆ. ಆದರಂತೆ ನಾನು ಪ್ರಕೃತಿಯ ಅಂಗಿಕಾರ ಮಾಡುತ್ತೇನೆ. ॥ ೧೧೧ ॥ ಆದರೆ ಎಲೋ ಪಂಡುಸುತನೇ ! ಸ್ವಪ್ನದೊಳಗಿಂದ ಜಾಗ್ರದವಸ್ಥೆಗೆ ಬರುವಾಗ್ಗೆ ಆ ಮನುಷ್ಯನ ಕಾಲುಗಳು ನೋಯುತ್ತವೇನು ? ಇಲ್ಲವೇ ಸ್ವಪ್ನದಲ್ಲಿದ್ದಾಗ್ಗೆ ಅವನಿಗೆ ನಿಜವಾಗಿ ತಿಂಗಾಡುವ ಶ್ರಮವಾದರೂ ಆಗುವದೇನು ? ॥ ೧೧೨ ॥ ಈ ಸರ್ವದರ ಅಭಿಪ್ರಾಯವೇನೆಂದರೆ ಈ ಭೂತ ಸೃಷ್ಟಿಯನ್ನು ನಿರ್ಮಾಣ ಮಾಡಲು ನನಗೆ ಏನೂ ಶ್ರಮಪಡಬೇಕಾಗಿರುವದಿಲ್ಲ. ॥ ೧೧೩ ॥ ಯಾವ ಪ್ರಕಾರಾ ರಾಜನ ಆಜ್ಞಾದಲ್ಲಿದ್ದ ಪ್ರಜಗಳು ತತ್ಪರರಾಗಿ ತಮ್ಮ ತಮ್ಮ ಕೆಲಸ ಮಾಡುವಂತೆ ಪ್ರಕೃತಿ ಮತ್ತು ನನ್ನದು ಸಮ್ಬಂಧ ಮಾತ್ರ ಇರುತ್ತದೆ. ಆದರೆ ಉತ್ಪತ್ತಿ, ಸ್ಥಿತಿ, ಲಯ, ಈ ಸರ್ವ ವ್ಯಾವಹಾರಗಳು ಪ್ರಕೃತಿ ಯಿಂದಲೇ ಆಗುತ್ತವೆ. ॥ ೧೧೪ ॥ ಹೀಗೆ ನೋಡು ಪೌರ್ಣಮಾ ಚಂದ್ರನ ದರ್ಶನ ಆದ ಕೂಡಲೆ ಸಮುದ್ರ

ರಾಜನಿಗೆ ಅಪಾರವಾದ ಭರ್ತಿ ಬರುತ್ತದೆ. ಆದರೆ ಅರ್ಜುನನೇ ! ಇಲ್ಲಿ ಚಂದ್ರನಿಗೆ ಏನಾದರೂ ಶ್ರಮ ಪಡಬೇಕಾಗಿರುವದೇನು ? ॥ ೧೫ ॥ ಕಬ್ಬಿಣವು ಇಡಲಿದ್ದು ಲೋಹಚುಂಬುಕದ ಸನ್ನಿಧಾನದಿಂದ ಕಬ್ಬಿಣವು ಅಲ್ಲಾಡುತ್ತದೆ. ಇದರಿಂದ ಲೋಹಚುಂಬಕವು ಏನಾದರೂ ಶ್ರಮಪಡಬೇಕಾಗಿರುವದೇನು ? ॥ ೧೬ ॥ ಇದೇ ಪ್ರಕಾರಾನಾನು ಸ್ವಯಂ ಪ್ರಕೃತಿಯ ಅಂಗಿಕಾರ ಮಾಡುವದರಿಂದ ಒಮ್ಮಿಂದೊಮ್ಮೆಲೆ ಪ್ರಾಣಿಮಾತ್ರಗಳ ಉತ್ಪತ್ತಿ ಆಗುತ್ತದೆ. ॥ ೧೭ ॥ ಎಲೋ ಪಾಂಡವನೇ ! ಈ ಸರ್ವ ಪ್ರಾಣಿಸಮುದಾಯಗಳು ಪ್ರಕೃತಿಯ ಆಧೀನವಿರುತ್ತವೆ. ಬೀಜಗಳಿಗೆ ಬಳ್ಳಿ ಎಲೆ ಮುಂತಾದವುಗಳನ್ನು ಉದ್ಭವ ಮಾಡಲು ಭೂಮಿಯು ಹೇಗೆ ಸಮರ್ಥವಿರುವದೋ, ॥ ೧೮ ॥ ಅಥವಾ ಬಾಲ್ಯ ತಾರುಣ್ಯ, ವೃದ್ಧತ್ವ, ಈ ಅವಸ್ಥಾತ್ರಯಗಳಿಗೆ ದೇಹ ಸಂಗತಿಯು ಹೇಗೆ ಮುಖ್ಯ ಕಾರಣವಾಗಿರುತ್ತದೋ, ಇಲ್ಲವೇ ಆಕಾಶದಲ್ಲಿ ಮೇಘಪಂಙ್ತಿ ಉತ್ಪನ್ನವಾಗಲಿಕ್ಕೆ ಹೇಗೆ ವರ್ಷಾಕಾಲವು ಕಾರಣವಾಗಿರುವದೋ, ॥ ೧೯ ॥ ಇಲ್ಲವೇ ಸ್ವಪ್ನಕ್ಕೆ ಹೇಗೆ ನಿದ್ರಾಕಾರಣವಾಗಿರುವದೋ, ಅದೇ ಪ್ರಕಾರೆ ಎಲೋ ಕಿರೀಟಿಯೇ ! ಈ ಸರ್ವ ಪ್ರಾಣಿಸಮುದಾಯಗಳಿಗೆ ಪ್ರಕೃತಿಯೇ ಮುಖ್ಯ ಕಾರಣವಾಗಿರುವದು. ॥ ೨೦ ॥ ಸ್ಥಾವರ, ಜಂಗಮ, ಸ್ಥೂಲ ಸೂಕ್ಷ್ಮಗಳಿಗೆ ಪ್ರಕೃತಿಯೇ ಕಾರಣವು ಇದಂತೂ ಇರಲಿ ಈ ಸರ್ವ ಜಗತ್ತಿಗೆ ಸಹ ಪ್ರಕೃತಿಯೇ ಮೂಲಕಾರಣವಾಗಿರುವದು ॥ ೨೧ ॥ ಆದುದರಿಂದ ಪ್ರಾಣಿಗಳ ಉದ್ಭವನವು ಮತ್ತು ಉತ್ಪನ್ನವಾದ ಪ್ರಾಣಿಗಳ ಪ್ರತಿಪಾಲನ ಮಾಡುವದು ಈ ಎಲ್ಲ ಕರ್ತೃತ್ವವು ನನ್ನ ಕಡೆಗೆ ಬರುವದಿಲ್ಲ. ॥ ೨೨ ॥ ನೀರಿನಲ್ಲಿ ಚಂದ್ರನ ಪ್ರಕಾಶದಿಂದ ಬಳ್ಳಿಯು ಹಬ್ಬಿದಂತೆ ಕಾಣುತ್ತದೆ. ಅದರ ಉತ್ಪತ್ತಿಯನ್ನು ಚಂದ್ರನು ಮಾಡುವದಿಲ್ಲ. ಅದೇ ಪ್ರಕಾರಾ ಜಗತ್ಯವ ಉತ್ಪತ್ತಿ, ಸ್ಥಿತಿ, ಲಯ, ಮುಂತಾದ ಕರ್ಮಗಳು ನನ್ನಿಂದ ಉತ್ಪನ್ನವಾಗಿದ್ದರೂ ಅವುಗಳು ನನ್ನಿಂದ ದೂರ ಉಳಿದಿರುತ್ತವೆ. ॥ ೨೩ ॥

ನ ಚ ಮಾಂ ತಾನಿ ಕರ್ಮಾಣಿ ನಿಬಧ್ನಂತಿ ಧನಂಜಯ ।
ಉದಾಸೀನವದಾಸೀನಮಸಕ್ತಂ ತೇಷು ಕರ್ಮಸು ॥ ೯ ॥

[ನ ಚ ಮಾಂ ತಾನಿ ಕರ್ಮಾಣಿ] ಆಣಿ ಸುಟಲಿಯಾ ಸಿಂಧು ಜಳಾಚಾ ಲೋಟ । ನ ಶಕೇ ಧರೂ ಸೈಂಧನಾಚಾ ಘಾಟ । ತೈಸಿ ಸಕಳ ಕರ್ಮಾ ಮೀಚ ಶೀವಟ । ತೀ ಕಾಯ ಬಾಂಧತೀ ಮಾತೇ ॥ ೧೪ ॥ ಧೂಮರಜಾಚೀ ಪಿಂಜರೀ । ವಾಜತಿಯಾ ವಾಯೂತೇ ಜರೀ ಹೋತಾರೀ । ಕಾ ಸೂರ್ಯ ಬಿಂಬಾ ವಾರ್ಯುನಾರಿ । ಅಂಧಾನೇ ತಿರೀ ॥ ೧೫ ॥ ಹೇ ಅಸೋ ಸರ್ವ ತಾತಿಯೇ ಹೃದಯೀಂಚೇ । ಜೇವಿ ಪರ್ಜನ್ಯ ಧಾರಾಸ್ತವ ನ ಖೋಂಚೇ । ತೇವಿ ಕರ್ಮಜಾತ ಪ್ರಕೃತೀಚೇ । ನ ಲಗೇ ಮಜ ॥ ೧೬ ॥ ಯೆರ್ಹವೀ ಇಯೇ ಪ್ರಕೃತಿ ವಿಕಾರಿ । ಏಕ ಮೀಚಿ ಅಸೇ ಅಸಧಾರೀ । ಪರೀ ಉದಾಸೀನಾಚಿಯಾ ಪರೀ । ಕರೀ ನಾ ಕರವೋ ॥ ೧೭ ॥ ಜೈಸಾ ದಿಪ ತೇವಿಲಾ ಪವನರೀ । ಕವಣಾತೇ ನಿಯಮೀ ನಾ ನಿವಾರೀ । ಆಣಿ ಕವಣಕವಣಿಯೇ ವ್ಯಾಪಾರೀ । ರಾಹಾಟೇ ತೇಂ ನೇಣೇ ॥ ೧೮ ॥ ತೋ ಜೈಸಾ ಕಾ ಸಾಕ್ಷಿಭೂತು । ನ್ರಹ ವ್ಯಾಪಾರ ಪ್ರವೃತ್ತಿ ಹೇತು । ಜೈಸಾ ಭೂತ ಕರ್ಮಾ ಅನಾಸಕ್ತು । ಮೀ ಭೂತೀ ಅಸೆ ॥ ೧೯ ॥ ಹಾ ವಿಕಚಿ ಅಭಿಸಾಪ್ರವೋ ಪುಢತ ಪುಢಕೀ । ಕಾಯು ಸಾಂಗೋ ಬಹುತಾ ಉಸವತ್ತೀ । ಯೇಥ ವಿಕಹೇಳಾ ಸುಧದ್ರುಸತೀ । ಯೆ.ತುಲೇ ಜಾಣ ಪಾ ॥ ೨೦ ॥

ಅರ್ಥ— ಮತ್ತು ಸಮುದ್ರದ ನೀರನ ಥೆರೆಗಳು ಹರಿಯುತ್ತಿರಲು ಅದನ್ನು ಉಪ್ಪಿನ ವಡ್ಡು ಕಟ್ಟಿ ಬಂಧಿಸುವದು ಆಗಲಾರದು. ಅದೇ ಪ್ರಕಾರಾ ನನ್ನಲ್ಲಿ ಲಯಹೊಂದುವ ಸರ್ವ ಕರ್ಮಗಳು ನನ್ನನ್ನು ಹೇಗೆ ಬಂಧನ ಮಾಡುವವು ? ॥ ೧೪ ॥ ಹೊಗಿಯ ಕಣಗಳ ಸಮುದಾಯವು ಜೋರಿನಿಂದ ಬೀಸುವ ಗಾಳಿಯನ್ನು ನಿಲ್ಲಿಸಿದರೆ, ಸೂರ್ಯ ಬಿಂಬದಲ್ಲಿ

ಕತ್ತಲೆಯು ಶೀರಿದರೆ, ॥ ೧೭೫ ॥ ಇದಂತೂ ಇರಲಿ ಪರ್ವತದ ಹೊಟ್ಟೆಯಲ್ಲಿ ಇರುವ ಪದಾರ್ಥವು ಅತಿಸ್ಪಷ್ಟಿಯಿಂದ ಬಾಧೆ ಪಡಬಹುದಾದರೆ ಮಾತ್ರ ಪ್ರಕೃತಿಯ ಕರ್ಮದಿಂದ ನನಗೆ ಯಾವದಾದರೂ ಬಾಧೆಯು ಉಂಟಾಗ ಬಹುದು ॥ ೧೭೬ ॥ ಆದರೆ ಪ್ರಕೃತಿಯ ಕಾರ್ಯಕ್ಕೆ ನಾನೇ ಒಬ್ಬನು ಕಾರಣನಾಗಿದ್ದೇನೆ. ಆದರೆ ಉದಾಸೀನ ಪುರುಷನಂತೆ ನಾನು ಏನೂ ಮಾಡುವದಿಲ್ಲ ಮಾಡಿಸುವದೂ ಇಲ್ಲ ॥ ೧೭೭ ॥ ಮನೆಯಲ್ಲಿಟ್ಟ ದೀವಿಗೆಯು ಯಾವದಾದರೊಂದು ಕೆಲಸ ಮಾಡು, ಇಲ್ಲವೇ ಮಾಡಬೇಡವೆಂದು ಯಾರಿಗೂ ಹೇಳುವದಿಲ್ಲ. ಮತ್ತು ಅದು ಯಾರು ಯಾವ ಕೆಲಸ ಮಾಡುತ್ತಾರೆಂಬ ದನ್ನಾದರೂ ತಿಳಿಯುವದಿಲ್ಲ ॥ ೧೭೮ ॥ ಆ ದೀವಿಗೆಯು ಸಾಕ್ಷಿಭೂತವಿದ್ದು ಗ್ರಹಕೃತ್ಯದ ಪ್ರವೃತ್ತಿ ಮಾಡಲು ಕಾರಣೀ ಭೂತವಾಗಿರುವದು. ಅದೇ ಪ್ರಕಾರಾ ಸೃಷ್ಟಿಯ ಉತ್ಪತ್ತಿ, ಸ್ಥಿತಿ, ಲಯ, ಈ ಕರ್ಮದಲ್ಲಿ ನಾನು ಉದಾಸೀನ ನಾಗಿದ್ದು ಭೂತಮಾತ್ರಗಳಲ್ಲಿದ್ದೇನೆ. ॥ ೧೭೯ ॥ ಇದೊಂದೇ ಅಭಿಪ್ರಾಯವು ನಿಜವಿರುತ್ತದೆ. ಪುನಃ ಪುನಃ ಅನೇಕ ಪರ್ಯಾಯ ದಿಂದ ಏನು ಹೇಳಲಿ! ಆದರೆ ಎಲೋ ಸುಭದ್ರಾಪತೇ! ಒಂದಾವರ್ತಿ ಇಷ್ಟು ಮಾತು ಲಕ್ಷದಲ್ಲಿಡು. ॥ ೧೮೦ ॥

ಮಯಾಽಧ್ಯಕ್ಷೇಣ ಪ್ರಕೃತಿಃ ಸೂಯತೇ ಸ ಚರಾಚರಮ್ ।
ಹೇತುನಾನೇನ ಕೌಂತೇಯ ಜಗದ್ವಿಪರಿವರ್ತತೇ ॥ ೧೦ ॥

[ಮಯಾಽಧ್ಯಕ್ಷೇಣೇತಿ] ಜೇ ಲೋಕಚೇಷ್ಟಾ ಸನುಸ್ಸಾ। ಜೈಸಾ ನಿಮಿತ್ತಮಾತ್ರ ಕಾ ಸವಿತಾ । ತೈಸಾ ಜಗತ್ಪ್ರಭವೋ ಪಾಂಡುಸುತಾ । ಹೇತೂ ಮೀ ಜಾಣೇ ॥ ೩೧ ॥ ಕಾ ಜೇ ಮಿಯಾ ಅಧಿಷ್ಠಿಲಿಯಾ ಪ್ರಕೃತಿ । ಹೋತೀ ಚರಾಚರಾಚಯಾ ಸಂಭೂತೀ । ಮ್ಹಣೋನಿ ಮೀ ಹೇತು ಹೇ ಉಪಪತ್ತೀ । ಋಡೇಯಯಾ ।೩೨॥ ಆತಾ ಯೇಣೆ ಉಚಿಯೇಡೇ ನಿರುತೇ । ನ್ಯಾಹಾಳೀ ಪಾ ಐಶ್ವರ್ಯ ಯೋಗಾತೇ । ಜೇ ಮಾಝ್ಯಾ ರಾಯೀ ಭೂತೇ । ಪರೀ ಭೂತೀ ಮೀ ನಸೇ ॥ ೩೩ ॥ ಅಥವಾ ಭೂತೇ ಮಾಝ್ಯಾ ಠಾಯೀ । ಆಣಿ ಭೂತಾ ಮಾಜೀ ಮೀ ನಾಹೀ । ಯಾಽಜಾಣಾ ತೂ ಕಹೀ । ಚುಕೋನಕೋ ॥ ೩೪ ॥ ಹೇ ಸರ್ವಸ್ವ ಆಸುಚೇ ಗೂಢ । ಪರೀ ದಾವಿಲೇ ತುಜ ಉಘಡ । ಆತಾ ಇಂದ್ರಿಯಾ ದೇವೊನಿ ಕವಾಡ । ಹೃದಯೀ ಭೋಗೀ ॥ ೩೫ ॥ ಹಾದಂಶಜವ ನಯೇ ಹಾತಾ । ತವ ಮಾಝೋ ಸಾಚೋಕಾರ ಪಣ ಪಾರ್ಥ । ನ ಸಂಪಡೇ ಗಾ ಸರ್ವಥಾ । ಜೇವೀ ತುಪೀಕಣ ॥ ೩೬ ॥ ಯೇಗ್ಯವೀ ಅನುಮಾನಾಚೇನಿ ಪೈಸೇ । ಆವಡೇ ಕೀರ ಕಳಲೇ ಐಸೇ । ಪರೀ ಮೃಗಜಳಾಚೇನಿ ವೋಲಾಂಶೇ । ಕಾಯ ಭೂಮೀ ತಿಮೇ ॥ ೩೭ ॥ ಜೇ ಜಾಳ ಜಳೀ ಪಾಂಗಿಲೇ । ತೇಥ ಚಂದ್ರಬಿಂಬ ದಿಸೇ ಆತುಡಲೇ । ಪರಿ ಥಡಿಯೇ ಕಾಢೂನಿ ಝಾಡಿಲೇ । ತೆವ್ಹಾ ಬಿಂಬ ಕೇ ಸಾಂಗೇ ॥ ೩೮ ॥ ತೈಸೇ ಬೋಲವರೀ ವಾಚಾಬಳೇ । ವಾಯಾಂಚಿ ಝುಕವಿಜತೀ ಪ್ರತೀತೀಚೆ ಡೋಳೆ । ಮಗ ಸಾಚೋಕಾರೆ ಬೋಧಾವೇಳೆ । ಆಥೀ ನಾ ಹೋಇಜೆ ॥ ೩೯ ॥

ಅರ್ಥ— ಅರ್ಜುನನೇ! ಸರ್ವಸೃಷ್ಟಿಯೊಳಗಿನ ಜನರ ವ್ಯಾಪಾರಕ್ಕೆ ಸೂರ್ಯನು ಯಾವ ಪ್ರಕಾರಾ ಕಾರಣೀಭೂತನಾಗಿರುವನೋ, ಅದೇ ಪ್ರಕಾರಾ ಜಗತ್ಯದ ಉತ್ಪತ್ತಿಗೆ ನಾನು ಕಾರಣನಿದ್ದೇನೆ. ॥ ೩೧ ॥ ಯಾವಾಗ್ಗೆ ನಾನು ಪ್ರಕೃತಿಯ ಅಂಗೀಕಾರವಮಾಡುತ್ತೇನೆ, ಆ ವೇಳೆಯಲ್ಲಿ ಆ ಮಾಯಾ ಯೋಗದಿಂದ ಪ್ರಾಣಿಮಾತ್ರಗಳ ಉತ್ಪತ್ತಿಯು ಆಗುತ್ತದೆ ಆದುದರಿಂದ ಈ ಜಗತ್ಯದ ಉತ್ಪತ್ತಿಗೆ ಕಾರಣನು ನಾನೇ ಇರುವೆನೆಂದು ಜನರ ತಿಳುವಳಿಕೆ ಆದೆ ॥ ೩೨ ॥ ಆಗ್ಗೆ ನನ್ನಿಂದ ಭೂತಮಾತ್ರಗಳ ಉತ್ಪತ್ತಿ ಆಗುತ್ತವೆ ಆದರೂ ನನ್ನಲ್ಲಿ ಸರ್ವಭೂತಮಾತ್ರಗಳು ಅವೆ. ಆದರೆ ಭೂತಗಳಲ್ಲಿ ಮಾತ್ರ ನಾನಿರುವದಿಲ್ಲವೆಂಬವನ್ನು ಈ ಜ್ಞಾನಪ್ರಕಾಶದಿಂದ ನನ್ನ ಅದ್ಭುತ ಐಶ್ವರ್ಯಯೋಗವನ್ನು ಚನ್ನಾಗಿ ನಿರೀಕ್ಷಿಸಿ ನೋಡು. ॥ ೩೩ ॥ ಅಥವಾ ಪ್ರಾಣಿಗಳು ನನ್ನಲ್ಲಿರುವದಿಲ್ಲ ಮತ್ತು ಪ್ರಾಣಿಗಳಲ್ಲಿ ನಾನಿರುವದಿಲ್ಲ ವೆಂಬ ಈ ಮುಖ್ಯ ತತ್ವರಹಸ್ಯವನ್ನು ನೀನೆಂದಿಗೂ ಮರೆಯಬೇಡ ॥ ೩೪ ॥ ಈ ನನ್ನ ಮುಖ್ಯ ರಹಸ್ಯವನ್ನು ನಿನಗೆ ಒಡೆದು ಕಾಣುವಂತೆ ಹೇಳಿರುವೆನು ನೀನು ಇಂದ್ರಿಯಗಳ ದ್ವಾರವನ್ನು ನಿರೋಧಿಸಿ ವಿಷಯಸುಖೋಪಭೋಗವನ್ನು ಬಂಧಿಸಿ ಇಂದ್ರಿಯಗಳಿಗೆ ತಿಳಿಯಗೊಡದೇ ನಿನ್ನ ಅಂತಃಕರಣದಲ್ಲಿ ಈ ಮಾತಿನ ಉಪಭೋಗ ತೆಗೆದುಕೊಳ್ಳುವವನಾಗು.

॥ ೧೩೫ ॥ ಅರ್ಜುನನೇ ! ಈ ವೇದಾಂತಸಿದ್ಧಾಂತದ ರಹಸ್ಯವು ಎಲ್ಲಿಯ ವರೆಗೆ ನಿನ್ನ ಹಸ್ತಗತವಾಗಿರುವದಿಲ್ಲ, ಅಲ್ಲಿಯ ವರೆಗೆ ನನ್ನ ನಿಜವಾದ ಸ್ವರೂಪಸ್ಥಿತಿಯ ಅನುಭವವು ನಿನಗೆ ಎಂದಿಗೂ ಉಂಟಾಗದು (ಹೇಗಂದರೆ) ಹೊಟ್ಟೆನಲ್ಲಿ ಕಾಳು ಹುಡಕಿದರೆ ದೊರಕಬಹುದೇ ? ॥ ೧೩೬ ॥ ಆದರೆ ತರ್ಕದ್ರವ್ಯವನ್ನಿಟ್ಟು ಅನುಮಾನದ ಜೋರಿನಿಂದ ಜೀವರುಗಳಿಗೆ ಆತ್ಮಜ್ಞಾನವಾಗಿರುತ್ತದೆಂದು ಕಂಡುಬರುತ್ತದೆ ಆದರೆ ಅದು ವ್ಯರ್ಥವಾಗಿರುವದು. ಕಾರಣವೇನಂದರೆ ಮೃಗಜಲದಿಂದ ಭೂಮಿ ಏಂದಿಗಾದರೂ ಹಸುರಾಗಿರುವದೇನು ? ಇಲ್ಲ (ಅದರಹಾಗೆ ಅದೆ) ॥೧೩೭॥ ಮೀನಗಳನ್ನು ಹಿಡಿಯುವದರ ದೆಶೆಯಿಂದ ಜಾಳಿಗೆಯನ್ನು ನೀರಿನಲ್ಲಿ ವಿಸ್ತಾರವಾಗಿ ಹರವುತ್ತಾರೆ ಅದರಲ್ಲಿ ಚಂದ್ರಬಿಂಬವು ಸಿಲುಕಿಬಿದ್ದಂತೆ ಕಾಣುತ್ತದೆ. ಆ ಜಾಳಿಗೆಯನ್ನು ನದಿಯ ದಂಡೆಗೆ ಜಾಡಿಸಿ ನೋಡಲು ಅದರಲ್ಲಿ ಪ್ರತಿಬಿಂಬವು ಎಲ್ಲರುತ್ತದೆ ಹೇಳು ? ನೋಡುವಾ ! ॥ ೩೮ ॥ ಅದೇ ಪ್ರಕಾರವಾ ವಕ್ತೃತ್ವದ ಬಲದ ಮೇಲಿಂದ ಎಷ್ಟೋ ಜನರು ನಮಗೆ ಅನುಭವ ಬಂದಿರುವ ದೆಂದು ಅನ್ನುತ್ತಾರೆ. ಆದರೆ ನಿಜವಾದ ಬೋಧದ ಪರೀಕ್ಷೆಯ ಕಾಲವು ಬಂದರೆ ಮಾತ್ರ ಆಗ್ಗೆ ಅವರ ಅನುಭವವಿಲ್ಲದ ಶಬ್ದಪಾಂಡಿತ್ಯವು ನಿರರ್ಥಕವಾಗುತ್ತದೆ. ॥ ೧೩೯ ॥

ಅವಜಾನಂತಿ ಮಾಂ ಮೂಢಾಂ ಮಾನುಷೀಂ ತನುಮಾಶ್ರಿತಮ್ ।
ಪರಂ ಭಾವಮಜಾನಂತೋ ಮಮ ಭೂತಮಹೇಶ್ವರಮ್ ॥ ೧೧ ॥

[ಅವಜಾನಂತೀತಿ] ಕಿಂಬಹುನಾ ಭವಾ ಬಿಹಾಯೂ ! ಆಣಿ ಸಾಜೇ ಚಾಡ ಅಥಿ ಜರೀ ಮಿಯೂ । ತರೀ ತೂ ಗಾ ಉಪಪತ್ತೀ ಇಯೂ । ಜತನ ಕೀಜೇ ॥ ೧೪೦ ॥ ಯೇ ಹೊನೀ ದಿಠೀ ವೇಧಲೀ ಕವಳೇ । ತೈಚಾಂದಿಣಿಯಾತೇ ಮ್ಹಣೇ ಪಿನಳೇ । ತೇವಿ ಮಾಝ್ಯಾ ಸ್ವರೂಪೀ ನಿರ್ಮಳೇ । ದೇಖಿತೀ ದೋಷ ॥ ೧೪೧ ॥ ಸಾ ತರೀ ಜ್ವರೇ ವಿಟಾಳಲೇ ಮುಖ ! ತೇ ದುಧಾತೆ ಮ್ಹಣೇ ಕಡೂ ವಿಖ । ತೇವಿ ಅಮಾನುಷಾ ಮಾನುಷ । ಮಾನಿತೀ ಮಾತೇ ॥ ೧೪೨ ॥ ಮ್ಹಣವೂನಿ ಪುಢತ ಪುಢತೀ ಧನಂಜಯಾ । ಝುಣೇ ವಿಸಂಬಸೀಯಾ ಅಭಿಪ್ರಾಯಾ । ಜೇ ಯಿಯಾ ಸ್ಥೂಲದೃಷ್ಟೀ ವಾಯಾ । ಜಾಈಜೇಲ ಗಾ ॥ ೧೪೩ ॥ ಪೈ ಸ್ಥೂಲದೃಷ್ಟೀ ದೇಖತೀ ಮಾತೇ । ತೇಚಿ ನ ದೇಖಣೇ ಜಾಣ ನಿರುತೇ । ಜೈಸೇ ಸ್ವಪ್ನೀ ಚೇನಿ ಅಮ್ಮತೇ । ಅಮರ ನೋಹಿಜೇ ॥ ೧೪೪ ॥ ಏರ್ಹವೀ ಸ್ಥೂಳದೃಷ್ಟೀ ಮೂಢ । ಮಾತೇ ಜಾಣತೀ ತೀರ ದೃಢ । ಪರಂತೇ ಜಾಣಣೇಂಚಿ ಜಾಣಣೇಯಾ ಆಡ । ರಿಗೋನಿ ಠಾಕೇ ॥ ೧೪೫ ॥ ಜೈಸಾ ನಕ್ಷತ್ರಾಚಿಯಾ ಆಭಾಸಾ-ಸಾಠೀ ಘಾತ ಜಾಲಾ ತಯಾ ಹಂಸಾ । ಮಾಜೀ ರತ್ನಬುದ್ಧೀಚಿಯಾ ಆಶಾ । ರಿಗೋನಿಯಾ ॥ ೧೪೬ ॥ ಸಾಂಗೇ ಗಂಗಾ ಯಾ ಬುದ್ಧೀ ಮೃಗಜಳ । ಠಾಕೋನಿ ಆಲಿಯಾಜೇ ಕಣಣ ಫಳ । ಕಾಯ ಸುರತರು ಮ್ಹಣೋನಿ ಬಾಬುಳ । ಸೇವಿಲೀ ಕರೀ ॥ ೧೪೭ ॥ ಹಾ ನಿಳಯಾಚಾಚಿ ದುಸರಾ । ಯಾ ಬುದ್ಧೀ ಹಾತ ಘಾತಲಾ ವಿಚಾರಾ । ಕಾ ರತ್ನೆ ಮ್ಹಣೋನಿ ಗಾಠಾ । ವೇಂಚಿ ಜೇವಿ ॥ ೧೪೮ ॥ ಅಥವಾ ನಿಧಾನ ಹೇ ಪ್ರಗಟಲೇ । ಮ್ಹಣೋನಿ ಖದಿರಾಂಗಾರ ಖೋಳೇ ಭರಿಲೇ । ಕಾ ಸಾವುಲೀ ನೇಣತಾ ಘಾತಲೇ । ಕುಹಾ ಸಂಹೇ ॥೧೪೯॥ ತೇವಿ ಮೀ ಮ್ಹಣೋನಿ ಪ್ರಪಂಚೀ । ಜೀಹೀ ಬುಡೀ ದಿಧಲೀ ಕೃತನಿಶ್ಚಯಾಚೀ । ತಿಹೀ ಚಂದ್ರಾ ಸಾಠೀ ಜೇವಿ ಜಳೀಂಚೀ । ಪ್ರಭಾ ಧರಿಲೀ ॥ ೧೫೦ ॥ ತೈಸಾ ಕೃತನಿಶ್ಚಯ ವಾಯಾಗೇಲಾ । ಜೈಸಾ ಕೋಣ್ಹೇ ಏಕ ಕಾಂಜೇ ಪ್ಯಾಲಾ । ಮಗ ಪರಿಣಾಮ ಪಾಹೋ ಲಾಗಲಾ ಅಮೃತಾಚಾ ॥ ೧೫೧॥ ತೈಸೇ ಸ್ಥೂಳಾಕಾರೀ ನಾಶಿವಂತೇ । ಭರವಸಾ ಬಾಂಧೋನಿ ಚಿತ್ತೇ । ಪಹಾತೀ ಮಜ ಅವಿನಾಶಾತೇ । ತರೀ ಕೈಂಚಾ ದಿಸೆ ॥ ೧೫೨ ॥ ಅಗಾ ಕಾಈ ಪಶ್ಚಿಮ ಸಮುದ್ರೀಚಿಯಾ ತಟಾ । ನಿಘಜೇತ ಆಹೇ ಪೂರ್ವಿಲಿಯಾ ವಾಟಾ । ಕಾ ಕೊಂಡಾ ಕಾಂಡಿತಾ ಸುಭಟಾ । ಕಣ ಜೋಡೇ ॥ ೧೫೩ ॥ ತೈಸೇ ವಿಕಾರಲೇ ಹೇ ಸ್ಥೂಳ । ಜಾಣಿತಲೇಯಾ ಮೀ ಜ್ಞಾನವ ತಸೇ ಕೇವಳ । ಕಾಈ ಫೇಣ ಸಿತಾ ಜಳ ।

ಸೇವಿಲೇ ಹೋಯ ॥ ೧೫೪ ॥ ಮ್ಹಣೋನಿ ಮೋಹಿಲೇನಿ ಮನೋಧರ್ಮೇ । ಹೇಚಿ ಮೀ ಮಾನೂನಿ ಸಂಭ್ರಮೇ । ಮಗ ಯೇಥೀಂಚೇ ಜಿಯೇ ಜನ್ಮಕರ್ಮೇ । ತಿಯೇ ಮಜಚಿ ಮ್ಹಣತೀ ॥ ೧೫೫ ॥ ಯೇತುಲೇನಿ ಅನಾಮನಾಮ । ಮಜ ಅಕ್ರಿಯಾಸಿ ಕರ್ಮ । ವಿದೇಹಾಸಿ ದೇಹಧರ್ಮ । ಆರೋಪಿತೀ ॥೧೫೬॥ ಮಜ ಆಕಾರ ಶೂನ್ಯಾ ಆಕಾರ । ನಿರುಪಾಧಿಕಾ ಉಪಚಾರ । ಮಜ ವಿಧಿ ವರ್ಜಿತಾ ವ್ಯವಹಾರ । ಆಚಾರಾದಿಕ ॥ ೧೫೭ ॥ ಮಜ ವರ್ಣಹೀನಾ ವರ್ಣ । ಗುಣಾತೀತಾಸೀ ಗುಣ । ಮಜ ಅಚರಣಾ ಚರಣ । ಅಪಾಣಿಯಾ ಪಾಣೀ ॥ ೧೫೮ ॥ ಮಜ ಅಮೇಯಾ ಮಾನ । ಸರ್ವಗತಾಸೀ ಸ್ಥಾನ । ಜೈಸೇ ಸೇಜೇ ಮಾಜೀ ವನ । ನಿದೇಲಾ ದೇಖೇ ॥ ೧೫೯ ॥ ತೈಸಾ ಅಶ್ರವಣಾ ಶ್ರೋತ್ರ । ಮಜ ಅಚ ಕ್ಷೂಸೀ ನೇತ್ರ । ಅಗೋತ್ರಾ ಗೋತ್ರ । ಅರೂಪಾ ರೂಪ ॥ ೧೬೦ ॥ ಮಜ ಅವ್ಯಕ್ತಾಸಿ ವ್ಯಕ್ತಿ । ಅನಾರ್ತಾಸೀ ಆರ್ತೀ । ಸ್ವಯಂತೃಪ್ತಾ ತೃಪ್ತೀ । ಭಾವಿತೀ ಗಾ ॥ ೧೬೧ ॥ ಮಜ ಅನಾವರಣಾ ಪ್ರಾವರಣ । ಭೂಷಣಾತೀತಾಸಿ ಭೂಷಣ । ಮಜ ಸಕಳ ಕಾರಣಾ ಕಾರಣ । ದೇಖತೀ ತೇ ॥ ೧೬೨ ॥ ಮಜ ಸಹಜಾತೀ ಕರಿತೀ । ಸ್ವಯಂಭಾತೇ ಪ್ರತಿಷ್ಠಿತೀ । ನಿರಂತರಾತೇ ಆವ್ಹಾನಿತೀ । ವಿಸರ್ಜಿತೀ ಗಾ ॥ ೧೬೩ ॥ ಮೀ ಸರ್ವದಾ ಸ್ವತಃ ಸಿದ್ಧ । ತೋಕೀ ಬಾಳ ತರುಣ ವೃದ್ಧ । ಮಜ ಏಕರೂಪಾ ಸಂಬಂಧ । ಜಾಣತೀ ಐಸೇ ॥ ೧೬೪ ॥ ಮಜ ಅದ್ವೈತಾಸಿ ದುಜೇ । ಮಜ ಅಕರ್ತಯಾಸಿ ಕಾಜೇ । ಮೀ ಅಭೋಕ್ತಾ ಕೀ ಭುಂಜೇ । ಐಸೇ ಮ್ಹಣತೀ ॥ ೧೬೫ ॥ ಮಜ ಅಕುಳಾಚೇ ಕುಳ ವಾನಿತೀ । ಮಜ ನಿತ್ಯಾಚೇ ನಿಧನೇ ಶಿಣತಿ । ಮಜ ಸರ್ವಾಂತರಾತೇ ಕಲ್ಪಿತೀ । ಅರಿ ಮಿತ್ರ ಗಾ ॥ ೧೬೬ ॥ ಮೀ ಸ್ನಾನಂದಾಭಿರಾಮ । ತಯಾ ಮಜ ಅನೇಕ ಸುಖಾಂಚಾ ಕಾನು । ಆಳುವಾಚಿ ಮೀ ಅಸೇ ಸಮ । ಕೀ ಮ್ಹಣತೀ ಏಕ ದೇಶೀ ॥ ೧೬೭ ॥ ಮೀ ಆತ್ಮಾ ಏಕ ಚರಾಚರೀ । ಮ್ಹಣತೀ ಏಕಾಚಾ ಕೈಪಕ್ಷ ಕರೀ । ಆಣಿ ಕೋಪ್ಪೋನಿ ಏಕತೇ ಮಾನೀ । ಹೇಚಿ ರೂಢವಿತೀ ॥ ೧೬೮ ॥ ಕಿಂಬಹುನಾ ಐಸೇ ಸಮಸ್ತ । ಜೇಹೇ ಮಾನುಷಧರ್ಮ ಪ್ರಾಕೃತ । ತಯಾಚೀ ನಾವಮೀ ಐಸೇ ವಿಪರೀತ । ಜ್ಞಾನ ತಯಾಂಚೇ ॥ ೧೬೯ ॥ ಜಂವ ಆಕಾರ ಏಕ ಪುಢಾ ದೇಖತೀ । ತಂವ ಹಾ ದೇವ ಯೇಣೇ ಭಾವೇ ಭಜತೀ । ಮಗ ತೋಚಿ ವಿಳುಡಲಿಯಾ ಟಾಕಿತೀ । ನಾಹೀ ಮ್ಹಣೋನಿ ॥೧೭೦ ॥ ಮಾತೇ ಯೇಣೇ ಯೇಣೇ ಪ್ರಕಾರೇ । ಜಾಣತೀ ಮನುಷ್ಯ ಐಸೇನಿ ಆಕಾರೇ । ಮ್ಹಣವೂನಿ ಜ್ಞಾನಚಿ ತೇ ಅಂಧಾರೇ । । ಜ್ಞಾನಾಸಿ ಶರೀ ॥ ೧೭೧ ॥

ಅರ್ಥ— ಬಹಳೇ ಹೇಳುವದೇನದೆ ? ಈ ಸಂಸಾರದ ವಿಷಯದಲ್ಲಿ ನಿನಗೆ ಅಂಜಿಕೆಯಿದ್ದು ನಿಜವಾಗಿ ನನ್ನ ಪ್ರಾಪ್ತಿ ಮಾಡಿಕೊಂಡು ಅಕ್ಷಯ ಸುಖವನ್ನನುಭವಿಸಬೇಕೆಂಬ ಆಶಾ ಯಿದ್ದದ್ದಾದರೆ ನಾನು ಹೇಳಿದ ರಹಸ್ಯವನ್ನು ನೀನು ಪೂರ್ಣ ಲಕ್ಷ್ಯದಲ್ಲಿಟ್ಟು ಆಚರಿಸು ॥ ೧೪೦ ॥ ಯಿಲ್ಲದೇ ಯಿದ್ದರೆ ಕಾಮಿಣಿ ಆದ ಯೋಗದಿಂದ ದೃಷ್ಟಿಯು ದೂಷಿತ ವಾದ ಮನುಷ್ಯನು ಬೆಳದಿಂಗಳಿಗೆ ಸಹಾ ಹಳದೀ ಬಂಣವಿರುವದೆಂದು ಅನ್ನುವಂತೆ, ನಿರ್ದೋಷವಾದ ನಂನ ಶುದ್ಧ ಸ್ವರೂಪದಲ್ಲಿ ಅವನಿಗೆ ದೋಷವು ಕಾಣುತ್ತದೆ. ॥ ೧೪೧ ॥ ಇಲ್ಲನೇ ಜ್ವರದಿಂದ ಬಾಯಿ ವಿಷವಾದಮೇಲೆ ಹಾಲು ವಿಷದಂತೆ ಹತ್ತುವಂತೆ ನಾನು ಮನುಷ್ಯನಿರದೇ ನನಗೆ ಮನುಷ್ಯನೆಂದು ತಿಳಿಯುತ್ತಾರೆ. ॥ ೧೪೨ ॥ ಎಲೋ ! ಧನಂಜಯನೇ ! ಮೇಲಿಂದಮೇಲೆ ಹೇಳುತ್ತಿರುವ ಈ ನನ್ನ ಅಭಿಪ್ರಾಯವನ್ನು ನೀನು ಮರೆಯಬೇಡ ಯಾಕಂದರೆ ಸ್ಥೂಲದೃಷ್ಟಿಯಿಂದ ನೋಡಿದರೆ ನಿಂನ ನೋಡುವಿಕೆಯು ವ್ಯರ್ಥವಾದೀತು. ॥ ೧೪೩ ॥ ಸ್ವಪ್ನದೊಳಗಿನ ಅಸ್ಪೃತ ವನ್ನು ಕುಡಿದು ಯಾರಾದರೂ ಅಮರರಾಗುವದುಂಟೇ ? ಅದೇ ಪ್ರಕಾರಾ ಸ್ಥೂಲ ದೃಷ್ಟಿಯಿಂದ ನೋಡುವವರು ನಿಜವಾಗಿ ನಾನನ್ನು ನೋಡುವದಿಲ್ಲ. ॥ ೧೪೪ ॥ ಅಜ್ಞಾನಿ ಜನರು ಸ್ಥೂಲದೃಷ್ಟಿಯಿಂದ ನಂನನ್ನು ತಿಳಿದಿರುವೆನೆಂದು ಅನ್ನುತ್ತಾರೆ, ಅವರ ಸ್ಥೂಲದೃಷ್ಟಿಯ ತಿಳುವಳಿಕೆಯೇ ಯಥಾರ್ಥ. ಜ್ಞಾನವಾಗುವದಕ್ಕೆ ಪ್ರತಿ

ಬಂಧ ಮಾಡುತ್ತದೆ. ॥ ೧೪೫ ॥ ಯಾವ ಪ್ರಕಾರಾ ನಕ್ಷತ್ರದ ಪ್ರತಿಬಿಂಬವನ್ನು ನೀರಿನಲ್ಲಿ ನೋಡಿ ಮುತ್ತು ಇರುವದೆಂಬ ಭಾವನೆಯಿಂದ ಅದನ್ನು ಪ್ರಾಪ್ತ ಮಾಡಿಕೊಳ್ಳಲು ಹಂಸಪಕ್ಷಿಯು ಆಕಾಶದಿಂದ ಹಾರಿಕೊಂಡು ಪ್ರಾಣ ವನ್ನು ನೀಗುವಂತೆ ॥ ೧೪೬ ॥ ಮೃಗಜಲವನ್ನು ನೋಡಿ ಗಂಗಾನದಿಯೇ ಹರಿಯುತ್ತದೆಂಬ ಭ್ರಮೆಯಿಂದ ಹತ್ತರ ಹೋದರೆ ಅಲ್ಲಿ ಅನರಿಗೆ ತ್ರಿಷಾ ಶಾಂತಿ ಆದೀತೆ ಹೇಗೆ ? ಮತ್ತು ಕಲ್ಪವೃಕ್ಷವಿರುವದೆಂಬ ಭಾವನೆಯಿಂದ ಜಾಲಿಗಿಡವನ್ನು ಕೈಯಲ್ಲಿ ಹಿಡಿದರೆ ಲಾಭವೇನು ? ॥ ೧೪೭ ॥ ನೀಲಮಣಿಯ ಎರಡು ಸರದ ಹಾರ ವಿರುವದೆಂಬ ತಿಳಿವಳಿಕೆಯಿಂದ ಕವಡಿ ಬಂಣದ ಸರ್ಪಗೆ ಕೈ ಹಾಕಿದರೆ, ಇಲ್ಲವೇ ರತ್ನವೆಂದು ತಿಳಿದು ಗಾರಗಲ್ಲು ಆರಿಸಿಕೊಂಡರೆ, ॥ ೧೪೮ ॥ ಅಥವಾ ಭೂಮಿಗತ ನಿಕ್ಷೇಪವು ಪ್ರಕಟವಾಗಿ ಪ್ರಕಾಶಬಿದ್ದಿರುವದೆಂಬ ಭ್ರಮೆಯಿಂದ ಬೆಂಕಿಯನ್ನು ಪದರಿನಲ್ಲಿ ಕಟ್ಟಿಕೊಂಬುವಂತೆ, ಅಥವಾ ತನ್ನ ನೆರಳು ನೀರಿನಲ್ಲಿ ಬಿದ್ದಿರುವದೆಂಬದನ್ನರಿಯದೇ ಸಿಂಹ್ವವು ಬಾವಿಯಲ್ಲಿ ಹಾರಿಕೊಂಡು ಪ್ರಾಣನನ್ನು ನೀಗು ವಂತೆ, ॥ ೧೪೯ ॥ ನಾನು ಪರಮಾತ್ಮನು ದೇಹಧಾರಿ ಇದ್ದೇನೆಂಬದನ್ನು ತಿಳಿದು ಯಾರು ಕೃತನಿಶ್ಚಯ ಮಾಡಿದರೋ, ಅವರು ನೀರಿನಲ್ಲಿಯ ಚಂದ್ರನ ಪ್ರತಿಬಿಂಬವನ್ನು ನೋಡಿ ನಿಜವಾದ ಚಂದ್ರನೇ ಇರುವನೆಂಬ ಭ್ರಮೆಯಿಂದ ಚಂದ್ರನನ್ನು ಹಿಡಿಯಲು ವ್ಯರ್ಥ ಶ್ರಮ ಪಟ್ಟು ಮೋಸ ಹೋಗುವರು. ॥ ೧೫೦ ॥ ಅದೇ ಪ್ರಕಾರಾ ಪರಮಾತ್ಮನು ದೇಹಧಾರಿ ಇದ್ದಾನೆಂಬ ಅವರ ಕೃತನಿಶ್ಚಯವು ವ್ಯರ್ಥವಾಗಿರುವದು. ಅದು ಹೇಗಿರುವದೆಂದರೆ ಯಾವನಾದರೊಬ್ಬನು ಅಕ್ಕಿಯ ಗಂಜಿಯನ್ನು ಕುಡಿದು ಅಮೃತದಿಂದಾಗುವ ಸುಖದ ಪರಿಣಾಮವನ್ನು ಅಪೇಕ್ಷಿಸುವಂತೆ ॥ ೧೫೧ ॥ ತಂಮ ಅಂತಃಕ ರಣದಲ್ಲಿ ಪೂರ್ಣ ಭರವಸವನ್ನಿಟ್ಟು ನಾಶಿವಂತ ಸ್ಥೂಲ ಸಗುಣ ಸ್ವರೂಪವೇ ಅವಿನಾಶಿ ಎಂಬ ಬುದ್ಧಿಯಿಂದ ನಂನನ್ನು ನೋಡುವದು ವ್ಯರ್ಥವಾಗಿರುವದು. ಅವರಿಗೆ ನಾನು ಹೇಗೆ ಕಾಣುವೆನು ? ॥ ೧೫೨ ॥ ಹೀಗೆ ನೋಡು ಯಾವನಾದ ರೊಬ್ಬನು ಪಶ್ಚಿಮಸಮುದ್ರದ ದಂಡೆಗೆ ಹೋಗುವ ಆಶಾದಿಂದ ಪೂರ್ವಸಮುದ್ರದ ಹಾದಿ ಹಿಡಿದದ್ದಾದರೆ ಅವನಿಗೆ ಪಶ್ಚಿಮಸಮುದ್ರವು ಪ್ರಾಪ್ತವಾಗಬಹುದೇ ? ಮಹಾವೀರನಾದ ಅರ್ಜುನನೇ ! ಹೊಟ್ಟು ಹಸ್ತಗತವಾದರೆ ಅದರಲ್ಲಿ ಧಾನ್ಯ ದೊರಕಬಹುದೋ ? ॥ ೧೫೩ ॥ ಅದೇ ಪ್ರಕಾರಾ ಈ ವಿಸ್ತಾರವಾದ ಜಗತ್ತು ತಿಳಿಕೊಳ್ಳುವದರಿಂದ ನಿರ್ದೋ ಷವಾದ ನನ್ನನ್ನು ತಿಳಿದುಕೊಳ್ಳಲಿಕ್ಕೆ ಬಂದಿತೇ ಹೇಗೆ ? ನೀರಿನ ಮೇಲಿನ ಬುರುಗು ಕುಡಿದರೆ ನೀರಡಿಕೆ ಹೋದೀತೆ? ॥ ೧೫೪ ॥ ಆದುದರಿಂದ ಮಾಯಾಮೋಹಿತವಾದ ಮನೋವೃತ್ತಿಯಿಂದ ಸಂಸಾರದಲ್ಲಿಯೇ ನಾನಿರುವೆನೆಂಬ ಭ್ರಮೆ ಯಿಂದ ಅಲ್ಲಿಯ ಜನನ ಮರಣಾದಿ ಸರ್ವಸ್ಥಿತಿಯು ನನಗೂ ಇರುವದೆಂದು ತಿಳಿಯುತ್ತಾರೆ ॥ ೫೫ ॥ ಇಷ್ಟರಿಂದಲೇ ನಾಮರಹಿತ, ಕ್ರಿಯಾರಹಿತ, ದೇಹರಹಿತನಾದ ನನಗೆ (ಪರಮಾತ್ಮನಿಗೆ) ನಾಮಧಾರಿಯು, ಕರ್ಮಮಾಡುವವನು, ಮತ್ತು ದೇಹ ಧರ್ಮದಿಂದ ಯುಕ್ತನೆಂದು ಅವರು ತಿಳಿಯುತ್ತಾರೆ. ॥ ೫೬ ॥ ನನಗೆ ನಿರಾಕಾರನಿಗೆ ಆಕಾರ, ನಿರುಪಾಧಿಕನಿಗೆ ಉಪಚಾರ, ಕರ್ತವ್ಯ ರಹಿತನಿಗೆ, ವ್ಯವಹಾರಗಳು ॥ ೫೭ ॥ ಜಾತಿ ರಹಿತನಾದ ನನಗೆ ಕುಲವು, ಗುಣಾತೀತನಾದವನಿಗೆ ಗುಣವು, ಚರಣ ರಹಿತನಿಗೆ ಚರಣಗಳು, ಹಸ್ತ ರಹಿತ ನಿಗೆ ಹಸ್ತಗಳು, ॥ ೫೮ ॥ ಪರಿಮಾಣತೀತನಾದ ನನಗೆ ಪರಿಮಾಣವು, ಸರ್ವ ವ್ಯಾಪಕನಾದ ನನಗೆ ಸ್ಥಾನ ವಿರುವದೆಂದು ಕಲ್ಪಿಸುತ್ತಾರೆ. ಹೇಗಂದರೆ ಹಾಸಿಗೆಯ ಮೇಲೆ ಮಲಗಿದವನು ಸ್ವಪ್ನವಲ್ಲಿ ವನಶೋಭೆಯನ್ನು ನೋಡುವಂತೆ, ॥ ೫೯ ॥ ಕರ್ಣರಹಿತನಾದ ನನಗೆ ಕಿವಿಗಳು, ನೇತ್ರರಹಿತನಾದವನಿಗೆ ಕಣ್ಣುಗಳು, ಗೋತ್ರ ರಹಿತ ನಾದವನಿಗೆ ಗೋತ್ರವು, ನಿರಾಕಾರನಿಗೆ ರೂಪವು, ॥ ೫೦ ॥ ಅವ್ಯಕ್ತನಾದ ನನಗೆ ವ್ಯಕ್ತನೆಂದೂ, ನಿರಿಚ್ಛನಾದ ನನಗೆ ಇಚ್ಛೆಯು. ಸ್ವಯಮೇವ ತೃಪ್ತನಾದ ನನಗೆ ತೃಪ್ತಿಯುಂಟೆಂದು ಕಲ್ಪಿಸುತ್ತಾರೆ. ॥ ೬೧ ॥ ನಾಮ ವಸ್ತ್ರರಹಿತನು ಅಂದರೆ ಜಗತ್ತಿಗೆ ಹೊದಿಕೆಯಾಗಿರುವ ನನಗೆ ಹೊದಿಸುತ್ತಾರೆ. ಭೂಷಣಾತೀತನಾದ ನಿರಾಕಾರ ನಿಗೆ ಅಲಂಕಾರಗಳನ್ನಿಡಿಸುತ್ತಾರೆ. ನಾನು ಸರ್ವ ಜಗತ್ಯದ ಸೃಷ್ಟಿಕರ್ತನಿದ್ದು ನನಗೆ ಎರಡನೆಯವರಿಂದ ಜನ್ಮ ವನ್ನೆತ್ತಿರುವೆನೆಂದು ಊಹಿಸುತ್ತಾರೆ. ॥ ೬೨ ॥ ನಾನು ಸ್ವಯಂ ಮೂರ್ತಿಯಿದ್ದು ನನ್ನ ಮೂರ್ತಿಯನ್ನು ಸ್ಥಾಪಿ ಸುತ್ತಾರೆ. ನಾನು ಸ್ವಯಂ ಸಿದ್ಧನಿದ್ದು ನನಗೆ ಪ್ರಾಣ ಪ್ರತಿಷ್ಠೆಯನ್ನು ಮಾಡುತ್ತಾರೆ. ನಾನು ನಿತ್ಯ ಸರ್ವತ್ರ ದಲ್ಲಿಯೂ ವ್ಯಾಪ್ತನಿದ್ದು ನನ್ನ ಆಹ್ವಾನ ವಿಸರ್ಜನ ಮಾಡುತ್ತಾರೆ. ॥ ೬೩ ॥ ನಾನು ಯಾವಾಗಲೂ ಸ್ವಯಮೇವ

[ಯಾಂತಿ ದೇವವ್ರತಾ ದೇವಾನಿತಿ] ಮನೇ ವಾಚಾ ಕರಣೇ । ಜಯಾಂಚಿಯಾ ಭಜನೀ ದೇವಾಂಚಿಯಾ ವಾಹಣೇ । ತೇ ಶರೀರ ಜಾತಿಯೇ ಕ್ಷಣೀ । ದೇವಪಚಿ ಜಾಲೇ ॥ ೨೪ ॥ ಅಥವಾ ಪಿತ ರಾಂಚೀ ವೃತೇ । ವಾಹತೀ ಜಯಾಂಚೀ ಚಿತ್ತೇ । ಜೀವಿತ ಸರಲಿಯಾ ತಯಾತೇ । ಪಿತೃತ್ವ ವರೀ ॥೨೬॥ ಕಾ ಕ್ಷುದ್ರ ದೇವತಾದಿ ಭೂತೇ । ತಿಯೇಂಚಿ ಜಯಾಂಚೀ ಪರಮ ದೈವತೇ । ಜೆಹೀ ಅಭಿಚಾರಿ.ೀ ತಯಾ ತೇ । ಉಪಾಸಿಲೇ ॥ ೨೭ ॥ ತಯಾ ದೇಹಾಚೀ ಜವನಿಕಾ ಫಿಟಲೀ । ಆಣಿ ಭೂತತ್ವಾಚೀ ಪ್ರಾಪ್ತಿ ಜಾಹಾಲೀ । ಏವಂ ಸಂಕಲ್ಪವಶೇ ಫಳಲೀ । ಕರ್ಮೇ ತಯಾ ॥ ೨೮ ॥ ಮಗ ಮೀಚಿ ಡೋಳಾ ದೇಖಿಲಾ । ಚೀ ಹೀ ಕಾನೀಮೀಚಿ ಏಕಿಲಾ । ಮೀಚಿ ಮನೇ ಭಾವಿಲಾ । ವಾನಿಲಾ ವಾಚಾ ॥ ೨೯ ॥ ಸರ್ವಾಂಗೀ ಸರ್ವಾತಾಯೀ । ಮೀಚಿ ನಮಸ್ಕಾರಿಲಾ ಜೀಹೀ । ದಾನ ಪುಣ್ಯಾದಿಕೇ ಜೇ ಕಾಂಹೀ । ತೇ ಮಾಝಿಯಾಜಿ ಮೋಹರಾ ॥ ೩೦ ॥ ಜೀಹೀ ಮಾತೇಚಿ ಅಧ್ಯಯನ ಕೇಲೆ । ಜೇ ಆತ ಬಾಹೇರೀ ಮಿಯಾಂಚಿ ಧಾಲೇ । ಜಯಾಂಚೇ ಜೀವಿತ್ವ ಜೋಡಲೇ । ಮಜಚಿ ಲಾಗೀ ॥ ೩೧ ॥ ಜೇ ಅಹಂಕಾರ ವಾಹತ ಆಂಗೀ । ಆವ್ಹಿಲೇ ಹರೀಚೆ ಭೂಷಾವಯಾಲಾಗೀ । ಜೇ ಲೋಭಿಯೇ ಏಕಚಿ ಜಗೀ । ಮಾಝೀಮೀನಿ ಲೋಭೇ ॥ ೩೨ ॥ ಜೇ ಮಾಝೀಮೀನಿ ಕಾಮೇ ಸಕಾಮ । ಜೇ ಮಾಝೀಮೀನಿ ಪ್ರೇಮೇ ಸಪ್ರೇಮ । ಜೇ ಮಾಝಿಯಯಾ ಭುಲೀ ಸಭ್ರಮ । ನೇಣತೀ ಲೋಕ ॥ ೩೩ ॥ ಜಯಾಂಚೀ ಜಾಣತೀ ಮಜಚಿ ಶಾಸ್ತ್ರೇ । ಮೀ ಜೋಡೇ ಜಯಾಂಚೇನಿ ಮಂತ್ರೇ । ಐಸೇ ಜೇ ಚೇಷ್ಟಾ ಮಾತ್ರೇ । ಭಜಲೇ ಮಜ ॥ ೩೪ ॥ ತೇ ಮರಣಾ ಏಲೀಚ ಕಡೇ । ಮಜ ಮಿಳೋನಿ ಗೇಲೇ ಫುಡೇ । ಮಗ ಮರಣೇ ಅಣೀಕೀ ಕಡೇ । ಜಾತೀಲ ಕೇವೀ ॥ ೩೫ ॥ ಮ್ಹಣೋನಿ ಮದ್ಯಾಜೀ ಜೇ ಜಾಹಾಲೇ । ತೇ ಮಾಝಿಯಾ ಸಾಯುಜ್ಯಾ ಆಲೇ । ಜೀಹೀ ಉಪಚಾರಮಿಷೇ ದಿಧಲೇ । ಆಪಣಪೇ ಮಜ ॥ ೩೬ ॥ ಅರ್ಜುನಾ ಮಾಝೀ ಠಾಯೀ । ಆಪಣ ಪೇವೀಣ ಸೌರಸ ನಾಹೀ । ಮೀ ಉಪಚಾರೇ ಕವಣಾಹೀ । ನಾಕಳೇ ಗಾ ॥ ೩೭ ॥ ಏಥ ಜಾಣೀವ ಕರೀ ತೋಚಿ ನೇಣೇ । ಆಥಿಲೇ ಪಣ ಮಿರವೀ ತೇಚಿ ಉಣೇ । ಆವ್ಹೀ ಜಾಹಾಲೋ ಐಸೇ ಜೋ ವ್ಹಣೇ । ತೋ ಕಾಹೀಚ ನವ್ಹೆ ॥ ೩೮ ॥ ಅಥವಾ ಯಜ್ಞದಾನಾದಿ ಕಿರೀಟೇ । ಕಾ ಫಪೇಹನಜೇ ಹುಟಹುಟೇ । ತೇತ್ಯಣಾ ಏಕಾಸಾರೀ । ನ ಸರೇ ಏಥ ॥ ೩೯ ॥ ಪಾಹೇ ಪಾ ಜಾಣೆವೇಚೇನಿ ಬಳೇ । ಕೋಣ್ಹೇ ವೇದಾಸಾಸೂನಿ ಅಸೇ ಆಗಳೇ । ಕೀ ಶೇಷಾಹುನೀ ತೋಂಡಾಳೇ । ಬೋಲಕೇ ಆಥಿ ॥೪೦॥ ತೋಹೀ ಅಂಥರೂಣಾ ತಳವಟೀ ದಡೇ । ಯೆರೂನೇತಿ ನೇತಿ ಮ್ಹಣೋನಿ ಬಹುಡೇ । ಏಥ ಸನಕಾದಿಕ ವೇಡೇ । ಪಿಸೇ ಜಾಹಾಲೇ ॥ ೪೧ ॥ ಕರಿತಾ ತಾಪಸಾಂಚೀ ಕಡಸಣೀ । ಕವಣ ಜವಳಾ ಠೇವಿಜೇ ಶೂಳಪಾಣೀ । ತೋಹಿ ಅಭಿಮಾನ ಸಾಂಡೂನಿ ಪಾಯವಣೀ । ಮಾಥಾ ವಾಹೇ ॥ ೪೨ ॥ ನಾತರೀ ಅಥಿಲೇಪಣೇ ಸರಿಶೀ । ಕವಣೇ ಆಹೇ ಲಕ್ಷ್ಮಿಯೇ ಐಸೀ । ಶ್ರಿಯೇಸಾರಿಖಿಯಾ ದಾಸೀ । ಫುರೇ ಚೀಯೇತೇ ॥ ೪೩ ॥ ತಿಯಾ ಖೇಳತಾ ಕರಿತೀ ಫುರಕುಲೀ । ತಯಾ ನಾಮೇ ಅಮರ ಪುರೇ ಜಾ

ಠೇವಿಲೀ । ತರೀ ನ ಹೋತೀ ಕಾಯ ಬಾಹುಲೀ । ಇಂದ್ರಾದಿಕ ತಯಾಚೀ ॥ ೭೪ ॥ ತಿಯಾ ನಾವಡೋನಿ ಜೆವ್ಹಾ ಮೋಡತೀ । ತೆಂವ್ಹಾ ಮಹೇಂದ್ರಾಚೇ ರಂಕ ಹೋತೀ । ತಿಯಾ ಜಿಯಾ ಝಾಡಾ ಕಡೆ ಸಾಹಾತೀ । ತೇ ಕಲ್ಪವೃಕ್ಷ ॥ ೭೫ ॥ ಐಸಿಯಾ ಜಿಯೇಚಿಯಾ ಜವಳಿಕಾ । ಸಾನುರ್ಥ್ಯ ಘೇ ಚಿಯಾ ಪಾಇಕಾ । ತೇ ಲಕ್ಷ್ಮೀ ಮುಖ್ಯ ನಾಯಿಕಾ । ನ ಮನೇಚಿ ಏಥ ॥ ೭೬ ॥ ಮಗ ಸರ್ವಸ್ವೇ ಕರೂನಿ ಸೇವಾ । ಅಭಿಮಾನ ಸಾಂಡೂನಿ ಪಾಂಡವಾ । ತೇ ಪಾಯ ಧುವಾವಯಾಚಿಯಾ ದೈವಾ । ಪಾತ್ರ ಜಾಹಾಲೀ ॥ ೭೭ ॥ ಮ್ಯಾಣೋನಿ ಥೋರಪಣ ಪರ್ಹಾ ಸಾಂಡಿಜೇ । ಏಥವ್ಯುತ್ಪತ್ತೀ ಆಘೆವೀ ವಿಸ ರಿಜೇ । ಜೈಜಗಾ ಧಾಕುಟೇ ಹೋಇಜೇ । ತೈಜವಳೀಕ ಮಾಯೀ ॥ ೭೮ ॥ ಅಗಾ ಸಹಸ್ರ ಕಿರಣಾ ಚಿಯೇ ದಿಠೀ । ಪುಢಾ ಚಂದ್ರಮಹೀ । ಲೋಪೇ ಕಿರೀಟೀ । ತೇಥ ಖದ್ಯೋತ ಕಾ ಹುಟಹುಟೇ । ಆಪುಲೇನಿ ತೇಜೇ ॥ ೭೯ ॥ ತೈಸೇ ಲಕ್ಷ್ಮೀಯೇಚೇ ಥೋರಪಣ ನ ಸರೇ । ಜೇಥ ಶಂಭೂಚೇ ಹೀ ತಪ ನ ಪುರೇ । ತೇಥಯೇರ ಪ್ರಾಕೃತ ಹೇಂದರೇ । ಕೇವೀ ಜಾಣೋ ಲಾಹೇ ॥೮೦॥ ಯಾಲಾಗೀ ಶರೀರ ಸಾಂಡೋನಾ ಕೇಜೇ । ಸಕಳ ಗುಣಾಂಚೇ ಲೋಣ ಉತರಿಜೇ । ಸಂಪತ್ತಿ ಮದ ಸಾಂಡಿಜೇ । ಕುರವಂಡೀ ಕರೂನೀ ॥೮೧॥

ಅರ್ಥ — ಮನ ವಾಚಾ ಇಂದ್ರಿಯಗಳ ಯೋಗದಿಂದ ಯಾರು ಇಂದ್ರಾದಿ ದೇವತೆಗಳ ಭಜನ ಮಾಡುತ್ತಾರೆ. ಅವರ ಶರೀರ ವಿಯೋಗವಾದ ಕ್ಷಣಕ್ಕೆ ಅವರು ದೇವರೂಪವಾಗುತ್ತಾರೆ. ॥ ೩೫॥ ಅಥವಾ ಯಾರು ಭಕ್ತಿಯಿಂದ ಪಿತರುಗಳ ವ್ರತ ಮಾಡುವರೋ, ಅವರು ಮರಣದ ನಂತರ ಪಿತರ ಸ್ವರೂಪವನ್ನು ಪಡೆಯುತ್ತಾರೆ. ॥ ೩೫॥ ಇಲ್ಲವೇ ಭೂತ ಪಿಶಾಚ ಮುಂತಾದ ಕ್ಷುದ್ರ ದೈವತಗಳು ಯಾರಿಗೆ ಪರಮ ದೈವತವಾಗಿರುವರೋ, ಮತ್ತು ಯಾರು ಘಾತುಕವಾದ ತಮ್ಮ ಕಾರ್ಯಗಳನ್ನು ಸಾಧಿಸಿಕೊಳ್ಳುವದರ ದೆಸೆಯಿಂದ ಆ ದೈವತಗಳ ಉಪಾಸನಾ ಮಾಡುವರೋ, ॥ ೫೭ ॥ ಅವರ ದೇಹದ ವಿಯೋಗವಾದ ಕೂಡಲೆ ಅವರಿಗೆ ಭೂತ ಪಿಶಾಚಿ ಮುಂತಾದವುಗಳ ಯೋನಿಯು ಪ್ರಾಪ್ತವಾಗುತ್ತದೆ. ಈ ಪ್ರಕಾರ ಅವರ ಸಂಕಲ್ಪ ಮಾತ್ರದಿಂದ ಅವರ ಕರ್ಮಗಳು ಅವರಿಗೆ ಫಲದ್ರೂಪವಾಗುತ್ತವೆ. ॥ ೫೮ ॥ ಆ ಮೇಲೆ ಯಾರು ದೃಷ್ಟಿಯಿಂದ ನನ್ನನ್ನೇ ನೋಡುತ್ತಾರೆ. ಕಿವಿಗಳಿಂದ ನನ್ನ ನಾಮ ಸಂಕೀರ್ತನವನ್ನೇ ಕೇಳುತ್ತಾರೆ. ಮನಸಿನಿಂದ ನನ್ನ ಧ್ಯಾನವನ್ನೇ ಯಾವಾಗಲೂ ಮಾಡುತ್ತಾರೆ. ಮತ್ತು ವಾಚಾದಿಂದ ನನ್ನ ವರ್ಣನವನ್ನೇ ಮಾಡುತ್ತಾರೆ. ಸರ್ವಾಂಗದಿಂದ ಮತ್ತು ಸರ್ವ ಸ್ಥಳದಲ್ಲಿ ನನಗೇ ನಮಸ್ಕಾರ ಮಾಡುತ್ತಾರೆ. ದಾನ ಪುಣ್ಯ ಮುಂತಾದ ಸರ್ವ ಸತ್ಕರ್ಮಗಳು ಏನೇನು ಮಾಡುತ್ತಾರೋ, ಅದೆಲ್ಲವು ನನ್ನ ಉದ್ದೇಶದಿಂದಲೇ ಮಾಡುತ್ತಾರೆ. ॥ ೬೦ ॥ ಯಾರು ನನ್ನ ಸ್ವರೂಪವು ಯಥಾರ್ಥವಾಗಿ ತಿಳಿಯುವಂಥ ಶಾಸ್ತ್ರವನ್ನೇ ಅಧ್ಯಯನ ಮಾಡಿರುವರು. ಅವರು ನನ್ನ ಯೋಗದಿಂದಲೇ ಅಂತರ್ಬಾಹ್ಯದಲ್ಲಿ ತ್ರಪ್ತರಾಗಿರುತ್ತಾರೆ. ಯಾರು ತಮ್ಮ ಆಯುಷ್ಯವನ್ನು ನನ್ನ ಕಡೆಗೆ ವಿನಿಯೋಗ ಮಾಡಿರುತ್ತಾರೆ. ॥ ೬೧ ॥ ಯಾರಿಗೆ ನನ್ನ ಹೊರ್ತು ಎರಡನೇ ಯಾವ ತರದ ಪ್ರಾಪ್ತಿಯ ಅಪೇಕ್ಷೆಯು ಇರುವದಿಲ್ಲ, ಮತ್ತು ನಾವು ಶ್ರೀಹರಿಯ ಕೀರ್ತಿಯನ್ನು ಬೆಳಿಸುವ ಸೇವಕರೆಂಬ ಅಹಂಕಾರದಿಂದ ಅವರು ಯುಕ್ತರಾಗಿರುತ್ತಾರೆ, ॥ ೬೨ ॥ ಯಾರು ನನ್ನ ಪಾಪ್ತಿಯ ಅಪೇಕ್ಷೆಯಿಂದಲೆ ಸಕಾಮವಾಗಿರುತ್ತಾರೆ, ಮತ್ತು ನನ್ನ ವಿಷಯದ ಪ್ರೇಮದಿಂದ ಪ್ರೇಮಯುಕ್ತರಾಗಿರುತ್ತಾರೆ, ಅವರು ನನ್ನಲ್ಲಿಯೇ ಮೋಹಿತರಾಗಿ ಹುಚ್ಚರಾಗಿದ್ದಾರೆ. ಅದರಿಂದ ಲೌಕಿಕವು ಅವರ ಕಣ್ಣಿಗೆ ಕಾಣುವದೇ ಇಲ್ಲ. ॥ ೬೩ ॥ ಯಾವನ ಶಾಸ್ತ್ರಗಳು ನನ್ನ ಪರಿಚಯವನ್ನು ಮಾಡಿಕೊಡುತ್ತವೆ. ಅವರು ಮಾಡುವ (ನಿರ್ದೋಷ ಪವಿತ್ರ) ಮಂತ್ರ ಜಪದಿಂದ ಅವರಿಗೆ ನನ್ನ ಪ್ರಾಪ್ತಿಯೇ ಆಗುತ್ತದೆ. ಈ ರೀತಿಯಿಂದ ಯಾವನು ಕಾಯಿಕ, ವಾಚಿಕ ಮಾನಸೀಕ (ಶ್ರದ್ಧಾಪೂರ್ವಕ) ಸರ್ವ ಕರ್ಮಗಳಿಂದ ನನ್ನ ಹೊರ್ತು ಅನ್ಯ ಯಾವ ದೈವತಗಳ ಭಜನೆಯನ್ನೂ ಮಾಡುವದಿಲ್ಲವೋ, ॥೬೪॥ ಅವರು ಮರಣ ಪೂರ್ವದಲ್ಲಿಯೇ ಬ್ರಹ್ಮರೂಪವಾಗುತ್ತಾರೆ. ಅವರು ಮರಣದ ನಂತರ (ನನ್ನನ್ನು ಬಿಟ್ಟು) ಅನ್ಯ ಕಡೆಗೆ ಹೇಗೆ ಹೋಗುವರು ? ॥೬೫॥

ಆದುದರಿಂದ ನನ್ನ ಯಜನ ಮಾಡುವವರು ಸಾಯುಜ್ಯ ಮೋಕ್ಷವನ್ನು ಪಡೆಯುತ್ತಾರೆ. ಕಾರಣ ಅವರು ಸೇವಾ ನಿಮಿತ್ಯದಿಂದ ತಮ್ಮ ದೇಹವನ್ನೇ ನನಗೆ ಅರ್ಪಣ ಮಾಡಿರುತ್ತಾರೆ. ॥ ೬೬ ॥ ಅರ್ಜುನನೇ! ಭಕ್ತರು ನನ್ನಲ್ಲಿ ಆತ್ಮಸಮರ್ಪಣೆಯನ್ನು ಮಾಡದ ಹೊರ್ತು ಅನ್ಯ ಯಾವ ಉಪಚಾರದಿಂದಲೂ, ನಾನು ಅವರಿಗೆ ವಶ ನಾಗುವದಿಲ್ಲ. ॥ ೬೭ ॥ ಇಲ್ಲಿ ಯಾವನು ನಾನು ಪರಮಾತ್ಮ ಸ್ವರೂಪವನ್ನು ತಿಳಿದಿರುವೆನೆಂದು ಅನ್ನುವನೋ, ಅವನಿಗೆ ನಿಶ್ಚಯವಾಗಿ ತಿಳಿದಿರುವದಿಲ್ಲ. ಮತ್ತು ನಾನು ಕೃತಾರ್ಥನಾಗಿರುವೆನೆಂದು ಅನ್ನುವನೋ, ಅದೇ ಅಪ ನಿಗೆ ಕೃತಾರ್ಥತೆಯಲ್ಲಿ ಸಾಮಾನ್ಯತನವು. ನಾನು ಮುಕ್ತನಾಗಿರುವೆನೆಂದು ಯಾವನು ಅನ್ನುವನೋ, ಅವನು ಮುಕ್ತನಾಗಿರುವದೇ ಇಲ್ಲವೆಂದು ತಿಳಿಯಬೇಕು. ॥ ೬೮ ॥ ಅಥವಾ ಎಲೋ ಕಿರೀಟಿ! ನಾವು ಯಜ್ಞ ಮಾಡಿ ದೆವು, ನಾವು ಧರ್ಮ ಮಾಡಿದೆವು, ಇಲ್ಲವೇ ನಾವು ತಪಶ್ಚರ್ಯ ಮಾಡಿದೆವು, ಎಂದು ಹೀಗೆ ಯಾರು ಹೆಮ್ಮೆ ಪಡುತ್ತಾರೋ, ಅವರಿಗೆ ನನ್ನ ಪ್ರಾಪ್ತಿಯ ಮಾನದಿಂದ ನೋಡುತ್ತಿರಲು, ಒಂದು ಕಡ್ಡಿಯಷ್ಟು ಯೋಗ್ಯತೆಯು ಸಹ ಅವರಲ್ಲಿರುವದಿಲ್ಲ. ॥ ೬೯ ॥ ಹೀಗೆ ನೋಡು! ಜ್ಞಾನದ ಬಲದಲ್ಲಿ ವೇದದಕಿಂತಲೂ ಯಾರಾದರೂ ಹೆಚ್ಚಿನ ಜ್ಞಾನಿಗಳಿರುವರೇನು? ಇಲ್ಲವೇ ಸಹಸ್ರ ಮುಖದಿಂದ ಮಾತಾಡುವ ಶೇಷನಕಿಂತಲೂ, ಹೆಚ್ಚಿಗೆ ಮಾತಾಡುವ ವರು ಯಾರಾದರೂ ಇರುವರೇನು? ॥ ೭೦ ॥ ಆದರೆ ಆ ಶೇಷನು ಸಹಾ, ಯಾರಿಗೆ ಹಾಸಿಗೆ ಆಗಿರುವನೋ, ವೇದಗಳು ಸಹಾ ನೇತಿ ನೇತಿ ಅಂದರೆ ಇದು ಪರಮಾತ್ಮನಲ್ಲಾ, ಅದು ಪರಮಾತ್ಮ ವಸ್ತು ಇರುವದಿಲ್ಲವೆಂದು ಹೇಳಿ ಸ್ತಬ್ಧವಾಗುತ್ತವೆ. ಅದರಂತೆ ಸನಕಾದಿಕ ರುಷಿಗಳು ಸಹ ಪರಮಾತ್ಮನ ಸ್ವರೂಪದ ನಿರ್ಧಾರ ವಿಷಯ ದಲ್ಲಿ ಹುಚ್ಚರಾಗಿ ಭ್ರಮಿಷ್ಟರಾಗಿ ಹೋಗಿರುವರೋ, ॥ ೭೨ ॥ ತಪಸ್ಸಿಗಳ ವಿಷಯದಲ್ಲಿ ನೋಡಿದರೆ ಮಹಾದೇವರ ಯೋಗ್ಯತೆಗೆ ಸಮಾನರಾದವರು ಅನ್ಯರ್ಯಾರಾದರೂ ದೊರಕುವರೇನು? ಆದರೂ ಆ ಭೋಳಾಶಂಕರನು ಅಭಿ ಮಾನವನ್ನು ಪರಿತ್ಯಜಿಸಿ ಯಾವನ ಪಾದೋದಕವನ್ನು ಅಂದರೆ ಗಂಗೆಯನ್ನು (ಚರಣ ತೀರ್ಥವೆಂದು) ತನ್ನ ಮಸ್ತಕದ ಮೇಲೆ ಧಾರಣ ಮಾಡಿಕೊಂಡಿರುತ್ತಾನೆ. ॥ ೭೨ ॥ ಇನ್ನು ಸೈ ಐಶ್ವರ್ಯದಿಂದ ಶ್ರೇಷ್ಠಳಾದ ಲಕ್ಷ್ಮಿ ದೇವಿಯಕಿಂತಲೂ, ಸಂಪನ್ನತೆಯಲ್ಲಿ ಯಾರಾದರೂ ಹೆಚ್ಚಿನವರಿರುವರೇನು? ಅವಳ ಮನಿಯಲ್ಲಿ ಅಷ್ಟಮಹಾಸಿದ್ಧಿ ಗಳು ದಾಸಿಯರಾಗಿದ್ದಾರೆ. ॥ ೭೩ ॥ ಆ ದಾಸಿಗಳು ತಮ್ಮ ಆಟದಲ್ಲಿ ಮನಿ ಕಟ್ಟು ಅದರ ಹೆಸರು ಅಮರ ಪುರವೆಂದು ಇಟ್ಟರೆ ಇಂದ್ರಾದಿ ದೇವತೆಗಳು ಅವರ ಆಟದೊಳಗಿನ ಗೊಂಬೆಗಳು ಆಗಲಿಕ್ಕೇನು? ॥೭೪॥ ಮುಂದೆ ಆ ದಾಸಿಯರು ತಮ್ಮ ಗೊಂಬಿ ಆಟವು ಬೇಸರವಾಗಿ ಯಾವಾಗ್ಗೆ ಮುರಿಯುತ್ತಾರೆ. ಆಗ್ಗೆ ಇಂದ್ರನು ಪದ ಚ್ಯುತನಾಗಿ ದರಿದ್ರನಾಗುತ್ತಾನೆ. ಮತ್ತು ಆ ದಾಸಿಯರು ಯಾವ ಗಿಡದ ಕಡೆಗೆ ನೋಡುತ್ತಾರೆ. ಆ ವೃಕ್ಷಗಳು ಕಲ್ಪವೃಕ್ಷಗಳಾಗುತ್ತವೆ. ॥ ೭೫ ॥ ಹೀಗೆ ಯಾವ ಲಕ್ಷ್ಮಿದೇವಿಯ ಮನಿಯೊಳಗಿನ ದಾಸಿಯರ ಸಾಮರ್ಥಿಯು ಅದೆ ಆ ಪಟ್ಟರಾಣಿ ಶ್ರೀ. ಲಕ್ಷ್ಮಿದೇವಿಯವರದು ಸಹ ಈ ಸ್ಥಳದಲ್ಲಿ ಪ್ರತಿಷ್ಠೆಯು ಉಳದಿರುವದಿಲ್ಲ. ॥ ೭೬ ॥ ಆ ಮೇಲೆ ಅರ್ಜುನನೇ! ಮನೋಭಾವದಿಂದ ಸೇವಾ ಮಾಡಿ ಸರ್ವ ಅಭಿಮಾನವನ್ನು ತ್ಯಾಗ ಮಾಡಿ ಅವಳು ಪರಮಾತ್ಮನ ಪಾದ ತೊಳೆಯುವ ಅಧಿಕಾರಕ್ಕೆ ಪಾತ್ರಳಾದಳು. ॥ ೭೭ ॥ ಆದುದರಿಂದ ದೊಡ್ಡಸ್ತಿಕೆಯನ್ನು ಒಂದು ಕಡೆಗೆ ಇಟ್ಟು ಸರ್ವ ಶಾಸ್ತ್ರೀಯ ಜ್ಞಾನದ ಅಭಿಮಾನವನ್ನು ಮುರಿತು, ಯಾವಾಗ್ಗೆ ಜಗತ್ಯದಲ್ಲಿ ನಮ್ರತನದಿಂದ ನಡಿಯು ತ್ತಾರೋ ಅದೇ ಕಾಲಕ್ಕೆ ನನ್ನ ಪ್ರಾಪ್ತಿಯು ಅವರಿಗೆ ಆಗುತ್ತದೆ. ॥ ೭೮ ॥ ಎಲೋ ಕಿರೀಟಿ! ಯಾವ ಸ್ಥಳ ದಲ್ಲಿ ಸೂರ್ಯನ ತೇಜದ ಮುಂದೆ ಚಂದ್ರನ ತೇಜವು ಅಡಗಿ ಹೋಗುತ್ತದೆ. ಅಲ್ಲಿ ಹೊನ್ನಿ ಹುಳವು ತನ್ನ ಪ್ರಕಾಶದ ದೆಶೆಯಿಂದ (ಯಾಕೆ ಬಡಿವಾರ ತೋರಿಸಬೇಕು? ॥೭೯॥ ಅದೇ ಪ್ರಕಾರ ಯಾವ ಸ್ಥಳದಲ್ಲಿ ಲಕ್ಷ್ಮಿದೇವಿಯ ಐಶ್ವರ್ಯವೂ ಮತ್ತು ಶಂಭುವಿನ ತಪಶ್ಚರ್ಯವೂ, ಸಹಾ ಸರಿಯಾಗುವದಿಲ್ಲವೋ, ಆ ಸ್ಥಾನದಲ್ಲಿ ಅಜ್ಞಾನಿ ಮೂಢ ಜನರಿಂದ ನನ್ನನ್ನು ತಿಳಿಯಲಿಕ್ಕೆ ಹ್ಯಾಗೆ ಸಾಧ್ಯವಾದೀತು? ॥ ೮೦ ॥ ಈ ಕಾರಣದದೆಶೆಯಿಂದ ಸರ್ವ ಶರೀರದ ಅಭಿಮಾನವನ್ನು ಬಿಟ್ಟುಕೊಟ್ಟು ಸರ್ವ ಗುಣಗಳನ್ನು ಪರಮಾತ್ಮನಿಗೆ ಅರ್ಪಿಸಿ ಮತ್ತು ಸಂಪತ್ತಿಯ ಮದವನ್ನು ಪರಿತ್ಯಜಿಸಿ ತನ್ನ ದೇಹಾಭಿಮಾನವನ್ನು ನನ್ನ ಮೇಲಿಂದಾ ನಿವಾಳಿ ಮಾಡಿ ವಗೆಯಲಿಕ್ಕೆ ಬೇಕು. ॥ ೮೪ ॥

ಪತ್ರಂ ಪುಷ್ಪಂ ಫಲಂ ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ ।
ತದಹಂ ಭಕ್ತ್ಯುಪಹೃತಮಶ್ನಾಮಿ ಪ್ರಯತಾತ್ಮನಃ ॥ ೨೬ ॥

[ಪತ್ರಂ ಪುಷ್ಪಂ ಇತಿ] ಮಗ ನಿಃಸ್ಪೃಮಭಾವ ಉಲ್ಹಾಸೇ । ಮಜ ಅರ್ಪಾನಯಾಚೇನಿ ಮಿಸೇ । ಫಳ ಏಕ ಆವಡೇ ತೈಸೇ । ಭಲತಯಾಚೇ ಹೋ ॥೮೨॥ ಭಕ್ತ ಮಾಝಿಯಾಕಡೇ ದಾವೀ । ಆಣಿ ಮೀ ದೋನ್ಹೀ ಹಾತ ವೊಡವೀ । ಮಗ ದೇಠ ನ ಫೇಡಿತಾ ಸೇವೀ । ಆದರೇಸೀ ॥ ೮೩ ॥ ಪೈ ಗಾ ಭಕ್ತೀಚೇನಿ ನಾವೇ । ಫೂಲ ಏಕ ಮಜದ್ಯಾವೇ । ತೇ ಲೇಬೇ ತರೀ ಮ್ಯಾ ತುರಂಬಾವೇ । ಪರೀ ಮುಖೀಂಚಿ ಘಾಲೀ ॥ ೮೪ ॥ ಹೇ ಅಸೋ ಕಾಯಸೀ ಫುಲೇ । ಪಾನಚಿ ಏಕ ಆವಡತೇ ಜಾಹಾಲೇ । ತೇ ಸಾಜೂಕಹೀ ನ ಹೋ ಸುಕಲೇ । ಭಲತೈಸೇ ॥ ೮೫ ॥ ಪರೀ ಸರ್ವಭಾವೇ ಭರಲೇ ದೇಖೇ । ಆಣಿ ಭುಕೇಲಾ ಅಮೃತೇ ತೋಖೇ । ತೈಸೇ ಪತ್ರಚಿ ಪರೀ ತೇಣೇ ಸುಖೇ । ಆರೋಗೂ ಲಾಗೇ ॥ ೮೬ ॥ ಅಥವಾ ಐಸೇಹೀ ಏಕ ಫುಡೇ । ಜೇ ಪಾಲಾಹೀ ವರೀ ನ ಜೋಡೇ । ತರೀ ಉದಕಾಚೇ ತವಸಾಂಕಡೇ । ನವ್ಹೇಲ ಕೀ ॥ ೮೭ ॥ ತೇ ಭಲತೇಥ ನಿಮೋಲೇ । ನ ಜೋಡಿತಾ ಆಹೇ ಜೋಡಲೇ । ತೇಚಿ ಸರ್ವಸ್ವ ಕರೂನಿ ಅರ್ಪಿಲೇ । ಜೇಣೇ ಮಜ ॥ ೮೮ ॥ ತೇಣೇ ವೈಕುಂಠಾಪಾಸೋನಿ ವಿಠಾಳೇ । ಮಜಲಾಗೀ ಕೇಲೀ ರಾವುಳೇ । ಕೌಸ್ತುಭಾಹೋನಿ ನಿರ್ಮುಳೇ । ಲೇಣೇ ದಿಧಲೀ ॥ ೮೯ ॥ ದುಧಾಚೀ ಸೇಜಾರೇ । ಕ್ಷೀರಾಬ್ಧೀ ಐಸೀ ಮನೋಹರೇ । ಮಜಲಾಗೀ ಅಪಾರೇ । ಸೃಜಿಲೀ ತೇಣೇ ॥ ೯೦ ॥ ಕರ್ಪೂರ ಚಂದನ ಅಗರೂ । ಐಸೆಯಾ ಸುಗಂಧಾಚೇ ಮಹಾಮೇರೂ । ಮಜ ಹಾತಿವಾ ಲಾವಿಲಾ ದಿನಕರೂ । ದೀಪಮಾಳೇ ॥ ೯೧ ॥ ಗರುಡಾಸಾರಿಖೀ ವಾಹನೇ । ಮಜಸುರತರೂಚೀ ಉದ್ಯಾನೇ । ಕಾಮಧೇ ನೂಂಚೀ ಗೋಧನೇ । ಅರ್ಪಿಲೀ ತೇಣೇ ॥ ೯೨ ॥ ಮಜ ಅಮೃತಾಹೂನಿ ಸುರಸೇ । ಬೋನೀ ವ್ಹೋಗರಿಲೀ ಬಹುವಸೇ । ಐಸಾ ಭಕ್ತಾಚೇನಿ ಉದಕಲೀಶೇ । ಪರೀತೋಷೇ ಗಾ ॥ ೯೩ ॥ ಹೇ ಸಾಂಗಾವೇ ಕಾಯ ಕಿರೀಟೀ । ತುವಾಂಚಿ ದೇಖಿಲೇ ಆಪುಲಿಯಾ ದಿಠೀ । ಮೀ ಸುದಾಮಯಾಚಿಯಾ ಸೋಡೀ ಗಾಂಠೀ । ಪವ್ಹಯಾ ಸಾಠೀ ॥ ೯೪ ॥ ಪೈಭಕ್ತೀ ಏಕೀ ಮೀ ಜಾಣೇ । ತೇಥಸಾನೇ ಥೋರ ನ ಮ್ಹಣೇ । ಆಮ್ಹೀ ಭಾವಾಚೇ ಪಾಹುಣೇ । ಭಲತೇಯಾ ॥ ೯೫ ॥ ಯೇರ ಪತ್ರ ಪುಷ್ಪ ಫಳ । ಹೇ ಭಜಾವಯಾ ಮಿಸ ಕೇವಳ । ವಾಂಚೂನಿ ಆಮುಚಿಯಾಲಾಗೀ ನಿಷ್ಕಳ । ಭಕ್ತಿ ತತ್ವ ॥ ೯೬ ॥ ಮ್ಹಣೋನಿ ಅರ್ಜುನಾ ಅವಧಾರೀ । ತೂ ಬುದ್ಧೀ ಏಕೀ ಸೋಪಾರೀ ಕರೀ । ತರೀ ಸಹಜೇ ಆಪುಲಿಯಾ ಮನೋಮುಂದಿರೀ । ನ ವಿಸಂಬೇ ಮಾತೇ ॥ ೯೭ ॥

ಅರ್ಥ— ಆ ಮೇಲೆ ಧೃಢವಾದ ಭಕ್ತಿಯ ಆನಂದದಿಂದ ನನಗೆ ಅರ್ಪಣಮಾಡುವ ನಿಮಿತ್ಯದಿಂದ ಬೇಕಾದ ಗಿಡದ ಬೇಕಾದಂಥ ಫಲವನ್ನು ॥ ೮೨ ॥ ಭಕ್ತನು ನನ್ನ ಮುಂದೆ ಇಟ್ಟರೆ ಅಥವಾ ಇಡುವಷ್ಟರಲ್ಲಿ ನಾನಾಗಿಯೇ ನನ್ನ ಎರಡೂ ಕೈಗಳನ್ನು ಚಾಚಿ ತೆಗಿದುಕೊಳ್ಳುತ್ತೇನೆ. ಮತ್ತು ಅದರ ದೇಟ ಸಹಾ ಸುಲಿಯದೇ ಅದನ್ನು ಆದರದಿಂದ ಸೇವನಮಾಡುತ್ತೇನೆ ಹೀಗೆ ನನಗೆ ಆತುರವು ಉಂಟಾಗುತ್ತದೆ. ॥ ೮೩ ॥ ಆದರೆ ಭಕ್ತಿಭಾವದಿಂದ ನನಗೆ ಯಾರಾದರೂ ಭಕ್ತರು ಒಂದು ವೇಳೆ ಪುಷ್ಪವನ್ನು ಕೊಟ್ಟರೆ ನಿಜವಾಗಿ ನೋಡಿದರೆ ಅದನ್ನು ನಾನು ಮೂಸಿನೋಡಬೇಕು. ಆದರೆ ಅದನ್ನು ಬಿಟ್ಟು ಪ್ರೇಮದ ಭರದಲ್ಲಿ ನಾನು ಬಾಯಿಯಲ್ಲಿಯೇ ಹಾಕಿಕೊಳ್ಳುತ್ತೇನೆ. ॥ ೮೪॥ ಬಹಳ ಹೇಳುವೆದೇನು ಹೂವಿನ ವಿಷಯವಂತೂ ಹಾಗೇ ಇರಲಿ ಆದರೆ ನನಗೆ ಒಂದಾನೊಂದು ಗಿಡದ ಎಲಿಯು ಸಹ ಪ್ರೀಯವಾಗಿರುವದು. ಆ ಮೇಲೆ ಅದು ಯಾವದಾದರು ಗಿಡದ ನವಪಲ್ಲವ ಅಥವಾ ವಣಗಿದ್ದಾಗಿರಲಿ ಯಾವದೇ ಆಗಿರಲಿ, ॥ ೮೫ ॥ ಆದರೆ ಅದು ಭಕ್ತಿಭಾವದಿಂದ ಪರಿಪೂರ್ಣವಾಗಿರುವದೆಂದು ನೋಡಿದಕೂಡಲೆ ಯಾವ ಪ್ರಕಾರಾ ಒಬ್ಬಾನೊಬ್ಬ ಕ್ಷುದಿತ ಮನುಷ್ಯನು ಅಮೃತದಿಂದ ತೃಪ್ತನಾಗುತ್ತಾನೋ, ಅದೇ ಪ್ರಕಾರಾ ಭಕ್ತಿಭಾವದಿಂದ ಪರಿಪೂರ್ಣವಾದ ಆ ವಣಗಿದ

ಪತ್ರವನ್ನೇ ಅಮೃತಸನಾನ ಮಾಡಿ ನಾನು ತಿನ್ನಲಿಕ್ಕೆ ಹತ್ತುತ್ತೇನೆ. ॥ ೮೬ ॥ ಅಥವಾ ಒಂದು ವೇಳೆ ಗಿಡಗಳಿಗೆ ಎಲ್ಲಿಯೂ ಎಲಿಗಳು ಸಹಾ ದೊರಕುವದಿಲ್ಲ ಇಂಥ ಕಠಿಣ ಪ್ರಸಂಗವು ಬಂದೊದಗಿದರೆ, ನೀರು ದೊರಕುವ ಸಂಕಟ ವಂತೂ ಬೀಳಲಿಕ್ಕಿಲ್ಲವಲ್ಲ? ॥ ೮೭ ॥ ಆ ನೀರು ಬೇಕಾದ ಸ್ಥಳದಲ್ಲಿ ಪುಕ್ಕಟೆಯಾಗಿ ಶ್ರಮವಡದೇ ದೊರಕುತ್ತವೆ. ಆ ಜಲವನ್ನೇ ನನಗೆ ಮನೋಭಾವದಿಂದ ಅರ್ಪಣಮಾಡುವದರಿಂದ ॥ ೮೮ ॥ ಅವನು ನನ್ನ ದೆಶೆಯಿಂದ ವೈಕುಂಠದ ಕಿಂತಲೂ ದೊಡ್ಡ ದೇವಾಲಯವನ್ನು ಕಟ್ಟಿಸಿದಂತೆ ಮತ್ತು ಕೌಸ್ತುಭಮಣಿಯಕಿಂತಲೂ ತೇಜಸ್ವಿಯಾದ ರತ್ನಾಭರಣ ಗಳನ್ನು ನನಗೆ ಅರ್ಪಣಮಾಡಿದಂತೆ ಆಗುತ್ತದೆ. ॥ ೮೯ ॥ ಅವನು ಕ್ಷೀರಸಾಗರದಂಥ ನಿರ್ಮಲವಾದ ಹಾಲಿನಿಂದ ತುಂಬಿದ ಮನೋಹರವಾದ ಅಗಣಿತ ಶಯ್ಯಾಸ್ಥಾನಗಳು ನನ್ನ ದೆಶೆಯಿಂದ ನಿರ್ಮಾಣಮಾಡಿದಂತೆ ಆಗಿರುವದು. ॥೯೦॥ ಕರ್ಪೂರ ಚಂದನ ಕಷ್ಣಾಗರು ಇಂಥ ಸುಗಂಧದ ಮಹಾಮೇರುಪರ್ವತದಷ್ಟು ಗುಂಪಿಯನ್ನು ಪಾಕಿ ನನ್ನ ಮುಂದೆ ಕಡ್ಡಿಬತ್ತಿಯನ್ನು ಹಚ್ಚಿ (ಪ್ರಜ್ವಲಿಸಿ) ಸೂರ್ಯನಿಗೆ ದೀಪಮಾಲೆ ಬೆಳಗಿದಂತೆ ಇರುತ್ತದೆ. ॥ ೯೧ ॥ ಅವನು ಗರುಡನ ಸಮಾನವಾದ ವಾಹನವು ಕಲ್ಪತರುವಿನ ತೋಟವು ಮತ್ತು ಕಾಮಧೇನುವಿನ ಹಿಂಡುಗಳ ಸಮುದಾಯವನ್ನು ನನಗೆ ಅರ್ಪಣಮಾಡಿದಂತೆ ಇರುತ್ತದೆ. ॥ ೯೨ ॥ ನನಗೆ ಅಮೃತದಕಿಂತಲೂ ರುಚಿಕರವಾದ ಅನೇಕ ತರದ ಪಕ್ವಾನ್ನಗಳನ್ನು ಉಣಬಡಿಸುವದರಿಂದ ಯಾವ ಸಂತೋಷವು ಆಗುತ್ತದೆ, ಅದು ಇಂಥ ಭಕ್ತಿಯುಕ್ತ ಅಂತಃಕರಣದಿಂದ ಭಕ್ತರು ಅರ್ಪಣಮಾಡಿದ ನೀರಿನ ಹನಿಗಳಿಂದಲೇ ನನಗೆ ಆಗುತ್ತದೆ. ॥ ೯೩ ॥ ಎಲೋ ಕಿರೀಟಿ! ಬಹಳ ಹೇಳುವದೇನು ನನಗೆ ಅರ್ಪಣಮಾಡುವ ಉದ್ದೇಶ್ಯದಿಂದ ತನ್ನ ಬಡತನವ ಸಲುವಾಗಿ ಮುಗ್ಧನುಚ್ಛ ಅವಲಕ್ಕಿಯನ್ನು (ಹರಕು ಅರಿವೆಯಲ್ಲಿ) ಗಂಟುಕಟ್ಟಿಕೊಂಡು ಸುದಾಮನು ಪ್ರೀತಿಯಿಂದ ಬಗಲಲ್ಲಿ ಇಟ್ಟುಕೊಂಡು ತಂದಿದ್ದನು, ಅವನ ಆ ಗಂಟನ್ನು ನಾನು ಲಗುಬಗೆಯಿಂದ ಬಿಚ್ಚಿ ನೋಡಿ (ದುಷ್ಕಾಳಪೀಡಿತ ದರಿದ್ರನಂತೆ ಭಕ್ಷಿಸಿದೆನು.) ಅದನ್ನು ನೀನು ನಿನ್ನ ಪ್ರತ್ಯಕ್ಷ ಕಣ್ಣಿನಿಂದ ನೋಡಿರುವದಿಲ್ಲೇನು? ॥ ೯೪ ॥ ಆದುದರಿಂದ ನಾನು ನಿಜವಾಗಿ ಭಕ್ತಿಯೊಂದನ್ನೇ ತಿಳಿಯುತ್ತೇನೆ. ಆ ಸ್ಥಳದಲ್ಲಿ ಇದು ದೊಡ್ಡದು ಸಣ್ಣದೆಂಬ ಭಾವನೆಯನ್ನು ನನ್ನ ಮನಸ್ಸಿನಲ್ಲಿ ತರುವದಿಲ್ಲ. ಮತ್ತು ಬೇಕಾದವರು ಯಾಕಾಗ ಲೊಲ್ಲರು ನನ್ನ ವಿಷಯವಾಗಿ ಅನನ್ಯಭಾವವಿದ್ದರೆ ನಾವು ಅವರ ಮನೆಯ ಬೀಗರಾಗಿದ್ದೇವೆ. ॥ ೯೫ ॥ ಆದರೆ ಪತ್ರ, ಪುಷ್ಪ, ಫಲ ಇವುಗಳು ನಮ್ಮ ಭಕ್ತಿಯನ್ನು ಮಾಡುವದರ ದೆಶೆಯಿಂದ ಕೇವಲ ನಿಮಿತ್ಯಮಾತ್ರವಾಗಿರುತ್ತವೆ. ನಿಜವಾಗಿ ನೋಡಿದರೆ ನಿಷ್ಕಲಂಕವಾದ ಭಕ್ತಿಯು ಇದು ನನ್ನ ಪ್ರಾಪ್ತಿಯ ಮುಖ್ಯ ಸಾಧನವಾಗಿರುತ್ತದೆ. ಭಕ್ತಿತತ್ವದವಿನಃ ನಿಃಕ್ಯಳಿದ ಸರ್ವ ಪೂಜಾಸಾಮಗ್ರಿಗಳು ನಾವು ನ್ಯರ್ಥವಾಗಿರುವವೆಂದು ತಿಳಿಯುತ್ತೇವೆ. ॥ ೯೬ ॥ ಆದುದರಿಂದ ಅರ್ಜುನನೇ ಕೇಳು! ನಿನ್ನ ಬುದ್ಧಿಯನ್ನು ನಿನ್ನ ಸ್ವಾಧೀನಮಾಡಿಕೊಂಡು ಯಾವಾಗಲೂ ನಿನ್ನ ಮನೋರೂಪ ಮಂದಿರದಲ್ಲಿ ನನ್ನ ವಿಸ್ಮೃತಿ ಆಗಗೊಡಬೇಡ ಕಂಡಿಯಾ ! ॥ ೯೭ ॥

ಯತ್ಕರೋಷಿ ಯದಶ್ನಾಸಿ ಯಜ್ಜುಹೋಷಿ ದದಾಸಿ ಯತ್ ।
ಯತ್ತಪಸ್ಯಸಿ ಕೌಂತೇಯ ತತ್ಕುರುಷ್ವ ಮದರ್ಪಣಂ ॥ ೨೭ ॥

[ಯತ್ಕರೋಷಿ ಯದಶ್ನಾಸೀತಿ] ಜೇ ಜೇ ಕಾಹೀ ವ್ಯಾಪಾರ ಕರಿಸೀ । ಕಾ ಭೋಗಹನ ಭೋಗಿಸೀ ಅಥವಾ ಯಜ್ಞೀ ಯಜಿಸೀ । ನಾನಾವಿಧೀ ॥ ೪೯೪ ॥ ನಾತರೀ ಪಾತ್ರು ವಿಶೇಷೀ ದಾನೇ । ಕಾ ಸೇವಕಾ ದೇಸೀ ಜೀವನೇ । ತಪಾದಿ ಹನ ಸಾಧನೇ । ವ್ಯತೇ ಕರಿಸೀ ॥ ೪೯೫ ॥ ತೇ ಕ್ರಿಯಾಜಾತ ಆಘವೇ । ಜೈಸೇ ನಿಪಜೇಲ ಸ್ವಭಾವೇ । ತೇ ಭಾವನಾ ಕರೋನಿ ಕರಾವೇ । ಮಾಯಿಯಾ ಮೋಹಹರಾ ॥ ೪೦೦ ॥ ಪರೀ ಸರ್ವಥಾ ಆಪುಲೇ ಜೀವೀ । ಕೇಲಿಯಾಚೀ ಸೇ ಕಾಂಹೀಚೀ ನುರವೀ । ಐಸೀ ಧುವೋನಿ ಕರ್ಮೇ ದ್ಯಾವೀ । ಮಾಯಿಯಾ ಹಾತೀ ॥ ೪೦೧ ॥

ಅರ್ಥ— ಇಷ್ಟರ ದೆಶೆಯಿಂದ ನೀನು ಯಾವ ಯಾವದು ಏನಾದರೂ ಉದ್ಯೋಗ ಮಾಡುವಿ ಅಥವಾ ವಿಶೇಷ ವಾಗಿ ಅನೇಕ ಪ್ರಕಾರದ ಯಜ್ಞಗಳಿಂದ ನನ್ನಯಜನ ಮಾಡಬಹುದು, ॥ ೪೯೪ ॥ ಇಲ್ಲವೇ ಸತ್ಪಾತ್ರದಲ್ಲಿ ಯಾವ

ಯಾವ ದಾನಗಳನ್ನು ಮಾಡುವಿ, ಅಥವಾ ಸೇವಾ ಮಾಡುವ ಮನುಷ್ಯರಿಗೆ ಯಾವ ಯಾವ ವೇತನಗಳನ್ನು ಕೊಡುತ್ತಿರುವಿ, ಮತ್ತು ಯಾವ ತಪಶ್ಚರ್ಯ ಮುಂತಾದ ಸಾಧನಗಳು ಮತ್ತು ವ್ರತಗಳನ್ನು ಮಾಡುತ್ತಿರುವಿ, ॥ ೩೯ ॥ ಅವು ನಿನ್ನ ಕೈಯಿಂದ ಸಹಜವಾಗಿ ಆಗುವ ಸರ್ವ ಕರ್ಮಗಳು ನೀನು ನಂನ ಉದ್ದೇಶದಿಂದ ಭಕ್ತಿಯುಕ್ತ ಅಂತಃಕರಣ ಪೂರ್ವಕವಾಗಿ ಮಾಡುವವನಾಗು. ॥ ೪೦ ॥ ಆದರೆ ಆ ಕರ್ಮಗಳನ್ನು ನಾನು ಮಾಡಿದೆನೆಂಬ ಕರ್ತೃತ್ವದ ಸಂಶಯವು (ಅಹಂತಾ) ಮೂಲತಃ ನಿನ್ನ ಮನಸಿನಲ್ಲಿ ತರಬೇಡ. ಈ ಪ್ರಕಾರಾ ಸರ್ವ ಕರ್ಮಗಳನ್ನು (ಕರ್ತೃತ್ವ ಅಭಿಮಾನರಹಿತನಾಗಿ) ನಿಷ್ಕಾಮ ಬುದ್ಧಿಯಿಂದ ಮಾಡಿದ ನಿರ್ಮಲವಾದ ಕರ್ಮಗಳನ್ನು ನನಗೆ ಅರ್ಪಣ ಮಾಡುವವನಾಗು. ॥ ೪೧ ॥

ಶುಭಾಶುಭಫಲೈರೇವಂ ಮೋಕ್ಷ್ಯಸೇ ಕರ್ಮಬಂಧನೈಃ ।
ಸಂನ್ಯಾಸಯೋಗಯುಕ್ತಾತ್ಮಾ ವಿಮುಕ್ತೋ ಮಾಮುಪೈಷ್ಯಸಿ ॥ ೨೮ ॥

[ಶುಭಾಶುಭೇತಿ] ಮಗ ಅಗ್ನಿಕುಂಡೀ ಬೀಜೇ ಘಾತಲೀ । ತಿಯೇ ಅಂಕುರದಶೇ ಜೇವೀ ಮುಳಲೀ । ತೇವೀ ನ ಫಳತೀಚಿ ಮಜ ಅರ್ಪಿಲೀ । ಶುಭಾಶುಭೇ ॥ ೨ ॥ ಆಗಾ ಕರ್ಮೀ ಜೈ ಉರಾವೇ । ತೈ ತಿಹೀ ಸುಖದುಃಖೀ ಫಳಾವೇ । ಆಣಿ ತಯಾತೇ ಭೋಗಾವಯಾ ಯಾವೇ । ದೇಹಾ ಏಕಾ ॥ ೩ ॥ ತೇ ಉಗಾಣಿಲೇ ಮಜಕರ್ಮ । ತೆಂವ್ಹಾಚಿ ಪುಸಿಲೇ ಮರಣ ಜನ್ಮ । ಜನ್ಮಾ ಸವೇ ಶ್ರಮ । ವರಚಿಲಹೀ ಗೇಲೇ ॥ ೪ ॥ ವ್ಹಾಣವೂನಿ ಅರ್ಜುನಾ ಯಾ ಪರೀ । ಪಾಹೇಚಾವೇಳ ನವ್ಹೇಲ ಭಾರೀ । ಹೇ ಸಂನ್ಯಾಸ ಯುಕ್ತಿ ಸೋಪಾರೀ । ದಿಧಲೀ ತುಜ ॥ ೫ ॥ ಯಾದೇಹಾಚಿಯೇ ಬಾಂದೋಡೀ ನ ಪಡಿಜೇ । ಸುಖದುಃಖಾಂಚಿಯಾ ಸಾಗರೀ ನ ಬುಡಿಜೇ । ಸುಖೇ ಸುಖರೂಪಾ ಧಾಡಿಜೇ । ಮಾಝಿಯಾಂಚಿ ಆಂಗಾ ॥ ೬ ॥

ಅರ್ಥ— ಆ ಮೇಲೆ ಅಗ್ನಿಯಲ್ಲಿ ಹುರಿದ ಬೀಜಗಳಿಗೆ ಅಂಕುರವು ಹುಟ್ಟುವದಿಲ್ಲ ಅದೇ ಪ್ರಕಾರ ನನಗೆ ಅರ್ಪಣ ಮಾಡಿದ ಶುಭಾಶುಭ ಕರ್ಮಗಳ ಫಲಪ್ರಾಪ್ತಿಯು ನಿನಗೆ ಆಗಲಾರದು. ॥ ೪೨ ॥ ಎಲೋ ! ನೊದಲಿಗೆ ಕರ್ಮವು ಉಳದಿದ್ದರೆ ಮಾತ್ರ ಆ ಕರ್ಮದಿಂದ ಸುಖದುಃಖರೂಪಿ ಫಲಗಳು ಉಂಟಾಗುವವು, ಮತ್ತು ಆ ಸುಖದುಃಖಗಳು ಭೋಗಿಸುವದರದೆಶೆಯಿಂದ ಜನ್ಮ ತೆಗೆದುಕೊಳ್ಳಬೇಕಾಗುವದು. ॥ ೪೩ ॥ ಹೀಗೆ ರೀತಿ ಅದೆ. ಆದರೆ ಅದೇ ಕರ್ಮಗಳನ್ನು ನನಗೆ ಅವರು ಅರ್ಪಣ ಮಾಡುವದರಿಂದ ಅವರ ಜನನ ಮರಣಗಳು ತಪ್ಪಿ ಹೋಗುತ್ತವೆ. ಮತ್ತು ಜನ್ಮ ಪ್ರಾಪ್ತಿ ಆದನಂತರ ಬರುವ ಯಾವ ದುಃಖಗಳು ಅವುಗಳಾದರೂ ತಮ್ಮಿಂದ ತಾನೇ ನಾಶವಾಗಿ ಹೋಗಿರುವವು. ॥೪೪॥ ಆದುದರಿಂದ ಅರ್ಜುನನೇ ! ಈ ಹೇಳಿದ ಸುಲಭವಾದ ಸನ್ಯಾಸದ ಯುಕ್ತಿಯನ್ನು ಇನ್ನುಮೇಲೆ ಮಾಡಿ ನೋಡೋಣ ವೆಂದು ಆಲಸ್ಯತನದಿಂದ ಕಾಲ ಕಳಿಯುವಂಥಾದ್ದು ಇರುವದಿಲ್ಲ. ॥ ೪೫ ॥ ಈ ಯುಕ್ತಿಯಿಂದ ದೇಹಬಂಧನದಲ್ಲಿ ಬೀಳದೇ ಮತ್ತು ಸುಖ ದುಃಖದ ಸಮುದ್ರದಲ್ಲಿ ಮುಳಗದೇ, ಅನಾಯಾಸದಿಂದ ಸುಖಸ್ವರೂಪನಾದ ಆ ನನ್ನ ಸ್ವರೂಪದಲ್ಲಿ ನಿಮಗ್ನನಾಗಿ ಹೋಗು. ॥ ೪೬ ॥

ಸಮೋಽಹಂ ಸರ್ವಭೂತೇಷು ನ ಮೇ ದ್ವೇಷ್ಯೋಽಸ್ತಿ ನ ಪ್ರಿಯಃ ।
ಯೇ ಭಜಂತಿ ತು ಮಾಂ ಭಕ್ತ್ಯಾ ಮಯಿ ತೇ ತೇಷು ಚಾಪ್ಯಹಂ ॥ ೨೯ ॥

[ಸಮೋಽಹಂ ಸರ್ವಭೂತೇಷ್ವಿತಿ] ತೋ ಮೀ ಪುಸಿಲೇ ಕೈಸಾ । ತರೀ ಜೋ ಸರ್ವ ಭೂತೀ ಸದಾ ಸರಿಸಾ । ಜೇಥ ಆಪ ಪರ ಐಸಾ । ಭಾಗ ನಾಹೀ ॥ ೪೭ ॥ ಜೇ ಐಸಿಯಾ ಮಾತೇ ಜಾಣೋನಿ । ಅಹಂಕಾರಾಚಾ ಕುರುಠಾ ಮೋಡೋನಿ । ಜೇ ಜೀವೇ ಕರ್ಮೆ ಕರೂನಿ । ಮಾತೇ ಭಜಲೇ ॥ ೪೮ ॥ ತೇ ವರ್ತತ ದಿಸತೀ ದೇಹೀ । ಪರೀ ತೇ ದೇಹೀ ನಾ ಮಾಝ್ಯಾ ಠಾಯೀ ।

ಆಣಿ ಮೀ ತಯಾಂಚ್ಯಾ ಹೃದಯೀ । ಸಮಗ್ರ ಅಸೇ ॥ ೪೦೯ ॥ ಸವಿಸ್ತರ ವಟವೃಕ್ಷ ಜೈಸೇ । ಬೀಜಕಣಿಕೇಮಾಜೀ ಐಸೇ । ಆಣಿ ಬೀಜ ಕಣನಸೇ । ವಟೇ ಜೇವೀ ॥ ೪೧೦ ॥ ತೇವೀ ಆಮ್ಹಾ ತಯಾ ಪರಸ್ಪರೇ । ಬಾಹೇರ ನಾಮಾಂಚೀ ಅಂತರೇ । ವಾಂಚೂನಿ ಆಂತುನಚಿ ವಸ್ತು ವಿಚಾರೀ । ಮೀ ತೇಚಿ ತೇ ॥ ೪೧೧ ॥ ಆಕಾ ಜಾಯಾಂಚೇ ಜೈಸೇ ಲೇಣೇ । ಅಂಗಾವರೀ ಆಹಾಚ ವಾಣೇ । ತೈಸೇ ದೇಹ ಧರಣೇ । ಉದಾಸ ತಯಾಂಚೇ ॥ ೪೧೨ ॥ ಪರಿಮಳ ನಿಘಾಲಿಯಾ ಪವನಾ ಪಾಠೀ । ಮಾಗೇ ವೋಸಪೂಲ ರಾಹೇ ದೇಠೀ । ತೈಸೇ ಆಯುಷ್ಯಾಚಿಯೇ ಮುಠೀ । ಕವಳ ದೇಹ ॥ ೪೧೩ ॥ ಯೇರ ಅವಘ್ಯಾಂಭ ಜೋ ಆಘವಾ । ತೋ ಆರೂಢೋನಿ ಮದ್ಭಾವಾ । ಮಜಚಿ ಆಂತ ಪಾಂಡವಾ । ಪೈಠಾ ಜಾಹಲಾ ॥ ೪೧೪ ॥

ಅರ್ಥ— ಆ ನಾನು ಹ್ಯಾಗೆ ಇರುವೆನೆಂದು ವಿಚಾರಿಸಬಹುದು ಆದರೆ ಸರ್ವ ಪ್ರಾಣಿಗಳಲ್ಲಿ ಸಮಾನವಾಗಿ ವ್ಯಾಪಕನಾಗಿದ್ದೇನೆ. ಅಲ್ಲಿ ಇದು ನನ್ನದು ಪರರದು ಅಂಬುವ ಭೇದವು ಇರುವದಿಲ್ಲ. ॥ ೪೦೭ ॥ ಯಾರು ಇಂಥ ಪ್ರಕಾರದ ನನ್ನ ವ್ಯಾಪಕ ಸ್ವರೂಪವನ್ನು ತಿಳಿದು ಕರ್ತತ್ವದ ಅಹಂಕಾರದ ಬೀಜವನ್ನೇ ಅಳಿದು ಕಾಯಾವಾಚಾ ಮನಸಿನಿಂದ ನನ್ನನ್ನು ಭಜಿಸುತ್ತಾರೆ. ॥ ೪೦೮ ॥ ಅವರು ಜಗತ್ಯದಲ್ಲಿ ದೇಹದಿಂದಾ ವ್ಯವಹಾರ ಮಾಡುವದೇನೋ ನಿಜ. ಆದಾಗ್ಯೂ ದೇಹದಲ್ಲಿರದೇ ಅವರ ಚಿತ್ತವು ನನ್ನಲ್ಲಿಯೇ ಲೀನವಾಗಿರುತ್ತದೆ ಮತ್ತು ನಾನಾದರೂ ಸಂಪೂರ್ಣವಾಗಿ ಅವರ ಹೃದಯದಲ್ಲಿಯೇ ವಾಸವಮಾಡಿರುತ್ತೇನೆ. ॥ ೪೦೯ ॥ ಯಾವ ಪ್ರಕಾರಾ ವಟವೃಕ್ಷದ ದೊಡ್ಡಗಿಡವು ಬೀಜದಲ್ಲಿ ಮತ್ತು ಬೀಜವು ಆ ಗಿಡದಲ್ಲಿಯೇ ಅಡಗಿರುತ್ತವೆ. ॥ ೪೧೦ ॥ ಆದೇ ಪ್ರಕಾರ ನನ್ನಲ್ಲಿ ಅವರಲ್ಲಿ ಕೇವಲ ಹೆಸರಿನಿಂದಲೇ ಅಂತರ ವಿರುತ್ತದೆ. ಅಂತಃಸ್ಥಿತಿಯ ವಿಚಾರ ಮಾಡಿ ನೋಡಿದರೆ ಅವರು ಮತ್ತು ನಾನು ಒಂದೇ ಆಗಿದ್ದೇನೆ. ॥ ೪೧೧ ॥ ಈಗ ಪರ ಜನರ ಒಡವೆ ಅಲಂಕಾರಗಳನ್ನು ಬೇಡಿ ತಂದು ಮೈಮೇಲೆ ಹಾಕಿಕೊಳ್ಳುವದು ಹ್ಯಾಗೆ ವ್ಯರ್ಥವಾಗಿರುವದೋ, ಅದರಂತೆ ಅವನ ದೇಹಧಾರಣವು ಉದಾಸೀನವಾಗಿರುವದು. ॥ ೪೧೨ ॥ ಗಾಳಿಯು ತನ್ನ ಸಂಗಡ ಪುಷ್ಪದೊಳಗಿನ ಸರ್ವ ಸುಗಂಧವನ್ನು ತೆಗಿದುಕೊಂಡು ಹೋದ ಮೇಲೆ ಕೇವಲ ದೇಟಿಗೆ ಸುಗಂಧಶೂನ್ಯವಾದ ಪುಷ್ಪವು ಉಳಿಯುತ್ತದೆ ಅದೇ ಪ್ರಕಾರಾ ಭಕ್ತನ ದೇಹವು (ಅವಶೇಷ ಪ್ರಾರಬ್ಧದ ಭೋಗಾರ್ಥವಾಗಿ) ಆಯುಷ್ಯ ಮರ್ಯಾದೆಯನ್ನು ಹಿಡಿದು ನಿಲ್ಲಿಸಿ ಬಿಡುತ್ತದೆ. ॥ ೪೧೩ ॥ ಎಲೈ ಪಾಂಡು ಪುತ್ರನೇ ! ಅವನ ಸರ್ವ ದೇಹ ಅಹಂಕಾರವು ನನ್ನ ಸ್ವರೂಪದಲ್ಲಿ ಬಂದು ಸೇರಿ ಭಕ್ತಿಗೆ ಅನುಸರಿಸಿ ನನ್ನಲ್ಲಿಯೇ ಕೂಡಿ ಹೋಗುತ್ತದೆ. ॥ ೪೧೪ ॥

ಅಪಿ ಚೇತ್ಸುದುರಾಚಾರೋ ಭಜತೇ ಮಾಮನನ್ಯಭಾಕ್ ।
ಸಾಧುರೇವ ಸ ಮಂತವ್ಯಃ ಸಮ್ಯಗ್ವ್ಯವಸಿತೋ ಹಿಸಃ ॥ ೩೦ ॥

[**ಅಪಿಚೇತ್ಸು ದುರಾಚಾರ ಇತಿ**] ಐಸೇ ಭಜತೇನಿ ಪ್ರೇಮ ಭಾವೇ । ಜಯಾ ಶರೀರಹೀ ಪಾಠೀ ನಪವೇ । ತೇಣೇ ಭಲತಯಾ ವ್ಹಾನೇ । ಜಾತೀಚಿಯಾ ॥ ೪೧೫ ॥ ಆಣಿ ಆಚರಣ ಪಾಹಾತಾ ಸುಭಟಾ । ತೋ ದುಷ್ಕೃತಾಚಾ ಕೀರ ಸೇಲ ವಾಂಟಾ । ಪರೀ ಜೀವಿತ ವೇಂಚಿಲೇ ಚೋಹಟಾ । ಭಕ್ತೀಚಿಯಾ ಕೀ ॥ ೪೧೬ ॥ ಅಗಾ ಅಂತೀಚಿಯಾ ಮತೀ । ಸಾಡಪಣ ಪುಢಿಲೇಗತಿ । ವ್ಹಾಣೋನಿ ಜೀವಿತ ಜೇಣೇ ಭಕ್ತೀ ! ದಿಧಲೇ ಶೇಖೀ ॥ ೪೧೭ ॥ ತೋ ಆಧೀ ಜರೀ ದುರಾಚಾರೀ ! ತರೀ ಸರ್ವೋತ್ತಮಚಿ ಅವಧಾರೀ । ಜೈಸಾ ಬುಡಾಲಾ ಮಹಾಪೂರೀ । ನ ಮರತ ನಿಘಾಲಾ ॥ ೪೧೮ ॥ ತಯಾಜೇ ಜೀವಿತ ಐಲ ಥಡಿ ಯೇ ಆಲೇ । ವ್ಹಣೋನಿ ಬುಡಾಲೇ ಪಣ ವಾಯಾಗೇಲೆ । ತೇವೀ ನುರೇಚಿ ಪಾಪ ಕೇಲೇ । ಶೇವಟಲಿಯೇ ಭಕ್ತೀ ॥ ೪೧೯ ॥ ಯಾಲಾಗೀ ದುಷ್ಕೃತೀ ಜರ್ಝೀ ಜಾಹಾಲಾ । ತರೀ ಅನುತಾಪ ತೀರ್ಥೀ ನ್ಹಾಲಾ । ನ್ಹಾವೂನಿ ಮಜ ಆಂತ ಆಲಾ । ಸರ್ವಥಾನೇ ॥ ೪೨೦ ॥ ತರೀ ಆತಾ ಪವಿತ್ರ ತಯಾಜೇ ಕುಳ । ಅಭಿಜಾತ್ಯ ತೇಂಚಿ ನಿರ್ಮಳ । ಜನ್ಮಲೇಯಾಜೇ

ಫಳ । ತಯಾಸೀಚ ಜೋಡಲೇ ॥ ೨೧ ॥ ತೋಸಕಳಹೀ ಪಢಿನ್ನಲಾ । ತಪೇ ತೋಚಿ ತಪಿನ್ನಲಾ । ಅಷ್ಟಾಂಗ ಅಭ್ಯಾಸಿಲಾ । ಯೋಗ ತೇಣೇ ॥ ೨೨ ॥ ಹೇ ಅಸೋ ಬಹುತ ಪಾರ್ಥಾ । ತೋ ಉತರಲಾ ಕರ್ಮೇ ಸರ್ವಥಾ । ಜಯಾಚೀ ಅಖಂಡ ಗಾ ಆಸ್ಥಾ । ಮಜಚಿ ಲಾಗೀ ॥ ೨೩ ॥ ಅವಧಿಯಾ ಮನೋ ಬುದ್ಧೀಚಿಯಾ ರಾಹಟೇ । ಭರೋನಿ ಏಕ ನಿಷ್ಠೇಚೀ ಪೇಟೇ । ಮಜ ಮಾಜೀ ಕಿರೀಟೇ । ನಿಕ್ಷೇಪಿಲೀ ಜೇಣೇ ॥ ೨೪ ॥

ಅರ್ಥ— ಹೀಗೆ ಪ್ರೇಮಭಾವದಿಂದ ನನ್ನನ್ನು ಭಜಿಸುತ್ತಿರಲು ಅವರಿಗೆ ತಿರುಗಿ ಈ ಶರೀರವು ಪ್ರಾಪ್ತಿಯಾಗುವದಿಲ್ಲ. ಅವರು ಬೇಕಾದಂಥ ಜಾತಿಯವರಾಗಿದ್ದರೂ ಇರಲಿ, ॥ ೧೫ ॥ ಆದರೆ ಎಲೋ ಮಹಾವೀರನೇ ! ಅವನು ಪಾಪಾಚರಣೆಯನ್ನು ಮಾಡುವದರಲ್ಲಿ ಮೊದಲನೇಯವನು ಶ್ರೇಷ್ಠನಾಗಿದ್ದರೂ ತನ್ನ (ಉಳಿವ) ಆಯುಷ್ಯವನ್ನು ನನ್ನ ಭಕ್ತಿ ಮಾರ್ಗದಲ್ಲಿಯೇ ವಿನಿಯೋಗ ಮಾಡಿರುತ್ತಾನೆ. ॥ ೧೬ ॥ ಎಲೋ ! ಮರಣಕಾಲದಲ್ಲಿ ಯಾವ ವಾಸನಾದಲ್ಲಿ ಬದ್ಧಿಯು ತೊಡಕಿರುತ್ತದೆ. ಆ ವಾಸನಾನುರೂಪವಾಗಿ ಮುಂದೆ ಜನ್ಮ ದೊರಕುತ್ತದೆ. ಈ ಕಾರಣದ ದೆಶೆಯಿಂದಾ ಯಾವನು ತನ್ನ ಪ್ರಾಣವನ್ನು ಕೊನೆಗೆ ನನ್ನ ಭಕ್ತಿಯಲ್ಲಿಯೇ ಅರ್ಪಣಮಾಡಿದನು, ॥ ೧೭ ॥ ಅವನು ಪೂರ್ವ ವಯದಲ್ಲಿ ದುರಾಚಾರಿಯಾಗಿದ್ದರೂ ಅವನು ಸರ್ವೋತ್ತಮನೆಂದು ನಂಬು. ಯಾವನಾದರೊಬ್ಬ ಮನುಷ್ಯನು ಮಹಾಪೂರದೊಳಗಿಂದ ಮುಳುಗುತ್ತಿರಲು ಅವನು ಮರಣ ಹೊಂದದೆ ಪಾರಾಗಿ ಬಂದರೆ, ॥ ೧೮ ॥ ಹೇಗೆ ಅವನ ಮುಳಗುವದು ವ್ಯರ್ಥವಾಗಿ ಆಚಿದಂಡೆಗೆ ಹೋಗಿ ಮುಟ್ಟುವನೋ, ಅವೆ ಪ್ರಕಾರಾ ಮೊದಲು ಮಾಡಿದ ಪಾಪವು ಕೊನೆಗೆ ಭಕ್ತಿಮಾಡುದರಿಂದ ಉಳಿಯುವದೇ ಇಲ್ಲ. (ನಾಶವಾಗುತ್ತದೆ.) ॥ ೪೧೯ ॥ ಈ ಕಾರಣದಿಂದ ಮೊದಲು ದುರಾಚಾರಿ ಇದ್ದರೂ ಅವರು ಪಶ್ಚಾತ್ತಾಪರೂಪಿ ತೀರ್ಥದಲ್ಲಿ ಸ್ನಾನಮಾಡಿ ಸರ್ವಭಾವನೆಯಿಂದ ನನಗೆ ಅನನ್ಯ ಶರಣು ಬರುತ್ತಾರೆ. ॥ ೨೦॥ ಆದರೆ ಅವನ ಕುಲವು ಪವಿತ್ರವಾಗಿರುತ್ತದೆ. ಅದರಂತೆ ಶುದ್ಧ ಶ್ರೇಷ್ಠ ಕುಲೀನತ್ವವು ಮತ್ತು ಜನ್ಮಕ್ಕೆ ಬಂದ ಫಲವು ಅವನಿಗೇ ದೊರಕಿರುವದು. ॥ ೪೨೧ ॥ ಅವನೇ ಸರ್ವ ಶಾಸ್ತ್ರಗಳ ಅಧ್ಯಯನ ಮಾಡಿದನು. ಮತ್ತು ತಪಶ್ಚರ್ಯದ ಆಚರಣ ಮಾಡಿದನು. ಆಸನ ಮುಂತಾದ ಅಷ್ಟಾಂಗ ಯೋಗದ ಅಭ್ಯಾಸನಮಾಡಿದ ಶ್ರೇಯವು, ಅವನಿಗೇ ಪ್ರಾಪ್ತವಾಗಿರುವದು. ॥ ೪೨೨ ॥ ಅರ್ಜುನನೇ ! ಈ ವರ್ಣನವು ಸಾಕು. ಯಾವನ ಪ್ರೇಮವು ಯಾವಾಗಲೂ ನನ್ನಲ್ಲಿಯೇ ನೆಲೆಗೊಂಡದೆ, ಅವನು ಸಂಪೂರ್ಣವಾಗಿ ಕರ್ಮರೂಪಿ ಬಂಧನದಿಂದ ಮುಕ್ತನಾಗಿರುವನು. ॥ ೪೨೩ ॥ ಎಲೈ ಅರ್ಜುನನೇ ! ಯಾವನು ತನ್ನ ಮನಬುದ್ಧಿಯ ಸರ್ವ ವ್ಯವಹಾರಗಳು ನನ್ನ ವಿಷಯದಲ್ಲಿ ಇರುವ ಅವನ ಏಕನಿಷ್ಠ ಪ್ರೇಮದ ಪಟ್ಟಗೆಯಲ್ಲಿ ತುಂಬಿ ಆ ಪೆಟ್ಟಿಗೆಯನ್ನು ನನ್ನ ಸ್ವಾಧೀನದಲ್ಲಿಯೇ ಇಟ್ಟುಬಿಟ್ಟಿದ್ದಾನೆ. ॥ ೪೨೪ ॥

ಕ್ಷಿಪ್ರಂ ಭವತಿ ಧರ್ಮಾತ್ಮಾ ಶಶ್ವಚ್ಛಾಂತಿಂ ನಿಗಚ್ಛತಿ ।
ಕೌಂತೇಯ ಪ್ರತಿಜಾನೀಹಿ ನ ಮೇ ಭಕ್ತಃ ಪ್ರಣಶ್ಯತಿ ॥ ೩೧ ॥

[ಕ್ಷಿಪ್ರಂ ಭವತಿ ಧರ್ಮಾತ್ಮೇತಿ] ತೋ ಆತಾ ಅವಸರೇ ಮಜಸಾರಿಖಾ ಹೋಈಲ । ಐಸಾ ಹನಭಾವ ತುಜ ಜಾಇಲ । ಹಾಗಾ ಅಮ್ಯುತಾ ಆಂತ ರಾಹೀಲ । ತಯಾ ಮರಣ ಕೈಂಚೇ ॥ ೨೫ ॥ ಪೈ ಸೂರ್ಯ ಜೋ ನೇಳೂ ನುದೈಜೇ । ತಯಾ ನೇಳಾ ಕೀ ರಾತ್ರಿ ಮ್ಹಣಿಜೇ । ತೇವೀ ಮಾಝಿಯೇ ಭಕ್ತೀವಿಣ ಜೇ ಕೀಜೇ । ತೇ ಮಹಾಪಾಪ ನೋಹೇ ॥ ೨೬ ॥ ಮ್ಹಣೋನಿ ತಯಾಚಿಯಾ ಚಿತ್ತಾ । ಮಾಝಿ ಜವಳಿಕ ಪಾಂಡುಸುತಾ । ತೆಂವ್ಹಾಂಚಿ ತೋ ತತ್ವತಾ । ಸ್ವರೂಪ ಮಾಝೀಚ ॥ ೨೭ ॥ ಜೈಸಾ ದೀಪೇ ದೀಪಲಾವಿಜೇ । ತೇಥ ಆದೀಲ ಕೋಣ ಹೇ ನೋಳಖಿಜೇ । ತೈಸಾ ಸರ್ವಸ್ವೇ ಜೋ ಮಜ ಭಜೇ । ತೋ ಮೀಚಿ ಹೋವೂನಿ ಠಾಕೇ ॥೨೮॥ ಮಗ ಮಾಝೀ ನಿತ್ಯಶಾಂತಿ । ತಯಾ ತೇಚಿ ಕಾಂತೀ । ಕಿಂಬಹುನಾ ಜಿತೀ । ಮಾಝೀನಿ ಜೀವೇ ॥ ೨೯ ॥ ಏಥ ಪಾರ್ಥಾ ಪುಢತ ಪುಢತೀ । ತೇಂಚಿ ತೇ

ಸಾಂಗೋ ಕತೀ । ಜರೀ ಮಿಯಾಚಾಡ ತರೀ ಭಕ್ತೀ । ನ ವಿಸಂಬಿಜೇ ಗಾ ॥ ೪೩೦ ॥ ಅಗಾ ಕುಳಾಚಿಯಾ ಚೋಖಟ ಪಣಾ ನ ಲಗಾ । ಅಭಿಜಾತ್ಯ ಝುಣೇ ಶ್ಲಾಘಾ । ವ್ಯತ್ಪತ್ತೀಚಾ ವಾವುಗಾ । ಸೋಸ ಕಾ ವಾಹಾವಾ ॥ ೩೧ ॥ ಕಾ ರೂಪ ವಯಸಾ ಮಾಜಾ । ಆಥಿಲೇ ಪಣೇ ಕಾ ಗಾಜಾ । ಏಕ ಭಾವ ನಾಹಿ ಮಾಝಾ । ತರೀ ಪಾಲ್ಹಾಳ ತೇ ॥ ೩೨ ॥ ಕಣೇ ವೀಣ ಸೋಪಟೇ । ಕಣಸೇಲಾಗಲೇ ಘನದಾಟೇ । ಕಾಯ ಕರಾವೇ ಗೋಮಟೇ । ವೋಸ ನಗರ ॥ ೩೩ ॥ ನಾತರೀ ಸರೋವರ ಆಟಲೇ । ರಾನೀ ದುಃಖಿಯಾ ದುಃಖೀ ಭೇಟಲೇ । ಕಾ ವಾಂಝು ಘುಲೀ ಪುಲಲೇ । ಝಾಡ ಜೈಸೇ ॥ ೩೪ ॥ ತೈಸೇ ಸಕಳ ತೇ ವೈಭವ । ಅಥವಾ ಕುಳಜಾತಿ ಗೌರವ । ಜೈಸೇ ಶರೀರ ಆಹೇ ಸಾವೇವ । ಪರೀ ಜೀವಚಿ ನಾಹೀ ॥ ೩೫ ॥ ತೈಸೇ ಮಾಝಿಯೇ ಭಕ್ತೀವಿಣ । ಜಳೋತೇ ಜಿಯಾಲೀವಣ । ಅಗಾ ಪೃಥ್ವೀವರೀ ಪಾಷಾಣ । ನಸತೀ ಕಾಇ ॥ ೩೬ ॥ ಸೈಹಿವರಾಚೀ ದಾಟ ಸಾವುಲೀ । ಸಜ್ಜನೀ ಜೈಸೀ ವಾಳಿಲೀ । ತೈಸೀ ಪುಣ್ಯೇ ಡಾನಲೂನಿಗೇಲೀ । ಅಭಕ್ತಾಂತೇ ॥ ೩೭ ॥ ನಿಂಬ ನಿಂಬೋಳಿಯಾ ವೋಡೋನಿ ಆಲಾ । ತರೀ ತೋ ಕಾವುಳಿಯಾಸೀಂಚಿ ಸುಕಾಳ ಜಾಹಾಲಾ । ತೈಸಾ ಭಕ್ತಿಹೀನ ವಾಢಿನ್ನಲಾ । ದೋಷಾಂಚಿ ಲಾಗೀ ॥ ೩೮ ॥ ಕಾ ಷಡ್ರಸ ಖಾಪರೀ ವಾಢಿಲೇ । ವಾಢೂನಿ ಚೋಹಟಾ ಠೇವಿಲೇ । ತೇ ಸುಣಿಯಾಂಚೇ ಉಪೇಗಾ ಆಲೇ । ಜಿಯಾಪರೀ ॥ ೩೯ ॥ ತೈಸೇ ಭಕ್ತಿಹೀನಾಚೇ ಜಿಣೇ । ಜೋ ಸ್ವಪ್ನೀಹಿ ಪರೀಸುಕೃತ ನೇಣೇ । ತೇಣೇ ಸಂಸಾರ ದುಃಖಾಸಿ ಭಾಣೇ । ವೋಗರಿಲೇ ॥ ೪೪೦ ॥ ಸ್ಮಣೋನಿ ಕುಳ ಉತ್ತಮ ನೋಹಾವೇ । ಜಾತೀ ಅಂತ್ಯಜಹೀ ವ್ಹಾವೇ । ವರೀ ದೇಹಾಚೇನಿ ನಾವೇ । ಪಶುಚೇಹೀ ಲಾಭೋ ॥೪೧॥ ಪಾಹೇ ವಾ ಸಾವಜೇ ಹಾತಿರೂ ಧರಿಲೇ । ತೇಣೇ ತಯಾ ಕಾಕುಳತೀ ಮಾತೇ ಸ್ಮರಿಲೇ । ಕೀ ತಯಾಂಚೇ ಪಶುತ್ವ ವಾಪೋ ಜಾಹಾಲೇ । ಪಾವಲಿಯಾ ಮಾತೇ ॥ ೪೨ ॥

ಅರ್ಥ— ಆ ಭಕ್ತನು ಕಾಲಾಂತರದಿಂದ ನನ್ನಂತೆ ಆಗುವನೆಂಬ ಕಲ್ಪನೆಯು ನಿನ್ನ ಅಂತಃಕರಣದಲ್ಲಿ ಬರಬಹುದು ಆದರೇ ಅರ್ಜುನನೇ ! ಅಮೃತದಲ್ಲಿಯೇ ವಾಸ ಮಾಡುವವನಿಗೆ ಮರಣವು ಹೇಗೆ ಬರುವದು? ॥ ೨೫ ॥ ಯಾವ ಕಾಲದಲ್ಲಿ ಸೂರ್ಯನು ಉದಯವಾಗುವದಿಲ್ಲ, ಆ ಕಾಲಕ್ಕೆ ರಾತ್ರಿ ಎಂದೆನಬೇಕಾಗುತ್ತದೆ. ಅದರಂತೆ ನನ್ನ ಭಕ್ತಿಯ ಹೊರ್ತು ಯಾವ ಯಾವ ಕರ್ಮ ಮಾಡುವದು ಅವೆಲ್ಲ ಕೃತ್ಯಗಳು ಮಹಾಪಾತಕವಿರುವದಿಲ್ಲೇನು ? ॥ ೨೬ ॥ ಎಲೋ ಪಂಡುಪುತ್ರನೇ ! ಈ ಕಾರಣದಿಂದ ಭಕ್ತರ ಚಿತ್ತದಲ್ಲಿ ನನ್ನ ಸ್ವರೂಪದ ಸಾಂನಿಧ್ಯವು ಯಾವಾಗ್ಗೆ ಪ್ರಾಪ್ತವಾಗುತ್ತದೆ, ಆ ಕಾಲಕ್ಕೆ ನಿಜವಾಗಿ ಅವರು ಮದ್ರೂಪವಾಗುತ್ತಾರೆ. ॥ ೨೭ ॥ ಯಾವ ಪ್ರಕಾರಾ ಒಂದು ದೀವಿಗೆಯಿಂದ ಎರಡನೇ ದೀವಿಗೆಯನ್ನು ಹಚ್ಚುವದರಿಂದ ಅದರಲ್ಲಿ ಮೊದಲನೇ ದೀವಿಗೆಯು ಯಾವ ದಿರುವದೆಂಬದನ್ನು ಗೊತ್ತುಹಚ್ಚಲಿಕ್ಕೆ ಬರುವದಿಲ್ಲವೋ, ಅದೇ ಪ್ರಕಾರಾ ಸರ್ವ ಭಾವದಿಂದ ಪ್ರೇಮಪೂರ್ವಕ ನನ್ನನ್ನು ಭಜಿಸುತ್ತಾರೆ. ಅವರು ನನ್ನ ಸ್ವರೂಪವೇ ಆಗುತ್ತಾರೆ. ॥ ೨೮ ॥ ಆ ಮೇಲೆ ಅವರಿಗೆ ನನ್ನ ಸ್ಥಿತಿ ನನ್ನ ಕಾಂತಿ ಮತ್ತು ನನ್ನ ನಿತ್ಯ ಶಾಂತಿ ಪ್ರಾಪ್ತವಾಗುತ್ತವೆ. ಬಹಳ ಹೇಳುವದೇನು, ಅವರು ನನ್ನ ಮೇಲಿನ ಪ್ರೇಮದ ದೆಶೆಯಿಂದಲೇ ಬದುಕಿ ಜೀವನ್ಮುಕ್ತರಾಗುತ್ತಾರೆ. ॥ ೨೯ ॥ ಪಾರ್ಥ ! ಇಲ್ಲಿ ಮೇಲಿಂದ ಮೇಲೆ ಹೇಳಿದ್ದನ್ನೇ ಎಷ್ಟು ಹೇಳಬೇಕು. ಯಾರಿಗೆ ನನ್ನ ಪ್ರಾಪ್ತಿಯ ಅಪೇಕ್ಷೆಯು ಇರುವದೋ ಅವರು ನನ್ನ ಭಕ್ತಿಯನ್ನು ಯಾವಾಗಲೂ ಮರಿಯಬಾರದು. ॥ ೪೩೦ ॥ ಉತ್ತಮ ಶುದ್ಧ ಕುಲವೇ ಇರಬೇಕೆಂಬ ಅವಶ್ಯಕತೆಯು ಇರುವದಿಲ್ಲ. ಮತ್ತು ನಮ್ಮ ಕುಲವು ಶ್ರೇಷ್ಠವಿರಬೇಕೆಂಬದೂ ಕಾರಣವಿರುವದಿಲ್ಲ. ಆ ಮೇಲೆ ಸುನ್ನುನೇ ಶಾಸ್ತ್ರಾಧ್ಯಯನ ಮುಂತಾದ್ದು ಮಾಡಿ ಶ್ರಮಪಟ್ಟು ವಿದ್ವತ್ವ ಸಂಪಾದನ ಮಾಡುವ ಅಪೇಕ್ಷೆಯನ್ನಾದರೂ ಮಾಡುವ ಕಾರಣನೇನು ? ॥ ೩೧ ॥ ಅಥವಾ ಉತ್ತಮ ಸ್ವರೂಪ ಮತ್ತು ತಾರುಣ್ಯದ ಮದದಿಂದ ಏಕೆ ಗರ್ವಿಷ್ಠರಾಗಬೇಕು ? ಐಶ್ವರ್ಯ ಮುಂತಾದ ಸಂಪತ್ತಿನ ಬಡಿವಾರವನ್ನು ಏಕೆ ಮೆರಿಸಬೇಕು ? (ಪರಮೇಶ್ವರನ ಪ್ರಾಪ್ತಿಗೆ ಇವುಗಳಲ್ಲಿ ಒಂದೂ ಬೇಕಾಗಿರುವ

ದಿಲ್ಲ.) ಆದರೆ ನನ್ನಲ್ಲಿ ಭಕ್ತಿಯೊಂದಿಲ್ಲದಿದ್ದರೆ ಈ ಸರ್ವವು ವ್ಯರ್ಥವಾಗಿರುವವು. ॥ ೪೩ ॥ ಕಾಳುಗಳಿಲ್ಲದ ಬಚ್ಚ ತೆನಿಗಳು ಬಹು ದಟ್ಟತವಾಗಿ ಬೆಳೆದಿರಲು ಅಥವಾ ಸುಂದರ ಶಹರವಿದ್ದು ನಿರ್ಜನವಾಗಿದ್ದರೆ ಅದರ ಉಪಯೋಗ ವೇನು? ॥ ೩೩ ॥ ಇಲ್ಲವೇ ಸರೋವರವು ಅಟ್ಟಿಸಿ ವಣಗಿ ನೀರಿಲ್ಲದೇ ಹೋದರೆ ವ್ಯರ್ಥವೇ ಸರಿ. ಅಥವಾ ಅರಣ್ಯದಲ್ಲಿ ಒಬ್ಬ ದುಃಖದಿಂದ ಕಷ್ಟಪಡುವವನಿಗೆ ಮತ್ತೊಬ್ಬ ದುಃಖ ಮನುಷ್ಯನ ಭೆಟ್ಟಿ ಆದರೆ ಉಪಯೋಗ ವೇನು? ಬಂಜೆ ಗಿಡವು ಹೂವಿನಿಂದ ಪ್ರಫುಲ್ಲಿತವಾದರೆ, ॥ ೩೪ ॥ ಅದರಂತೆ ಭಕ್ತಿ ಹೀನನ ಸರ್ವ ವೈಭವವು, ಶ್ರೇಷ್ಠ ಕುಲವು ಮತ್ತು ಜಾತಿಯ ದೊಡ್ಡಸ್ತಿಕೆಯು, ವ್ಯರ್ಥವಾಗಿರುವದು. ಹೇಗೆ ಸರ್ವ ಅವಯವದಿಂದ ಯುಕ್ತವಾದ ಶರೀರವಿದ್ದು ಅದರಲ್ಲಿ ಜೀವ ಮಾತ್ರೊಂದಿರದೇ ಹೋದರೆ (ಆ ಹೆಣವನ್ನು ಸುಡುಗಾಡಿಗೊಯ್ದು ಸುಡಬೇಕು. ಆ ಶ್ರವದ ಸ್ಪರ್ಶದಿಂದ ನಕ್ಕತ್ರ ಕಂಡು ಸಚೈಲ ಸ್ನಾನ ಮಾಡಬೇಕಾಗುವದು.) ॥ ೪೩ಶ ॥ ಅದೇ ಪ್ರಕಾರಾ ನನ್ನ ಭಕ್ತಿಯ ಹೊರ್ತು ಅವನ ಜೀವಿತವು ವ್ಯರ್ಥವಾಗಿರುವದು. ಎಲೋ ಅರ್ಜುನನೇ! ಪ್ರಥ್ವಿಯ ಮೇಲೆ ಬಂಡೆಗಲ್ಲುಗಳಿರುವದಿಲ್ಲೇನು? ಹೀಗೆ ನೋಡು ಸಿಂದಿಯ ಗಿಡದ ಮುಳ್ಳಿನ ದಟ್ಟತವಾದ ನೆರಳು ಇದ್ದಾಗ್ಯೂ (ಅದರ ಉಪಯೋಗವೇನು?) ಅದನ್ನು ಸಜ್ಜನರು ನಿಷಿದ್ಧವೆಂದು ಬಿಟ್ಟುಬಿಡುತ್ತಾರೆ. ಅದೇ ಪ್ರಕಾರಾ ಯಾವನು ನನ್ನ ಭಕ್ತಿಯನ್ನು ಮಾಡುವದಿಲ್ಲ. ಅಂಥ ಭಕ್ತಿ ಹೀನ ಜನರಿಂದ (ತಪ್ಪಿಸಿ) ಪುಣ್ಯವು ಹೊರಟುಹೋಗುತ್ತದೆ. ॥ ೩೭ ॥ ಬೇವಿನ ಗಿಡವು ಕಾಯಿ ಮತ್ತು ಹಣ್ಣುಗಳ ಭರದಿಂದ ಬಾಗಿ ಹೋದರೂ ಯಾವ ಪ್ರಕಾರಾ (ಪಕ್ಷೀನಾಂ ಕಾಕಚಾಂಡಾಲಾ) ಕಾಗಿಗಳಿಗೆ ಸುಕಾಲವಾಗುತ್ತದೋ, ಅದೇ ಪ್ರಕಾರಾ ನನ್ನ ಭಕ್ತಿಯನ್ನು ಮಾಡದೇ ಇದ್ದ ಪಾಪಾತ್ಮನು ಪಾಪದ ಸಂಚಯವನ್ನೇ ಮಾಡಿಕೊಳ್ಳುವದರ ದೆಶೆಯಿಂದ ಬೆಳೆದಿರುತ್ತಾನೆ. ॥ ೪೩ ॥ ಅಥವಾ ಷಡ್ರಸೋಪೇತವಾದ ಪಕ್ವಾನ್ನವನ್ನು ಒಂದು ಹಂಚಿನಲ್ಲಿ ಹಾಕಿ ಬೈಲಿಗೆ (ಬೀದಿಯಲ್ಲಿ) ಇಟ್ಟರೆ ಅದು ಶ್ವಾನಗಳಿಗೆ ಮಾತ್ರ ಉಪಯೋಗವಾಗುತ್ತದೆ. ॥ ೩೯ ॥ ಅದೇ ಪ್ರಕಾರಾ ಯಾವನು ಸ್ವಪ್ನದಲ್ಲಿಯೂ ಸಹ ಪುಣ್ಯ ಮಾರ್ಗದ ಆಚರಣವನ್ನು ಮಾಡುವದಿಲ್ಲ ಆ ಭಕ್ತಿ ಹೀನನ ಜೀವಿತವು ಅಂದರೆ ಸಂಸಾರ ದುಃಖವನ್ನು ಉಣಬಡಿಸಲು ಇಟ್ಟ ಪಾತ್ರೆಯೇ ಆಗಿರು ವನು. ॥ ೪೪೦ ॥ ಆದುದರಿಂದ ಉತ್ತಮ ಕುಲವು ಇಲ್ಲದೇ ಇದ್ದರೂ, ಅಥವಾ ಜಾತಿಯಿಂದ ಅಂತ್ಯಜನಾಗಿದ್ದರೂ, ಇಲ್ಲದೇ ಪಶುಜನ್ಮ ಪ್ರಾಪ್ತವಾಗಿದ್ದರೂ ನಡಿಯಬಹುದು. ಮುಖ್ಯವಾಗಿ ಭಕ್ತಿಯೇ ಬೇಕಾಗಿರುವದು. ॥ ೪೧ । (ಪಶು ಜನ್ಮದಲ್ಲಿ ಮುಕ್ತಿಯು ದೊರಕುವ ಬಗೆ ಹೇಗೆ? ಅನ್ನುವ ಸಂಶಯವನ್ನು ದೂರಮಾಡುತ್ತಾರೆ.) ಅರ್ಜುನನೇ! ನೋಡು. ಮೊಸಳೆಯು ನೀರಿನಲ್ಲಿ ಗಜೇಂದ್ರನನ್ನು ಹಿಡಿದಮೇಲೆ ಅದು ದೈನ್ಯವಾಗಿ ಅದರ ಬಾಯೊಳಗಿಂದ ಪಾರಾಗ ಬೇಕೆಂದು ನನ್ನ ಸ್ಮರಣೆ ಮಾಡಿದ್ದರಿಂದ ನನ್ನ ಪ್ರಾಪ್ತಿಯಾಗಿ ಅದರಿಂದ ಅದರ ಪಶುತ್ವ ವ್ಯರ್ಥವಾಯಿತು. ॥ ೪೪೨ ॥

ಮಾಂ ಹಿ ಪಾರ್ಥ ವ್ಯಪಾಶ್ರಿತ್ಯ ಯೇಽಪಿ ಸ್ಯುಃ ಪಾಪಯೋನಯಃ।
ಸ್ತ್ರೀಯೋ ವೈಶ್ಯಾಸ್ತಥಾ ಶೂದಾಸ್ತೇಽಪಿ ಯಾಂತಿ ಪರಾಂ ಗತಿಂ ॥ ೪೩ ॥

[ಮಾಂಹಿ ಪಾರ್ಥ ವ್ಯಪಾಸ್ರಿತ್ಯೇತಿ] ಅಗಾ ನಾನೇ ಘೇತಾ ವೋಖಟೇ। ಜೇ ಆಘ ವೇಯಾ ಅಧಮಾಚಿಯೇ ಶೇವಟೇ। ತಿಯೇ ಪಾಪಯೋನೀಹೀ ಕೇರೀಟೇ। ಜನ್ಮಲೇ ಜೇ ॥ ೪೪೩ ॥ ತೇ ಪಾಪಯೋನಿ ಮೂಢ। ಮೂರ್ಖ ಜೈಸೇ ಕಾ ದಗಡ। ಪರೀ ಮಾಝ್ಯಾ ಠಾಯೀ ದೃಢ। ಸರ್ವಭಾವೇ ॥ ೪೪೪ ॥ ಜಯಾಂಚಿಯೇ ವಾಂಚೇ ಮಾಝೀ ಆಲಾಪ। ದೃಷ್ಟೀ ಭೋಗೀ ಮಾ ಝೆಂಚಿ ರೂಪ। ಜಯಾಂಚೆ ಮನ ಸಂಕಲ್ಪ। ಮಾಝಾಚಿವಾಹೇ ॥ ೪೪೪ ॥ ಮಾಝಿಯಾ ಕೀರ್ತಿ ವಿಣ। ಜಯಾಂಚೇ ರಿತೇ ನಾಹೀ ಶ್ರವಣ। ಜಯಾ ಸರ್ವಾಂಗೀ ಭೂಷಣ। ಮಾಝೀ ಸೇವಾ ॥೪೪೬॥ ಜಯಾಂಚೇ ಜ್ಞಾನ ವಿಸೋ ನೇಣೇ। ಜಾಣಿವ ಮಜ ಏಕಾತೇಚಿ ಜಾಣೇ। ಜಯಾ ಐಸೇ ಲಾಭೇ ತರೀ ಜಿಣೇ। ಯೆರ್ಹವೀ ಮರಣ ॥ ೪೪೭ ॥ ಐಸಾ ಆಘವಾಂಚಿ ಪರೀ ಪಾಂಡವಾ। ಭಿಹೀ ಆಪುಲಿಯಾ ಸರ್ವಭಾವಾ। ಜಿಯಾವಯಾಲಾಗಿ ವೋಲಾವಾ। ಮೀಚಿ ಕೇಲಾ ॥ ೪೪೮ ॥

ತೇ ಪಾಪಯೋನೀಹೀ ಹೋತು ಕಾ । ತೇ ಶ್ರುತಾಧೀತಹೀ ನ ಹೋತುಕಾ । ಪರೀ ಮಜಸೀ
ತುಕೆತಾ ತುಕಾ । ತುಟೇ ನಾಹೀ ॥ ೪೪೯ ॥ ಪಾಹೇ ಪಾ ಭಕ್ತೀಚೇನಿ ಆಥಿಲೇ ಪಣೇ । ದೈತ್ಯೀ
ದೇವಾ ಆಣಿಲೇ ಉಣೇ । ಮಾಝೀಂ ನರಸಿಂಹತ್ವ ಲೇಣೇ । ಜಯಾಚಿಯೇ ಮಹಿಮೇ ॥ ೪೫೦ ॥
ತೋ ಪ್ರಲ್ಹಾದ ಗಾ ಮಜಸಾಟೀ । ಘೇತಾ ಬಹುತೇ ಸದಾ ಕಿರೀಟೀ । ಕಾ ಜೇ ಮಿಯಾ ದ್ಯಾನೇ ತೇ
ಗೋಷ್ಟೀ । ತಯಾಚಿಯಾ ಜೋಡೇ ॥ ೪೫೧ ॥ ಯೆರ್ಹವೀ ದೈತ್ಯಕುಳಸಾಚೋಕಾರೇ । ಪರೀ ಇಂದ್ರು
ಹೀ ಸರೀ ನ ಲಾಹೇ ಉಪರೀ । ಮ್ಹಣೋನಿ ಭಕ್ತಿ ಗಾ ಏಥ ಸರೇ । ಜಾತಿ ಅಪ್ರಮಾಣ
॥ ೪೫೨ ॥ ರಾಜಾಜ್ಞೇಚಿ ಅಕ್ಷರೇ ಆಹಾತೀ । ತಿಯೇ ಚಾಮಾ ಏಕಾ ಜಯಾ ಪಡತೀ । ತಯಾ
ಚಾಮಾಸಾಠೀ ಜೋಡತೀ । ಸಕಳ ವಸ್ತು ॥ ೪೫೩ ॥ ವಾಂಚೂನಿ ಸೋನೇ ರುಪೇ ಪ್ರಮಾಣ
ನೋಹೇ । ಏಥ ರಾಜಾಜ್ಞಾಚಿ ಸಮರ್ಥ ಆಹೇ । ತೇಚಿ ಚಾಮು ಏಕ ಜೈ ಲಾಹೇ । ತೇಣೇ
ವಿಕತೀ ಆಘವೀ ॥ ೪೫೪ ॥ ತೈಸೇ ಉತ್ತಮತ್ವ ತೈಚಿ ತರೇ । ತೈಚ ಸರ್ವಜ್ಞತಾ ಸರೇ । ಜೈ
ಮನೋ ಬುದ್ಧೀ ಭರೇ । ಮಾಝೀನಿ ಪ್ರೇಮೇ ॥ ೪೫೫ ॥ ಮ್ಹಣೋನಿ ಕುಳ ಜಾತಿ ವರ್ಣ ।
ಹೇ ಆಘವೇಂಚಿ ಗಾ ಅಕಾರಣ । ಏಥ ಅರ್ಜುನಾ ಮಾಝೀ ಪಣ । ಸಾರ್ಥಕ ಏಕ ॥ ೪೫೬ ॥
ತೇಂಚಿ ಭಲತೇಣೇ ಭಾವೇ । ಮನ ಮಜ ಆಂತು ಯೇತೇ ಹೋ ಆವೇ । ಆಲೇ ತರೀ ಆಘವೇ ।
ಮಾಗೀಲ ವಾವೋ ॥ ೪೫೭ ॥ ಜೈಸೇ ತವಚಿ ನಹಾಳ ವೋಹಳ । ಜವ ನ ಪವತೀ ಗಂಗಾಜಳ ।
ಮಗ ಹೋವೂನಿ ಠಾಕತೀ ಕೇವಳ । ಗಂಗಾ ರೂಪ ॥ ೪೫೮ ॥ ಕಾ ಖೈರ ಚಂದನ ಕಾಷ್ಠೇ ।
ಹೇ ವಿವಂಚನಾ ತವಚಿ ಘಟೇ । ಜವ ನ ಘಾಪತೀ ವಿಕವಟೇ । ಅಗ್ನಿ ಮಾಜೀ ॥ ೪೫೯ ॥ ತೈಸೇ
ಕ್ಷತ್ರೀ ವೈಶ್ಯಸ್ತ್ರಿಯಾ । ಕಾ ಶೂದ್ರ ಅಂತ್ಯಜಾದಿ ಇಯಾ । ಜಾತೀ ತವಚಿ ವೇಗಳಾಲಿಯಾ । ಜವ
ನ ಪವತೀ ಮಾತೇ ॥ ೪೬೦ ॥ ಮಗ ಜಾತೀ ವ್ಯಕ್ತೀ ಪಡೇ ಬಿಂದುಲೇ । ಜೀವ್ಹಾ ಭಾವೇ
ಹೋತೀ ಮಜ ಮೀನಲೇ । ಜೈಸೇ ಲವಣ ಕಣೇ ಘಾತಲೇ । ಸಾಗರಾ ಮಾಜೀ ॥ ೪೬೧ ॥ ತವ
ವರೀ ನದನದೀಂಚೀ ನಾವೇ । ತವಚಿ ಪೂರ್ವ ಪಶ್ಚಿಮೇಚೇ ಯಾನೇ । ಜವ ನ ಯೇತಿ ಆಘವೇ ।
ಸಮುದ್ರಾ ಮಾಜೀ ॥ ೪೬೨ ॥ ಹೇಚ ಕವಣೇ ಏಕೇ ಮಿಸೇ । ಚಿತ್ತ ಮಾಝೀ ಠಾಯೀ ಪ್ರವೇಶೇ ।
ಯೇತುಲೇ ಹೋ ಮಗ ಆಪೈಸೇ । ಮೀಚಿ ಹೋಣೇ ಅಸೇ ॥ ೪೬೩ ॥ ಅಗಾ ವರೀ ಘೋಡಾಪ
ಯಾಚಿ ಲಾಗಿ । ಲೋ ಹೋ ಮಿಳೋ ಕಾ ಪರೀಸಾಚೇ ಆಂಗೀ । ಕಾ ಜೇ ಮಿಳತಿಯೇ ಪ್ರಸಂಗೀ ।
ಸೋನೇಂಚಿ ಹೋಈಲ ॥ ೪೬೪ ॥ ಪಾಹೇ ಪಾ ವಲ್ಲಭಾಚೇನಿ ವ್ಯಾಜೇ । ತಿಯಾ ವ್ರಜಾಂಗನಾಂಚೀ
ನಿಜೇ । ಮಜ ಮಿನಲಿಯಾ ಕಾಯ ಮಾಝೀ । ಸ್ವರೂಪ ನಮ್ಹತೀ ॥ ೪೬೫ ॥ ನಾತರೀ ಭಯಾಚೇನಿ
ಮಿಸೇ । ಮಾತೇ ನ ಪವಿಜೇಚಿ ಕಾಯ ಕಂಸೇ । ಕೀ ಅಖಂಡ ವೈರ ವಸೇ । ಚೈದ್ಯಾದಿಕೀ
॥ ೪೬೬ ॥ ಅಗಾ ಸೋಯರೇ ಪಣೇಂಚಿ ಪಾಂಡವಾ । ಮಾಝೀ ಸಾಯುಜ್ಯಯಾದವಾ । ಕೀ
ಮಮತ್ವೇ ವಸುದೇವಾ । ದಿಕಾ ಸಕಳಾ ॥ ೪೬೭ ॥ ನಾರದಾ ಧ್ರುವಾ ಅಕ್ರೂರಾ । ಶುಕಾ ಹನ
ಸನತ್ಕುಮಾರಾ । ಇಯಾ ಭಕ್ತೀ ಮೀ ಧನುರ್ಧರಾ । ಪ್ರಾಪ್ಯ ಜೈಸಾ ॥ ೪೬೮ ॥ ತೈಸಾಚಿ ಗೋಪ
ಕಾಸೀ ಕಾಮೇ । ತಯಾ ಕಂಸಾ ಭಯಸಂಭ್ರಮೇ । ಯೇರಾ ಘಾತಕಾ ಮನೋ ಧರ್ಮೇ ! ಶಿಸು
ಪಾಲಾದಿಕಾ ॥ ೪೬೯ ॥ ಅಗಾ ಮೀ ಏಕಲಾಣೇಚೇ ಖಾಗೇ । ಮಜಯೇವೋ ಯೇ ಭಲತೇನಿ ಮಾಗೆ । ।
ಭಕ್ತಿ ಕಾ ವಿಷಯ ವಿರಾಗೇ । ಅಥವಾ ವೈರೇ ॥ ೪೭೦ ॥ ಮ್ಹಣೋನಿ ಪಾರ್ಥಾಪಾಹೀಂ । ಪ್ರವೇಶಾ
ವಯಾ ಮಾಝ್ಯಾಠಾಯೀ । ಉಪಾಯಾಂಚೀ ನಾಹೀ । ವಾಣೇ ಏಥ ॥ ೪೭೧ ॥ ಆಣಿ ಭಲತಿಯಾ
ಜಾತಿ ಜನ್ಮಾವೇ । ಮಗ ಭಜಿಜೇ ಕಾ ವಿತೋಧಾವೇ । ಪರೀ ಭಕ್ತಾ ಕಾ ವೈರಿಯಾ ವ್ಹಾವೇ । ಮಾಝಿ
ಯಾಚಿ ॥ ೪೭೨ ॥ ಅಗಾ ಕವಣೇ ಏಕೇ ಬೋಲೆ । ಮಾಝೇಂಪಣ ಜಳ್ಹೀ ಜಾಹಾಲೇ । ತರೀ ಮೀ

ಹೋಣೇ ಆಲೇ । ಹಾತಾ ನಿರುತೇ ॥ ೭೩ ॥ ಯಾಲಾಗೀ ಪಾಪಯೋನೀಹೀ ಅರ್ಜುನಾ । ಕಾ ವೈಶ್ಯ ಶೂದ್ರ ಅಂಗನಾ । ಮಾತೇ ಭಜತಾ ಸದನಾ । ಮಾಝಿಯಾ ಯೇತೀ ॥ ೭೪ ॥

ಅರ್ಥ— ಯಾವನು ಅಧಮನಕಿಂತಲೂ ಅಧಮನು, ಮತ್ತು ಅವನ ಹೆಸರು ಉಚ್ಚರಿಸುವದು ಸಹ ಉಚಿತವಾಗಿರುವದಿಲ್ಲವೋ, ಇಂಥ ಪಾಪ ಯೋನಿಯಲ್ಲಿ ಯಾವನು ಜನ್ಮ ತೆಗಿದುಕೊಂಡಿರುವನು, ॥ ೪೩ ॥ ಅವನ ಜನ್ಮವು ಇಂಥ ಪಾಪಯೋನಿಯಲ್ಲಿ ಆಗಿರುವದು ಮತ್ತು ಮೂರ್ಖತನದಲ್ಲಿ ನೋಡಿದರೆ ಕೇವಲ ಬಂಡಿಗಲ್ಲೇ ಆಗಿರುವನು. ಆದರೂ ನನ್ನಲ್ಲಿ ಮಾತ್ರ ಸರ್ವದರಿಂದಲೂ ಧೃಡವಾದ ಭಾವವನ್ನಿಟ್ಟಿರುವನು. ॥ ೪೪ ॥ ಯಾವನ ವಾಣಿಯಿಂದ ನನ್ನ ನಾಮೋಚ್ಚಾರವಾಗುತ್ತದೆ ಯಾವನ ಕಣ್ಣುಗಳು ನನ್ನ ರೂಪವನ್ನೇ ನೋಡುತ್ತವೆ ಮತ್ತು ಯಾವನ ಮನಸಿನಲ್ಲಿ ನನ್ನ ಹೊರ್ತು ಅನ್ಯ ಸಂಕಲ್ಪವೇ ಇರುವದಿಲ್ಲವೋ, ॥ ೪೫ ॥ ಯಾವನ ಕಿವಿಗಳು ನನ್ನ ಗುಣಾನುವಾದವನ್ನು ಕೇಳದಲೆ ಕ್ಷಣ ಕಾಲವಾದರೂ ಸುಮ್ಮನೇ ಇರುವದಿಲ್ಲ. (ಯಾವಾಗಲೂ ಕೇಳುತ್ತವೆ.) ಮತ್ತು ಯಾವನ ಸರ್ವ ಅವಯವಗಳಿಗೆ ನನ್ನ ಸೇವೆಯ ವಿನಃ ಯಾವದೂ ಭೂಷಣಾಸ್ಪದವಾಗಿರುವದಿಲ್ಲವೋ, ॥ ೪೪೬ ॥ ಯಾವನ ಬುದ್ಧಿಗೆ ವಿಷಯವು ಕಾಣಿಸದೇ ನಾನೇ ಒಬ್ಬನು ಕಾಣಿಸುತ್ತಿರುತ್ತೇನೆಯೋ, ಇಂಥ ಸ್ಥಿತಿಯು ಇದ್ದರೆ ಮಾತ್ರ ಅವರು ಜೀವದಿಂದಿರುತ್ತಾರೆ. ಇಲ್ಲದಿದ್ದರೆ ಸಾಯುವರು. ॥ ೪೪೭ ॥ ಎಲೋ ಪಾಂಡುಪುತ್ರನೇ ಹೀಗೆ ಸರ್ವ ಪ್ರಕಾರದಿಂದಲೂ. ಯಾರು ತಮ್ಮ ಭಾವ ಭಕ್ತಿಯನ್ನು ಮತ್ತು ತಮ್ಮ ಸರ್ವಸ್ವವನ್ನು ನನಗೆ ಅರ್ಪಿಸಿ ತಮ್ಮ ಜೀವಿತದ ಆಧಾರವು ನಾನೇ ಎಂದು ನಂಬಿರುವರು, ॥ ೪೪೮ ॥ ಅವರು ಪಾಪಯೋನಿಯಲ್ಲಿ ಜನ್ಮ ತಗೊಂಡವರಾಗಿರಲಿ, ಇಲ್ಲವೇ ಶಾಸ್ತ್ರ ಸಹಾ ಕೇಳಿದವರು ಮತ್ತು ಓದಿದವರು ಆಗದೇ ಇರಲಿ, ಆದರೆ ಅವರನ್ನು ನನ್ನ ಕೂಡಾ ತುಲನಾ ಮಾಡುತ್ತಿರಲು ಅವರು ನನ್ನಕಿಂತಲೂ ಕಡಿಮೆ ಬೀಳುವದಿಲ್ಲ. ॥ ೪೯ ॥ ಹೀಗೆ ನೋಡು. ಭಕ್ತಿಯ ಮಹತ್ವದಿಂದ ದೈತ್ಯರು ದೇವತೆಗಳಿಗೆ ಸಹಾ ಹಿಂದೊಗೆದರು. ಮತ್ತು ಆ ಪ್ರಲ್ಹಾದನ ಭಕ್ತಿಯ ಮಹತ್ಮೆಯ ದೆಶೆಯಿಂದ ನನಗೆ ನರಸಿಂಹ ಅವತಾರವನ್ನು ತೆಗಿದುಕೊಳ್ಳಬೇಕಾಯಿತು. ॥ ೪೦ ॥ ಎಲೋ ಕೀರೀಟಿ ! ಯಾವ ಪ್ರಲ್ಹಾದನು ನನ್ನ ಪ್ರಾಪ್ತಿಯ ದೆಶೆಯಿಂದ ಯಾವಾಗಲೂ ಅನಂತ ಸಂಕಟಗಳನ್ನು ಭೋಗಿಸಿದನೋ, ಆ ಪ್ರಲ್ಹಾದನ ಚರಿತ್ರವನ್ನು ಒಂದು ವೇಳೆ ವರ್ಣನ ಮಾಡಿದರೆ, ನಾನು ಪ್ರಸನ್ನ ಆಗುವದರಿಂದ ಯಾವ ಪ್ರಾಪ್ತಿಯು ಆಗುತ್ತದೋ, ಅದೇ (ಲಾಭವು) ಆ ಭಕ್ತ ಚರಿತ್ರೆಯನ್ನು ವರ್ಣನ ಮಾಡುವದರಿಂದ ಮತ್ತು ಶ್ರವಣ ಮಾಡುವದರಿಂದ ಆಗುತ್ತದೆ. ॥ ೪೫೧ ॥ ನಿಜವಾಗಿ ನೋಡಿದರೆ ಅವನು ದೈತ್ಯ ಕುಲದಲ್ಲಿ ಜನ್ಮ ತಗೊಂಡವನಾದಾಗ್ಯೂ ಇಂದ್ರನಿಗೆ ಸಹಾ ಅವನಕಿಂತಲೂ ಹೆಚ್ಚಿಗೆ ಶ್ರೇಷ್ಠತ್ವವು ದೊರಕಿರುವದಿಲ್ಲ. ಆದುದರಿಂದ ನನ್ನ ಪ್ರಾಪ್ತಿಯನ್ನು ಮಾಡಿಕೊಳ್ಳಲಿಕ್ಕೆ ಒಂದು ಭಕ್ತಿಯೇ ಸಾಕಾಗಿರುವದು. ಶ್ರೇಷ್ಠ ಕುಲ ಮುಂತಾದವುಗಳು ಈ ಯಾವದೂ ಕಾರಣವಿರುವದಿಲ್ಲ. ॥ ೪೫೨ ॥ ರಾಜಾಜ್ಞೆಯ ಅಕ್ಷರಗಳು ಒಂದು ತೊಗಲಿನ ತುಣಕಿನಲ್ಲಿ ಬರೆದಿದ್ದಾಗ್ಯಾದರೂ ಆ ತೊಗಲಿನ ತುಂಡಿನಿಂದ (ನೋಟಿನಿಂದ) ಎಲ್ಲ ವಸ್ತುಗಳ ಲಾಭವು ಸಹಜನೇ ಆಗುತ್ತವೆ. ॥ ೪೫೩ ॥ ಆ ಅಕ್ಷರಗಳ ಹೊರ್ತು ಬಂಗಾರ ಮತ್ತು ಬೆಳ್ಳಿಯ ಬೆಲೆಯು ಕಡಿಮೆ ಆಗಿರುವದು ಯಾಕಂದರೆ ಅಲ್ಲಿ ರಾಜಾಜ್ಞೆಯ ಅಕ್ಷರಗಳೇ ಸಮರ್ಥವಾಗಿರುವವು. ಅದೇ ರಾಜ ಮುದ್ರೆಯಿಂದ ಯುಕ್ತವಾದ ತೊಗಲಿನ (ನೋಟಿನಿಂದ) ಬೇಕಾದ ಪದಾರ್ಥಗಳು ಮಾರಲಿಕ್ಕೆ ದೊರಕುತ್ತವೆ. ॥ ೪೫೪ ॥ ಅದೇ ಪ್ರಕಾರಾ ಯಾವಾಗ್ಗೆ ಮನ ಮತ್ತು ಬುದ್ಧಿಗಳು ನನ್ನ ಪ್ರೇಮದಿಂದಲೇ ಯುಕ್ತವಾಗುತ್ತವೆ, ಆಗ್ಗೆ ದೊಡ್ಡಸ್ತಿಕೆಯೂ ಸರ್ವಜ್ಞತನವು ಇವುಗಳ ಉಪಯೋಗವಾಗುತ್ತದೆ. ॥ ೪೫೫ ॥ ಆದುದರಿಂದ ಕುಲ ಜಾತಿ ವರ್ಣ ಇವೆಲ್ಲವೂ ನಿಷ್ಕಾರಣವಾಗಿರುತ್ತವೆ. ಅರ್ಜುನನೇ ! ಕೇವಲ ನನ್ನ ಭಕ್ತಿಯೊಂದರಿಂದಲೆ ಇವೆಲ್ಲವೂ ಸಾರ್ಥಕವಾಗುತ್ತವೆ. ॥ ೪೬ ॥ ಅನನ್ಯ ಭಕ್ತಿಯನ್ನು ಬೇಕಾದವರು ಮನೋ ಭಾವದಿಂದ ಮಾಡುತ್ತಿರಲು ಅವರು ಪೂರ್ವದಲ್ಲಿ ಯಾವ ವರ್ಣದವರಿದ್ದರೂ ಚಿಂತೆಯಿಲ್ಲ. ॥ ೪೭ ॥ ಹಳ್ಳಗಳು ಹರಿದು ಎಲ್ಲಿಯ ವರೆಗೆ ಗಂಗೆಯಲ್ಲಿ ಕೂಡಿರುವದಿಲ್ಲವೋ, ಅಲ್ಲಿಯ ವರೆಗೆ

ಅವುಗಳಿಗೆ ಹಳ್ಳ ಕೊಳ್ಳ ಮುಂತಾದ ಹೆಸರಿನಿಂದ ಕರೆಯುತ್ತಿರುತ್ತಾರೆ. ಆದರೆ ಅವುಗಳು ಗಂಗೆಯಲ್ಲಿ ಕೂಡಿದ ಮೇಲೆ ಗಂಗಾ ಸ್ವರೂಪವೇ ಆಗುತ್ತವೆ. ॥ ೫೮ ॥ ಇಲ್ಲನೇ ಕಟ್ಟಗೆಗಳು ಎಲ್ಲಿಯ ವರೆಗೆ ಅಗ್ನಿ ಸಂಸರ್ಗವಾಗಿರುವದಿಲ್ಲವೋ, ಅಲ್ಲಿಯ ವರೆಗೆ ಅವುಗಳಿಗೆ ಜಾಲಿ, ಬೇವು, ಚಂದನ, ಮುಂತಾದ ಅನಂತ ನಾಮಗಳು ಉಂಟಾಗಿರುತ್ತವೆ. ॥ ೪೫೯ ॥ ಅದೇ ಪ್ರಕಾರಾ ಎಲ್ಲಿಯ ವರೆಗೆ ನನ್ನ ಸ್ವರೂಪವು ಪ್ರಾಪ್ತವಾಗಿರುವದಿಲ್ಲವೋ ಅಲ್ಲಿಯ ವರೆಗೆ ಮಾತ್ರ ಕ್ಷತ್ರಿಯ, ವೈಶ್ಯ, ಶೂದ್ರ, ಸ್ತ್ರೀ, ಅಂತ್ಯಜ, ಮುಂತಾದ ಬೇರೆ ಬೇರೆ ಜಾತಿಗಳು ಇರುತ್ತವೆ. ॥ ೪೬೦ ॥ ಯಾವ ಪ್ರಕಾರಾ ಸಮುದ್ರದಲ್ಲಿ ಉಪ್ಪು ಹಾಕಿದ ಮೇಲೆ ಅದು ಒಂದೇ ರೂಪವಾಗಿ ಹೋಗುವದೋ ಅದೇ ಪ್ರಕಾರಾ ಮನೋಭಾವದಿಂದ ನನಗೆ ಅನನ್ಯ ಶರಣು ಬಂದ ಮೇಲೆ ಜಾತಿ ವ್ಯಕ್ತಿ ಮುಂತಾದ ಭೇದಗಳು ಇಲ್ಲದಂತೆಯಾಗುತ್ತವೆ. ॥ ೬೧ ॥ ಎಲ್ಲಿಯ ವರೆಗೆ ಸಮುದ್ರದಲ್ಲಿ ಬಂದು ಕೂಡಿರುವದಿಲ್ಲವೋ ಅಲ್ಲಿಯ ವರೆಗೆ ಗಂಗಾ ಯಮುನಾ ನದಿಗಳು ಮತ್ತು ಪೂರ್ವ ವಾಹಿನಿ ಪಶ್ಚಿಮ ವಾಹಿನಿ ಮುಂತಾದ ಭೇದಗಳು ಕಾಣುತ್ತವೆ. ॥ ೬೨ ॥ ಅದೇ ಪ್ರಕಾರಾ ಯಾವದಾದರೂ ನಿಮಿತ್ತದಿಂದ ನನ್ನ ಕಡೆಗೆ ಚಿತ್ತವು ಅಂಟಿಕೊಂಡರೆ ಸಾಕು. ಆ ಮೇಲೆ ಸಹಜನೇ ನನ್ನ ಸ್ವರೂಪವು ಪ್ರಾಪ್ತವಾಗುತ್ತದೆ. ॥ ೬೩ ॥ ಎಲೋ ಅರ್ಜುನನೇ ಸ್ಪರ್ಶಮಣಿಯನ್ನು ಒಡೆಯುವದರ ದೆಶೆಯಿಂದಾದರೂ ಅದಕ್ಕೆ ಕಬ್ಬಿಣದ ಸುತ್ತಿಗೆಯನ್ನು ಸ್ಪರ್ಶ ಮಾಡಿದ ಕೂಡಲೆ ಅದು ಆ ಕ್ಷಣಕ್ಕೆ ಸುವರ್ಣವಾಗುತ್ತದೋ, ॥ ೬೪ ॥ ಅದೇ ಪ್ರಕಾರಾ ಗೋಪಿಕಾ ಸ್ತ್ರೀಯರು ವಿಷಯಾಭಿಲಾಷೆಯಿಂದೆ ನನ್ನಲ್ಲಿ ಪ್ರೇಮಪೂರ್ವಕವಾಗಿ ಚಿತ್ತವನ್ನಿಟ್ಟದರಿಂದ ಅವರಿಗೆ ನನ್ನ ಸ್ವರೂಪ ಪ್ರಾಪ್ತಿಯಾಗಿರುವದಿಲ್ಲೇನು? ॥ ೬೫ ॥ ಭೀತಿಯ ಯೋಗದಿಂದ ಕಂಸನು ಅಥವಾ ನನ್ನಲ್ಲಿ ಅಖಂಡ ವೈರತ್ವವನ್ನು ಮಾಡಿದ ಶಿಸುಪಾಲಾದಿಗಳಿಗೆ ನನ್ನ ಸ್ವರೂಪ ಪ್ರಾಪ್ತಿ ಆಗಿರುವದಿಲ್ಲೇ ಹೇಗೆ? ॥ ೬೬ ॥ ಅದರಂತೆ ಅಯ್ಯಾ ಅರ್ಜುನನೇ! ಪಾಂಡವರು ಮತ್ತು ಯಾದವ ಮುಂತಾದವರಿಗೆ ಆಪ್ತತ್ವದ ಸಂಬಂಧದಿಂದಲೂ, ವಸುದೇವ ಮುಂತಾದವರಿಗೆ ಮಮತ್ವದಿಂದಲೂ ನನ್ನ ಸಾಯುಜ್ಯ ಮುಕ್ತಿಯು ದೊರಕಿರುವದಿಲ್ಲೇನು? ॥ ೬೭ ॥ ಎಲೋ ಧನುರ್ಧರನೇ! ನಾರದ, ಧ್ರುವ, ಅಕ್ರೂರ, ಶುಕ, ಮತ್ತು ಸನತ್ಕುಮಾರ, ಮುಂತಾದವರಿಗೆ ನಾನು ಹ್ಯಾಗೆ ಭಕ್ತಿಯಿಂದ ಪ್ರಾಪ್ತನಾಗಿರುವೆನೋ, ॥ ೬೮ ॥ ಅದರಂತೆ ಗೋಪಿಕಾ ಸ್ತ್ರೀಯರಿಗೆ ಕಾಮದಿಂದ, (ವಿಷಯ ಬುದ್ಧಿಯಿಂದ) ಕಂಸನಿಗೆ ಭೀತಿಯಿಂದ, ಮತ್ತು ಶಿಸುಪಾಲ ಮುಂತಾದವರಿಗೆ ವೈರಬುದ್ಧಿಯಿಂದ, ನಾನು ಪ್ರಾಪ್ತನಾಗಿದ್ದೇನೆ. ॥ ೬೯ ॥ ಎಲೋ ಅರ್ಜುನನೇ! ನಾನು ಮುಕ್ತಿಯ ಸ್ಥಾನನಾಗಿದ್ದೇನೆ. ಆದುದರಿಂದ ನನಗೆ ಬೇಕಾದಂಥ ಮಾರ್ಗದಿಂದ ಅಂದರೆ ಭಕ್ತಿಯಿಂದಾಗಲೀ ವಿಷಯ ಬುದ್ಧಿಯಿಂದಾಗಲೀ, ವೈರಾಗ್ಯದಿಂದಾಗಲೀ, ಅಥವಾ ವೈರತ್ವದಿಂದಾಗಲೀ ಹೀಗೆ ಬೇಕಾದ ಮಾರ್ಗದಿಂದ ನನ್ನ ಕಡೆಗೆ (ನನ್ನ ಸ್ವರೂಪದಲ್ಲಿ) ಬಂದು ಸೇರಲಿಕ್ಕೆ ತೊಂದರೆ ಉಳದಿರುವದಿಲ್ಲ. ॥ ೪೭೦ ॥ ಆದುದರಿಂದ ಪಾರ್ಥನೇ! ನನ್ನ ಹತ್ತರ ಬಂದು ಕೂಡುವದರ ದೆಶೆಯಿಂದ ಇಲ್ಲಿ ಸಾಧನದ ಕೊರತೆಯೇ ಇರುವದಿಲ್ಲ. (ಹೀಗೆ ಅನೇಕ ಮಾರ್ಗಗಳು) ಇರುವವು. ॥ ೪೭೧ ॥ ಮತ್ತು ಬೇಕಾದ ಜಾತಿಯಲ್ಲಿ ಜನ್ಮ ಬರಲಿ ಅದರ ತೊಂದರೆಯೇ ಉಳದಿರುವದಿಲ್ಲ. ಆ ಮೇಲೆ ನನ್ನಲ್ಲಿ ಭಕ್ತಿ ಇಲ್ಲನೇ ವೈರಿತನವನ್ನು ಸಾಧಿಸಿದರೂ ಅಡ್ಡಿ ಇರುವದಿಲ್ಲ. ಆದರೆ ಭಕ್ತಿಯನ್ನಾಗಲೀ, ಅಥವಾ ವೈರತ್ವವನ್ನಾಗಲೀ, ಮಾಡುವದಿದ್ದರೆ ನನ್ನಲ್ಲಿಯೇ ಮಾಡಬೇಕು. ॥ ೪೭೨ ॥ ಎಲೋ! ಯಾವದಾದರೂ ನಿಮಿತ್ಯದಿಂದ ನನಗೆ ಯಾರಾದರೂ ಶರಣು ಬಂದರೆ ಮದ್ರೂಪವಾಗುವದು ಅವರ ಕೈಯೊಳಗೇ ಅದೆ. ॥ ೭೩ ॥ ಈ ಕಾರಣದ ದೆಶೆಯಿಂದ ಅರ್ಜುನನೇ! ಪಾಪಯೋನಿಯಲ್ಲಿ ಜನ್ಮ ಬಂದಿರಲಿ, ಇಲ್ಲನೇ ವೈಶ್ಯ, ಶೂದ್ರ, ಸ್ತ್ರೀಯರಿರಲಿ, ಇವರು ನನ್ನ ಭಕ್ತಿಯನ್ನು ಮಾಡುವದರಿಂದ ನನ್ನ ಸ್ವರೂಪವನ್ನು ಹೊಂದುತ್ತಾರೆ. ॥ ೪೭೪ ॥

ಕಿಂ ಪುನರ್ಬ್ರಾಹ್ಮಣಾಃ ಪುಣ್ಯಾ ಭಕ್ತಾ ರಾಜರ್ಷಯಸ್ತಥಾ।
ಅನಿತ್ಯಮಸುಖಂ ಲೋಕಮಿಮಂ ಪ್ರಾಪ್ಯ ಭಜಸ್ವ ಮಾಂ ॥ ೩೩ ॥

[ಕಂ ಪುನರ್ಬ್ರಾಹ್ಮಣಾಃ ಪುಣ್ಯಾ ಇತಿ] ಮಗ ವರ್ಣಾಮಾಜೀ ಛತ್ರ ಚಾಮರ । ಸ್ವರ್ಗ ಜಯಾಚೇ ಅಗ್ರಹಾರ । ಮಂತ್ರ ನಿದ್ಯೇಸಿ ಮಾಹೇರ । ಬ್ರಾಹ್ಮಣ ಜೇ ॥ ೭೫ ॥ ಜೇ ಪೃಥ್ವೀತಳೀಂಚೇ ದೇವ । ಜೇ ತಪೋವತಾರ ಸಾವಯವ । ಸಕಳ ತೀರ್ಥಾಸಿ ದೈವ । ಉದಯಲೇ ಜೇ ॥ ೭೬ ॥ ಜೆಥ ಅಖಂಡ ವಸಿಜೇ ಯಾಗೀ । ಜೇ ವೇದಾಂಚೀ ವಜ್ರಾಂಗೀ । ಜಯಾಂಚಿಯೇ ದಿಠೀಚಿಯಾ ಉತ್ಸಂಗೀ । ಮಂಗಳ ವಾಥೇ ॥ ೭೭ ॥ ಜಯಾಂಚಿಯೇ ಆಸ್ಥೇಚೇನಿ ವೋಲೇ । ಸತ್ಯರ್ಮ ಪಾಲ್ಹಾಳೀ ಗೇಲೇ । ಸಂಕಲ್ಪೆ ಸತ್ಯ ಜಿಯಾಲೇ । ಜಯಾಂಚೇನಿ ॥ ೭೮ ॥ ಜಯಾಂಚೇನಿ ಗಾ ಬೋಲೇ । ಅಗ್ನೀಸಿ ಆಯುಷ್ಯ ಜಾಹಲೇ । ಮ್ಹಣೋನಿ ಸಮುದ್ರೇ ಪಾಣೀ ಆಪುಲೇ । ದಿಧಲೇ ಯಾಂಚಿಯಾ ಪ್ರೀತೀ ॥ ೭೯ ॥ ಮಿಯಾ ಲಕ್ಷ್ಮೀಡಾವಲೋನಿ ಕೇಲೀ ಪರೌತೀ । ಫೇಡೋನಿ ಕಾಸ್ತುಭ ಫೇತಲಾ ಹಾತೀ । ಮಗ ವೋಢವಲೀ ವಕ್ಷಃಸ್ಥಳಾಚೀ ವಾಖುತೀ । ಜಠರಜಾ ॥ ೪೮೦ ॥ ಅಝುನಿ ಪಾವುಲಾಚೀ ಮುದ್ರಾ । ಮೀ ಹೃದಯೀ ವಾಹೇ ಗಾ ಸುಛದ್ರಾ । ಜೇ ಆಪುಲಿಯಾ ದೈವ ಸಮುದ್ರಾ । ಜತನೇ ಲಾಗೀ ॥ ೮೧ ॥ ಜಯಾಂಚಾ ಕೋಪ ಸುಛಟಾ । ಕಾಳಾಗ್ನಿರುದ್ರಾಚಾ ವಸಾಟಾ । ಜಯಾಂಚೇ ಪ್ರಸಾದೇ ಫುಕಟಾ । ಜೋಡತೀ ಸಿದ್ಧೀ ॥ ೮೨ ॥ ಐಸೇ ಪುಣ್ಯಪೂಜ್ಯ ಜೇ ಬ್ರಾಹ್ಮಣ । ಆಣಿಮಾಮಾಝ್ಯಾ ಠಾಯೀ ಅತಿನಿಪುಣ । ಆತಾ ಮಾತೇ ಪಾವತೀ ತೇಹೇ ಕವಣ । ಸಮರ್ಥಣೇ ॥ ೮೩ ॥ ಪಾಹೇ ಪಾ ಚಂದನಾಚೇನಿ ಅಂಗಾನಿಳೇ । ಶಿವತಿಲೇ ನಿಂಬ ಹೋತೇ ಜೇ ಜವಳೇ । ತಿಹೀ ನಿರ್ಜೀವೀಹೀ ದೇವಾಂಚೀ ನಿಢಳೇ । ಬೈಸಣೇ ಕೇಲೀ ॥ ೮೪ ॥ ಮಗ ತೋ ಚಂದನ ತೇಥೇ ನ ಪವೇ । ಐಸೇ ಮನೀ ಕೈಸೇನಿ ಧರಾವೇ । ಅಥವಾ ಪಾತಲಾ ಹೇ ಸಮರ್ಥಾವೇ । ತೆಂವ್ಹಾ ಕಾಯೀ ಸಾಜ ॥ ೮೫ ॥ ತೇಥ ನಿನವೀಲ ಐಸಿಯಾ ಆಶಾ । ಹರೀ ಚಂದ್ರಮಾ ಆಧಾ ಐಸಾ । ವಾಹಿಜತ ಶಿರಸಾ । ನಿರಂತರ ॥ ೮೬ ॥ ತೇಥ ನಿನವಿತಾ ಆಣಿ ಸಳಾ । ಪರಿಮಳ ಚಂದ್ರಾಹೂನ ಆಗಳಾ । ತೋ ಚಂದನ ಕೇವೀ ಅವಲೀಳಾ । ಸರ್ವಾಂಗೀ ನ ಬೈಸೇ ॥ ೮೭ ॥ ಈ ರಥೋದೇಕೇ ಬಿಯೇಚಿಯೇ ಕಾಸೇ । ಲಾಗಲಿಯಾ ಸಮುದ್ರ ಜಾಲೀ ಅನಾಯಾಸೇ । ತಿಯೇ ಗಂಗೇಸಿ ಕಾಯ ಅನಾರಿಸೇ । ಗತ್ಯಂತರ ಅಸೇ ॥ ೮೮ ॥ ಮ್ಹಣೋನಿ ರಾಜರ್ಷಿ ಕಾ ಬ್ರಾಹ್ಮಣ । ಜಯಾ ಗತಿ ಮತಿ ಮೀಚಿ ಶರಣ । ತಯಾ ತ್ರಿಶುದ್ಧೀ ಮೀಚಿ ನಿರ್ವಾಣ । ಸ್ಥಿತಿಹೀ ಮೀಚಿ ॥ ೮೯ ॥ ಯಾಲಾಗೀ ಶತಜರ್ಜರ ನಾವೇ । ರಿಗೋನಿ ಕೇವೀ ನಿಶ್ಚಿಂತ ಹೋ ಆನೇ । ಕೈಸೇನಿ ಉಘಡಿಯಾ ಅಸಾವೇ । ಶಸ್ತ್ರವರ್ಷೀ ॥ ೪೯೦ ॥ ಆಂಗಾವರೀ ಪಡತಾ ಪಾಷಾಣ । ನ ಸುವಾವೇ ಕೇವೀ ವೋಡಣ । ರೋಗೇ ದಾಟಲಾ ಆಣಿ ಉದಾಸಪಣ । ವೋಖದೇಸೇ ॥ ೯೧ ॥ ಜೇಥ ಚಹೂಕಡೇ ಜಳತ ವಣವಾ । ತೇಥೂನಿ ನ ನಿಗಿಜೇ ಕೇವೀ ಪಾಂಡವಾ । ತೇವೀ ಲೋಕಾ ಯೇವೂನಿ ಸೋಪದ್ರವಾ । ಕೇವೀ ನ ಭಚಿಜೇ ಮಾತೇ ॥ ೯೨ ॥ ಅಗಾ ಮಾತೇ ನ ಭಜಾವಯಾ ಲಾಗೀ । ಕವಣ ಬಳಪಾ ಆಪುಲಿಯಾ ಆಂಗೀ । ಕಾಈಘರೀ ಕೀ ಭೋಗಿಜೇ । ನಿಶ್ಚಿಂತೀ ಕೇಲೀ ॥ ೯೩ ॥ ನಾತರೀ ವಿದ್ಯಾ ಕೀ ವಯಸಾ । ಯಯಾ ಪ್ರಾಣೀ ಯಾಸಿ ಹಾ ಐಸಾ । ಮಜ ನ ಭಜತಾ ಭರವಸಾ । ಸುಖಾಚಾ ಕೋಣ ॥ ೯೪ ॥ ತರೀ ಭೋಗ್ಯ ಜಾತ ಜೇತುಲೇ । ತೇ ಏಕಾ ದೇಹಾಚಿಯಾ ನಿಕಿಯಾ ಲಾಗಲೇ । ಆಣಿ ಏಥ ದೇಹ ತವ ಅಸೇ ಪಡಿಲೇ । ಕಾಳಾಚಿಯೇ ತೋಂಡೀ ॥ ೯೫ ॥ ಬಾಪ ದುಃಖಾಚೇ ಕೇಣೇ ಸುಟಲೇ । ಜೆಥ ಮರಣಾಚೇ ಭರೇ ಲೋಟಲೇ । ತಿಯೇ ಮೃತ್ಯುಲೋಕೀಚೇ ಶೇವಟಲೇ । ಹಾಟವೇಳೇ ಯೇಣೇ ಜಾಹಾಲೇ ॥ ೯೬ ॥ ಆತಾ ಸುಖೇಸಿ ಜೀವಿತಾ । ಕೈಂಚಿ ಗ್ರಾಹಿಕೇ ಕೀಜೇಲ ಪಾಂಡುಸುತಾ । ಕಾಯ ರಾಹೋಂಡೀ ಫುಂಕಿತಾ । ದೀಪ ಲಾಗೇ ॥ ೯೭ ॥ ಅಗಾ ವಿಷಾಚೇ ಕಾಂದೇ ವಾಂಟುನೀ । ಜೋ ರಸ ಫೇಇಜೇ ಪಿಳುನೀ । ತಯಾ ನಾಮ ಅಮೃತ ಠೇವುನೇ । ಜೈಸೇ ಅಮರ ಹೋಣೇ ॥ ೯೮ ॥ ತೇವೀ ವಿಷಯಾಂಚೇ ಜೇ ಸುಖ । ತೇ ಕೇವಳ ಪರಮ ದುಃಖ । ಪಢೀ ಕಾಯಕೀಜೇ ಮೂರ್ಖ । ನ ಸೇವಿತಾ ನ ಸರೇ ॥ ೯೯ ॥

ಕಾ ತೀಸ ಖಾಂಡೂನಿ ಆಪುಲೇ । ಪಾಯಾಚ್ಯಾ ಖುತೀ ಬಾಂಧಿಲೇ । ತೈಸೇ ಮೃತ್ಯುಲೋಕೀಂಚೇ ಭಲೇ । ಆಹೇ ಆಘನೇ ॥ ೫೦ ॥ ಮ್ಹಣೋನಿ ಮೃತ್ಯುಲೋಕೀ ಸುಖಾಚೀ ಕಹಾಣೀ । ಐಕಿ ಜೇಲ ಕವಣಾ ಚಿಯೇ ಶ್ರವಣೀ । ಕೈಂಚೀ ಸುಖನಿದ್ರಾ ಆಂಥರುನೇ । ಇಂಗಳಾಂಚ್ಯಾ ॥ ೧ ॥ ಜಿಯೇ ಲೋಕೀಂಚಾ ಚಂದ್ರ ಕ್ಷಯರೋಗಿ । ಜೇಥ ಉದಯ ಹೋಯ ಅಸ್ತಾಲಾಗೀ । ದುಃಖ ಲೇವೂನಿ ಸುಖಾಚೀ ಆಂಗೀ । ಸಳಿತ ಜಗಾತೇ ॥ ೨ ॥ ಜೇಥ ಮಂಗಳಾಚಿಯಾ ಅಂಕುರೀ । ಸನೇಚಿ ಅನುಂಗಳಾಚೀ ಪಡೇ ಪಾರೀ । ಮೃತ್ಯು ಉದರಾಚಿಯಾ ಪರವರೀ । ಗರ್ಭಗಿಂವಸೀ ॥ ೩ ॥ ಜೇ ನಾಹೀ ತಯಾತೇ ಚಿಂತವೀ । ತವ ತೇಂಚಿ ನೇಇಜೇ ಗಂಧರ್ವಿಣೀ । ಗೇಲಿಯಾಚೀ ಕವಣೇ ಗಾಂವೀ । ಶುದ್ಧೀ ನಲಗೇ ॥ ೪ ॥ ಅಗಾಗಿಂವ ಸಿತಾ ಆಘವಿಯಾ ವಾಟೇ । ಪರತಲೇ ಪಾವುಲಚಿ ನಾಹೀ ಕೀರಟೇ । ಸೈಂಧ ನಿವಾಲಿಯಾಂಚಿಯಾ ಗೋಷ್ಟೀ । ತಿಯೇ ಪುಣಾಣೇ ಜೇಥೀಂಚೀ ॥ ೫ ॥ ಜೇಥೀಂಚಿಯೇ ಅನಿತ್ಯ ತೇಚೀ ಥೋರೀ । ಕರಿತಯಾ ಬ್ರಹ್ಮಯಾಚೇ ಆಯುಷ್ಯ ವೇರೀ । ಕೈಸೇ ನಾಹೀ ಹೋಣೇ ಅವಧಾರೀ । ನಿಸಟುನಿಯಾ ॥ ೬ ॥ ಐಸೀ ಲೋಕೀಂಚೀ ಜಿಯೇ ನಾಂದಣುಕ । ತೇಥ ತೇ ಜನ್ಮಲೇ ಆಥಿ ಜೇ ಲೋಕ । ತಯಾಂಚಿಯೇ ನಿಶ್ಚಿಂತೀಚೇ ಕೌತುಕ । ದಿಸತ ಅಸೇ ॥ ೭ ॥ ಪೈ ದೃಷ್ಟ್ಯಾ-ದೃಷ್ಟೀಚಿಯೇ ಜೋಡೀ । ಲಾಗೀ ಭಾಂಡನವಲ ನ ಸುಟೇ ಕವಡೀ । ಜೇಥ ಸರ್ವಸ್ವೇ ಹಾನಿ ತೇಥ ಕೋಡೀ । ವೇಂಚಿತೀ ಗಾ ॥ ೮ ॥ ಜೋ ಬಹುನೇ ವಿಷಯು ವಿಲಾಸೇ ಗುಂಫೇ । ತೋ ಮ್ಹಣತೀ ಉವಾಈ ಪಡಿಲಾ ಸಾಂಪೇ। ಜೋ ಅಭಿಲಾಷ ಧಾರೀ ವಡಪೇ । ತಯಾಂತೇ ಸಜ್ಞಾನ ಮ್ಹಣತೀ ॥ ೯ ॥ ಜಯಾಂಚೇ ಆಯುಷ್ಯ ಧಾಕುಟೇ ಹೋಯ । ಬಳ, ಪ್ರಜ್ಞಾ ಜಿರೋನಿ ಜಾಯ । ತಯಾಚೇ ನಮಸ್ಯಾರಿತೀ ಪಾಯ । ವಡಿಲ ಮ್ಹಣೂನಸೀ ॥ ೫೧೦ ॥ ಜವ ಜವ ಬಾಳ ಬಳಿಯಾ ವಾಢೇ । ತವ ತವ ಭೋಗಜೇ ನಾಚತೀ ಕೋಡೇ । ಆಯುಷ್ಯ ನಿವಾಲೇ ಆಂತುಲಿಯೇ ಕಡೇ । ತೇ ಗ್ಲಾನೀಚಿ ನಾಹೀ ॥ ೧೧ ॥ ಜನ್ಮ ಲಿಯಾ ದಿವಸ ದಿವಸೇ । ಹೋ ಲಾಗೇ ಕಾಳಾಚೇ ಯಾಚಿ ಐಸೇ । ಕೀ ವಾಢತೀ ಕರಿತೀ ಉಲ್ಹಾಸೇ । ಉಭವಿತೀ ಗುಡಿಯಾ ॥ ೫೧೨ ॥ ಅಗಾ ಮರ ಹಾ ಬೋಲ ನ ಸಾಹತೀ । ಆಣಿ ಮೇಲಿಯಾ ತರೀ ರಡತೀ । ಪರೀ ಅಸತೇ ಜಾತ ನ ಗಣಿತೀ । ಗಹಿಂಸ ಪಣೇ ॥ ೧೩ ॥ ದರ್ದುರ ಸಾಪೇ ಗಿಳಿಜತು ಆಹೇ ಉಭಾ । ಕೀ ತೋ ಮಾಸಿಯಾ ವೇಂಟಾಳೀ ಜಿಭಾ । ತೈಸೇ ಪ್ರಾಣಿಯೇ ಕವಣೇ ಲೋಭಾ । ವಾಢವಿತೀ ತೃಷ್ಣಾ ॥ ೫೧೪ ॥ ಅಹಾ ಕಟಕಟಾ ಹೇ ವೋಖಟೇ । ಇಯೇ ಮೃತ್ಯು ಲೋಕೀಂಚೇ ಉಫರಾಟೇ । ಏಥ ಅರ್ಜುನಾ ಜರೀ ಅವಚಟೇ । ಜನ್ಮಲಾಸೀ ತೂ ॥ ೫೧೫ ॥ ತರೀ ಝಡ ಝುಡೋನಿ ವಹಿಲಾ ನಿಘ್ಯಾ । ಇಯೇ ಭಕ್ಕೀಚಿಯೇ ವಾಟೇ ಲಾಗ । ಜಿಯಾ ಪಾವಸೀ ಅವ್ಯಂಗ । ನಿಜಧಾಮ ಮಾಝೇ ॥ ೫೧೬ ॥

ಅರ್ಥ—ಆಮೇಲೆ ನಾಲ್ಕೂ ವರ್ಣಗಳಲ್ಲಿ ಛತ್ರಚಾಮರದಂತೆ ಶ್ರೇಷ್ಠರಾಗಿರುವರೋ ಮತ್ತು ಸ್ವರ್ಗವು ಯಾರಿಗೆ ನಿರ್ವಾಹದದೆಶೆಯಿಂದ ಹಾಕಿಕೊಟ್ಟ ಇನಾಮು ಗ್ರಾಮವಾಗಿರುವದೋ, ಆ ಶ್ರೇಷ್ಠ ಬ್ರಾಹ್ಮಣರು, ॥ ೬೫ ॥ ಅವರು ಪೃಥ್ವಿಯ ಮೇಲಿನ (ಭೂದೇವ) ದೈವತಗಳೂ ಮತ್ತು ತಪಶ್ಚರ್ಯದ ಮೂರ್ತಿಮಂತ ಅನತಾರಿಕರೂ, ಆಗಿರುವರು. ಯಾರ ಯೋಗದಿಂದ ಸರ್ವ ತೀರ್ಥಗಳ ದೈನವು ಉದಯವಾಗಿರುವದೋ, ॥೬೬॥ ಯಾರ ಸ್ಥಳದಲ್ಲಿ ಯಜ್ಞದ ಅಖಂಡ ವಾಸವು, ಮತ್ತು ವೇದಗಳ ಅಭೇದ್ಯವಾದ ಕವಚವಿರುವದೋ, ಅವರ ನಿಜದೃಷ್ಟಿಯ ಯೋಗದಿಂದ ಸರ್ವಸ್ಥಳದಲ್ಲಿ ಮಂಗಲ ಕಾರ್ಯಗಳು ವೃದ್ಧಿ ಹೊಂದುತ್ತವೆ. ॥ ೪೬೬ ॥ ಯಾರ ಆಸ್ಥಾರೂಪ ಹಸುಯಿಂದ ಸತ್ಕರ್ಮದ ಪ್ರಸಾದವಾ ಗಿರುವದೋ. ಮತ್ತು ಯಾರ ನಿಶ್ಚಯದಿಂದ ಸತ್ಯವು ಜೀವಂತ ಉಳದಿರುವದೋ, ॥ ೪೬೮ ॥ ಯಾವ ಭೂಸುರರ ಆಶೀರ್ವಾದ ಬಲದಿಂದ ಅಗ್ನಿಯ ಆಯುಷ್ಯವು ಬೆಳೆದಿರುವದೋ, ಆ ಮಹಾತ್ಮರ ಪ್ರೀತಿಯುದೆಶೆಯಿಂದಲೇ ಅಗ್ನಿಗೆ ಸಮು

ದ್ರವು ತನ್ನ ಸ್ಥಳದಲ್ಲಿ ಆಶ್ರಯವನ್ನು ಕೊಟ್ಟಿರುವದು. ॥ ೪೯ ॥ ನಾನು ಲಕ್ಷ್ಮೀದೇವಿಯನ್ನು ದೂರಸರಿಸಿ ಬೇರೆನೂಡಿ ಶ್ರೀಕೃಷ್ಣ ಕೌಸ್ತುಭ ಮಣಿಯ ಹಾರವನ್ನು ಕೊರಳೊಳಗಿಂದ ತೆಗೆದು ಕೈಯೊಳಗೆ ಹಿಡಿದೆನು. ಆ ವೇಲೆ (ಭೂಸುರನ) ಚರಣರಜವನ್ನು ಸ್ವೀಕರಿಸಬೇಕೆಂಬ ತತ್ಪರತೆಯಿಂದ ನನ್ನ ವಕ್ಷಸ್ಥಳವನ್ನು ಮುಂದೆ ಮಾಡಿದೆನು. ॥ ೪೮ ॥ ಎಲೋ ಸುಭದ್ರಾ ಪತಿಯೇ ! ನನ್ನ ಶಾಂತತ್ವವೂ, ಮತ್ತು ಲೌಕಿಕವೂ, ಷಡ್ಗುಣೈಶ್ವರ್ಯ ಸಂಪನ್ನತೆಯು, ಸ್ಥಿರವಾಗಿ ರಕ್ಷಣ ಮಾಡುವದರಿಂದ, ಇಂದಿನವರೆಗೆ ಆ ಬ್ರಾಹ್ಮಣರ ಪಾದ ಮುದ್ರೆಗಳ (ಶ್ರೀವತ್ಸಲಾಂಛನವೆಂಬ) ಚಿನ್ಹವನ್ನು ನನ್ನ ವಿಶಾಲವಾದ ಹೃದಯದ ಸ್ಥಳದಲ್ಲಿ ಧರಿಸಿದ್ದೇನೆ. ॥ ೪೮ ॥ ॥ ೪೮ ॥ ಎಲೋ ಮಹಾವೀರನೇ ! ಯಾರ ಕೋಪವು ಪ್ರಳಯ ಕಾಲದ ಕಾಲಾಗ್ನಿ ರುದ್ರದೇವರ ವಾಸಸ್ಥಾನವಾಗಿರುವದೊ, ಮತ್ತು ಯಾರ ಅನುಗ್ರಹವಾಗುವದರಿಂದ ಪುಕ್ಕಟೆ ಯಾಗಿ ಅಷ್ಟಮಹಾಸಿದ್ಧಿಗಳು ಪ್ರಾಪ್ತವಾಗುತ್ತವೆಯೋ ॥ ೪೮ ॥ ಹೀಗೆ ಪುಣ್ಯ ಮತ್ತು ಪರಮ ಪೂಜ್ಯ ಬ್ರಾಹ್ಮಣರಿದ್ದು ಅವರು ನನ್ನ ಸ್ಥಳದಲ್ಲಿ ಪೂರ್ಣ ಭಕ್ತಿಮಾಡುತ್ತಾರೆ. ಅವರು ಮದ್ಗೂಪವಾಗುತ್ತಾರೆಂಬದನ್ನು ಈಗ ಬೇರೆ ಸಿದ್ಧ ಮಾಡಬೇಕಾಗಿರುವದೇನು ? ॥ ೪೮ ॥ ಚಂದನ ಗಿಡದಮೇಲಿಂದ ಬರುವಗಾಳಿಯ ಸ್ಪರ್ಶದಿಂದ ಹತ್ತಿರ ಇರುವ ಜೀವಿನ ಗಿಡಗಳು ಚಂದನ ವೃಕ್ಷಗಳಾಗುತ್ತವೆ. ಅವು ಸಜೀವ (ಅಚೇತನ) ವಿದ್ದಾಗ್ಯೂ ಅದು ದೇವರ ಮಸ್ತಕದ ಮೇಲೆ ಅರ್ಪಣ ಮಾಡಲಿಕ್ಕೆ ಯೋಗ್ಯವಾಗುವದು. ॥ ೪೮ ॥ ಆದರೆ ಪ್ರತ್ಯಕ್ಷ ಚಂದನ ವೃಕ್ಷವು ಆಸ್ಥಾನವನ್ನು ದೊರಕಿಸಲಿಕ್ಕಿಲ್ಲ ವೆಂಬುದನ್ನು ಮನಸಿನಲ್ಲಿ ಹೇಗೆ ತರಬೇಕು ? ಅಥವಾ ಆ ಸ್ಥಾನವು ದೊರಕಿಸುತ್ತದೆಂಬದನ್ನು ಸಿದ್ಧ ಮಾಡಬೇಕಾಗಿರುವದೋ ? ಇಲ್ಲದಿದ್ದರೆ ಅದು ಅಸತ್ಯವಾದೀತೇನು. ॥ ೪೮ ॥ ಶ್ರೀಶಂಕರನು ಪರೋಪಕಾರಾರ್ಥವಾಗಿ ಹಾಲಾಹಲ ವಿಷವನ್ನು ಪ್ರಾಶನ ಮಾಡಿದ್ದುದರಿಂದ ಆದ ದಾಹ ಶಾಂತನಮಾಡಿಕೊಳ್ಳುವದಕ್ಕಾಗಿ ತನ್ನ ಮಸ್ತಕದ ಮೇಲೆ ನಿರಂತರ ಅರ್ಧ ಚಂದ್ರನನ್ನು ಧರಿಸಿದನು. ॥ ೪೮ ॥ ಆದರೆ ದಾಹ ತಣಿಗೆ ಮಾಡುವಂಥದು ಮತ್ತು ಚಂದ್ರನಕಿಂತಲೂ ಪೂರ್ಣ ಸುವಾಸನೆಯಿಂದ ಶ್ರೇಷ್ಠವಾದ ಚಂದನವನ್ನು ಸರ್ವಾಂಗದಲ್ಲಿ ಸಹಜನೇ, ಏಕೆ ಧಾರಣ ಮಾಡಲಿಕ್ಕಿಲ್ಲ ? ॥ ೪೮ ॥ ಅಥವಾ ಹಾದಿಯ ಮೇಲೆ ಹರಿಯುವ ನೀರು ಯಾವದರ ಆಶ್ರಯ ಮಾಡುವದರಿಂದ (ಆ, ರಥೋತ್ಸೇದಕವು) ಅನಾಯಾಸದಿಂದ ಸಮುದ್ರ ರೂಪವಾಗಿ ಹೋಗುವದೋ, ಆ ಗಂಗಾನದಿಗೆ ಸಮುದ್ರದ ಹೊರ್ತು ಅನ್ಯಗತಿ ಇರುವ ದೇನು ? ॥ ೪೮ ॥ ಆದುದರಿಂದ ಎಲ್ಲರಿಗೂ ಗತಿ ಮತ್ತು ಜ್ಞಾನ ಕೊಡುವವನೂ, ನಿಶ್ಚಯವಾಗಿ ನಾನೇ ಇದ್ದೇನೆ. ಆ ರಾಜಋಷಿಗಳಿಗೆ ಮತ್ತು ಬ್ರಾಹ್ಮಣರಿಗೆ ಭಕ್ತಿ ಮತ್ತು ಮುಕ್ತಿಯ ಸ್ಥಾನವು ನಾನೇ ಆಗಿದ್ದೇನೆ. ॥ ೪೯ ॥ ಆದುದರಿಂದ ನೂರಾರು ಛಿದ್ರಗಳುಳ್ಳ ನೌಕೆಯಲ್ಲಿ ನಿಷ್ಕಾಳಜಿಯಿಂದ ಕುಳಿತು ನಾವು ಮುಳಗಲಿಕ್ಕಿಲ್ಲೆಂಬ ನಂಬಿಗೆಯಿಂದ ಹೇಗೆ ಸ್ವಸ್ಥಚಿತ್ತಉಳ್ಳವರಾಗಿರಬೇಕು ? ಇಲ್ಲವೇ ಶಸ್ತ್ರಗಳ ಮಳೆಯು ಸುರಿಯುತ್ತಿರಲು ಮಧ್ಯದಲ್ಲಿ ಮೈನೇಲೆ ಹೊದಿಕೆ ಸಹ ಇಲ್ಲದೇ ನಿರ್ಭಯದಿಂದ ಹೇಗೆ ನಿಲ್ಲಬೇಕು ? ॥ ೪೦ ॥ ಅರ್ಜುನಾ ! ಮೈನೇಲೆ ಪಾಷಾಣವೃಷ್ಟಿಗರೆಯುತ್ತಿರಲು ಮಧ್ಯದಲ್ಲಿ ಢಾಲು ಮುಂದೆ ಮಾಡಿ ಪರಿಹಾರ ಯಾಕೆ ಮಾಡಿಕೊಳ್ಳಬಾರದು ? ದೇಹವು ರೋಗದಿಂದ ಗ್ರಸ್ತವಾಗಿರಲು ಆಲಸ್ಯತನವನ್ನು ಏಕೆ ಮಾಡಬೇಕು ? ॥ ೪೧ ॥ ಅರ್ಜುನನೇ ! ಎಲ್ಲಿ ನಾಲ್ಕೂಕಡೆಯಿಂದ ಜ್ವಾಲೆ ಪಸರಿಸುತ್ತಿರಲು ಅಲ್ಲಿಂದ ಪಾರಾಗಿ ತೀವ್ರ ಹೊರಗೆ ಏಕೆ ಹೋಗಬಾರದು ? ಮತ್ತು ಅನೇಕ ದುಃಖಗಳಿಂದ ಯುಕ್ತವಾದ ಈ ಮೃತ್ಯುಲೋಕದಲ್ಲಿ ಜನ್ಮಕ್ಕೆ ಬಂದು ಪ್ರಾಣಿಗಳು ನನ್ನನ್ನು ಭಜಿಸದೇ ಹೇಗೆ ಇರಬೇಕು ? ॥ ೪೨ ॥ ಎಲೈ ಅರ್ಜುನನೇ ! ನನ್ನ ಭಜನೆಯನ್ನು ಮಾಡಬಾರದೆಂಬ ಬಗ್ಗೆ ಈ ಪ್ರಾಣಿಗಳ ಮೈಯಲ್ಲಿ ಯಾವ ಸಾಮರ್ಥ್ಯವಿರುವದು ? ಅಥವಾ ನಿಶ್ಚಿಂತಿಯಿಂದ ಇರುವಂಥ ಯಾವ ಭೋಗ್ಯವಸ್ತುಗಳ ಸಮೃದ್ಧಿಯು ಇವರ ಮನೆಯಲ್ಲಿ ಇರುವದು ಹೇಳು. ॥ ೪೩ ॥ ಇಲ್ಲವೇ ನಂನನ್ನು ಭಜಿಸಿದೇ ತಂನ ವಿದ್ಯಾ ಅಥವಾ ತಾರುಣ್ಯ ಇವುಗಳಿಂದಲೇ ತನಗೆ ನಿರಂತರ ಸುಖವು ದೊರಕುವದೆಂಬದಾದರೂ ಇವನಿಗೆ ಹೇಗೆ ಭರವಸವಿರಬಹುದು ? ॥ ೪೪ ॥ ಆದರೆ ಭೋಗ್ಯವಸ್ತುಗಳೆಂಬೆಷ್ಟು ಇರುವವೋ, ಅವೆಲ್ಲವುಗಳು ಒಂದು ದೇಹದ ಸುಖಪ್ರಾಪ್ತಿಯದೆಶೆಯಿಂದ ಇರುವವು ಮತ್ತು ಆ ದೇಹವು ನೋಡಿದರೆ ಈ ಮೃತ್ಯುಲೋಕದಲ್ಲಿ ಮರಣದ ಬಾಯಿಯಲ್ಲಿ ಬಿದ್ದಿರುತ್ತದೆ. ॥ ೪೫ ॥ ಎಲೋ ಅರ್ಜುನನೇ ! ಈ ಮೃತ್ಯುಲೋಕದ ಮನುಷ್ಯರೂಪಿ ಕಡೆಯಸಂತೆಯಲ್ಲಿ ದುಃಖರೂಪಿ ವಸ್ತುಗಳೇ ತುಂಬಿದ್ದು ಮರಣರೂಪಿ ಮಾಪನಿಂದ ಅಳೆಯುವದು ನಡೆದಿರುತ್ತದೆ.

ಸ್ಥಳದಲ್ಲಿ ನಾವು ಮನುಷ್ಯ ಜನ್ಮವನ್ನೆತ್ತಿ ಬಂದಿರುತ್ತೇವೆ. ॥ ೯೬ ॥ ಆದರೆ ಎಲೋ ಪಂಡುಸುತನೇ ! ಇಂಥ ದುಃಖ ರೂಪವಾದ ಸಂಕೆಯಲ್ಲಿ (ದುಃಖವುಯುವಾದ ಪದಾರ್ಥಗಳೇ ತುಂಬಿದ್ದರಿಂದ) ಜೀವಿತವು ಸುಖ ಹೊಂದುವಂಥ ಯಾವ ಪದಾರ್ಥಗಳನ್ನು ಕೊಳ್ಳಲಿಕ್ಕೆ ಬಂದೀತು ? ಬೆಂಕೆಯು ಆರಿಹೋದನೋಲೆ ಉಳಿದಂಥ ಕರಿಬೂದಿಯನ್ನು ಊದುತ್ತಾ ಕುಳಿತರೆ ಅದರಿಂದ ದೀವಿಗೆಯು ಹತ್ತುಬಲ್ಲದೇ ? ॥ ೯೭ ॥ ಅರ್ಜುನನೇ ! ಬಚನಾಗನೆಂಬ ವಿಷದ ಗಡ್ಡೆಯನ್ನು ಅರಿದು ಅದರರಸನನ್ನು ತೆಗೆದು ಅವಕ್ಕೆ ಅಮೃತವೆಂದು ಹೆಸರಿಟ್ಟು ಸೇವನ ಮಾಡಿ ಅಮರರಾಗುವೆನೆಂದು ಯಾವನು ಬಯಸುವನೋ, ॥ ೯೮ ॥ ಅದೇ ಪ್ರಕಾರ ಈ ವಿಷಯದಿಂದಾಗುವ ಸುಖವು ಅದು ಕೇವಲ ಮಹತ್ವವಾದ ದುಃಖವೇ ಇರುತ್ತದೆ. ಆದರೆ ಯಾರು ಮೂರ್ಖರೂ ಅಜ್ಞಾನಿಗಳೂ ಇರುವರು ಅವರಿಗೆ ಆ ವಿಷಯಸುಖದ ಸೇವನ ಮಾಡದೇ ಅವರು ಎಂದಿಗೂ ಬಿಡುವದಿಲ್ಲ ॥ ೯೯ ॥ ಇಲ್ಲವೆ ಕಾಲಿಗೆ ಅದಗಾಯ ಮಾಯುವದರ ದೆಶೆಯಿಂದ ತಮ್ಮ ಮಸ್ತಕವನ್ನು ಕೊಯ್ದು ಕಟ್ಟುವದು ಎಷ್ಟು ಹಿತಕರವಾಗಿರುವದೋ, ಏಸ್ಟೇ ಈ ಮೃತ್ಯುಲೋಕದೊಳಗಿನ ಸರ್ವ ವ್ಯವಹಾರಗಳು ಉತ್ತಮವಾಗಿರುತ್ತವೆ. ॥ ೫೦೦ ॥ ಆದುದರಿಂದ ಈ ಮೃತ್ಯುಲೋಕದಲ್ಲಿ ಸ್ವಲ್ಪವಾದರೂ ಸುಖವಿರುವದೆಂಬ ಮಾತು ಯಾರಾದರೂ ತಮ್ಮ ಕಿವಿಯಿಂದ ಕೇಳಿರುವರೇನು ? ಪ್ರಜ್ವಲಿತವಾದ ಬೆಂಕೆಯು ಹಾಸಿಗೆಯು ಮೇಲೆ ಆನಂದದಿಂದ ನಿದ್ದೆಯು ಹೇಗೆ ಬರಬೇಕು ? ॥ ೫೦೧ ॥ ಯಾವ ಮೃತ್ಯುಲೋಕದ ಚಂದ್ರನು ಕ್ಷಯರೋಗಿ ಇರುವನೋ, ಎಲ್ಲಿ ಮುಳುಗುವವರ ದಶೆಯಿಂದಲೇ (ಸೂರ್ಯನ) ಉದಯವಾಗುತ್ತಿರುವದೋ, ಅಲ್ಲಿ ದುಃಖವು ಸುಖದ ಪೋಷಾಕನನ್ನು ಧರಿಸಿಕೊಂಡು ಜಗತ್ತಿನ ಜನರನ್ನು ಯಾವಾಗಲೂ ತಕ್ಕಿಸುತ್ತದೆ. ॥ ೫೦೨ ॥ ಎಲ್ಲಿ ಮಂಗಲಕರವಾದ ಅಂಕುರವು ಹುಟ್ಟುವಷ್ಟರಲ್ಲಿಯೇ ಅಲ್ಲಿ ಅನುಂಗಲವ ಮಾತಿನ ಹುಳವು ಬೀಳುತ್ತದೆ. ಮತ್ತು ಮರಣವು ಹೊಟ್ಟೆಯೊಳಗಿನ ಗರ್ಭವನ್ನು ಸಹ ಹುಡುಕುತ್ತ ಬರುತ್ತದೆ. ॥ ೫೦೩ ॥ ಯಾವದು ಚಿಂತನ ಮಾಡಲಿಕ್ಕೆ ಯೋಗ್ಯ ವಿರುವದಿಲ್ಲವೋ, ಅದರ ಚಿಂತನ ಮಾಡುತ್ತಾನೆ. ಅಷ್ಟರಲ್ಲಿಯೇ ಅವನನ್ನು ಯಮದೂ ತನು ತೆಗಿದುಕೊಂಡು ಹೋಗುತ್ತಾನೆ, ಮತ್ತು ಯಾವ ಊರಿಗೆ ತೆಗಿದುಕೊಂಡು ಹೋಗುತ್ತಾನೆ, ಇದರ ಗೊತ್ತೇ ಹತ್ತುವದಿಲ್ಲ. ॥ ೫೦೪ ॥ ಎಲೋ ಅರ್ಜುನನೇ ! ಸರ್ವ ಮಾರ್ಗದಿಂದ ಶೋಧನಮಾಡಿ ನೋಡಿದರೂ ಮೃತ್ಯು ಹೊಂದಿದವರು, ತಿರುಗಿ ಬರುವ ಮಾತೇ ಇರುವದಿಲ್ಲ. ಈ ಮೃತ್ಯು ಮುಖದಲ್ಲಿ ಬಿದ್ದು ಹೋದ ಹಿಂದಿನ ಜನರ ಕಥೆಗಳೇ ಪುರಾಣವಾಗಿರುವವು ॥ ೫೦೫ ॥ ಈ ಮೃತ್ಯು ಲೋಕದ ಅಶಾಶ್ವತ ಸೃಷ್ಟಿಯನ್ನು ನಿರ್ಮಾಣ ಮಾಡುವ ಬ್ರಹ್ಮದೇವರ ಆಯುಷ್ಯದವರೆಗೆ ಅಲ್ಲಿಯ ಕ್ಷಣಭಂಗುರತ್ವದ ಪ್ರಭಾವದ ವರ್ಣನವಾಡಿದಾಗ್ಯಾದರೂ ಮುಗಿಯುವಂತೆ ಇರುವದಿಲ್ಲ. ॥ ೫೦೬ ॥ ಹೀಗೆ ಯಾವ ಮೃತ್ಯುಲೋಕದ ಸ್ಥಿತಿಯು ಇರುವದೋ, ಅಲ್ಲಿ ಜನ್ಮತೆಗೆದುಕೊಳ್ಳುವಜನರು ಸುಖರೂಪವಾಗಿರುವರೆಂಬ ಮಾತನ್ನು ಕೇಳಿ ನನಗೆ ಬಹಳೇ ಆಶ್ಚರ್ಯ ವೆನಿಸುತ್ತದೆ. ॥ ೫೦೭ ॥ ಯಾವದುಂದ ಇಹ ಪರಲೋಕದ ಲಾಭವಾಗುವದೋ, ಅಂಥ ಹಿತಾವಹ ಕಾರ್ಯದಲ್ಲಿ ಒಂದು ಕವಡಿ ಧನವನ್ನು ಸಹಾ ಕೈ ಬಿಟ್ಟು ಖರ್ಚು ಮಾಡಲಾರರು. ಅವರು ಸರ್ವದರಿಂದಲೂ ಹಾನಿಯಾಗುವಂಥ ಕೆಲಸದಲ್ಲಿ ಕೋಟ್ಯಾವಧಿ ಹಣವನ್ನು ಹಾಳು ಮಾಡಿಕೊಳ್ಳುವರು. ॥ ೫೦೮ ॥ ಯಾವನು ವಿಲಾಸದಲ್ಲಿ ಬಹಳೇ ನಿಮಗ್ನನಾಗಿರುವನೋ ಅವನಿಗೆ ಈಗ ಸುಖದಲ್ಲಿರುವನೆಂದೆನ್ನುವರು. ಮತ್ತು ಯಾವನು ಲೋಭವಂದ ಗ್ರಸ್ತನಾಗಿರುವನೋ ಅವನಿಗೆ ಈ ಜಗತ್ತಿನಲ್ಲಿ ಜ್ಞಾನಿಎಂದೆನ್ನುವರು. ॥ ೫೦೯ ॥ ಯಾವನ ಆಯುಷ್ಯವು ಸ್ವಲ್ಪೇ ಉಳಿದಿರುವದೋ ಮತ್ತು ಯಾವನ ಬಲವೂ ಬುದ್ಧಿಯು ಇಲ್ಲದಂತಾಗಿರುವದೋ, ಇಂಥ ವಯೋವೃದ್ಧ ಪುರುಷನಿಗೆ ಶ್ರೇಷ್ಠ ಹಿರಿಯನೆಂದು ಅವನ ಕಾಲು ಬೀಳುವರು ॥ ೫೧೦ ॥ ಸಾಣ ಕೂಸು ದೊಡ್ಡದಾಗುತ್ತ ಹೋದ ಹೋದ ಹಾಗೆ ತಾಯಿತಂದೆಗಳು ಸಂತೋಷದಿಂದ ಕುಣಿಯುತ್ತಾರೆ. ಆದರೆ ಆ ಹುಡುಗನ ಆಯುಷ್ಯವು, ದಿನೇ ದಿನೇ ಕಡಮೆಯಾದಬಗ್ಗೆ ಅವರಿಗೆ ದುಃಖವೇ ಆಗುವದಿಲ್ಲ. (ಆಶ್ಚರ್ಯ !) ॥ ೫೧೧ ॥ ಜನ್ಮದಾರಭ್ಯ ಪ್ರತಿದಿವಸಾನುದಿವಸ ಹೆಚ್ಚಿಚ್ಚಿಗೆ ಮೃತ್ಯುವಿನ ಸಮೀಪದಲ್ಲಿ ಹೋಗಿ ಕಾಲದ ಸ್ವಾಧೀನವಾಗುವ ಆ ಕೂಸಿಗೆ ಹುಟ್ಟಿದ ದಿವಸವನ್ನು ಮಾಡಿ ಉತ್ಸಾಹದಿಂದ ಧ್ವಜವನ್ನು ನಿಲ್ಲಿಸುತ್ತಾರೆ. ॥ ೫೧೨ ॥ ಎಲೋ ಅರ್ಜುನನೇ ! ಸಾಯಿ ಎಂದು ಯಾರಾದರೂ ನುಡಿದರೆ ಆ ಶಬ್ದವೂ ಸಹ ಸಹನವಾಗುವದಿಲ್ಲ. ಮತ್ತು ಮೃತ್ಯು ಬಂದ

ಮೇಲೆ ಅಳುತ್ತ ಕೂಡುವರು. ಆದರೆ ಇದ್ದಂಥ ಆಯುಷ್ಯವು ವ್ಯರ್ಥವಾಗಿ ಹೋಗುತ್ತದೆಂಬದು ಮೂರ್ಖತನದಿಂದ ಅವರಿಗೆ ತಿಳಿಯುವದಿಲ್ಲ ॥ ೫೫ ॥ ಹಾವು, ಕಪ್ಪೆಯನ್ನು ಹಿಂಬದಿಯಿಂದ ನೆಟ್ಟಗೆ ನುಂಗುವಾಗ್ಗೆ ಕಪ್ಪೆಯ ಬಾಯಿಯಷ್ಟೇ ಉಳಿದಿರಲು ಇಂಥ ಸ್ಥಿತಿಯಲ್ಲಿಯೂ ಆ ಕಪ್ಪೆಯು ತನ್ನ ಮುಂದೆ ಹಾರಾಡುವ ನೊಣಗಳನ್ನು ಹಿಡಿಯುವದರ ದೆಶೆಯಿಂದ ನಾಲಿಗೆಯನ್ನು ಹೊರಗೆ ಚಾಚಿ ತಿನ್ನಲಿಕ್ಕೆ ಯತ್ನ ಪಡುತ್ತದೆ. ಈ ರೀತಿ ಪ್ರಾಣಿಗಳು ಯಾತಲೋಭದದೆಶೆಯಿಂದ ತಮ್ಮ ಅಪೇಕ್ಷೆಯನ್ನು ವೃದ್ಧಿಂಗತ ಮಾಡುವರೆಂಬದನ್ನು ಯಾರುಬಲ್ಲರು ? ॥ ೫೪ ॥ ಅಕಟಕಟಾ ! ಮೈಮೇಲೆ ಮುಳ್ಳುಬರುತ್ತವೆ. !! ಈ ಮೃತ್ಯುಲೋಕದೊಳಗಿನ ಸರ್ವವ್ಯವಹಾರಗಳು ಕೇವಲವಿರುದ್ಧ ಅಮಂಗಲವಿರುವದೆಂಬದನ್ನು ಎಷ್ಟು ಹೇಳಿದರೂ ತೀರದು. ಅರ್ಜುನನೇ ! ಇಂಥ ಮೃತ್ಯು ಲೋಕದಲ್ಲಿ ಅಕಸ್ಮಾತ್ತಾಗಿ ನೀನು ಜನ್ಮವನ್ನು ಪಡೆದಿರುವಿ. ॥ ೫೫ ॥ ಆದರೆ ಈ ಮೃತ್ಯು ಲೋಕದ ವ್ಯವಹಾರಚಕ್ರದ ಇರುಕಿನೊಳಗಿಂದ ಪಾರಾಗಿ ತೀವ್ರವೇ ಮುಕ್ತನಾಗಿ ಹೋಗು. ಮತ್ತು ಈ ಭಕ್ತಿಮಾರ್ಗವನ್ನು ದೃಢವಾಗಿ ಅವಲಂಬನವಾಡುವದರಿಂದ ನಿನಗೆ ನನ್ನ ನಿರ್ದೋಷ ಅವಿನಾಶ ಪದವು ನಿಶ್ಚಯವಾಗಿ ದೊರಕುವದು ॥ ೫೬ ॥

ಮನ್ಮನಾ ಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು ।
ಮಾಮೇವೈಷ್ಯಸಿ ಯುಕ್ತ್ವೈವಮಾತ್ಮಾನಂ ಮತ್ಪರಾಯಣಃ ॥ ೩೪ ॥

ಇತಿ ಶ್ರೀಮದ್ಭಗವದ್ಗೀತಾ ಸೂಪನಿಷತ್ಸು ಬ್ರಹ್ಮವಿದ್ಯಾಯಾಂ ಯೋಗಶಾಸ್ತ್ರೇ ಶ್ರೀಕೃಷ್ಣಾರ್ಜುನಸಂವಾದೇ
ರಾಜವಿದ್ಯಾ ರಾಜಗುಹ್ಯಯೋಗೋ ನಾಮ ನವಮೋಽಧ್ಯಾಯಃ ॥೯॥

[ಮನ್ಮನಾ ಭವ ಮದ್ಭಕ್ತ ಇತಿ] ತೂ ಮನ ಹೇ ಮೀಚಿ ಕರೀ । ಮಾಝಿಯಾ ಭಜನೀ ಪ್ರೇಮಧರೀ ! ಸರ್ವತ್ರ ನಮಸ್ಕಾರೀ । ಮಜ ಏಕಾತೇ ॥ ೧೭ ॥ ಮಾಝೋನಿ ಅನುಸಂಧಾನೇ ದೇಖ । ಸಂಕಲ್ಪ ಜಾಳಣೇ ನಿಃಶೇಖ । ಮದ್ಯಾಜೀ ಚೋಖ। ಯಾಚಿ ನಾವ ॥ ೧೮ ॥ ಐಸಾ ಮಿಯಾ ಆಥಿಲಾ ಹೋಸೀ । ತೇಥ ಮಾಝಿಯಾಚಿ ಸ್ವರೂಪಾ ಪಾವಸೀ । ಹೇ ಅಂತಃಕರಣೀಚೇ ತುಜಪಾಸೀ । ಬೋಲಿಜತ ಅಸೇ ॥ ೧೯ ॥ ಅಗಾ ಅವಭಯಾ ಚೋರಿಯಾ ಆಪುಲೇ । ಜೇ ಸರ್ವಸ್ವ ಆಮ್ಹಿಂ ಅಸೇ ಠೇವಿಲೇ। ತೇ ಪಾವೋನಿ ಸುಖ ಸಂಚಲೇ। ಹೋವೊನಿ ಠಾಸೀ ॥ ೫೨೦ ॥ ಐಸೇ ಸಾವಳೇನಿ ಪರಬ್ರಹ್ಮೀ । ತೇಣೇ ಭಕ್ತ ಕಾಮ ಕಲ್ಪದ್ರುಮೇ । ಬೋಲಿಲೇ ಶ್ರೀ ಆತ್ಮಾರಾಮೇ । ಸಂಜಯೋ ಮ್ಹಣೇ ॥ ೨೧ ॥ ಅಹೋ ಐಕಿಜತ ಅಸೇಕೀ ಅವಧಾರಾ । ತವ ಇಯಾ ಬೋಲಾ ನಿವಾಂತ ಮ್ಹಾಕಾರಾ । ಜೈಸಾ ಮೈಹ್ಯೈಸಾ ನುಠೀ ಕಾ ಪುರಾ । ತೈಸಾ ಉಗಾಚಿ ಅಸೇ ॥ ೨೨ ॥ ತೇಥ ಸಂಜಯೇ ಮಾಥಾ ತುಕಿಲಾ । ಅಹೋ ಅಮೃತಾಚಾ ಪಾವೂಸ ವರ್ಷಲಾ । ಕೀ ಹಾ ಏಥ ಅಸತೂಚಿ ಗೇಲಾ । ಸೇಜೆಯಾ ಗಾವಾ ॥ ೨೩ ॥ ತರ್ಹೀ ದಾತಾರ ಹಾ ಅ ಮುಚಾ । ಮ್ಹಣೋನಿ ಹೇ ಬೋಲತಾ ಮೈಳೀಲ ವಾಚಾ । ಕಾಯ ಕೀಜೇ ಯಯಾಚಾ । ಸ್ವಭಾವೋಚಿ ಐಸಾ ॥ ೨೪ ॥ ಪರೀ ಬಾಪ ಭಾಗ್ಯ ಮಾಝೇ । ಜೇ ವೃತ್ತಾಂತ ಸಾಂಗಾವಯಾಚೇನಿ ವ್ಯಾಜೇ । ಕೈಸಾ ರಕ್ಷಿಲೋ ಮುನಿಜಾಜೇ । ಶ್ರೀವ್ಯಾಸದೇವೆ ॥ ೨೫ ॥ ಯೇತುಲೇ ಹೇ ವಾಡ ಸಾಯಾಸೇ। ಜವ ಬೋಲತ ಅಸೇ ಧೃಡ ಮಾನಸೇ। ತವ ನ ಧರವೇಚಿ ಆವುಲಿಯಾ ಐಸೇ । ಸಾತ್ವಿಕೆ ಕೇಲೇ ॥ ೨೬ ॥ ಚಿತ್ತ ಚಾಕಾಟಲೇ ಆಟು ಫೇತ । ವಾಚಾ ಪಾಂಗುಳಲೀ ಜೇಥೀಂಚೀ ತೇಥ । ಆಪಾದ ಕಂಚುಕಿತ । ರೋಮಾಂಚ ಆಲೆ ॥ ೨೭ ॥ ಅರ್ಧೋನ್ಮಿಲಿತ ಡೋಳೇ । ವರ್ಷತಾತಿ ಆನಂದ ಜಳೇ । ಆಂತುಲಿಯಾ ಸುಖೋರ್ಮಿಚೇನಿ ಬಳೇ । ಬಾಹೇರಿ ಕಾಂಪೇ ॥ ೨೮ ॥ ಪೈ ಆಘವಾಚಿ ರೋಮ ಮೂಳೀ । ಒಲಿಸ್ವೇದ ಕಣಿಕಾ ನಿರ್ಮಳೀ । ಲೇಇಲಾ ಮೋತಿಯಾಂಚೀ ಕಡಿಯಾಳೀ । ಆನಡೇ ತೈಸಾ ॥ ೨೯ ॥ ಐಸಾ ಮಹಾ ಸುಖಾಚೇನಿ ಅತಿರಸೇ । ಜೇಥ ಆಟಣೇ ಹೋ

ಪೊಹೇ ಜೀವದಶೇ । ತೇಥ ನಿರೋಪಿಲೇ ವ್ಯಾಸೇ । ತೇ ನೇದೀಜ ಹೋ ॥ ೫೩೦ ॥ ಆನೆಕ ಶ್ರೀಕೃಷ್ಣಾಚೇ ಬೋಲಣೇ । ಘೋಂಕರೀ ಆಲೇ ಶ್ರವಣೇ । ಕೀ ದೇಹಸ್ಮೃತೀಚಾ ತೇಣೇ । ವಾಪಸಾ ಕೇಲಾ ॥ ೩೧ ॥ ತೆಂವ್ಹಾ ನೇತ್ರೀಂಚೇ ಜಳ ವಿಸರ್ಜೀ । ಸರ್ವಾಂಗೀಚಾ ಸ್ವೇದ ಪರಿಮಾರ್ಜೀ । ತೇವೀಂಚಿ ಅವಧಾನ ಮ್ಹಣೇ ಹೋ ಜಿ । ಧೃತರಾಷ್ಟ್ರತೇ ॥ ೩೨ ॥ ಆತಾ ಶ್ರೀಕೃಷ್ಣ ವಾಕ್ಯ ಬೀಜನಿವಾಡ । ಆಣಿ ಸಂಜಯು ಸಾತ್ವಿಕಾಚಾ ಬಿವಡ । ಮ್ಹಣೋನಿ ಶ್ರೋತಯಾ ಹೋಈಲ ಸುರವಾಡ । ಪ್ರಮೇಯ ಪಿಕಾಚಾ ॥ ೩೩ ॥ ಅಹೋ ಅಳುಮಾಳ ಅವಧಾನ ದೇಯಾವೇ । ಯೇತುಲೇನಿ ಅನಂದಾಚೇ ರಾಶೀವರೀ ಬೈಸಾವೇ । ಬಾಪ ಶ್ರವಣೇಂದ್ರಿಯಾ ದೈವೇ । ಘಾತಲೀ ಮಾಳ ॥ ೩೪ ॥ ಮ್ಹಣೋನಿ ವಿಭೂತೀಂಚಾ ಜೋ ಠಾವೋ । ಅರ್ಜುನಾ ದಾವೀಲ ಸಿದ್ಧಾಂಚಾ ರಾವೋ । ತೋ ಐಕಾ ಮ್ಹಣೇ ಜ್ಞಾನದೇವೋ । ನಿವೃತ್ತೀಚಾ ॥೫೩೫॥

ಇತಿ ಶ್ರೀಜ್ಞಾನದೇವ ವಿರಚಿತಾಯಾಂ ಭಾವಾರ್ಥದೀಪಿಕಾಯಾಂ ಸವಮೋಽಧ್ಯಾಯಃ ॥೯॥ ಶ್ಲೋಕ ೩೪. ಓವಿಗಳು ೫೩೫

ಅರ್ಥ— ನೀನು ನಿನ್ನ ಮನಸನ್ನು ನನ್ನಲ್ಲಿ ದೃಢವಾಗಿ ನಿಲ್ಲಿಸಿ ನನ್ನ ಭಜನದಲ್ಲಿ ಪ್ರೇಮವನ್ನಿಡು. ಮತ್ತು ಸರ್ವ ದರಲ್ಲಿಯೂ ನಾನೇ ವ್ಯಾಪ್ತನಾಗಿರುವೆನೆಂಬದನ್ನು ಅರಿತು ಪ್ರೇಮಭಾವದಿಂದ ನನಗೆ ನಮಸ್ಕರಿಸು. ॥೫೧೭॥ ಯಾವನು ನನ್ನ ವೇಧದಿಂದ ಮನಸಿನೊಳಗಿನ ಸರ್ವ ಸಂಕಲ್ಪಗಳನ್ನು ಸಂಪೂರ್ಣವಾಗಿ ಇಲ್ಲದಂತೆ ಮಾಡುವನೋ, ಅವನೇ ನನ್ನ ಯಜನ ಮಾಡುವವನೆಂದು ಹೆಸರು ಪಡೆಯುತ್ತಾನೆ. ॥ ೫೧೮ ॥ ಹೀಗೆ ನಾನು ಬಹು ಗುಪ್ತವಾಗಿಟ್ಟುಕೊಂಡ ಯೋಗವನ್ನು ನೀನು ಸಂಪಾದನ ಮಾಡುವದರಿಂದ ನನ್ನ ಸ್ವರೂಪವನ್ನು ಹೊಂದುವಿ ಈ ನನ್ನ ಅಂತಃಕರಣದೊಳಗಿನ ಜನ್ಯಾಗಿರುವ ಗುಹ್ಯವನ್ನು ನಿನಗೆ ಹೇಳಿದ್ದೇನೆ. ॥ ೧೯ ॥ ಎಲೋ ಅರ್ಜುನನೇ ! ಸರ್ವರಿಗೂ ಮರೆಮಾಡಿ ಬಚ್ಚಿಟ್ಟ ನಮ್ಮ ಗುಪ್ತ ಸಂಭಾಷಣವು ಪ್ರಾಪ್ತ ಮಾಡಿಕೊಳ್ಳುವದರಿಂದ ನೀನು ಸುಖರೂಪವಾಗುವಿ. ॥ ೫೨೦ ॥ ಸಂಜಯನು ಅನ್ನುತ್ತಾನೆ— ಶಾಮಸುಂದರ ಪರಮಾತ್ಮನು ಮತ್ತು ಭಕ್ತರ ಮನೋರಥಗಳನ್ನು ಪೂರ್ಣಮಾಡುವವನು ಕಲ್ಪವೃಕ್ಷ ಸದ್ರಶನು ಆದ ಶ್ರೀ ಕೃಷ್ಣನು ಹೀಗೆ ಮಾತನಾಡಿದನು. ॥ ೨೧ ॥ ಎಲೋ ಶ್ರೋತ್ರಗಳಿರಾ ! ಅವಧಾನವನ್ನಿಡಿರಿ. ಕೋಣಗಳು ಹೇಗೆ ಮಹಾಪೂರವನ್ನು ಲೆಕ್ಕಿಸದೇ ನೀರಿನಲ್ಲಿಯೇ ಮಲಗಿ ಬಿಡುತ್ತವೆಯೋ, ಅದೇ ಪ್ರಕಾರಾ ಶ್ರೀಕೃಷ್ಣಾರ್ಜುನರ ಸಂವಾದವನ್ನು ಕೇಳಿಯೂ, ವೃದ್ಧನಾದ ಧೃತರಾಷ್ಟ್ರರಾಜನು ಸ್ವಸ್ಥವಾಗಿ ಕುಳಿತುಬಿಟ್ಟನು. ॥ ೫೨೨ ॥ ಆ ವೇಳೆದಲ್ಲಿ ಸಂಜಯನು ತಲೆದೂಗಿ ಅನ್ನುತ್ತಾನೆ. ಅಹಹಾ !! ಈ ಹೊತ್ತಿನ ದಿವಸ ಅಮೃತದ ಮಳೆಯು ಸುರಿಯುತ್ತಿರಲು (ದುರ್ದೈವಿಯಾದ ಅಂಧ) ಧೃತರಾಷ್ಟ್ರನು ಈ ಸ್ಥಳದಲ್ಲಿ ಇದ್ದೂ ಇಲ್ಲದಂತಾಗಿ ಅವನು ಸವಿಾಪದ ಊರಿಗೆ ಹೋದಂತೆ ಆಗಿರುವದು. ॥ ೨೩ ॥ ಆದಾಗ್ಯೂ ಇವನು ನನ್ನ ಯಜಮಾನನಾದುದರಿಂದ ಈ ರೀತಿಯಿಂದ ಸ್ಪಷ್ಟವಾಗಿ ಮಾತನಾಡಿದರೆ ನಮ್ಮ ವಾಣಿಯು ದೂಷಿತವಾಗಬಹುದು, ಆದರೆ ಏನುನಾಡಬೇಕು ? ಇವನ ಸ್ವಭಾವವೇ ಹೀಗೆ ಇರುವದು. ॥ ೨೪ ॥ ಆದರೆ ಮುನಿಶ್ರೇಷ್ಠ ವ್ಯಾಸ ಋಷಿಯು ಶ್ರೀಕೃಷ್ಣಾರ್ಜುನರ ಸಂವಾದವನ್ನು ಧೃತರಾಷ್ಟ್ರರಾಜನಿಗೆ ಹೇಳುವದರ ದೆಶೆಯಿಂದ ಇಲ್ಲಿ ನನ್ನ ಯೋಜನೆಯನ್ನು ಮಾಡಿರುವದರಿಂದ ನನ್ನ ಭಾಗ್ಯವು ಧನ್ಯವಾಗಿರುವದು. ॥ ೨೫ ॥ ಇಷ್ಟು ಮನಸಿನ ನಿಶ್ಚಯಮಾಡಿ ಬಹಳೇ ಕಷ್ಟದಿಂದ ಮಾತನಾಡುತ್ತಿರಲು ಸಂಜಯನಿಗೆ ಅಷ್ಟ ಸಾತ್ವಿಕ ಭಾವಗಳು ಉಂಟಾದವು ಅದು ಅವನಿಗೆ ಆವರಿಸದಂತೆ ಆಯಿತು. ॥ ೨೬ ॥ ಆ ಕೃಷ್ಣಾರ್ಜುನರ ಸಂವಾದದಲ್ಲಿ ಚಿತ್ತವು ಮಗ್ನವಾಗಿ ಹೋದುದರಿಂದ ಸ್ಥಿರವಾಗಿ ವಾಣಿಯು ಅಲ್ಲಿಂದಲ್ಲೇ ಸ್ತಬ್ಧವಾಯಿತು. ಮತ್ತು ನಖ ಶಿಖದೊಳಗೆ ಸಹ ರೋಮಾಂಚಗಳು ಎದ್ದು ನಿಂತವು. ॥ ೨೭ ॥ ಅನಂದಾಶ್ರುಗಳು ಸುರಿಯಲಿಕ್ಕೆ ಹತ್ತಿದವು. ಮತ್ತು ಅಂತರ್ಯಾಮಿ ಸುಖದ ಥೆರಿಗಳು ಬಂದುದರಿಂದ ಹೊರಗೆ ಮೈಗೆ ನಡಗು ಹುಟ್ಟಿತು. ॥ ೨೮ ॥ ಸರ್ವರೋಮ ರಂಧ್ರದೊಳಗಿಂದ ನಿರ್ಮಲವಾದ ಬೆವರಿನ ಸಂಣ ಸಂಣ ಗುಳ್ಳೆಗಳು ಉದ್ಭವಿಸಿದ್ದರಿಂದ ಅವನ ಮೈಯ್ಯಲ್ಲಿ ಮುತ್ತಿನ ಜಾಳಿಗೆಯನ್ನು ಹಾಕಿರುವದೋ ಎನೋ ಹೀಗೆ ಕಾಣುತ್ತಿತ್ತು. ॥ ೨೯ ॥ ಈ ಮಹಾ ಸುಖದ ಪ್ರೇಮದಿಂದ ಜೀವದಶಾ ಇಲ್ಲದಂತೆ ಆದುದರಿಂದ ಶ್ರೀ ವ್ಯಾಸದೇವರು ನಿಯಮಿಸಿದ ಕೆಲಸವು ಅವನ ಕೈಯಿಂದಾಗದಂತಾಯಿತು. ॥ ೫೩೦ ॥ ಇಷ್ಟರಲ್ಲಿ

ಶ್ರೀ ಕೃಷ್ಣಾರ್ಜುನರ ಸಂವಾದವು "ಧೋ ಧೋ" ಎಂದು ಶಬ್ದಮಾಡುತ್ತ ಹರಿದು ಬಂದು ಕವಿಯಲ್ಲಿ ಬಿದ್ದ ಕೂಡಲೆ ಸಂಭಾಷಣ ಮಾಡುವ ಸಂಜಯನ ದೇಹ ಸ್ಥಿತಿಯಲ್ಲಿ ಎಚ್ಚರಿಕೆಯುಂಟಾಗಿ ತನ್ನ ಕಡೆಗೆ ಶ್ರೀವ್ಯಾಸ ದೇವರು ನಿಯಮಿಸಿದ ಕಾರ್ಯವನ್ನು ಮಾಡಲು ಸಿದ್ಧನಾದನು. ॥ ೫೩೧ ॥ ಆ ಮೇಲೆ ತೀವ್ರವೇ ಕಣ್ಣಿನ ನೀರು ಮತ್ತು ಸರ್ವಾಂಗದ ಬೆವರು ವರಸಿಕೊಂಡು ಧೃತರಾಷ್ಟ್ರರಾಜನಿಗೆ ಅನ್ನುತ್ತಾನೆ. ಮಹಾರಾಜರೇ ! ಶ್ರವಣಮಾಡಿರಿ. ॥ ೫೩೨ ॥ ಈಗ ಶ್ರೀಕೃಷ್ಣ ವಾಕ್ಯರೂಪಿ ಉತ್ತಮ ಬೀಜಗಳು ಸಂಜಯನ ಹೃದಯ ಕ್ಷೇತ್ರದೋಳ್ (ಭೂಮಿಯಲ್ಲಿ) ಬೀಳಲು ಅವನ ಅಷ್ಟ ಸಾತ್ವಿಕ ಭಾವರೂಪಿ ಎರಡನೇ ಉತ್ತಮವಾದ ಬೆಳೆಯು ಹೆಚ್ಚಿಗೆ ಸಮೃದ್ಧಿ ಹೊಂದಿದರಿಂದ ಶ್ರೋತ್ರಗಳಿಗೆ ಸಿದ್ಧಾಂತ ರೂಪಿ ಬೆಳೆಯ ಸುಕಾಲವಾದೀತು. ॥ ೫೩೩ ॥ ಎಲೈ ಶ್ರೋತ್ರಗಳಿರಾ ! ಸ್ವಲ್ಪನೇ ಇತ್ತ ಕಡೆಗೆ ಅವಧಾನವನ್ನು ಕೊಡಿರಿ. ಇಷ್ಟರಿಂದಲೇ ಆನಂದದ ರಾಶಿಯಮೇಲೆ ಕುಳಿತುಕೊಳ್ಳುವಿರಿ. ಈ ಹೊತ್ತಿನದಿವಸ ಆ ಕರ್ಣಗಳಿಗೆ ಭಾಗ್ಯವೇ ಪೂಲೆಯನ್ನು ಹಾಕಿರುವದು. ಮತ್ತು ಆ ಕರ್ಣಗಳೇ ಧನ್ಯವಾಗಿರುವವು. ॥ ೫೩೪ ॥ ಆದುದರಿಂದ ತನ್ನ ವಿಭೂತಿಗಳ ಸ್ಥಾನವನ್ನು ಸಿದ್ಧ ಪುರುಷರ ಅರಸನಾದ ಶ್ರೀ ಕೃಷ್ಣನು ಅರ್ಜುನನಿಗೆ ತೋರಿಸುವನು. ಶ್ರೀ ನಿವೃತ್ತಿನಾಥರ ಶಿಷ್ಯ ಶ್ರೀ ಜ್ಞಾನೇಶ್ವರರು ಅನ್ನುತ್ತಾರೆ. ಆ ಮುಂದಿನ (೧೦ನೇ ಅಧ್ಯಾಯದ) ಸುಪ್ರಸಂಗವನ್ನು ಶ್ರೋತ್ರಗಳು ಶ್ರವಣಮಾಡಬೇಕು. ॥ ೫೩೫ ॥

ಶ್ರೀಮದ್‌ಭಗವದ್ಗೀತೆಯ ಮತ್ತು ಶ್ರೀಜ್ಞಾನೇಶ್ವರಿಯ ಸರಲ, ಸುಲಭ,
ಕನ್ನಡಅನುವಾದದ ನವಮೋಧ್ಯಾಯವು ಮುಗಿದುದು.

ಮೊದಲನೆಯ ಭಾಗ ಸಮಾಪ್ತವು

ಶ್ರೀಕೃಷ್ಣಾರ್ಪಣಮಸ್ತು

ಮುದ್ರಕ:—ಎಂ. ಗಾ. ಭಟ್, ಶ್ರೀ ಪ್ರಿಂ. ಪ. ಧಾ. ೫೪೧೨-೬೫-೧೦೦೦.